1935-36-37



ಕನ್ನಡ
[ಪ್ರಾ]ಥಮಿಕ ಶಿಕ್ಷಣ



ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

[illegible]

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕನೆಯೂ ಸಮಾವೇಶವಾಗಿವೆ.)

ಕನ್ನಡ ಪ್ರಾಥಮಿಕ ಶಿಕ್ಷಣ

Kannada Prathamik Shikshana

ಸಂಪಾದಕರು

ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ವಿಷಯಾನುಕ್ರಮಣಿಕೆಯು

ಡಿಸೆಂಬರ ೧೯೩೫

ಹಿಂದುಸ್ಥಾನದಲ್ಲಿಯ ಶಿಕ್ಷಣ ೧
ರಾಷ್ಟ್ರಸಂಘ ೧೧
ಪಂಪಾಯಾತ್ರೆ ೧೭
ಮಲಬಾರದ ಜನರು ೨೩
೧೯೩೭ ನೆಯ ಇಸವಿಯಲ್ಲಾಗುವ ಗಂಡುಮಕ್ಕಳ
ಪ್ರ. ಶಾ. ಪರೀಕ್ಷೆಗೆ ಗೊತ್ತುಪಡಿಸಿದ ವಿಷಯಗಳು . ೩೦

ಜನವರಿ ೧೯೩೬

ಹಿಂದುಸ್ಥಾನದಲ್ಲಿಯ ಶಿಕ್ಷಣ ೧
ಮಾನಸಶಾಸ್ತ್ರ ಸಂಬಂಧವಾದ ಕೆಲವು ವಿಚಾರಗಳು . . ೯
ಪ್ರಕಟನೆಗಳು ೧೬

ಮಾರಾಟಕ್ಕೆ ಸಿದ್ಧವಿದೆ

ಗಣಿತ ಶಿಕ್ಷಕ

ಬ. ದು. ಹಿರೇಮಠ ಕೃತ

೩ನೆಯ ಆವೃತ್ತಿ

ಶಿಕ್ಷಕ ಬಾಂಧವರೇ, ಈ ಪುಸ್ತಕವು ಕನ್ನಡ ೫-೬-೭ ನೆಯ ಇಯತ್ತೆಗಳ ಮತ್ತು ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಮತ್ತು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಅಭ್ಯಾಸಕ್ರಮಕ್ಕನುಸರಿಸಿ ರಚಿಸಲ್ಪಟ್ಟಿದೆ. ಇದರ ಮಹತ್ವವನ್ನು ವರ್ಣಿಸಲವಶ್ಯವಿಲ್ಲ. ಕರ್ನಾಟಕದ ಎಲ್ಲ ಜನರಿಂದಲೂ ಆದರವನ್ನು ಹೊಂದಿರುವದು. ಆದುದರಿಂದಲೇ ಸ್ವಲ್ಪದಿವಸಗಳಲ್ಲಿಯೇ ಇದು **ಮೂರನೆಯ ಆವೃತ್ತಿ**ಯನ್ನು ಪಡೆದಿರುವದು. ಒಂದು ಪ್ರತಿಯನ್ನಾದರೂ ತರಿಸಿ ನೋಡಿದರೆ ಅದರ ಯೋಗ್ಯತೆಯು ತಮಗೂ ತಿಳಿಯುವದು.

ವ್ಯಾಪಾರಸ್ಥರಿಗೂ ಶಿಕ್ಷರಿಗೂ ಯೋಗ್ಯ ಸವಲತು ದೊರೆಯುವದು. ಪುಸ್ತಕಗಳು ಎ. ಆರ್. ಶಿವನಾಗಪ್ಪ ಹುಬ್ಬಳ್ಳಿ ಇವರಲ್ಲಿಯೂ ಎಲ್ಲ ಊರುಗಳ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ಬಸಪ್ರಭಯ್ಯ ದುಂಡಯ್ಯ ಹಿರೇಮಠ,
ಕನ್ನಡ ಶಾಲಾಮಾಸ್ತರ ವಿಜಾಪೂರ.

ಕನ್ನಡ ೪ನೇ ಇಯತ್ತೆಗಾಗಿ

ಪಠ್ಯಪುಸ್ತಕವೆಂದು ಕಮೀಟಿಯಿಂದ ಮಂಜೂರಾದ

ಕರ್ನಾಟಕ ಇತಿಹಾಸ ಬೋಧಿನಿ

ಹೊಸ ಚಿತ್ರಗಳು] **[ಹೊಸ ಮನೋರಂಜಕ ವಿಷಯ**

ಪ್ರೊ ಸಾಸನೂರರವರ ಮುನ್ನುಡಿಯುಳ್ಳದ್ದು

ಶಿಕ್ಷಕರೆಲ್ಲರು ಓದಿ ವಿದ್ಯಾರ್ಥಿಗಳಿಗೆ ಕಲಿಸಲು ಯೋಗ್ಯವಾದ ಪುಸ್ತಕ.

ಪ್ರಾಚೀನ ಶಿಲಾಶಾಸನ ತಾಮ್ರಪಟಗಳನ್ನು ಶೋಧಿಸಿ ಇತಿಹಾಸಜ್ಞರು ಮಾಹಿತಿಯನ್ನು ಸಂಗ್ರಹಿಸಿ ಮನೋರಂಜಕವಾಗಿಯೂ ಸ್ಫೂರ್ತಿದಾಯಕವಾಗಿಯೂ ಈ ಪುಸ್ತಕ ಬರೆದಿದ್ದಾರೆ. ಚಾಲುಕ್ಯರ ಪುಲಕೇಶಿ, ಅಕ್ಕಣ್ಣ ಮಾದಣ್ಣರ ಕೊಲೆ, ಕೆಳದಿ, ಬೀಳಗಿ, ಕೊಡಗು, ಸ್ವಾದಿ, ಅರಸರ ಹಾಗು ಶಿರಸಂಗಿ ದೇಸಾಯಿಯರ ವಿಷಯಗಳೆಲ್ಲ ಇದರಲ್ಲಿ ಅವೆ. ಭಾಷೆ ಸುಲಭ. ವಿಷಯ ಮನೋಹರ. ಈ ಪುಸ್ತಕದ ಬಗ್ಗೆ ವಿದ್ವಜ್ಜನರ ಸದಭಿಪ್ರಾಯಗಳಿವೆ. ಬೆಲೆ ಎಂಟೇ ಆಣೆ. ಈ ಪುಸ್ತಕವು ಎಲ್ಲ ಬುಕ್‌ಸೆಲರಲ್ಲಿ ಹಾಗು ಕೆಳಗಿನ ಪತ್ತೆಯಲ್ಲಿಯೂ ದೊರೆಯುತ್ತವೆ. ಯೋಗ್ಯ ಕಮಿಶನ್ ಪತ್ರವ್ಯವಹಾರದಿಂದ ಗೊತ್ತಾಗುವದು.

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ,
ಮಂಗಳವಾರಪೇಠ, ಧಾರವಾಡ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ

ಸಂಪುಟ ೭೨ ||| ಡಿಶೆಂಬರ ೧೯೩೪ ||| ವರ್ಷ ೭ ಸಂ. ೯

ಹಿಂದುಸ್ತಾನದಲ್ಲಿಯ ಶಿಕ್ಷಣ

ಅರ್ವಾಚೀನ ಕಾಲವು

ನಮ್ಮ ದೇಶದಲ್ಲಿ ಸದ್ಯಕ್ಕೆ ರೂಢವಾಗಿರುವ ಶಿಕ್ಷಣದ ವ್ಯವಸ್ಥೆಯ ಮೂಲವು ಮೊದಲು ಇಲ್ಲಿಗೆ ಬಂದ ಕ್ರಿಸ್ತಧರ್ಮದ ಮಿಶನರಿ ಜನರ ಚಟುವಟಿಕೆಗಳಲ್ಲಿ ಇರುವದು.

ಪೋರ್ತುಗೀಸರ ಕಾಲದ ಶಿಕ್ಷಣ

ಪೋರ್ತುಗೀಸರು ಈ ದೇಶದಲ್ಲಿ ಬಂದು ನಿಂತಕೂಡಲೆ ರೋಮನ್ ಕ್ಯಾಥಾಲಿಕ್ ಪಂಥದ ಮಿಶನರಿ ಜನರು ಇಲ್ಲಿಗೆ ಬರಲಾರಂಭಿಸಿದರು; ಹಾಗು ಪೋರ್ತುಗೀಸರು ಈ ದೇಶದಲ್ಲಿ ಸಂಪಾದಿಸಿದ ರಾಜ್ಯದ ಬೇರೆಬೇರೆ ಭಾಗಗಳಲ್ಲಿ ಕೆಲವು ಸಂಸ್ಥೆಗಳನ್ನು ಸ್ಥಾಪಿಸಲಾರಂಭಿಸಿದರು. ಇವರ ಮುಖ್ಯ ಉದ್ದೇಶವು ಈ ದೇಶದ ಮೂರ್ತಿಪೂಜಕರಾದ ಕೆಲವು ಜನರ ಗುಂಪುಗಳಿಗೆ ಧರ್ಮದ ಬೆಳಕನ್ನು ಒದಗಿಸಿಕೊಡುವದಿತ್ತು. ಈ ಸಂಸ್ಥೆಗಳು ನಾಲ್ಕುಬಗೆಯಾಗಿದ್ದವು.

(೧) ಕ್ರಿಸ್ತರ ಗುಡಿಗಳಿಗೂ ಮಿಶನರಿ ಜನರು ಇರುವ ಸ್ಥಳಗಳಿಗೂ ಸಂಬಂಧಿಸಿದ ಪೋರ್ತುಗೀಸ ಶಾಲೆಗಳು. ಇವುಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮಾತ್ರ ಕೊಡುತ್ತಿದ್ದರು.

(೨) ಈ ದೇಶದ ಚಿಕ್ಕಮಕ್ಕಳಿಗಾಗಿ ಏರ್ಪಡಿಸಿದ ಅನಾಥಾಲಯಗಳು. ಇವುಗಳಲ್ಲಿ ಆರಂಭದ ಶಿಕ್ಷಣವನ್ನು ಕೊಡುವದಲ್ಲದೆ ಒಕ್ಕಲತನಕ್ಕೆ ಇಲ್ಲವೆ ಉದ್ಯೋಗಗಳಿಗೆ ಸಂಬಂಧಿಸುವ ಕೆಲಸಗಳನ್ನೂ ತುಸು ಮಟ್ಟಿಗೆ ಕಲಿಸುತ್ತಿದ್ದರು.

(೩) ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಸ್ಥಾಪಿಸಿದ ಜೆಸುಯಿಟ್ ಕಾಲೇಜುಗಳು ಅಂದರೆ ಜೆಸುಯಿಟ ಮಿಶನರಿ ಸಂಘದವರು ನಡಿಸಿದ ವಿಶೇಷ ಅಭ್ಯಾಸ ಕ್ರಮದ ಉಚ್ಚ ದರ್ಜೆಯ ಶಿಕ್ಷಣಾಲಯಗಳು.

(೪) ಧಾರ್ಮಿಕ ವಿದ್ಯೆಯ ಅಭ್ಯಾಸಕ್ಕಾಗಿ ಏರ್ಪಡಿಸಿದ ಶಾಲೆಗಳು. ಇವುಗಳಲ್ಲಿ ತಮ್ಮ ಧರ್ಮದ ತತ್ವಗಳನ್ನೂ ಪುರಾಣಪುಣ್ಯಕಥೆಗಳನ್ನೂ ಹೇಳಿಕೊಡುವದಲ್ಲದೆ, ಕ್ರಿಸ್ತಪಾದ್ರಿಗಳನ್ನು ತಯಾರಿಸುತ್ತಿದ್ದರು.

ಈ ದೇಶಕ್ಕೆ ಮೊದಲು ಬಂದು ಹೆಸರಾದ ಮಿಶನರಿಗಳಲ್ಲಿ ಫ್ರಾನ್ಸಿಸ್‌ಕೋ ಝೇವಿಯರ ಎಂಬವನು ಇದ್ದನು. ಇವನೇ ಮುಂದೆ ಸೇಂಟ ಫ್ರಾನ್ಸಿಸ್ ಝೇವಿಯರ ಎಂದು ಪ್ರಖ್ಯಾತನಾದನು. ಇವನು ಸೋಸಾಯಿಟ ಆಫ್ ಜೀಸಸ್ (ಯೇಸುಕ್ರಿಸ್ತ) ಎಂಬ ಸಂಘಕ್ಕೆ ಸೇರಿದ್ದನು. ಈ ಮಹಾತ್ಮನು ೧೫೪೨ ರಲ್ಲಿ ಈ ದೇಶಕ್ಕೆ ಮೊದಲು ಬಂದನು. ಈತನು ಬಂದೊಡನೆಯೆ ಬರಿಗಾಲಿನಿಂದ ಓಣಿಗಳಲ್ಲಿ ತಿರುಗಲಾರಂಭಿಸಿದನು. ಈತನು ಕೈಯಲ್ಲಿ ಒಂದು ಗಂಟೆಯನ್ನು ಹಿಡಿದುಕೊಂಡು, ಅದನ್ನು ಬಾರಿಸುತ್ತ, ತನ್ನೊಡನೆ ಎಲ್ಲರಿಗೂ ಬರಹೇಳುತ್ತ ತಮ್ಮ ತಮ್ಮ ಮಕ್ಕಳನ್ನೂ ಆಳುಗಳನ್ನೂ "ಕ್ರಿಸ್ತಮತ" Christian Doctrine ಕ್ಕೆ ಕಳಿಸಿರೆಂದು ಕೇಳಿಕೊಳ್ಳಲಾರಂಭಿಸಿದನು. ಕೆಲವು ವರ್ಷಗಳಾದ ಬಳಿಕ ರಾಬರ್ಟ ಡಿ ನೋಬಿಲೀ ಎಂಬಾತನು ಇಲ್ಲಿಗೆ ಬಂದವರಲ್ಲಿ ಹೆಸರಾದನು. ಈತನು ದಕ್ಷಿಣಹಿಂದುಸ್ತಾನದಲ್ಲಿ ಕೆಲಸಮಾಡಿದನು. ಈತನ ಕೆಲಸಮಾಡುವ ಪದ್ಧತಿಯು

ಮೇಲೆ ಹೇಳಿದ್ದಕ್ಕಿಂತ ಬುದ್ಧಿವಂತಿಕೆಯುಳ್ಳದ್ದಾಗಿತ್ತು. ಈತನು ಏತದ್ದೇಶೀಯರಿಗೆ ಏತದ್ದೇಶೀಯನೂ ಬ್ರಾಹ್ಮಣರಿಗೆ ಬ್ರಾಹ್ಮಣನೂ ಆದನು. ತಾನು ಪಶ್ಚಿಮ ದೇಶದಿಂದ ಬಂದ ಬ್ರಾಹ್ಮಣನೆಂದು ಹೇಳಿಕೊಳ್ಳುತ್ತಿದ್ದನು. ಕಳೆದುಹೋದ ಒಂದು ವೇದವನ್ನು ಹಿಂದುಸ್ತಾನಕ್ಕೆ ತಂದಿರುವೆನೆಂದು ಸಾರಿದನು. ಸನ್ಯಾಸಿಯಂತೆ ಪೀತವಸ್ತ್ರವನ್ನು ಧರಿಸುತ್ತಿದ್ದನು. ಹಣೆಯ ಮೇಲೆ ಧರ್ಮಸೂಚಕವಾದ ಗುರುತುಗಳನ್ನು ಹಾಕಿಕೊಳ್ಳುತ್ತಿದ್ದನು. ಬ್ರಾಹ್ಮಣರನ್ನು ತನ್ನ ಆಳುಗಳನ್ನಾಗಿ ನಿಯಮಿಸಿಕೊಳ್ಳುತ್ತಿದ್ದನು. ವನಸ್ಪತಿಯ ಆಹಾರವನ್ನು ಮಾತ್ರ ಸೇವಿಸುತ್ತಿದ್ದನು. ಕೆಳಗಿನ ಜಾತಿಯವರೆನಿಸಿಕೊಂಡವರ ಕೂಡ ಯಾವ ವ್ಯವಹಾರಗಳನ್ನೂ ಸಾಗಿಸುತ್ತಿರಲಿಲ್ಲ. ಕೀಳುಜಾತಿಯ ಕ್ರಿಸ್ತರಿಗೆ ಬಹಿರಂಗವಾಗಿ ಧರ್ಮೋಪದೇಶ ಮೊದಲಾದವುಗಳನ್ನೂ ಮಾಡುತ್ತಿರಲಿಲ್ಲ.

ಈ ದೇಶಕ್ಕೆ ಬಂದಿದ್ದ ಕೆಲವು ಮಿಶನರಿ ಜನರು ೧೫೪೧ರಲ್ಲಿಯೇ ಸಾಂತಾಫೇ (ಪವಿತ್ರವಾದ ಧರ್ಮ) ಎಂಬ ಒಂದು ಆಧ್ಯಾತ್ಮಿಕ ಸಂಸ್ಥೆಯನ್ನು ಸ್ಥಾಪಿಸಿದ್ದರು. ಈ ದೇಶದ ಜನರು ಹೊಸದಾಗಿ ಕ್ರಿಸ್ತಮತವನ್ನು ಕೈಕೊಳ್ಳುತಿದ್ದರಷ್ಟೇ. ಇಂಥವರಿಗೆ ಆ ಧರ್ಮದ ಶಿಕ್ಷಣವನ್ನು ಕೊಡುವದೇ ಈ ಸಂಸ್ಥೆಯ ಉದ್ದೇಶವಾಗಿತ್ತು. ಝೇವಿಯರನು ಬಂದ ಬಳಿಕ ಒಂದು ವರುಷವಾದ ಮೇಲೆ ಅಂದರೆ ೧೫೪೨ರಲ್ಲಿ ಆತನು ಈ ಸಂಘದ ಕಾರ್ಯಭಾರವನ್ನು ವಹಿಸಿದನು. ೧೫೪೫ರಲ್ಲಿ ಆತನು ಪೋರ್ತಗೀಸ ಸರಕಾರಕ್ಕೆ ಒಂದು ಸೂಚನೆಯನ್ನು ಮಾಡಿದನು. ಇದನ್ನು ಅವರು ಅನುಸರಿಸಿದರು. ಈ ಮೂಲಕ ಕ್ರಿಸ್ತಧರ್ಮವನ್ನು ಹಬ್ಬಿಸುವ ಕೆಲಸವು ಪಾದ್ರಿಜನಗಳಿಂದ ಪೋರ್ತಗೀಸ ಸರಕಾರದ ನವಕರರ ಕೈಸೇರಿತು.

೧೫೭೫ರಲ್ಲಿ ಜೆಸುಯಿಟ್ ಮಿಶನರಿ ಜನರು ಮುಂಬಯಿಯ ಬಳಿಯಲ್ಲಿ ಬಂಡೋರಾ ಎಂಬಲ್ಲಿ "ಕಾಲೇಜ ಆಫ್ ಸೇಂಟ ಆನ್" ಎಂಬ ಒಂದು ಉಚ್ಚ ಶಿಕ್ಷಣಾಲಯವನ್ನು ಸ್ಥಾಪಿಸಿದರು. ತುಸುವರ್ಷಗಳಲ್ಲಿಯೇ ಇವಕ್ಕೆ ವಿಶ್ವವಿದ್ಯಾಲಯದ ಸ್ವರೂಪವು ಉಂಟಾಯಿತು. ಇದು ಪ್ರಶಸ್ತಿಪತ್ರಗಳನ್ನೂ ಡಿಗ್ರಿಗಳನ್ನೂ ಕೊಡಲಾರಂಭಿಸಿತು. ಇವರ ಕಟ್ಟಡವನ್ನು ಮಹಾರಾಷ್ಟ್ರರು ಹಿಡಿದುಕೊಂಡು ಕೋಟೆಯಂತೆ ಉಪಯೋಗಿಸಿಕೊಳ್ಳಬಹುದೆಂಬ ಭಯವು ಪೋರ್ತುಗೀಸ ಸರಕಾರಕ್ಕೆ ೧೬೩೯ರಲ್ಲಿ ಉಂಟಾಯಿತು. ಆಗ ಅವರು ಅದನ್ನು ಕೆಡವಿ

ಬಿಟ್ಟರು. ಆದರೆ, ಆ ವರುಷದವರೆಗೆ ಅಲ್ಲಿ ಸ್ಥಾಪಿತವಾಗಿದ್ದ ವಿಶ್ವವಿದ್ಯಾಲಯವು ಅಸ್ತಿತ್ವದಲ್ಲಿತ್ತು.

೧೫೮೦ ರಲ್ಲಿ ಚೌಲ ಎಂಬಲ್ಲಿ ಮತ್ತೊಂದು "ಜೆಸುಯಿಟ್ ಕಾಲೇಜವು" ಸ್ಥಾಪಿತವಾಯಿತು. ಇದರಲ್ಲಿ ೩೦೦ ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದರು. ಇಲ್ಲಿ ಲ್ಯಾಟಿನ್ ಭಾಷೆ, ತರ್ಕಶಾಸ್ತ್ರ, ಧರ್ಮಶಾಸ್ತ್ರ, ಪೋರ್ತುಗೀಸ ಭಾಷೆಯ ವ್ಯಾಕರಣ, ಸಂಗೀತ ಈ ವಿಷಯಗಳನ್ನು ಕಲಿಸುತ್ತಿದ್ದರು. ಇದೇ ಸಮಯಕ್ಕೆ ಮಾರ್‌ಗೋವಾ, ರಾಚೋಳ (ಇವೆರಡೂ ಗೋವೆಯಪ್ರಾಂತದಲ್ಲಿದ್ದವು) ಎಂಬಲ್ಲಿಯೂ ಇತರ ಕೆಲವು ಸ್ಥಳಗಳಲ್ಲಿಯೂ ಬೇರೆ ಜೆಸುಯಿಟ್ ಕಾಲೇಜುಗಳು ಸ್ಥಾಪಿತವಾಗಿದ್ದವು.

ಪೋರ್ತುಗೀಸರ ವರ್ಚಸ್ಸವೂ ಅಧಿಕಾರವೂ ಕುಗ್ಗಿದಂತೆ ಅವರು ಏರ್ಪಡಿಸಿದ್ದ ಶಿಕ್ಷಣಪದ್ಧತಿಯೂ ಅಸ್ತವಾಗತೊಡಗಿತು.

ಈಸ್ಟ ಇಂಡಿಯಾ ಕಂಪನಿಯವರ ಕಾಲದಲ್ಲಿಯ ಶಿಕ್ಷಣ

ಇಂಗ್ಲಿಷರು ಈ ದೇಶಕ್ಕೆ ಬಂದಂದಿನಿಂದ ಪ್ರೊಟೆಸ್ಟಂಟ ಮತದ ಮಿಶನರಿಗಳು ಶಿಕ್ಷಣದ ಕಾರ್ಯವನ್ನು ವಹಿಸಲಾರಂಭಿಸಿದರು. ನಮ್ಮ ದೇಶದ ಜನರಲ್ಲಿ ಕ್ರಿಸ್ತಧರ್ಮದ ತತ್ವಗಳನ್ನು ಹರಡಿಸುವ ಕೆಲಸಕ್ಕಾಗಿ ಈ ದೇಶದವರನ್ನು ಸಿದ್ಧಪಡಿಸುವ ಕಾರ್ಯವು ೧೬೧೪ರಲ್ಲಿಯೇ ಆರಂಭವಾಯಿತು. ಈ ಜನರಿಗೆ ಈಸ್ಟ ಇಂಡಿಯಾ ಕಂಪನಿಯವರ ಖರ್ಚಿನಿಂದ ಶಿಕ್ಷಣವನ್ನು ಕೊಡುವ ವ್ಯವಸ್ಥೆಯಾಯಿತು. ಈ ಶಿಕ್ಷಣದ ಮೂಲಕವಾಗಿಯೇ, ಇವರು ತಮಗೊಪ್ಪಿಸಿದ ಕೆಲಸವನ್ನು ಪರಿಣಾಮಕರವಾಗಿ ಮಾಡಬಹುದಾಗಿತ್ತು. ಮಿಶನರಿಯ ಉದ್ಯೋಗಕ್ಕೆ ಬೇಕಾಗುವ ಶಿಕ್ಷಣವನ್ನು ಪಡೆಯಲಿಕ್ಕಾಗಿ ಈ ದೇಶದ ಒಬ್ಬ ತರುಣನು ಇಂಗ್ಲಂಡಕ್ಕೆ ಕಳಿಸಲ್ಪಟ್ಟನು. ಅಲ್ಲಿ ಅರಸಾಗಿದ್ದ ೧ನೆಯ ಜೇಮ್ಸನು ಆತನಿಗೆ ಪೀಟರನೆಂಬ ಕ್ರಿಸ್ತ ಹೆಸರನ್ನಿಟ್ಟನು. ಈತನ ಶಿಕ್ಷಣವು ಆ ದೇಶದಲ್ಲಿ ಕಂಪನಿಯವರ ಖರ್ಚಿನಿಂದಲೇ ಸಾಗಿತು.

ಆರ್ಕಿಬಿಷಪ್ ಲಾಡ ಎಂಬ ಧರ್ಮಗುರುವು ೧೬೩೬ರಲ್ಲಿ ಆಕ್ಸಫರ್ಡ ವಿಶ್ವವಿದ್ಯಾಲಯದಲ್ಲಿ ಅರಬೀಭಾಷೆಯ ಪ್ರೊಫೆಸರನ ಒಂದು ಸ್ಥಳವನ್ನು ಏರ್ಪಡಿ

ಸಿದನು. ಮಿಶನರಿಗಳ ಕೆಲಸವನ್ನು ಮಾಡಲಿಕ್ಕೆ ಹಿಂದುಸ್ತಾನಕ್ಕೆ ಆ ದೇಶದಿಂದ ಬರುವಂಥ ಜನರಿಗೆ ವಿಶೇಷವಾದ ಶಿಕ್ಷಣವನ್ನು ಪೂರಯಿಸುವದಕ್ಕಾಗಿಯೇ ಈ ಸ್ಥಳವು ಉಂಟುಮಾಡಲ್ಪಟ್ಟಿತ್ತು.

೧೬೯೮ರಲ್ಲಿ ಈಸ್ಟ ಇಂಡಿಯಾ ಕಂಪನಿಯು ಕೋರ್ಟ ಆಫ್ ಡಿರೆಕ್ಟರರೆಂಬ ವ್ಯವಸ್ಥಾಪಕ ಸಂಘದವರು ಈ ದೇಶದಲ್ಲಿ ಕ್ರಿಸ್ತಧರ್ಮದ ಜ್ಞಾನವನ್ನು ಹಬ್ಬಿಸುವ ಇಚ್ಛೆಯು ತಮಗೆ ಮನಃಪೂರ್ವಕವಾಗಿ ಇರುವದೆಂದು ಪ್ರಸಿದ್ಧಪಡಿಸಿದರು. ಹಾಗು ಇದಕ್ಕಾಗಿ ಇಲ್ಲಿಗೆ ಬರುವ ಮಿಶನರೀ ಜನರು ತಮ್ಮ ಹಡಗಗಳಲ್ಲಿ ಪ್ರವಾಸಮಾಡಲು ಅನುಮತಿಯನ್ನಿತ್ತರು.

ಮದ್ರಾಸ

೧೬೭೦ರಲ್ಲಿ ಅವರು ಮದ್ರಾಸದ ಫೋರ್ಟ ಸೇಂಟ ಜಾರ್ಜ ಎಂಬಲ್ಲಿರುವ ಚಿಕ್ಕ ಮಕ್ಕಳ ಶಿಕ್ಷಣವು ಹ್ಯಾಗೆ ನಡೆದಿದೆಯೆಂಬ ಬಗ್ಗೆ ವಿಮರ್ಶೆ ಮಾಡಿದರು. ಹಾಗು ೧೬೭೩ರಲ್ಲಿ ಪ್ರಿಂಗಲ್ ಎಂಬ ಒಬ್ಬ ಪಾದ್ರಿಯನ್ನು ನೇಮಿಸಿ ಅಲ್ಲಿದ್ದ ಪೋರ್ತುಗೀಸ ಹಾಗು ಬ್ರಿಟಿಷ ಯಿರೇಸಿಯನರ ಹುಡುಗರಿಗೂ ನಮ್ಮ ದೇಶದ ಕಂಪನಿಯ ನವಕರರ ಮಕ್ಕಳಿಗೂ ಶಿಕ್ಷಣ ಕೊಡಿಸುತ್ತಿದ್ದರು. ಅಡ್ಡತಿಡ್ಡ ಪೋರ್ತುಗೀಸ ಭಾಷೆಯಲ್ಲಿ ಈ ಶಿಕ್ಷಣವು ನಡೆಯುತ್ತಿತ್ತು. ಆಗ ಈ ಜನರು ಇದೇ ಬಗೆಯ ಪೋರ್ತುಗೀಸ ಭಾಷೆಯನ್ನು ಮಾತಾಡುತ್ತಿದ್ದರು. ಪ್ರಿಂಗಲ್ಲನಿಗೆ ತಿಂಗಳಿಗೆ ೫೦ ಪೌಂಡು ವೇತನವು ದೊರೆಯುತ್ತಿತ್ತು.

೧೬೯೮ ರಲ್ಲಿ ಕಂಪನಿಯವರು ದೊರಕಿಸಿದ ಸನದಿನಲ್ಲಿ ಕ್ರಿಸ್ತ ಮಿಶನರಿ ಜನರಿಗೆ ಅನುಕೂಲವಾದ ಒಂದು ಮಾತು ಸೇರಿಸಲ್ಪಟ್ಟಿತು.

೧೭೦೪–೦೫ ರ ಸುಮಾರಿಗೆ ಮದ್ರಾಸದ ನೆರೆಯಲ್ಲಿದ್ದ ಟ್ರಾಂಕ್ವಿಬಾರ ಎಂಬ ಡಚ್ಚರ ಸ್ವಾಸ್ಥ್ಯದಲ್ಲಿರುತ್ತಿದ್ದ ಡಚ್ಚ ಸರಕಾರದ ಪ್ರಜೆಗಳನ್ನು ಕ್ರಿಸ್ತಧರ್ಮದವರನ್ನಾಗಿ ಮಾಡಬೇಕೆಂದು ಡೆನ್ಮಾರ್ಕದ ಆಗಿನ ಅರಸನಾದ ೪ ನೆಯ ಫ್ರೆಡರಿಕನೆಂಬವನಿಗೆ ಸೂಚಿಸಲಾಯಿತು. ಈ ಸೂಚನೆಯು ಅರಸನಿಗೆ ಸೇರಿತು. ಆದ್ದರಿಂದ ಕೋಪನ್‌ಹೇಗನ್ ಎಂಬಲ್ಲಿ ಮಿಶನರಿ ಜನರನ್ನು ಸಿದ್ಧಪಡಿಸಲಿಕ್ಕಾಗಿ ಒಂದು ಕಾಲೇಜವು ಸ್ಥಾಪಿಸಲ್ಪಟ್ಟಿತು. ಆದರೆ ಕಾಲೇಜದಲ್ಲಿ ಈ ಜನರು ತಯಾರಾಗುವ

ವರೆಗೆ ಟ್ರ್ರಾಂಕ್ವಿಬಾರದಲ್ಲಿ ಈ ಕಾರ್ಯವನ್ನು ಹಿಂದಕ್ಕೆ ಹಾಕಬಾರದೆಂಬ ಬಗ್ಗೆ ವ್ಯವಸ್ಥೆ ಮಾಡಲ್ಪಟ್ಟಿತು. ಆಗ ಜರ್ಮನಿಯಲ್ಲಿ ಶಿಕ್ಷಕರನ್ನು ಸಿದ್ಧಪಡಿಸುವುದರಲ್ಲಿ ಹಾಲ್‌ದ ಫ್ರಾಂಕ ಎಂಬ ಹೆಸರಾದ ಶಿಕ್ಷಕನಿದ್ದನು. ಈ ಕೆಲಸಕ್ಕಾಗಿ ಯೋಗ್ಯರಾದ ಜನರನ್ನು ಕಳಿಸಬೇಕೆಂದು ಆತನಿಗೆ ತಿಳಿಸಲಾಯಿತು. ಆತನು ಈರ್ವರನ್ನು ಇದಕ್ಕಾಗಿ ಕಳಿಸಿಕೊಟ್ಟನು. ಇವರಿಬ್ಬರೂ ೧೭೦೬ ರಲ್ಲಿ ಟ್ರ್ರಾಂಕ್ವಿಬಾರಕ್ಕೆ ಬಂದರು. ಇವರಲ್ಲಿ ಝೀಗನಬಾಗ್ ಎಂಬಾತನ ಮಿಶನರಿಯ ಕೆಲಸವು ಬಹಳ ಯಶಸ್ವಿಯಾಯಿತು. ೧೭೧೪ ರಲ್ಲಿ ಈತನು ಮರಳಿ ತನ್ನ ದೇಶಕ್ಕೆ ಹೋದಾಗ ಲಂಡನ ಪಟ್ಟಣಕ್ಕೂ ಹೋಗಿದ್ದನು. ಆಗ ಈತನು ಮಾಡಿದ ಕೆಲಸಕ್ಕಾಗಿ ಈತನನ್ನು ಅಭಿನಂದಿಸಿ ಅರಸನಾದ ೧ನೆಯ ಜಾರ್ಜನ ಭೆಟ್ಟಿಯನ್ನು ಮಾಡಿಸಿದರು. ಅರಸನು ಈತನ ಕೆಲಸವನ್ನು ಕುರಿತು ಸಂತುಷ್ಟನಾದ ಬಗ್ಗೆ ಇವನಿಗೆ ಒಂದು ಪತ್ರವನ್ನು ಬರೆದನು.

೧೭೧೧ರಲ್ಲಿ ಟಿಮೋಥೀ ಎಂಬ ಒಬ್ಬ ಹಿಂದುವು (ಈತನು ಕ್ರಿಸ್ತಮತವನ್ನು ಸ್ವೀಕರಿಸಿದ್ದನು.) ಹಾಲ್ ಪಟ್ಟಣದ ಶಿಕ್ಷಣಾಲಯದಲ್ಲಿ ಮಿಶನರಿಯ ಶಿಕ್ಷಣವನ್ನು ಪಡೆಯಲಿಕ್ಕಾಗಿ ಇಲ್ಲಿಂದ ಕಳಿಸಲ್ಪಟ್ಟನು. ಟಿಮೋಥಿಯು ಯುರೋಪಖಂಡಕ್ಕೆ ಹೋದ ಮೊದಲನೆಯ ಹಿಂದುವೆಂದು ಹೇಳಬಹುದು.

೧೭೧೭ರಲ್ಲಿ ಮದ್ರಾಸ ಸರಕಾರದ ಅನುಮತಿಯನ್ನು ಪಡೆದುಕೊಂಡು ಡಾನಿಷ್ ಮಿಶನರಿ ಜನರು ಮದ್ರಾಸದಲ್ಲಿ ಎರಡು ಶಾಲೆಗಳನ್ನು ಆರಂಭಿಸಿದರು. ಒಂದು ಪೋರ್ತುಗೀಸರ ಹುಡುಗರಿಗಾಗಿತ್ತು. ಮತ್ತೊಂದು ತಮಿಳು ಹುಡುಗರಿಗಾಗಿತ್ತು. ಅದೇ ವರುಷ ಕಂಪನಿಯವರು ಸಹ ಕಡಲೂರ ಎಂಬಲ್ಲಿ ಈ ದೇಶದ ಹುಡುಗರಿಗಾಗಿ ಒಂದು ಶಾಲೆಯನ್ನು ಸ್ಥಾಪಿಸಿದರು. ಮದ್ರಾಸ ಇಲಾಖೆಯಲ್ಲಿ ಸರಕಾರದಿಂದ ಸ್ಥಾಪಿತವಾಗಿ ನಡೆಸಲ್ಪಟ್ಟ ಶಾಲಾಭ್ಯಾಸಕ್ರಮದ ಆರಂಭವು ಈ ಶಾಲೆಯಿಂದಲೇ ಆಯಿತು.

ಮುಂಬಯಿ.

ಮುಂಬಯಿ ಇಲಾಖೆಯಲ್ಲಿ ಸ್ಥಾಪಿತವಾದ ಮೊದಲನೆಯ ಶಾಲೆಯು ೧೭೧೮ ರಲ್ಲಿ ಮುಂಬಯಿಯಲ್ಲಿ ಸೇಂಟ ಟಾಮಸ್ ಚರ್ಚದ ಚಾಪ್ಲೇನರಾದ ದಿ ರೆವರಂಡ ರಿಚರ್ಡ ಕಾಬ್ ಎಂಬವರಿಂದ ಆರಂಭಿಸಲ್ಪಟ್ಟಿತು. ಚರ್ಚ ಆಫ್ ಇಂಗ್ಲಂಡ

ಎಂಬ ಕ್ರಿಸ್ತ ಧರ್ಮದ ಶಾಖೆಯ ತತ್ವಗಳನ್ನನುಸರಿಸಿ, ಬಡತನದಲ್ಲಿದ್ದ ಯುರೋಪೀಯರ ಮಕ್ಕಳಿಗೆ, ಕ್ರಿಸ್ತಧರ್ಮದ ಬಗ್ಗೆ ಶಿಕ್ಷಣವನ್ನು ಕೊಡುವದೇ ಇದರ ಉದ್ದೇಶವಾಗಿತ್ತು. ಇದು ಉದಾರರಾದ ಗೃಹಸ್ಥರು ತಾವಾಗಿ ಕೊಟ್ಟ ವರ್ಗಣಿಯ ಹಣದಿಂದ ೧೮೦೭ರ ವರೆಗೆ ನಡೆಸಲ್ಪಟ್ಟಿತು. ಆ ವರುಷ ಈಸ್ಟ ಇಂಡಿಯಾ ಕಂಪನಿಯವರು ಇದನ್ನು ತಮ್ಮ ಆಧೀನಕ್ಕೆ ತೆಗೆದುಕೊಂಡು ಪ್ರತಿವರ್ಷ ಅದರ ವೆಚ್ಚಕ್ಕಾಗಿ ೩೦೦೦ ರೂಪಾಯಿ ಸಹಾಯಕ ದ್ರವ್ಯವನ್ನು ಕೊಡಲಾರಂಭಿಸಿದರು. ೧೮೧೫ರಲ್ಲಿ ಕಂಪನಿಯವರು ಈ ಶಾಲೆಯನ್ನು ಈ ವರ್ಷ ಹೊಸದಾಗಿ ಸ್ಥಾಪಿತವಾದ ಒಂದು ಸಂಘಕ್ಕೆ ಒಪ್ಪಿಸಿದರು. ಇದು ಆಗ ಮುಂಬಯಿ ಸರಕಾರದವರ ರಾಜ್ಯದಲ್ಲಿದ್ದ ಬಡಜನರ ಶಿಕ್ಷಣವನ್ನು ಕೈಕೊಳ್ಳುವ ಸಂಘವೆಂದು ಸ್ಥಾಪಿಸಲ್ಪಟ್ಟಿತು. ಮುಂದೆ ಇದೇ ಸಂಘವು ಮುಂಬಯಿಯ ಶಿಕ್ಷಣ ಸಂಘವೆಂದು ಹೆಸರಾಯಿತು. ಈ ಸಂಘದವರು ನಡೆಸಿದ ಶಾಲೆಗಳಲ್ಲಿ ಈ ದೇಶದ ಜನರ ಚಿಕ್ಕಮಕ್ಕಳನ್ನೂ ವಿದ್ಯಾಭ್ಯಾಸಕ್ಕಾಗಿ ಸೇರಿಸಿಕೊಳ್ಳುತ್ತಿದ್ದರು. ಈ ಶಾಲೆಗಳು ಬೆಲ್ ಸಾಹೇಬರ ಮಾನಿಟೋರಿಯಲ್ (ಹಿರಿಮಣಿಯ) ಶಿಕ್ಷಣಪದ್ಧತಿಯನ್ನನುಸರಿಸಿ ನಡೆಸಲ್ಪಟ್ಟಿದ್ದವು.

ಈ ಸಂಘದವರು ೧೮೨೦ರಲ್ಲಿ ಒಂದು ಸಭೆಯನ್ನು ಸೇರಿಸಿದ್ದರು. ಆ ಸಭೆಗೆ ಮೌಂಟ ಸ್ಟುವರ್ಟ ಎಲ್‌ಫಿನ್‌ಸ್ಟನ್‌ರೆಂಬುವರು ಅಧ್ಯಕ್ಷರಾಗಿದ್ದರು. ಈ ಸಭೆಯವರ ಸೂಚನೆಯ ಮೇರೆಗೆ ಸಂಘದವರು ಒಂದು ಸ್ಪೇಶಲ್ ಕಮಿಟಿಯನ್ನು ನಿಯಮಿಸಿದರು. ಈ ಕಮಿಟಿಯವರು ಇಂಗ್ಲಿಷ ಭಾಷೆಯಲ್ಲಿಯೂ ದೇಶಭಾಷೆಗಳಲ್ಲಿಯೂ ಶಾಲಾ ಪುಸ್ತಕಗಳನ್ನು ಬರೆಯಿಸಿ ಪ್ರಸಿದ್ಧಪಡಿಸಬೇಕೆಂದು ಗೊತ್ತಾಗಿತ್ತು. ದೇಶಭಾಷೆಯಲ್ಲಿ ಚಿಕ್ಕಮಕ್ಕಳಿಗೆ ವಿದ್ಯಾದಾನವನ್ನು ಮಾಡಲಿಕ್ಕಾಗಿ ದೇಶಭಾಷೆಯ ಶಾಲೆಗಳನ್ನು ಆರಂಭಿಸುವದು ಇಲ್ಲವೆ ಈ ಉದ್ದೇಶದಿಂದ ಸ್ಥಾಪಿತವಾದ ಶಾಲೆಗಳಿಗೆ ಸಹಾಯಕ ದ್ರವ್ಯವನ್ನು ಕೊಡುವದು ಈ ಕಮಿಟಿಯವರ ಕೆಲಸವಾಗಿತ್ತು.

೧೮೨೧ರಲ್ಲಿ ಕಂಪನಿಯವರು ಪುಣೆಯ ಸಂಸ್ಕೃತ ಕಾಲೇಜನನ್ನು ಸ್ಥಾಪಿಸಿದರು. "ಹಿಂದೂ ಜ್ಞಾನಭಂಡಾರದಲ್ಲಿರುವ ಉಪಯುಕ್ತವಾದ ಅಂಶಗಳನ್ನು ಅಭ್ಯಾಸಿಸುವದು; ಸರಕಾರವು ಬದಲಾದ ಮೂಲಕ ವಿಶೇಷ ತೊಂದರೆಗಳಿಗೊಳಗಾದ ಬಹುಜನರ ಆಚಾರವಿಚಾರಗಳ ಮೇಲೆ ಒಳ್ಳೇ ವರ್ಚಸ್ಸುಳ್ಳ ವಿದ್ವಾಂಸರಾದ

ಬ್ರಾಹ್ಮಣರ ಸದಭಿಪ್ರಾಯವನ್ನು ಸ್ಥಿರಪಡಿಸುವದು; ಇವುಗಳನ್ನು ಸಾಧಿಸಿ ಕೊಳ್ಳುವದೇ ಈ ಸಂಸ್ಥೆಯನ್ನು ಸ್ಥಾಪಿಸುವದರ ಉದ್ದೇಶವಾಗಿತ್ತು.

ಮುಂಬಯಿಯ ಶಿಕ್ಷಣ ಸಂಘವು ತನ್ನ ಮೂಲ ಉದ್ದೇಶವನ್ನು ಮೀರಿದ ಕೆಲಸವನ್ನು ಕೈಕೊಳ್ಳುತ್ತಿರುವದೆಂದು ಆ ಸಂಘದವರಿಗೆ ೧೮೨೦ರಲ್ಲಿ ಗೊತ್ತಾಯಿತು. ಆದ್ದರಿಂದ ಆ ಬಳಿಕ ಯುರೋಪಿಯನ್ ಹಾಗೂ ಯುರೇಜಿಯನ್ ಹುಡುಗರ ಶಿಕ್ಷಣಾಭಿವೃದ್ಧಿಯನ್ನು ಮಾಡುವ ಮಟ್ಟಿಗೆ ತಮ್ಮ ಕಾರ್ಯವನ್ನು ನಿರ್ಬಂಧಿಸಲು ಅವರು ನಿಶ್ಚಯಿಸಿದರು. ದೇಶಭಾಷೆಯ ಶಾಲಾಪುಸ್ತಕಗಳನ್ನು ಸಿದ್ಧಪಡಿಸಲಿಕ್ಕಾಗಿಯೂ ದೇಶಭಾಷೆಯ ಶಾಲೆಗಳನ್ನು ಸ್ಥಾಪಿಸಿ ಇಲ್ಲವೆ ಇಂಥ ಶಾಲೆಗಳಿಗೆ ಸಹಾಯಕ ದ್ರವ್ಯವನ್ನು ಕೊಟ್ಟು ಉತ್ತೇಜನಗೊಳಿಸಲಿಕ್ಕಾಗಿಯೂ ಏರ್ಪಡಿಸಿದ ಈ ಸಂಘದ ಸ್ಪೆಶಲ್ ಕಮಿಟಿಯವರು ೧೮೨೨ರಲ್ಲಿ ಪ್ರತ್ಯೇಕವಾದ ಸಂಘವೊಂದನ್ನು ಸ್ಥಾಪಿಸಿಕೊಂಡು "ಮುಂಬಯಿಯ ದೇಶೀಯ ಶಾಲಾಪುಸ್ತಕಗಳ ಹಾಗೂ ಶಾಲೆಗಳ ಸಂಘ"ವೆಂದು ಹೆಸರಿಟ್ಟುಕೊಂಡರು. ೧೮೨೭ ರಿಂದ ಈ ಸಂಘವು ಮುಂಬಯಿಯ ನೇಟಿವ್ಹ ಎಜ್ಯುಕೇಶನಲ್ ಸೊಸಾಯಿಟಿಯೆಂದು ಹೆಸರಾಯಿತು. ಮುಂಬಯಿಪ್ರಾಂತದ ಗವ್ಹರ್ನರರಾದ ಮೌಂಟಸ್ಟುಅರ್ಟ ಎಲ್‌ಫಿನ್‌ಸ್ಟನರೆಂಬ ಸಾಹೇಬರು ಇದರ ಮೊದಲನೆಯ ಅಧ್ಯಕ್ಷರಾದರು. ಈ ಸಂಘದವರು 'ಏತದ್ದೇಶೀಯರು ಅನುಸರಿಸುವ ಶಿಕ್ಷಣದ ತತ್ವಗಳಿಗೂ ನಿಯಮಗಳಿಗೂ ಸಮ್ಮತಿಸಿ, 'ಲಾಂಕಾಸ್ಟ್ರಿಯನ್ ಪ್ಲಾನ್' ಎಂದು ಹೆಸರಾದ ಪದ್ಧತಿಯ ಮೇರೆಗೆ ಶಾಲೆಗಳಲ್ಲಿ ಶಿಕ್ಷಣವನ್ನು ಕೊಡಲಾರಂಭಿಸಿದರು.'

ಮುಂಬಯಿಯ ನೇಟಿವ್ಹ ಸ್ಕೂಲ-ಬುಕ್ ಹಾಗು ಸ್ಕೂಲಸೊಸಾಯಿಟಿ ಎಂಬ ಸಂಘವು ಸ್ಥಾಪಿತವಾದ ಬಳಿಕ ಕೆಲವು ತಿಂಗಳಲ್ಲಿ ಒಂದು ಸ್ಪೆಸಲ್ ಕಮಿಟಿಯು ನಿಯಮಿಸಲ್ಪಟ್ಟಿತು. ಈ ಪ್ರಾಂತದಲ್ಲಿ ರೂಢಿಯಲ್ಲಿರುವ ಶಿಕ್ಷಣಕ್ರಮವನ್ನು ಪರೀಕ್ಷಿಸಿ, ಅದರಲ್ಲಿ ಅವಶ್ಯ ತೋರಿದ ಸುಧಾರಣೆಗಳನ್ನು ಮಾಡಿ, ಅದನ್ನು ಮುಂದುವರಿಸುವದೇ ಇದರ ಕಾರ್ಯವಾಗಿತ್ತು. ಆ ಕಾಲದ ಶಿಕ್ಷಣದಲ್ಲಿ "ಸಾಕಷ್ಟು ಪಠ್ಯಪುಸ್ತಕಗಳ, ಪದ್ಧತಿಗಳ, ಶಿಕ್ಷಕರ ಹಾಗು ಹಣದ ಕೊರತೆಯೇ ಮುಖ್ಯ ನ್ಯೂನತೆಯೆಂದು" ೧೮೨೩ ರಲ್ಲಿ ಈ ಕಮಿಟಿಯವರು ರಿಪೋರ್ಟ ಮಾಡಿದರು. ದೇಶಭಾಷೆಯಲ್ಲಿ ಬೇಕಾಗಿರುವ ಪುಸ್ತಕಗಳನ್ನು ಅವರು ಸೂಚಿಸಿ

ದರು ; ಹಾಗು ಇವುಗಳನ್ನು ಬರೆಯಲಿಚ್ಛಿಸುವವರ ಹಾಗು ಬೇರೆ ಭಾಷೆಗಳಿಂದ ಭಾಷಾಂತರಿಸಲಿಚ್ಛಿಸುವವರ ಮಾಹಿತಿಗಾಗಿ ಕೆಲವು ನಿಯಮಗಳನ್ನೂ ತತ್ವಗಳನ್ನೂ ಪ್ರಸಿದ್ಧಪಡಿಸಿದರು. ಲಾಂಕಾಸ್ಟ್ರಿಯನ್ ಪದ್ಧತಿಯ ಮೇರೆಗೆ ವಿದ್ಯೆಕಲಿಸುವ ಆರು ಜನ ಶಿಕ್ಷಕರನ್ನು ಜಾಣರಾದ ಏತದ್ದೇಶೀಯರಿಂದ ಆರಿಸಿ ಆ ಬಗ್ಗೆ ಅವರಿಗೆ ಶಿಕ್ಷಣಕೊಡಿಸಬೇಕೆಂದೂ, ಈ ಶಿಕ್ಷಣಕ್ರಮವನ್ನು ಅನುಸರಿಸಿ ಪ್ರಾಂತದ ಸಾಲೆಗಳಲ್ಲಿ ಶಿಕ್ಷಣವು ಸಾಗುವದೆಂಬದನ್ನು ನೋಡಿಕೊಳ್ಳಲು ಇವರನ್ನು ಶಾಲೆಗಳ ಮೇಲೆ ಮೇಲ್ವಿಚಾರಕರನ್ನಾಗಿ ನಿಯಮಿಸಬೇಕೆಂದೂ ಶಿಫಾರಸು ಮಾಡಿದರು. ಸಂಘದವರು ಈ ಶಿಫಾರಸುಗಳ ಬಗ್ಗೆ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿ ಇದಕ್ಕೆ ಸರಕಾರದ ಒಪ್ಪಿಗೆಯನ್ನು ಬೇಡಿದರು. ಈ ಪ್ರಕರಣದ ಬಗ್ಗೆ ಬರೆದ ಲೇಖನದಲ್ಲಿ ಮೌಂಟಸ್ಟುಅರ್ಟಎಲ್‌ಫಿನ್‌ಸ್ಟನ್ ಸಾಹೇಬರು ಮೂರು ಲಕ್ಷಣಗಳಿಂದೊಡಗೂಡಿದ ಧೋರಣವನ್ನು ಒತ್ತಿಹೇಳಿದರು. ಇವರು ಬರೆದದ್ದು:— "ಮೊದಲಿನ ಧೋರಣವು ಯಾವದಿರಬೇಕೆಂದರೆ, ಶಿಕ್ಷಣದಿಂದ ಸರಕಾರದ ಸಿವ್ಹಿಲ್ ಸರ್ವಿಸ್ ಅಂದರೆ ಲಷ್ಕರ ಖಾತೆಯನ್ನು ಬಿಟ್ಟು ಮಿಕ್ಕ ಖಾತೆಗಳಲ್ಲಿ ಕೆಲಸಮಾಡಲು ಯೋಗ್ಯರಾದ ಜನರನ್ನು ಸಿದ್ಧಪಡಿಸಬೇಕು. ಇವರು ಯುರೋಪಿಯನ್ನರಾಗಲಿ ಏತದ್ದೇಶೀಯರಾಗಲಿ ಇರಬಹುದು. ಇವರಲ್ಲಿ ಯುರೋಪದ ಜ್ಞಾನದ ಪ್ರಕಾಶವೂ ನೈತಿಕಾಚರಣೆಯ ಬಲವೂ ಇರುವದಲ್ಲದೆ ಹಿಂದುಸ್ತಾನದ ಹಾಗು ಅಲ್ಲಿಯ ಜನರ ಜ್ಞಾನವೂ ಇರಬೇಕು. ಎರಡನೆಯ ಧೋರಣವೆಂದರೆ, ಎಲ್ಲಕ್ಕೂ ಮೊದಲು ಇಲಾಖೆಯ ಪ್ರತಿಯೊಂದು ಭಾಗದಲ್ಲಿ ದೇಶಭಾಷೆಯ ಮುಖಾಂತರವಾಗಿ ಪ್ರಾಥಮಿಕ ಶಿಕ್ಷಣವನ್ನು ಸುಧಾರಿಸಿದ ಪದ್ಧತಿಗಳಿಂದ ಕೊಡುವ ವ್ಯವಸ್ಥೆಯು ಆಗಬೇಕು; ಇದಲ್ಲದೆ, ಇದಕ್ಕೆ ಸಹಾಯಕವಾಗಿ ನಿಜವಾದ ಉಪಯುಕ್ತತೆಯುಳ್ಳದ್ದಾಗುವಂತೆ ಇಂಗ್ಲಿಷ ಭಾಷೆಯ ಮುಖಾಂತರವಾಗಿ ಆ ಭಾಷೆಯ ಹಾಗು ಯುರೋಪೀಯ ಶಾಸ್ತ್ರಗಳ ಶಿಕ್ಷಣವನ್ನು ಕೊಡಬೇಕು. ಮೂರನೆಯ ಧೋರಣವೇನಿರಬೇಕೆಂದರೆ, ಈ ಉದ್ದೇಶವನ್ನು ಕೊನೆಗಾಣಿಸಲಿಕ್ಕಾಗಿ ಸರಕಾರದವರು ಪ್ರತ್ಯಕ್ಷವಾಗಿ ಇದರ ಬಗ್ಗೆ ವ್ಯವಸ್ಥೆ ಮಾಡಿ ಮೇಲ್ವಿಚಾರಿಸುವದಲ್ಲದೆ, ಸ್ವತಂತ್ರವಾಗಿ ಇದೇ ಬಗೆಯ ಶಿಕ್ಷಣ ವ್ಯವಸ್ಥೆಯನ್ನು ಕೈಕೊಂಡಿರುವ ಖಾಸಗಿ ಸಂಸ್ಥೆಗಳಿಗೆ (ಅವು ಮಿಶನರಿ ಸಂಸ್ಥೆಗಳು ಮಾತ್ರ ಇರಲಾಗದು) ಸಹಾಯಕ ದ್ರವ್ಯವನ್ನು ಕೊಡತಕ್ಕದ್ದು.

ಹಿಂದುಸ್ಥಾನದ ಜನರ ಶಿಕ್ಷಣದವಿಷಯದಲ್ಲಿ ಕಂಪನಿಯವರ ಜವಾಬದಾರಿಯನ್ನು ಕುರಿತು ಈತನು ಬರೆದದ್ದು— "ನಮ್ಮಿಂದಾಗತಕ್ಕ ಕಾರ್ಯ, ನಮ್ಮ ಸ್ವಂತ ಹಿತ, ನಮ್ಮ ಅಭಿಮಾನ ಈ ಮೂರು ಸಂಗತಿಗಳನ್ನು ಕುರಿತು ನೋಡಲು ನಾವು ನಿರ್ವಹಿಸಬೇಕಾಗಿರುವ ಯಾವ ಕೆಲಸವೂ ಇದರಷ್ಟು ಮಹತ್ವವುಳ್ಳದ್ದೆಂದು ನನ್ನ ಕಲ್ಪನೆಗಂತೂ ತೋರುವದಿಲ್ಲ. ಎಲ್ಲ ದೇಶಗಳಲ್ಲಿ ಬಡಜನರ ಸೌಖ್ಯವು ಬಹುತರವಾಗಿ ಅವರಿಗೆ ದೊರೆಯುವ ಶಿಕ್ಷಣವನ್ನೇ ಅವಲಂಬಿಸಿರುತ್ತದೆಂಬ ಮಾತು ಈಗ ಸರ್ವಜನ ಸಮ್ಮತವಾಗಿದೆ. ಈ ಶಿಕ್ಷಣಮಾತ್ರದಿಂದಲೇ ಆತ್ಮಗೌರವವೂ ಮಿತಭಾವದ ಚಟಗಳೂ ಅವರಲ್ಲಿ ನೆಲೆಗೊಳ್ಳುವವು. ಈ ಸದ್ಗುಣಗಳಿಂದಲೇ ಇತರ ಎಲ್ಲ ಒಳ್ಳೆಯ ಗುಣಗಳು ಹುಟ್ಟುತ್ತವೆ. ಈ ಚಟಗಳ ಅಗತ್ಯವು ಈ ದೇಶದಲ್ಲಿರುವಷ್ಟು ಬೇರೆ ಎಲ್ಲಿಯೂ ಇಲ್ಲ."

"ಬಡವರ ಶಿಕ್ಷಣವನ್ನಂತೂ ಬಹುಮಟ್ಟಿಗೆ ಸರಕಾರದವರೇ ವಹಿಸತಕ್ಕದ್ದು."

ಆ ಸಮಯದಲ್ಲಿ ಶಿಕ್ಷಣದ ಬಗ್ಗೆ ಮಿಶನರಿ ಜನರು ಒಳ್ಳೆಯ ಚಟುವಟಿಕೆಯುಳ್ಳವರಾಗಿದ್ದರೂ ಈಬಗ್ಗೆ ಎಲ್‌ಫಿನ್‌ಸ್ಟನ್ ಸಾಹೇಬರು ಬರೆದದ್ದು:— "ನಮ್ಮ ಶಿಕ್ಷಣವ್ಯವಸ್ಥೆಯ ಏರ್ಪಾಡಿನಲ್ಲಿ ಧರ್ಮದ ತೊಡಕನ್ನು ತೀರ ಸ್ವಲ್ಪ ಪ್ರಮಾಣದಿಂದ ಸೇರಿಸುವುದು ಸಹ ನನ್ನ ಮನಸ್ಸಿಗೆ ಸ್ವಲ್ಪವೂ ಬರುವದಿಲ್ಲ. ಇದಕ್ಕೆ ನಾನು ಬಲವಾದ ವಿರೋಧಿಯು. ನಮ್ಮ ಶಿಕ್ಷಣ ವ್ಯವಸ್ಥೆಯನ್ನು ರೂಢಿಯಲ್ಲಿ ತರಲಿಕ್ಕೆ ಹಲವುಬಗೆಯ ತೊಂದರೆಗಳುಂಟು. ಇವುಗಳಿಗೆ ಹೊಸದೊಂದು ತೊಡಕನ್ನು ಗಂಟುಹಾಕಲಿಕ್ಕೆ ನಾನು ಒಪ್ಪಲಾರೆನು. ಈ ದೇಶದ ಜನರಲ್ಲಿ ಜ್ಞಾನ ಪ್ರಸಾರವು ಆದಂತೆ ಅವರು ಧರ್ಮಾಂತರವನ್ನು ತಾವಾಗಿ ಸ್ವೀಕರಿಸುವರೆಂದು ನನಗೆ ಮನವರಿಕೆಯಾಗಿದೆ."

ಇಂಗ್ಲಿಷ ಶಿಕ್ಷಣದಬಗ್ಗೆಯೂ ಅದರ ಬಗ್ಗೆ ಬೇಡಿಕೆಯನ್ನುಂಟುಮಾಡಲು ಕೈಕೊಳ್ಳಬಹುದಾದ ಉಪಾಯಗಳಬಗ್ಗೆಯೂ ಆತನು ಬರೆದದ್ದು:—"ವಿಚಾರ ಮಾಡಲಿಕ್ಕೆ ಅವಕಾಶ ಲೇಶವಾದರೂ ಉಳ್ಳ ಜನರಲ್ಲಿ ಇಂಗ್ಲಿಷ ಭಾಷೆಯ ಹಾಗೂ ಶಿಕ್ಷಣದ ಪರಿಣಾಮವು ಹರಡಿತೆಂದರೆ, ಅದರಿಂದ ಜ್ಞಾನಾಭಿವೃದ್ಧಿಯು ಹತ್ತು ಮಡಿ ಹೆಚ್ಚಾಗುವದೆಂಬದರಲ್ಲಿ ಸಂದೇಹವಿಲ್ಲ. ಯಾಕೆಂದರೆ, ಇಂಗ್ಲಿಷ ಭಾಷೆಯ

ಮುಖಾಂತರವಾಗಿ ಶಾಸ್ತ್ರಜ್ಞಾನವನ್ನು ಮಾಡಿಕೊಂಡ ಪ್ರತಿಯೊಬ್ಬ ವ್ಯಕ್ತಿಯು ತನ್ನ ದೇಶಭಾಷೆಯ ಮೂಲಕ ಆ ಜ್ಞಾನವನ್ನು ತನ್ನ ದೇಶಬಾಂಧವರಿಗೆ ತಿಳಿಸಲು ಅನುವುಂಟಾಗಿರುವದು. ಆದರೆ ಈ ಉದ್ದೇಶದಿಂದ ಇಂಗ್ಲಿಷ ಭಾಷೆಯನ್ನು ಅಭ್ಯಾಸಮಾಡುವವರು ಸದ್ಯಕ್ಕೆ ಕಂಡುಬರುವದಿಲ್ಲ. ಈ ಇಚ್ಛೆಯನ್ನು ಉಂಟು ಮಾಡಲು ನಾವು ಮುಂಬಯಿಯಲ್ಲಿ ಒಂದು ಶಾಲೆಯನ್ನು ಸ್ಥಾಪಿಸಬೇಕು. ಅಲ್ಲಿ ಇಂಗ್ಲಿಷ ಭಾಷೆಯನ್ನು ಕಲಿಸಬೇಕು. ಇದಲ್ಲದೆ ಇಂಗ್ಲಿಷ ಭಾಷೆಯ ಮುಖಾಂತರ ವಾಗಿಯೇ ಆ ಶಾಲೆಯಲ್ಲಿ ಇತಿಹಾಸ, ಭೂಗೋಲ ಹಾಗು ಜನೋಪಯುಕ್ತ ವಾದ ಶಾಸ್ತ್ರೀಯ ವಿಷಯಗಳು ಇವುಗಳ ಅಭ್ಯಾಸವನ್ನೂ ಸಾಗಿಸತಕ್ಕದ್ದು."

ರಾಷ್ಟ್ರಸಂಘ

ಲೇಖಕರು:— ಶ್ರೀ. ಜೀ. ಎ. ಬಳವಂತರಾವ, ಬಾಗಲಕೋಟ

ಕಳೆದ ಸಂಚಿಕೆಯಲ್ಲಿ ರಾಷ್ಟ್ರಸಂಘದ ಉದ್ದೇಶಗಳನ್ನೂ, ಅದರ ಸಾಮಾನ್ಯ ಸ್ವರೂಪವನ್ನೂ ಹೇಳಿರುವೆವು. ಅದರ ಅಂಗಭೂತವಾದ ಸಂಸ್ಥೆಗಳನ್ನೂ, ಅವುಗಳ ಕಾರ್ಯಕಲಾಪಗಳನ್ನೂ ಈ ಲೇಖನದಲ್ಲಿ ಸಂಕ್ಷೇಪವಾಗಿ ವಿವರಿಸಿ, ರಾಷ್ಟ್ರಸಂಘದಿಂದ ಜಗತ್ತಿನಲ್ಲಿ ಶಾಂತತೆಯೂ, ಸುರಕ್ಷಿತತೆಯೂ ಹೇಗೆ ಕಾಯ್ದು ಕೊಳ್ಳಲ್ಪಡಬಹುದೆಂಬದನ್ನು ತೋರಿಸಬೇಕೆಂದಿದ್ದೇವೆ.

ಹಿಂದೆ ಹೇಳಿದಂತೆ ಅಸೆಂಬ್ಲಿ (ರಾಷ್ಟ್ರಸಂಘದ ಸಾಧಾರಣ ಸಭೆ), ಕೌನ್ಸಿಲ್, (ಕಾರ್ಯಕಾರೀ ಮಂಡಳ), ಅಂತರ ರಾಷ್ಟ್ರೀಯ ನ್ಯಾಯಸಭೆ ಮತ್ತು ಮಜೂರ ಸಂಸ್ಥೆ ಇವು ನಾಲ್ಕು ಮುಖ್ಯ ವಿಭಾಗಗಳಲ್ಲದೆ, ಸಲ್ಲಾಗಾರ ಮಂಡಳ, ಶಾಸ್ತ್ರೀಯ ಮಂಡಳ, ಆರೋಗ್ಯಮಂಡಳ ಮೊದಲಾದ ಉಪಸಭೆಗಳು ಏರ್ಪಡಿಸಲ್ಪಟ್ಟಿರು ವವು. ಇವುಗಳಲ್ಲಿ ಪೃಥ್ವಿಯ ಮೇಲಿನ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಮುತ್ಸದ್ದಿ ಗಳೂ ನಿಯಮಿಸಲ್ಪಟ್ಟು, ಅವರ ಆಲೋಚನೆಯಂತೆ ಕೌನ್ಸಿಲವು ಬಹುತರವಾಗಿ ಕೆಲಸಮಾಡುತ್ತಿರುವದು. ಆರ್ಥಿಕ ಪರಿಸ್ಥಿತಿ, ನಾಣ್ಯಗಳು, ವ್ಯಾಪಾರದ ಮಾರ್ಗಗಳು, ನಿಃಶಸ್ತ್ರತಾ, ಪಾಲನಾದೇಶ, ಸಾಂಸರ್ಗಿಕ ರೋಗಗಳು ಇವೇ

ಮೊದಲಾದ ವಿಷಯುಗಳನ್ನು ಚರ್ಚಿಸಿ, ಯೋಗ್ಯ ಅಭಿಪ್ರಾಯವನ್ನು ಕೊಡುವದು ಈ ಸಹಾಯಕ ಸಂಸ್ಥೆಗಳ ಕೆಲಸವಾಗಿರುವದು.

೧. ಆಸೆಂಬ್ಲಿ (ಸಾಧಾರಣ ಸಭೆ).

ರಾಷ್ಟ್ರಸಂಘದ ಸಭಾಸದ ದೇಶಗಳೇ ಅಸೆಂಬ್ಲಿಯ ಸಭಾಸದರು. ಪ್ರತಿಯೊಂದು ದೇಶದಿಂದ ಮೂರುಜನ ಪ್ರತಿನಿಧಿಗಳನ್ನು ಕಳಿಸಬಹುದು; ಆದರೆ ಒಂದು ದೇಶಕ್ಕೆ ಒಂದೇ ಮತಾಧಿಕಾರವಿರುವದು. ಜೀನೀವಾದಲ್ಲಿ ಅಥವಾ ಮೊದಲೇ ಗೊತ್ತುಮಾಡಲ್ಪಟ್ಟ ಬೇರೆ ಸ್ಥಳದಲ್ಲಿ ಅಸೆಂಬ್ಲಿಯ ಸಾಧಾರಣ ಸಭೆಯು ಪ್ರತಿವರುಷ ಸಪ್ಟಂಬರ ತಿಂಗಳಲ್ಲಿ ನಡೆಯುವದು. ಕೌನ್ಸಿಲದ ಬಹುಮತದ ವಿನಂತಿಯ ಮೇರೆಗೆ ಅಸೆಂಬ್ಲಿಯ ವಿಶಿಷ್ಟ ಅಧಿವೇಶನವೂ ನಡೆಯಬಹುದು.

ಅಧಿವೇಶನವು ನಡೆದವೇಳೆಯಲ್ಲಿ ರಾಷ್ಟ್ರದ ಪ್ರತಿನಿಧಿಗಳು ಪ್ರತಿದಿವಸ ಅಲ್ಲಿಯ ಕಾರ್ಯಕಲಾಪಗಳನ್ನು ತಮ್ಮ ಸರಕಾರಕ್ಕೆ ತಿಳಿಸಬಹುದು; ಮತ್ತು ಮಹತ್ವದ ವಿಷಯಗಳ ಮೇಲೆ ಮತಕೊಡುವ ಪ್ರಸಂಗಗಳಲ್ಲಿ ಆಯಾ ಸರಕಾರಗಳಿಂದ ಆಗಾಗ್ಗೆ ಸೂಚನೆಗಳೂ ಬರುತ್ತಿರುತ್ತವೆ. ಸಂಘಕ್ಕೆ ಹೊಸ ಸಭಾಸದರನ್ನು ಸೇರಿಸಿಕೊಳ್ಳುವದು, ಕೌನ್ಸಿಲವು ತಯಾರಿಸಿದ ಅಂದಾಜಪತ್ರಿಕೆಯನ್ನು ಪಾಸು ಮಾಡುವದು, ಪ್ರತಿಯೊಂದು ರಾಷ್ಟ್ರವು ಸಂಘದ ವೆಚ್ಚಕ್ಕಾಗಿ ಕೊಡುವ ಹಣವನ್ನು ನಿಶ್ಚಯಿಸುವದು, ಸಂಘದ ಕರಾರನಾಮೆಯಲ್ಲಿ ಹೆಚ್ಚುಕಡಿಮೆ ಮಾಡುವದು ಈ ಮಹತ್ವದ ಅಧಿಕಾರಗಳು ಅಸೆಂಬ್ಲಿಗೆ ಇರುತ್ತವೆ. ಇವಲ್ಲದೆ, ಬೇರೆ ಬೇರೆ ಪ್ರತಿನಿಧಿಗಳು ಸೂಚಿಸಿದ ನಿರ್ಣಯುಗಳನ್ನೂ ಕೌನ್ಸಿಲವು ಸೂಚಿಸಿದ ವಿಷಯುಗಳನ್ನೂ ಅಸೆಂಬ್ಲಿಯು ವಿಚಾರಕ್ಕಾಗಿ ತೆಗೆದುಕೊಳ್ಳುವದು. ಅಧಿವೇಶನದ ಕಾರ್ಯಗಳೆಲ್ಲ ಇಂಗ್ಲಿಷ ಅಥವಾ ಫ್ರೆಂಚ ಭಾಷೆಯಲ್ಲಿ ನಡೆಯುವವು; ಆದರೆ ಯಾವನೊಬ್ಬ ಪ್ರತಿನಿಧಿಯು ತನ್ನ ಮಾತೃಭಾಷೆಯಲ್ಲಿ ಭಾಷಣ ಮಾಡಿದರೂ, ಅದನ್ನು ಫ್ರೆಂಚ ಅಥವಾ ಇಂಗ್ಲಿಷ ಭಾಷೆಯಲ್ಲಿ ಭಾಷಾಂತರಿಸಿ ಹೇಳುವದಕ್ಕಾಗಿ, ದುಭಾಷಿಗಳು ನೇಮಿಸಲ್ಪಟ್ಟಿರುವರು. ಜಿನೀವಾದಲ್ಲಿ ಅಸೆಂಬ್ಲಿಯ ಕೆಲಸವು ನಡೆದಾಗ್ಗೆ, ಅಲ್ಲಿಯ ಭಾಷಣಗಳೆಲ್ಲ ಪೃಥ್ವಿಯಮೇಲೆ ಬೇಕಾದಲ್ಲಿ 'ರೇಡಿಯೋ'ದ ಮುಖಾಂತರವಾಗಿ ಕೇಳುವಂತೆ ವ್ಯವಸ್ಥೆಯಿರುವದು.

ಅಸೆಂಬ್ಲಿಯ ಚರ್ಚೆಯನ್ನು ಕೇಳುವದಕ್ಕಾಗಿ ಪೃಥ್ವಿಯ ಮೇಲಿನ ಪ್ರಸಿದ್ಧ ವೃತ್ತಪತ್ರಕಾರರ ಪ್ರತಿನಿಧಿಗಳು ಬಂದಿರುತ್ತಾರೆ. ಅವರು ಪ್ರತಿದಿವಸ ತಂತೀ ಮೂಲಕವಾಗಿಯೂ, ಲೇಖನಗಳ ಮೂಲಕವಾಗಿಯೂ ಅಲ್ಲಿಯ ಸುದ್ದಿಗಳನ್ನು ಜಗತ್ತಿನ ತುಂಬೆಲ್ಲ ಹರಡುವರು. ಇದರಿಂದ, ಜಗತ್ತಿನ ಶಾಂತತೆ ಹಾಗು ಸುರಕ್ಷಿತತೆ ಇವುಗಳ ಸಂಬಂಧವಾಗಿ ಅನೇಕ ದೇಶಗಳಲ್ಲಿ ಚರ್ಚೆಯು ನಡೆಯುವದಲ್ಲದೆ, ಅದರಿಂದ ಲೋಕಮತದ ಮೇಲೆ ಪರಿಣಾಮವೂ ಉಂಟಾಗುವದು. ಅಂತರರಾಷ್ಟ್ರೀಯ ವಿಷಯಗಳ ಬಗ್ಗೆ ಸುಧಾರಿಸಿದ ಜಗತ್ತಿನಲ್ಲಿಯ ಲೋಕಮತದ ಒಲವು ಯಾವಕಡೆಗಿರುವದೆಂಬದನ್ನು ಈ ಅಸೆಂಬ್ಲಿಯ ಚರ್ಚೆಯಿಂದ ಸಹಜವಾಗಿ ತಿಳಿದುಕೊಳ್ಳಬಹುದು.

೨. ಕೌನ್ಸಿಲ್ (ಕಾರ್ಯಕಾರೀಮಂಡಳ)

ಕೌನ್ಸಿಲದಲ್ಲಿ ೧೪ ಜನ ಸಭಾಸದರಿದ್ದು, ಅವರಲ್ಲಿ ಫ್ರಾನ್ಸ, ಜರ್ಮನಿ, ಗ್ರೇಟ ಬ್ರಿಟನ್, ಇಟಲಿ ಮತ್ತು ಜಪಾನ ಈ ಐದು ರಾಷ್ಟ್ರಗಳ ಐವರು ಪ್ರತಿನಿಧಿಗಳು ನಿರಂತರ ಸಭಾಸದರಾಗಿರುತ್ತಾರೆ. ಉಳಿದ ೯ ಜನರನ್ನು ಅಸೆಂಬ್ಲಿಯು ಪ್ರತಿವರುಷ ಮೂವರಂತೆ ಆರಿಸುತ್ತದೆ. ಹೀಗೆ ಆರಿಸಲ್ಪಟ್ಟ ಸಭಾಸದರ ಅವಧಿಯು ಮೂರುವರ್ಷ ಮಾತ್ರ ಇರುವದು. ಅಂತರ ರಾಷ್ಟ್ರೀಯ ವ್ಯವಹಾರದಲ್ಲಿ ಈ ಕೌನ್ಸಿಲದ ಮಹತ್ವವು ದಿನೇದಿನೇ ಬೆಳೆಯುತ್ತ ನಡೆದಿರುವದರಿಂದ, ಈ ಚುನಾವಣಿಯಲ್ಲಿ ಮೇಲಾಟವು ಅತಿಶಯವಾಗಿರುತ್ತದೆ. ರಾಷ್ಟ್ರರಾಷ್ಟ್ರಗಳಲ್ಲಿಯ ಗುಪ್ತ ಕರಾರಗಳನ್ನು ರಜಿಸ್ಟರ ಮಾಡುವದು, ಜಗತ್ತಿನ ಸಂಬಂಧವಿದ್ದ ಬೇರೆ ಬೇರೆ ಪ್ರಕಾರದ ಮಾಹಿತಿಯನ್ನು ದೊರಕಿಸುವದು, ಯುದ್ಧವನ್ನು ನಿಲ್ಲಿಸಲಿಕ್ಕೆ ಯತ್ನಮಾಡುವದು, ಈ ಮೊದಲೇ ಆಗಿದ್ದ ಕರಾರುಗಳನ್ನು ಹೆಚ್ಚುಕಡಿಮೆ ಮಾಡುವದು ಇವೇ ಮೊದಲಾದ ಮಹತ್ವದ ಕೆಲಸಗಳನ್ನು ಈ ಕೌನ್ಸಿಲವು ಮಾಡುವದು.

ಕೌನ್ಸಿಲದ ಅಧಿವೇಶನಗಳು ವರ್ಷದಲ್ಲಿ ಮೂರು ಸಾರೆ ಅಂದರೆ ಜಾನೇವರಿ, ಮೇ ಮತ್ತು ಸಪ್ಟಂಬರ ತಿಂಗಳುಗಳಲ್ಲಿ ಕೂಡುತ್ತವೆ. ಆದರೆ, ಮಹತ್ವದ ಪ್ರಸಂಗವಿದ್ದರೆ, ಬೇಕಾದಾಗ್ಗೆ ಅವು ಕೂಡಬಹುದು. ಪ್ರತಿಯೊಂದು ಅಧಿವೇಶನಕ್ಕೆ ಒಬ್ಬೊಬ್ಬ ಅಧ್ಯಕ್ಷನು ಬೇರೆ ಇರುತ್ತಾನೆ. ಈ ಮಾನವು ಕ್ರಮವಾಗಿ ಪ್ರತಿಯೊಂದು ರಾಷ್ಟ್ರಕ್ಕೂ ಬರಬಹುದು. ಸಂಘದ ಮುಖ್ಯ ಕಾರ್ಯದರ್ಶಿಯೇ

ಕೌನ್ಸಿಲಕ್ಕೂ ಕಾರ್ಯದರ್ಶಿಯಾಗಿರುವನು. ಕಾರ್ಯಪತ್ರಿಕೆಯೊಳಗಿನ ಪ್ರತಿಯೊಂದು ಕಾರ್ಯವನ್ನು ಒಬ್ಬೊಬ್ಬ ಸಭಾಸದನಿಗೆ ಒಪ್ಪಿಸುತ್ತಾರೆ; ಅವನು ಕಾರ್ಯದರ್ಶಿಗಳ ಸಹಾಯದಿಂದ ಅವಶ್ಯವಿದ್ದ ಮಾಹಿತಿಯನ್ನು ದೊರಕಿಸಿ, ಅದರ ಬಗ್ಗೆ ತನ್ನ ನಿಶ್ಚಿತ ಅಭಿಪ್ರಾಯವನ್ನು ಕೊಟ್ಟು, ಕೌನ್ಸಿಲಿನ ವಿಚಾರಕ್ಕಾಗಿ ಅದನ್ನು ಕಳಿಸುತ್ತಾನೆ.

ಸೈನ್ಯವನ್ನು ಕಡಿಮೆಮಾಡುವ ಯೋಜನೆಯನ್ನು ತಯಾರಿಸುವದು, ಮುಖ್ಯ ಕಾರ್ಯದರ್ಶಿಯು ಮಾಡಿದ ನೇಮಣೂಕಿಗಳಿಗೆ ಮಂಜೂರಿಕೊಡುವದು, ರಾಷ್ಟ್ರಸಂಘದ ಪಾಲಕತ್ವದಲ್ಲಿರುವ ಪ್ರದೇಶಗಳ ರಾಜ್ಯಕಾರಭಾರವು ಸರಿಯಾಗಿ ನಡೆಯುವಂತೆ ವ್ಯವಸ್ಥೆಮಾಡುವದು, ಅಲ್ಪಸಂಖ್ಯಾಕ ಜನರ ಸಂರಕ್ಷಣೆಯು ಚನ್ನಾಗಿ ಆಗುವಂತೆ ನೋಡಿಕೊಳ್ಳುವದು ಈ ಕೆಲಸಗಳನ್ನು ಸಹ ಕೌನ್ಸಿಲವು ಮಾಡಬೇಕಾಗಿರುವದು.

(ಮುಂದೆ ಸಾಗುವದು)

ಶಾಲೆಯ ತೋಟ ಮತ್ತು ಪ್ರಕೃತಿವಿಮರ್ಶೆ

(೧ನೇ ಇಯತ್ತೆ)

ಲೇಖಕರು: ಜಿ. ಡಿ. ಅಮರಗೋಳಮಠ ಅಸಿ. ಮಾ. ಒಕ್ಕಲತನದ ಶಾಲಾ, ದೇವಿಹೊಸೂರ

ಒಂದನೇ ಇಯತ್ತೆಯನ್ನು ಕಲಿಸುವ ಶಿಕ್ಷಕನು ಊರ ಶಿಕ್ಷಕನಾಗಿದ್ದರೆ ಮುಖ್ಯ ಶಿಕ್ಷಕನ ಸಹಾನುಭೂತಿಯನ್ನು ಪಡೆದು ಶಾಲೆಯ ತೋಟದ ಕೆಲಸವನ್ನು ಪ್ರಾರಂಭಿಸಬೇಕು. ಮುಖ್ಯ ಶಿಕ್ಷಕನು ಈ ಕೆಲಸವನ್ನು ಮಾಡುವ ಉತ್ಸಾಹಿ ಶಿಕ್ಷಕನಿಗೆ, ಬೇಕಾದ ಅನುಕೂಲತೆಗಳನ್ನು ಮಾಡಿಕೊಡಬೇಕು. ಈ ಕೆಲಸಕ್ಕೆ ಊರ ಜನರ ಮನವಲಿಸಬೇಕು. ಹೀಗೆ ಮಾಡದೆ ಶಿಕ್ಷಕನು ಕೆಲಸವನ್ನು ಪ್ರಾರಂಭಮಾಡಿದರೆ, ಗೋಕಾಕದ ಗಣಪತಿಯನ್ನು ಮಾಡಹೋಗಲು, ಮನೋಳಿಯ ಮಂಗವಾಯಿತೆಂಬಂತೆ ಆತನ ಕೆಲಸವಾಗುವದು. ಆದುದರಿಂದ ಶಾಲೆಯ ತೋಟಮಾಡುವ ಶಿಕ್ಷಕನು ಬಹಳ ಎಚ್ಚರದಿಂದ ಈ ಕೆಲಸವನ್ನು ಪ್ರಾರಂಭ ಮಾಡಬೇಕು.

ಇನ್ನು ೧ನೇ ಇಯತ್ತೆಯ ಹುಡುಗರ ತೋಟದ ಅಭ್ಯಾಸದ ಬಗ್ಗೆ ವಿವೇಚಿಸುವ:— ಈ ಒಂದನೇ ಇಯತ್ತೆಯಲ್ಲಿ ಬಹಳ ಹುಡುಗರಿದ್ದರೆ, ೧೫ ಹುಡುಗರದೊಂದು ಭಾಗಮಾಡಬೇಕು. ಪ್ರತಿಯೊಬ್ಬ ಹುಡುಗನಿಂದ ಕುರ್ಪಿ ಗುದ್ದಲಿಗಳನ್ನು ತರಿಸಬೇಕು. ಎಲ್ಲರಿಂದ ತರಲಿಕ್ಕೆ ಸಾಧ್ಯವಾಗದಿದದ್ದರೆ, ತರಲಿಕ್ಕೆ ಸಾಧ್ಯವಿರುವ ಹುಡುಗರಿಂದ ತರಿಸಬೇಕು. ಕುರ್ಪಿ ಗುದ್ದಲಿಗಳು ಆದಷ್ಟು ಸಣ್ಣವಿರಬೇಕು. ಇಂಥ ಗುದ್ದಲಿಗಳಿಗೆ ಪ್ರತಿಯೊಂದಕ್ಕೆ ೪–೫ ಆಣೆಗಳಿಗಿಂತ ಹೆಚ್ಚು ಬೆಲೆ ಬೀಳುವದಿಲ್ಲ. ಕುರ್ಪಿಗೆ ೩ ಬಿಲ್ಲಿ ಬೆಲೆ ಬೀಳುವದು. ಆದ್ದರಿಂದ ಊರಜನರ ಸಹಾಯದಿಂದ ಇಂಥ ನಾಲ್ಕೆಂಟು ಗುದ್ದಲಿಗಳನ್ನೂ ಕುರ್ಪಿಗಳನ್ನೂ ತರಿಸಿ ಇಡಿಸುವದು ಶಿಕ್ಷಕನ ಜಾಣತನದ ಮೇಲಿರುವದು.

ಹುಡುಗರನ್ನು ಶಾಲೆಯ ಹಿತ್ತಲಲ್ಲಿ ಕರಕೊಂಡುಹೋಗಿ ಕುರ್ಪಿಯು ಯಾತಕ್ಕೆಬೇಕು ? ಎಂದು ಕೇಳಬೇಕು. ಕೆಲವರು ಅನೇಕ ರೀತಿಯಿಂದ ಹೇಳುವರು. ಆಗ್ಗೆ ಶಿಕ್ಷಕನು, ಕಸವನ್ನು ಕೆತ್ತಿ ತೆಗೆಯಲಿಕ್ಕೆ ಇದನ್ನು ಉಪಯೋಗಿಸುವರೆಂದು ಹೇಳಬೇಕು.

ನಂತರ ಬಿರಸು ಮತ್ತು ಮಿದು ಭೂಮಿಯನ್ನು ಅಗಿಸಬೇಕು. ಶಿಕ್ಷಕನು ತಾನು ಅಗಿದು ತೋರಿಸಬೇಕು. ಗುದ್ದಲಿಯನ್ನು ಹಿಡಿಯುವ ಸದ್ಧತಿಯನ್ನು ಸರಿಯಾಗಿ ಹೇಳಬೇಕು. ಹೆಂಟೆಗಳನ್ನು ಒಡೆದು ಪುಡಿಮಾಡಿಸಿ ಹದನೋಡಿ ಬೀಜಹಾಕಿಸಿ ಆರೇಳು ಸಸ್ಯಗಳನ್ನು ಪ್ರೀತಿಯಿಂದ ಬೆಳಿಸಬೇಕು.

ಅಗಿಗಳು ಹುಟ್ಟಬಂದ ಬಳಿಕ ಅವುಗಳ ಅಳತೆಮಾಡಿ ನೋಡಲಿಕ್ಕೆ ಹೇಳಬೇಕು. ಆ ಮೇಲೆ ನಾಲ್ಕು ದಿವಸಗಳಾದ ಬಳಿಕ ಅವುಗಳ ಅಳತೆಯನ್ನೂ ಮಾಡಿಸಬೇಕು. ಮೊದಲಿನ ಅಳತೆಗೂ ಈಗಿನ ಅಳತೆಗೂ ಇರುವ ಅಂತರವನ್ನು ತಿಳಿಸಬೇಕು. ಮೊದಲಿಗಿಂತ ಹೆಚ್ಚು ಎತ್ತರವಾದದ್ದನ್ನು ಹುಡುಗರು ಹೇಳುವರು.

ಈ ಶಾಲೆಯ ಹಿತ್ತಲಲ್ಲಿದ್ದ ಕಲ್ಲಿನ ಮೊದಲಿನ ಆಕಾರಕ್ಕೂ ಈ ಹೊತ್ತಿನ ಆಕಾರಕ್ಕೂ ಇರುವ ಅಂತರವನ್ನು ಕೇಳಬೇಕು. ಕಲ್ಲು ಮಾತ್ರ ಇದ್ದಷ್ಟೇ ಇರುವದೆಂದೂ, ಅದು ಹೆಚ್ಚು ಬೆಳೆದಿಲ್ಲೆಂದೂ ಹುಡುಗರು ಹೇಳುವರು.

ಹಾಗಾದರೆ ಕಲ್ಲಿನಲ್ಲಿ ಜೀವವಿದೆಯೋ ? ಸಸ್ಯದಲ್ಲಿ ಜೀವವಿದೆಯೋ ? ಎಂದು ಪ್ರಶ್ನೆಮಾಡಬೇಕು. ಸಸ್ಯದಲ್ಲಿ ಜೀವವಿದೆ ಎಂದೂ ಕಲ್ಲು ನಿರ್ಜೀವ ವಸ್ತು ಎಂದೂ ಹೇಳುವರು.

ಸಾರಾಂಶವೇನಂದರೆ– ವನಸ್ಪತಿಗಳಲ್ಲಿ ನಮ್ಮಂತೆಯೇ ಜೀವ ಇರುವದೆಂದು ಇದರಿಂದ ಸ್ಪಷ್ಟವಾಗುತ್ತದೆಂದು ಶಿಕ್ಷಕನು ತಿಳಿಸಿಹೇಳಬೇಕು.

ಎರಡು ಮುಚ್ಚಳಗಳನ್ನು ತಕ್ಕೊಂಡು ಒಂದರಲ್ಲಿ ಒಣಮಣ್ಣನ್ನು, ಮತ್ತೊಂದರಲ್ಲಿ ಹಸಿ ಮಣ್ಣನ್ನೂ ಹಾಕಿ ಅವುಗಳಲ್ಲಿ ಬೀಜ ಹಾಕಿಸಿ ನಿರೀಕ್ಷಿಸ ಬೇಕು. ನಾಲ್ಕೈದು ದಿವಸಗಳಲ್ಲಿ ನೋಡಿದರೆ ಒಣಮಣ್ಣಿನಲ್ಲಿದ್ದ ಬೀಜಗಳು ನಾಟದೆ ಇದ್ದದ್ದೂ, ಹಸಿಮಣ್ಣಿನಲ್ಲಿದ್ದ ಬೀಜಗಳು ನಾಟಿದ್ದೂ ತಿಳಿಯುವದು. ಹಸಿ ಇದ್ದರೆ ಬೀಜಗಳು ನಾಟುತ್ತವೆಂದು ಶಿಕ್ಷಕನು ತಿಳಿಸಿಹೇಳಬೇಕು.

ಶಿಕ್ಷಕನು ಅನೇಕ ಪ್ರಕಾರದ ಗಿಡ, ಬಳ್ಳಿಗಳನ್ನು ತರಿಸಬೇಕು. ಅವೆಲ್ಲವು ಗಳನ್ನು ಹುಡುಗರ ಮುಂದೆ ಇಟ್ಟು ನಿರೀಕ್ಷಿಸಲಿಕ್ಕೆ ಹಚ್ಚಬೇಕು. ಪೂರ್ಣ ಬೆಳೆದ ಅಂದರೆ ಕಾಯಿಯಾದ ಒಂದು ಗಿಡವನ್ನು ತೋರಿಸಿ ಇದರಲ್ಲಿ ಎಷ್ಟು ಭಾಗಗ ಳಿವೆ ? ಎಂದು ಸಾಮೂಹಿಕ ಪ್ರಶ್ನೆಮಾಡಬೇಕು. ಬರದಿದ್ದರೆ ಶಿಕ್ಷಕನು, ಇದಕ್ಕೆ ಬೇರು ಅನ್ನುತ್ತಾರೆಂದು ಬೇರನ್ನು ತೋರಿಸಬೇಕು. ಇದಕ್ಕೆ ಕಾಂಡ ಅನ್ನುತ್ತಾರೆಂದು ಕಾಂಡವನ್ನು ತೋರಿಸಬೇಕು. ಇದರಂತೆಯೇ, ಎಲೆ ಹೂವು, ಕಾಯಿಗಳ ಬಗ್ಗೆ ಹೇಳಬೇಕು.

ಬೇರು, ಕಾಂಡ, ಎಲೆ ಇದ್ದ ವನಸ್ಪತಿಯನ್ನು ತೋರಿಸಿ ಅದರಲ್ಲಿಯ ಭಾಗಗಳನ್ನು ಕೇಳಬೇಕು. ಬೇರು, ಕಾಂಡ, ಎಲೆ, ಹೂವು ಇದ್ದು ಫಲವಿಲ್ಲದ ವನಸ್ಪತಿಯನ್ನು ಹುಡುಗರ ಮುಂದಿಟ್ಟು ಅದರ ಪ್ರತಿಯೊಂದು ಭಾಗಗಳ ಹೆಸರು ಗಳನ್ನು ಕೇಳಬೇಕು. ಹೂವು ಇಲ್ಲದೆ ಉಳಿದ ವನಸ್ಪತಿಯ ಎಲ್ಲ ಭಾಗಗಳಿದ ವನಸ್ಪತಿಯನ್ನು ತೋರಿಸಿ ಅದರಲ್ಲಿಯ ಭಾಗಗಳನ್ನು ಕೇಳಬೇಕು. ಚಾಕುವಿ ನಿಂದ ಬೇರು, ಕಾಂಡ, ಎಲೆಗಳನ್ನು ಬೇರೆ ಬೇರೆ ಮಾಡಿ ತೋರಿಸಿರೆಂದು ಹೇಳಬೇಕು. ಕಾಯಿ. ಹೂವುಗಳನ್ನು ಹರಿದು ತೆಗೆದು ತೋರಿಸಿರೆಂದು ಹೇಳಬೇಕು.

ಬೇರು, ಕಾಂಡ, ಎಲೆ, ಹೂವು, ಕಾಯಿ ಈ ಭಾಗಗಳು ಸರಿಯಾಗಿ ತಿಳಿದ ನಂತರ ಮುಂದಿನ ಸಾರೆ ಅನೇಕ ಪ್ರಾಣಿ ಮುಂತಾದವುಗಳಬಗ್ಗೆ ಕಲಿಯೋಣ ವೆಂದು ವಿಷಯುವನ್ನು ಸಮಸ್ತ ಮಾಡಬೇಕು.

(ಮುಂದುವರಿಯುವದು.)

ಪಂಪಾಯಾತ್ರೆ

ಲೇಖಕ—ಎ. ವ್ಹಿ. ದೇಸಾಯಿ, ೬ನೆಯ ಇ ವಿದ್ಯಾರ್ಥಿ, ಎ. ವ್ಹಿ. ಸ್ಕೂಲ, ಗುಳೇದಗುಡ್ಡ

ಪಂಪಾಕ್ಷೇತ್ರವನ್ನು ನೋಡಬೇಕೆಂಬ ಲವಲವಿಕೆಯು ಬಹುದಿವಸದಿಂದಲೂ ಇತ್ತು. ಆದರೆ ಅನುಕೂಲವೇಳೆ ಬಂದಹೊರತು ಯಾವದೂ ಸಾಧಿಸುವದಿಲ್ಲ. ಈ ಸಾರೆ ಶ್ರೀಮಂತ್ರಾಲಯದ ಯಾತ್ರೆಯನ್ನು ಮಾಡಿಕೊಂಡು ತಿರುಗಿಬರುವಾಗ್ಗೆ ಪಂಪಾಪತಿಯೇ ನಮ್ಮನ್ನು ತನ್ನಲ್ಲಿಗೆ ಬರಮಾಡಿಕೊಂಡನು. ಅಲ್ಲಿಗೆ ಹೋಗುವ ಸಿದ್ಧತೆ ಸಹ ಇದ್ದಿಲ್ಲ; ಆದರೆ ಹೊಸಪೇಟ ಸ್ಟೇಶನಕ್ಕೆ ಬಂದಕೂಡಲೇ ಅಲ್ಲಿಗೆ ಇಳಿಯಬೇಕೆಂಬ ಉತ್ಕಟೇಚ್ಛೆಯಾದ್ದರಿಂದ ಇಳಿದೇಬಿಟ್ಟೆವು.

ಹೊಸಪೇಟೇ ಸ್ಟೇಶನದಿಂದ ಹಂಪೆಯು ೯ ಮೈಲಿನ ಮೇಲಿದೆ. ಹಂಪೇ ಕ್ಷೇತ್ರಕ್ಕೆ ಹೋಗುವ ಪ್ರವಾಸಿಕರು ಈ ಸ್ಟೇಶನಕ್ಕೆ ಪ್ರತಿದಿನ ಎಷ್ಟೋ ಜನರು ಇಳಿಯುತ್ತಿರುವದರಿಂದ ಇಲ್ಲಿ ವಾಹನಗಳು ನಿಶ್ಚಯವಾಗಿ ಸಿಗುತ್ತವೆ. ಬಂಡಿಗಳು ಜಟಕಗಳು ಯಾವಾಗಲೂ ಸಿದ್ಧ ಇದ್ದೇ ಇರುತ್ತವೆ.

ಪಂಪಾಕ್ಷೇತ್ರದಲ್ಲಿ ಹರಿಹರರಾಯನಿಂದ ಸ್ಥಾಪಿಸಲ್ಪಟ್ಟ ವಿರೂಪಾಕ್ಷ ಮಂದಿರವೇ ಪ್ರಸಿದ್ಧವಾದದ್ದು. ಅದರ ಮಹಾದ್ವಾರವು ೧೧ ಅಂತಸ್ತಿನಿಂದೊಡಗೂಡಿದ್ದು ಪ್ರೇಕ್ಷಕರಿಗೆ ಆನಂದಕೊಡುವಂಥಾದ್ದಾಗಿದೆ. ಗುಡಿಯು ಅತಿ ಭವ್ಯವಾದದ್ದೂ ಸುಂದರವಾದದ್ದೂ ಆಗಿದ್ದು ಗುಡಿಯ ಸುತ್ತಲೂ ಪಂಪೇಶ್ವರಿ,ಭುವನೇಶ್ವರಿ,ದಕ್ಷಿಣ ಕಾಶಿ, ಮಾರುತಿ, ಸೂರ್ಯನಾರಾಯಣ ಮುಂತಾದವರ ಗುಡಿಗಳಿವೆ. ಪ್ರವಾಸಿಕರಿಗೆ ಇಳಿದುಕೊಳ್ಳಲಿಕ್ಕೆ ಈ ಗುಡಿಯು ಒಳ್ಳೇ ಅನುಕೂಲವಾಗಿದೆ. ಗುಡಿಯ ಮುಂದಿನಮುಗ್ಗಲು, ಹಿಂದಿನಮುಗ್ಗಲು ಖೋಲಿಗಳಿರುವವು. ಪೌಳಿಯ ಛತ್ರದಲ್ಲಂತೂ ಬೇಕಾದಷ್ಟು ಜನರು ಇಳಿಯಬಹುದು. ಮಹಾದ್ವಾರದ ಎದುರಿಗೆ

ಅಂಗಡಿಗಳವೆ. ಅವರ ಅಂಗಡಿಯಲ್ಲಿ ಸಾಮಾನು ತೆಗೆದುಕೊಂಡರೆ ಅಂಗಡಿಕಾರರು ಅಡಿಗೆಗೆ ಬೇಕಾಗುವ ಪಾತ್ರೆ ಸಾಮಾನುಗಳನ್ನು ಒದಗಿಸಿಕೊಡುವರು. ಇದರಿಂದ ಯಾತ್ರಿಕರಿಗೆ ಒಳ್ಳೇ ಅನುಕೂಲವಾಗಿದೆ. ಅಂಗಡಿಕಾರರ ಬಾಡಿಗೆ ಕೋಣೆಗಳಿದ್ದು ಅವಕ್ಕೆ ಪ್ರತಿದಿನವೂ ೪ ಆಣೆ ಬಾಡಿಗೆ ತೆಗೆದುಕೊಳ್ಳುವರು. ಇಷ್ಟು ಬಾಡಿಗೆ ಕೊಟ್ಟು ಅಲ್ಲಿ ಇಳಿಯುವದು ಶ್ರೀಮಂತರ ಕೆಲಸವು.

ಇಲ್ಲಿ ವಿರುಪಾಕ್ಷನ ಪೂಜೆಯು ಪ್ರತಿದಿವಸ ಒಳ್ಳೆ ವಿಜೃಂಭಣೆಯಿಂದ ನಡೆಯುವದು. ಸಂಜೆಯುಮುಂದೆ ಪಲ್ಲಕ್ಕಿಸೇವೆ ಮಂಗಳಾರತಿಗಳು, ವಾದ್ಯವೈಭವದಿಂದೊಡಗೂಡಿ ಭಕ್ತರ ಮನಸ್ಸನ್ನು ತಲ್ಲೀನಗೊಳಿಸುತ್ತವೆ. ಪಂಪಾಪತಿಯ ಗುಡಿಯ ಮೇಲಿನಿಂದ ಒಂದು ಕಾಲುವೆ ಹರಿದಿದ್ದು ಈಗ ಅದು ಬಳಿಕೆಯಲ್ಲಿಲ್ಲ. ಆದರೂ ಗುಡಿಯ ಅಂಗಳದಲ್ಲಿಯೇ ಒಂದು ಕಾಲುವೆ ಇದ್ದು ಅದು ಯಾವಾಗಲೂ ಹರಿಯುತ್ತದೆ. ಈ ಗುಡಿಯ ನೆರೆಯಲ್ಲಿ ತುಂಗಭದ್ರಾ ನದಿಯು ಒಳ್ಳೆ ಅಬ್ಬರದಿಂದ ಹರಿಯುತ್ತದೆ. ಅಲ್ಲಿ ಒಂದು ಹರಗೋಲು ಇದ್ದು ಆಚೆಯ ದಂಡೆಗೆ ಹೋಗಲಿಕ್ಕೆ ಒಳ್ಳೇ ಅನುಕೂಲವದೆ. ಇಲ್ಲಿಯ ಲಿಂಗವು ಉದ್ಭವಲಿಂಗವಾದ್ದರಿಂದ ಪೂರ್ವಕಾಲದಿಂದಲೂ ಕ್ಷೇತ್ರವೆಂದು ಎಣಿಲಸ್ಪಡುತ್ತದೆ.

ಈ ನಗರವು ಈಗ ಹತ್ತಿಪ್ಪತ್ತು ಮನೆಗಳ ಹಳ್ಳಿಯಾಗಿದ್ದರೂ ವಿಜಯನಗರದ ಅರಸನ ಕಾಲದಲ್ಲಿ ಒಳ್ಳೆ ಪ್ರಸಿದ್ಧವಾಗಿತ್ತು. ಇಲ್ಲಿಯ ದೇವಾಲಯಗಳು ಎರಡೇ ಕಣ್ಣುಗಳಿಂದ ನೋಡಲಿಕ್ಕೆ ಸಾಲದಷ್ಟು ಅಸಂಖ್ಯವೂ ಸುಂದರವೂ ಆಗಿವೆ. ಇಲ್ಲಿ ಆರೇಳು ತಿಂಗಳವರೆಗೆ ನಿಂತು ನೋಡಿದರೂ ಪ್ರೇಕ್ಷಕರಿಗೆ ಎಲ್ಲವನ್ನು ನೋಡುವದೇ ಆಗುವದಿಲ್ಲ; ಮತ್ತೂ ತೃಪ್ತಿಯೂ ಆಗುವದಿಲ್ಲ. ಆದರೂ ೧ ೨ ದಿವಸಗಳಲ್ಲಿಯೇ ನೋಡಬಹುದಾದ ಮಹತ್ವದ ಮಂದಿರಗಳ ಟಿಪ್ಪಣೆಗಳನ್ನು ಬರೆದು ಈ ಲೇಖವನ್ನು ಮುಗಿಸುವೆನು.

ಇಲ್ಲಿಯ ಇಮಾರತಿಗಳನ್ನು ನೋಡುವವರು ಮೂರು ವಿಭಾಗವಾಗಿ ನೋಡಬಹುದು.

(೧) ಆರಂಭದಲ್ಲಿ ಚಕ್ರತೀರ್ಥವನ್ನು ನೋಡಬಹುದು, ಇದು ಪವಿತ್ರವಾದ ತೀರ್ಥವು. ಇಲ್ಲಿ ಬ್ರಾಹ್ಮಣರು ತೀರ್ಥವಿಧಿಯನ್ನು ಮಾಡಿಕೊಳ್ಳುವ ಪರಿಪಾಠ ಉಂಟು. ತುಂಗಭದ್ರಾ ನದಿಯು ಪಶ್ಚಿಮದಿಂದ ಪೂರ್ವಕ್ಕೆ ಹರಿದು ಇದಿರಿ

ಗಿರುವ ಪರ್ವತವನ್ನು ಭೇದಿಸಲರಿಯದೆ ಉತ್ತರಕ್ಕೆ ಹೊರಳಿರುತ್ತದೆ. ಇಲ್ಲಿ ನೀರು ಚಕ್ರವಾಗಿ ಹರಿದಿರುವದರಿಂದ ಇದಕ್ಕೆ ಚಕ್ರತೀರ್ಥವೆಂಬ ಹೆಸರು ಬಂದಿರಬಹುದು. ಈ ತೀರ್ಥದ ಮೇಲ್ಗಡೆಯಲ್ಲಿಯೇ ಕೋದಂಡರಾಮನ ಗುಡಿಯುಂಟು. ಆ ಗುಡಿಯು ಅಷ್ಟೊಂದು ಭವ್ಯವಾಗದಿದ್ದರೂ ಮಾಟಾಗಿ ಸುಂದರವಾಗಿದೆ. ಅಲ್ಲಿರುವ ರಾಮ, ಲಕ್ಷ್ಮಣ, ಸೀತೆ, ಮಾರುತಿ, ಇವರ ಮೂರ್ತಿಗಳು ಪ್ರೇಕ್ಷಕರ ಮನಸ್ಸನ್ನು ಆಹ್ಲಾದಗೊಳಿಸುತ್ತವೆ. ಇದರ ನೆರೆಯಲ್ಲಿಯೇ ಸೂರ್ಯನಾರಾಯಣನ, ಯಂತ್ರೋದ್ಧಾರ ಪ್ರಾಣದೇವರ, ಹಾಗೂ ಮಾಧವಾಚಾರ್ಯರ ಗುಡಿಗಳವೆ. ಕೋದಂಡರಾಮನ ಗುಡಿಯನ್ನು ದಾಟ ಮುಂದಕ್ಕೆ ಹೋಗಲು ಸೀತೆಯ ಶೆರಗು ಹತ್ತುವದು. ಇದನ್ನು ದಾಟ ಮುಂದಕ್ಕೆ ಹೋಗಲು ವಿಜಯವಿಠ್ಠಲನ ಗುಡಿಹತ್ತುವದು. ಇದು ಯಾವತ್ತೂ ಇಮಾರತುಗಳಲ್ಲಿ ಭವ್ಯವೂ ಸುಂದರವೂ ಆಗಿದೆ. ಇಲ್ಲಿ ಒಂದೇ ಕಂಬದಲ್ಲಿ ೧೬ ಕಂಬಗಳನ್ನು ಕಾಣಬಹುದು. ಈ ಗುಡಿಯ ಸೌಂದರ್ಯವನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ, ಇದರ ಎದುರಿಗೆ ಒಂದು ಕಲ್ಲಿನ ತೇರು ಅದೆ. ಈ ಗುಡಿಯನ್ನು ಮುಸಲ್ಮಾನರು ಅತಿಶಯವಾಗಿ ನಾಶಮಾಡಿದ್ದಾರೆ. ಇದರಲ್ಲಿ ಈಗ ದೇವರಿಲ್ಲ. ಇದರ ಪೂರ್ವದ ಸ್ಥಿತಿಗೂ, ಈಗಿನ ಸ್ಥಿತಿಗೂ ತುಲನೆ ಮಾಡಿ ನೋಡಿದರೆ ಎಂಥ ಕಲ್ಲೆದೆಯವನೂ ಕಣ್ಣೀರು ಸುರಿಸದೆ ಇರನು. ಹಿಂದಿನ ಕಾಲದಲ್ಲಿ ಒಳ್ಳೇ ವೈಭವದಿಂದಲೂ, ದೇವಮೂರ್ತಿಯಿಂದಲೂ ವಾದ್ಯವೈಭವದೊಡನೆ ದಿನಾಲು ಪೂಜಾದಿಗಳಿಂದಲೂ ಮೆರೆಯುತ್ತಿರುವ ಈ ಮಂದಿರವು ಈಗ ಕಣ್ಣುಕಪ್ಪಡಿ ಹುಳಹುಪ್ಪಡಿಗಳ ನಿವಾಸಸ್ಥಾನವಾಗಿದೆ! ಇದನ್ನು ನೋಡಿದರೆ ಗತವೈಭವವನ್ನು ನೆನೆಸಿ ಯಾವ ಕನ್ನಡಿಗನೂ ಶೋಕಿಸದೇ ಇರನು. ಇದನ್ನು ದಾಟ ಸ್ವಲ್ಪ ಮುಂದಕ್ಕೆ ಹೋಗಲು ಅಲ್ಲಿ ತುಂಗಭದ್ರಾ ನದಿಯನ್ನು ದಾಟಲಿಕ್ಕೆ ಒಂದು ಹರಗೋಲು ಅದೆ. ಅಲ್ಲಿ ನದಿಯನ್ನು ದಾಟ ಆನೇಗುಂದಿ ಆಂಜನೇಯನ ಬೆಟ್ಟ, ವಾಲಿಯ ಭಾಂಡಾರ, ಪಂಪಾಸರೋವರ ಮುಂತಾದವುಗಳನ್ನೂ ಅಲ್ಲಿಯ ಅರಮನೆಗಳನ್ನೂ ನೋಡಬಹುದು. ನದಿಯು ಬಾರದೇ ಇದ್ದಾಗ ನವ ವೃಂದಾವನವನ್ನು ನೋಡಬಹುದು. ನದಿಯಲ್ಲಿ ಯತಿವರರ ೯ ವೃಂದಾವನಗಳಿವೆ. ಇವುಗಳನ್ನೆಲ್ಲ ನೋಡಿ ಮತ್ತೆ ವಿರುಪಾಕ್ಷನ ಗುಡಿಗೆ ಬರಬಹುದು.

(೨) ಎದುರಿಗಿರುವ ಅಂಕಣ ಬಸವಣ್ಣನು ಒಂದು ಅಂಕಣದ ತುಂಬ ವ್ಯಾಪಿಸಿರುವನು. ಇದರ ಮಗ್ಗಲಲ್ಲಿಯೇ ಮಾತಂಗಬೆಟ್ಟಕ್ಕೆ ಹೋಗಲು ದಾರಿ

ಯುಂಟು. ಮಾತಂಗಬೆಟ್ಟವು ಬಹು ಎತ್ತರವು. ಪರ್ವತದ ಮೇಲೆ ಒಂದು ಗುಡಿಯುಂಟು. ಈ ಗುಡಿಯಲ್ಲಿ ಈಗಾದರೂ ಪೂಜಾದಿಗಳು ನಡೆಯುತ್ತವೆ. ಈ ಗುಡಿಯ ಪ್ರಾಕಾರದಲ್ಲಿ ನಿಂತು ಸುತ್ತಲೂ ಕಾಣುವ ಸೃಷ್ಟಿಸೌಂದರ್ಯವನ್ನು ನೋಡಿದರೆ ಮನಸ್ಸಿಗಾಗುವ ಆನಂದವನ್ನು ಎಷ್ಟುವರ್ಣಿಸಿದರೂ ತೀರದು. ಇದರ ಎದುರಿಗೆ ಕಾಣುವದೇ ಮಾಲ್ಯವಂತ ಬೆಟ್ಟವು. ಮಾತಂಗ ಬೆಟ್ಟವನ್ನು ಬಂದ ದಾರಿಯು ಹೊರತು ಎರಡನೇ ಕಡೆಗೂ ಇಳಿಯಬಹುದು. ಇಳಿದಕೂಡಲೆ ಅಲ್ಲಿ ಅಚ್ಯುತರಾಯನ ಗುಡಿಯು ಹತ್ತುವದು. ವಿಜಯವಿಠಲನ ಮಂದಿರದ ಹೊರತು ಈ ಗುಡಿಯೇ ದೊಡ್ಡದು. ಇದಾದರೂ ಬಹು ಸುಂದರವಾಗಿದೆ. ಮುಸಲ್ಮಾನರ ಹಾವಳಿಯಿಂದ ಇದಾದರೂ ಹಾಳಾಗಿ ಹೋಗಿದೆ. ಒಳಗೆ ಮೂರ್ತಿಯಿಲ್ಲ. ಮುಂದೆ ಹಾಗೇ ಕಾಮಲಾಪುರದ ಹಾದಿಯನ್ನು ಹಿಡಿದು ತೆರಳುವಾ- ಹಾದಿಯಲ್ಲಿ ಒಂದು ದೊಡ್ಡ ಕಾಲುವೆ ಹತ್ತುವದು. ಅಲ್ಲಿ ಉಪಹಾರಾದಿಗಳನ್ನು ತೀರಿಸಲಿಕ್ಕೆ ಒಳ್ಳೇ ಅನುಕೂಲವದೆ. ಈ ನದಿಯಿಂದ ಜಾಳಿಗೆಯಂತೆ ಹರಿದ ಕಾಲುವೆಗಳನ್ನೂ ಆ ಕಾಲುವೆಗಳಿಂದ ಹಚ್ಚಗೆ ಕಂಗೊಳಿಸುವ ಭತ್ತದ ಗದ್ದೆಗಳನ್ನೂ ಕಬ್ಬು ಬಾಳೆಯ ತೋಟಗಳನ್ನೂ ನೋಡಿ ಮನಸ್ಸಿಗೆ ಒಳ್ಳೇ ಆಹ್ಲಾದವಾಗುವದು. ಮುಂದೆ ಸ್ವಲ್ಪುದೂರ ಹೋಗಲು ಶೇಷಶಾಹಿ ಗುಡಿಯು ಹತ್ತುವದು. ಅದನ್ನು ದಾಟ ಸ್ವಲ್ಪ ಮುಂದಕ್ಕೆ ಹೋಗಲು 'ಹಾಳು ಹಂಪೆ' ಎಂದು ಪ್ರಸಿದ್ಧವಿದ್ದ ಹಳೇ ಊರು ಹತ್ತುವದು. ಹಿಂದಿನ ಕಾಲದಲ್ಲಿ ರಾಜಧಾನಿಯೆಂದು ಒಳ್ಳೇ ವೈಭವದಿಂದ ಮೆರೆಯುತ್ತಿರುವ ಈ ನಗರವು ಈಗ 'ಹಾಳು ಹಂಪೆ' ಎಂಬ ಹೆಸರಿನಿಂದ ಕನ್ನಡಿಗರ ದುರ್ದೈವವನ್ನು ತೋರಿಸುವದಕ್ಕಾಗಿ ಹಾಳು ಸುರಿಯುತ್ತಿರುವದನ್ನು ನೋಡಿದರೆ ಯಾವ ಕನ್ನಡಿಗನ ಎದೆಯೊಡೆದು ನೀರಾಗಲಿಕ್ಕಿಲ್ಲ! ಗತವೈಭವವನ್ನು ನೆನಸಿ ಯಾವ ಕನ್ನಡಿಗನು ಗೋಳಿಡಲಿಕ್ಕಿಲ್ಲ! ಇದು ಅರಣ್ಯರೋದನವೇ ಸರಿ. "ಕ್ಷಣं वित्तं क्षणं चित्तं क्षणं जीवित मानवः" ಎಂಬ ಉಕ್ತಿಯು ನಿಶ್ಚಯತ್ವವನ್ನು ಇದು ತೋರಿಸಿರುತ್ತದೆ.

ಹಾಳು ಹಂಪೆಯಲ್ಲಿ ನೋಡತಕ್ಕ ಮಂದಿರಗಳು ಬಹಳ ಅವೆ. ರಾಣೀ ಮಹಾಲು, ಸಭೆಯ ಕಟ್ಟೆ ಮತ್ತೂ ಎರಡಂತಸ್ತಿನ ಕಮಾನಾಕಾರದ ಮಹಾಲುಗಳು ನೋಡತಕ್ಕಂಥವಿವೆ. ಇದರ ಎದುರಿಗೆ ಅನೇಕ ಮೂರ್ತಿಗಳು ತುಂಡು ತುಂಡಾಗಿ ಬಿದ್ದಿರುತ್ತವೆ. ಇದರ ಮುಂದೆ ಸ್ವಲ್ಪ ಅಂತರವನ್ನು ಕ್ರಮಿಸಲು

ಆನೆಯಸಾಲು ಹತ್ತುವದು. ಒಂದೊಂದು ಆನೆಗೆ ಯೋಗ್ಯವಾಗುವಂತೆ ಕಟ್ಟಿದ ಎಂಟುಹತ್ತು ಇಮಾರತುಗಳವೆ. ಅವನ್ನು ದಾಟಿ ಹೋಗಲು ಗ್ರಾಮದೇವತೆಯ ಗುಡಿಯು ಹತ್ತುವದು. ಈ ಗುಡಿಯು ತೆಗ್ಗಿನಲ್ಲಿದೆ. ಮುಸಲ್ಮಾನರ ಆಘಾತವು ಈ ಗುಡಿಯ ಮೇಲೆ ಆಗಿಲ್ಲ. ಈ ಗುಡಿಗೆ ಈಗಲೂ ಪೂಜೆಯು ನಡೆಯುತ್ತದೆ. ಮುಂದೆ ಒಂಟೇಸಾಲು, ಕುದುರೇಸಾಲುಗಳನ್ನು ನೋಡಿಕೊಂಡು ಹಜಾರ್ ರಾಮರಾಯನ ಗುಡಿಗೆ ಹೋಗಬಹುದು. ಈ ಗುಡಿಯು ವಿಜಯವಿಠ್ಠಲನ ಗುಡಿಯಷ್ಟು ದೊಡ್ಡದಲ್ಲದಿದ್ದರೂ ಇಲ್ಲಿಯಷ್ಟು ಹಸ್ತಕೌಶಲ್ಯಗಳನ್ನು ಮತ್ತಾವ ಗುಡಿಯಲ್ಲಿಯೂ ನೋಡಲಾರೆವು. ಗುಡಿಯ ಹೊರಗಿನ ಮಗ್ಗಲು ಚತುರಂಗ ಬಲಗಳು ಯುದ್ಧಮಾಡುವ ರೀತಿಯನ್ನೂ, ಪ್ರತಿಪಕ್ಷಿಗಳ ಹೊಡತವನ್ನು ತಪ್ಪಿಸಿ ಕೊಳ್ಳುವ ರೀತಿಯನ್ನೂ ಕಲ್ಲಿನಲ್ಲಿಯೇ ಚಿತ್ರಿಸಿದ್ದಾರೆ.

ಇನ್ನು ಗುಡಿಯ ಒಳಗಿನ ಶಿಲ್ಪಕಲೆಯು ಅವರ್ಣನೀಯವಾಗಿರುತ್ತದೆ. ರಾಮಾಯಣ ಮಹಾಭಾರತದಲ್ಲಿಯ ಎಲ್ಲ ಚಿತ್ರಗಳನ್ನು ಈ ಒಂದೇ ಗುಡಿಯಲ್ಲಿ ಕಾಣಬಹುದು. ಕರೇಕಲ್ಲಿನಲ್ಲಿ ಮೂರ್ತಿಗಳನ್ನು ಹೊಡೆದಿದ್ದರಿಂದ ಚಿತ್ರಗಳು ಬಹು ಸುಂದರ ಕಾಣುತ್ತವೆ. ಈ ಗುಡಿಗೆ ಕಲ್ಲಿನ ಖಡೇಪಾಟ ಇದ್ದು ಕಲ್ಲುಗ ಳಲ್ಲಿಯೂ ಗೋಡೆಗಳಲ್ಲಿಯೂ ಖಡೇಪಾಟುಗಳಲ್ಲಿ ಮೂರ್ತಿಗಳು ತುಂಬಿಹೋಗಿ ರುತ್ತವೆ. ಈ ಗುಡಿಯ ಸೌಂದರ್ಯವನ್ನು ಎಷ್ಟು ವರ್ಣಿಸಿದರೂ ತೀರದು. ಇದರ ಮುಂದೆ ಸ್ವಲ್ಪ ಅಂತರದಲ್ಲಿ ಹಜಾರ ರಾಮನ ಗರಡೀಮನೆಯುಂಟು. ಮುಂದೆ ಭೀಮನ ಡೋಣಿಯನ್ನು ನೋಡಿಕೊಂಡು ರಾಜನ ಮಹಾಲ ಎಂಬ ಬಹು ದೊಡ್ಡ ಕಟ್ಟೆಯನ್ನು ನೋಡಿ, ಅದರ ಸುತ್ತಲಿರುವ ಮೂರು ನಾಲ್ಕು ದೊಡ್ಡ ದೊಡ್ಡ ಇಮಾರತುಗಳನ್ನು ನೋಡಬಹುದು. ಮುಂದೆ ವಾಲಿಯ ಬೂದಿಯು ಹತ್ತುವದು.

ಇನ್ನು ತಿರುಗಿ ಬರುವದೇ ಮೂರನೆಯ ಭಾಗವು. ಇದು ಕಾಮಲಾ ಪೂರದಿಂದ ಹಂಪಿಗೆ ಬರುವ ಹಾದಿಯು. ಹಾದಿಯಲ್ಲಿ ಅಕ್ಕತಂಗಿಯರ ಕಲ್ಲುಗಳು ಹತ್ತುವವು. ಈ ಎರಡು ಕಲ್ಲುಗಳು ಬಹು ಎತ್ತರವಾಗಿದ್ದು ಒಂದಕ್ಕೊಂದು ಹೊಂದಿ ಅವೆ. ಮುಂದೆ ಊರ ಸಮೀಪಕ್ಕೆ ಬರಲು ಉದ್ದಾನ ವೀರಭದ್ರನ ಗುಡಿಯು ಕಾಣುವದು. ಅದರ ಪೂಜೆಯು ಈಗ್ಯೂ ನಡೆಯುತ್ತಿರುವದು. ಈ

ಹೆಸರು ಅವನಿಗೆ ಅನ್ವರ್ಥಕವಾಗಿದ್ದಂತೆ ತೋರುತ್ತದೆ. ಯಾಕೆಂದರೆ ಈ ಮೂರ್ತಿಯೂ ೬ ೭ ಫೂಟಗಿಂತ ಎತ್ತರವೂ ಭವ್ಯವೂ ಆಗಿದೆ. ಈಗ ಗುಡಿಯಲ್ಲಿ ದೇವದರ್ಶನಕ್ಕೆ ಮಾತ್ರ ರೊಕ್ಕಬೇಳುವದು. ಎರಡು ದುಡ್ಡು ಕೊಟ್ಟ ಹೊರತು ದೇವರನ್ನೇ ತೋರಿಸುವದಿಲ್ಲ. ದೇವರ ಮುಂದೆ ಒಂದು ಪರದೆಯನ್ನು ಕಟ್ಟಿರುತ್ತಾರೆ. ಈ ಗುಡಿ ತೆರೆಯಲ್ಲಿಯೇ ಭುವನೇಶ್ವರಿಯ ಗುಡಿಯುಂಟು. ಈ ಗುಡಿಯು ಸಣ್ಣದಾಗಿದ್ದರೂ ಮೂರ್ತಿಯು ಚನ್ನಾಗಿದೆ. ಇಲ್ಲಿಂದ ಸ್ವಲ್ಪ ದೂರದಲ್ಲಿ ಬಡವೀಲಿಂಗವೂ ಉಗ್ರನರಸಿಂಹನ ಮೂರ್ತಿಯೂ ಕಾಣುವವು. ಬಡವೀಲಿಂಗವು ನೀರಿನಲ್ಲಿ ಅದೆ. ಉಗ್ರ ನರಸಿಂಹನ ಮೂರ್ತಿಯು ಹೆಸರಿಗೆ ತಕ್ಕಂತೆ ಬಲು ಉಗ್ರವಾಗಿದೆ. ಮುಸಲ್ಮಾನರ ಉಪಟಳದಿಂದ ಈ ಮಂದಿರವೆಲ್ಲ ನಾಶವಾಗಿ ಮೂರ್ತಿಯೂ ಸಹ ಭಿನ್ನವಾಗಿದೆ. ಇಲ್ಲಿಂದ ಮುಂದೆ ಸಾಸಿವೆಕಾಳ ಗಣಪ್ಪ, ಕಡ್ಲೆಯಕಾಳ ಗಣಪ್ಪ ಇವರ ಗುಡಿಗಳು ಹತ್ತುವವು. ಇವು ಹೆಸರಿನಿಂದ ಸಣ್ಣವೆಂದು ತೋರಿದರೂ ಮೂರ್ತಿಯು ಬಹು ದೊಡ್ಡವಿವೆ. ನಿಚ್ಚಣಿಕೆಯನ್ನು ಹಚ್ಚಿದ ಹೊರತು ನಮಗೆ ಮೂರ್ತಿಯ ಮೋರೆಯು ನಿಲಕುವದಿಲ್ಲ.

ಇದರ ನೆರೆಯಲ್ಲಿಯೇ ಹೇಮಕೂಟವಿರುತ್ತದೆ. ಇದರ ಶೋಭೆಯನ್ನು ವರ್ಣಿಸಲಳವಲ್ಲ. ಇದರ ಮೇಲೆ ಹೋಗುವದಾರಿಯು ಚಕ್ರವ್ಯೂಹ ಕೋಟೆಯ ದಾರಿಯಂತಿದೆ ಕೆಲವು ಹಾದಿಯನ್ನು ಗುಹೆಯೊಳಗಿಂದಲೇ ಹೋಗಬೇಕಾಗುತ್ತದೆ. ಈ ಪರ್ವತವು ದೊಡ್ಡ ಬಂಡೆಗಳಿಂದ ಕೂಡಿದ್ದು ನೋಡಲಿಕ್ಕೆ ಬಲು ಚಂದವದೆ. ಪರ್ವತದ ಮೇಲೆ ಈಶ್ವರ, ಮಾರುತಿ ಇವರ ಗುಡಿಗಳಿವೆ. ರಾಮತೀರ್ಥ ಲಕ್ಷ್ಮಣ ತೀರ್ಥಗಳಿವೆ. ಇಲ್ಲಿ ಆದವಾನಿಯ ಒಬ್ಬ ಆಚಾರ್ಯರು ಹಿಂದಿನಕಾಲದ ಋಷಿಗಳಂತೆ ಕುಟುಂಬಸಮೇತರಾಗಿ ಆಶ್ರಮಮಾಡಿಕೊಂಡಿದ್ದಾರೆ; ಬಂದ ಬ್ರಾಹ್ಮಣರಿಗೆ ಅನ್ನನೀರುಗಳನ್ನು ಕೊಟ್ಟು ಯಾತ್ರಿಕರು ಏನಾದರೂ ಕೊಟ್ಟರೆ ಅಷ್ಟರಿಂದಲೇ ತುಷ್ಟರಾಗಿ ಆನಂದದಿಂದ ಕಾಲಕಳೆಯುತ್ತಲಿದ್ದಾರೆ. ಇವರನ್ನು ನೋಡಿದರೆ ಹಿಂದಿನ ಕಾಲದ ಋಷಿಗಳು ಗಿರಿಗವ್ಹರಗಳಲ್ಲಿ ಎಷ್ಟು ಆನಂದದಿಂದಿರುತ್ತಿದ್ದರೆಂಬುದು ನಿದರ್ಶನಕ್ಕೆ ಬರುತ್ತದೆ.

ಮಲಬಾರದ ಜನರು

[ಒಂದು ಮಹಾರಾಷ್ಟ್ರ ಪತ್ರಿಕೆಯಿಂದ ಎತ್ತಿ ಬರೆದದ್ದು.]

ಬರಹಗಾರರು:— ಶ್ರೀ. ಲಕ್ಷ್ಮಣ, ವಿಶ್ವನಾಥ. ಫಾಟಕ, ಕೋಟುಮಚಗಿ.

ನಾರೀಪ್ರಧಾನ ಸಮಾಜ-ರಚನೆಯು ಜಗತ್ತಿನಲ್ಲಿ ಕ್ವಚಿತ್ತಾಗಿಯೇ ಕಂಡು ಬರುವದು; ಹಿಂದುಸ್ತಾನದಲ್ಲಂತೂ ಇಂಥ ಪದ್ಧತಿಯು ಮಲಬಾರ ವಿನಹ ಬೇರೆ ಎಲ್ಲಿಯೂ ಇಲ್ಲ. ಮಲಬಾರವು ಕೇವಲ ಸೌಂದರ್ಯದ ತವರುಮನೆಯಾಗಿದೆ. ಅದರ ಒಂದು ಬದಿಗೆ ಯಾಲಕ್ಕಿಬಳ್ಳಿಗಳಿಂದ ಪರಿವೇಷ್ಟಿತವಾದ ಪರ್ವತ, ಮತ್ತೊಂದು ಬದಿಗೆ ಅರಬೀಸಮುದ್ರ ಹೀಗೆ ಆ ಪ್ರಾಂತದ ಸ್ಪೃಹಣೀಯ ರಚನೆಯಿದೆ. ಕೆರೆ-ಕಾಲುವೆಗಳಿಂದ ಆ ಪ್ರದೇಶವು ತುಂಬಿಹೋಗಿದೆ. ಅಲ್ಲಿಯ ಜಲಾಶಯಗಳಲ್ಲೆಲ್ಲ ಅರ್ಧ ನಗ್ನರಾಗಿರುವ ಅಂಬಿಗರು ಚಿಕ್ಕ ಚಿಕ್ಕ ನಾವುಗಳೊಳಗಿಂದ ಇತಸ್ತತಃ ಭ್ರಮಣ ಮಾಡುತ್ತಿರುವದು ಸರ್ವಕಾಲದಲ್ಲಿಯೂ ಕಂಡುಬರುವದು. ಸಣ್ಣ ಸಣ್ಣ ಹುಡುಗರು ಸಹ ಹುಟ್ಟಿನಿಂದ ನೀರು ಕಡಿಯುತ್ತ ಅಕ್ಕಿ ತುಂಬಿದ ನಾವುಗಳನ್ನು ತಮ್ಮ ಹಿತ್ತಲದ ಕಡೆಗೆ ಒಯ್ಯುತ್ತಿರುತ್ತಾರೆ. ಮಲಬಾರವು ತೆಂಗಿನ ಆಗರವಾಗಿದೆ. ಕೊಬ್ಬರಿ, ಕಾತಿ ಇವುಗಳ ದೆಸೆಯಿಂದ ಆ ಪ್ರದೇಶವು ಬಹಳೇ ವಿಖ್ಯಾತವಿದೆ.

ಪೂರ್ವ ಕಾಲದಲ್ಲಿ ಆರ್ಯ ಜನರಿಗೆ ಉತ್ತರದ ಕಡೆಯ ಫಲಭರಿತ ಭೂಪ್ರದೇಶವು ಸಾಲದಂತಾಗಲು ಪರಶುರಾಮನು ಈ ಹೊಸ ಪ್ರದೇಶವನ್ನು ಸಮುದ್ರನಾಥನಿಂದ ಸಂಪಾದಿಸಿದನೆಂದು ಒಂದು ದಂತಕತೆಯಿದೆ. ಇಂದಿಗೂ ಮಲಬಾರದಲ್ಲಿಯ ಓನಾಮ, ಎಂಬ ಉತ್ಸವದಲ್ಲಿ ಪರಶುರಾಮನು ಪ್ರತಿವರ್ಷ ಆ ಪ್ರದೇಶವನ್ನು ಸಂದರ್ಶಿಸುವನೆಂದು ಅಲ್ಲಿಯ ಭಾವಿಕ ಜನರ ಕಲ್ಪನೆಯಿದೆ. ಮಲಬಾರವು ಸ್ತ್ರೀಪ್ರಧಾನ ದೇಶವಿದ್ದ ಮೂಲಕ ಅದಕ್ಕೆ ಪೂರ್ವಕಾಲದಿಂದಲೂ ‘ ಸ್ತ್ರೀರಾಜ್ಯ, ‘ ಸ್ತ್ರೀಮಲಿಯಾಳ, ಎಂಬ ಹೆಸರುಗಳಿವೆ. ಅಲ್ಲಿ ‘ ನಾಯರ, ಜನರೇ ಬಹುಸಂಖ್ಯೆಯವರಾಗಿರುವರು. ಆ ಪ್ರಾಂತದಲ್ಲಿ ಬ್ರಾಹ್ಮಣ, ನಾಯರ, ಮುಸಲ್ಮಾನ, ಕ್ರಿಶ್ಚನ, ಜ್ಯೂ ಮೊದಲಾದ ಎಲ್ಲವರ್ಗಗಳ ಜನರು ಪರಸ್ಪರರನ್ನು ಸ್ಪರ್ಶಿಸುತ್ತ ಪೇಟೆಯಲ್ಲಿ ತಿರುಗಾಡುವರು. ಅಸ್ಪೃಶ್ಯರು ಮಾತ್ರ ಬಹು ದೂರದಲ್ಲಿ ನಿಂತು, ತಮ್ಮ ವ್ಯವಹಾರ

ವನ್ನು ಸಾಗಿಸಿಕೊಳ್ಳಬೇಕಾಗುವದು. ಅಲ್ಲಿಯ ಅಹಿಂದುಗಳು ವಿಧರ್ಮಿಗಳಾಗಿದ್ದರೂ ಅವರು ಕೇವಲ ಬೇರೆ ಜಾತಿಯವರೆಂತಲೇ ಹಿಂದುಗಳ ಕಲ್ಪನೆಯಿದೆ. ಶುಕ್ಲ-ಕೃಷ್ಣ ಪಕ್ಷಗಳ ಪ್ರತಿಪದೆಯು ರಾತ್ರಿಯಲ್ಲಿ ಹಿಂದು, ಕ್ರಿಶ್ಚನ್, ಮುಸಲ್ಮಾನ, ಜ್ಯೂ ಮೊದಲಾದ ಎಲ್ಲ ಜಾತಿಯವರ ದೇವತೆಗಳು ಹೊರಬಿದ್ದು, ತಮ್ಮ ಭಕ್ತರನ್ನು ನಿರೀಕ್ಷಿಸಿ, ಕೋಳಿ ಕೂಗುವ ಪೂರ್ವದಲ್ಲಿ ತಮ್ಮ ತಮ್ಮ ಮಂದಿರಗಳಲ್ಲಿ ಪ್ರವೇಶಿಸುವರೆಂದು ಅಲ್ಲಿಯ ಜನರಲ್ಲಿ ಭಾವನೆಯಿದೆ.

ಮಲಬಾರದಲ್ಲಿಯ ನಾಯರ ಜನರು ಆಚಾರವಿಚಾರಗಳಿಂದ ನಮಗೆ ತೀರ ವಿಚಿತ್ರರಾಗಿ ಕಾಣುವರು. ಅವರ ವಿವಾಹ ಸಂಸ್ಕಾರ, ವಾರಸಾಪದ್ಧತಿ ಇವು ಬಹಳೇ ವಿಭಿನ್ನವಾಗಿವೆ. ಆ ಜನರಲ್ಲಿ ಸ್ವಂತ ಮಕ್ಕಳಿಗೆ ವಾರಸಾದ ಹಕ್ಕು ಇರದೆ ಸಹೋದರಿಯರ ಮಕ್ಕಳಿಗೆ ಅದು ಕಾಯದೆಯಿಂದ ದೊರೆಯುವದು. ತ್ರಾವಣಕೋರ, ಕೋಚೀನ ಈ ಎರಡೇ ಸಂಸ್ಥಾನಗಳಲ್ಲಿ ಈ ಪದ್ಧತಿಯು ಪ್ರಚಲಿತವಿದೆ. ತ್ರಾವಣಕೋರದ ಹಿಂದಿನ ಮಹಾರಾಜರಾದ ಶ್ರೀಮೂಲಮ ಇವರಿಗೆ ಹೆಂಡರು ಮಕ್ಕಳುಗಳಿದ್ದರೂ ಸಹೋದರಿಯಿಲ್ಲದ್ದರಿಂದ ನಾಯರ ಜಾತಿಯ ಈರ್ವರು ಕನ್ಯೆಯರನ್ನು ' ಸೋದರಸೊಸೆ, ಎಂದು ದತ್ತಕ ತೆಗೆದುಕೊಂಡು, ಅವರ ವಿವಾಹವಿಧಿಯನ್ನು ನೆರವೇರಿಸಬೇಕಾಯಿತು. ಮುಂದೆ ಇವರಲ್ಲಿ ಮೊದಲು ಹಡೆದವಳ ಮಗನೇ ೧೯೩೩ರಲ್ಲಿ ತ್ರಾವಣಕೋರದ ಗಾದಿಯ ಒಡೆಯನಾದನು. ಆದರೆ ಅವನು ಶೂದ್ರ ವರ್ಣದ ನಾಯರ ಜಾತಿಯವನಿದ್ದ ಮೂಲಕ ಶುದ್ಧತೆಗಾಗಿ ಅಲ್ಲಿಯ ಬ್ರಾಹ್ಮಣರ ಯೋಜನೆಯಂತೆ ಬಂಗಾರದ ಆಕಳ ಮುಖದಲ್ಲಿ ಹೊಕ್ಕು, ಹೊರಗೆ ಬಂದ ಮೇಲೆ ಅವನಿಗೆ ಕ್ಷತ್ರಿಯತ್ವವು ಪ್ರಾಪ್ತವಾಗಿ, ಯಜ್ಞೋಪವೀತ ಧಾರಣೆಯಿಂದ ದ್ವಿಜತ್ವ ಬಂದು, ಸಿಂಹಾಸನಕ್ಕೆ ಬಾಧ್ಯಸ್ಥನಾದನು ! ಮುಂದೆ ಆ ಸುವರ್ಣಧೇನುವು ತುಂಡು ತುಂಡು ಮಾಡಲ್ಪಟ್ಟು ಬ್ರಾಹ್ಮಣರಲ್ಲಿ ಹಂಚಲ್ಪಟ್ಟಿತು. ಪರಶುರಾಮನಿಂದ ಕೋಚೀನ ರಾಜಮನೆತನದ ಪೂರ್ವಜನರು ಸಂತತಿಯನ್ನೂ, ತ್ರಾವಣಕೋರ ರಾಜಮನೆತನದ ಪೂರ್ವಜರು ಸಂಪತ್ತನ್ನೂ ವರವಾಗಿ ಪಡೆದಿರುವರೆಂಬ ದಂತಕಥೆಯಿದ್ದು, ಆ ಮೇರೆಗೆ ತ್ರಾವಣಕೋರ ರಾಜಮನೆತನಕ್ಕೆ ಮೇಲಿಂದ ಮೇಲೆ ಸಂತತಿಯ ಅಭಾವವಾಗುತ್ತದೆಂದು ಅಲ್ಲಿಯ ಜನರ ಭಾವನೆಯಿದೆ. ಕೋಚೀನ- ತ್ರಾವಣಕೋರ ರಾಜಮನೆತನಗಳ ಜಾತಿಗಳು ಬೇರೆ ಬೇರೆ ಪಂಗಡದವಿದ್ದ ಮೂಲಕ ಅವರಲ್ಲಿ ಪರಸ್ಪರವಾಗಿ ದತ್ತಕ ಕೊಡತೆಗೆದುಕೊಳ್ಳುವ ಪರಿಪಾಠವಿಲ್ಲ.

ಈ ಪಾರಸಾಪದ್ಧತಿಯು ನಮಗೆ ತೀರ ವಿಕ್ಷಿಪ್ತವಾಗಿ ಕಾಣುವದು. ಆದರೆ ನಾಯರರಲ್ಲಿ ಸುಶಿಕ್ಷಿತರಾದವರು ಸಹ ಅದನ್ನು ಹೆಚ್ಚಾಗಿ ಸಮರ್ಥಿಸುವರು. ಈ ನಾಯರ ಜನರು ಮೂಲದಿಂದಲೂ ಕ್ಷಾತ್ರವೃತ್ತಿಯುಳ್ಳವರಿರುವರು. ಪೂರ್ವಕಾಲದಲ್ಲಿ ಇವರ ನಾಡಿನಲ್ಲಿ ಅನೇಕ ಸಣ್ಣ ಪುಟ್ಟ ರಾಜ್ಯಗಳಿದ್ದು, ಅವುಗಳಲ್ಲಿ ಮೇಲಿಂದ ಮೇಲೆ ಯುದ್ಧಗಳಾಗುತ್ತಿದ್ದವು. ಅದರಿಂದ ಪ್ರತಿಯೊಬ್ಬರೂ ಸದಾ ಅಲ್ಲಿ ಯುದ್ಧಕ್ಕೆ ಸನ್ನದ್ಧವಾಗಿರಬೇಕಾಗುತ್ತಿತ್ತು. ಮೃತ್ಯುವಿನ ಸತತ ಎಚ್ಚರಿಕೆಯಿಂದ ಅವರು ಆಗ ಅವಿವಾಹಿತರಾಗಿರುತ್ತಿದ್ದರು. ಸ್ತ್ರೀಯರಿಂದ ಮನುಷ್ಯನ ವೃತ್ತಿಯು ಮೃದುವಾಗಿ ಯುದ್ಧಕ್ಕೆ ಬೇಕಾಗುವ ಕಠೋರ–ನಿಷ್ಠುರತನಗಳಲ್ಲಿ ಕೊರತೆಯಾಗುವದೆಂಬ ವಿಚಾರ ದಿಂದ ಆ ಜನರಲ್ಲಿ ಆಗ ತೀರ ಸ್ವಲ್ಪ ವಿವಾಹಗಳಾಗುತ್ತಿದ್ದವು, ಆದರೆ ಅವರಲ್ಲಿ ಕಾಮ ವಾಸನೆಯ ತೃಪ್ತಿಗಾಗಿ ಪುರುಷರು ಬೇಕಾದ ಸ್ತ್ರೀಯೊಡನೆ ಸಂಭೋಗ ಮಾಡಬಹು ದಾಗಿತ್ತು. ಇಂಥ ಸೈನಿಕರಿಗೆ ತಮ್ಮ ಮಕ್ಕಳ ಪಾಲನ-ಪೋಷಣ ಮಾಡುವುದು ಅತ್ಯಂತ ದುಸ್ತರವಾಗುತ್ತಿತ್ತು. ಮೇಲಾಗಿ ಯಾವ ಮಕ್ಕಳ ತಂದೆಯು ಯಾರು ಎಂಬುದು ತಿಳಿಯುವದೇ ಅಶಕ್ಯವಿದ್ದ ಮೂಲಕ ಮಕ್ಕಳ ಭಾರವೆಲ್ಲ ತಾಯಂದಿರ ಮೇಲೆಯೇ ಬಿದ್ದು, ಅವರು ಸ್ವತಹ ದುಡಿದು ತರುವವರಲ್ಲದ್ದರಿಂದ ಅವರ ಸಹೋ ದರರೇ ಮಕ್ಕಳ ಪೋಷಣದ ಭಾರವನ್ನು ವಹಿಸುತ್ತಿದ್ದರು. ಹೀಗಾಗಿ ಆ ಕಾಲದಲ್ಲಿ ಒಂದೊಂದು ಕುಟುಂಬದೊಳಗೆ ೫೦-೬೦ ಜನರು ಸಹಜವಾಗಿ ಇರುತ್ತಿದ್ದರು.

ನಾಯರ ಜನರಲ್ಲಿ ವಿವಾಹಕ್ಕೆ ಅವರ ಭಾಷೆಯಲ್ಲಿ 'ಸಮೂಗನು'ವೆಂದು ಹೆಸರಿದೆ. ಅವರಲ್ಲಿ ತಾತ್ವಿಕ ದೃಷ್ಟಿಯಿಂದ ತರುಣ-ತರುಣಿಯರಿಗೆ ತಮ್ಮ ಇಚ್ಛೆಯಂತೆ ಆಯುಷ್ಯದಲ್ಲಿಯ ಸಹಚರಿ--ಸಹಚರರನ್ನು ಆರಿಸಿಕೊಳ್ಳುವ ಅಧಿಕಾರವಿದೆ. ಘಟ ಸ್ಫೋಟನಕ್ಕೂ ಆ ಜನರ ಒಪ್ಪಿಗೆಯಿದ್ದು, ಅದೂ ಅವರಲ್ಲಿ ಸುಲಭವಾಗಿ ದೊರೆಯು ವದು. ಅದರ ಮೇಲೆಯಿಂದ ಹೊಡೆದಾಟ-ಬಡಿದಾಟ, ಕೋರ್ಟ-ಕಚೇರಿ ಮೊದಲಾದ ಯಾವ ಕಷ್ಟವನ್ನೂ ಅನುಭವಿಸಬೇಕಾಗುವದಿಲ್ಲ. ಆದರೆ ಈ ಘಟಸ್ಫೋಟನದ ಸಂಖ್ಯೆ ಮಿತಿಮೀರಿ ಬೆಳೆದು, ಅದರ ದುರುಪಯೋಗವಾಗಹತ್ತಿದ ಮೂಲಕ ಇತ್ತೀತ್ತಲಾಗಿ ತ್ರಾವಣಕೋರ ಸರಕಾರದವರು ಆ ಬಾಬಿನಲ್ಲಿ ಕೆಲವು ನಿರ್ಬಂಧಗಳನ್ನು ಹಾಕಿರು ವರು. ನಾಯರರಲ್ಲಿ ವಿವಾಹದ ವಿಷಯದಲ್ಲಿ ತರುಣ-ತರುಣಿಯರಿಗೆ ಸಾಕಷ್ಟು ಸ್ವಾತಂತ್ರ್ಯವಿದ್ದರೂ ಅವರ ತಾಯಿತಂದೆಗಳೇ ವಿವಾಹ-ನಿಶ್ಚಯವನ್ನು ಮಾಡುವರು. ಯಾವಳೊಬ್ಬ ಹೆಣ್ಣುಹುಡುಗೆಯು ವಯಸ್ಸಿಗೆ ಬಂದಳೆಂದರೆ ಸೌಂದರ್ಯ ನಿರೀ

ಕ್ಷಣದಿಂದ ಬೇಡಿಕೆ ಬರಲೆಂದು ತಾಯಿತಂದೆಗಳು ಸಮಗ್ರಗ್ರಾಮದಲ್ಲೆಲ್ಲ ಅವಳ ಮೆರವಣಿಗೆಯನ್ನು ತೆಗೆಯುವರು, ಆ ನೇಲೆ ಸಾಕಷ್ಟು ಬೇಡಿಕೆ ಬಂದನಂತರ ವಧೂವರರ ರಾಶಿ-ನಕ್ಷತ್ರಗಳು ಕೂಡಿ ಬಂದಲ್ಲಿ ಅವರೀರ್ವರ ಲಗ್ನಸಮಾರಂಭವು ನಿಶ್ಚಯವಾಗುವದು. ಮುಂದೆ ವಿವಾಹದ ದಿವಸ ವರನು ವಧುವಿಗೊಂದು ಶುಭ್ರ ವಸ್ತ್ರವನ್ನು ಕೊಟ್ಟು, ಅವಳ ಕೊರಳಲ್ಲಿ ಮಾಲೆಯನ್ನು ಹಾಕುವನು. ಲಗ್ನದನಂತರ ವಧುವು ಪರಗೃಹದಲ್ಲಿ ಇರಲಿಕ್ಕೆ ಹೋಗುವದಿಲ್ಲ. ಅವಳು ತನ್ನ ಹೆಸರನ್ನು ಸಹ ಬದಲಿಸುವದಿಲ್ಲ. ಕೇವಲ ವಿವಾಹದ ದ್ಯೋತಕವೆಂದು ಅವಳ ಹೆಸರಿನ ಮುಂದೆ 'ಅಮ್ಮಾ' ಎಂಬ ಪದವು ಮಾತ್ರ ಹಚ್ಚಲ್ಪಡುವದು. ವಿವಾಹವಾದ ಮೇಲೆ ಗಂಡನು ಪ್ರತಿದಿವಸ ರಾತ್ರಿ ಹೆಂಡತಿಯ ಮನೆಗೆ ಬಂದು, ಬೆಳಿಗ್ಗೆ ಮತ್ತೆ ತನ್ನ ಮನೆಗೆ ಹೋಗುವನು. ಹೆಂಡತಿಯ ಮನೆಯಲ್ಲಿ ಅವನು ಏನೂ ತಿನ್ನಕೂಡದೆಂಬ ನಿಯಮವಿದೆ. ಅವನ ಮಕ್ಕಳ ಸಂಗೋಪನವನ್ನು ಅವುಗಳ ತಾಯಿ-ಸೋದರ ಮಾವಂದಿರು ಮಾಡುವರು. ಅವು ತಂದೆಯ ಹೆಸರಿನಿಂದ ಗುರ್ತಿಸಲ್ಪಡದೆ ಇಂಥವರ ಸೋದರಳಿಯ ಇಂಥವರ ಸೋದರಸೊಸೆ ಎಂದು ಗುರ್ತಿಸಲ್ಪಡುವವು.

ಮಲಬಾರದ ಬಹುತರ ಎಲ್ಲ ಭೂಮಿಯು ಈ ನಾಯರ ಜನರ ಒಡೆತನಕ್ಕೆ ಒಳಗಾಗಿದೆ. ಅವರಲ್ಲಿ ಭೂಮಿಯು ಹಂಚುವಿಕೆಯಾಗುವದಿಲ್ಲ, ಹಿರಿಯ ಮಗನ ಇಲ್ಲವೆ ಮಗಳ ಕೈಯಲ್ಲಿ ಆ ಭೂಮಿಯಾಗಿರುತ್ತದೆ. ಅದರಲ್ಲಿ ಬಂದ ಧಾನ್ಯ-ತೆಂಗಿನಕಾಯಿಗಳನ್ನು ಒಟ್ಟಾಗಿ ತಂದು ಎಲ್ಲರೂ ಕೂಡಿ ತಿನ್ನುತ್ತಾರೆ. ಕುಟುಂಬದಲ್ಲಿಯ ಪ್ರತಿಯೊಬ್ಬ ವ್ಯಕ್ತಿಗೂ ಅನ್ನವಸ್ತ್ರದ ಅಧಿಕಾರವಿದ್ದು ಪ್ರತ್ಯೇಕ ಹಿಸೆ ಬೇಡಲಿಕ್ಕೆ ಮಾತ್ರ ಯಾರಿಗೂ ಬರುವದಿಲ್ಲ. ಇಂಥ ಪದ್ಧತಿಯಿಂದ ಕೌಟುಂಬಿಕ ದುಃಖ ತೊಂದರೆಗಳು ಹೆಚ್ಚಾಗಿ ಬೆಳೆಯಹತ್ತಿದ ಮೂಲಕ ತ್ರಾವಣಕೋರದ ಸರಕಾರದವರು ಇತ್ತೀಚೆಗೆ ಅಣ್ಣತಮ್ಮಂದಿರ ಹಿಸೆಯ ಕಾಯಿದೆಯನ್ನು ಮಾಡಿರುವರು. ಅದರೆ ಬ್ರಿಟಿಶ ಮಲಬಾರ ಹಾಗು ಕೋಚಿನ ಸಂಸ್ಥಾನ ಇವುಗಳಲ್ಲಿ ಇನ್ನೂ ಅವಿಭಕ್ತ ಕುಟುಂಬ ಪದ್ಧತಿಯೇ ಪ್ರಚಾರದಲ್ಲಿದೆ.

ಮಲಬಾರದ ಜನರು ಹೆಚ್ಚಾಗಿ ಹಿಂದು ಧರ್ಮಾನುಯಾಯಿಗಳಿದ್ದು ನಾಗ ಪೂಜಕರಿರುವರು. ಸರ್ಪದ ವಿಷಯಕ್ಕೆ ಅಲ್ಲಿ ಅತ್ಯಂತ ಭಕ್ತಿಭಾವವು ತೋರಿಸಲ್ಪಡುವದು. ಸ್ತ್ರೀಯರೂ ಪುರುಷರೂ ಸರ್ಪದಂತೆ ತಮ್ಮ ಹೆರಳುಹಾಕಿಕೊಂಡು

ಅದರ ಬುಚಡವನ್ನು ತಲೆಯ ಮುಂಭಾಗದಲ್ಲಿ ನಾಗಫಣಿಯಂತೆ ಕಟ್ಟಿಕೊಳ್ಳುವರು. 'ನಾಯರ' ಈ ಶಬ್ದವಾದರೂ 'ನಾಗ, ಶಬ್ದದಿಂದಲೇ ಉಗಮವಾಗಿದೆ. ಮಲಬಾರವು ಪಡಸಾದ ಅರಣ್ಯಗಳ ಪ್ರದೇಶವಾಗಿದ್ದು, ಅದು ಭಯಂಕರವಾದ ವಿಷಕಾರಕ ಸರ್ಪಗಳ ಆಗರವಾಗಿದೆ. ಅದರಿಂದಲೇ ಅಲ್ಲಿ ಹೆಚ್ಚಾಗಿ ನಾಗಪೂಜೆಯು ಬಳಕೆಯಲ್ಲಿ ಬಂದಿದೆ. ಪ್ರತಿಯೊಂದು ನಾಯರಮನೆತನದಲ್ಲಿ ಒಂದು ಅಧಿಷ್ಠಾತ್ರಿಯಾದ ಸರ್ಪದೇವತೆಯಿರುತ್ತದೆ. ಆ ದೇವತೆಯ ಶಿಲಾ ಪ್ರತಿಮೆಯು ಗಿಡಗಂಟೆಗಳ ಸಮೀಪದಲ್ಲಿಯೇ ಒಂದು ಬದಿಯಲ್ಲಿದ್ದು, ಅದರ ಮೇಲೊಂದು ಚಿಕ್ಕ ಗುಡಿಯು ಕಟ್ಟಲ್ಪಟ್ಟಿರುತ್ತದೆ. ಈ ಗುಡಿಯು ಯಾವಾಗಲು ಹೆಚ್ಚು ದಕ್ಷತೆಯಿಂದ ಸ್ವಚ್ಛ ಇಡಲ್ಪಡುವದಲ್ಲದೆ ಅದರಲ್ಲಿಯ ಮೂರ್ತಿಗೆ ಪ್ರತಿದಿವಸ ಆರತಿಯನ್ನು ಬೆಳಗಿ, ತಪ್ಪದೆ ಹಾಲು ಬಾಳೆಯ ಹಣ್ಣುಗಳ ನೈವೇದ್ಯವನ್ನು ತೋರಿಸುವರು. ಸರ್ಪಗಳು ಬಂದು ಹಾಲನ್ನು ಕುಡಿಯಲೆಂದು ಅದನ್ನು ಅಲ್ಲಿಯೇ ಇಟ್ಟುಬಿಡುವರು.

ನಾಯರ ಜನರು ಹೆಚ್ಚಾಗಿ ಸರ್ಪದ ಅಭ್ಯಾಸಕರಿದ್ದು, ಅವರಲ್ಲಿ ಎಷ್ಟೋ ನಿಷ್ಣಾತವಿಷವೈದ್ಯರಿರುವರು. ಸರ್ಪದ ಧ್ವನಿ-ನಡೆಯುವ ಪದ್ಧತಿ-ವರ್ಣನೆ ಇವುಗಳ ಮೇಲಿಂದ ಅದು ವಿಷಕರವೋ ಅಲ್ಲವೋ ಎಂಬದನ್ನುಅವರು ಹೇಳುವರು. ಈ ವೈದ್ಯರು ವಿಷಚಿಕಿತ್ಸೆಯ ದೆಸೆಯಿಂದ ಯಾರಕಡೆಯಿಂದಲೂ ದುಡ್ಡು ತೆಗೆದುಕೊಳ್ಳುವದಿಲ್ಲ. ಈ ವ್ಯವಸಾಯವನ್ನು ಕೈಕೊಳ್ಳುವ ಪೂರ್ವದಲ್ಲಿ ಶಾಸ್ತ್ರಕ್ರಮದಂತೆ "ನಾನು ಯಾರಿಂದಲೂ ದುಡ್ಡು ತೆಗೆದುಕೊಳ್ಳುವದಿಲ್ಲ." ಎಂದು ಪ್ರತಿಜ್ಞೆ ಮಾಡುವರು. ಈಶ್ವರದತ್ತ ಜ್ಞಾನದ ವಿಕ್ರಯ ಮಾಡಬಾರದೆಂದು ಅವರಲ್ಲಿ ಕಲ್ಪನೆಯಿದೆ, ಕೇವಲ ಎಲೆ ಅಡಿಕೆ, ಸಕ್ಕರೆ ಇವುಗಳನ್ನು ಮಾತ್ರ ಅವರು ತೆಗೆದುಕೊಳ್ಳುವರು. ಈ ವಿದ್ಯೆಯನ್ನು ಕಲಿತವರು ನಿಪುತ್ರಿಕರೂ, ಮಹಾರೋಗಿಗಳೂ, ಸರ್ಪಬಾಧೆಗೆ ಪಾತ್ರರೂ ಆಗುವರೆಂದು ಅವರಲ್ಲಿ ಭಾವನೆಯಿದ್ದುದರಿಂದ ಬಹಳ ಸ್ವಲ್ಪ ಜನರು ಮಾತ್ರ ಇದರ ಅಭ್ಯಾಸವತ।

ಮಲಬಾರದ ಬಹುತರ ಎಲ್ಲ ಜನರಲ್ಲಿಯೂ ಈ ವಿಷ-ಚಿಕಿತ್ಸಕರ ಮೇಲೆ ನಂಬಿಗೆಯಿದೆ. ಪಾಶ್ಚಾತ್ಯ ವೈದ್ಯಕದಲ್ಲಿ ಸರ್ಪದಂಶದಮೇಲೆ ಔಷಧವೇ ಇಲ್ಲದ್ದರಿಂದ ಎಷ್ಟೋ ಪಾಶ್ಚಾತ್ಯ ಡಾಕ್ಟರರು ಸಹ ತಮಗೆ ಸರ್ಪದಂಶವಾದಾಗ ಈ ವಿಷವೈದ್ಯರಿಂದ ಉಪಚಾರಹೊಂದಿ ಬದುಕಿದ ಅನೇಕ ಉದಾಹರಣೆಗಳಿವೆ. ಇವರು ರೋಗಿಗೆ

ವನಸ್ಪತಿಯ ರಸವನ್ನು ಕುಡಿಸಿ, ಅವನನ್ನು ಮಲಗಗೊಡುವದಿಲ್ಲ. ಇದೇ ಅವರ
ಉಪಚಾರದ ಪದ್ಧತಿಯಾಗಿದೆ.

ನಾಯರಜನರು ಸರ್ಪವನ್ನುಕೊಲ್ಲುವದಿಲ್ಲ, ಅದರ ಹುತ್ತದ ಸಮೀಪದಲ್ಲಿಯ
ಗಿಡಗಂಟಿಗಳನ್ನು ನಾಶಮಾಡುವದಿಲ್ಲ. ಒಂದು ವೇಳೆ ಹಾಗೆ ಮಾಡಿದಲ್ಲಿ ತಾವು
ಕುರುಡರೂ, ಹುಚ್ಚರೂ, ಕುಷ್ಟರೋಗಿಗಳೂ ಆಗುವೆವೆಂದು ಅವರಿಗೆ ಅಂಜಿಕೆಯಿದೆ.
ಮಲಬಾರದಲ್ಲಿಯ ಕ್ರಿಶ್ಚನ್, ಜ್ಯೂ, ಮುಸಲ್ಮಾನ ಜನರು ಸಹ ಬಹುತರ ಸರ್ಪ
ವನ್ನು ಕೊಲ್ಲುವದಿಲ್ಲ. ಯಾವನೊಬ್ಬನು ಅಕಲ್ಪಿತವಾಗಿ ನಾಗ-ಸರ್ಪವನ್ನು ಕೊಂ
ದಲ್ಲಿ ಅದನ್ನು ವಿಧಿಪೂರ್ವಕವಾಗಿ ಹುಗಿಯುವರು. ನಮ್ಮಲ್ಲಿ ಸನ್ಯಾಸಿಗೆ ಕೊಡುವ
ಮಾನವೇ ಅಲ್ಲಿ ಸರ್ಪಕ್ಕೆ ಕೊಡಲ್ಪಡುತ್ತದೆ. ಹಾವಿನ ಹುತ್ತದ ಸಮೀಪದಲ್ಲಿಯ
ಗಿಡಗಂಟಿಗಳನ್ನು ನಾಶ ಮಾಡಿ, ಅಲ್ಲಿ ಹೊಸ ಮನೆ ಕಟ್ಟುವದಿದ್ದಲ್ಲಿ ನಂಬುದ್ರಿ ಬ್ರಾ
ಹ್ಮಣರನ್ನು ಕರೆಯಿಸುವರು. ಅವರು ಅಲ್ಲಿಗೆ ಬಂದು ವಿಧಿಪೂರ್ವಕವಾದ ಮಂತ್ರೋ
ಚ್ಚಾರದಿಂದ ಹಾವನ್ನು ಎಬ್ಬಿಸಿ, ಪಾತ್ರೆಯಲ್ಲಿ ಹಿಡಿದು, ಅದನ್ನು ತೆಗೆದುಕೊಂಡು
ಹೋಗುವರು. ಆ ಮೇಲೆ ಅಲ್ಲಿ ಗಿಡಗಂಟಿಗಳನ್ನು ಕಡಿಯುವ ಕೆಲಸ ನಡೆಯುವದು

ನಂಬುದ್ರಿ ಬ್ರಾಹ್ಮಣರು ತಾವು ಹಿಡಿದ ಹಾವುಗಳನ್ನು ತಮ್ಮ ಮನೆಯಲ್ಲಿ
ಹಾಗೆಯೇ ಬಿಟ್ಟುಬಿಡುವರು. ಅವರ ಮಕ್ಕಳು ಆ ಹಾವುಗಳ ಸಂಗಡ ಆಡುವವು.
ನಾಯಿಯಂತೆ ಆ ಹಾವುಗಳು ಅವರ ಮನೆಯನ್ನು ಕಾಯುವವು. ಕಳ್ಳರು ಕಳವು
ಮಾಡಿಕೊಂಡು ಹೋಗುವಾಗ ಆ ಹಾವುಗಳು ಅವರನ್ನು ಮುತ್ತಿ, ಅವರು ಪ್ರಾಣ
ಚಲ್ಲಿದ ವಿನಹ ಅವರಿಗೆ ಬಿಡುವದೇ ಇಲ್ಲ. ನಂಬುದ್ರಿಬ್ರಾಹ್ಮಣರು ವಿಶೇಷ ಶ್ರೀಮಂತ
ರಿದ್ದು ವಿದ್ಯಾವಂತರಿರುವರು. ಅವರು ಆಧುನಿಕ ಸುಧಾರಣೆಯ ವಿಷಯದಲ್ಲಿ
ತೀರ ಅಂಧರಿದ್ದು, ಇನ್ನೂ ರೈಲಿನಲ್ಲಿ ಪ್ರವಾಸವನ್ನು ಸಹ ಮಾಡುವದಿಲ್ಲ. ಪರದೇಶ
ದಿಂದ ಬಂದು ಈಗ ಇಲ್ಲಿ ಬೆಳೆಯುತ್ತಿರುವ ಆಲೂಗಡ್ಡಿ, ಚಪ್ಪರಬದನೆ ಇವುಗಳನ್ನು
ತಿನ್ನುವದಿಲ್ಲ. ಅವರಷ್ಟು ಸನಾತನವೃತ್ತಿಯ ಬ್ರಾಹ್ಮಣರು ಸಮಗ್ರ ಹಿಂದುಸ್ಥಾನ
ದಲ್ಲಿ ಎಲ್ಲಿಯೂ ಕಂಡುಬರುವದಿಲ್ಲ. ಅವರು ತಮ್ಮ ಚಂಡಿಕೆಯ ಗಂಟನ್ನು ನಾಯ
ರಂತೆಯೇ ಮುಂದೆ ಕಟ್ಟುವರು. ಆದರೆ ನಾಯರರ ಪದ್ಧತಿಯ ವಾರಸಾ
ಹಕ್ಕನ್ನು ಮಾತ್ರ ಮನ್ನಿಸುವದಿಲ್ಲ. ತಂದೆಯ ತರುವಾಯ ಹಿರಿಯ ಮಗನೇ ಅವರಲ್ಲಿ
ಸರ್ವಾಧಿಕಾರಿಯಾಗುವನು. ಅವನಿಗೊಬ್ಬನಿಗೆಯೇ ಸ್ವಜಾತಿಯ ಕನ್ಯೆಯೊಡನೆ

ವಿವಾಹಮಾಡಿಕೊಳ್ಳುವ ಅಧಿಕಾರವಿದೆ. ಉಳಿದವರೆಲ್ಲರೂ ನಾಯರ ಸ್ತ್ರೀಯರನ್ನೇ ಲಗ್ನಮಾಡಿಕೊಳ್ಳುವರು. ಆ ಸ್ತ್ರೀಯರು ಅದೊಂದು ತಮ್ಮ ದೊಡ್ಡ ಗೌರವವೆಂದು ತಿಳಿಯುವರು.

ಮಲಬಾರದಲ್ಲಿ ಅಸ್ಪೃಶ್ಯತೆಯು ಬಹಳ ಕಠೋರತನದಿಂದ ಪಾಲಿಸಲ್ಪಡುವದು. ಅಲ್ಲಿ ಮಲಾಯಸಾ, ಪೇರಿಯಾ, ಥಿಯಾ ಎಂಬ ಅಸ್ಪೃಶ್ಯರ ಮುಖ್ಯ ಜಾತಿಗಳಿವೆ. ಥಿಯಾ ಜಾತಿಯವರು ಶಿಕ್ಷಣದಲ್ಲಿ ಹೆಚ್ಚಾಗಿ ಮುಂದುವರಿದಿರುವರು. ಅವರಲ್ಲಿ ಎಷ್ಟೋ ಜನರು ಈಗ ಹಾಯಕೋರ್ಟ ನ್ಯಾಯಾಧೀಶರಾಗಿರುವರು. ಈ ಜಾತಿಯವರು ಉಚ್ಚವರ್ಣದವರ ಎದುರಿಗೆ ಅವರಿಂದ ೬೪ ಫೂಟಿನ ಒಳಗೆ ಬರಬಾರದೆಂದು ಧಾರ್ಮಿಕ ನಿಯಮವಿದೆ. ಅವರ ನೆರಳನ್ನು ಸಹ ಉಚ್ಚ ವರ್ಣದವರು ತಮ್ಮ ಮೇಲೆ ಕೆಡವಿಕೊಳ್ಳುವದಿಲ್ಲ. ಅದರಿಂದ ಪ್ರಾತಃಕಾಲ ಸಾಯಂಕಾಲಗಳಲ್ಲಿ ಈ ಅಂತರವು ಮತ್ತಿಷ್ಟು ಬೆಳೆಯುತ್ತದೆ. ಈ ಬಗೆಯ ಅಸ್ಪೃಶ್ಯತೆಯಿಂದ ಅಲ್ಲಿ ಧರ್ಮಾಂತರದ ಕಾರ್ಯವು ಹೆಚ್ಚಾಗಿ ಸಾಗುತ್ತಲಿದೆ. ಅಸ್ಪೃಶ್ಯರು ಮುಸಲ್ಮಾನ ಇಲ್ಲವೆ ಕ್ರಿಶ್ಚನ್ ಆದರೆಂದರೆ ಅವರ ಮೊದಲಿನ ಅಸ್ಪೃಶ್ಯತೆಯು ಇಲ್ಲದಂತಾಗಿ ಅವರು ಸಂಪೂರ್ಣ ಸ್ಪೃಶ್ಯರಾಗುವರೆಂದು ಅಲ್ಲಿಯ ಜನರ ಭಾವನೆಯಿದೆ.

ಮಲಬಾರದಲ್ಲಿಯ ಈ ವಿಲಕ್ಷಣ ಅಸ್ಪೃಶ್ಯತೆಯ ಮೂಲಕ ಎಷ್ಟೋ ಗ್ರಾಮಗಳಲ್ಲಿ ದೊಡ್ಡ ದೊಡ್ಡ ಮಾರ್ಗಗಳು ಸಹ ಮಾಡಲ್ಪಟ್ಟಿಲ್ಲ. ಅಲ್ಲಿಯ ಸಣ್ಣ ಸಣ್ಣ ಸಂದಿಗಳೊಳಗಿಂದ ಯಾವನೊಬ್ಬ ಸ್ಪೃಶ್ಯನು ಹೋಗುತ್ತಿದ್ದಲ್ಲಿ ಅವನು 'ಕುವಾಕುವಾ' ಎಂದು ಒದರುತ್ತ ನಡೆಯುವನು. ಆ ಧ್ವನಿಯನ್ನು ಕೇಳಿದೊಡನೆಯೇ ಅಲ್ಲಿರುವ ಅಸ್ಪೃಶ್ಯರು ತಮ್ಮಗೊತ್ತಾದ ಅಂತರದ ಮೇಲೆ ನಿಲ್ಲಬೇಕಾಗುವದು. ಒಂದು ವೇಳೆ ಅವರು ಹಾಗೆ ನಿಲ್ಲದಿದ್ದಲ್ಲಿ ಅವರಿಗೆ ಯಾರಿಂದಲೂ ಮಾರಲಿಕ್ಕೆ ಧಾನ್ಯ ಸಿಗುವದಿಲ್ಲ. ಇಷ್ಟೇ ಅಲ್ಲ; ಇಂಥ ತಪ್ಪಿನ ದೆಸೆಯಿಂದ ಸ್ಪೃಶ್ಯರು ಆ ದೀನರಾದ ಅಸ್ಪೃಶ್ಯರನ್ನು ಮೈಮುರಿ ಹೊಡೆದು, ಆ ಮೇಲೆ ಸ್ನಾನಮಾಡಿ ಶುದ್ಧರಾಗುವರು. ಈ ಪ್ರಕಾರ ಮಲಬಾರವು ಹಿಂದುಸ್ಥಾನದೊಳಗಿನದೊಂದು ವಿಚಿತ್ರ ಪ್ರಾಂತವಾಗಿದೆ.

ಪ್ರಕಟನೆ

೧೯೩೭ನೆಯ ಇಸ್ವಿಯಲ್ಲಾಗುವ ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಗೆ ಗೊತ್ತುಪಡಿಸಿದ ವಿಷಯುಗಳು.

ದಕ್ಷಿಣಭಾಗ

ಕನ್ನಡ

ಮೊದಲನೆಯ ಸದರು—

ಗದ್ಯ:— ಕ್ರಮಿಕ ೭ನೆಯ ಪುಸ್ತಕ. (೨ನೆಯ ಆವೃತ್ತಿ ೧೯೩೫ ಇದರೊಳಗಿನ ಮೊದಲನೆಯ ಭಾಗದ ಎಲ್ಲ ಗದ್ಯಪಾಠಗಳು.

ಪದ್ಯ:— ಕ್ರಮಿಕ ೭ ನೆಯ ಪುಸ್ತಕ. (೨ ನೆಯ ಆವೃತ್ತಿ ೧೯೩೫ ಇದರೊಳಗಿನ ೨೬, ೩೦, ೩೪, ೩೮, ೪೨, ೪೬, ೫೧ ಮತ್ತು ೫೩ (ಒಟ್ಟಿ ಎಂಟು ಪಾಠಗಳು.)

ಮರಾಠಿ

ಮೊದಲನೆಯ ಸದರು—

ಗದ್ಯ— ಕ್ರಮಿಕ ೭ ನೆಯ ಪುಸ್ತಕ. (೨ ನೆಯ ಆವೃತ್ತಿ ೧೯೩೫ ಇದರೊಳಗಿನ ಮೊದಲನೆಯ ಭಾಗದ ಎಲ್ಲ ಗದ್ಯಪಾಠಗಳು.

ಪದ್ಯ— ಕ್ರಮಿಕ ೭ ನೆಯ ಪುಸ್ತಕ. (೨ ನೆಯ ಆವೃತ್ತಿ ೧೯೩೫ ಇದರೊಳಗಿನ ೩, ೧೫, ೩೬, ೪೩, ೪೭, ೫೧, ೫೩ (ಈ ಪಾಠಗಳು).

ಉರ್ದು ವ್ಹರ್ನ್ಯಾಕ್ಯುಲರ

ಮೊದಲನೆಯ ಸದರು -ಉರ್ದು—

ಗದ್ಯ— ಕ್ರಮಿಕ ಉರ್ದು ೭ ನೆಯ ಪುಸ್ತಕ. (೫ ನೆಯ ಆವೃತ್ತಿ ೧೯೩೪ ಮೊದಲನೆಯ ಭಾಗದೊಳಗಿನ ಎಲ್ಲ ಗದ್ಯ ಪಾಠಗಳು.

ಪದ್ಯ— ಕ್ರಮಿಕ ಉರ್ದು ೭ ನೆಯ ಪುಸ್ತಕ. (೫ ನೆಯ ಆವೃತ್ತಿ ೧೯೩೪) ಇದರೊಳಗಿನ ೯, ೧೦, ೧೬, ೨೩, ೨೯, ೩೨ ಮತ್ತು ೩೫ (ಒಟ್ಟಿಗೆ ೭ ಪಾಠಗಳು.)

ಕನ್ನಡ (ಐಚ್ಛಿಕ)

ಆರನೆಯ ಸದರು—

ಗದ್ಯ— ಕ್ರಮಿಕ ೫ ನೆಯ ಪುಸ್ತಕ. (೧೯೩೫ ರಲ್ಲಿ ಅಚ್ಚಾದದ್ದು)

ಪಾಠಗಳು— ೧, ೪, ೬, ೯, ೧೧, ೧೩, ೧೪, ೧೬, ೧೭, ೨೧, ೨೩, ೨೮, ೩೬, ೪೦, ೫೬, ೫೭, ೫೯, ೬೯, ೭೨ ಹಾಗು ೮೦ ಒಟ್ಟಿಗೆ ೨೦ ಪಾಠಗಳು.

ಮರಾಠಿ (ಐಚ್ಛಿಕ)

ಆರನೆಯ ಸದರು—

ಗದ್ಯ— ಕ್ರಮಿಕ ೫ನೆಯ ಪುಸ್ತಕ (೧೯೩೫ರಲ್ಲಿ ಅಚ್ಚಾದದ್ದು)

ಪಾಠಗಳು— ೧, ೨, ೩, ೪, ೯, ೧೩, ೧೪, ೧೫, ೧೭, ೨೦, ೨೨, ೨೫, ೨೬, ೨೭, ೩೨, ೩೭, ೪೦, ೪೪, ೪೬ ಮತ್ತು ೪೮ (ಒಟ್ಟಿಗೆ ೨೦ ಪಾಠಗಳು ಪೂರಾ)

ವ್ಹರ್ನಾಕ್ಯುಲರ ಉರ್ದು

ಕನ್ನಡ

೧ನೆಯ ಸದರ—

ಗದ್ಯ— ಕ್ರಮಿಕ ೭ನೆಯ ಪುಸ್ತಕ (೧೯೩೫ ರಲ್ಲಿ ಅಚ್ಚಾದದ್ದು)

ಪಾಠಗಳು— ೧, ೨, ೫, ೮, ೧೦, ೧೮, ೨೦, ೨೧, ೨೩, ೨೫, ೩೧, ೩೨, ೩೬, ೩೯, ೪೦, ೪೧, ೪೭, ೫೬, ೫೮, ೫೯, ೬೧, ೬೩, ೬೬, ೬೯, ೭೦, ೭೨, ೭೩, ೭೬, ೭೮, ೮೦, ೮೩, ೮೫, ೯೨, ೯೫ ಮತ್ತು ೯೬ (ಒಟ್ಟಿಗೆ ೩೫ ಪಾಠಗಳು ಪೂರಾ)

ಪದ್ಯ— ಕ್ರಮಿಕ ೭ನೆಯ ಪುಸ್ತಕ (೧೯೩೫ರಲ್ಲಿ ಅಚ್ಚಾದದ್ದು)

ಪಾಠಗಳು— ೭, ೧೫, ೩೪, ೪೨ ಮತ್ತು ೫೧ (ಒಟ್ಟಿಗೆ ೫ ಪಾಠಗಳು

ಮರಾಠಿ

೧ನೆಯ ಸದರು—

ಗದ್ಯ— ಕ್ರಮಿಕ ೭ನೆಯ ಪುಸ್ತಕ. (೧೯೩೪ರ ಆವೃತ್ತಿ.)

ಪಾಠಗಳು— ೧, ೪, ೫, ೯, ೧೦, ೧೨, ೧೬, ೧೭, ೧೮, ೨೦, ೨೧, ೨೨, ೨೩, ೨೫, **೨೭**, ೩೦, ೩೧, ೩೪, ೩೫, ೩೭, ೩೮, ೩೯, ೪೧, ೪೨ ೪೫, ೪೬, ೪೮, ೫೦, ೫೨, ೫೪, **೫೬**, ೫೭, ೬೧, ೬೨ ಮತ್ತು ೬೩ (ಒಟ್ಟಿಗೆ ೩೫ ಪಾಠಗಳು)

ಪದ್ಯ— ಕ್ರಮಿಕ ೭ನೆಯ (ಪುಸ್ತಕ. ೧೯೩೪ರ ಆವೃತ್ತಿ)

ಪಾಠಗಳು— ೩, ೭, ೧೫, ೨೯ ಮತ್ತು ೫೩ (೫ ಪಾಠಗಳು)

ಉರ್ದು

೬ನೆಯ ಸದರು—

ಗದ್ಯ— ಕ್ರಮಿಕ ಉರ್ದು ೭ ನೆಯ ಬುಕ್ಕು. (೫ನೆಯ ಆವೃತ್ತಿ ೧೯೩೪)

ಪಾಠಗಳು— ೧, ೭, ೧೫, ೧೮, ೧೯, ೨೧, ೨೨, ೨೪, ೨೫, ೩೦, ೩೧, ೩೩, ೩೬, ೩೮, ೩೯ (ಒಟ್ಟಿಗೆ ೧೫ ಪಾಠಗಳು) ಪೂರಾ.

ಪದ್ಯ— ಕ್ರಮಿಕ ಉರ್ದು ೭ ನೆಯ ಪುಸ್ತಕ. (೫ನೆಯ ಆವೃತ್ತಿ ೧೯೩೪)

ಪಾಠಗಳು— ೧೦, ೧೩, ೧೬, ೨೯ ಮತ್ತು ೩೨ (ಒಟ್ಟು ೫ ಪಾಠಗಳು)

ಧಾರವಾಡ,
೧೬-೧೦-೧೯೩೫.

Syed Nurullah,
ಎ. ಇ. ದಕ್ಷಿಣಭಾಗ.

ಪತ್ರಗಳ ಸಾರಾಂಶ.

ಶಾಳಾ ಮದಭಾಂವಿ ತಾಲೂಕ ಅಥಣಿ ಜಿಲ್ಹಾ ಬೆಳಗಾಂವ ಇಲ್ಲಿಯ ಹೆಡ್ ಮಾಸ್ತರರು ಬರೆದದ್ದು:— ತಾ. ೨೬-೯-೩೫ ನೆಯ ದಿವಸ ನಮ್ಮ ಶಾಲೆಯಲ್ಲಿ ಸರಸ್ವತಿ ಪೂಜೆಯ ನಿಮಿತ್ತವಾಗಿ ಸಭೆ ನೆರದಿತ್ತು. ಅಧ್ಯಕ್ಷರೂ ಶಾಲಾ ಪಂಚರೂ ಇತರ ಸಭ್ಯಗೃಹಸ್ಥರೂ ಶಾಲೆಯಲ್ಲಿ ನಡೆದ ಕಾರ್ಯಕ್ರಮಗಳಿಗೂ ವ್ಯವಸ್ಥೆಗೂ ವಿದ್ಯಾರ್ಥಿಗಳ ಕೆಲಸಗಳಿಗೂ ಸಂತೋಷ ಪಟ್ಟು ೨ ರೂ. ಗಳ ಮಿಠಾಯಿಗಳನ್ನು ಹಂಚಿದರು. ಇಲ್ಲಿಯ ಶಾಲೆಯ ಕಟ್ಟಡಕ್ಕಾಗಿ ಹಣದ ಸಹಾಯ ಮಾಡುವೆವೆಂದು ಅಭಿವಚನಕೊಟ್ಟರು.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ಸಂಪುಟ ೭.೨ ||| ಜನವರಿ ೧೯೩೬ ||| ವರ್ಷ ೭ ಸಂ. ೧೦

ಹಿಂದುಸ್ತಾನದಲ್ಲಿಯ ಶಿಕ್ಷಣ

ಹಿಂದಿನ ಲೇಖನದಲ್ಲಿದ್ದ ಅಭಿಪ್ರಾಯುಗಳಬಗ್ಗೆ ಸರಕಾರದವರ ಮಂಜೂರಿಯು ದೊರೆತಕೂಡಲೆ ಈ ಸಂಘದವರು ಈ ಸೂಚನೆಗಳನ್ನು ಅಮಲಿನಲ್ಲಿ ತಂದರು; ಹಾಗು ವ್ಯಾಕರಣಸಹಿತವಾಗಿ ಇಂಗ್ಲಿಷ ಭಾಷೆಯ ಅಭ್ಯಾಸವನ್ನು ಮಾಡಿಸಲಿಕ್ಕಾಗಿ ಒಂದು ಸಾಲೆಯನ್ನು ಸ್ಥಾಪಿಸಿದರು. ಮಿ॥ ರಾಬರ್ಟ ಮರ್ಫಿ ಎಂಬ ಒಬ್ಬ ಗೃಹಸ್ಥರು ಈ ಸಾಲೆಯ ಮುಖ್ಯಾಧ್ಯಾಪಕರಾಗಿ ನಿಯಮಿಸಲ್ಪಟ್ಟರು. ಈ ಸಾಲೆಯನ್ನು ಅವರು “.ಹಿರಿಮಣಿಯ” ಪದ್ಧತಿಯಮೇರೆಗೆ ನಡೆಸಿದರು. ಆಗಾಗ ಸಂಘದ ಸೆಕ್ರೆಟರಿಯವರೂ ಅವರ ಸಹಾಯಕ ಅಧಿಕಾರಿಯೂ ಈ ಕೆಲಸದಲ್ಲಿ ಮರ್ಫೀಯವರಿಗೆ ನೆರವಾಗುತ್ತಿದ್ದರು. ಎಲ್‌ಫಿನ್‌ಸ್ಟನ್ ನೇಟಿವ್ಹ ಎಜ್ಯುಕೇಶನ್ ಇನ್‌ಸ್ಟಿಟ್ಯೂಶನ್ ಎಂಬ ಸಾಲೆಯು ಹೀಗೆ ಆರಂಭವಾಯಿತು. ಇದೇ ಕಾಲಾವಧಿಯಲ್ಲಿ ಸದ್ಯದ ಎಲ್‌ಫಿನ್‌ಸ್ಟನ್‌ಹಾಯ್‌ಸ್ಕೂಲವಾಯಿತು; ಹಾಗು ಮುಂದೆ ಎಲ್‌ಫಿನ್‌ಸ್ಟನ್ ಕಾಲೇಜವಾಗಿಯೂ ಪರಿಣಮಿಸಿತು.

೧೮೨೫ರಲ್ಲಿ ಈ ಸಂಘದವರು ತಮ್ಮ ದೇಶಭಾಷೆಯ ಶಾಲೆಗಳಲ್ಲಿ ತಯಾರಾದ ೨೪ಜನ ಟ್ರೇಂಡರಾದ ಶಿಕ್ಷಕರನ್ನು ಸರಕಾರದವರು ಆಕಾಲಕ್ಕೆ ತಮ್ಮ

ಸ್ವಂತ ಖರ್ಚಿನಿಂದ ಸ್ಥಾಪಿಸುತ್ತಿದ್ದ ದೇಶಭಾಷೆಯ ಶಾಲೆಗಳಿಗೆ ಕಳಿಸಿಕೊಟ್ಟರು. ಸರಕಾರದವರು ಕೊಂಕಣ; ಡೆಕ್ಕನ್ ಹಾಗು ಗುಜರಾಥ ಪ್ರಾಂತಗಳೊಳಗಿನ ಜಿಲ್ಹೆಯ ಸ್ಥಳಗಳಲ್ಲಿ ಜಿಲ್ಹೆಯ ಕಲೆಕ್ಟರರ ಮೇಲ್ವಿಚಾರಣೆಯಲ್ಲಿ ದೇಶಭಾಷೆಯ ಶಾಲೆಗಳನ್ನು ಸ್ಥಾಪಿಸುತ್ತಿದ್ದರು. ಈ ಶಾಲೆಗಳಲ್ಲಿ ಶಿಕ್ಷಣ ವ್ಯವಸ್ಥೆಯು ಲಾಂಕ್ಯಾಸ್ಟ್ರಿಯನ್ ಇಲ್ಲವೆ ಹಿರಿಮಣಿಯ ಪದ್ಧತಿಗಳನ್ನನುಸರಿಸಿ ನಡೆಯುತ್ತಿತ್ತು. ಪ್ರತಿಯೊಂದು ವರ್ಗಕ್ಕೆ ಒಬ್ಬ ಹಿರಿಮಣಿಯು ಇದ್ದನು. ಶಿಕ್ಷಕನು ಎಲ್ಲ ವರ್ಗಗಳ ಮೇಲ್ವಿಚಾರಕನಾಗಿದ್ದನು. ಮುಖ್ಯವಾಗಿ ಮೇಲಿನ ಇಯತ್ತೆಗಳ ಅಭ್ಯಾಸದ ಬಗ್ಗೆ ವಿಶೇಷ ಲಕ್ಷ್ಯಕೊಡುತ್ತಿದ್ದನು. ವಾಚನ, ಬರೆಹ, ವ್ಯಾಕರಣ, ಗಣಿತ, ಭೂಗೋಲ, ನೈತಿಕ ಶಿಕ್ಷಣ ಇವು ಕಲಿಸುವ ವಿಷಯಗಳಾಗಿದ್ದವು.

ಈ ಸಂಘದವರ ಈ ಚಟವಟಿಕೆಗಳ ಬಗ್ಗೆ ಮೌಂಟ ಸ್ಟುಅರ್ಟ ಎಲ್‌ಫಿನ್‌ಸ್ಟನ್ ಇವರಿಗೇ ಬಹುತರ ಕೀರ್ತಿಯು ಸಲ್ಲತಕ್ಕದ್ದು. ಇವರು ೧೮೨೩ ರಿಂದ ೧೮೨೭ ರ ವರೆಗೆ ಅವರ ಪ್ರೆಸಿಡೆಂಟರಾಗಿದ್ದು ಸಂಘದವರ ಕಾರ್ಯಕ್ರಮಗಳನ್ನು ಆರಂಭಿಸಿ ತಕ್ಕ ದಾರಿಯಲ್ಲಿ ಸಾಗಗೊಟ್ಟು ಬಹುವಿಧವಾಗಿ ಸಹಾಯ ಮಾಡುತ್ತಿದ್ದರು.

೧೮೩೩ರಲ್ಲಿ ಈ ದೇಶದ ಜನರಿಗೆ ಇಂಗ್ಲಿಷಭಾಷೆಯ ಜ್ಞಾನಮಾಡಿ ಕೊಡಲಿಕ್ಕೂ, ಇದರಲ್ಲಿ ತಕ್ಕಮಟ್ಟಿಗೆ ಪ್ರಗತಿಯನ್ನು ಪಡೆದವರಿಗೆ ಇತಿಹಾಸ, ಭೂಗೋಲ, ಜ್ಯೋತಿಷಶಾಸ್ತ್ರ, ಪ್ರಾಯೋಗಿಕ ತತ್ವಜ್ಞಾನ ಈ ವಿಷಯಗಳ ಮೂಲ ತತ್ವಗಳ ಮಾಹಿತಿಯನ್ನು ಮಾಡಿಕೊಡಲಿಕ್ಕೂ ಪುಣೆಯ ಇಂಗ್ಲಿಷ ಸ್ಕೂಲವು ಆರಂಭಿಸಲ್ಪಟ್ಟಿತು.

೧೮೩೪ರಲ್ಲಿ ಈ ಸಂಘದವರು ಸರಕಾರದವರ ಅನುಮತಿಯಿಂದ ಎಲ್‌ಫಿನ್‌ಸ್ಟನ್ ಕಾಲೇಜವನ್ನು ಆರಂಭಿಸಿದರು. ಇದಕ್ಕೆ ೨ ಲಕ್ಷಕ್ಕಿಂತ ಹೆಚ್ಚು ರೂಪಾಯಿಗಳ ಮೂಲ ಧನವು ಕೂಡಿತ್ತು. ಮೌಂಟಸ್ಟುಅರ್ಟ ಎಲ್‌ಫಿನ್‌ಸ್ಟನ್ ದೊರೆಗಳು ನಮ್ಮ ಇಲಾಖೆಯಬಗ್ಗೆ ಮಾಡಿದ ಮಹತ್ಕಾರ್ಯಗಳ ಸ್ಮಾರಕಕ್ಕಾಗಿ ಈ ಹಣವು ಸಂಗ್ರಹವಾಗಿತ್ತು. ಈ ಕಾಲೇಜಿನ ಮೂಲಕ " ಹಿಂದುಸ್ತಾನದ ಸಿವ್ಹಿಲ್ ಆಡಳಿತದ ಅತ್ಯುಚ್ಚ ಸ್ಥಳಗಳಲ್ಲಿ ಬುದ್ಧಿ ಹಾಗು ನೈತಿಕ ಆಚರಣೆಗಳಿಂದ ಯೋಗ್ಯರೆನಿಸಿಕೊಂಡ ಜನರ ಒಂದು ವರ್ಗವು " ಉಂಟಾಗಬಹುದೆಂದು ಸರಕಾರದವರು ಆಶೆಯನ್ನು ವ್ಯಕ್ತಪಡಿಸಿದರು.

೧೮೪೦ ರಲ್ಲಿ ನೇಟವ್ಹ ಸ್ಕೂಲಬುಕ್ ಹಾಗು ಸ್ಕೂಲಸೊಸಾಯಟಿ ಎಂಬ ಸಂಘವು ಇಲ್ಲದಾಯಿತು. ಅದರ ಸ್ಥಳದಲ್ಲಿ ಬೋರ್ಡ ಆಫ್ ಎಜ್ಯುಕೇಶನ್ ಎಂಬ ಮತ್ತೊಂದು ಸಂಘವು ಉಂಟಾಯಿತು. ಈ ಹೊಸ ಸಂಘವು ಎಲ್‌ಫಿನ್‌ಸ್ಟನ್ ಸ್ಕೂಲ್ ಹಾಗು ಕಾಲೇಜು, ಪನವೇಲ, ಠಾಣೆ, ಹಾಗು ಪುಣೆಗಳಲ್ಲಿದ್ದ ಇಂಗ್ಲಿಷ ಶಾಲೆಗಳು ಹಾಗು ಪುಣೆಯ ಸಂಸ್ಕೃತ ಕಾಲೇಜ ಈ ಸಂಸ್ಥೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಆ ಕಾಲದಲ್ಲಿ ಈ ಇಲಾಖೆಯಲ್ಲಿದ್ದ ೬೨ ಸರಕಾರದ ದೇಶಭಾಷೆಯ ಶಾಲೆಗಳೂ ಇವರ ಅಮಲಿನಲ್ಲಿ ಬಂದವು.

ಮುಂಬಯಿಯ ಎಜ್ಯುಕೇಶನಲ್ ಸೋಸಾಯಿಟಿ ಹಾಗು ಮುಂಬಯಿಯ ನೇಟವ್ ಎಜ್ಯುಕೇಶನ್ ಸೋಸಾಯಿಟಿ ಇವೆರಡು ಸಂಘಗಳು ಶಿಕ್ಷಣದ ಕಾರ್ಯ ವನ್ನು ನಡೆಸಿದ ಸಮಯದಲ್ಲಿಯೇ ಅನೇಕ ಯುರೋಪೀಯ ಹಾಗು ಅಮೇರಿಕದ ಮಿಶನರಿ ಸಂಸ್ಥೆಗಳು ಶಿಕ್ಷಣ ಕಾರ್ಯದ ಆರಂಭವನ್ನು ಚೆನ್ನಾಗಿ ನಡೆಸಿದ್ದವು. ೧೮೧೩ರಲ್ಲಿ ಅಮೇರಿಕದ ಮರಾಠಿ ಮಿಶನ್ ಎಂಬ ಮಿಶನರಿ ಸಂಸ್ಥೆಯು ಮುಂಬ ಯಿಗೆ ಬಂದಿತು. ೧೮೧೫ರಲ್ಲಿ ಈ ಸಂಸ್ಥೆಯವರು ಒಂದು ಹಿಂದೂ ಬಾಯ್ಸ (ಹುಡುಗರ) ಶಾಲೆಯನ್ನು ಆರಂಭಿಸಿದ್ದರು. ಈ ಇಲಾಖೆಯಲ್ಲಿ ಕೇವಲ ಪಾಶ್ಚಿ ಮಾತ್ಯ ಪದ್ಧತಿಯ ಮೇರೆಗೆ ನಡಿಸಲ್ಪಟ್ಟ ಮೊದಲಿನ ಶಾಲೆಯೆಂದರೆ ಇದೇ. ೧೮೨೪ರಲ್ಲಿ ಇವರು ಇದೇಬಗೆಯ ಹೆಣ್ಣುಹುಡಿಗೆಯರ ಶಾಲೆಯನ್ನು ಆರಂಭಿ ಸಿದರು. ಚರ್ಚ ಮಿಶನರಿ ಸೊಸಾಯಟಿ ಎಂಬ ಸಂಘದವರೂ ಶಿಕ್ಷಣಕಾರ್ಯಕ್ಕೆ ಕೈಹಾಕಿದ್ದರು. ಇವರು ತಮ್ಮ ಮೊದಲನೆಯ ಸಾಲೆಯನ್ನು ಮುಂಬಯಿ ಪಟ್ಟಣದಲ್ಲಿ ಸ್ಥಾಪಿಸಿದರು. ೧೮೨೦ ರಲ್ಲಿ ಇವರು ನೈತಿಕ ಪಾಠಮಾಲೆಯ ಕ್ರಮಿಕ ಪುಸ್ತಕಗಳನ್ನು ಬರೆಯಿಸಿ ಅಚ್ಚುಹಾಕಿಸಲಾರಂಭಿಸಿದರು. ಸ್ಕಾಟಿಶ್ ಮಿಶನರಿ ಸೊಸಾಯಟಿಯವರು ಕೊಂಕಣದ ದಕ್ಷಿಣಭಾಗದಲ್ಲಿ ಹಳ್ಳಿಯ ಶಾಲೆಗಳನ್ನು ೧೮೨೨ರಲ್ಲಿ ಆರಂಭಿಸಿದ್ದರು. ೧೮೨೯ರಲ್ಲಿ ಇವರು ಮುಂಬಯಿಯಲ್ಲಿ ಹುಡಿಗೆಯರಿ ಗಾಗಿ ಒಂದು ಶಾಲೆಯನ್ನು ಸ್ಥಾಪಿಸಿದರು.

೧೮೪೨ ರಲ್ಲಿ ಶಿಕ್ಷಣದ ವ್ಯವಸ್ಥೆಯು ಹೆಚ್ಚು ಸಮರ್ಪಕವಾಗಬೇಕೆಂದು ಬೋರ್ಡ ಆಫ್ ಎಜ್ಯುಕೇಶನ್‌ದವರು ಶಾಲೆಗಳನ್ನು ಮೂರು ಪ್ರಾಂತಿಕ ವಿಭಾಗ ಗಳಲ್ಲಿ ಹಂಚಿದರು. ಮೊದಲನೆಯ ಭಾಗದಲ್ಲಿ ಡೆಕ್ಕನದ ಹಾಗು ಖಾನದೇಶದ

ಜಿಲ್ಹೆಯ ಶಾಲೆಗಳು ಇದ್ದವು. ಎರಡನೆಯ ಭಾಗದಲ್ಲಿ ಉತ್ತರಕೊಂಕಣದ ಹಾಗು ಗುಜರಾಥದ ಶಾಲೆಗಳಿದ್ದವು. ಮೂರನೆಯ ಭಾಗದಲ್ಲಿ ದಕ್ಷಿಣಕೊಂಕಣ ಹಾಗು ಸದರ್ನ ಮರಾಠಾ ಪ್ರಾಂತದ ಶಾಲೆಗಳಿದ್ದವು. ಪ್ರತಿಯೊಂದು ಭಾಗಕ್ಕೆ ಒಬ್ಬ ಯುರೋಪೀಯ ಇನ್‌ಸ್ಪೆಕ್ಟರನ ಆಧೀನದಲ್ಲಿದ್ದು ಆತನ ಸಹಾಯಕ್ಕೆ ಈ ದೇಶದ ಒಬ್ಬ ಅಧಿಕಾರಿಯು ನಿಯಮಿಸಲ್ಪಟ್ಟನು. ಪ್ರತಿಯೊಂದು ಇಂಗ್ಲಿಷ ಹಾಗು ದೇಶಭಾಷೆಯ ಶಾಲೆಯವರಿಗೆ ಶಾಲಾವ್ಯವಸ್ಥೆಯ ಬಗ್ಗೆ ಅಚ್ಚುಹಾಕಿಸಿದ ಕೆಲವು ನಿಯಮಗಳ ಒಂದೊಂದು ಪ್ರತಿಯನ್ನು ಕೊಟ್ಟರು. ಹಾಗು ಬಹುತ ಸ್ಥಳಗಳಲ್ಲಿ ಸ್ಥಾನಿಕ ವರ್ಚಸ್ಸವುಳ್ಳ ಮೂರು ಇಲ್ಲವೆ ನಾಲ್ಕು ಜನರನ್ನು ಇಂಗ್ಲಿಷ ಹಾಗು ದೇಶಭಾಷೆಯ ಶಾಲೆಗಳ ಸ್ಕೂಲ ಕಮೀಟಿಗಳೆಂದು ನೇಮಿಸಿದರು. ಇದಲ್ಲದೆ ೨೦೦೦ ಕ್ಕಿಂತ ಕಡಿಮೆ ಜನಸಂಖ್ಯೆಯಿಲ್ಲದಿರುವ ಪ್ರತಿಯೊಂದು ಹಳ್ಳಿಯಲ್ಲಿ ಒಂದು ದೇಶಭಾಷೆಯ ಶಾಲೆಯನ್ನು ಸ್ಥಾಪಿಸಲು ಒಪ್ಪಿಕೊಂಡರು. ಆದರೆ ಅಂಥ ಊರಿನ ಜನರು ಶಾಲೆಹಾಕಲು ಯೋಗ್ಯವಾದ ಒಂದು ಬಾಡಿಗೆ ಬೀಳದ ಕಟ್ಟಡವನ್ನು ಕೊಡುವದಲ್ಲದೆ ಸಾಲೆಗೆ ಬರುವ ಪ್ರತಿಯೊಬ್ಬ ವಿದ್ಯಾರ್ಥಿಯ ಬಗ್ಗೆ ಒಂದಾಣೆ ಫೀ ಹಣವನ್ನು ಕೊಡಲು ಒಪ್ಪಿಕೊಳ್ಳಬೇಕಾಗುತ್ತಿತ್ತು. ಇಂಗ್ಲಿಷ ಶಾಲೆಗಳು ರಾಷ್ಟ್ರಶಿಕ್ಷಣದ ವ್ಯವಸ್ಥೆಯಲ್ಲಿ ಮಾಧ್ಯಮಿಕ ಶಾಲೆಗಳಂತೆ ಇರಬೇಕೆಂದು ಇವರು ಅಭಿಪ್ರಾಯಪಟ್ಟರು. ಅಂದರೆ, ಇವು ಜರ್ಮನಿಯಲ್ಲಿರುವ ಜಿಮ್‌ನೇಸಿಯಾ ಸಾಲೆಗಳಂತೆ ಇಲ್ಲವೆ ಇಂಗ್ಲಂಡದ ಗ್ರಾಮರ ಸ್ಕೂಲ್ಸ ಎಂಬ ಶಾಲೆಗಳಂತೆ ಎಣಿಸಲ್ಪಡಬೇಕೆಂದು ಅವರು ಮತಪಟ್ಟರು. ಈ ತಮ್ಮ ಅಭಿಪ್ರಾಯವನ್ನನುಸರಿಸಿ ಇವರು ಮಾಧ್ಯಮಿಕ ಶಾಲೆಗಳಿಗೆ ಹೋಗುವ ಹುಡುಗರಿಗಾಗಿ ಒಂದು ಪ್ರವೇಶಪರೀಕ್ಷೆಯನ್ನಿಟ್ಟರು; ಈ ಶಾಲೆಗಳ ಫೀ ಹಣದ ದರವನ್ನು ದೇಶಭಾಷೆಯ ಶಾಲೆಗಳ ದರಕ್ಕಿಂತ ಹೆಚ್ಚಾಗಿ ಮಾಡಿದರು. ದೇಶಭಾಷೆಯ ಶಾಲೆಗಳಿಂದ ಇಂಗ್ಲಿಷ ಶಾಲೆಗಳನ್ನು ಸೇರಲು ಇಚ್ಛಿಸುವ ಯೋಗ್ಯತೆಯುಳ್ಳ ಬಡಹುಡುಗರನ್ನು ಫೀ ಹಣವಿಲ್ಲದೆ ತೆಗೆದುಕೊಳ್ಳುವ ಏರ್ಪಾಡುಮಾಡಿದರು. ೧೮೪೫ ರಲ್ಲಿ ಇವರು ಎಲ್‌ಫಿನ್‌ಸ್ಟನ್ ಸಂಸ್ಥೆಯಲ್ಲಿ ಪ್ರಾಥಮಿಕ ಶಿಕ್ಷಕರನ್ನು ಸಿದ್ಧಪಡಿಸಲಿಕ್ಕಾಗಿ ಒಂದು ನಾರ್ಮಲ್ ಸ್ಕೂಲು ಅಂದರೆ ಶಿಕ್ಷಕ-ಶಿಕ್ಷಣಾಲಯವನ್ನು ಆರಂಭಿಸಿದರು; ಹಾಗು ಇಂಗ್ಲಿಷ ಭಾಷೆಯಲ್ಲೂ ದೇಶಭಾಷೆಗಳಲ್ಲಿ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಲಿಕ್ಕಾಗಿ ಒಂದು ಸ್ಪೆಶಲ್ ಕಮಿಟಿಯನ್ನು ನಿಯಮಿಸಿದರು.

ಮೌಂಟ್ ಸ್ಟುಅರ್ಟ್ ಎಲ್‌ಫಿನ್‌ಸ್ಟನ್ನರು ದೇಶಭಾಷೆಯ ಶಿಕ್ಷಣದ ಪುರಸ್ಕರ್ತರಾಗಿದ್ದರು. ಆದರೆ ಸರ್ ಎರ್‌ಸ್ಕೈನ ಪೆರೀ ಎಂಬವರು ಹಿಂದುಸ್ತಾನದ ಜನರಲ್ಲಿ ಇಂಗ್ಲಿಷ ಶಿಕ್ಷಣವು ಹಬ್ಬಬೇಕೆಂದು ಬಲವಾಗಿ ಅಭಿಪ್ರಾಯಪಟ್ಟರು. ಕೆಲಜನರಿಗೆ ಇಂಗ್ಲಿಷ ಶಿಕ್ಷಣವನ್ನು ಕೊಡುವವದರಿಂದ ಇವರಿಗೆ ಉಂಟಾಗುವ ಜ್ಞಾನವು ಕಡಿಮೆಸ್ಥಿತಿಯಲ್ಲಿರುವ ಇವರ ದೇಶಬಾಂಧವರಿಗೆ ಮುಟ್ಟಬಹುದೆಂದು ಇವರ ಮತವಿತ್ತು. ಹೀಗೆ ಸುಶಿಕ್ಷಿತರಿಂದ ಬಹುಜನರಿಗೆ ಶಿಕ್ಷಣದ ಲಾಭವು ಚನ್ನಾಗಿ ಆಗಬಹುದೆಂದು ಅವರು ನಂಬಿದ್ದರು. ಬೋರ್ಡಿನವರಿಗೂ ಈ "ಮೇಲಿನ ಜನರಿಂದ ಕೆಳಗಿನ ವರೆಗೆ ಇಳಿದುಹೋಗುವ" ತತ್ವವು ಸಮ್ಮತವಾಯಿತು. ಆದ್ದರಿಂದ ಅವರು ೧೮೪೩ರಲ್ಲಿ ಈ ವರೆಗೆ ನಡಿಸಿದ ದೇಶಭಾಷೆಯ ಶಿಕ್ಷಣದ ಧೋರಣವನ್ನು ಸಡಲಿಸಿ ಇಂಗ್ಲಿಷ ಶಿಕ್ಷಣದ ಮುಖಾಂತರ ಬಹುಜನರ ಶಿಕ್ಷಣವನ್ನು ಸಾಧಿಸಿಕೊಳ್ಳಬೇಕೆಂಬ ಧೋರಣವನ್ನು ಕೈಕೊಂಡರು. ಈ ಹೆಚ್ಚಿನ ಶಿಕ್ಷಣವು ತೀರ ಸ್ವಲ್ಪ ಜನರಿಗೆ ಮಾತ್ರ ದೊರೆಯಬಹುದೆಂಬದನ್ನು ಅವರು ಅರಿತಿದ್ದರು.

೧೮೫೨ರಲ್ಲಿ ಸರ್ ಎರ್ ಸ್ಕೈನ ಪೆರಿ ಎಂಬವರು ಸೇವಾನಿವೃತ್ತರಾದರು; ಸರಕಾರದವರಿಂದ ದೊರೆಯುತ್ತಿದ್ದ ಸಾಹಾಯ್ಯಕ ದ್ರವ್ಯವೂ ಹೆಚ್ಚಾಯಿತು; ಆದ್ದರಿಂದ ಬೋರ್ಡಿನವರು ಮತ್ತೆ ತಮ್ಮ ಧೋರಣವನ್ನು ಬದಲಿಸಿದರು. ದೇಶಭಾಷೆಯ ಶಿಕ್ಷಣಕ್ಕೇ ಹೆಚ್ಚು ಮಹತ್ವವನ್ನು ಕೊಡಲಾರಂಭಿಸಿದರು. ಹಳ್ಳಿಯ ಜನರು ಶಾಲಾಗೃಹವನ್ನೂ ವರ್ಗಕ್ಕೆ ಬೇಕಾಗುವ ಶಿಕ್ಷಣೋಪಕರಣಗಳನ್ನೂ ಕೊಡುವದಲ್ಲದೆ ಶಿಕ್ಷಕನ ಅರ್ಧ ಸಂಬಳವನ್ನು ಕೊಡಲಿಕ್ಕೆ ಒಪ್ಪಿಕೊಂಡರೆ ಇಲಾಖೆಯು ಬೇಕಾದ ಹಳ್ಳಿಯಲ್ಲಿ ಶಾಲೆಯನ್ನು ಸ್ಥಾಪಿಸುವ ಭಾರವನ್ನು ವಹಿಸಿದರು.

೧೮೫೪ರಲ್ಲಿ ವುಡ್ ಎಂಬವರು ಇಲ್ಲಿಯ ಶಿಕ್ಷಣದ ಬಗ್ಗೆ ಒಂದು ಡಿಸ್ಪ್ಯಾಚ್ ಅಂದರೆ ವಿಮರ್ಶಾತ್ಮಕವಾದ ಒಂದು ಲೇಖನವನ್ನು ಬರೆದು ಕಂಪನಿಯ ಸರಕಾರಕ್ಕೆ ಕಳಿಸಿದರು. ಇದರ ಮೂಲಕ ೧೮೫೫ ರಲ್ಲಿ ಇಲಾಖೆಯಲ್ಲಿ ಸರಕಾರದ ಶಾಲಾಖಾತೆಯು ಏರ್ಪಡಿಸಲ್ಪಟ್ಟಿತು. ಈ ಮೂಲಕ ಬೋರ್ಡಿನ ಚಟುವಟಿಕೆಗಳು ನಿಂತು ಹೋದವು. ಆ ವರುಷದಿಂದ ಇಲಾಖೆಯ ಶಿಕ್ಷಣ ವ್ಯವಸ್ಥೆಯು ಹೆಚ್ಚು ಕಡಿಮೆ ಎಲ್ಲ ಕಡೆಯಲ್ಲಿ ಒಂದೇಬಗೆಯಿಂದ ಸಾಗಲಾರಂಭಿಸಿತು.

೧೮೫೭ ರಲ್ಲಿ ಮುಂಬಯಿಯ ವಿಶ್ವವಿದ್ಯಾಲಯವು ಸ್ಥಾಪಿತವಾಯಿತು; ಹಾಗು ಮೂರು ವರುಷಗಳಾದ ಬಳಿಕ ಸರಕಾರದವರು ಮುಂಬಯಿ ಇಲಾಖೆಯ ಗ್ರಾಂಟ ಇನ್ ಏಡ (ಸಹಾಯಕ ವ್ಯವಸ್ಥೆಯ ಬಗ್ಗೆ ನಿಯಮಗಳು) ಎಂಬ ಒಂದು ಕೋಡನ್ನು ಮಂಜೂರು ಮಾಡಿದರು.

ಹಿಂದುಸ್ಥಾನ:— ಮದ್ರಾಸ ಮುಂಬಯಿಗಳಲ್ಲಿಯಂತೆ ಬಂಗಾಲದಲ್ಲೂ ಬ್ರಿಟಿಷರ ಆಧಿಪತ್ಯವೂ ಆಡಳಿತವೂ ಆರಂಭವಾದ ಕೂಡಲೆ ಬ್ರಿಟಿಷ ವರಿಷ್ಠಾಧಿಕಾರಿಗಳು ಬಹುಜನರು ರಾಜ್ಯವ್ಯವಸ್ಥೆಯಲ್ಲಿ ಹೊಸದಾಗಿ ಆದ ಬದಲಾವಣೆ ಹೊಂದಿಕೊಳ್ಳಬೇಕೆಂದೂ ಈ ವ್ಯವಸ್ಥೆಯು ಸುಸೂತ್ರವಾಗಿ ಸಾಗಲು ಅವಶ್ಯವಾದ ಸಂಗತಿಗಳ ಪೂರೈಕೆಯಾಗಬೇಕೆಂದೂ ಬಹುಜನರಲ್ಲಿ ವಿದ್ಯಾಭಿವೃದ್ಧಿಯನ್ನು ಹರಡಿಸಬೇಕೆಂದು ಮನಗಂಡರು. ೧೭೬೨ನೆಯ ವರುಷವು ಶಿಕ್ಷಣದ ಇತಿಹಾಸದಲ್ಲಿ ಒಳ್ಳೆಯ ಮಹತ್ವದ ವರುಷವಾಯಿತು. ಆ ವರುಷ ಪ್ರಸಿದ್ಧ ತತ್ವಜ್ಞಾನಿಯೂ ಶಿಕ್ಷಣಾಭಿಮಾನಿಯೂ ಆದ ರೂಸೋ ಎಂಬ ಫ್ರೆಂಚ ಪ್ರತಿಭಾಶಾಲಿಯು ಕನ್‌ಫೆಶನ್ಸ ಎಂಬ ಹೆಸರಾದ ಗ್ರಂಥವನ್ನು ಪ್ರಸಿದ್ಧಿಸಿದನು. ಅರ್ವಾಚೀನಕಾಲದ ಶಿಕ್ಷಣ ಸುಧಾರಕರಲ್ಲಿ ಹೆಸರು ಪಡೆದವನೂ ಆದ, ಪೆಸ್ಟಲಾಝಿ ಎಂಬ ಆತನ ಶಿಷ್ಯನು ಲಿಓನಾರ್ಡ ಹಾಗು ಗೆರ್‌ಟ್ರೂಡ ಎಂಬ ತನ್ನ ಶಿಕ್ಷಣ ಗ್ರಂಥವನ್ನು ಪ್ರಕಟಿಸಿದನು. ಆಗ ವಾರನ್ ಹೇಸ್ಟಿಂಗ್ಸರೆಂಬವರು ಹಿಂದುಸ್ಥಾನದ ಮೊದಲನೆಯ ಗವ್ಹರ್ನರ್ ಜನರಲ್ಲರಾಗಿದ್ದರು. ಇವರು ಅದೇ ವರುಷ ಕಲಿಕತ್ತೆಯಲ್ಲಿ "ಕಲಕತ್ತೆಯ ಮದ್ರಾಸಾ" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇದರಿಂದ ಕಲಕತ್ತೆಯ ಮುಸಲ್ಮಾನರನ್ನು ಸಮಾಧಾನಗೊಳಿಸುವದು ಅವರ ಉದ್ದೇಶವಾಗಿತ್ತು; ಮುಸಲ್ಮಾನ ಗೃಹಸ್ಥರ ಮಕ್ಕಳಿಗೆ ರಾಜ್ಯದೊಳಗಿನ ಜವಾಬುದಾರಿಯ ಹಾಗು ಹೆಚ್ಚಿನ ಪಗಾರದ ಸ್ಥಳಗಳು ದೊರೆಯಬಹುದಾಯಿತು. ರಾಜ್ಯದೊಳಗಿನ ನ್ಯಾಯಕೋರ್ಟುಗಳಿಗೆ ಯೋಗ್ಯತೆಯುಳ್ಳ ಜನರು ತಯಾರಾಗಬಹುದಾಯಿತು. ಈ "ಮದ್ರಾಸಾ" ಸಂಸ್ಥೆಯ ವಿದ್ಯಾರ್ಥಿಗಳು ಯೋಗ್ಯತಾಪತ್ರವನ್ನು ಪಡೆದುಕೊಂಡು ಬಂದರೆ ಸ್ಥಳಗಳು ತೆರವಾದಂತೆ ಅವರಿಗೆ ಈ ಸ್ಥಳಗಳನ್ನು ಕೊಡಬೇಕೆಂದು ಗೊತ್ತಾಯಿತು. ಈ "ಮದ್ರಾಸಾ" ಶಿಕ್ಷಣಾಲಯದಲ್ಲಿ ಸೃಷ್ಟಿಯ (ತತ್ವಜ್ಞಾನ, ಕಾಯದೆ, ಜ್ಯೋತಿಷ ಶಾಸ್ತ್ರ, ಭೂಮಿತಿ, ಗಣಿತ, ತರ್ಕ, ವ್ಯಾಕರಣ ಮೊದಲಾದ ವಿಷಯಗಳನ್ನು ಇಸ್ಲಾಮ ಪದ್ಧತಿಯ ಮೇರೆಗೆ ಕಲಿಸುತ್ತಿದ್ದರು.

ಮುಂದೆ ೧೭೯೧ರಲ್ಲಿ ಇಂಥ ಎರಡನೆಯದೊಂದು ಸಂಸ್ಥೆಯು ಹಿಂದುಗಳಿಗಾಗಿ ಕಾಶೀಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿತು. ಇದರ ಸಂಸ್ಥಾಪರು ಜೋನಾಥನ್ ಡಂಕನ್ ಎಂಬ ಕಾಶಿಯ ನಾಗರಿಕರಾಗಿದ್ದರು–ಇವರು ಮುಂದೆ ಮುಂಬಯಿ ಇಲಾಖೆಯ ಗವ್ಹರ್ನರರಾದರು. ಇವರು ಕಾಶಿಯಲ್ಲಿ ಬನಾರಸ್ ಸಂಸ್ಕೃತ ಕಾಲೇಜ ಎಂಬ ಸಂಸ್ಥೆಯನ್ನು ಆರಂಭಿಸಿದರು. ಇವರು ಹಿಂದೂ ಜನಾಂಗದ ಕಾಯಿದೆ,ವಾಙ್ಮಯ ಹಾಗು ಧರ್ಮ ಇವುಗಳ ಅಭ್ಯಾಸವನ್ನು ಆ ಧರ್ಮದ ಮುಖ್ಯ ಸ್ಥಳವಾದ ಕಾಶೀ ಪಟ್ಟಣದಲ್ಲಿ ಮುಂದುವರಿಸಿ ಇವುಗಳನ್ನು ಕಾಯಲಿಕ್ಕೂ ಅಭಿವೃದ್ಧಿಗೊಳಿಸಲಿಕ್ಕೂ ಹವಣಿಸಿದರು. ''ಕಲಕತ್ತೆಯ ಮದ್ರಾಸವು ಮುಸಲ್ಮಾನರ ಬಗ್ಗೆ ನೆರವೇರಿಸುವದನ್ನು ಹಿಂದುಗಳ ಬಗ್ಗೆ ಸಿದ್ಧಿಸಲಿಕ್ಕೂ ಮುಖ್ಯವಾಗಿ ಯುರೋಪೀಯ ನ್ಯಾಯಾಧೀಶರಿಗೆ ಹಿಂದೂ ಸಾಹಾಯ್ಯಕರನ್ನು ಪೂರಯಿಸಲಿಕ್ಕೂ'' ಈ ಕಾಲೇಜವು ಸ್ಥಾಪಿಸಲ್ಪಟ್ಟಿತು. ಸಂಸ್ಕೃತ ಕಾಲೇಜದಲ್ಲಿ ಧರ್ಮ, ವೈದ್ಯಶಾಸ್ತ್ರ, ಸಂಗೀತ, ವ್ಯಾಕರಣ, ತತ್ವಜ್ಞಾನ, ಕಾಯದೆ, ಇತಿಹಾಸ, ನೀತಿಶಾಸ್ತ್ರ, ಕವಿತೆ ಮೊದಲಾದ ವಿಷಯಗಳ ಅಭ್ಯಾಸವು ನಡೆಯುತ್ತಿತ್ತು.

೧೮೧೩ ಕ್ಷಿ ರಲ್ಲಿ ಈಸ್ಟ ಇಂಡಿಯಾ ಕಂಪನಿಯವರ ಸನದನ್ನು ಮತ್ತೆ ಕೊಡುವ ಪ್ರಶ್ನವು ಹೊರಟಿತು. ಆಗ ಇಂಗ್ಲಂಡದಲ್ಲಿ ಸಮಾಜ ವ್ಯವಸ್ಥೆಯಲ್ಲಿ ಬಹು ದೊಡ್ಡ ಬದಲಾವಣೆಯಾಗಿತ್ತು. ಆ ದೇಶದಲ್ಲಿ ಔದ್ಯೋಗಿಕ ಕ್ರಾಂತಿಯಾದ ಮೂಲಕ ಗಿರಣಿಗಳ ಸಂಖ್ಯೆಯು ಒಮ್ಮಿಂದೊಮ್ಮೆ ವಿಪರೀತವಾಗಿ ಬೆಳೆಯಿತು. ಇವುಗಳ ಮೂಲಕ ಸಣ್ಣ ಕ್ಷೇತ್ರದಲ್ಲಿ ಹಲವು ಜನರು ಕೂಡಿ ಇರಬೇಕಾಯಿತು. ಜನಸಮ್ಮರ್ದದ ಈ ಸ್ಥಳಗಳಲ್ಲಿ ಸಾಮಾಜಿಕ ಸ್ಥಿತಿಯು ಬಹಳ ಭಯಂಕರವಾದದ್ದಾಗಿತ್ತು. ಮುಖ್ಯವಾಗಿ ಚಿಕ್ಕಮಕ್ಕಳು ಹೇಳಲಾರದಷ್ಟು ಕಷ್ಟದ ಪ್ರಸಂಗಗಳಿಗೆ ದಿನಾಲು ಒಳಗಾಗಬೇಕಾಗುತ್ತಿತ್ತು. ತಾಯ್ತಂದೆಗಳು ಮಕ್ಕಳನ್ನು ದುರ್ಲಕ್ಷಿಸುವ ಈ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಶಾಲೆಗಳನ್ನು ಸ್ಥಾಪಿಸಿ ಶಿಕ್ಷಣಾಭಿವೃದ್ಧಿಯನ್ನು ಕೈಗೂಡಿಸುವದು ಒಂದು ಮಹತ್ವದ ಉಪಾಯವೆನಿಸಿತು. ಆದ್ದರಿಂದ ಆ ಸಮಯದಲ್ಲಿ ಇಂಗ್ಲಂಡಿನಲ್ಲಿದ್ದ ಲೋಕ ಹಿತೈಕಪಕ್ಷಪಾತಿಗಳು ಪಾರ್ಲಿಮೆಂಟಿನಲ್ಲಿಯೂ ಆ ಸಭಾಗೃಹದ ಹೊರಗೆ ಸಮಾಜದಲ್ಲಿಯೂ ಸಾಮಾನ್ಯ ಜನರಿಗಾಗಿ ಶಾಲೆಗಳಾಗಬೇಕೆಂಬ ಕೂಗನ್ನು ಬಲವಾಗಿ ಆರಂಭಿಸಿದ್ದರು. ಇವರಲ್ಲಿ ವಿಲ್‌ಬರ ಫೋರ್ಸನೆಂಬಾತನು ಹೆಸರಾಗಿದ್ದನು. ಆ

ಕಾಲದಲ್ಲಿ ಚಾರ್ಲ್‌ಸ್ ಗ್ರಾಂಟನೆಂಬಾತನು ಕಂಪನಿಯ ಡಿರೆಕ್ಟರರಲ್ಲಿ ಒಬ್ಬನಾಗಿದ್ದನು. ಈತನ ಬೆಂಬಲದಿಂದ ವಿಲ್‌ಬರ ಫೋರ್ಸನು ಪಾರ್ಲಿಮೆಂಟನಲ್ಲಿ ಕೆಳಗೆ ಕಾಣಿಸಿದ ಗೊತ್ತುವಳಿಯನ್ನು ಪಾಸು ಮಾಡಿಕೊಂಡನು:—

" ಶಕ್ಯವಿದ್ದ ಎಲ್ಲ ನ್ಯಾಯವಾದ ಹಾಗು ಸಾಧ್ಯವಾದ ಉಪಾಯಗಳಿಂ ಹಿಂದುಸ್ತಾನದಲ್ಲಿ ಬ್ರಿಟಿಷರ ಅಮಲಿಗೆ ಒಳಗಾದ ಪ್ರಾಂತಗಳ ಜನರ ಸೌಖ್ಯವನ್ನೂ ಹಿತವನ್ನೂ ಸಾಧಿಸುವದು ಬ್ರಿಟಿಷ ಕಾಯದೆ ಸಭೆಯ ಮೇಲಿರುವ ವಿಶೇಷ ಜವಾಬುದಾರಿಯಾಗಿರುವದು. ಇದಕ್ಕಾಗಿ ಆ ಜನರು ಧಾರ್ಮಿಕ ಹಾಗು ನೈತಿಕ ಹೆಚ್ಚಳವನ್ನು ಪಡೆಯಲಿಕ್ಕೂ ಉಪಯುಕ್ತವಾದ ಜ್ಞಾನಾಭಿವೃದ್ಧಿಯನ್ನು ಹೊಂದಲಿಕ್ಕೂ ಕಾರಣವಾಗುವಂಥ ಎಲ್ಲ ಉಪಾಯಗಳನ್ನು ಕ್ರಮೇಣ ಕೈಕೊಳ್ಳುವದು ಉಚಿತವಾದದ್ದು. "

ಈ ಮಸೂದೆಯಲ್ಲಿ ಒಂದು ವಿಶಿಷ್ಟ ಸಂಗತಿಯನ್ನು ಒಳಕೊಂಡ ಮಾತನ್ನು ಸೇರಿಸಬೇಕೆಂದೂ ಆತನು ಸೂಚಿಸಿದನು. ಅದೇನೆಂದರೆ, ಇಂಗ್ಲಂಡಿನಿಂ ಮಿಶನರಿ ಜನರನ್ನೂ ಶಾಲಾಧ್ಯಾಪಕರನ್ನೂ ಕಳಿಸುವ ಬಗ್ಗೆ ಸರಕಾರದಿಂ ಉತ್ತೇಜನವು ದೊರೆಯತಕ್ಕದ್ದು. ಆದರೆ ಕೋರ್ಟ ಆಫ್ ಡಿರೆಕ್ಟರರ ಸಭೆಯಲ್ಲಿದ್ದ ವಿರುದ್ಧ ಪಕ್ಷದವರು ಹೇಳಿದ್ದೇನೆಂದರೆ:—

" ಹಿಂದೂ ಜನರ ಧಾರ್ಮಿಕ ಹಾಗು ನೈತಿಕ ಬಲವು ಬಹುತರಜನಾಂಗಗಳಷ್ಟೇ ಮೇಲ್ತರದ್ದಿರುವದು. ಆದ್ದರಿಂದ ಆ ಜನರನ್ನು ಧರ್ಮಾಂತರಕ್ಕೆ ಮಒಲಿಸುವದು ಮೂಢತನವು. ಅವರಿಗೆ ಹೆಚ್ಚಿನ ಜ್ಞಾನವನ್ನು ಕೊಡಲು ಯತ್ನಿಸುವದೂ ಹುಚ್ಚುತನವು " ಈ ಮೂಲಕ ವಿಲ್‌ಬರ ಫೋರ್ಸನು ಮಸೂದೆಯಲ್ಲಿ ಸೇರಿಸಲೆಳಸಿದ ಮಾತನ್ನು ಸರಕಾರದವರು ಅದರಲ್ಲಿ ಸೇರಿಸಲಾರದಾದರು. ವಿಲ್‌ಬರಫೋರ್ಸನು ತಂದ ಗೊತ್ತುವಳಿಯು ಕೂಡ ಲಾರ್ಡರ ಸಭೆಯಲ್ಲಿ ಪಾಸಾಗದ ಮೂಲಕ ಅಲ್ಲಿಗೇ ಉಳಿಯಿತು.

ಮಾನಸಶಾಸ್ತ್ರದ ಸಂಬಂಧವಾಗಿ ಕೆಲವು ವಿಚಾರಗಳು

ಲೇಖಕರು— ಶ್ರೀ. ಸೀ. ರಾ. ತಾವಡೆ, ಎಮ್.ಎ., ಟೀ.ಡಿ.

ಶಿಕ್ಷಣವು ಒಂದು ಕಲೆಯು. ಗಾಯನ, ಚಿತ್ರಲೇಖನ ಮುಂತಾದ ಕಲೆಗಳು ಅಭ್ಯಾಸದಿಂದ ಸಾಧ್ಯವಾಗುವಂತೆ ಶಿಕ್ಷಣವಾದರೂ ಸಾಧ್ಯವಾಗುತ್ತದೆ. ಕೆಲ ಜನರು ಹುಟ್ಟಾ ಶಿಕ್ಷಕರಿರುವರು. ಈ ಬಗೆಯ ಶಿಕ್ಷಕರು ಎಲ್ಲ ಶಾಲೆಗಳಿಗೆ ದೊರೆಯುವದು ಅಸಂಭವವು. ಆದುದರಿಂದ ಶಿಕ್ಷಣಕಾರ್ಯಕ್ಕೆ ತಕ್ಕ ಶಿಕ್ಷಕರನ್ನು ಸಿದ್ಧಮಾಡುವದಕ್ಕೋಸ್ಕರ ಟ್ರೇನಿಂಗ ಸಂಸ್ಥೆಗಳ ಯೋಜನೆಯಾಗಿದೆ. ಆರಂಭಕ್ಕೆ ಶಿಕ್ಷಣದ ವಿಷಯವಾಗಿ ಏನೂ ಗೊತ್ತಿರದವರು ಸಹ ಅಭ್ಯಾಸ-ಅನುಭವಗಳಿಂದ ಯೋಗ್ಯ ಶಿಕ್ಷಕರಾಗುವರೆಂಬದರಲ್ಲಿ ಏನೂ ಸಂಶಯವಿಲ್ಲ. ಯಾವನೊಬ್ಬ ಶಿಲ್ಪಿಗನ ಆರಂಭದ ಕೆಲಸವು ಅಷ್ಟಕ್ಕಷ್ಟೇ ಇರಬಹುದು. ಆದರೆ ಅವನು ತಾನು ಉತ್ತಮ ಶಿಲ್ಪಿಗನಾಗಬೇಕೆಂದು ಬಯಸಿ ಅದರ ಕಡೆಗೇ ಲಕ್ಷ್ಯವಿಟ್ಟು ತನಗೆ ಬೇಕಾಗುವಷ್ಟು ಜ್ಞಾನಗಳಿಸಿಕೊಳ್ಳುವದಕ್ಕೋಸ್ಕರ ಜಿಗುಟತನದಿಂದ ಪ್ರಯತ್ನಮಾಡಿದರೆ ಅವನ ಇಚ್ಛೆಯು ನಿಶ್ಚಯವಾಗಿ ಕೈಗೂಡುವದು. ಹಾಗೆಯೇ ಶಿಕ್ಷಕನು ಸಹ ಶಿಕ್ಷಣಕಲೆಯಲ್ಲಿ ಬಲ್ಲಿದನಾಗಬೇಕೆಂದು ಇಚ್ಛಿಸಿ ಚನ್ನಾಗಿ ಪ್ರಯತ್ನಿಸಿದರೆ ಅವನಾದರೂ ಯಶಸ್ಸು ಪಡೆಯುವನು. ಡಾಕ್ಟರರು, ಚಿತ್ರಗಾರರು, ಶಿಲ್ಪಿಗರು, ಇವರ ಉದ್ಯೋಗಗಳಂತೆಯೇ ಶಿಕ್ಷಣವಾದರೂ ಒಂದು ಉದ್ಯೋಗವಾಗಿರುವದು. ಇತರ ಉದ್ಯೋಗಿಗಳ ಮಹತ್ವವು ಅವರ ಕೌಶಲ್ಯವನ್ನು ಅವಲಂಬಿಸಿರುವಂತೆ ಶಿಕ್ಷಕನ ಮಹತ್ವವಾದರೂ ಅವನ ಶಿಕ್ಷಣದ ಹತೋಟಿಯನ್ನು ಅವಲಂಬಿಸಿರುವದು. ಶಿಕ್ಷಣಕಲೆಯಲ್ಲಿ ಕೌಶಲ್ಯವನ್ನು ಪಡೆಯಬೇಕಾದರೆ ಶಿಕ್ಷಕನು ತನಗೆ ಅವಶ್ಯವಿರುವಷ್ಟು ಜ್ಞಾನವನ್ನು ಪಡೆಯಲಿಕ್ಕೆ ಹೆಣಗಬೇಕಾಗುವದು.

ಶಿಕ್ಷಕನ ನಿತ್ಯಸಂಬಂಧವು ಮಕ್ಕಳಿಗಾಗುತ್ತಿರುತ್ತದೆ. ಆದ್ದರಿಂದ ಶಿಕ್ಷಕನು ತನ್ನ ಕೌಶಲ್ಯವನ್ನು ಮಕ್ಕಳಿಗಾಗಿ ತೋರಿಸಬೇಕಾಗುತ್ತದೆ. ಆದುದರಿಂದ

ಶಿಕ್ಷಕನು ತನ್ನ ಕೌಶಲ್ಯವನ್ನು ಯೋಗ್ಯ ರೀತಿಯಿಂದ ತೋರಿಸಬೇಕಾದರೆ ಹುಡು ಗರ ಸಂಬಂಧವಾದ ಜ್ಞಾನವು ಅವನಿಗೆ ಪೂರಾ ಇರಬೇಕಾಗುವದು. ಮಾನಸಿಕ ವ್ಯಾಪಾರಕ್ಕೂ ಶಿಕ್ಷಣಕ್ಕೂ ಹೆಚ್ಚು ಸಂಬಂಧವಿರುತ್ತದೆ. ಮಾನಸಿಕ ವ್ಯಾಪಾರ ವನ್ನು ಗೊತ್ತು ಹಿಡಿಯುವದು ಒಂದು ಪ್ರತ್ಯೇಕ ಶಾಸ್ತ್ರವಾಗಿರುತ್ತದೆ. ಅದೆ ಮಾನಸಶಾಸ್ತ್ರವು. ದೊಡ್ಡವರ ಮಾನಸಿಕ ವ್ಯಾಪಾರಕ್ಕಿಂತ ಸಣ್ಣ ಮಕ್ಕ ಮನಸ್ಸಿನ ವ್ಯಾಪಾರವು ಸ್ವಲ್ಪ ಬೇರೆಯಾಗಿರುತ್ತದೆ. ಇದರಿಂದ ಬಾಲ ಮಾನ ಶಾಸ್ತ್ರವು ಸಾಮಾನ್ಯ ಮಾನಸಶಾಸ್ತ್ರದ ಒಂದು ಭಾಗವೆಂದು ಗೊತ್ತಾಗುತ್ತದ ಆದುದರಿಂದ ಶಿಕ್ಷಕನು ಬಾಲಮಾನಸಶಾಸ್ತ್ರವನ್ನು ಅರಿತಿರುವದು ಅವಶ್ಯ

ಬಾಲ ಮಾನಸ-ಶಾಸ್ತ್ರವೆಂಬ ದೊಡ್ಡ ಹೆಸರನ್ನು ಕೇಳಿ ಶಿಕ್ಷಕರು ಭಂ ಪಡುವ ಕಾರಣವಿಲ್ಲ. ಅದೊಂದು ಅಕಾಶದಿಂದ ಕಡಕೊಂಡು ಬಿದ್ದ ಚಮತ ರಿಕವಾದ ಅಪರಿಚಿತ ಸಂಗತಿಯಲ್ಲ. ನಮ್ಮ ಸುತ್ತುಮುತ್ತು ಯಾವಾಗಲ ತಿರುಗುವ ಹುಡುಗರ ವಿಷಯವಾಗಿಯೂ ಅವರ ಸ್ವಭಾವದ ವಿಷಯವಾಗಿಯ ಸೂಕ್ಷ್ಮವಾಗಿ ನಿರೀಕ್ಷಣ ಮಾಡಿ ಅವುಗಳಿಂದ ಗೊತ್ತು ಹಿಡಿದ ಸಾಮಾ ಸಿದ್ಧಾಂತಗಳ ಸಮೂಹವೇ ಮಾನಸಶಾಸ್ತ್ರವಾಗಿರುವದು.

ಯಾವದೊಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಮಕ್ಕಳು ಒಂದು ಗೊತ್ತಾ ರೀತಿಯಿಂದ ನಡೆಯುವರು. ಇದೇ ರೀತಿಯಾಗಿ ಅನೇಕಾನೇಕ ಪರಿಸ್ಥಿತಿಗಳ ಸೂಕ್ಷ್ಮವಾಗಿ ನಿರೀಕ್ಷಣ ಮಾಡಿ ಮಕ್ಕಳ ವರ್ತನಗಳ ಅಭ್ಯಾಸ ಮಾಡಿ ಅ ರಿಂದ ಕೆಲವು ಸಾಮಾನ್ಯ ಸಿದ್ಧಾಂತಗಳನ್ನು ಕಂಡುಹಿಡಿಯುವದಿರುತ್ತದೆ. ಸಿದ್ಧಾಂತಗಳು ಎಲ್ಲ ದೇಶದ ಎಲ್ಲ ಹುಡುಗರಿಗೂ ಸಾಮಾನ್ಯವಾಗಿ ಸಂಬಂಧಿಸಿ ತ್ತವೆ. ಮಕ್ಕಳ ಈ ವರ್ತನ ಕ್ರಮಗಳು ಅವರ ವಯಸ್ಸಿನ ಪ್ರಮಾಣದಿಂ ಹೆಚ್ಚುಕಡಿಮೆಯಾಗುತ್ತ ಹೋಗುತ್ತವೆ. ಸಾಮಾನ್ಯವಾಗಿ ಎಲ್ಲ ದೇಶಗಳ ಸ ವಯಸ್ಸಿನ ಮಕ್ಕಳ ಮನೋರಚನೆಗಳು ಒಂದೇ ತರವಾಗಿರುವವು. ಪ್ರತಿಯೊಂ ಶಿಶುವು ಒಂದು ಪ್ರಾಣಿ ಇರುವದು. ಹೀಗೆಂದುತಿಳಿದು ಮಾಡಿದ, ಮಕ್ಕ ಮನಸ್ಸಿನ ಅಭ್ಯಾಸವು ಜಗತ್ತಿನ ಎಲ್ಲ ದೇಶಗಳ ಮಕ್ಕಳಿಗೆ ಸರಿಯಾಗಿ ಸಂಬಂಧಿ ರುತ್ತದೆ. ಮಗುವು ಒಂದು ಪ್ರಾಣಿ ಇರುವಂತೆ ಒಂದು ವ್ಯಕ್ತಿಯಾದರ ಇರುತ್ತದೆ. ಆದುದರಿಂದ ಒಂದು ವ್ಯಕ್ತಿಯು ಮತ್ತೊಂದು ವ್ಯಕ್ತಿಗಿಂತ ಯಾ ವಿಷಯದಲ್ಲಾದರೂ ಸ್ವಲ್ಪವಾದರೂ ಭಿನ್ನವಾಗಿರಲಿಕ್ಕೆ ಬೇಕು. ಯಾಕಂದ

‘ಎಷ್ಟು ವ್ಯಕ್ತಿಗಳೋ ಅಷ್ಟು ಪ್ರಕೃತಿಗಳು, ಎಷ್ಟು ಪ್ರಕೃತಿಗಳೋ ಅಷ್ಟು
ಸ್ವಭಾವಗಳು.” ಎಂಬ ಉಕ್ತಿಯು ಸರ್ವಸಾಮಾನ್ಯವಾಗಿದೆ. ಹೀಗೆಂದು
ಗೊತ್ತಾದ ಮೇಲೆ ಶಿಕ್ಷಕನಿಗೆ ಮಗುವು ಪ್ರಾಣಿ ಎಂದೂ ಹಾಗೂ ವ್ಯಕ್ತಿ ಎಂದೂ
ಗೊತ್ತಾಗುತ್ತದೆ. ಮಾನಸಶಾಸ್ತ್ರದ ಅಭ್ಯಾಸವು ಮಗುವು ಪ್ರಾಣಿ ಇರುವದೆಂದು
ಗೊತ್ತುಮಾಡಿಕೊಡುವದು. ಇದಕ್ಕಾಗಿ ಮಾನಸ ಶಾಸ್ತ್ರದ ಅಭ್ಯಾಸವು ಶಿಕ್ಷಕ
ನಿಗೆ ಅವಶ್ಯವು. ಮಗುವು ಪ್ರಾಣಿ ಇರುವದು, ನಿರ್ಜೀವ ಪದಾರ್ಥವಲ್ಲ. ಈ
ಸಂಗತಿಯನ್ನು ಶಿಕ್ಷಕನು ತನ್ನ ಕಣ್ಣುಮುಂದೆ ಇಟ್ಟುಕೊಳ್ಳಲಿಕ್ಕೆ ಬೇಕು.
ಆ ಮೇಲೆ ಈ ಪ್ರಾಣಿಯು ಕೀಟಕವಲ್ಲ, ಪಶುವಲ್ಲ, ಮನುಷ್ಯ ಪ್ರಾಣಿಯಾಗಿರು
ವದು. ಮತ್ತು ತನ್ನಂತೆಯೇ ಇದಾದರೂ ಒಂದು ಜಾತಿಯ ಪ್ರಾಣಿಯು.
ಇದಕ್ಕಾದರೂ ತನ್ನಂತೆಯೇ ಒಂದು ಆತ್ಮವಿರುವದು; ಮಗುವಿಗಾದರೂ ತನ್ನ
ಹಾಗೆಯೇ ಸುಖ ದುಃಖಗಳ ಭಾವನೆಯಾಗುವದು; ಹಾಗೂ ಅವಾದರೂ ನಮ್ಮಂ
ತೆಯೇ ದಣಿಯುವದು; ಅದಕ್ಕಾದರೂ ನಮ್ಮ ಹಾಗೆ ಯಾವದೊಂದು ಸಂಗತಿಯ
ಮೇಲೆ ಪ್ರೀತಿ ಅಪ್ರೀತಿಗಳಿರುವವು; ಅದಕ್ಕಾದರೂ ಬೇಸರ ಬರುವದು. ಇತ್ಯಾದಿ
ಸಂಗತಿಗಳ ಜ್ಞಾನವು ಶಿಕ್ಷಕನಿಗೆ ಆಗಲಿಕ್ಕೆ ಬೇಕು. ಇತ್ಯಾದಿ ಸರ್ವಸಾಮಾನ್ಯ
ಮನುಷ್ಯರಂತೆಯೇ ಮಗುವಿನ ಸ್ವಭಾವವಿರುವದು. ಆದರೆ ಮಗುವು ಮನುಷ್ಯ
ತ್ವದ ಮೂಲವಾದರೂ ಅದೊಂದು ವ್ಯಕ್ತಿಯಾಗಿರುವದು. ಅದನ್ನು ನಾವು
ರಾಮ, ಗೋವಿಂದ ಇತ್ಯಾದಿ ಹೆಸರುಗಳಿಂದ ಗೊತ್ತು ಹಿಡಿಯುತ್ತೇವೆ. ರಾಮನಿಗೆ
ಗೋವಿಂದನೆನ್ನುವದಿಲ್ಲ; ಗೋವಿಂದನನ್ನು ಮತ್ತೊಂದು ಹೆಸರಿನಿಂದ ಕರೆಯುವ
ದಿಲ್ಲ. ರಾಮನು ಒಂದು ಸಂಗತಿಯನ್ನು ಮಾಡಿದರೆ ಅದನ್ನು, ಗೋವಿಂದನಾದರೆ
ಹೀಗೆ ಮಾಡುತ್ತಿದ್ದಿಲ್ಲವೆಂದು ನಾವು ಅನ್ನುತ್ತಿರುವೆವು. ಪ್ರತ್ಯೇಕ ವ್ಯಕ್ತಿಯಲ್ಲಿ
ವ್ಯಕ್ತಿತ್ವವೆಂಬುದೊಂದು ಅದರ ಸಂಗಡಲೇ ಇರುತ್ತದೆ. ಒಬ್ಬನ ವ್ಯಕ್ತಿತ್ವವು
ಮತ್ತೊಬ್ಬನಲ್ಲಿ ಎಂದೂ ಇರುವದಿಲ್ಲ. ಒಂದು ದೇಶದ ಒಂದು ಜಾತಿಯ ಒಂದು
ಸಮಾಜದ ವಿಷಯವಾಗಿ ವಿಚಾರಮಾಡಿದರೆ ಪ್ರತಿಯೊಬ್ಬರಲ್ಲಿ ವ್ಯಕ್ತಿತ್ವವು ಬೇರೆ
ಬೇರೆಯಾಗಿ ಕಂಡುಬರುವದು. ಅಂದ ಮೇಲೆ ವ್ಯಕ್ತಿತ್ವವೆಂದರೇನೆಂಬದನ್ನು ನಾವು
ಗುಂಪುಹಿಡಿಯುವದು ಅವಶ್ಯವು. ವ್ಯಕ್ತಿತ್ವದ ಮೇಲಿಂದ ಒಬ್ಬನು ಮತ್ತೊಬ್ಬ
ನಿಂದ ಬೇರೆಯೆಂದು ನಿಶ್ಚಯಿಸಲಿಕ್ಕೆ ಬರುತ್ತದೆ. ಕೇವಲ ಮಾನಸಶಾಸ್ತ್ರದಿಂದಲೇ
ಈ ಸಂಗತಿಯು ಗೊತ್ತಾಗುವದಿಲ್ಲ. ಶಿಕ್ಷಕನು ಪ್ರತ್ಯೇಕ ವ್ಯಕ್ತಿಯ ಅಭ್ಯಾಸ
ಮಾಡಿ ಈ ಸಂಗತಿಯನ್ನು ಗೊತ್ತುಮಾಡಿಕೊಳ್ಳಲಿಕ್ಕೆಬೇಕು. ನಿಜವಾಗಿ ಇದರ

ಲ್ಲಿಯೇ ಅವನ ಕೌಶಲ್ಯವಿರುತ್ತದೆ. ಈ ಕೌಶಲ್ಯದ ಜ್ಞಾನದ ಪ್ರಮಾಣದಿಂದಲೇ ಅವನ ಕೆಲಸಮಾಡುವ ಯೋಗ್ಯತೆಯು ಪ್ರಮಾಣವು ನಿಶ್ಚಯಿಸಲ್ಪಡುತ್ತದೆ.

ಶಾಲೆಗೆ ಮಕ್ಕಳು ಬರುವ ಪೂರ್ವದಲ್ಲಿ ತಮ್ಮಲ್ಲಿ ಅನೇಕಸಂಗತಿಗಳನ್ನು ಸಂಗ್ರಹಿಸಿಕೊಂಡು ಬರುತ್ತಾರೆ. ಅಂದರೆ ಆಗ ಅವರ ಮನಸ್ಸು ಬಿಳೀಕಾಗದದಂತೆ ಸ್ವಚ್ಛವಾಗಿರುವದಿಲ್ಲ. ಆದ್ದರಿಂದ ಶಿಕ್ಷಕನು ತಾನು ತಿಳಿದ ಸಂಗತಿಗಳನ್ನು ಅವರ ಮನಸ್ಸಿನ ಮೇಲೆ ಪೂರ್ಣವಾಗಿ ಬಿಂಬಿಸಲು ಸಮರ್ಥನಾಗಲಾರನು. ಕೂಸು ಜನ್ಮಿಸಿದ ಬಳಿಕ ತನ್ನ ಮಾತಾಪಿತೃಗಳಿಂದ ಆನುವಂಶಿಕ ಸಂಗತಿಗಳನ್ನೆಷ್ಟೋ ಸಂಗ್ರಹಿಸಿಕೊಂಡಿರುತ್ತದೆ. ಇದಲ್ಲದೆ ಮನುಷ್ಯನೆಂದಾಗಲಿ ಸಾಮಾನ್ಯ ಪ್ರಾಣಿಯೆಂದಾಗಲಿ ಎಷ್ಟೋ ನೈಸರ್ಗಿಕ ಗುಣಗಳು ತಾನಾಗಿ ಸೇರಿಕೊಂಡಿರುತ್ತವೆ. ಹೀಗಾಗಿ ಆನುವಂಶಿಕ ಗುಣ, ಮತ್ತು ಸಹಜಪ್ರವೃತ್ತಿ ಇವು ಹುಟ್ಟನಿಂದಲೂ ಕೂಸಿನಲ್ಲಿ ಸೇರಿಕೊಂಡಿರುತ್ತವೆ. ಬಳಿಕ ಪರಿಸ್ಥಿತಿಯಿಂದ ಎಷ್ಟೋ ಪರಿಣಾಮಗಳು ಮಗುವಿನ ಮೇಲೆ ಆಗುತ್ತವೆ. ಆ ಮೇಲೆ ಮಗುವು ಶಾಲೆಗೆ ಬರಲಿ-ಬಾರದಿರಲಿ, ಆನುವಂಶಿಕ ಗುಣ, ಸಹಜಪ್ರವೃತ್ತಿ, ಹಾಗೂ ಸಾಮಾಜಿಕ ಪರಿಸ್ಥಿತಿ ಇವುಗಳಿಂದ ಬಾಲಕನ ಶಿಕ್ಷಣವು ತನ್ನಷ್ಟಕ್ಕೆ ತಾನೇ ಬೆಳೆಯುತ್ತ ಹೋಗುತ್ತದೆ. ಆದರೆ ಅದಕ್ಕೆ ಓದುಬರೆಹ ಇನ್ನೂ ಬರುತ್ತಿರುವದೇ ಇಲ್ಲ. ಓದುಬರೆಹದ ಶಿಕ್ಷಣವು, ಜಗತ್ತಿನಲ್ಲಿ ಸರ್ವಸಾಮಾನ್ಯವಾಗಿ ಸಹಜವಾಗಿ ದೊರೆಯುತಕ್ಕ ಶಿಕ್ಷಣದ ತೀರ ಸಣ್ಣಭಾಗವಾಗಿರುತ್ತದೆ. ಸರ್ವಸಾಮಾನ್ಯವಾದ ಜಗತ್ತಿನ ಪರಿಸ್ಥಿತಿಯಿಂದ ದೊರೆಯುವ ಶಿಕ್ಷಣವು ಮನುಷ್ಯನಿಗೆ ಆ ಜನ್ಮವಾಗಿ ದೊರೆಯುತ್ತಲೇ ಇರುವದು. ಸಾವಿರಾರು ಜನರು ಇಷ್ಟೇ ಶಿಕ್ಷಣದಿಂದ ತಮ್ಮ ಪ್ರತಿನಿತ್ಯದ ವ್ಯವಹಾರಗಳನ್ನು ಸಾಗಿಸುತ್ತಲಿರುವರು. ತೀರ ಸ್ವಲ್ಪ ಜನರಿಗೆ ಶಾಲೆಯಲ್ಲಿಯ ಶಿಕ್ಷಣವು ಲಭಿಸುತ್ತದೆ. ಮಗುವು ಸಮಾಜದಲ್ಲಿ ಜನ್ಮಿಸಿ ಅಲ್ಲೇ ಬೆಳೆದು ಅಲ್ಲಿಯೇ ತನ್ನ ನಿರಂತರದ ವ್ಯವಹಾರಗಳನ್ನು ಸಾಗಿಸುತ್ತಿರುತ್ತದೆ. ಶಾಲೆಯು ಸಮಾಜದ ತೀರ ಸಣ್ಣ ಭಾಗವಾಗಿರುತ್ತದೆ. ಸಮಾಜದಲ್ಲಿಯ ಎಷ್ಟೋ ವ್ಯವಹಾರಗಳು ಶಾಲೆಯ ವಾತಾವರಣದಲ್ಲಿ ಸಣ್ಣ ಪ್ರಮಾಣದಿಂದ ನಡೆಯುತ ಇರುತ್ತವೆ. ಸಮಾಜದಲ್ಲಿಯ ದಿನಾಲು ಬರುವ ವ್ಯವಹಾರಗಳ ಅನುಭವಗಳು ಸ್ವಪ್ರಯತ್ನದಿಂದ ಬಾಲ್ಯ ತಾರುಣ್ಯಾವಸ್ಥೆಗಳಲ್ಲೆಲ್ಲ ಪೂರೈಸದಷ್ಟು ವಿಸ್ತಾರವಾಗಿರುತ್ತವೆ, ಹಾಗೂ ಅಸಂಖ್ಯಾತವಾಗಿರುತ್ತವೆ. ಈ ಕಾರಣದ ದೆಸೆಯಿಂದಲೇ ಆವ

ಕವಿದ್ದಷ್ಟೇ ಅನುಭವಗಳನ್ನು ಒತ್ತಟ್ಟಿಗೆ ಕೂಡಿಸಿ ಪುಸ್ತಕ ರೂಪದಿಂದ ಶಾಲೆ ುಲ್ಲಿ ಕಲಿಸುತ್ತಾರೆ. ಯಾಕೆಂದರೆ ಮಗುವು ಆದಷ್ಟು ಲಗು ಸಮಾಜದಲ್ಲಿ ಯೋಗ್ಯ ರೀತಿಯಿಂದ ಸೇರಿಕೊಳ್ಳಲಿಕ್ಕೆ ತಕ್ಕದ್ದಾಗಬೇಕೆಂದೂ ಮುಂದೆ ಸ್ಥಿರ ಾಗಿರಲಿಕ್ಕೆ ಸಮರ್ಥವಾಗಬೇಕೆಂದೂ ಶಾಲೆಯು ಹಾಗೂ ಶಿಕ್ಷಕರ ಪ್ರಯತ್ನ ರುತ್ತದೆಂದು ಹೇಳಿದಂತಾಯಿತು. ಅಂದರೆ ಸಮಾಜದ ಪ್ರತಿಬಿಂಬವೇ ಯೋಗ್ಯ ಪ್ರಮಾಣದಿಂದ ಶಾಲೆಯ ವಾತಾವರಣದಲ್ಲಿ ಕಾಣಿಸಲಿಕ್ಕೆ ಬೇಕು. ಸಮಾಜದ ಧ್ಯೇಯವೆಂದೇ ಶಾಲೆಯು ತನ್ನ ಇದುರಿಗೆ ಕೆಲವು ಧ್ಯೇಯಗಳನ್ನು ಇಟ್ಟುಕೊಂಡಿ ುತ್ತದೆ. ಆದರೆ ಈ ಧ್ಯೇಯಗಳಿಗೂ ಪ್ರತಿನಿತ್ಯದ ಪ್ರತ್ಯಕ್ಷ ಸಮಾಜದಲ್ಲಿಯ ಧ್ಯೇಯಗಳಿಗೂ ಕಣ್ಣಿಗೆ ಕಾಣಿಸುವಷ್ಟು ಅಭ್ಯಂತರವಿರಕೂಡದು. ಹಾಗೆ ಹೆಚ್ಚು ಕಡಿಮೆಯಾದದ್ದೇ ಆದರೆ ಶಿಕ್ಷಣಕ್ಕೆ ಕೃತ್ರಿಮತ್ವವು ಪ್ರಾಪ್ತವಾಗುತ್ತದೆ. ಹೀಗಾ ದರೆ ಶಾಲೆಯಿಂದ ಹೊರಬಿದ್ದ ಕೂಡಲೆ ಹುಡುಗರು ವ್ಯವಹಾರದಲ್ಲಿ ಸೇರಲು ಶಕ್ತಿ ಸಾಲದಂತೆ ಆಗುತ್ತಾರೆ. ಹೀಗಾಗುವದರಿಂದಲೇ ಶಿಕ್ಷಣ ತಜ್ಞರಿಗೆ ಶಾಲೆ ಸಮಾಜಗಳನ್ನು ಏಕರೂಪವಾಗುವಂತೆ ಹೊಂದಿಸಿ ಸಾಗಿಸುವದು ಒಳ್ಳೇ ಕಠಿಣ ಪ್ರಸಂಗವಾಗುವದು.

ಇದರಿಂದ ಶಾಲೆಗೆ ಮಗುವು ಬಂದ ಕೂಡಲೆ ಮಗುವಿನ ಮನಸ್ಸಿನ ಹಾಗು ಮಗುವಿನ ಪರಿಸ್ಥಿತಿಯ ಅನುಭವಗಳನ್ನು ತಿಳಿದುಕೊಳ್ಳುವದೇ ಶಿಕ್ಷಕನ ಕೆಲಸವಾಗಿರುವದು, ಆಗ ಮಗುವಿನ ಅಭ್ಯಾಸ ಸಾಗಿಸುವದು ಇಷ್ಟೇ ಎಂದು ಹೇಳಬಹುದು. ಬರಿ, ಮಗುವನ್ನು ವರ್ಗದಲ್ಲಿ ಸೇರಿಸಿಕೊಂಡು ಹಾಜರಿ ತೆಗೆದುಕೊಂಡ ಮಾತ್ರಕ್ಕೆ ಶಿಕ್ಷಕನ ಕೆಲಸವಾಯಿತೆಂದಲ್ಲ; ತನ್ನ ಎದುರಿಗೆ ಕುಳಿತ ಪ್ರತಿಯೊಬ್ಬ ಹುಡುಗನು ಶಿಕ್ಷಣಕ್ಕೆ ಎಷ್ಟು ಮಟ್ಟಿಗೆ ಯೋಗ್ಯನಾಗಿರುತ್ತಾನೆಂಬದನ್ನು ತಿಳಿದುಕೊಳ್ಳುವದೇ ಶಿಕ್ಷಕನ ಆರಂಭದ ಕೆಲಸವಾಗಿರುತ್ತದೆ. ಈ ಕೆಲಸವು ಒಮ್ಮೆಲೆ ಮಾಡಲಿಕ್ಕೆ ಆಗದೆ ಕ್ರಮಕ್ರಮದಿಂದ ಆಗತಕ್ಕದ್ದಿರುತ್ತದೆ. ಆಗ ಶಿಕ್ಷಕನಿಗೆ ಮಗುವಿನ ಸಹಜ ಪ್ರವೃತ್ತಿಯು ಮಾನಸಶಾಸ್ತ್ರದ ಅಭ್ಯಾಸದಿಂದ ಗೊತ್ತಾಗುತ್ತದೆ; ಮಗುವಿನ ಆನುವಂಶಿಕ ಗುಣಗಳು ಅವನ ಕುಟುಂಬದ ನಿರೀಕ್ಷಣದಿಂದ ಅಥವಾ ಐತಿಹ್ಯದಿಂದ ತಿಳಿಯುತ್ತವೆ. ಪರಿಸ್ಥಿತಿಯ ಬಗ್ಗೆ ಪ್ರತ್ಯಕ್ಷ ವಿಚಾರಿಸಿಯಾಗಲಿ ಅಥವಾ ಪರೀಕ್ಷಿಸುವಿಕೆಯಿಂದಾಗಲಿ ಗೊತ್ತಾಗುತ್ತದೆ. ಮಗುವಿನ ವರ್ತನವು ಅವನ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಬಾಲಕನು

ಹೀಗೆ ಯಾಕೆ ನಡೆಯುತ್ತಾನೆ, ಹಾಗೆ ಯಾಕೆ ನಡೆಯುವದಿಲ್ಲ, ಎಂಬದರ ಕಾರಣವು ಅವನ ಪರಿಸ್ಥಿತಿಯ ಅಭ್ಯಾಸದಿಂದ ತಿಳಿಯುತ್ತದೆ. ಈ ಅಭ್ಯಾಸಕ್ಕಾಗಿ ಪ್ರತ್ಯೇಕ ವೇಳೆಯನ್ನೂ ಶ್ರಮವನ್ನೂ ಕಳೆಯುವ ಕಾರಣವಿಲ್ಲ. ಶಾಲೆಯ ಪ್ರತಿನಿತ್ಯದ ಕೆಲಸ ನಡೆದಾಗ ಈ ಸಂಗತಿಯನ್ನು ಕಂಡು ಹಿಡಿಯಲಿಕ್ಕೆ ಬರುತ್ತದೆ. ಈ ಮಾಹಿತಿಯ ಮಹತ್ವವೂ ಇದರಿಂದ ಶಿಕ್ಷಣಕ್ಕಾಗುವ ಉಪಯೋಗವೂ ಶಿಕ್ಷಕನಿಗೆ ಹೊಳೆಯಲಿಕ್ಕೆ ಬೇಕು. ಇಷ್ಟೆಲ್ಲ ವಿವರಣೆಯಿಂದ ಶಿಕ್ಷಕನಿಗೆ ಈ ಸಂಗತಿಗಳು ಗೊತ್ತಾಗುವವೆಂದು ಅಲ್ಲೆಯಡೆ. ಮಗುವು ಮನೆಯ ವಾತಾವರಣದಲ್ಲಿಯೂ ಆಟದ ಸ್ಥಳದಲ್ಲಿಯೂ ಸಿನೇಮಾ ಇಲ್ಲವೆ ನಾಟಕ ಗೃಹಗಳಲ್ಲಿಯೂ ಆಪ್ತೇಷ್ಟರಲ್ಲಿಯೂ ಸಾರಾಂಶ ಅದು ಯಾವದೇ ಪರಿಸ್ಥಿತಿಯಲ್ಲಿ ಇದ್ದಾಗಲೂ ಒಂದಿಲ್ಲ ಒಂದು ಹೊಸ ಹೊಸ ಸಂಗತಿಯನ್ನು ಕಲಿಯುತ್ತಲೇ ಇರುವದು. ಈ ಬಗೆಯಾಗಿ ದೊರೆಯುವ ಶಿಕ್ಷಣವು ಸಮಾಜಕ್ಕೂ ಶಾಲೆಗೂ ಮನೆಗೂ ಪೋಷಕವೇ ಇರುತ್ತದೆಂದು ತಿಳಿಯಕೂಡದು. ಬಹಳವಾಗಿ ವಿರೋಧಕವಾಗಿಯೂ ವಿಘಾತಕವಾಗಿಯೂ ಇರಬಹುದು. ಮಗುವಿನ ಇಷ್ಟೆಲ್ಲ ಸಂಗತಿಗಳನ್ನು ತಿಳಿದುಕೊಳ್ಳುವದು ಶಿಕ್ಷಕನ ಕೆಲಸಕ್ಕೆ ಅನುಕೂಲದಾಯಕವಾಗಿರುವದು. ಇದಲ್ಲದೆ ಮಗುವಿನ ಈ ಪ್ರಕಾರದ ಅನೇಕ ಮಾಹಿತಿಗಳ ಸಂಗ್ರಹದಿಂದ ಶಿಕ್ಷಕನ ಉದ್ಯೋಗವು ಮನೋರಂಜಕವಾಗುವದು.

ಎಲ್ಲ ಪ್ರಾಣಿಗಳಿಗೂ ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳು ನಿಸರ್ಗಸಿದ್ಧವಾಗಿರುವಂತೆ ಮನುಷ್ಯ ಪ್ರಾಣಿಗೂ ಇರುತ್ತವೆ. ಆದರೆ ಮನುಷ್ಯನಿಗೆ 'ಬುದ್ಧಿ' ಎಂಬದೊಂದು ಅಮೌಲ್ಯ ರತ್ನವು ಹೆಚ್ಚಾಗಿರುವದು. ಅದರ ಬಲದಿಂದ ಅವನು ಪೃಥ್ವಿಯ ಮೇಲಣ ಎಲ್ಲ ಪ್ರಾಣಿಗಳ ಒಡೆತನ ನಡೆಯಿಸಲು ಶಕ್ತನಾಗಿದ್ದಾನೆ. ಮನುಷ್ಯನು ಮಗುವಾಗಿದ್ದಾಗ ಇರುವ ಸ್ವಾಭಾವಿಕ ಬುದ್ಧಿಯನ್ನು ಬೆಳೆಯಿಸಿ ಅದನ್ನು ವಿಕಾಸಗೊಳಿಸುವದು ಶಿಕ್ಷಕನ ಮಹತ್ವದ ಕಾರ್ಯವಾಗಿರುತ್ತದೆ. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಸಾಹಾಯ್ಯದಿಂದ ಅನೇಕ ವಿಷಯಗಳ ಜ್ಞಾನವನ್ನು ಸಂಗ್ರಹಿಸುತ್ತಾನೆ. ಈ ರೀತಿಯಾದ ವಿಷಯ ಜ್ಞಾನವು ಹೆಚ್ಚುತ್ತ ನಡೆದಂತೆ ಮನುಷ್ಯನ ಬುದ್ಧಿಯು, ಮನಸ್ಸಿನ ವಿಕಾಸವಾಗುತ್ತದೆ. ಮೇಲೆ ಹೇಳಿದ ಜ್ಞಾನೇಂದ್ರಿಯ-ಕರ್ಮೇಂದ್ರಿಯ-ಜನ್ಯ-ಜ್ಞಾನವು ಯಾವ ಪ್ರಮಾಣದಂತೆ ನಿಶ್ಚಿತವಾದದ್ದೂ, ಸ್ಥಿರವಾದದ್ದೂ, ವಿಸ್ತೃತವಾದದ್ದೂ, ವಿವಿಧವಾದದ್ದೂ ಆಗುವದೋ

ಅದೇ ಪ್ರಮಾಣಕ್ಕನುಸರಿಸಿ ಬುದ್ಧಿಯು ವಿಕಾಸವಾಗುವದು. ಇಂದ್ರಿಯಜನ್ಯ ಜ್ಞಾನ ಸಂಗ್ರಹದ ಬಲದಿಂದ ಮಾನವನು ಬೇರೆ ಬೇರೆ ಕಲ್ಪನೆಗಳನ್ನು ಮಾಡಲು ಸಮರ್ಥನಾಗುತ್ತಾನೆ; ಶೋಧ ಮಾಡಲು ಅರ್ಹನಾಗುತ್ತಾನೆ; ನವೀನ ವಿಚಾರಗಳನ್ನು ಮುಂದಿಸುತ್ತಾನೆ. ಇಷ್ಟು ಸಿದ್ಧತೆಯಾದ ಬಳಿಕ ಬುದ್ಧಿಯು ವಿಕಾಸವಾಯಿತೆಂದೆನ್ನಲು ಬಾಧಕವಿಲ್ಲ. ಉದಾಹರಣಾರ್ಥವಾಗಿ ಉತ್ತಮ ಖಾದ್ಯವನ್ನು ಸಿದ್ಧಮಾಡುವ ಮೊದಲು ಅದಕ್ಕೆ ಬೇಕಾಗುವ ಪದಾರ್ಥಗಳಿದ್ದು ಅವುಗಳನ್ನು ಯೋಗ್ಯ ಪ್ರಮಾಣದಿಂದ ಮಿಶ್ರ ಮಾಡಿ ಪಾಕವನ್ನು ಸಿದ್ಧಪಡಿಸುವವರ ಯೋಜನೆಯಾಗಿ ಬಿಟ್ಟರೆ ಜ್ಞಾನಸಂಗ್ರಹವಾದಂತಾಯಿತು. ಬಳಿಕ ಆಗುವ ಪಾಕಸಿದ್ಧತೆಯು ಬುದ್ಧಿಯ ವಿಕಾಸವಾದಂತಾಯಿತು. ಜಗತ್ತಿನಲ್ಲಿಯಾಗಲಿ ಪುಸ್ತಕದಲ್ಲಿಯಾಗಲಿ ಇದ್ದ ಮಾಹಿತಿಯನ್ನು ಒಟ್ಟುಗೂಡಿಸಿದ ಮಾತ್ರಕ್ಕೆ ಪ್ರತ್ಯಕ್ಷ ಲಾಭವೇನೂ ಇಲ್ಲ. ಅದರಿಂದ ಸಮಾಜಕ್ಕಾಗಲಿ ದೇಶಕ್ಕಾಗಲಿ ಪೋಷಕ ವಿಚಾರಗಳು ಅವನಲ್ಲಿ ಉಂಟಾಗಲಿಕ್ಕೆ ಬೇಕು. ಅದರಂತೆ ಶಿಕ್ಷಣದಿಂದ ನಮ್ಮ ಆಚಾರವಿಚಾರಗಳಲ್ಲಿಯಾಗಲಿ ಸ್ಥಿತಿಗತಿಗಳಲ್ಲಿಯಾಗಲಿ ಆದ ಸುಧಾರಣೆಯು ಒಡೆದು ಕಾಣಲಿಕ್ಕೆ ಬೇಕು. ಬರೇ ಪದವಿಗಳಿಂದಾಗಲಿ ಬಾಹ್ಯಾಡಂಬರಗಳಿಂದಾಗಲಿ ಶಿಕ್ಷಿತನ ಶಿಕ್ಷಣದ ಬೆಲೆಯು ತಿಳಿಯಲಾರದು. ಅವನ ಆಚಾರ ವಿಚಾರ ನಡೆನಳಿಗಳ ಸುಧಾರಣೆಯಿಂದ ಶಿಕ್ಷಣದ ಬೆಲೆಯು ತಾನಾಗಿ ಪ್ರಕಟವಾಗುವದು. ಆದುದರಿಂದ ಶಿಕ್ಷಕನು ವಿದ್ಯಾರ್ಥಿಗಳಿಗೆ ಯಾವದೊಂದು ವಿಷಯವನ್ನಾಗಲಿ ಪುಸ್ತಕದಲ್ಲಿಯ ಕೆಲವು ಅಧ್ಯಾಯಗಳನ್ನಾಗಲಿ ಅಥವಾ ಪುಟಗಳನ್ನಾಗಲಿ ಕಲಿಸಿದೆನೆಂದು ಸಮಾಧಾನಪಡಲಾಗದು. ನನ್ನ ತಿದ್ದುವಿಕೆಯಿಂದ ಈ ಹುಡುಗನ ಆಚಾರವಿಚಾರ ನಡೆನಳಿಗಳಲ್ಲಿ ಇಂತಿಷ್ಟು ಸುಧಾರಣೆಯಾಯಿತು, ಇಲ್ಲವೆ ಇಂಥಿಂಥ ವ್ಯವಹಾರಗಳನ್ನು ತಿಳಿದು ಸಮಾಜದಲ್ಲಿರಲು ಯೋಗ್ಯನಾದನು ಎಂದು ನೋಡಲಿಕ್ಕೆ ಬೇಕು. ಅಂದರೆ ಕಲಿತ ವಿಷಯವು ಉಚ್ಚಾರ ಮಾತ್ರವಾಗದೆ ಅದು ಮನಸ್ಸಿನಲ್ಲಿ ಸೇರಿ, ಅವನ ಆಚಾರವಿಚಾರ ನಡೆನಳಿಗಳ ಸುಧಾರಣೆಗಳೊಡನೆ ಪ್ರಕಟವಾಗಲಿಕ್ಕೆ ಬೇಕು. ಶಾಲೆಯಲ್ಲಿ ಹುಡುಗರು ಇತಿಹಾಸ, ಭೂಗೋಲ, ಆರೋಗ್ಯಶಾಸ್ತ್ರ ಇತ್ಯಾದಿ ಅನೇಕ ವಿಷಯಗಳನ್ನು ಕಲಿಯುತ್ತಾರೆ. ಇಷ್ಟೆಲ್ಲ ಕಲಿಯೋಣವು ಯಾತಕ್ಕಾಗಿ? ಇವುಗಳ ವಾಚನದಿಂದ ವ್ಯವಹಾರಕ್ಕಾಗುವ ಉಪಯೋಗವೇನು? ವಿಚಾರ ಮಾಡಿ ನೋಡಿದರೆ ಇವೆಲ್ಲವುಗಳ ಅಭ್ಯಾಸದಿಂದ ವ್ಯವಹಾರಕ್ಕೆ ಆಗತಕ್ಕಷ್ಟು ಉಪಯೋಗವು ಪ್ರತ್ಯಕ್ಷವಾಗಿ ಆಗುವದಿಲ್ಲ.

(ಮುಂದುವರಿಯುವುದು.)

ಪತ್ರಗಳ ಸಾರಾಂಶ

ಬಾಗಲಕೋಟೆ, ಜಿಲ್ಲಾ ವಿಜಾಪೂರ ಇಲ್ಲಿಯ ಓರ್ಗ ಸ್ಕೌಟ–ಮಿ. ಜಾಲಗೇರಿ– ಇವರು ಬರೆದದ್ದು:— ತಾ॥ ೯–೧೨-೧೯೩೫ ನೆಯ ದಿವಸ ಕನ್ನಡ ೧ನೆಯ ನಂಬರ ಗಂಡುಮಕ್ಕಳ ಶಾಲೆಯಲ್ಲಿ ಬಾಗಲಕೋಟೆ, ಬಾಯ ಸ್ಕೌಟ ಲೋಕಲ್ ಅಸೋಶಿಯೇಶನ್ನದ ವಾರ್ಷಿಕ ಜನರಲ್ ಕಮೀಟಿಯು ಶ್ರೀ. ಎಚ್. ಎಫ್. ಕಟ್ಟೀಮನಿ, ಬಿ. ಎ., ಪ್ರಿನ್ಸಿಪಾಲ ಬಸವೇಶ್ವರ ಹಾಯಸ್ಕೂಲ ಇವರ ಅಧ್ಯಕ್ಷತೆಯ ಕೆಳಗೆ ಕೂಡಿತ್ತು. ಬಾಗಲಕೋಟೆ ಸ್ಕೂಲ್‌ಬೋರ್ಡ ಆಡ್‌ಮಿನಿಸ್ಟ್ರೇಟಿವ್ಹ ಆಫಿಸರರೂ ಮತ್ತು ಸ್ಕೌಟ ಅಸೋಶಿಯೇಶನ್ನದ ಸೆಕ್ರೆಟರಿಗಳೂ ಆದ ಶ್ರೀ. ಕ. ಸಿ. ದೇವೂರ, ಬಿ. ಎಸ್. ಸಿ ಇವರು ಹಿಂದಿನ ವರ್ಷದಲ್ಲಿ ಆದ ಸ್ಕೌಟ ಚಟುವಟಿಕೆಗಳನ್ನೆಲ್ಲ ನಿವೇದಿಸಿದರು. ಹೋದ ನವಂಬರ ತಿಂಗಳಲ್ಲಿ ಕದಾಂಪೂರ ಕ್ಯಾಂಪಿನಲ್ಲಿ ಸ್ಕೂಲ್‌ಬೋರ್ಡ ವತಿಯಿಂದ ಸ್ಕೌಟ ಮಾಸ್ತರರ ಟ್ರೇನಿಂಗ ಕ್ಲಾಸು ತೆಗೆದಂದಿನಿಂದ ಬಾಗಲಕೋಟೆಯಲ್ಲಿ ಸ್ಕೌಟ ಚಟುವಟಿಕೆಗಳು ಒಳ್ಳೇ ಜೋರಿನಿಂದ ನಡೆದಿರುವವು. ಶ್ರೀ. ದೇವೂರ ಇವರು ಸೆಕ್ರೆಟರಿಗಳಾದಂದಿನಿಂದ ಬಾಗಲಕೋಟೆಯಲ್ಲಿ ಸ್ಕೌಟ ಚಳವಳಿಗಳ ಪುನರುಜ್ಜೀವನವಾದಂತಾಗಿ ಎಲ್ಲ ಪ್ರಾ. ಶಾ. ಗಳಲ್ಲಿಯೂ ಇಂಗ್ಲಿಷ ಶಾಲೆಗಳಲ್ಲಿಯೂ ಸ್ಕೌಟ ಹುಡುಗರ ಸಂಖ್ಯೆಯು ಹೆಚ್ಚುತ್ತ ನಡೆದಿರುವದು.

ಮುಂದಿನ ವರ್ಷದ ಬಾಬತು ಚೇರಮನ್ನರಾಗಿ ಆರಿಸಲ್ಪಟ್ಟ ಶ್ರೀಮಂತ ಶಂಕರದಾಸ ದರ್ಬಾರ ಇವರು ಒಳ್ಳೇ ಉತ್ಸಾಹಿಗಳೂ ವಿದ್ಯಾರ್ಥಿಗಳ ಸ್ಕೌಟ ಆಟಗಳಲ್ಲಿ ವಿಶೇಷ ಮನಸ್ಸುಳ್ಳವರೂ ಇರುವರು. ಇವರು ಈಗಾಗಲೇ ಪ್ರಾ. ಶಾ. ಗಳಲ್ಲಿಯ ಒಂದು ಸ್ಕೌಟ ಟ್ರೂಪಿಗೆ ಕೆಲವು ಲೇಝೀಮುಗಳನ್ನು ಕೊಟ್ಟಿರುವರು. ಇವರ ಈ ಉದಾರತನದ ಸಹಾಯಕ್ಕಾಗಿ ನಾವು ಇವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಗಂಡುಹುಡುಗರ ವ್ಹ. ಫಾಯಿನಲ್ ಪರೀಕ್ಷೆ ೧೯೩೬
ದಕ್ಷಿಣ ಭಾಗ

ಗಂಡುಹುಡುಗರ ವ್ಹರನ್ಯಾಕ್ಯುಲರ್ ಫಾಯಿನಲ್ ಪರೀಕ್ಷೆಯು ಈ ವರ್ಷ ಕೆಳಗೆ ಕಾಣಿಸಿದ ಸೆಂಟರುಗಳಲ್ಲಿ ಸೋಮವಾರ ೬ನೆಯ ಎಪ್ರಿಲ ೧೯೩೬ನೆಯ ಇಸವಿಯ ದಿನ ಹಾಗು ಮುಂದಿನ ದಿನಗಳಲ್ಲಿ ನಡೆಯುವದು.

೧. ಧಾರವಾಡ. ೨. ಗದಗ. ೩. ಬೆಳಗಾವ. ೪. ಚಿಕ್ಕೋಡಿ ೫. ವಿಜಾಪುರ. ೬. ಕಾರವಾರ. ೭. ಕೊಲ್ಹಾಪೂರ. ೮. ಹುಬ್ಬಳ್ಳಿ. (ಧಾರವಾಡ ಜಿಲ್ಹೆಯ ಉರ್ದು ಉಮೇದವಾರರಿಗಾಗಿ)

೨. ಆಯಾ ಊರಲ್ಲಿ ಒಂದೊಂದು ಪರೀಕ್ಷಾ ಕಮೀಟಿಯವರು ಪರೀಕ್ಷೆಯನ್ನು ತೆಗೆದುಕೊಳ್ಳುವರು. ಆಯಾ ಕಮೀಟಿಯ ಪ್ರೆಸಿಡೆಂಟರು ಕೆಳಗೆ ಕಾಣಿಸಿದಂತೆ ಇರುವರು.

ಧಾರವಾಡ. ಹೆಡ್‌ಮಾಸ್ತರ ಗವರ್ನಮೆಂಟ ಹೈಸ್ಕೂಲ ಧಾರವಾಡ.

ಗದಗ. ಸೀನಿಯರ ಅಸಿ॥ ಡೆಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಧಾರವಾಡ.

ಬೆಳಗಾವ. ಹೆಡ್‌ಮಾಸ್ತರ ಸರದಾರ ಹೈಸ್ಕೂಲ ಬೆಳಗಾವ.

ಚಿಕ್ಕೋಡಿ. ಸೀನಿಯರ ಅಸಿ॥ ಡೆಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಬೆಳಗಾವ.

ವಿಜಾಪೂರ. ಹೆಡ್‌ಮಾಸ್ತರ ಗವರ್ನಮೆಂಟ ಹೈಸ್ಕೂಲ ವಿಜಾಪೂರ.

ಕಾರವಾರ. ಹೆಡ್‌ಮಾಸ್ತರ ಗವರ್ನಮೆಂಟ ಹೈಸ್ಕೂಲ ಕಾರವಾರ.

ಕೊಲ್ಹಾಪೂರ. ಕೊಲ್ಹಾಪೂರ ಸಂಸ್ಥಾನದ ಎಜ್ಯುಕೇಶನಲ್ ಇನಸ್ಪೆಕ್ಟರರವರು.

ಹುಬ್ಬಳ್ಳಿ. ಹೆಡ್‌ಮಾಸ್ತರ ಆಂಗ್ಲೋ ಉರ್ದು ಹೈಸ್ಕೂಲ ಹುಬ್ಬಳ್ಳಿ.

೩. ಉಮೇದವಾರರು ಪರೀಕ್ಷೆಗೆ ಕೂಡಬಿಚ್ಛಿಸುವ ಸ್ಥಳದ ಪರೀಕ್ಷಾಕಮೀಟಿಯ ಪ್ರೆಸಿಡೆಂಟರ ಕಡೆಗೆ ತಾ. ೧-೩-೩೬ನೇ ದಿವಸ ಅಥವಾ ಅದಕ್ಕೂ ಮೊದಲು ಮುಟ್ಟುವಂತೆ ಪರೀಕ್ಷೆಗೆ ಕೂಡಲಿಕ್ಕೆ ಪರವಾನಿಗೆಯ ಬಗ್ಗೆ ಛಾಪಿಯ ನಮೂನೆಯು

+ (ಈ ವರುಷ ಗದಗ ಹಾಗು ಚಿಕ್ಕೋಡಿ ಇವು ಹೊಸ ಸೆಂಟರುಗಳು ಆಗಿರುವೆಂಬದನ್ನು ವಾಚಕರು ಲಕ್ಷ್ಯಗೊಟ್ಟು ನೋಡಿಕೊಳ್ಳತಕ್ಕದ್ದು.— ಎ. ಶ್ರಾ. ಶಿ.).

ಮೇಲೆ ಅರ್ಜಿಯನ್ನು ಕಳಿಸತಕ್ಕದ್ದು. ತಾ. ೧-೩-೩೬ ರ ಬಳಿಕ ಬಂದ ಅರ್ಜಿಗಳನ್ನು ಹಿಡಿಯಲಾಗದು. ದೇಶೀಯ ಸಂಸ್ಥಾನಗಳಿಂದ ಯಾವದೊಂದು ಬ್ರಿಟಿಷ್ ಜಿಲ್ಹೆಯಲ್ಲಿ ಪರೀಕ್ಷೆಗೆ ಕೂಡುವ ಉಮೇದವಾರರು ಆಯಾ ಸಂಸ್ಥಾನದ ವಿದ್ಯಾಖಾತೆಯ ಯೋಗ್ಯ ಅಧಿಕಾರಸ್ಥರ ಮುಖಾಂತರವಾಗಿ ಅರ್ಜಿ ಕಳಿಸತಕ್ಕದ್ದು. ಪ್ರತಿಯೊಂದು ಅರ್ಜಿಯಲ್ಲಿ ಉಮೇದವಾರನ ಪೂರ್ಣ ಹೆಸರು ಹಾಗು (ಆತನು ಯಾವದೊಂದು ಸಾಲೆಯಿಂದ ಪರೀಕ್ಷೆಗೆ ಬಂದಿದ್ದರೆ ಆ) ಸಾಲೆಯ ಹೆಸರು ಇರಲಿಕ್ಕೆಬೇಕು. ಅರ್ಜಿಯ ಸಂಗಡ ೩ ರೂ. ಪರೀಕ್ಷೆಯ ಫೀ ಸಹ ಮುಟ್ಟಬೇಕು. ಪೂರ್ಣ ಮಾಹಿತಿ ಇಲ್ಲದ ಅರ್ಜಿಯನ್ನೂ, ಫೀ ತುಂಬದ ಇದ್ದ ಅರ್ಜಿಯನ್ನೂ, ಅರ್ಜಿಯಿಲ್ಲದೆ ಕಳಿಸಿದ ಫೀ ಹಣವನ್ನೂ ಹಿಡಿಯಲಾಗದು.

೪. ಉಮೇದವಾರರ ವಯಸ್ಸು ತಾ॥ ೧-೪-೩೬ಕ್ಕೆ ೨೫ ವರುಷ ಮಿಕ್ಕಿರಬಾರದು; ಹಾಗು ಹಿಂದಿನ ಆರುತಿಂಗಳವರೆಗೆ ತಾವು ಯಾವ ಜಿಲ್ಹೆಯಲ್ಲಿ ಪರೀಕ್ಷೆಗೆ ಕೂಡ್ರಲು ಇಚ್ಛಿಸುವರೋ ಆ ಜಿಲ್ಹೆಯಲ್ಲೇ ಅವರು ವಾಸವಾಗಿರಬೇಕು. ಆ ಜಿಲ್ಹೆಯಲ್ಲಿ ವಾಸವಾಗಿದ್ದ ಬಗ್ಗೆ ಉಮೇದವಾರರು ಯಾವದೊಂದು ರಿಕಗ್ನಾಯಿಝ್ಡ ಶಾಲೆಯ ಮಾಸ್ತರರ ಸರ್ಟಿಫಿಕೇಟು ಹಾಜರ ಮಾಡಬೇಕು. ಎಂದೂ ಸಾಲೆಗೆ ಹೋಗದಿದ್ದ ಉಮೇದವಾರರು ಲೋಕಲ್‌ಬೋರ್ಡಿನ ಇಲ್ಲವೆ ಮ್ಯುನಿಸಿಪಾಲಿಟಿಯ ಶಿಕ್ಷಕರ ಡಿರೆಕ್ಟರಿಯಲ್ಲಿ ಹೆಸರು ಬಂದಿರುವಂಥ ಒಬ್ಬ ಶಾಲೆಯ ಮಾಸ್ತರನ ಇಲ್ಲವೆ ಪಾಟೀಲರಿಗಿಂತ ಕಡಿಮೆ ದರ್ಜೆಯಿಲ್ಲದ ಯಾವನೊಬ್ಬ ಸರಕಾರದ ನವಕರನ ಅಂದರೆ ಈ ಬಗೆಯ ಮಹನೀಯರಾದ ಗೃಹಸ್ಥರ ಸರ್ಟಿಫಿಕೇಟನ್ನು ಹಾಜರಮಾಡಬೇಕು.

ಅರ್ಜಿಯ ನಮೂನೆಗಳು ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರ ಕಡೆಗೆ ಇರುವವು. ಬೇಕಾದವರು ತರಿಸಿಕೊಳ್ಳಬಹುದು. ಇವಕ್ಕೆ ರೊಕ್ಕ ಕೊಡಬೇಕಾಗುವದಿಲ್ಲ.

೫. ಧಾರವಾಡ ಹಾಗು ಕಾನಡಾ ಜಿಲ್ಹೆಗಳ ದೇಶಭಾಷೆಯು ಕನ್ನಡವೆಂದು ತಿಳಿಯಲಾಗಿದೆ; ಬಿಜಾಪುರ ಹಾಗು ಬೆಳಗಾವ ಜಿಲ್ಹೆಗಳ ದೇಶಬಾಷೆಯು ಕನ್ನಡ ಹಾಗು ಮರಾಠಿ; ಕೊಲ್ಹಾಪುರದ್ದು ಮರಾಠಿ.

ಧಾರವಾಡ ಹಾಗು ಕಾನಡಾ ಜಿಲ್ಹೆಗಳಿಂದ ಮರಾಠಿ ಭಾಷೆಯಲ್ಲಿ ಪರೀಕ್ಷೆಗೆ ಕೂಡುವ ಉಮೇದವಾರರು ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಗೆ ಕೂಡಬೇಕಾಗುವದು.

ಈ ಪರೀಕ್ಷೆಗೆ ನೇಮಿಸಿದ ಪುಸ್ತಕಗಳನ್ನು ಮುಂಬಯಿ ಸರಕಾರದ ೨೯-೧೧-೩೪ರ ಗ್ಯಾಝೆಟ್ಟಿನ ೨ನೆಯ ಭಾಗದ ೨೪೪೫ನೆಯ ಪುಟದಲ್ಲಿ ಈ ಮೊದಲೇ ಪ್ರಸಿದ್ಧಿಸಲಾಗಿದೆ.

ಕಾನಡಾ ಜಿಲ್ಹೆಯ ಹಳ್ಯಾಳ ತಾಲೂಕಿನ ಹಾಗು ಸಿರಸಿ ತಾಲೂಕಿನ ಬನವಾಸಿ ಊರ ಉಮೇದವಾರರು ಧಾರವಾಡ ಸೆಂಟರಿನಲ್ಲಿಯೂ ಸಾಂಗಲಿ ಸಂಸ್ಥಾನದ ಕೂಚಿ

ತಾಲೂಕಿನವರು ಸಾತಾರೆ ಸೆಂಟರಿನಲ್ಲಿಯೂ ಪರೀಕ್ಷೆಗೆ ಕೂಡಬಹುದು. ಔಂಧ ಸಂಸ್ಥಾನದ ಗುಂಡಲ್ ತಾಲೂಕಿನವರು ಬಿಜಾಪುರ ಸೆಂಟರಿನಲ್ಲಿ ಕೂಡಬಹುದು.

೬. ಅಗ್ರಿಕಲ್ಚರದ ಬಾಯಸ್ (ಶೇತಕೀ ವಿಷಯುಗಳನ್ನು ಒಳಕೊಂಡ) ಪ್ಲ. ಫಾ. ಪರೀಕ್ಷೆಯು ಧಾರವಾಡ, ಬಿಜಾಪುರ, ಬೆಳಗಾವ ಹಾಗು ಕಾರವಾರ ಈ ಸೆಂಟರುಗಳಲ್ಲಿ ಮಾತ್ರ ಇವೇ ತಾರೀಖುಗಳ ದಿವಸ ನಡೆಯುವದು. ಈ ಪರೀಕ್ಷೆಗೆ ಕೂಡಲಿಚ್ಛಿಸುವ ಉಮೇದವಾರರು ಪರೀಕ್ಷೆಯ ಅರ್ಜಿಯ ಸಂಗಡ ತಾವು ಅಗ್ರಿಕಲ್ಚರ ಬಾಯಸ್ ಅಭ್ಯಾಸದ ಮೂರುವರ್ಷದ ಅಭ್ಯಾಸಕ್ರಮವನ್ನು ಮುಗಿಸಿರುವ ಬಗ್ಗೆ ಸರಟಿಫಿಕೇಟು ಕಳಿಸತಕ್ಕದ್ದು.

ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದ. ಧಾ.
ಇವರ ಆಫೀಸು ೨೦-೧೨-೩೫.

ಸೈಯದ ನೂರುಲ್ಲಾ
ಎ. ಇ. ದ. ಭಾ.

ಹೆಣ್ಣುಮಕ್ಕಳ ಪ್ಲ. ಫಾಯಿನಲ್ ಪರೀಕ್ಷೆ ೧೯೩೬ ದಕ್ಷಿಣಭಾಗ

ಈ ಪರೀಕ್ಷೆಯು ಈ ವರ್ಷ ಕೆಳಗೆ ಕಾಣಿಸಿದ ಸೆಂಟರುಗಳಲ್ಲಿ ಮಂಗಳವಾರ ೧೦ನೆಯ ಮಾರ್ಚ ೧೯೩೬ನೆಯ ಇಸವಿಯ ದಿನ ಹಾಗು ಮುಂದಿನ ದಿನಗಳಲ್ಲಿ ನಡೆಯುವದು. (ಶುಕ್ರವಾರ ತಾ. ೧೩-೩-೩೬ ಈ ದಿವಸ ರಂಗಪಂಚಮಿಯ ಹಿಂದೂ ಹಬ್ಬವಿರುವ ಮೂಲಕ ಪರೀಕ್ಷೆ ನಡೆಯುದು).

೧. ಧಾರವಾಡ. ೨. ಹುಬ್ಬಳ್ಳಿ. ೩. ಗದಗು. ೪. ಬೆಳಗಾವ. ೫. ಬಿಜಾಪುರ. ೬. ಕಾರವಾರ. ೭. ಕೊಲ್ಹಾಪುರ.

೨. ಪ್ರತಿಯೊಂದು ಸೆಂಟರಿನಲ್ಲಿ ಒಂದು ಪರೀಕ್ಷೆಯ ಕಮಿಟಿಯವರು ಪರೀಕ್ಷೆಯನ್ನು ನಡೆಸುವರು. ಆಯಾ ಕಮಿಟಿಗಳ ಚೇರಮನ್ನರು ಕೆಳಗೆ ಕಾಣಿಸಿದಂತೆ ಇರುವರು.

ಧಾರವಾಡ. ಮೆ॥ ಲೇಡೀ ಸುಪರಿಂಟೆಂಡೆಂಟರು ಟ್ರೇನಿಂಗ ಕಾಲೇಜ ಫಾರ ವುಮೆನ್, ಧಾರವಾಡ.

ಹುಬ್ಬಳಿ. ಮೆ॥ ಹೆಡ್‌ಮಾಸ್ತರ ಆಂಗ್ಲೋ ಉರ್ದು ಹಾಯಸ್ಕೂಲು ಹುಬ್ಬಳ್ಳಿ.

ಗದಗು. ಮೆ॥ ಸೀನಿಯರ ಅಸಿಸ್ಟಂಟ ಡೆಪ್ಯುಟಿ ಎಜ್ಯುಕೇಶನಲ ಇನ್ಸಪೆಕ್ಟರ, ಧಾರವಾಡ.

ಬೆಳಗಾವ. ಮೆ॥ ಹೆಡ್‌ಮಾಸ್ತರ, ಸರದಾರ್ಸ ಹಾಯಸ್ಕೂಲು, ಬೆಳಗಾವ.

ಬಿಜಾಪುರ. ಮೆ॥ ಹೆಡ್‌ಮಾಸ್ತರ, ಗವ್ಹರ್ನಮೆಂಟ ಹಾಯಸ್ಕೂಲು, ಬಿಜಾಪುರ.

ಕಾರವಾರ. ಮೆ॥ ಹೆಡ್‌ಮಾಸ್ತರ, ಗವ್ಹರ್ನಮೆಂಟ ಹಾಯಸ್ಕೂಲು, ಕಾರವಾರ.

ಕೊಲ್ಹಾಪುರ. ಮೆ॥ ಎಜ್ಯುಕೇಶನಲ್ ಇನ್ಸಪೆಕ್ಟರ, ಕೊಲ್ಹಾಪುರ.

೩. ಉಮೇದವಾರರು ಪರೀಕ್ಷೆಗೆ ಕೂಡಲಿಚ್ಛಿಸುವ ಸೆಂಟರಿನ ಪರೀಕ್ಷಾ ಕಮಿಟಿಯ ಚೇರಮನ್ನರಿಗೆ ತಾ॥ ೧-೨-೩೬ ನೇ ದಿವಸ ಅಥವಾ ಅದಕ್ಕೂ ಮೊದಲೇ ಮುಟ್ಟುವಂತೆ, ಮೂರು ರೂಪಾಯಿ ಪರೀಕ್ಷೆಯ ಫೀ ಹಣ ಸಹಿತವಾಗಿ ಪರವಾನಿಗೆಯ ಅರ್ಜಿಯನ್ನು ಕಳಿಸತಕ್ಕದ್ದು. ೧-೨-೩೬ರ ಬಳಿಕ ಬಂದ ಅರ್ಜಿಯನ್ನೂ ಫೀ ಹಣವನ್ನೂ ಸ್ವೀಕರಿಸಲಾಗದು. ಅರ್ಜಿಯ ಛಾಪಿಸಿದ ನಮೂನೆಗಳು ಪರೀಕ್ಷಾ ಕಮಿಟಿಯ ಚೇರಮನ್ನರ ಕಡೆಗೆ ಇರುವವು; ಬೇಕಾದವರು ತರಿಸಿಕೊಳ್ಳತಕ್ಕದ್ದು. ಇವಕ್ಕೆ ರೊಕ್ಕ ಕೊಡಬೇಕಾಗುವದಿಲ್ಲ. ಪರೀಕ್ಷೆಗೆ ಕೂಡಲಿಚ್ಛಿಸುವ ಬಗ್ಗೆ ಈ ಛಾಪಿಸಿದ ನಮೂನೆಯ ಮೇಲೆಯೇ ಅರ್ಜಿ ಕಳಿಸಬೇಕಾಗುವದು.

ಧಾರವಾಡ. ದ. ಭಾಗದ
ಎ. ಇ. ರ ಆಫೀಸು
೨೯-೧೧-೧೯೩೫.

ಸೈಯ್ಯದ ನೂರುಲ್ಲಾ,
ಎ. ಇ. ದ. ಭಾಗ.

ಮಿ. ವಿ. ಪಿ. ಪಡಿಯೂರರೂ ಅವರ ಟಾಯಿಪ್‌ರಾಯಿಟರವೂ.

ಮಿ. ಪಡಿಯೂರ ಇವರು ಕಾರವಾರ ಡಿ. ಬೋ. ನಲ್ಲಿ ಶಿಕ್ಷಕರಿರುವರು. ಅವರು ತವ್ಮ ಶಿಕ್ಷಕವೃತ್ತಿಯನ್ನು ಮಾಡುತ್ತ ಬಂದಿರುವರಲ್ಲದೆ ಕನ್ನಡದಲ್ಲಿ ೨ ಕಾದಂಬರಿಗಳನ್ನೂ ೪ ನೆಯ ಇಯತ್ತೆಯ ಉಪಯೋಗಕ್ಕಾಗಿ ಭೂಗೋಲ ಪುಸ್ತಕವನ್ನೂ ಕನ್ನಡ ೫ನೆಯ ಇಯತ್ತೆಯ ವರೆಗಿನ ನಾಲ್ಕು ಬಗೆಯ ಲೇಖನ ಪುಸ್ತಕಗಳನ್ನೂ ಬರೆದಿರುವರು. ಹಿಂದುಸ್ತಾನ ಇಂಗ್ಲಂಡದೇಶಗಳ ಇತಿಹಾಸ ಪುಸ್ತಕಗಳನ್ನೂ ಅಂಕಗಣಿತವನ್ನೂ ನಿಬಂಧರತ್ನಮಾಲೆಯೆಂಬ ಪುಸ್ತಕವನ್ನೂ ಬರೆದಿರುವರು. ಈ ಎಲ್ಲ ಗ್ರಂಥಗಳಿಗೂ ವಿದ್ವಜ್ಜನರ ಸದಭಿಪ್ರಾಯಗಳಿವೆ.

ಕನ್ನಡ ಟಾಯಿಪ ರಾಯಿಟರ.

ಇವರು ೬, ೭ ವರ್ಷ ಪ್ರಯತ್ನಪಟ್ಟು ಕನ್ನಡ ಟಾಯಿಪ್ ರಾಯಟರವನ್ನು ರಚಿಸಿದ್ದಾರೆ. ಇದರ ಯಾಂತ್ರಿಕ ರಚನೆಯು ನೂತನವಾಗಿದೆ. ಬರಿ ೯೦ ಲಿಪಿಗಳಲ್ಲಿಯೇ ಕನ್ನಡ ವಾಙ್ಮಯವು ಸಿದ್ಧವಾದದ್ದು ಸೋಜಿಗದ ಸಂಗತಿಯು. ಆಯಾ ಲಿಪಿಗಳು ಕೂಡಿ ಸ್ವರ, ವ್ಯಂಜನ, ಮೂಲಾಕ್ಷರ, ಕಾಗುಣಿತಾಕ್ಷರ, ಅಂಕೆ, ವಿರಾಮ ಚಿಹ್ನ ಇವೆಲ್ಲವೂ ಸಿದ್ಧವಾಗುವವು.

ಮೇಲಿನ ರಚನೆಯು ಕನ್ನಡಛಾಪಖಾನೆಗಳಿಗೂ ಒಳ್ಳೇ ಉಪಯುಕ್ತತೆಯುಳ್ಳದ್ದಾಗಿದೆ. ಮುದ್ರಣಾಲಯಕ್ಕೆ ೧೦ ಬಗೆಯ ಸೈಜಿನ ಲಿಪಿಗಳು ಬೇಕಾಗುವವು. ಪ್ರತಿಯೊಂದು ಸೈಜಿನ ಲಿಪಿಗಳಿಗೆ ಸುಮಾರು ೧೫೦ ಲಿಪಿಗಳ ಉಳಿತಾಯವಾಗುವದು. ಇದರಿಂದ ಒಟ್ಟಿಗೆ ಮುದ್ರಣಾಲಯಗಳಿಗೆ ಸಹ ಎಷ್ಟೋ ಪೌಂಡು ಟೈಪುಗಳ ವೆಚ್ಚವು ಉಳಿಯುವದು.

ಕನ್ನಡಿಗರ ಸಹಾನುಭೂತಿ:— ಮಿ. ಪಡಿಯಾರರ ನೂತನ ಟಾಯಿಪ ರಚನೆಯನ್ನು ನೋಡಿ ಕನ್ನಡಿಗರು ಇವರ ಕಾರ್ಯ ಸಿದ್ಧತೆಗಾಗಿ ಬಹಳ ಸಹಾನುಭೂತಿಯುಳ್ಳವರಾಗಿರುವರು.

ಈ ರಚನೆಯು ನೂತನವಾದದ್ದು; ನಿಜವಾಗಿ ಅಭಿನಂದನೀಯವಾಗಿದೆ. ಒಬ್ಬ ಶಿಕ್ಷಕರು ತಮ್ಮ ಬುದ್ಧಿಬಲದಿಂದಲೂ ಶ್ರಮಪೂರ್ವಕವಾಗಿಯೂ ರಚಿಸಿದ ಸಂಗತಿಯು ಎಲ್ಲ ಶಿಕ್ಷಕ ವರ್ಗಕ್ಕೂ ಅಭಿಮಾನಾಸ್ಪದವಾಗಿದೆ.

ಪ್ರಕಟನೆ

ಮಂಜೂರಾದ ಪುಸ್ತಕಗಳು

ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಉರ್ದು ಬುಕ್ ಕಮಿಟಿ ಮುಂಬಯಿ ಇವರು ತಾ॥ ೨೧—೯—೧೯೩೫ನೆಯ ದಿವಸ ಮಂಜೂರ ಮಾಡಿದ ಪುಸ್ತಕಗಳ ವಿವರ:— T ಟೆಕ್ಸ್ಟ ಬುಕ್ಕಾಗಿ, L ಲಾಯಬ್ರರಿ ಬುಕ್ಕಾಗಿ

ನಂ.	ಪುಸ್ತಕಗಳ ಹೆಸರು.	ಗ್ರಂ. ಕರ್ತರ ಹೆಸರು.	ಪ್ರಕಾಶಕರ ಇಲ್ಲವೆ ಪ್ರೆಸ್ಸಿನ ಹೆಸರು.	ಬೆಲೆ	ಯಾತಕ್ಕೋಸ್ಕರ ಮಂಜೂರ
೧	ಆಸಾನ ಜಮಾಖರ್ಚು ಭಾ ೧	ಮಿರ್ಝಾ ನಿಯಾಜಬೇಗ ಬಿ. ಎಜಿ ಎಸ್. ಟಿ. ಸಿ. ಡಿ.	ಇಲ್ಮಿಯಾ ಬುಕ್‌ಡಿಪೋ ಮುಂಬಯಿ	೦—೨—೬	ಪ್ರಾ. ಶಾ. ಗಳ T ಬುಕ್ಕಾಗಿ
೨	ಅಖಲಾಕುಲ್ ಕುರಾನ	ವಹಿದಾಖಾನಮ್ ಮತ್ತು ಮುಸ್ಲಿಮ್ ಸಾಹೇಬ	ಮಕ್ತಾಬ-ಎ-ಕುರಾನಿಯಾ ಬೆಂಗಳೂರು	೦—೬—೦	ಪ್ರಾ. ಶಾ. ವಿ. ಗಳ ಮತ್ತು ಶಿಕ್ಷಕರ L ಬುಕ್ಕಾಗಿ ಮಾತ್ರ
೩	ಸ್ವದೇಶಿ ಉರ್ದು	ಕಾಜಿ ಅಬ್ದುಸ್ ಸಮದ ಹೈದರಾಬಾದ ಡೆಕ್ಕನ್	ಮುಯಿನ್-ಎ-ಡೆಕ್ಕನ್ ಪ್ರೆ. ಹೈದರಾಬಾದ	೦—೪—೦	ಸದರ
೪	ಜರೂರಿ ಕಹಾಸಿಯಾನಿಯಾ	ಸದರ	ಸದರ	೦—೬—೦	ಸದರ
೫	ಸರ ಗುಜಿಸ್ತೆ ಅದಬೆ ತುರ್ಕಿ	ಸೈಯ್ಯದ ರಿಯಾಸತ್ ಅಲಿ ನಾದ್ವಿ	ಮಾರಿಫ್ ಪ್ರೆಸ್ ಅಜಂಗಡ	೦—೨—೦	ಸದರ
೬	ಹಿಸಾಬೇ ಮುಬ್ತದೀ	ಜೆ. ಸಿ. ಚಕ್ರವರ್ತಿ ಲೇಟ ಪ್ರೊ. ಮು. ಯುನಿವರ್ಸಿಟಿ ಅಲೀಗಡ	ಪಿ. ಸಿ. ದ್ವಾದಶ ಶ್ರೇಣಿ ಮತ್ತು ಕಂ. ಅಲೀಗಡ	೦—೩—೦	ಸದರ

೮ ರಿಂದ ೧೦	ಹಿಂದುಸ್ತಾನಿ ಕ್ವಾರಿ ನಂ॥ ೧–೨–೩–೪ ಇನ್ ಉರ್ದು	ಲಿ ಲಾಧರ ಗುಪ್ತ ಮತ್ತು ಝುಂಬಾಯಿಡ್ ಅಹ್ಮದ	ಸದರ	ನಂ. ೧ಕ್ಕೆ ೦-೩-೬ ೨ಕ್ಕೆ ೦-೪-೬ ೩-೪ಕ್ಕೆ ೦-೬-೦	ಸದರ
೧೧	ಲೋಅರ ಪ್ರಾಯಮರಿ ಅರಿಥ್ ಮೆಟಿಕ್ ಇನ್ ಉರ್ದು	ಚಂದ್ರಮೌಳಿ ಸುಕ್ಲಾ	ಸದರ	೦-೫-೦	ಸದರ
೧೨ ರಿಂದ ೧೪	ಮಾಡರ್ನ ಕಾಪಿ ಸ್ಲಿಫ್ಸ್ ಇನ್ ಉರ್ದು ನಂ. ೧–೨–೩	...	ಸದರ	ಪ್ರತಿ ಒಂದಕ್ಕೆ ೧ ಆಣೆ	ಕಾಪಿಬುಕ್ಕುಗಳ ಉಪಯೋಗಕ್ಕಾಗಿ.
೧೫ ರಿಂದ ೧೮	ತಾಲೀಮೆ ಖುಶ್ ಖಾತೀ ಕಾಪಿ ಬುಕ್ಸ ನಂ. ೧, ೨, ೩, ೪.	...	ಸದರ	ಪ್ರತಿ ಒಂದಕ್ಕೆ ೧ ಆಣೆ ೬ಪೈ	ಸದರ
೧೯ ರಿಂದ ೨೨	ಇಲ್ ಮುಲ್ ಹಿಸಾಬ ಭಾಗ ೧, ೨, ೩, ೪.	ಜೆ. ಸಿ. ಚಕ್ರವರ್ತಿ	ಸದರ	ಭಾ. ೧ ೦-೪-೦ ೨ ೦-೩-೦ ೩ ೪ } ೦-೪-೦	ಪ್ರಾ. ಶಾ. ಗಳ ವಿದ್ಯಾರ್ಥಿಗಳ ಹಾಗು ಶಿಕ್ಷಕರ L ಬುಕ್ಕಾಗಿ ಮಾತ್ರ
೨೩	ಅಪ್ಪರ ಪ್ರಾಯಮರಿ ಅರಿಥ ಮೆಟಿಕ್ ಇನ್ ಉರ್ದು	ಚಂದ್ರಮೌಳಿ ಶುಕ್ಲ	ಸದರ	೦-೧೦-೦	ಸದರ

ನಂ.	ಪುಸ್ತಕಗಳ ಹೆಸರು.	ಗ್ರಂ. ಕರ್ತರ ಹೆಸರು.	ಪ್ರಕಾಶಕರ ಇಲ್ಲವೆ ಪ್ರೆಸ್ಸಿನ ಹೆಸರು.	ಬೆಲೆ	ಯಾತಕ್ಕೋಸ್ಕರ ಮಂಜೂರ.
ಅ.					
೨೪	ಇಲ್ ಮುಲ್ ಹಿಸಾಬ (ಕ್ಲಾಥ ಬಾವುಂಡ ಗಿಲ್ಟ)	ಜೆ. ಸಿ, ಚಕ್ರವರ್ತಿ	ಸದರ	೧—೧೪—೦	ಶಿಕ್ಷಕ ಜನರ ಲಾಯಬ್ರರಿ ಬುಕ್ಕಾಗಿ ಮಾತ್ರ
೨೫	ಆಯೀನೆ ಮಜಾಮೀನ	...	ಸದರ	೦—೫—೦	ಸದರ
೨೬	ತರೀಖಯೆ ಕಹಾನಿಯಾಂ	ಶೇಖ ಅಬ್ದುರ್ರಶೀದ	ಸದರ	೧—೦—೦	ಸದರ
೨೭ ರಿಂದ ೨೮	ಜದೀದ ತಾರೀಖೆ ಹಿಂದ ಭಾಗ ೧, ೨.	ಸದರ	ಸದರ	೧ನೇ ಭಾ. ೧—೪—೦ ೨ನೇ ,, ೧—೦—೦	ಸದರ
೨೯ ರಿಂದ ೩೦	ಗರ್ಲ್ಸ ಲೋಅರ ಪ್ರಾಯ್ಮರಿ ಗರ್ಲ್ಸ ಅಪ್ಪರ ಪ್ರಾಯ್ಮರಿ ಅರಿಥ್‌ಮೆಟಿಕ್	...	ಪಿ. ಸಿ. ದ್ವಾದಶ್ರೇಣಿ ಮತ್ತು ಕಂ. ಅಲೀಗಡ.	೦—೫—೬ ೦—೬—೦	ಸದರ
೩೧ ರಿಂದ ೩೪	ಮು ಅಲ್ಲಿ ಮುಲ್ ಅತ್ಫಾಲ್ ಭಾಗ ೧, ೨, ೩, ೪.	ಹಾಫೀಜ ಜಲಾಲುದ್ದೀನ ಜಾಫ್ರಿ	ಜಾಫ್ರಿ ಬ್ರದರ್ಸ ಅಲಹಾಬಾದ	೪ ಆ. ೧, ೨ನೇ ಪಕ್ಕೆ ೫ ,, ೩ನೇ ,, ೬ ,, ೪ನೇ ,,	ಸದರ
೩೫	ಮು ಅಲ್ಲಿಮ್ ಅಸ್ ಸಾಲತ್	ಸದರ	ಸದರ	೦—೨—೦	ಪ್ರಾ. ಶಾ. ಗಳ ವಿ. ಗಳ ಶಿ. ರL ಬುಕ್ಕಾಗಿ ಮಾತ್ರ
೩೬	ಮ ಸಾಯಲ್ ಅಸ್ ಸಾಲತ್	ಸದರ	ಸದರ	೦—೨—೦	ಸದರ

೩೮	ಇಸ್ತೈಲಾಹಾತೆ ಜಾಗ್ರಫಿಯಾ ೨ ನೆಯ ಕ್ಲಾಸಿಗಾಗಿ	ಸದರ	ಸದರ	೦–೩–೦	ಸದರ
೩೯	ಶಾರ್ಟ ಹಿಸ್ಟ್ರೀ ಆಫ್ ದಿ ಇಂಡಿಯನ್ ಪೀಪಲ್ಸ	ತಾರಾಚಂದ	ಮ್ಯಾಕ್ಮಿಲನ್ ಆ್ಯಂಡ ಕಂ. ಬಾಂಬೆ	೨–೮–೦	T ಬುಕ್-ಹಾಯಸ್ಕೂಲುಗಳಿಗೂ ಟ್ರೇ. ಸ. ಗಳಿಗೂ

ಬಾಂಬೆ,

೧೧–೧೨–೩೫

ಪರ್ಸನಲ್ ಅ. ಎ. ಇ ಬಿ,ಡಿ ಹಾಗು
ಸೆಕ್ರೆಟರಿ ಉರ್ದು ಸ್ಕೂಲ ಬುಕ್ ಕಮಿಟಿ ಬಾಂಬೆ

ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

೧.	ಹಿಂದುಸ್ಥಾನ ಭೂಗೋಲ ಮಗದಾಳಕೃತ	೦– ೮
೨.	ಏಶಿಯಾ ,, ,,	೦– ೮
೩.	ನಾಡಿಗೇರ ಭೂಗೋಲ ಸಂಗ್ರಹ	೦–೧೨
೪.	ಧಾರವಾಡ ಜಿಲ್ಲೆ ಭೂಗೋಲ (ಯಜ್ಞೇಶ್ವರ ಅಣ್ಣೀಗೇರಿಕೃತ)	೦– ೪
೫.	ಧಾರವಾಡ ಜಿಲ್ಲೆಯ ವರ್ಣನೆ (ಕುರಡಿಕೃತ) (ನಕಾಶಗಳಿವೆ)	೦– ೫
೬.	ವಿಜಾಪೂರ ಜಿಲ್ಲೆಯ ವರ್ಣನೆ	೦– ೧
೭.	ಒಕ್ಕಲತನದ ಸಾಂಪತ್ತಿಕ ಸ್ಥಿತಿ	೬– ೦
೮.	ಗರ್ಭಿಣೀ ಶಿಶುಸಂಗೋಪನ	೦–೧೨
೯.	ಸುಲಭ ವ್ಯಾಕರಣ	೦– ೬
೧೦.	ಮುಂಬಯಿ ಕರ್ನಾಟಕದ ಸಂಕ್ಷಿಪ್ತ ವರ್ಣನೆ	೦– ೬

ಈ ಎಲ್ಲ ಪುಸ್ತಕಗಳಿಗೂ ಯೋಗ್ಯ ಕಮೀಶನ್ ದೊರೆಯುವದು. ಪತ್ರದ್ವಾರದಿಂದಾಗಲಿ ಸಮಕ್ಷಮವಾಗಲಿ ತಿಳಿದುಕೊಳ್ಳಬೇಕು.

ಪತ್ತೆ:—ವಿ. ಆರ್. ಶಿವನಾಗಪ್ಪಾ ವಾಗ್ವಿಲಾಸ
ಬುಕ್‌ಡಿಪೋ ಹುಬ್ಬಳ್ಳಿ

ವಿಶೇಷ ಸೂಚನೆ—

ಪ್ರಾಥಮಿಕ ಶಿಕ್ಷಣದ ಪೋಸ್ಟಲ್ ರಜಿಸ್ಟರ ನಂಬರವನ್ನು ಹೊಸದಾಗಿ ಪಡೆದುಕೊಳ್ಳುವ ಪತ್ರವ್ಯವಹಾರವು ಇನ್ನೂ ನಡೆದಿರುವ ಮೂಲಕ ಪ್ರಾ. ಶಿ. ದ ಸಂಚಿಕೆಗಳನ್ನು ಬುಕ್‌ಪೋಸ್ಟದ್ವಾರದಿಂದ ಹೆಚ್ಚು ವೆಚ್ಚ ಸಹಿಸಿ ಕಳಿಸಬೇಕಾಯಿತೆಂಬದನ್ನು ವಾಚಕರು ಲಕ್ಷ್ಯಕ್ಕೆ ತಂದುಕೊಳ್ಳಬೇಕೆಂದು ಬಿನ್ನಹ.

ಸಂ. ಪ್ರಾ. ಶಿ.

Printed by K. R. Bhise at the Karnatak printing Works, Dharwar
and Published by V. N. Magdal, B. A., Head Master,
Training School, Dharwar, at his Office.

ಫೆಬ್ರುವರಿ–೧೯೩೬ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamik Shikshana

ಸಂಪಾದಕರು

ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ವಿಷಯಾನುಕ್ರಮಣಿಕೆಯು

ಜಾರ್ಜ ಬಾದಶಹರು . . . .

ಹಿಂದುಸ್ತಾನದಲ್ಲಿಯ ಶಿಕ್ಷಣ ೧

ಪಾಲಕರ ದಿನದ ರಿಪೋರ್ಟ ೧೩

ನೇಕನಾಮದಾರ ಗವ್ಹರ್ನರ ಸಾಹೇಬರವರು ಕಳಿಸಿದ . . .
ಹೊಸ ವರ್ಷದ ಸಂದೇಶವು ೨೦

ಮಾನಸಶಾಸ್ತ್ರ ಸಂಬಂಧವಾದ ಕೆಲವು ವಿಚಾರಗಳು . . ೨೨

ಪ್ರಕಟನೆಗಳು ೩೦

ಮಾರಾಟಕ್ಕೆ ಸಿದ್ಧವಿದೆ
ಗಣಿತ ಶಿಕ್ಷಕ

ಬ. ದು. ಹಿರೇಮಠ ಕೃತ

೩ನೆಯ ಆವೃತ್ತಿ

ಶಿಕ್ಷಕ ಬಾಂಧವರೇ, ಈ ಪುಸ್ತಕವು ಕನ್ನಡ ೫–೬–೭ ನೆಯ ಇಯತ್ತೆಗಳ ಮತ್ತು ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಮತ್ತು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಅಭ್ಯಾಸಕ್ರಮಕ್ಕನುಸರಿಸಿ ರಚಿಸಲ್ಪಟ್ಟಿದೆ. ಇದರ ಮಹತ್ವವನ್ನು ವರ್ಣಿಸಲವಶ್ಯವಿಲ್ಲ. ಕರ್ನಾಟಕದ ಎಲ್ಲ ಜನರಿಂದಲೂ ಆದರವನ್ನು ಹೊಂದಿರುವದು. ಆದುದರಿಂದಲೇ ಸ್ವಲ್ಪದಿವಸಗಳಲ್ಲಿಯೇ ಇದು **ಮೂರನೆಯ ಆವೃತ್ತಿ**ಯನ್ನು ಪಡೆದಿರುವದು. ಒಂದು ಪ್ರತಿಯನ್ನಾದರೂ ತರಿಸಿ ನೋಡಿದರೆ ಅದರ ಯೋಗ್ಯತೆಯು ತಮಗೂ ತಿಳಿಯುವದು.

ವ್ಯಾಪಾರಸ್ಥರಿಗೂ ಶಿಕ್ಷರಿಗೂ ಯೋಗ್ಯ ಸವಲತು ದೊರೆಯುವದು. ಪುಸ್ತಕಗಳು ಏ. ಆರ್. ಶಿವನಾಗಪ್ಪ ಹುಬ್ಬಳ್ಳಿ ಇವರಲ್ಲಿಯೂ ಎಲ್ಲ ಊರುಗಳ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ಬಸಪ್ರಭಯ್ಯ ದುಂಡಯ್ಯ ಹಿರೇಮಠ,
ಕನ್ನಡ ಶಾಲಾಮಾಸ್ತರ ವಿಜಾಪೂರ.

ಕನ್ನಡ ೭ನೇ ಇಯತ್ತೆಗಾಗಿ

ಪಠ್ಯಪುಸ್ತಕವೆಂದು ಕಮೀಟಿಯಿಂದ ಮಂಜೂರಾದ

ಕರ್ನಾಟಕ ಇತಿಹಾಸ ಬೋಧಿನಿ

ಹೊಸ ಚಿತ್ರಗಳು] **[ಹೊಸ ಮನೋರಂಜಕ ವಿಷಯ**

ಪ್ರೊ. ಸಾಸನೂರರವರ ಮುನ್ನುಡಿಯುಳ್ಳದ್ದು

ಶಿಕ್ಷಕರೆಲ್ಲರು ಓದಿ ವಿದ್ಯಾರ್ಥಿಗಳಿಗೆ ಕಲಿಸಲು ಯೋಗ್ಯವಾದ ಪುಸ್ತಕ.

ಪ್ರಾಚೀನ ಶಿಲಾಶಾಸನ ತಾಮ್ರಪಟಗಳನ್ನು ಶೋಧಿಸಿ ಇತಿಹಾಸಜ್ಞರು ಮಾಹಿತಿಯನ್ನು ಸಂಗ್ರಹಿಸಿ ಮನೋರಂಜಕವಾಗಿಯೂ ಸ್ಫೂರ್ತಿದಾಯಕವಾಗಿಯೂ ಈ ಪುಸ್ತಕ ಬರೆದಿದ್ದಾರೆ. ಚಾಲುಕ್ಯರ ಪುಲಕೇಶಿ, ಅಕ್ಕಣ್ಣ ಮಾದಣ್ಣರ ಕೊಲೆ, ಕೆಳದಿ, ಬೀಳಗಿ, ಕೊಡಗು, ಸ್ವಾದಿ, ಅರಸರ ಹಾಗು ಶಿರಸಂಗಿ ದೇಸಾಯಿಯರ ವಿಷಯಗಳೆಲ್ಲ ಇದರಲ್ಲಿ ಅವೆ. ಭಾಷೆ ಸುಲಭ. ವಿಷಯ ಮನೋಹರ. ಈ ಪುಸ್ತಕದ ಬಗ್ಗೆ ವಿದ್ವಜ್ಜನರ ಸದಭಿಪ್ರಾಯಗಳಿವೆ. ಬೆಲೆ ಎಂಟೇ ಆಣೆ. ಈ ಪುಸ್ತಕವು ಎಲ್ಲ ಬುಕ್‌ಸೆಲರಲ್ಲಿ ಹಾಗು ಕೆಳಗಿನ ಪತ್ತೆಯಲ್ಲಿಯೂ ದೊರೆಯುತ್ತವೆ. ಯೋಗ್ಯ ಕಮಿಶನ್ ಪತ್ರವ್ಯವಹಾರದಿಂದ ಗೊತ್ತಾಗುವದು.

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ,
ಮಂಗಳವಾರಪೇಠ, ಧಾರವಾಡ

ನಮ್ಮ ಪ್ರಿಯ ಪಂಚಮ ಜಾರ್ಜ ಚಕ್ರವರ್ತಿಗಳು

ನಮ್ಮ ಪ್ರಿಯ ಚಕ್ರವರ್ತಿಗಳಾಗಿದ್ದ ಪಂಚಮ ಜಾರ್ಜ ಬಾದಶಹರು

ಕಳೆದ ತಿಂಗಳ ೨೦ನೆಯ ತಾರೀಖಿನ ದಿವಸವು ಬ್ರಿಟಿಷ ಸಾಮ್ರಾಜ್ಯದ ಅನೇಕ ಸಾಮಂತ ರಾಜರಿಗೂ ಅಸಂಖ್ಯ ಪ್ರಜೆಗಳಿಗೂ ಪರಮದುಃಖದಾಯಕವಾದ ದಿವಸವಾಗಿ ಪರಿಣಮಿಸಿತು. ಆ ದಿವಸ ರಾತ್ರಿ ೧೧–೫೫ಕ್ಕೆ ಸರಿಯಾಗಿ ನಮ್ಮ ಪರಮ ಪೂಜ್ಯರಾದ ಪಂಚಮ ಜಾರ್ಜ ಭೂಪತಿಗಳು ಸಾಮ್ರಾಜ್ಯದ ಅಖಿಳ ಪ್ರಜೆಗಳನ್ನು ಗೋಳಿಗೀಡುಮಾಡಿ ಕ್ರಿಸ್ತವಾಸಿಗಳಾದರು. ಮರುದಿನ ಮಧ್ಯಾಹ್ನದೊಳಗಾಗಿ ಬಾದಶಹರ ನಿಧನದ ವಾರ್ತೆಯು ಭೂಮಂಡಲದ ಎಲ್ಲ ದೇಶಗಳಲ್ಲಿ ಹರಡಿಕೊಂಡಿತು. ಇವರ ಗುಣಾತಿಶಯಗಳನ್ನರಿತ ಭೂಮಂಡಲದ ಸಕಲ ರಾಷ್ಟ್ರಗಳ ಮುಂದಾಳುಗಳು ಇವರು ಕಾಲವಶರಾದದ್ದನ್ನು ಕೇಳಿ ದುಃಖಸಾಗರದಲ್ಲಿ ಮುಳುಗಿ ಮಹಾರಾಣಿಯವರಿಗೂ ಅರಸುಮನೆತನದವರಿಗೂ ತಮ್ಮ ಸಹಾನುಭೂತಿಯ ತಂತಿಗಳನ್ನು ಕಳಿಸಿದರು. ಜಾರ್ಜ ಬಾದಶಹರು ಬಹು ಪುಣ್ಯವಂತರು. ೭೦ ವರುಷದ ಮುದುಕರಾಗಿದ್ದರು. ಬಹಳ ದಿವಸ ಹಾಸಿಗೆ ಹಿಡಿಯಲಿಲ್ಲ. ಮರಣವು ಬರುವ ವರೆಗೆ ಶಾಂತ ಮನಸಿನಿಂದ ಎಚ್ಚರದಿಂದಲೇ ಇದ್ದರು. ಇವರಿಗೆ ಅನಾಯಾಸದ ಮರಣವು ಒದಗಿತು. ಮರಣ ಕಾಲದಲ್ಲಿ ಹಿರಿಯ ಮಕ್ಕಳಾದ ಪ್ರಿನ್ಸ ಆಫ್ ವೇಲ್ಸರೂ, ಮೇರೀ ಮಹಾರಾಣಿಯವರೂ ಇತರ ರಾಜವಂಶದ ಸಂಬಂಧಿಕರೂ ಇವರ ಬಳಿಯಲ್ಲಿದ್ದರು.

ಪಂಚಮ ಜಾರ್ಜಬಾದಶಹರ ಆಳಿಕೆಯ ರಜತಮಹೋತ್ಸವವು ಕಳೆದ ಮೇ ತಿಂಗಳಲ್ಲಿ ಅತಿ ವಿಜೃಂಭಣೆಯಿಂದ ಸಾಮ್ರಾಜ್ಯದ ಸಂದಿಗೊಂದಿಗಳಲ್ಲಿ ಕೂಡ ನೆರವೇರಿಸಲ್ಪಟ್ಟಿತೆಂಬದು ಎಲ್ಲರಿಗೂ ಗೊತ್ತಿದ್ದ ಸಂಗತಿಯು. ನಮ್ಮ ಬಾದಶಹರು ೧೯೧೦ರಲ್ಲಿ ಸಿಂಹಾಸನವನ್ನೇರಿದಂದಿನಿಂದ ಇವರ ೨೫ ವರುಷ ಮೀರಿದ ಆಳಿಕೆಯಲ್ಲಿ ಸಾಮ್ರಾಜ್ಯದಲ್ಲಿ ರಾಜಕೀಯ ಸಾಮಾಜಿಕ ಬಿಕ್ಕಟ್ಟಿನ ಪ್ರಸಂಗಗಳು ಬೇಕಾದಷ್ಟು ಒದಗಿದವು. ಇವೆಲ್ಲವುಗಳಲ್ಲಿ ತಮ್ಮ ದೃಢಮನಸಿನಿಂದಲೂ ಅಸಾಧಾರಣವಾದ ಬುದ್ಧಿಶಕ್ತಿಯಿಂದಲೂ ಬಾದಶಹರು ಮಂತ್ರಿಮಂಡಲದವರಿಗೆ ಸಲಹೆಗಳನ್ನು ಕೊಡುತ್ತ ಸಾಮ್ರಾಜ್ಯದ

ನೌಕೆಯನ್ನು ಕಲ್ಲೋಲವಾದ ವಾತಾವರಣದಲ್ಲಿ ಸುರಕ್ಷಿತವಾಗಿ ನಡೆಯಿಸಿಕೊಂಡು ಹೋದದ್ದಲ್ಲದೆ ಸಾಮ್ರಾಜ್ಯದ ಹಲವು ಭಾಗಗಳಲ್ಲಿ ದೃಢತರವಾದ ಐಕ್ಯವನ್ನುಂಟು ಮಾಡಿ, ಪ್ರಜೆಗಳೆಲ್ಲರ ಕೃತಜ್ಞತೆಗೆ ಪಾತ್ರರಾದರು. ಮಹಾಯುದ್ಧದ ಕಾಲದಲ್ಲಿ ರಣಾಂಗಣದಲ್ಲಿ ತಿರುಗಾಡಿ ತಮ್ಮ ಸೈನಿಕರನ್ನೆಲ್ಲ ಹುರಿಗೊಳಿಸಿ ವಿಜಯವನ್ನು ಸಂಪಾದಿಸಿದರು.

ಹಿಂದುಸ್ತಾನದ ಪ್ರಜೆಗಳ ಬಗ್ಗೆ ನಮ್ಮ ಬಾದಶಹರು ಅತ್ಯಂತ ಅಂತಃಕರಣವುಳ್ಳವರಾಗಿದ್ದರು. ಅವರು ನಮ್ಮ ದೇಶಕ್ಕೆ ಎರಡು ಸಾರೆ ಬಂದು ಇಲ್ಲಿಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅಭ್ಯಾಸಿಸಿ ಮಾಂಡಲಿಕರ ಪರಮ ಸ್ನೇಹವನ್ನೂ ಪ್ರಜೆಗಳ ಪ್ರೇಮವನ್ನೂ ಸಂಪಾದಿಸಿದರು. ಹಿಂದುಸ್ತಾನದ ತಮ್ಮ ಪ್ರಜೆಗಳ ಬಗ್ಗೆ ಅವರು ಕಾಲಕಾಲಕ್ಕೆ ಕಳುಹಿದ ಸಂದೇಶಗಳಲ್ಲಿ ತಮ್ಮ ಸಹಾನುಭೂತಿಯನ್ನೂ ನಮ್ಮ ಹಿತದ ಬಗ್ಗೆ ತಮ್ಮಲ್ಲಿದ್ದ ಹಿರಿಯಾಶೆಯನ್ನೂ ವ್ಯಕ್ತಪಡಿಸುತ್ತಿದ್ದರು. ಈ ದೇಶದ ರಾಜ್ಯಪದ್ಧತಿಯಲ್ಲಿ ಸುಧಾರಣೆಯುಂಟಾಗಿ ಹಿಂದುಸ್ತಾನವೂ ಸಾಮ್ರಾಜ್ಯದ ಇತರ ಭಾಗಗಳಂತೆ ಸಕಲ ಸಂಗತಿಗಳಲ್ಲಿಯೂ ಮುಂದುವರಿಯಲೆಂದು ಅವರ ಹಂಬಲವಿತ್ತು. ಈ ಅವರ ಬಯಕೆಯು ಈಡೇರಲು ಅವರು ಕೆಲವು ತಿಂಗಳ ಹಿಂದೆ ಹಿಂದೀ ಸುಧಾರಣೆಯ ಕಾಯಿದೆಗೆ ತಮ್ಮ ಮುದ್ರೆಯನ್ನೊತ್ತಿ ಸಮಾಧಾನಹೊಂದಿದರು.

ಜಾರ್ಜ ಪ್ರಭುಗಳು ಶ್ರೇಷ್ಠರಾದ ಅಧಿಪತಿಗಳಾಗಿದ್ದರಷ್ಟೇ ಅಲ್ಲ; ನಿಜವಾಗಿಯೂ ಶ್ರೇಷ್ಠರಾದ ಪುರುಷರಾಗಿದ್ದರು. ಇವರ ನಿಧನದಿಂದ ಸಾಮ್ರಾಜ್ಯವು ಒಬ್ಬ ದೊಡ್ಡ ದೊರೆಯನ್ನಷ್ಟೇ ಅಲ್ಲ; ಒಬ್ಬ ಮಹಾಪುರುಷನನ್ನು ಕಳೆದುಕೊಂಡಿತು, ಎಂದು ಜನಸಾಮಾನ್ಯರು ಇಂಗ್ಲಂಡಿನಲ್ಲಿ ಆಡಿಕೊಳ್ಳುತ್ತಿರುವ ಮಾತು ಯಥಾರ್ಥವಾದದ್ದಿರುವದು.

ನಮ್ಮ ಬಾದಶಹರಿಗೆ ೭೦ ವರುಷಗಳಾದರೂ ಅವರು ಪ್ರತಿನಿತ್ಯದ ತಮ್ಮ ರಾಜಕಾರ್ಯಗಳನ್ನು ತಪ್ಪದೆ ಮಾಡುತ್ತಿದ್ದರು. ಇವರು ಸರಕಾರದ ಅಧಿಪತಿಗಳಾಗಿದ್ದರೂ ಸಾಮಾನ್ಯ ಸೇವಕರಂತೆ ಸಾಮ್ರಾಜ್ಯದ ಶಾಂತತೆಯನ್ನೂ ಭದ್ರತೆಯನ್ನೂ ಕಾಪುಕೊಳ್ಳಲಿಕ್ಕಾಗಿ ತಮ್ಮ ಜವಾಬುದಾರಿಯ ಕಾರ್ಯಗಳನ್ನು ಏಕನಿಷ್ಠೆಯಿಂದಲೂ ಹುರುಪಿನಿಂದಲೂ ಮಾಡುತ್ತಿದ್ದರು. ಈ ಮೇರೆಗೆ ಸಾರ್ವಭೌಮರು ತಮ್ಮ ಅಸಂಖ್ಯ ಪ್ರಜೆಗಳ ಮೇಲಿನ ತಮ್ಮ ವಾತ್ಸಲ್ಯವನ್ನು ತೋರ್ಪಡಿಸಿಕೊಂಡು ಮಾದರಿಯ ಮಹಾಪುರುಷರೆನಿಸಿಗೊಂಡು ಜೀವನವನ್ನು ಸಾರ್ಥಕಗೊಳಿಸಿದರು. ದೇವರು ನಮ್ಮ ಪ್ರಿಯ ಬಾದಶಹರ ಆತ್ಮಕ್ಕೆ ಶಾಂತಿಯನ್ನೀಯಲಿ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ಸಂಪುಟ ೭೨ ||| ಫೆಬ್ರುವರಿ ೧೯೩೬ ||| ವರ್ಷ ೭ ಸಂ. ೧೧

ಹಿಂದುಸ್ಥಾನದಲ್ಲಿಯ ಶಿಕ್ಷಣ

೧೭೯೨ರಲ್ಲಿ ಚಾರ್ಲಸ್ ಗ್ರಾಂಟ ಇವರು ಗ್ರೇಟಬ್ರಿಟನದ ಏಶಿಯಾಖಂಡದ ಪ್ರಜೆಗಳ ಸಮಾಜ ಸ್ಥಿತಿ, ವಿಶೇಷವಾಗಿ ನೈತಿಕ ವಿಷಯದಬಗ್ಗೆ ಹಾಗು ಅವನ್ನು ಸುಧಾರಿಸುವ ಉಪಾಯಗಳು ಎಂಬ ಉಪನ್ಯಾಸವನ್ನು ಪ್ರಸಿದ್ಧಪಡಿಸಿದರು. ಇದರಲ್ಲಿ ಅವರು ಬರೆದದ್ದು:—"ಕತ್ತಲೆಯನ್ನು ಹೋಗಲಾಡಿಸುವ ನಿಜವಾದ ಉಪಾಯವೆಂದರೆ ಬೆಳಕನ್ನು ತರುವದು. ಹಿಂದೂ ಜನರು ತಪ್ಪುಗಳನ್ನು ಮಾಡುವ ಕಾರಣವು ಅವರ ಅಜ್ಞಾನವೇ ಸರಿ; ಅವರ ತಪ್ಪುಗಳನ್ನು ಸ್ಪಷ್ಟವಾಗಿ ಅವರಿಗೆ ತೋರಿಸಿಕೊಟ್ಟಿಲ್ಲ. ನಮ್ಮ ಜ್ಞಾನವನ್ನೂ ಬೆಳಕನ್ನೂ ಅವರಲ್ಲಿ ಹರಡಿದರೆ ಅವರ ಕೊರತೆಗಳು ಇಲ್ಲದಾಗುವವು......"

"ಈ ಜ್ಞಾನವನ್ನು ಹರಡಲಿಕ್ಕೆ ಎರಡು ಮಾರ್ಗಗಳುಂಟು. ಒಂದು ಮಾರ್ಗವೆಂದರೆ ಆ ದೇಶಗಳ ದೇಶಭಾಷೆಯಮೂಲಕ; ಎರಡನೆಯ ಮಾರ್ಗವು ನಮ್ಮ ಭಾಷೆಯ ಅಭ್ಯಾಸ ಮಾಡಿಸುವಮೂಲಕ......"

"ಹಿಂದೂ ಜನರಿಗೆ ಕ್ರಮಶಃ ನಮ್ಮ ಭಾಷೆಯ ಜ್ಞಾನವನ್ನು ಮಾಡಿಕೊಡುವದು ಪೂರ್ಣವಾಗಿ ನಮ್ಮ ಕೈಯಲ್ಲಿರುವದು; ಆ ಬಳಿಕ, ನಮ್ಮ ಭಾಷಾ

ಭ್ಯಾಸವನ್ನು ಮುಂದುವರಿಸಿ ಅನೇಕ ವಿಷಯಗಳ ಬಗ್ಗೆ ನಮ್ಮಲ್ಲಿರುವ ಸುಲಭ ವಾದ ವಾಙ್ಮಯವನ್ನು ಅವರ ಅವಗಾಹನೆಗೆ ತಂದುಕೊಡಬಹುದು. ಈ ನಮ್ಮ ಮುಂದಿನ ಕಲ್ಪನೆಯನ್ನು ಅವಸರದಿಂದ ಯಾರೂ ಅಪಹಾಸ್ಯಕ್ಕೆ ಗುರಿಮಾಡ ಲಾಗದು. ಅದೇನೆಂದರೆ ಕ್ರಮಶಃ ನಾವು ನಮ್ಮ ಕಲೆಗಳು, ತತ್ವಜ್ಞಾನ, ಧರ್ಮ ಇವುಗಳ ಮೂಲ ತತ್ವಗಳ ಜ್ಞಾನವನ್ನು ಅವರಿಗೆ ಮಾಡಿಕೊಡಬಹುದು......"

"ಮೊದಲು ನಾವು ಅವರಿಗೆ ನಮ್ಮ ಭಾಷಾಜ್ಞಾನವನ್ನು ಮಾಡಿಕೊಡುವದು ಮಹತ್ವವಾದದ್ದು. ಅವರು ಇಂಗ್ಲಿಷ ಭಾಷೆಯನ್ನು ಕಲಿತರೆ ಅವರಿಗೆ ನಾವು ನಮ್ಮ ವಿಚಾರ-ಭಾವನೆ-ಕಲ್ಪನೆಗಳ ಭಂಡಾರದ ಬೀಗದ ಕೈಯನ್ನು ಒಪ್ಪಿಸಿ ದಂತಾಗುವದು. ನಾವು ಈ ಧೋರಣವನ್ನು ಈ ಮೊದಲೇ ಕೈಕೊಂಡಿ ಬೇಕಾಗಿತ್ತು."

"ಗೆದ್ದವರ ಭಾಷೆಯನ್ನು ವಶಕ್ಕೀಡಾದವರಲ್ಲಿ ಹರಡುವದು, ಇವರನ್ನು ಗೆದ್ದವರಲ್ಲಿ ಏಕೀಕರಿಸಲು ಸರಳವೂ ಸಮಂಜಸವೂ ಆದ ಉಪಾಯವೆಂದು ನಮಗೆ ತೋರುತ್ತದೆ. ಮುಸಲ್ಮಾನರು ಹಿಂದುಸ್ತಾನದಲ್ಲಿ ಆಡಳಿತವನ್ನು ಆರಂಭಿ ದಂದಿನಿಂದ ಸರಕಾರದ ಎಲ್ಲ ಕೆಲಸಗಳಲ್ಲಿಯೂ ಹಲವು ಖಾತೆಗಳಲ್ಲಿಯೂ ತಮ್ಮ ಭಾಷೆಯನ್ನು ಉಪಯೋಗಿಸಲಾರಂಭಿಸಿದರು. ಈ ಮೂಲಕ ಅವರ ತಮ್ಮ ವರ್ಚಸ್ಸವನ್ನು ದೃಢಪಡಿಸಿಕೊಂಡರು; ಇದರಿಂದ ಅವರು ಕಣ್ಣುಮುಚ್ಚಿ ಕೊಂಡು ತಮ್ಮ ಕೈಕೆಳಗಿನ ಅಧಿಕಾರಸ್ಥರ ಹೇಳಿಕೆಗಳನ್ನು ಕೇಳುತ್ತ ಕೂ ಬೇಕಾಗಲಿಲ್ಲ; ತಮ್ಮ ರಾಜ್ಯವ್ಯವಸ್ಥೆಯ ಬಗೆಬಗೆಯ ಅಂಗಗಳನ್ನು ತಾವಾ ಮೇಲ್ವಿಚಾರಿಸಲು ಅವರಿಗೆ ಅನುವಾಯಿತು. ಸರಕಾರದ ಆಯವ್ಯಯಗಳ ಲೆ ವನ್ನು ತೃಪ್ತಿಕರವಾಗಿ ಇಡಲಿಕ್ಕೆ ಅವರಿಗೆ ಅನುಕೂಲವಾಯಿತು. ದೇಶೀಯ ರಾದರೂ ಸರಕಾರದವರ ಭಾಷೆಯನ್ನು ತೀವ್ರವಾಗಿ ಕಲಿತರು. ದಿವಾಣಿ ಬಹುತರ ಕೆಲಸಗಳಲ್ಲಿಯೂ ನ್ಯಾಯಖಾತೆಯ ಆಗುಹೋಗುಗಳಲ್ಲಿಯೂ ಇ ತಮಗೆ ಒಳ್ಳೆಯ ಉಪಯುಕ್ತತೆಯುಳ್ಳದ್ದೆಂದು ಪ್ರಜೆಗಳಿಗೆ ಮನವರಿಕೆಯ ಯಿತು. ಈ ಭಾಷೆಯನ್ನು ಅಭ್ಯಾಸಿಸಿ ಅವರು ಸುಮ್ಮನೆ ಕೂಡಲಿಲ್ಲ; ಅದನ್ನು ಇತರರಿಗೆ ಕಲಿಸಿದರು. ಮೊಗಲರ ಸಾಮ್ರಾಜ್ಯವು ನೆಲಸಿದ್ದ ಹಿಂದುಸ್ತಾನ ಎಲ್ಲ ಪ್ರಾಂತಗಳಲ್ಲಿ ಈ ಭಾಷೆಯು ಅನೇಕರಿಗೆ ಇಂದಿಗೂ ಪರಿಚಿತವಾದದ್ದಿ ಹಿಂದೂಜನರಲ್ಲಿ ಹಲವರು ಇದನ್ನು ಬೇಕಾದವರಿಗೆ ಕಲಿಸುತ್ತಿರುವರು."

"ಮೊಗಲರ ಪದ್ಧತಿಯನ್ನು ನಾವು ಅನುಸರಿಸಿದ್ದರೆ ನಮಗೆ ಒಳ್ಳೆಯ ಲಾಭವಾಗುತ್ತಿತ್ತೆಂಬದರಲ್ಲಿ ಸಂದೇಹವಿಲ್ಲ. ನಮಗೆ ದಿವಾಣೀ ಅಧಿಕಾರವು ಉಂಟಾದ ಕೂಡಲೆಯಾಗಲಿ ಆಬಳಿಕ ಕೆಲವು ವರುಷಗಳು ಸಂದ ತರುವಾಯ ದಲ್ಲಾಗಲಿ ನಾವು ಇದನ್ನು ಮಾಡಿದ್ದರೆ ಇಂದಿಗೆ ನಮ್ಮ ವಿದ್ಯಾಧಿಕಾರಕ್ಕೊಳಗಾದ ಹಿಂದುಸ್ಥಾನದ ಹಲವು ಪ್ರಾಂತಗಳಲ್ಲಿ ಇಂಗ್ಲಿಷ ಭಾಷೆಯನ್ನು ಸಾವಿರಾರು ಜನರು ಅಭ್ಯಾಸ ಮಾಡುವದಲ್ಲದೆ ಅದನ್ನು ಲಕ್ಷಾವಧಿ ಜನರಿಗೆ ಕಲಿಸುತ್ತಿರುವದನ್ನು ಕಣ್ಣಾರೆ ಕಂಡಿರಬಹುದು."

ಈ ಪ್ರಕಾರ ಈ ದೇಶದ ಜನರ ಶಿಕ್ಷಣವು ಗೆದ್ದವರ ಭಾಷೆಯ ಮುಖಾಂತರ ನಡೆಯುತಕ್ಕದ್ದೋ ವಶವಾದವರ ದೇಶಭಾಷೆಯ ಮುಖಾಂತರವಾಗಿ ಸಾಗತಕ್ಕದ್ದೋ ಎಂಬ ಪ್ರಶ್ನವು ತಲೆದೋರಿತು. ಈ ಪ್ರಶ್ನವು ಬಹುಕಾಲದವರೆಗೆ ಚರ್ಚಿಸಲ್ಪಟ್ಟಿತು. ಈ ಸಂಗತಿಯು ಈಗ ಇತಿಹಾಸದ ಭಾಗವಾಗಿದೆ. ಕೆಲವು ವಿದ್ವಾಂಸರೂ ರಾಜಕಾರಣಪಟುಗಳೂ ಇಂಗ್ಲಿಷ ಭಾಷಾಭ್ಯಾಸವೇ ಹಿಂದೂ ಜನರಿಗೆ ಮೇಲಾದದ್ದೆಂದೂ ಕೆಲವರು ದೇಶೀಯ ಪ್ರೌಢ ಭಾಷಾಭ್ಯಾಸವೇ ಅವರಿಗೆ ಹಿತಕರವೆಂದೂ ಪ್ರತಿಪಾದಿಸಲಾರಂಭಿಸಿದರು.

ಈಸ್ಟ ಇಂಡಿಯಾ ಕಂಪನಿಯವರು ಚಾರ್ಲಸ್ ಗ್ರಾಂಟರ ವಿಚಾರಗಳನ್ನು ವಿಶೇಷವಾಗಿ ಲಕ್ಷ್ಯಕ್ಕೆ ತರಲಿಲ್ಲ ಯಾಕೆಂದರೆ ಪಾರ್ಲಮೆಂಟನವರು ಅವರ ಸನದನ್ನು ಮತ್ತೆ ಬೆಳಿಸಿ ಬಿಟ್ಟಿದ್ದರು. ಆ ಕಾಲದಲ್ಲಿ ಇಂಗ್ಲಂಡದಲ್ಲಿ ಸಹ ಬಹು ಜನರ ಶಿಕ್ಷಣವು ಸರಕಾರದ ಕರ್ತವ್ಯವು ಎಂದು ಎಣಿಸಲ್ಪಡುತ್ತಿರಲಿಲ್ಲ. ೧೮೦೭ ರಲ್ಲಿ ಮಿ. ವ್ಹಾಯಿಟಬ್ರೆಡ್ ಎಂಬವರು ಪಾರ್ಲಿಮೆಂಟನಲ್ಲಿ ಒಂದು ಮಸೂದೆಯನ್ನು ಮಂಡಿಸಿದರು. ಅದರಲ್ಲಿ ೭ ರಿಂದ ೧೪ ವರುಷ ವಯಸ್ಸಿನ ಬಡ ಹುಡುಗ ಹುಡುಗೆಯರಿಗೆ ಪುಕ್ಕಟೆಯಾಗಿ ವಿದ್ಯಾಲಾಭವಾಗಬೇಕೆಂದಿತ್ತು; ಹುಡುಗರಿಗೆ ಓದು, ಬರಹ, ಗಣಿತ ಹಾಗು ಹುಡುಗೆಯರಿಗೆ ಇವಲ್ಲದೆ ಹೊಲಿಗೆ, ಹೆಣಿಕೆಯ ಕೆಲಸ ಮುಂತಾದವುಗಳನ್ನು ಕಲಿಸತಕ್ಕದ್ದೆಂದು ಇತ್ತು. ಈ ಮಸೂದೆಯು ಪಾರ್ಲಮೆಂಟನಲ್ಲಿ ಪಾಸಾಗಲಿಲ್ಲ. ದೇಶದೊಳಗಿನ ಎಲ್ಲ ಹುಡುಗ ಹುಡಿಗೆಯರಿಗೆ ಓದುಬರಹಗಳನ್ನು ಕಲಿಸುವದಕ್ಕಾಗಿ ಹೊಲಮನೆಗಳ ಒಡೆಯರ ಮೇಲೆ ಕರ ಹಾಕುವದು ಅಕ್ಷಮ್ಯವೆಂದು ಎಣಿಸಲ್ಪಟ್ಟಿತು; ಕೆಳಗಿನ ವರ್ಗಗಳ ಜನರಿಗೆ

ಬೇಕಾಗುವದಕ್ಕಿಂತ ಹೆಚ್ಚಿನ ಶಿಕ್ಷಣವನ್ನು ಕೊಟ್ಟಂತಾಗುವದೆಂದು ಭಾವಿಸಲ್ಪಟ್ಟಿತು.

ಕಂಪನಿಯು ವ್ಯಾಪಾರದ ಸಂಸ್ಥೆಯಾಗಿತ್ತು; ರಾಜ್ಯಾಧಿಕಾರವನ್ನು ನಡಿಸುವ ಸಂಸ್ಥೆಯಾಗಿರಲಿಲ್ಲ. ಮೇಲಾಗಿ ಇಂಗ್ಲಂಡಿನಲ್ಲಿ ಆಗ ಸರಕಾರದವರು ಶಿಕ್ಷಣವನ್ನು ಕೊಡುವ ಖಾತೆಗಳನ್ನು ಸ್ಥಾಪಿಸಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಕೈಕೊಂಡಿರಲಿಲ್ಲ; ಅಂದ ಬಳಿಕ ಹಿಂದುಸ್ತಾನದಲ್ಲಾದರೂ ಈ ಕೆಲಸವನ್ನು ಆರಂಭಿಸುವ ಕಾರಣವಿರಲಿಲ್ಲವೆಂದು ಆಗಿನ ಜನರ ನಂಬುಗೆಯಾಗಿತ್ತು.

ಆಗ ಕಲಕತ್ತೆಯ ಉತ್ತರಕ್ಕೆ ೧೨ ಮೈಲಿನಮೇಲೆ ಸಿರಾಮಪೂರ ಎಂಬಲ್ಲಿ ಡ್ಯಾನಿಷ್ ಜನರ ಒಂದು ಸಣ್ಣ ವಸಾಹತು ಇತ್ತು. ಅಲ್ಲಿ ಒಂದು ಮಿಶನರಿ ಸಂಘವು ಸ್ಥಾಪಿಸಲ್ಪಟ್ಟಿತ್ತು. ಈ ಸಂಘಕ್ಕೆ ಸೇರಿದ ಕಾರೇ, ಮಾರ್ಶಮನ್ ಹಾಗು ವಾರ್ಡ ಎಂಬ ಬಾಪ್ಟಿಸ್ಟ ಮಿಶನರಿ ಜನರು ದೇಶೀಯ ಹಿಂದೂ ಹಾಗು ಮುಸಲ್ಮಾನಜನರಿಗೆ ಧರ್ಮೋಪದೇಶವನ್ನು ಮಾಡಲಾರಂಭಿಸಿದರು. ಇದರಿಂದ ಏತದ್ದೇಶೀಯರು ಸಿಟ್ಟಿಗೆದ್ದಿದ್ದರು. ಈ ಮೂಲಕ ಕಂಪನಿಯವರು ಗಾಬರಿಯಾಗಿದ್ದರು. ಹಾಗು ಹಿಂದುಸ್ತಾನದ ಜನರ ಧರ್ಮಗಳಲ್ಲಿ ತಾವು ಎಷ್ಟು ಮಾತ್ರವೂ ಕೈಹಾಕುವದಿಲ್ಲೆಂದು ಸಾರಿದರು. ಕ್ರಿಸ್ತಧರ್ಮ ಪ್ರಸಾರದ ವಿಷಯದಲ್ಲಿ ತಾವು ಅಪ್ರತ್ಯಕ್ಷವಾಗಿಕೂಡ ಯಾವಬಗೆಯ ಸಹಾಯವನ್ನು ಮಾಡಲಿಕ್ಕಿಲ್ಲೆಂದು ನಿಶ್ಚಯಮಾಡಿದ್ದರು. ೧೭೬೫ ರಲ್ಲಿ ಬಂಗಾಲದ ದಿವಾಣಿಯನ್ನು ಪಡಕೊಂಡಂದಿನಿಂದ ಮಿಶನರಿ ಜನರು ಕ್ರಿಸ್ತಧರ್ಮದ ಪ್ರಸಾರವನ್ನು ಮಾಡಲೆಳಸಿದಾಗ ಅವರ ಪ್ರಯತ್ನಗಳಿಗೆ ಕಂಪನಿಯವರು ಸಹಾಯಮಾಡದಿರುವದೇ ಹಿತಕರವೆಂದು ಅವರು ಮನಗಂಡಿದ್ದರು. ಯಾಕೆಂದರೆ ಈ ಬಗೆಯ ಹವಣಿಕೆಗಳಿಗೆ ಕಂಪನಿಯ ಅಧಿಕಾರಸ್ಥರು ಏನಾದರೂ ಸಹಾನುಭೂತಿಯನ್ನು ತೋರಿಸಿದರೆ ಜನರಲ್ಲಿ ಕಂಪನಿಯವರ ಉದ್ದೇಶಗಳಬಗ್ಗೆ ಸಂಶಯವೃತ್ತಿಯು ಉಂಟಾಗಬಹುದೆಂದೂ ಈ ಮೂಲಕ ತಮ್ಮ ಆಡಳಿತದ ವಿಷಯದಲ್ಲಿ ಜನರು ವಿರೋಧವೃತ್ತಿಯನ್ನು ತಾಳಬಹುದೆಂದೂ ಅವರು ಅರಿತಿದ್ದರು.

೧೮೧೩ ರಲ್ಲಿ ಪಾರ್ಲಿಮೆಂಟನವರು ಕಂಪನಿಯವರ ಸನದನ್ನು ಮತ್ತೆ ಕೊಡುವ ಪ್ರಶ್ನವು ಉಂಟಾಯಿತು. ಆಗ ಚಾರ್ಲಸ್ ಗ್ರಾಂಟ ಎಂಬಾತನು

ಪಾರ್ಲಿಮೆಂಟಿನ ಮೆಂಬರನಿದ್ದನು. ಈತನ ಸಹಾಯದಿಂದ ವಿಲ್‌ಬರಫೋರ್ಸನು ತನ್ನ ಗೊತ್ತುವಳಿಯನ್ನು ಪಾಸುಮಾಡಿಸಿಕೊಂಡು ಆ ವರುಷದ ಈಸ್ಟಇಂಡಿಯಾ ಆಕ್ಟಿನಲ್ಲಿ (ಕಾಯಿದೆಯಲ್ಲಿ) ಒಂದು ಮಾತನ್ನು ಸಮಾವೇಶಮಾಡಿಸಿದನು. ಅದೇನಂದರೆ ಕಂಪನಿಯವರು ಸಂಪಾದಿಸಿದ ಸ್ವಾಸ್ಥ್ಯಗಳ ಆಡಳಿತದ ವೆಚ್ಚವು ಕಳೆದು ಉಳಿದ ಹಣದಲ್ಲಿ ಪ್ರತಿವರುಷ ಗವ್ಹರ್ನರ ಜನರಲ್ಲ (ಇನ್ ಕೌನ್ಸಿಲ್)ನು ಒಂದು ಲಕ್ಷ ರೂಪಾಯಿಗಿಂತ ಕಡಿಮೆಯಲ್ಲದಷ್ಟು ಹಣವನ್ನು ಮೀಸಲಾಗಿಟ್ಟು, ಇದರಿಂದ ಹಿಂದುಸ್ತಾನದ ವಿದ್ವಾಂಸರ ಉತ್ತೇಜನಕ್ಕಾಗಿಯೂ ಆ ದೇಶದ ವಾಙ್ಮಯದ ಅಭಿವೃದ್ಧಿಗಾಗಿಯೂ ಹಿಂದುಸ್ತಾನದಲ್ಲಿರುವ ಬ್ರಿಟಿಷರ ಪ್ರಾಂತಗಳ ಜನರಲ್ಲಿ ಶಾಸ್ತ್ರಗಳ ಜ್ಞಾನವನ್ನು ಹರಡಲಿಕ್ಕಾಗಿಯೂ ಹಣವನ್ನು ವೆಚ್ಚಮಾಡುವದು ಕಾಯಿದೆಗೆ ಸಮ್ಮತವು.

ಹೀಗೆ ಪಾರ್ಲಿಮೆಂಟಿನಲ್ಲಿ ನಿಶ್ಚಿತವಾದದ್ದು ಹಿಂದುಸ್ತಾನದ ಶಿಕ್ಷಣದ ಇತಿಹಾಸದಲ್ಲಿ ಮಹತ್ವದ ಸಂಗತಿಯು. ಯಾಕೆಂದರೆ ಜನಸಾಮಾನ್ಯರ ಶಿಕ್ಷಣವು ಸರಕಾರದ ಕರ್ತವ್ಯಗಳ ಒಂದು ಮಹತ್ವದ ಭಾಗವೆಂಬ ತತ್ವವನ್ನು ಇದರಿಂದ ಬ್ರಿಟಿಷ್ ಪಾರ್ಲಿಮೆಂಟಿನವರು ಒಪ್ಪಿಕೊಂಡಂತಾಯಿತು. ಈ ತತ್ವವು ಇಂಗ್ಲಂಡಿನಲ್ಲಿ ಸಹ ೧೮೩೩ರ ವರೆಗೆ ಸ್ವೀಕೃತವಾಗಲಿಲ್ಲವೆಂಬದನ್ನು ನಾವು ಲಕ್ಷದಲ್ಲಿಡುವಂತಿದೆ. ಆ ವರುಷ ಸರಕಾರದವರು ಅಲ್ಲಿಯ ಶಿಕ್ಷಣಕ್ಕಾಗಿ ಇಪ್ಪತ್ತು ಸಾವಿರ ಪೌಂಡಿನ ಸಹಾಯಕ ದ್ರವ್ಯವನ್ನು ಮೊದಲನೆಯ ಸಾರೆ ಮಂಜೂರು ಮಾಡಿದರು.

ಈಸ್ಟ ಇಂಡಿಯಾ ಕಂಪನಿಯ ಕೋರ್ಟ ಆಫ್ ಡಿರೆಕ್ಟರ್ಸ ಎಂಬ ಸಂಘದವರು ೧೮೧೪ರಲ್ಲಿ ತಮ್ಮ ಶಿಕ್ಷಣ ವಿಷಯಕ ರಿಪೋರ್ಟನ್ನು (ಇಂಥ ರಿಪೋರ್ಟಗೆ ಡಿಸ್ಪ್ಯಾಚ್ ಎಂಬ ಹೆಸರು) ಪ್ರಸಿದ್ಧಪಡಿಸಿದರು. ಅದರಲ್ಲಿ ಅವರು ಬರೆದಿದ್ದ ಮುಖ್ಯ ಅಂಶಗಳಾವವೆಂದರೆ :—ಪಾರ್ಲಿಮೆಂಟಿನವರು ನಮ್ಮ ಸನದಿನಲ್ಲಿ ಹೊಸದಾಗಿ ಸೇರಿಸಿದ ಮಾತಿನಿಂದ ಎರಡು ಸಂಗತಿಗಳು ಸ್ಪಷ್ಟವಾಗುವವು. ಹಿಂದುಸ್ತಾನದ ವಿದ್ವಾಂಸರಿಗೆ ಉತ್ತೇಜನವು ದೊರೆಯಬೇಕು; ಹಾಗು ಆ ದೇಶದ ವಾಙ್ಮಯದ ಅಭಿವೃದ್ಧಿಯು ಮುಂದುವರಿಯಬೇಕು. ನಮ್ಮಲ್ಲಿರುವಂತೆ ಅಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವದರಿಂದ ಈ ಸಂಗತಿಗಳು ಈಡೇರಲಾರವು; ಯಾಕೆಂದರೆ ಹಿಂದುಸ್ತಾನದ ಜನರು ಕಾಲೇಜುಗಳ ಕಟ್ಟಳೆಗಳಿಗೆ ಮನಸೊಪ್ಪಿ

ಒಳಗಾಗಲಾರರು. ತಮ್ಮ ತಮ್ಮ ಮನೆಗಳಲ್ಲಿ ವಿದ್ಯಾವ್ಯಾಸಂಗವನ್ನು ಮಾಡು ಪರಿಪಾಠವು ಅವರಲ್ಲಿ ರೂಢವಾಗಿದೆ. ಅವರಿಗೆ ನಾವು ಸಹಾಯಕ ದ್ರವ್ಯವನ್ ಕೊಟ್ಟು ಉತ್ತೇಜಿಸಬಹುದಾಗಿದೆ. ಅವರಲ್ಲಿ ಹಿರಿಮಣಿಯ ಪದ್ಧತಿಯಿಂದ ಶಿಕ್ಷ ವನ್ನು ಸಾಗಿಸುವರು. ಇದು ಬಹುಕಾಲದ ಪರಂಪರೆಯು. ಮದ್ರಾಸದ ಧರ್ಮಾಧಿಕಾರಿಯಾಗಿದ್ದ ಡಾಕ್ಟರ ಬೆಲ್ ಎಂಬವರು ಈ ಪದ್ಧತಿಯನ್ನು ನವ ದೇಶದಲ್ಲಿ ನೆಲಿಸಿದ್ದಾರೆ. ಸಂಸ್ಕೃತ ಭಾಷೆಯಲ್ಲಿ ನೀತಿಮಾರ್ಗಗಳನ್ನು ಬೋ ಸುವ ಗ್ರಂಥಗಳು ಬೇಕಾದಷ್ಟಿವೆಯೆಂದೂ ಎಲ್ಲ ವರ್ಗಗಳ ಜನರು ಅನುಸರಿ ತಕ್ಕ ನಿಯಮನಿಷ್ಠೆಗಳು ವಿವರಿಸಲ್ಪಟ್ಟವೆಯೆಂದೂ ನಾವು ಕೇಳಿಬಲ್ಲೆವು. ಇ ಗಳನ್ನು ಅಭ್ಯಾಸಿಸಿದ ದೇಶೀಯರು ಅಲ್ಲಿಯ ನ್ಯಾಯಖಾತೆಯಲ್ಲಿ ನಮಗೆ ಬಹ ಉಪಯೋಗವುಳ್ಳವರಾಗುವರು. ಆಯುರ್ವೇದ, ಜ್ಯೋತಿಷ, ಗಣಿತ ಮುಂತಾ ಶಾಸ್ತ್ರಗಳಬಗ್ಗೆಯೂ ಉದ್ಧಾಮ ಗ್ರಂಥಗಳು ಅವರಲ್ಲಿರುವವು. ಇಂಥ ವಿದ್ವಾಂ ರಿಂದ ನಮ್ಮ ಸರಕಾರದ ಬೇರೆ ಬೇರೆ ಖಾತೆಗಳಲ್ಲಿ ಕೆಲಸ ಮಾಡುವ ಅಧಿಕಾ ಸ್ಥರು ತಮತಮಗೆ ಬೇಕಾದ ಜ್ಞಾನವನ್ನು ಪಡೆಯಬಹುದು; ಇದಕ್ಕಾಗಿ ವಿದ್ವಾಂಸರಿಗೆ ನಾವು ಒಳ್ಳೆಯ ಉಂಬಳಿಯನ್ನು ಕೊಡಬಹುದು.

ಈ ಮೇರೆಗೆ ಕಂಪನಿಯವರ ಸನದಿನಲ್ಲಿ ಶಿಕ್ಷಣದ ಬಗ್ಗೆ ಹೊಸದಾ ಮಾಡಿದ ಉಲ್ಲೇಖನವು ಅಸ್ಪಷ್ಟವಾಗಿದ್ದದರ ಲಾಭಮಾಡಿಕೊಂಡು ಕಂಪನಿಯ ಡಿರೆಕ್ಟರರು (೧) ಈ ದೇಶದ ವಿದ್ವಾಂಸರು ತಮ್ಮ ಹಳೆಯ ಪಾಂಡಿತ್ಯವನ್ನು ಹಳೆ ಪದ್ಧತಿಗಳಿಂದ ದೃಢಪಡಿಸಿಕೊಳ್ಳುವದು (೨) ಕಂಪನಿಯ ಸರಕಾರದ ಅಧಿಕಾ ಗಳು, ರಾಜ್ಯಕಾರಭಾರವು ಸುಗಮವಾಗಿ ಸಾಗಲಿಕ್ಕಾಗಿ ಸಂಸ್ಕೃತವನ್ನು ಅಭ್ಯಾ ಸಿಸುವದು ಇವೆರಡಕ್ಕಿಂತ ಹೆಚ್ಚಿನ ಸುಧಾರಣೆಗಳನ್ನು ಕೈಕೊಳ್ಳಲು ಸಿದ್ಧರಾ ಪಾದರು. ಇದಲ್ಲದೆ, ಈ ಬಗ್ಗೆ ಸಹ ಡಿರೆಕ್ಟರರ ಸಭೆಯವರು ಒಂದು ಏರ್ಪಾ ಡನ್ನು ಮಾಡಿ ಅದನ್ನು ಅಮಲಿನಲ್ಲಿ ತರಲು ಮಂಜೂರಿಯನ್ನು ಕೊಡುವವರೆ ಯಾವ ಕಾರ್ಯವೂ ಆಗಲಾರದೆಂದು ಅಭಿಪ್ರಾಯಪಟ್ಟರು.

ಇತ್ತ ಈ ದೇಶದಲ್ಲಿ ಇಂಗ್ಲಿಷ ಶಿಕ್ಷಣದ ಬಗ್ಗೆ ಜನರಲ್ಲಿ ಉತ್ಸಾಹವ ಉಂಟಾಗಿತ್ತು. ಈ ಮೂಲಕ ಈ ದೇಶದ ಮುಂದಾಳುಗಳೂ ಕೆಲವರು ಮಿಶನ ಜನರೂ ಇದಕ್ಕಾಗಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಲಾರಂಭಿಸಿದರು. ಹಿಂದ ಜನರ ನಾಯಕರಲ್ಲಿ ರಾಜಾರಾಮ ಮೋಹನರಾಯ ಎಂಬ ವಿದ್ವಾಂಸರೂ ದೂ

ದೃಷ್ಟಿಯುಳ್ಳವರೂ ಕಾರ್ಯಶೀಲರೂ ಎಂಬ ಪ್ರತಿಭಾಶಾಲಿಗಳು ಈ ಬಗ್ಗೆ ಹೆಣಗಾಡುತ್ತಿದ್ದರು. ಆ ಕಾಲದಲ್ಲಿ ಕಲಕತ್ತೆಯಲ್ಲಿ ಡೆವಿಡ್ ಹೇರ ಎಂಬ ಖಾಸಗಿ ಸದ್ಗೃಹಸ್ಥರು ಇದ್ದರು. ಬಂಗಾಲದ ವರಿಷ್ಠ ನ್ಯಾಯಾಸನದಲ್ಲಿ ಸರ್ ಎಡ್ವರ್ಡ ಹಾಯಿಡ ಈಸ್ಟ ಎಂಬ ನ್ಯಾಯಾಧಿಪತಿಗಳಿದ್ದರು. ಇವರೀರ್ವರ ಸಹಾಯದಿಂದ ರಾಮಮೋಹನರಾಯರು ೧೮೧೭ ರಲ್ಲಿ ಕಲಕತ್ತೆಯಲ್ಲಿ ಒಂದು ಹಿಂದೂ ಕಾಲೇಜವನ್ನು ಆರಂಭಿಸಿದರು. ೧೮೧೮ ರಲ್ಲಿ ದಿ ರೆವರಂಡ ಡಾಕ್ತರ ಕಾರೇ ಎಂಬವರು ಸಿರಾಮಪುರದಲ್ಲಿ ಬಾಪ್ಟಿಸ್ಟ ಮಿಶನ ಕಾಲೇಜವನ್ನು ಸ್ಥಾಪಿಸಿದರು. ೧೮೨೦ ರಲ್ಲಿ ಡಾಕ್ಟರ ಡಫ್ ಎಂಬವರು ಕಲಕತ್ತೆಯಲ್ಲಿ ಬಿಷಪ್ಸ ಕಾಲೇಜ ಎಂಬ ವಿದ್ಯಾಲಯವನ್ನು ಆರಂಭಿಸಿದರು.

ಪಾರ್ಲಮೆಂಟನವರು ಮಂಜೂರು ಮಾಡಿದ ೧ ಲಕ್ಷ ರೂಪಾಯಿಯ ಸಹಾಯಕ ಹಣವನ್ನು ೧೮೨೩ ರ ವರೆಗೆ ಉಪಯೋಗಿಸಲೇ ಇಲ್ಲ. ಆ ವರುಷ "ಬಹು ಜನರ ಜ್ಞಾನಾಭಿವೃದ್ಧಿಯು ಹೆಚ್ಚು ಪರಿಣಾಮಕರವಾಗಿ ಸಾಗಬೇಕು, ಯುರೋಪಖಂಡದ ಉಪಯುಕ್ತವಾದ ಶಾಸ್ತ್ರಗಳನ್ನೂ ಕಲೆಗಳನ್ನೂ ಅವರು ಕಲಿಯಬೇಕು; ಅವರ ನೈತಿಕ ಸ್ವಭಾವದಲ್ಲಿ ಸುಧಾರಣೆಯಾಗಬೇಕು." ಇವನ್ನು ಕೈಗೂಡಿಸಲಿಕ್ಕೆ ಅವಶ್ಯವಾದ ಉಪಾಯಗಳನ್ನು ಕಂಡುಹಿಡಿಯುವ ಕುರಿತು ಜನರಲ್ ಕಮಿಟಿ ಆಫ್ ಪಬ್ಲಿಕ್ ಇನ್ಸಟ್ರಕ್ಶನ್ ಎಂಬ ಒಂದು ಸಮಿತಿಯನ್ನು ಗವ್ಹರ್ನರ ಜನರಲ್ಲರು ನಿಯಮಿಸಿದರು. ಸಾರ್ವಜನಿಕ ಶಿಕ್ಷಣಕ್ಕಾಗಿ ಮಂಜೂರಾದ ಸಹಾಯಕ ಹಣದ ವಿನಿಯೋಗವನ್ನೂ ಸಾರ್ವಜನಿಕ ಶಿಕ್ಷಣದ ವ್ಯವಸ್ಥೆಯನ್ನೂ ಈ ಸಮಿತಿಯವರು ಮೇಲ್ವಿಚಾರಿಸಿ ಸಾಗಿಸಬೇಕೆಂದು ಗೊತ್ತಾಯಿತು. ಈ ಕಮಿಟಿಯಲ್ಲಿ ಏತದ್ದೇಶೀಯ ವಿದ್ಯಾಪಕ್ಷಪಾತಿಗಳೇ ಬಹುಜನವೆಂಬವರಿದ್ದರು. ಹೆಸರಾದ ಸಂಸ್ಕೃತ ಪಂಡಿತರೆನಿಸಿಕೊಂಡ ಡಾಕ್ತರ ಎಚ್. ಎಚ್. ವಿಲ್ಸನ್ ಎಂಬವರು ಈ ಸಮಿತಿಯ ಸೆಕ್ರೆಟರಿಗಳಾಗಿದ್ದರು. ಆದ್ದರಿಂದ ಕಲಕತ್ತೆಯಲ್ಲಿ ಒಂದು ಸಂಸ್ಕೃತ ಕಾಲೇಜವನ್ನು ಸ್ಥಾಪಿಸುವದು, ಆಗ್ರಾ ದಿಲ್ಲಿಗಳಲ್ಲಿ ಹಿಂದೂ ವಿದ್ಯೆಗಳ ಕಾಲೇಜವನ್ನು ಆರಂಭಿಸುವದು, ದೊಡ್ಡ ಪ್ರಮಾಣದಿಂದ ಸಂಸ್ಕೃತ ಹಾಗು ಅರಬೀಭಾಷೆಗಳ ಗ್ರಂಥಗಳನ್ನು ಅಚ್ಚುಹಾಕಿಸುವದು, ಯುರೋಪಿಯ ಶಾಸ್ತ್ರೀಯ ಗ್ರಂಥಗಳನ್ನು ಅರಬೀಭಾಷೆಗೆ ತರ್ಜುಮೆ ಮಾಡಲಿಕ್ಕೆ ಒಬ್ಬ ಏತದ್ದೇಶೀಯ ವಿದ್ವಾಂಸನನ್ನು ನಿಯಮಿಸುವದು ಇವೇ ಮುಂತಾದ ಕಾರ್ಯಗಳು

ಕೈಕೊಳ್ಳಲ್ಪಟ್ಟವು. ೧೮೨೪ರಲ್ಲಿ ಕೋರ್ಟ ಆಫ್ ಡಿರೆಕ್ಟರರು ಮತ್ತೊಂದು ರಿಪೋರ್ಟನ್ನು ಪ್ರಸಿದ್ಧಪಡಿಸಿದರು. ಆಗ ಜೇಮ್ಸ ಮಿಲ್ ಎಂಬ ಹೆಸರಾದ ಇಂಗ್ಲಿಷ ತತ್ವಜ್ಞಾನಿಗಳು ಇಂಡಿಯು ಆಫೀಸಿನಲ್ಲಿ ಕೆಲಸಕ್ಕಿದ್ದರೆಂದೂ ಅವರೇ ಈ ಹೆಸರಾದ ರಿಪೋರ್ಟನ್ನು ಬರೆದರೆಂದೂ ವದಂತಿ ಇರುವದು. ಅದರಲ್ಲಿ ಅವರು ಇಲ್ಲಿ ನಡೆದ ಶಿಕ್ಷಣವ್ಯವಸ್ಥೆಯು ಸರಿಯಾದ ಮಾರ್ಗದಲ್ಲಿ ಇಲ್ಲೆಂದು ಇದನ್ನು ನಿಷೇಧಿಸಿದರು. ಅವರು ಪ್ರತಿಪಾದಿಸಿದ ಮುಖ್ಯ ಅಂಶಗಳು ಯಾವವೆಂದರೆ:— ಹಿಂದೂ ವಿದ್ಯೆಯನ್ನು ಕಲಿಸುವದು ಮುಖ್ಯ ಉದ್ದೇಶವಾಗಿರತಕ್ಕದ್ದಲ್ಲ; ಉಪಯುಕ್ತವಾದ ವಿದ್ಯೆಯನ್ನು ಅಭ್ಯಾಸ ಮಾಡಿಸುವದೇ ನಮ್ಮ ಹೆಗ್ಗುರಿಯಾಗಿರತಕ್ಕದ್ದು.

ಹಿಂದೂ ಮುಸಲ್ಮಾನರ ಭಾಷೆಗಳಮೂಲಕವಾಗಿ .ಅವರವರಲ್ಲಿ ದೃಢವಾಗಿದ್ದ ಮನೋವೃತ್ತಿಗಳಿಗೆ ತಕ್ಕ ಮನ್ನಣೆಯನ್ನು ಕೊಟ್ಟು ಅವರವರ ವಾಙ್ಮಯಗಳಲ್ಲಿ ಉಪಯುಕ್ತವಾದದ್ದನ್ನು ಅಭ್ಯಾಸ ಮಾಡಿಸುವದು ವಿಹಿತವೇ ಸರಿ. ಇವೆಲ್ಲವನ್ನು ಲಕ್ಷ್ಯದಲ್ಲಿಟ್ಟು ಒಳ್ಳೇಯ ಲಾಭಕರವಾದ ವಿದ್ಯೆಯನ್ನು ಆ ದೇಶದ ಜನರಲ್ಲಿ ಹರಡುವದು ಅರಿದಾದ ಕೆಲಸವಲ್ಲ. ಆದರೆ ಕೇವಲ ಪರಂಪರಾಗತವಾದ ಹಿಂದೂ ಇಲ್ಲವೆ ಮುಸಲ್ಮಾನ ಶಾಸ್ತ್ರವಾಙ್ಮಯಗಳ ಅಭ್ಯಾಸಕ್ಕೆ ಉತ್ತೇಜನ ಕೊಟ್ಟರುವ ಮೂಲಕ ನಿರರ್ಥಕವೂ ಹೆಚ್ಚುಕಡಿಮೆ ಅಪಾಯಕರವೂ ಆದ ಜ್ಞಾನಕ್ಕೇ ಮಹತ್ವಕೊಟ್ಟು ನಿಜವಾಗಿ ಉಪಯುಕ್ತವಾದದ್ದನ್ನು ತೀರ ಸ್ವಲ್ಪ ಮಾತ್ರ ಲಕ್ಷಿಸಿದಂತೆ ಆಗಿದೆ.

ಕಳೆದ ವರುಷ ಕಲಕತ್ತೆಯಲ್ಲಿ ಸಂಸ್ಕೃತ ಕಾಲೇಜವನ್ನು ಸ್ಥಾಪಿಸಿದಾಗ ಪಾಶ್ಚಿಮಾತ್ಯ ವಿದ್ಯಾಪಕ್ಷಪಾತಿಗಳಾಗಿದ್ದ ರಾಮಮೋಹನರಾಯರು ಈ ಕೃತ್ಯವನ್ನು ಖಂಡಿಸಿದ್ದರು. ಸಾರ್ವಜನಿಕ ಅಭಿಪ್ರಾಯವು ಆಂಗ್ಲವಿದ್ಯಾಪ್ರಸರಣೆಯ ಕಡೆಗೇ ಇತ್ತು. ಆದರೂ ಜನರಲ್ಲಿ ಪಾಶಿಮಾತ್ಯ ವಿದ್ಯಾಶಾಸ್ತ್ರಗಳ ಬಗ್ಗೆ ಮೆಚ್ಚುಗೆಯುಂಟಾಗಿಲ್ಲವೆಂದು ಕಮಿಟಿಯವರು ಪ್ರತಿಪಾದಿಸಿದರು. ರಾಜಾರಾಮ ಮೋಹನರಾಯರು ಆ ಕಾಲದಲ್ಲಿ ಗವ್ಹರ್ನರ ಜನರಲ್ಲರಿಗೆ ಬರದುಕೊಂಡ ಅರ್ಜಿಯ ಕೆಲವಂಶಗಳು ಈ ದೇಶದ ಶಿಕ್ಷಣದ ಇತಿಹಾಸದಲ್ಲಿ ಒಳ್ಳೇ ಮಹತ್ವವುಳ್ಳವಾಗಿವೆ ಅವರು ಹೇಳಿಕೊಂಡದ್ದು:—

ಹಿಂದುಸ್ಥಾನದಲ್ಲಿ ಪ್ರಜರಲ್ಲಿರುವ ವಿದ್ಯೆಯನ್ನೇ ಹರಡಲಿಕ್ಕಾಗಿ ಕಂಪನಿ ಸರಕಾರದವರು ಸಂಸ್ಕೃತ ಕಾಲೇಜವೊಂದನ್ನು ಸ್ಥಾಪಿಸುತ್ತಿರುವರು. ಈ ಸಂಸ್ಥೆ

ಯಲ್ಲಿ ದೊರೆಯುವ ಶಿಕ್ಷಣದಲ್ಲಿ ನ್ಯಾಯ ವ್ಯಾಕರಣ ಮೊದಲಾದ ಶಾಸ್ತ್ರಗಳ ಜ್ಞಾನವು ದೃಢವಾಗಬಹುದು. ಇದರಿಂದ ವ್ಯಕ್ತಿಗಾಗಲಿ ಸಮಾಜಕ್ಕಾಗಲಿ ಏನೂ ಉಪಯೋಗವಾಗದು. ಸಾವಿರಾರು ವರುಷಗಳ ಹಿಂದಿನ ಶಾಸ್ತ್ರಗಳ ನಿರರ್ಥಕವಾದ ನಿಯಮಗಳನ್ನೂ ಅಪವಾದಗಳನ್ನೂ ಅಭ್ಯಾಸಿಸುವದರಿಂದ ಪ್ರಯೋಜನವೇನು ? ತಮ್ಮ ಹಿಂದೀ ಜನರ ಉತ್ಕರ್ಷವಾಗಲೆಂದು ಇಂಗ್ಲಂಡಿನ ಸರಕಾರದವರು ಹಣ ವನ್ನು ಮಂಜೂರು ಮಾಡಿರುವರು. ಈ ಉದ್ದೇಶವು ಈಡೇರದಿರುವ ಕಾರ್ಯ ಕ್ಕಾಗಿ ಇದನ್ನು ಅಪವ್ಯಯ ಮಾಡುವದರಲ್ಲಿ ಏನೂ ಹುರುಳಿಲ್ಲ. ವ್ಯಾಕರಣವನ್ನು ಅಭ್ಯಾಸಿಸಲಿಕ್ಕಾಗಿ ತಪ (೧೨ ವರುಷ) ವನ್ನು ವ್ಯಯಮಾಡಿಸಿದ್ದರಿಂದ ಬರುವ ಪುರುಷಾರ್ಥವೇನು ? ಹಿಂದೆ ಇಂಗ್ಲಂಡಿನಲ್ಲಿಯೂ ಹುರುಳಿಲ್ಲದ ತತ್ವಜ್ಞಾನವು ನೆಲೆಗೊಂಡಿತ್ತು; ಬೇಕನ್ನನ ತತ್ವಜ್ಞಾನವು ಅದನ್ನು ಹೊಡೆಗೋಡಿಸಿತು. ಇದ ರಿಂದ ಬ್ರಿಟಿಷ ಜನಾಂಗವು ನಿಜಜ್ಞಾನವನ್ನು ದೊರಕಿಸಿತು. ಈ ನಮ್ಮ ದೇಶವನ್ನು ಅಜ್ಞಾನಾಂಧಕಾರದಲ್ಲಿ ಇಡುವದಾದರೆ ನಮ್ಮಲ್ಲಿಯ ಸಂಸ್ಕೃತ ಅಭ್ಯಾಸವನ್ನು ಪುರಸ್ಕರಿಸಿರಿ. ಇದು ಸರಕಾರದ ಉದ್ದೇಶವಲ್ಲ. ತಮ್ಮ ಪ್ರಜೆಗಳ ಉದ್ಧಾರವೇ ಸರ ಕಾರದವರ ಹೆಗ್ಗುರಿಯಾಗಿದೆ. ಆದ್ದರಿಂದ ಹೊಸ ವಿದ್ಯೆಯನ್ನು ಜನರಲ್ಲಿ ಹರಡಿರಿ. ಗಣಿತ, ಭೌತಿಕ ಶಾಸ್ತ್ರಗಳು, ರಸಾಯನಶಾಸ್ತ್ರ, ಶರೀರಶಾಸ್ತ್ರ ಮುಂತಾದ ಉಪ ಯುಕ್ತ ಶಾಸ್ತ್ರಗಳ ಜ್ಞಾನವನ್ನು ನಮ್ಮವರು ಪಡೆಯಲಿ. ಯುರೋಪದಲ್ಲಿ ಅಭ್ಯಾಸಮಾಡಿ ಹೆಸರಾದ ಕೆಲವು ಶಾಸ್ತ್ರಜ್ಞರನ್ನು ಸರಕಾರದವರು ಮಂಜೂರು ಮಾಡಿದ ಸಹಾಯಕ ದ್ರವ್ಯದಿಂದ ಇಲ್ಲಿಗೆ ಬರಮಾಡಿಕೊಂಡು, ಅವಶ್ಯವಾದ ಗ್ರಂಥಗಳು, ಯಂತ್ರ ಮೊದಲಾದ ಸಾಧನಗಳು ಇವುಗಳಿಂದ ಸನ್ನದ್ಧವಾದ ಕಾಲೇಜವೊಂದನ್ನು ಸ್ಥಾಪಿಸಿರಿ.

ರಾಜಾರಾಮ ಮೋಹನರ ಪ್ರಾರ್ಥನೆಯನ್ನು ಗವ್ಹರ್ನರ ಜನರಲ್ಲರು ಕಮಿಟ ಯವರ ಕಡೆಗೆ ಕಳುಹಿದರು. ಆದರೆ ಇದಕ್ಕೆ ಉತ್ತರವೇ ದೊರೆಯಲಿಲ್ಲ. ಸಂಸ್ಕೃತ ಕಾಲೇಜವೇ ಸ್ಥಾಪಿತವಾಯಿತು. ಅಂತೂ, ಇಂಗ್ಲಂಡಿನಲ್ಲಿಯ ಕೋರ್ಟ ಆಫ್ ಡಿರೆಕ್ಟರ ಸಭೆಯವರೂ ಬಂಗಾಲದ ಮುಂದಾಳುಗಳೂ ಪಾಶ್ಚಿಮಾತ್ಯ ವಿದ್ಯಾಪಕ್ಷಪಾತಿಗಳಾಗಿದ್ದರೂ ಈ ದೇಶದಲ್ಲಿ ಸ್ಥಾಪಿಸಲ್ಪಟ್ಟ ಜನರಲ್ ಕಮಿಟಿ ಆಫ್ ಪಬ್ಲಿಕ್ ಇನ್ಸಟ್ರಕ್‌ಶನ್ ಸಮಿತಿಯವರು ಇಲ್ಲಿಯ ವಿದ್ಯಾ ಸಾಂಪ್ರದಾಯ ವನ್ನೇ ಪುರಸ್ಕರಿಸಿದರು.

೧೮೨೭ ರಲ್ಲಿ ಈ ಕಮಿಟಿಯುವರ ಆರಂಭದ ವ್ಯವಸ್ಥೆಗಳನ್ನು ಕುರಿತ ಪರ್ಯಾಲೋಚಿಸಿ ಕೋರ್ಟ ಆಫ್ ಡಿರೆಕ್ಟರರು ಬರೆದದ್ದು:— ಜನ ಶಿಕ್ಷಣದ ಉಪಯುಕ್ತತೆಯನ್ನು ಲಕ್ಷ್ಯದಲ್ಲಿಡತಕ್ಕದ್ದು. ಹಿಂದೀ ಜನರ ಮನೋಗತ ವಿರುದ್ಧವಾಗಿ ಕ್ರಾಂತಿಕಾರಕವಾದ ಬದಲಾವಣೆಗಳನ್ನು ಆರಂಭಿಸಲಾಗದು. ಸ ಕಾರದ ಖಾತೆಗಳಲ್ಲಿಯೂ ದೇಶದ ವ್ಯವಸ್ಥೆಯಲ್ಲಿಯೂ ಹಿಂದೀಯರನ್ನು ಹೆಚ ಹೆಚ್ಚಾಗಿ ಸೇರಿಸಿಕೊಳ್ಳಬೇಕಾಗಿದೆ. ನಾವು ಏರ್ಪಡಿಸುವ ಶಿಕ್ಷಣದ ಮು ಉದ್ದೇಶವೆಂದರೆ ಸಾರ್ವಜನಿಕ ಕಾರ್ಯಗಳನ್ನು ನಿರ್ವಹಿಸಲು ತಕ್ಕವರಾದ ಅ ಕಾರಿಗಳ ವರ್ಗವು ನಮಗೆ ಬೇಕಾಗಿದೆ. ಶಿಕ್ಷಣದಿಂದ ಬುದ್ಧಿವಿಕಾಸವಾಗು ದಲ್ಲದೆ ನೈತಿಕ ವಿಕಾಸವೂ ಆಗತಕ್ಕದ್ದು. ಇದರಿಂದ ಪ್ರಾಮಾಣಿಕರಾದ ಅ ಕಾರಿಗಳ ವರ್ಗವು ದೊರೆತು ವಿಶ್ವಾಸಕ್ಕೆ ಪಾತ್ರರಾದ ಜನರು ನಮಗೆ ಲಭಿ ತಕ್ಕದ್ದು. ಇದು ಶಿಕ್ಷಣದ ಹೆಚ್ಚಿನ ಉದ್ದೇಶವಾಗಿರತಕ್ಕದ್ದು. ಇದನ್ನು ಕಮಿ ಯುವರು ಲಕ್ಷ್ಯದಲ್ಲಿ ಯಾವಾಗಲೂ ಇಡುವರೆಂದು ನಾವು ಆಶಿಸುತ್ತೇವೆ.

೧೮೩೦ರಲ್ಲಿ ಕೋರ್ಟ ಆಫ್ ಡಿರೆಕ್ಟರ ಸಭೆಯುವರು ಬಂಗಾಲ ಮುಂಬ ಮದ್ರಾಸಗಳ ಸರಕಾರದವರಿಗೆ ಮೇಲಿನ ಅಭಿಪ್ರಾಯಗಳನ್ನೇ ಒಳಕೊಂಡ ಒಂ ಲೇಖನವನ್ನು ಕಳಿಸಿದರು. ಅದರಲ್ಲಿ ಅವರು ಬರೆದದ್ದು—" ಹಿಂದುಸ್ತಾನ ಮೇಲಿನ ವರ್ಗಗಳ ಜನರಿಗೆ ಯುರೋಪೀಯ ಶಾಸ್ತ್ರಗಳನ್ನೂ ವಾಙ್ಮಯವನ ಅಭ್ಯಾಸ ಮಾಡುವ ಸಂಧಿಯನ್ನು ಒದಗಿಸಿಕೊಡಬೇಕೆಂದು ನಾವು ಇಚ್ಛಿಸ ತ್ತೇವೆ. ಸಾಕಷ್ಟು ಬಿಡುವೂ ಸ್ವಾಭಾವಿಕ ವರ್ಚಸ್ಸವೂ ಉಳ್ಳ ವರ್ಗಗಳ ಜ ರಲ್ಲಿ ಉಂಟಾಗುವ ಶೀಲವು ಕೊನೆಗೆ ಬಹುಜನರ ಶೀಲ ಸ್ವಭಾವಗಳನ್ನು ಉಂಟ ಮಾಡುವದು. ನಮ್ಮ ಸರಕಾರವು ಆರಂಭವಾದ ಮೂಲಕ ಈ ಮೇಲಿನ ವರ್ಗ ಗಳ ಜನರಿಗೆ ಹಿಂದೆ ಅವರು ಉಪಭೋಗಿಸುತ್ತಿದ್ದ ಕೆಲವು ಸೌಕರ್ಯಗಳು ಇ ದಾಗಿವೆ. ಇವುಗಳಿಗೆ ಪ್ರತಿಯಾಗಿ ನಾವು ಅವರಿಗೆ ಕೆಲವು ಸೌಕರ್ಯಗಳನ ಒದಗಿಸಿಕೊಡತಕ್ಕದ್ದು. ಈ ಕಾರಣಗಳ ಮೂಲಕ, ಈ ವರೆಗೆ ನಮ್ಮ ಸರಕಾ ರದ ನವಕರಿಯಲ್ಲಿ ಮೇಲಿನ ವರ್ಗಗಳ ಜನರಿಗೆ ದೊರೆಯಬಹುದಾಗಿರುವದಕ್ಕಿಂ ಹೆಚ್ಚಿನ ಸ್ಥಳಗಳು ದೊರೆಯಲಿಕ್ಕೆ ಅವರಲ್ಲಿ ಆವಶ್ಯಕವಾಗಿರುವ ಯೋಗ್ಯತೆಯ ಉಂಟಾಗಲಿಕ್ಕೆ ಬೇಕಾದ ಶಿಕ್ಷಣವೇ ಅವರಿಗೆ ಲಭಿಸುವಂತೆ ನಾವು ನೋಡಿಕೊಳ ಬೇಕಾಗಿದೆ."

ಅದೇವರುಷ ಸರಕಾರದವರು ಜನರಲ್ ಕಮಿಟಿ ಆಫ್ ಪಬ್ಲಿಕ್ ಇನ್ಸಟ್ರಕ್ಶನ್ ಎಂಬ ಸಮಿತಿಯವರಿಗೆ ಬರೆದು ತಿಳಿಸಿದ್ದು:— ಇಂಗ್ಲಿಷ ಭಾಷೆಯನ್ನೇ ಕ್ರಮಶಃ ಹೆಚ್ಚು ಹೆಚ್ಚಾಗಿ ಸರಕಾರದ ಸಾರ್ವಜನಿಕ ಕೆಲಸಗಳಲ್ಲಿ ರೂಢಿಯಲ್ಲಿ ತರುವದು ಬ್ರಿಟಿಷ ಸರಕಾರದ ಇಚ್ಛೆಯೂ ಧೋರಣವೂ ಆಗಿರುವದು. ಈ ನಮ್ಮ ಕೋರಿಕೆಯು ಈಡೇರಲು ಉತ್ತೇಜನವನ್ನೀಯಲು ನಾವು ಕೈಲಾದಷ್ಟು ತಿರವಾಗುವೆವು.

ಹೀಗೆ ಇಂಗ್ಲಿಷವಿದ್ಯ ಹಿಂದೀವಿದ್ಯಗಳ ವಿಷಯದಲ್ಲಿ ನಡೆದಿದ್ದ ಚರ್ಚೆಯು ೧೮೫೩ರ ವರೆಗೆ ನಡದೇ ಇತ್ತು. ಆ ವರುಷ ಜನರಲ್ ಕಮಿಟಿ ಆಫ್ ಪಬ್ಲಿಕ್ ಇನ್ಸಟ್ರಕ್ಶನ್ ಎಂಬ ಸಮಿತಿಯ ಪ್ರೆಸಿಡೆಂಟರು ಮೆಕಾಲೇ ಎಂಬ ಸದ್ಗೃಹಸ್ಥ ರಿದ್ದರು. ಇವರು ಗವ್ಹರ್ನರ ಜನರಲ್ಲನ ಕೌನ್ಸಿಲದ ಕಾಯಿದೆಯ ಮೆಂಬರ ರಾಗಿದ್ದರು. ಇವರು ಇಂಗ್ಲಿಷ ಭಾಷೆಯ ಮುಖಾಂತರವಾಗಿಯೇ ಏತದ್ದೇಶೀ ಯರ ಶಿಕ್ಷಣವು ಸಾಗತಕ್ಕದ್ದೆಂದು ಪ್ರತಿಪಾದಿಸಿ ಬರೆದ ರಿಪೋರ್ಟು ಶಿಕ್ಷಣದ ಇತಿಹಾಸದಲ್ಲಿ ಪ್ರಸಿದ್ಧವಾದದ್ದಿರುವದು. ಇದರೊಳಗಿನ ಅಂಶಗಳನ್ನು ಇಲ್ಲಿ ಕೊಡುವೆವು:— "ಈ ವಿಷಯವನ್ನು ಕುರಿತು ಚರ್ಚಿಸುತ್ತಿರುವವರೆಲ್ಲರು ಒಂದು ಮಾತಿನ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಭಾಗದ ಹಿಂದುಸ್ಥಾನದ ಜನರು ಸಾಮಾನ್ಯವಾಗಿ ಆಡುವ ಭಾಷೆಗಳಲ್ಲಿ ವಾಙ್ಮಯಕ್ಕೆ ಇಲ್ಲವೆ ಶಾಸ್ತ್ರಕ್ಕೆ ಸಂಬಂಧಿಸಿದ ಜ್ಞಾನವು ಇರುವದಿಲ್ಲ. ಈ ವಿಷಯದಲ್ಲಿ ಇವುಗಳ ಬಡತನವೂ ಹೀನತೆಯೂ ಪ್ರಸಿದ್ಧವಿರುವವು. ಬೇರೊಂದು ಕಡೆಯಿಂದ ತಂದು ತುಂಬಿ ಅವುಗಳನ್ನು ಸಮೃದ್ಧವನ್ನಾಗಿ ಮಾಡುವವರೆಗೆ ಆ ಭಾಷೆಗಳಿಗೆ ಯಾವ ದೊಂದು ಉಪಯುಕ್ತವಾದ ಗ್ರಂಥವನ್ನು ತರ್ಜುಮೆಗೊಳಿಸುವದು ಸುಲಭವಾ ಗಿಲ್ಲ. ಹೆಚ್ಚಿನ ವಿದ್ಯಾಭ್ಯಾಸವನ್ನು ಕೈಕೊಳ್ಳಲು ಯೋಗ್ಯತೆಯುಳ್ಳ ಜನರು ಬುದ್ಧಿಯ ವಿಕಾಸವನ್ನು ಪಡೆಯಬೇಕಾದರೆ ಸದ್ಯಕ್ಕೆ ತಪ್ಪದೆ ಸ್ವಭಾಷೆಯನ್ನು ಬಿಟ್ಟು ಬೇರೊಂದು ಭಾಷೆಯ ಮುಖಾಂತರವಾಗಿಯೇ ಅವರು ಶಿಕ್ಷಣ ಪಡೆಯಬೇಕಾ ಗಿರುವದೆಂಬದನ್ನು ಎಲ್ಲರೂ ಒಪ್ಪಿಕೊಳ್ಳುವರು.

ಈ ಬೇರೆ ಭಾಷೆಯು ಯಾವದಿರತಕ್ಕದ್ದು ? ಕಮಿಟಿಯ ಅರ್ಧ ಜನರು ಅದು ಇಂಗ್ಲಿಷ ಭಾಷೆಯಿರಬೇಕೆಂದು ಪ್ರತಿಪಾದಿಸುವರು. ಉಳಿದ ಅರ್ಧ ಜನರು

ಇದು ಅರಬೀ ಭಾಷೆ ಇಲ್ಲವೆ ಸಂಸ್ಕೃತ ಭಾಷೆಯಿರಬೇಕೆಂದು ಒತ್ತಿ ಹೇಳುವರು. ಒಟ್ಟಿನ ಮೇಲೆ ಪ್ರಶ್ನವು ಇಷ್ಟೇ ಆಗಿದೆ- ಯಾವ ಭಾಷೆಯ ಜ್ಞಾನವು ಅಭ್ಯಾಸಿಸಲು ಹೆಚ್ಚು ಅರ್ಹವಾದದ್ದು.

ಸ್ವಭಾಷೆಯ ಮೂಲಕ ವಿದ್ಯಾಮೃತವನ್ನು ಸವಿಯಲಾರದ ಜನಾಂಗವನ್ನು ನಾವು ಶಿಕ್ಷಣಕೊಟ್ಟು ಉದ್ಧರಿಸಬೇಕಾಗಿದೆ. ಈ ಜನರಿಗೆ ನಾವು ಯಾವದಾದ ರೊಂದು ಪರಭಾಷೆಯನ್ನು ಕಲಿಸಲೇ ಬೇಕಾಗಿದೆ. ಈ ಸಂದರ್ಭದಲ್ಲಿ ನಮ್ಮ ಭಾಷೆಗಿರುವ ಹೆಚ್ಚಿನ ಯೋಗ್ಯತೆಯನ್ನು ಕುರಿತು ಇಲ್ಲಿ ಪ್ರತ್ಯೇಕವಾಗಿ ಪ್ರಸ್ತಾಪಿಸುವ ಕಾರಣವಿಲ್ಲ. ಪಾಶ್ಚಿಮಾತ್ಯ ದೇಶಗಳ ಭಾಷೆಗಳಲ್ಲಿ ಇದು ಅಗ್ರಸ್ಥಾನವನ್ನು ಪಡೆದಿರುವದು. ··ಇಷ್ಟೇ ಅಲ್ಲ. ಹಿಂದುಸ್ತಾನದ ರಾಜಧಾನಿಗಳಲ್ಲೆಲ್ಲ ಮೇಲಿನ ವರ್ಗಗಳಿಗೆ ಸೇರಿದ ದೇಶೀಯರು ಇಂಗ್ಲಿಷ ಭಾಷೆಯನ್ನೇ ಆಡುವರು. ಪೌರ್ವಾತ್ಯ ಸಮುದ್ರ ಪ್ರದೇಶಗಳೆಲ್ಲ ವ್ಯಾಪಾರದ ಭಾಷೆಯು ಇಂಗ್ಲಿಷವೇ ಆಗುವ ಸಂಭವ ವಿರುವದು.

ಈ ಭಾಷೆಯನ್ನು ನಾವು ಕಲಿಸಬಹುದಾಗಿದೆ. ಹೀಗೆ ಮಾಡಕೆ, ನಮ್ಮ ಭಾಷೆಯಲ್ಲಿರುವ ಗ್ರಂಥಗಳಂಥ ಪುಸ್ತಕಗಳು ಇಲ್ಲದ ಭಾಷೆಯಲ್ಲಿ ಅಭ್ಯಾಸ ವನ್ನು ಸಾಗಿಸುವದು ಸರಿಯಾಗಬಹುದೇ ? ಯುರೋಪೀಯ ಶಾಸ್ತ್ರಗಳನ್ನು ಕಲಿಸುವ ಬದಲು ನಮ್ಮ ಶಾಸ್ತ್ರಗಳ ದೃಷ್ಟಿಯಿಂದ ಹೀನವೆನಿಸಿಕೊಳ್ಳುವ ಶಾಸ್ತ್ರಾಭ್ಯಾಸವನ್ನು ಮಾಡಿಸಬಹುದೇ ? ವಿಚಾರ ಸಮ್ಮತವಾದ ತತ್ವಜ್ಞಾನವನ್ನೂ ನಿಜವಾದ ಇತಿಹಾಸವನ್ನೂ ಕಲಿಸುವದನ್ನು ಬಿಟ್ಟು ಸಾರ್ವಜನಿಕ ಹಣದಿಂದ ನಗಗೀಡುಮಾಡುವ ವೈದ್ಯ ಶಾಸ್ತ್ರವನ್ನೂ ಇಂಗ್ಲಿಷ ಶಾಲೆಗಳಲ್ಲಿ ಕಲಿಯುವ ಹುಡಿಗೆಯರು ಬಿದ್ದು ಬಿದ್ದು ನಗುವ ಜ್ಯೋತಿಷ ಶಾಸ್ತ್ರದ ಮಾತುಗಳನ್ನೂ ಕಲಿಸುವದು ಸರಿಯಾಗಬಹುದೇ ? ಇವರ ಇತಿಹಾಸದಲ್ಲಿ ಮುವತ್ತು ಅಡಿ ಎತ್ತರವಾದ ಅರಸರು ಮೂವತ್ತು ಸಹಸ್ರವರ್ಷಗಳವರೆಗೆ ಆಳಿದ್ದರ ಉಲ್ಲೇಖವುಂಟು. ಇವರ ಭೂಗೋಲದಲ್ಲಿ ಜೇನುತುಪ್ಪದ ಸಮುದ್ರಗಳೂ ಬೆಣ್ಣೆಯ ಮಹಾಸಾಗರಗಳೂ ಇರುವವು ! !

ತಾ॥ ೨-೨-೩೬ನೆಯ ದಿವಸ ಮೆ॥ ಕಲೆಕ್ಟರ ಸಾಹೇಬ ಧಾರವಾಡ
ಇವರ ಅಧ್ಯಕ್ಷತೆಯಲ್ಲಿ ನಡೆದ ಪ್ರಾಕ್ಟಿಸಿಂಗ ಸ್ಕೂಲಿನ
"ಪಾಲಕರ ದಿನ"ದ ಕಾರ್ಯಕಲಾಪಗಳಲ್ಲಿ

ಹೆ॥ ಮಾ॥ ಟ್ರೇನಿಂಗ ಸ್ಕೂಲ ಇವರು ಓದಿದ ರಿಪೋರ್ಟು

ಅಧ್ಯಕ್ಷ ಮಹಾಶಯರೇ, ಬಂಧುಭಗಿನಿಯರೇ

ತಾವೆಲ್ಲರು ನಮ್ಮ ಆಮಂತ್ರಣವನ್ನು ಮನ್ನಿಸಿ ಈ ದಿನ ಸಂಜೆಗೆ ಇಲ್ಲಿಗೆ ಬಂದದ್ದಕ್ಕಾಗಿ ನಾನು ನಿಮ್ಮೆಲ್ಲರಿಗೆ ಕೃತಜ್ಞನಾಗಿದ್ದೇನೆ. ನೀವು ಇಲ್ಲಿ ಬಂದ ಮೂಲಕ ಟ್ರೇನಿಂಗಸ್ಕೂಲಿನಲ್ಲಿಯೂ ಪ್ರಾಕ್ಟಿಸಿಂಗಸ್ಕೂಲಿನಲ್ಲಿಯೂ ನಾವು ಮಾಡುತ್ತಿರುವ ಕೆಲಸದಲ್ಲಿ ನಮ್ಮನ್ನು ಹುರಿಗೊಳಿಸಿದಂತಾಗುವದು.

ಪ್ರಾ. ಸ್ಕೂಲಿಗೆ ಸಂಬಂಧಿಸಿ "ಪಾಲಕರ ದಿನ"ವನ್ನು ಆಚರಿಸುವ ಸಂಧಿ ಒದಗಿದ್ದು ಇದೇ ಮೊದಲನೆಯದಾಗಿದೆ. ನಮ್ಮ ಮೆ॥ ಎಜ್ಯುಕೇಶನಲ್ ಇನ್ಸ್‌ಪೆಕ್ಟರ ಸಾ॥ ರು ನನಗೆ ಕೆಲವು ತಿಂಗಳ ಹಿಂದೆ ಈ ಬಗ್ಗೆ ಸೂಚಿಸಿದರು. ಅದಕ್ಕಾಗಿ ಅವರ ಉಪಕಾರವನ್ನು ನಾನು ಸ್ಮರಿಸುವೆನು.

ನಮ್ಮ ಟ್ರೇನಿಂಗ ಸ್ಕೂಲವೂ ಪ್ರಾಕ್ಟಿಸಿಂಗ ಸ್ಕೂಲವೂ ಈ ಕನ್ನಡ ಜಿಲ್ಹೆಗಳಲ್ಲಿ ದೀರ್ಘಕಾಲದ ಜನಪ್ರಿಯವಾದ ಸಂಸ್ಥೆಗಳಾಗಿವೆ. ಪ್ರಾಕ್ಟಿಸಿಂಗಸ್ಕೂಲಿನ ಕೆಲಸವು ಮೇಲ್ತರದ್ದಿರುವದೆಂದು ಎಷ್ಟೋ ವರುಷಗಳಿಂದ ಖ್ಯಾತಿಗೊಂಡಿದೆ. ಸಾಮಾನ್ಯ ಪ್ರಾಥಮಿಕ ಶಾಲೆಗಳಿಗೆ ಹೋಲಿಸಿ ನೋಡಲು ಈ ಶಾಲೆಯ ಶಿಕ್ಷಕ ವರ್ಗವು ಮೇಲ್ತರದ್ದಿರುವದು. ಇವರಿಗೆ ಟ್ರೇನಿಂಗಸ್ಕೂಲಿನ ಅನುಭವಿಕರಾದ ಶಿಕ್ಷಕರ ಸಲಹೆಯ ಸೌಕರ್ಯವಿರುವದು. ಹೀಗಿದ್ದರೂ ನಮ್ಮ ಕೆಲಸದ ಬಗ್ಗೆ ಪಾಲಕರಾದ ತಮ್ಮಲ್ಲಿ ಹೆಚ್ಚಿನ ಸಹಾನುಭೂತಿಯೂ ಸಹಕಾರೇಚ್ಛೆಯೂ ಜಾಗೃತವಾದರೆ, ಈ ಶಾಲೆಯಲ್ಲಿ ನಡೆಯುವ ಕೆಲಸವು ಸದ್ಯಕ್ಕಿಂತ ಹೆಚ್ಚು ಪರಿಣಾಮಕರವಾಗಿ, ನಿಮ್ಮ

ಹುಡುಗರಿಗೆ ಇದರಿಂದ ಬಹಳ ಹಿತವಾಗುವದೆಂದು ನಾವು ನೆರೆನಂಬಿದ್ದೇವೆ. ನೀ ನನುಗೆ ನೆರವಾಗುವ ಮೂಲಕ ನಿಮ್ಮ ಮಕ್ಕಳು ಹುರಿಗೊಳ್ಳುವರೆಂದೂ ನವ ಕೆಲಸವು ಹೆಚ್ಚು ಸನಿಯೊಡೆಯುವದೆಂದೂ ನಾವು ಹೇಳಬಲ್ಲೆವು. ಈ ಉದ್ದೇ ಶದಿಂದಲೇ ನಾವು ನಿಮ್ಮನ್ನು ಇಂದು ಸಂಜೆಯೊಪ್ಪತ್ತು ಇಲ್ಲಿಗೆ ಬರಮಾಡಿಕೊಂಡ ನಿಮ್ಮ ಮಕ್ಕಳ ಕೆಲಸವನ್ನು ನಿಮಗೆ ತೋರಿಸಿ, ಅವರ ಬೇಡಿಕೆಗಳನ್ನೂ ಅವರ ಬ ನಿಸುಗಿರುವ ಹೆಗ್ಗುರಿಗಳನ್ನೂ ನಿಮ್ಮಿಂದ ಅರಿಯಲು ಪ್ರಯತ್ನಿಸಿದ್ದೇವೆ.

ಇನ್ನು ಇವೆರಡು ಸಂಸ್ಥೆಗಳ ಸದ್ಯಃಸ್ಥಿತಿಯನ್ನೂ ಅವುಗಳ ಕೆಲಸವನ್ ಕುರಿತು ನಾಲ್ಕು ಮಾತುಗಳನ್ನು ಹೇಳುವೆನು.

ಕಳೆದ ಜೂನ ತಿಂಗಳಿಂದ ಈ ಟ್ರೇನಿಂಗ ಸ್ಕೂಲಿನಲ್ಲಿ ಮೂರುವರ್ಷದ ವರ್ಗ ಗಳು ಆರಂಭವಾದವೆಂಬದು ನಿಮ್ಮೆಲ್ಲರಿಗೆ ಗೊತ್ತಿರುವದು. ಈಗ ಇಲ್ಲಿ ೬೨ ಜ ವಿದ್ಯಾರ್ಥಿಗಳಿರುವರು. ೧ನೆಯ ವರ್ಷದ ವರ್ಗದಲ್ಲಿ ೬೦ ಜನರು, ಎರಡನೆಯ ವರ್ಷದಲ್ಲಿ ೨೨ ಜನರು, ಮೂರನೆಯ ವರ್ಷದಲ್ಲಿ ೧೦ ಜನರಿದ್ದಾರೆ. ಇವರಲ್ಲಿ ೧ ಜನರು ಹಿಂದುಳಿದ ವರ್ಗಗಳವರು; ೫೩ ಜನರು ಮಧ್ಯಮ ವರ್ಗದವರು, ೬ ಜ ಮುಹಮ್ಮದೀಯರು, ೩ ಜನ ಕ್ರಿಸ್ತರು ಹಾಗು ಮಿಕ್ಕ ೧೮ಜನರು ಮುಂದುವರಿ ವರ್ಗಗಳಿಗೆ ಸೇರಿರುವರು. ಧಾರವಾಡ, ಬೆಳಗಾವ ಹಾಗು ಬಿಜಾಪುರ ಈ ಮೂರ ಜಿಲ್ಹಾ ಬೋರ್ಡುಗಳಿಂದ ಒಟ್ಟಿಗೆ ೫೨ ಜನರು ಸರಕಾರದ ಸ್ಟಾಯಿಪೆಂಡದೊಂದಿ ಬಂದಿರುವರು. ಮ್ಯುನಿಸಿಪಾಲಿಟಿಗಳಿಂದ ಬಹುತರ ಶಿಷ್ಯವೃತ್ತಿಯೊಂದಿಗೆ ಬಂದವರ ೨೧ ಜನರು; ಮಿಕ್ಕ ೧೯ ಜನರು ಎಡೆಡ್ ಸಂಸ್ಥೆಗಳಿಂದಲೂ ಸಂಸ್ಥಾನಗಳಿಂದಲ ಬಂದು ಬಹುತರ ತಮ್ಮ ಸ್ವಂತ ಖರ್ಚಿನಿಂದ ಕಲಿಯುತ್ತಿರುವರು. ಈ ವರುಷ ದಿಂದ ಅಭ್ಯಾಸಪತ್ರಿಕೆಯು ಸುಧಾರಿಸಿ ಬೆಳಿಸಲ್ಪಟ್ಟಿದೆ. ಈಗ ಇವರು ವಿವಿಧ ವಿಷಯ ಗಳನ್ನು ಚೆನ್ನಾಗಿ ವಿಮರ್ಶಿಸಿ ಅಭ್ಯಾಸ ಮಾಡಬೇಕಾಗುವದು; ಈ ಅಭ್ಯಾಸದಿಂ ಅವರಲ್ಲಿ ಸಂಸ್ಕೃತಿಯು ಉಂಟಾಗಬೇಕಾಗಿರುವದು. ಇದಲ್ಲದೆ ಸದ್ಯದ ಅಭ್ಯಾಸ ದಲ್ಲಿ ವ್ಯವಹಾರೋಪಯುಕ್ತವಾದ ಸಂಗತಿಗಳಿಗೆ ಹೆಚ್ಚು ಲಕ್ಷ್ಯ ಕೊಡಲಾಗಿದೆ. ವಿಷಯಗಳು ಆಧುನಿಕ ಶಿಕ್ಷಣದ ವಿಚಾರಗಳಿಗೆ ಹೊಂದಿಕೊಂಡಿವೆ. ಇನ್ನು ಮುಂದ ಇಲ್ಲಿಂದ ಎರಡನೆಯ ಹಾಗು ಮೂರನೆಯ ವರುಷಗಳ ಸರಟಿಫಿಕೇಟುಪಡೆದು ಹೊರಗ ಹೋಗುವ ಶಿಕ್ಷಕರ ಸಾಮಾನ್ಯ ಜ್ಞಾನವು ತೃಪ್ತಿಕರವಾದದ್ದಾಗುವದು; ಆಧುನಿಕ ಶಿಕ್ಷಣ ಪದ್ಧತಿಗಳ ಜ್ಞಾನವೂ ಕಲಿಸುವ ರೂಢಿಯೂ ಸಮಾಧಾನಕರವಾದವಾಗು

ವವು. ನೀವು ಟ್ರೇನಿಂಗ ಸ್ಕೂಲಿನ ವಿದ್ಯಾರ್ಥಿಗಳ ಕೆಲಸವನ್ನು ಪ್ರದರ್ಶನದಲ್ಲಿ ನೋಡಿದಾಗ ಇವರು ಮುಂದೆ ಹಳ್ಳಿಯ ಶಾಲೆಗಳಲ್ಲಿ ಕೆಲಸ ಮಾಡುವಾಗ ಉಪಯೋಗ ಮಾಡಿಕೊಳ್ಳಲಿಕ್ಕೆ ಬರುವಂಥ ಉಪಕರಣ ಮುಂತಾದವುಗಳೇ ಇದರಲ್ಲಿ ಬಹಳವಾಗಿ ಇರುವವೆಂದು ನಿಮ್ಮ ಲಕ್ಷ್ಯದಲ್ಲಿ ಬಂದಿರಬಹುದು. ೨ನೆಯ ಹಾಗು ೩ನೆಯ ವರ್ಷದ ಶಿಕ್ಷಕರು ಈಗ ಒಂದೆರಡು ಸ್ವತಂತ್ರ ಕಸಬುಗಳನ್ನು ಕಲಿಯಬೇಕಾಗುವದು. ಈ ವರುಷ ನೇಗೆಯ ಕೆಲಸ, ಪುಸ್ತಕಗಳನ್ನು ಬಾಯಿಂಡ ಮಾಡುವದು ಇವೆರಡನ್ನು ಮಾತ್ರ ನಾವು ಆರಂಭಿಸಿರುವೆವು. ಹೊಟ್ಟೆ ತುಂಬಿಕೊಳ್ಳಬೇಕೆಂದು ಇವರು ಈ ಕಸಬುಗಳನ್ನು ಕಲಿಯುವದಿಲ್ಲ. ಆದರೆ ಕಲಿಸುವ ಕೆಲಸವಲ್ಲಾಗಲಿ ಕಲಿಯುವ ಕೆಲಸದಲ್ಲಾಗಲಿ "ಮಾಡುವದು" ಬಹು ಮಹತ್ವದ ಅಂಶವಿದೆಯೆಂಬದು ಇವರಿಗೆ ಈ ಕಸಬುಗಳನ್ನು ಕಲಿಯುವದರಿಂದ ಮನವರಿಕೆಯಾಗದಿರದು.

ನಮ್ಮ ಪ್ರಾಥಮಿಕ ಶಿಕ್ಷಕರಲ್ಲಿರುವ ಬಹು ದೊಡ್ಡ ದೋಷವು ಯಾವದೆಂದರೆ-ಕಲಿಸುವದೆಂದರೆ ಹೇಳುವದು, ಮಾತಾಡುವದು ಎಂಬ ಅವರ ಭ್ರಮೆಯು. ಕಲಿಸುವದೆಂದರೆ ಇವೆರಡೂ ಅಲ್ಲವೇ ಅಲ್ಲ. ಆದರೆ, ವಿದ್ಯಾರ್ಥಿಗಳಲ್ಲಿ ನಿರೀಕ್ಷಣಮಾಡುವ ಚಟವನ್ನೂ ಯಾವದೊಂದು ಕೆಲಸವನ್ನು ಮಾಡಿ ಮುಗಿಸುವ ಶೀಲವನ್ನೂ ಉಂಟು ಮಾಡುವದೇ ಶಿಕ್ಷಕನ ಮುಖ್ಯ ಕೆಲಸವೆಂಬದನ್ನು ಅವರಲ್ಲಿ ದೃಢಪಡಿಸುವದೇ ಟ್ರೇನಿಂಗ ಸಂಸ್ಥೆಗಳ ಮುಖ್ಯ ಕೆಲಸವು. ಆದ್ದರಿಂದ ಅವರ ದೃಷ್ಟಿಮರ್ಯಾದೆಯನ್ನು ವಿಸ್ತೃತಗೊಳಿಸಿ ತಮ್ಮಲ್ಲಿ ಕಲಿಯಲಿಕ್ಕೆ ಬಂದ ವಿದ್ಯಾರ್ಥಿಗಳನ್ನು ವಿಚಾರ ಮಾಡಹಚ್ಚಿ ಅವರನ್ನು ಸರಿಯಾದ ಮಾರ್ಗದಲ್ಲಿ ನಡಕೊಳ್ಳುವವರನ್ನಾಗಿ ಮಾಡುವದೇ ತಮ್ಮ ಮುಖ್ಯ ಕಾರ್ಯವೆಂಬದನ್ನು ಬಿಂಬಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತಿರುವೆವು.

ಈ ಉದ್ದೇಶವು ಕೈಗೂಡುವದಕ್ಕಾಗಿ ನಾವು ಎಲ್ಲ ವಿದ್ಯಾರ್ಥಿಗಳಿಗೆ ಪ್ರತಿವರುಷ ಸ್ಕೌಟ ಮಾಸ್ತರರ ಶಿಕ್ಷಣವನ್ನು ಕೊಡುವ ವ್ಯವಸ್ಥೆಯನ್ನು ಮಾಡಿರುವೆವು. ತೀರ ವ್ಯಾವಹಾರಿಕವಾದ ಈ ಶಿಕ್ಷಣ ಪದ್ಧತಿಯಿಂದ ಒದಗುವ ಲಾಭಗಳನ್ನೆಲ್ಲ ತಮ್ಮ ವಿದ್ಯಾರ್ಥಿಗಳಿಗೆ ಮಾಡಿಕೊಡಲು ನಮ್ಮ ಭಾವೀ ಶಿಕ್ಷಕರಿಗೆ ಇದರಿಂದ ಅನುವು ದೊರೆಯುವದು. ಮಾನಸಶಾಸ್ತ್ರದ ದೃಷ್ಟಿಯಿಂದ ನೋಡಲು ಚಿಕ್ಕ ಮಕ್ಕಳನ್ನು ಚಟುವಟಿಕೆಯಿಂದ ಉಪಯುಕ್ತವಾದ ಬಾಳುವೆಯ ಕಾರ್ಯಗಳನ್ನು ಸಾಧಿಸಿ

ಕೊಳ್ಳಲು ತಕ್ಕವರನ್ನಾಗಿ ಮಾಡಲು ಸ್ಕೌಟ ಶಿಕ್ಷಣದಂಥ ಬೇರೊಂದು ಪದ್ಧತಿಯು ಈ ವರೆಗೆ ಉಂಟಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ನಮ್ಮ ವಿದ್ಯಾರ್ಥಿಗಳನ್ನು ಪ್ರವಾಸಗಳನ್ನು ಕೈಕೊಳ್ಳಲಿಕ್ಕೂ ನಾವು ಉತ್ತೇಜಿಸುತ್ತಲಿರುವೆವು. ಕ ವರುಷದ ವಿದ್ಯಾರ್ಥಿಗಳಲ್ಲಿ ಸುಮಾರು ೪೦ ಜನರೂ ಮೂವರು ಶಿಕ್ಷಕರೂ ಸ್ವಂ ಖರ್ಚಿನಿಂದ ನೆರೆಯ ಮೈಸೂರು ಪ್ರಾಂತಕ್ಕೆ ಪ್ರವಾಸ ಬೆಳಿಸಿ, ಆ ಸಂಸ್ಥಾನದ ನೋಡಲರ್ಹವಾದ ಬಹುತರ ಯಾವತ್ತು ಸ್ಥಳಗಳನ್ನು ನೋಡಿಕೊಂಡು ಬಂದಿರುವರು.

ನಮ್ಮ ಪ್ರಾಕ್ಟಿಸಿಂಗ ಸ್ಕೂಲವು ಮಾದರಿಯ ಪ್ರಾಥಮಿಕ ಶಾಲೆಯಾಗಿ ನ ಸಲ್ಪಟ್ಟಿದೆ. ಇದರಲ್ಲಿ ಬಾಲಕರ ವರ್ಗದಿಂದ ಮುಲ್ಕೀಪರೀಕ್ಷೆಯ ವರ್ಗದ ವರೆ ಎಲ್ಲ ಕ್ಲಾಸುಗಳಿವೆ. ಇದು ಹಲವು ವರ್ಷಗಳಿಂದ ಮಾದರಿಯ ಶಾಲೆಯೆಂದೆನಿ ಕೊಂಡಿದೆ. ಒಂದೆರಡು ಮಾತುಗಳಿಂದ ಈ ಸಂಗತಿಯು ಸಿದ್ಧವಾಗುವದು ೧೯೩೩ನೆಯ ಇಸವಿಯ ಅಕ್ಟೋಬರ ತಿಂಗಳಿಂದ ಈ ಶಾಲೆಯ ಫೀ ಹಣದ ದರ ಹೆಚ್ಚಿಸಲ್ಪಟ್ಟಿತು. ಇಲಾಖೆಯ ಎಲ್ಲ ಪ್ರಾಕ್ಟಿಸಿಂಗ ಸ್ಕೂಲುಗಳಲ್ಲಿ ಫೀ ಹಣದ ದರವು ಸಮವಾಗಿ ಇರಬೇಕೆಂದು ಈ ತಿದ್ದುಪಡಿಯನ್ನು ಮಾಡಲಾಯಿತು. ಈಗ ಇಲ್ಲಿ ಬಾಲಕರ ವರ್ಗದ ಫೀ ಹಣದ ದರವು ೨ ಆಣೆಯಿದೆ; ಇದು ಕ್ರಮವಾಗಿ ಬೆಳೆಯುತ್ತ ಏಳನೆಯ ಇಯತ್ತೆಗೆ ೮ ಆಣೆ ಆಗಿದೆ. ನಮ್ಮ ಸ್ಥಾನಿಕ ಮುನಸಿ ಪಾಲಟಿಯವರು ತಮ್ಮ ಪ್ರಾಥಮಿಕ ಶಾಲೆಗಳಲ್ಲಿ ಫೀ ಹಣವನ್ನು ತೆಗೆದುಕೊಳ್ಳು ವದೇ ಇಲ್ಲವೆಂಬುದನ್ನು ನೀವು ಲಕ್ಷ್ಯದಲ್ಲಿಡುವಂತಿದೆ. ಈ ಮೇರೆಗೆ ಒಂದು ಅತಿ ಮಹತ್ವದ ಅಂಶದಲ್ಲಿ ಭೇದವು ಇದ್ದರೂ ನಮ್ಮ ಶಾಲೆಯಲ್ಲಿ ಎಲ್ಲಕ್ಕೂ ಹೆಚ್ಚೆಂದರೆ ೨೫೦ ವಿದ್ಯಾರ್ಥಿಗಳಿಗೆ ಸ್ಥಳವಿರುವಾಗ ಹಾಜರಿಯ ಪಟದಮೇಲೆ ೨೭೨ ವಿದ್ಯಾರ್ಥಿಗಳು ಇರುವರು. ಹಾಗು ಬಾಲಕರ ವರ್ಗ, ೩, ೫, ೬, ಹಾಗು ೭ನೆಯ ಇಯತ್ತೆಗಳಿಗೆ ಬರಲಿಚ್ಛಿಸುವ ವಿದ್ಯಾರ್ಥಿಗಳನ್ನು ಸ್ಥಳವು ತುಂಬಿಹೋದಮೂಲಕ ಸೇರಿಸಿಕೊಳ್ಳಲಾಗಲಿಲ್ಲ. ಈ ೨೭೨ ವಿದ್ಯಾರ್ಥಿಗಳಲ್ಲಿ ೮೬ ಹುಡುಗರು ಮುಂದು ವರಿದವರ್ಗದವರಿದ್ದಾರೆ; ೧೦೦ ಹುಡುಗರು ಮಧ್ಯಮ ವರ್ಗದವರು. ೨೮ ಹುಡುಗರು ಹಿಂದುಳಿದ ವರ್ಗದವರು (ಇವರಲ್ಲಿ ೭ ಹುಡುಗರು ಅಸ್ಪೃಶ್ಯರೆನಿಸಿಕೊಳ್ಳುವರು). ಮಿಕ್ಕವರಲ್ಲಿ ೨೩ ಹುಡುಗರು ಮುಸಲ್ಮಾನರು, ೩೦ ವಿದ್ಯಾರ್ಥಿಗಳು ದೇಶೀಯಕ್ರಿಸ್ತರು ಹಾಗು ೭ ಹುಡುಗರು ಜೈನರಿರುವರು. ಒಟ್ಟಿಗೆ ೨೯ ವಿದ್ಯಾರ್ಥಿಗಳು ನಾಫೀ ಮಾಡಲ್ಪಟ್ಟಿರುವರು.

ಪ್ರ್ಯಾಕ್ಟಿಸಿಂಗಸ್ಕೂಲಿನ ಪರೀಕ್ಷೆಯ ಪರಿಣಾಮವಾದರೂ ಒಳ್ಳೇ ಸಮಾಧಾನಕರವಾಗಿರುವದು. ೧೯೩೪, ೩೫ ಈ ಎರಡು ವರ್ಷ ಇಲ್ಲಿಂದ ಮುಲ್ಕೀಪರೀಕ್ಷೆಗೆ ...ಳಿತ ೩೪ ಹಾಗು ೩೭ ವಿದ್ಯಾರ್ಥಿಗಳಲ್ಲಿ ಅನುಕ್ರಮವಾಗಿ ೨೧ ಹಾಗು ೨೦ ...ಡುಗರು ಪಾಸಾಗಿರುವರು. ಇಲ್ಲಿಯ ವಿದ್ಯಾರ್ಥಿಗಳು ೧೯೩೪ ರಲ್ಲಿ ಓಪನ್ ...ಡಲ್ ಸ್ಕೂಲಿನ ಸ್ಕಾಲರಶಿಪ್ ಪರೀಕ್ಷೆಯ ಎರಡೂ ಸ್ಕಾಲರಶಿಪ್ಪುಗಳನ್ನು ...ಡೆದರು; ೧೯೩೫ ರಲ್ಲಿಯೂ ಒಂದು ಇಂಟರ ಮಿಡಿಯಟ್ ಸ್ಕಾಲರಶಿಪ್ಪನ್ನೂ ...ಂದು ಹಿಂದುಳಿದ ವರ್ಗದ ಸ್ಕಾಲರಶಿಪ್ಪನ್ನೂ ದೊರಕಿಸಿದರು. ಈ ಶಾಲೆಯಲ್ಲಿ ...ಡುಗರು ಒಂದೇ ವರ್ಗದಲ್ಲಿ ಒಂದಕ್ಕಿಂತ ಹೆಚ್ಚುಕಾಲದವರೆಗೆ ಉಳಿಯದಂತೆ ...ಚ್ಚರದಿಂದ ನೋಡಿಕೊಳ್ಳುವೆವು. ಬಾಲಕರ ವರ್ಗದಲ್ಲಂತೂ ಎಷ್ಟೋ ವರ್ಷ...ಳಿಂದ ಒಬ್ಬಹುಡುಗನುಕೂಡ ಒಂದಕ್ಕಿಂತ ಹೆಚ್ಚುವರುಷ ಆ ವರ್ಗದಲ್ಲಿ ...ಳಿದಿಲ್ಲ.

ಈ ಶಾಲೆಯಲ್ಲಿ ರೂಢವಿರುವ ಶಿಕ್ಷಣಪದ್ಧತಿಗಳು ಆದಷ್ಟುಮಟ್ಟಿಗೆ ಆಧುನಿಕ ...ಕ್ಷಣಪದ್ಧತಿಗಳ ಸ್ವಾರಸ್ಯದಿಂದೊಡಗೂಡಿದವೇ ಇರುತ್ತವೆ. ಬಾಲಕರ ವರ್ಗ...ಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಬಾಲಬೋಧೆ ಹಾಗು ವಿಶೇಷ ಪಟಗಳಲ್ಲದೆ ... ಹುಡುಗರಿಗೆ ವರ್ಗದ ಶಿಕ್ಷಕರು ಬರೆದು ತಯಾರಿಸಿದ ಕಥೆಯ ಪುಸ್ತಕಗಳನ್ನು ...ಪಯೋಗಿಸಿ ಓದಲಿಕ್ಕೆ ಕಲಿಸುವೆವು. ಆರಂಭದ ಅಂಕಿಗಳ ಪಾಠಗಳೆಲ್ಲ ಉಪ...ರಣಗಳ ಸಹಾಯದಿಂದಲೇ ಸಾಗುವವು. ಹೇಳಿದ ಕಥೆಗಳನ್ನು ಸಂಭಾಷಣ...ರೂಪವಾಗಿ ಆಡಿ ತೋರಿಸಲು ಹುಡುಗರಿಗೆ ಉತ್ತೇಜನಕೊಟ್ಟು ಅವರ ಭಾವನೆ...ಗಳನ್ನು ಅವರಾಗಿಯೇ ತೋರ್ಪಡಿಸಿಕೊಳ್ಳಲಿಕ್ಕೆ ಅನುವುಮಾಡಿಕೊಡಲಾಗು...ವು. ಆಟ, ಹಾಡು ಮುಂತಾದ ಮನರಂಜಕವಾದ ಸಂಗತಿಗಳನ್ನೂ ಸುಲಭವಾದ ...ದಾರ್ಥಗಳಿಂದ ಕೈಕೆಲಸಗಳನ್ನೂ ದಿನಾಲು ಸಾಗಿಸುವೆವು.

ಒಂದರಿಂದ ನಾಲ್ಕು ಇಯತ್ತೆಗಳವರೆಗೆ ಹುಡುಗರ ವಯಸ್ಸುಬುದ್ಧಿಗಳ ...ಳವಣಿಗೆಗೆ ತಕ್ಕ ಕಥೆಯ ಪುಸ್ತಕಗಳನ್ನು ಆರಿಸಿ ಒಂದೊಂದು ಬಾಲಕರ ವಾಚ...ಲಯಗಳನ್ನು ಏರ್ಪಡಿಸಿದ್ದೇವೆ. ಈ ಪುಸ್ತಕಗಳನ್ನು ಹುಡುಗರು ಶಿಕ್ಷಕರ ...ೇಲ್ವಿಚಾರಣೆಯಲ್ಲಿ ಶಾಲೆಯಲ್ಲಿಯೇ ಓದುವರು. ೩ನೆಯ ಹಾಗು ೪ನೆಯ ...ಯತ್ತೆಯ ಹುಡುಗರು ಇವುಗಳ ಸಹಾಯದಿಂದ ಚಿಕ್ಕಪುಟ್ಟ ನಿಬಂಧಗಳನ್ನು ...ರೆಯುವರು.

ಮಿಕ್ಕವಿಷಯಗಳ ಶಿಕ್ಷಣಕ್ರಮವನ್ನು ಇಲ್ಲಿ ವಿವರಿಸುವ ಗೊಡವೆಗೆ ನಾನು ಹೋಗುವದಿಲ್ಲ. ಈಬಗ್ಗೆ ನೀವು ವಿದ್ಯಾರ್ಥಿಗಳ ನೋಟುಪುಸ್ತಕಗಳನ್ನು ನೋಡಿ ಮನಗಂಡಿರುವಿರಿ. ಎಲ್ಲ ಕೆಲಸಗಳಲ್ಲಿ ಅಚ್ಚುಕಟ್ಟುತನ, ಕ್ರಮಬದ್ಧವಾದ ಕೆಲಸ, ಇವು ಕಾಣುವಂತಿವೆ. ಪಟ, ನಕಾಶ, ಕೈಕೆಲಸ, ಸಾಲೆಯತೋಟದಲ್ಲಿಯ ಕೆಲಸ ಇವುಗಳ ಬಗ್ಗೆಯೂ ಲಕ್ಷ್ಯವನ್ನು ಪೂರೈಸಲಾಗಿದೆ.

ಸ್ವಲ್ಪದರಲ್ಲಿ ಹೇಳುವದೆಂದರೆ, ನಮ್ಮ ದೇಶದ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಎರಡು ಮಹತ್ವದ ದೋಷಗಳು ಅಡಗಿರುವವೆಂದು ಜನಾಪವಾದವಿರುವದು. ಇವು ಯಾವವೆಂದರೆ (೧) ನಮ್ಮ ಹುಡುಗರಿಗೆ ಪುಸ್ತಕ ಶಿಕ್ಷಣವು ಮಾತ್ರ ದೊರೆಯು ವದು; (೨) ಸ್ವಪ್ರಯತ್ನದಿಂದ ಸ್ವತಂತ್ರ ಕೆಲಸ ಮಾಡಿ ಆತ್ಮಪ್ರಕಟನೆ ಮಾಡು ಪ್ರಸಂಗವು ಅವರಿಗೆ ದೊರೆಯುವದೇ ಇಲ್ಲ. ಇವೆರಡು ದೋಷಗಳನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಲಿಕ್ಕೆ ನಾವು ಪ್ರಯತ್ನಿಸುತ್ತಿರುವೆವು.

ಶಾರೀರಿಕ ಶಿಕ್ಷಣದ ಬಗ್ಗೆಯೂ ನಾವು ಎಚ್ಚರಪಡುವೆವು. ಪ್ರತಿದಿವಸ ಪ್ರತಿಯೊಂದು ವರ್ಗದ ವಿದ್ಯಾರ್ಥಿಗಳು ತಮ್ಮ ಶಿಕ್ಷಕರ ಮೇಲ್ವಿಚಾರಣೆಯು ೪-೩೦ರಿಂದ ೫ರ ವರೆಗೆ ಆಟವಾಡುವರು ಇಲ್ಲವೆ ಡ್ರಿಲ್ ಮಾಡುವರು. ಇದಕ್ಕೂ ಮಹತ್ವವಾದದ್ದೆಂದರೆ ನಮ್ಮ ಶಾಲೆಯಲ್ಲಿ ಸ್ಕೌಟ್ ಚಟುವಟಿಕೆಗಳಿಗೆ ಉತ್ತೇಜ ಕೊಟ್ಟಿರುವೆವು. ಪ್ರಾಕ್ಟಿಸಿಂಗ ಸ್ಕೂಲಿನ ೬ಜನ ಶಿಕ್ಷಕರು ಸ್ಕೌಟವಾಸ್ತ್ರದ ಶಿಕ್ಷಣವನ್ನು ಪಡೆದವರಿರುವರು. ೫ನೆಯ ಹಾಗು ೬ನೆಯ ಇಯತ್ತೆಗಳಲ್ಲಿ ೪೦ಜ ಹುಡುಗರ ಸ್ಕೌಟ್ ಪಥಕವು ಒಂದಿದೆ. ೨, ೩ ಈ ಇಯತ್ತೆಗಳಲ್ಲಿಯ ೮೦ ಹು ಗರು ಕಬ್ಸ್ ಶಿಕ್ಷಣವನ್ನು ಹೊಂದುತ್ತಿರುವರು. ಪ್ರತಿಬುಧವಾರ ಸ್ಕೌಟಆಟಗಳು ಚಟುವಟಿಕೆಗಳು ಇವುಗಳಬಗ್ಗೆ ಇವರಿಗೆ ರೂಢಿಮಾಡಿಸುವದುಂಟು. ಕಳೆ ವರುಷ ನೆಕನಾಮದಾರ ಗವ್ಹರ್ನರ ಸಾಹೇಬರು ಲೇಡೀ ಬ್ರಾಬರ್ನರೊಂದಿ ಹುಬ್ಬಳ್ಳಿಗೆ ದಯಮಾಡಿಸಿದಾಗ ಅಲ್ಲಿ ನೆರೆದ ರ್‍ಯಾಲಿಯಲ್ಲಿ ನಮ್ಮ ಕಬ್ ಪ್ಯಾಕಿನವ ದೊರೆಗಳಿಂದ ಒಂದು ಸ್ಕೌಟು ನಿಶಾನೆಯನ್ನು ಪಡೆದರೆಂದು ಹೇಳಲು ನನ ಅಭಿಮಾನವೆನಿಸುತ್ತದೆ.

ಮಹನೀಯರೇ, ನಮ್ಮ ಪ್ರ್ಯಾಕ್ಟಿಸಿಂಗಸ್ಕೂಲಿನ ಶಾಲಾವ್ಯವಸ್ಥೆಯು ಕಾರ್ಯಕ್ರಮಗಳೂ ಪರಿಪೂರ್ಣದಿಶೆಯನ್ನು ಹೊಂದಿರುವವೆಂದು ಹೇಳಿಕೊಳ್ಳ

ನಾನು ಸಿದ್ಧನಿಲ್ಲ. ಇದರಲ್ಲಿ ಇನ್ನೂ ಮಾಡಬೇಕಾದ ಸುಧಾರಣೆಗಳು ಬೇಕಾದಷ್ಟು ಇರುವವೆಂದು ನಾನು ಬಲ್ಲೆನು. ಅಭ್ಯಾಸಪತ್ರಿಕೆಯಲ್ಲಿ ಹೇಳದಿದ್ದ ಆದರೆ ವಿದ್ಯಾರ್ಥಿಗಳ ಮುಂದಿನ ಹಿತಕ್ಕೆ ಆವಶ್ಯಕವಾದ ಹಲವು ಚಟುವಟಿಕೆಗಳನ್ನು ರೂಢಿಯಲ್ಲಿ ತರಬೇಕೆಂದು ನಮ್ಮ ಆಶೆಯಿದೆ. ಉದಾಹರಣಾರ್ಥವಾಗಿ ಹುಡುಗರನ್ನು ನೆರೆಯಲ್ಲಿಯ ನೋಡತಕ್ಕ ಸ್ಥಳಗಳಿಗೆ ಕರೆದೊಯ್ಯುವದು; ಸಮಯ ಕೂಡಿದಾಗ ವಾರದ ಕೊನೆಯ ದಿನಗಳಲ್ಲಿ ಅವರಿಗಾಗಿ ಸ್ಕೌಟ ಕ್ಯಾಂಪುಗಳನ್ನು ಏರ್ಪಡಿಸುವದು; ಪ್ರತಿವಾರ ವಾಕ್‌ಸ್ಪರ್ಧೆಗಳನ್ನೂ ಭಾವಬೋಧಕವಾದ ಕಾವ್ಯವಾಚನ ಹಾಗು ಕವಿತಾಪಠನಗಳನ್ನೂ ಸಾಗಿಸುವದು; ಬಾಲಕರ ಪಾಲಕರ ಸಭೆಗಳನ್ನು ಸೇರಿಸಿ, ಬಾಲಕರಿಂದಲೇ ಎಲ್ಲ ಕಾರ್ಯಕ್ರಮವನ್ನೂ ವ್ಯವಸ್ಥೆಯನ್ನೂ ನೆರವೇರಿಸುವದು ಈ ಮೊದಲಾದ ಚಟುವಟಿಕೆಗಳನ್ನು ಕೈಗೂಡಿಸಲಿಕ್ಕೆ ನಿಮ್ಮ ಸಹಕಾರತೆಯೂ ಸಹಾನುಭೂತಿಯೂ ಅತ್ಯವಶ್ಯವಾಗಿವೆ. ತನ್ನ ಕೆಲಸವು ತಾಯ್ತಂದೆಗಳಿಗೆ ಮನಃಪೂರ್ವಕವಾಗಿ ಸೇರುತ್ತದೆಂಬದನ್ನು ಮನವರಿತ ವಿದ್ಯಾರ್ಥಿಯ ಮನಃಪ್ರವೃತ್ತಿಯೂ ಕಾರ್ಯಾಭಿಮುಖತೆಯೂ ಎಷ್ಟು ಬಲವಾಗಿ ಹರಿಯಲಾರಂಭಿಸುವವೆಂಬವನ್ನು ನಾವು ಸಾಮಾನ್ಯವಾಗಿ ಮನಗಾಣುವದಿಲ್ಲ. ಇದಲ್ಲದೆ, ನಿಮ್ಮ ಮಕ್ಕಳ ಗೃಹಶಿಕ್ಷಣಕ್ಕೆ ಸಂಬಂಧಿಸುವ ಅನೇಕ ಪ್ರಶ್ನೆಗಳು ನಿಮಗೆ ಗೊತ್ತಿರಬಹುದು. ಇವುಗಳನ್ನು ಯಥಾಯೋಗ್ಯವಾಗಿ ಬಿಡಿಸಲು ನಿಮಗೆ ಮಾತ್ರ ಅನುಕೂಲವಿರುವದು. ಆದರೂ ಈ ಬಗ್ಗೆ ನಿಮಗೊದಗುವ ಚಿಂತೆಯಲ್ಲಿ ಭಾಗಿಯಾಗಲಿಕ್ಕೂ ಈ ತೊಡಕುಗಳನ್ನು ಬಿಡಿಸಲು ನಿಮಗೆ ನೆರವಾಗಲಿಕ್ಕೂ ನಾವು ಸಿದ್ಧರುವೆವು. ಆದ್ದರಿಂದ ಶಾಲೆಯು ನಡೆದಿರುವ ವೇಳೆಯಲ್ಲಿ ನಿಮಗೆ ಬಿಡುವು ದೊರೆತಾಗ ದಯವಿಟ್ಟು ನೀವು ಬಂದು, ನಮ್ಮ ನಿಮ್ಮ ಉದ್ದೇಶಗಳನ್ನೂ ಪ್ರಯತ್ನಗಳನ್ನೂ ಕುರಿತು ಪರಸ್ಪರ ವಿಚಾರವಿನಿಮಯಮಾಡಿ, ನಿಮ್ಮ ಎಳೆ ಮಕ್ಕಳ ಚಿಕ್ಕಂದಿನ ಬೆಳೆಗೆಯ ಕಾಲದಲ್ಲಿ ಅವರು ಯೋಗ್ಯದಿಶೆಯಲ್ಲಿ ವಿಕಾಸಹೊಂದಲು ತಕ್ಕ ಶಿಕ್ಷಣವು ಅವರಿಗೆ ದೊರೆಯಲು ನಮಗೆ ನೆರವಾಗುವಿರೆಂದು ಬೇಡಿಕೊಳ್ಳುತ್ತೇನೆ. ಈ ನಿಮ್ಮ ಮಕ್ಕಳು ದೊಡ್ಡವರಾದಬಳಿಕ ನಿಮ್ಮ ಸ್ವಂತ ಭಾಗ್ಯಕ್ಕೆ ಆಧಾರವಾಗಿರುವಂತೆ ದೇಶೋನ್ನತಿಗೂ ಆಶ್ರಯರಾಗಿರುವರು.

ಹೊಸ ವರ್ಷದ ಬಗ್ಗೆ

ನೇಕ-ನಾಮದಾರ ಲಾರ್ಡ ಬ್ರಾಬರ್ನ, ಚೀಫ ಸ್ಕೌಟ ಆಫ್ ಬಾಂಬೇ

ಇವರು ಕಳುಹಿದ

ಸಂದೇಶವು

ಗವ್ಹರ್ನಮೆಂಟ ಹೌಸ,
ಮುಂಬಯಿ

ಪ್ರಾಂತಿಕ ಚೀಫ್ ಸ್ಕೌಟನಾದ ನಾನು ಮುಂಬಯಿ ಇಲಾಖೆಯೊಳಗಿನ ಎ
ಸ್ಕೌಟುಗಳಿಗೆ ಹೊಸವರ್ಷವು ಸುಖಾವಹವಾಗಲೆಂದು ಬಯಸುತ್ತೇನೆ.

ಇಲಾಖೆಯ ಮುಖ್ಯಸ್ಥಳದಲ್ಲಿಯೂ ಫಿರತಿಯ ಪ್ರವಾಸದಲ್ಲಿಯೂ ನಾನ
ಹೋದಲ್ಲೆಲ್ಲ ರ್‍ಯಾಲಿಗಳಲ್ಲಿಯೂ ಪ್ರತ್ಯೇಕವಾಗಿಯೂ ಯೋಗ್ಯ ಪ್ರಸಂಗಗಳ
ಸ್ಕೌಟರನ್ನು ಭೆಟ್ಟಿಯಾಗಲು ನಿಶ್ಚಯಿಸಿದ್ದ ಮೂಲಕ ನನಗೆ ಈಗ ನಿಮ್ಮ ಪರಿ
ಯವು ಹೆಚ್ಚಾಗಿ ಆಗುತ್ತಿರುವದು. ಈ ವರೆಗೆ ನಿಮ್ಮಿಂದ ಒಳ್ಳೆಯ ಕಾರ್ಯವಾ
ರುವದೆಂದು ನನಗೆ ಪೂರ್ಣ ಮನವರಿಕೆಯಾಗಿದೆ. ಬರುವ ವರುಷದಲ್ಲಿ ಇದಕ
ಹೆಚ್ಚು ಕೌಶಲ್ಯವನ್ನು ಪಡೆಯಲು ನೀವೆಲ್ಲರು ಪ್ರಯತ್ನಪಡುವಿರೆಂದು ನಾನು ಆಶಿಸ
ತ್ತೇನೆ. ಸ್ಕೌಟರೆಲ್ಲರು ಮೊದಲನೆಯ ವರ್ಗದ ಹಾಗು ಕೌಶಲ್ಯದ ಪದಕಗಳನ
(ಫರ್ಸ್ಟ್‌ಕ್ಲಾಸ್ ಹಾಗು ಪ್ರೊಫಿಶಿಯೆನ್ಸಿ ಬ್ಯಾಜಿಸ್) ಪಡೆಯಲಿಕ್ಕಾಗಿ ಕೆಲಸಮಾಡಲಿ
ಆದಷ್ಟು ಜನ ಸ್ಕೌಟರು ವುಡ್ ಬ್ಯಾಜ್ ಕೋರ್ಸನ್ನು ಪೂರ್ಣಮಾಡಲಿ. ಕಮಿಶನ
ರಾಗಿರುವವರು ಮುಂದಿನ ವರ್ಷಗಳಲ್ಲಿ ಮುಂದಾಳುಗಳ ಕೊರತೆಯಾಗದಂ
ರೋವ್ಹರ ಸ್ಕೌಟರ ಬಗ್ಗೆ ವಿಶೇಷ ಲಕ್ಷಗೊಡಲಿ. ಕಳೆದ ವರುಷ ಅಂದರೆ ರಜ
ಮಹೋತ್ಸವದ ವರುಷ ಸ್ಕೌಟರಲ್ಲಿ ವಿಶೇಷವಾದ ಉತ್ಸಾಹವು ಮೂಡಿದ್ದನ್ನು ನಾ
ನೋಡಿರುವೆನು; ಈ ಉತ್ಸಾಹವು ಹುಸಿಹೋಗದೆ ಸ್ಕೌಟಿಂಗಿನ ಮೇಲ್ಮೆಯ
ಇನ್ನೂ ಹೆಚ್ಚಾಗಲಿಕ್ಕೆ ಅವಶ್ಯವಾದ ಕಾರ್ಯಗಳಲ್ಲಿ ಪರಿಣಮಿಸಲೆಂದು ನಾ
ಕೋರುತ್ತೇನೆ.

ನಿಮ್ಮ "ಬಾಂಬೇ ಸ್ಕೌಟ" ಎಂಬ ವರ್ತಮಾನ ಪತ್ರವು ಹನ್ನೆರಡನೆ
ವರ್ಷದಾರಂಭವನ್ನು ತಳೆದದ್ದಕ್ಕಾಗಿ ಅದನ್ನು ಅಭಿನಂದಿಸುವೆನು. ಅದರ ಉ

ಸುಕ್ತತಿಯು ಅಭಿವೃದ್ಧಿಹೊಂದಲಿಕ್ಕೆ ಎಲ್ಲರೂ ನೆರವಾಗುವರೆಂದು ನಾನು ಬಯಸುತ್ತೇನೆ.

ಕೊನೆಗೆ, ನಿಮಗೆಲ್ಲ ಒಂದು ಸಂದೇಶವನ್ನು ಕಳಿಸುವೆನು. ಅದು ಯಾವದೆಂದರೆ, ಎಲ್ಲ ಭಾಗಗಳ ಸ್ಕೌಟರು ತಮ್ಮ ತಮ್ಮ ಭಾಗಗಳ ಬಗ್ಗೆ ಅಭಿಮಾನ ತಾಳುವಾಗ ನೀವೆಲ್ಲರು ಒಂದೇ ಒಂದು ದೊಡ್ಡ ಸಂಘದ ವ್ಯಕ್ತಿಗಳಾಗಿರುವಿರೆಂಬದನ್ನೂ ನಿಮ್ಮ ನಿಷ್ಠೆಯೂ ಬಂಧು ಭಾವವೂ ಯಾವದೇ ಭಾಗದ, ಯಾವದೇ ಸೀಮೆಯ ಇಲ್ಲವೆ ಯಾವದೇ ದೇಶದ ಎಲ್ಲ ಸ್ಕೌಟರಿಗೂ ಸಲ್ಲತಕ್ಕದ್ದೆಂಬದನ್ನೂ ನೆನಪಿನಲ್ಲಿಡಿರಿ.

೩೦ ನೆಯ ಡಿಶೆಂಬರ ೧೯೩೫ ಬ್ರಾಬರ್ನ

ಮುಂಬಯಿಯ ಗವ್ಹರ್ನರರು

ನಮ್ಮಲ್ಲಿಯ ಪ್ರಾಥಮಿಕ ಶಾಲೆಗಳಲ್ಲಿ ಸ್ಕೌಟರ ಸಂಖ್ಯೆಯೂ ಸ್ಕೌಟ ಚಟುವಟಿಕೆಗಳೂ ಹೆಚ್ಚುತ್ತಿರುವದು ಸಮಾಧಾನ ಸಂಗತಿಯು. ಆದರೆ ಸ್ಕೌಟ ಪಥಕವು ಸ್ಕೌಟಮಾಸ್ತರರ ಶಿಕ್ಷಣವನ್ನು ಪಡೆದ ಶಿಕ್ಷಕರ ನೇತೃತ್ವದಲ್ಲಿ ಉಂಟಾಗಿ ಸ್ವಲ್ಪ ಡ್ರಿಲ್, ಒಂದೆರಡು ಆಟಗಳನ್ನು ಕಲಿತು ಶಾಸ್ತ್ರಕ್ಕೆ ಸ್ಕೌಟ ಪಥಕವೆನಿಸಿದರೆ ತೀರಲಿಲ್ಲ. ಇವನ್ನು ನಮ್ಮ ವಿಚಕ್ಷಣರಾದ ಚೀಫ ಸ್ಕೌಟರು ಸ್ಪಷ್ಟಗೊಳಿಸಿರುವರು. ಸ್ಕೌಟ ಶಿಕ್ಷಣದ ಲಾಭವು ಚಿಕ್ಕಮಕ್ಕಳಿಗೆ ಆಗಬೇಕಾದರೆ ಸ್ಕೌಟ ನಿಯಮಗಳನ್ನು ಪಾಲಿಸುವದಲ್ಲದೆ ಅದರಲ್ಲಿ ಹೇಳಿದ ಬಗೆಬಗೆಯ ಕೌಶಲ್ಯಗಳನ್ನು ಸಂಪಾದಿಸಿ ಹೆಚ್ಚಿನ ಸ್ಕೌಟಪದವಿಗೇರಿ, ಆತ್ಮೋನ್ನತಿಯನ್ನೂ ಸಮಾಜ ಸೇವೆಯನ್ನೂ ಸಾಧಿಸುವದು ಅವಶ್ಯಕವು. ಈ ವರ್ಷಾರಂಭದಲ್ಲಿ ದಯವಿಟ್ಟು ಚೀಫ ಸ್ಕೌಟರು ಕಳುಹಿದ ಸಂದೇಶದ ಪ್ರತಿಯೊಂದು ವಾಕ್ಯವನ್ನೂ ಸ್ಕೌಟ ಶಿಕ್ಷಕರು ಮನನ ಮಾಡುವರೆಂದೂ ಹೆಚ್ಚು ಹುರಿಗೊಂಡು ಕಾರ್ಯಪ್ರವೃತ್ತರಾಗುವರೆಂದೂ ನಾವು ಆಶಿಸುತ್ತೇವೆ.

(ಸಂ. ಪ್ರಾ. ಶಿ.)

ಮಾನಸಶಾಸ್ತ್ರ ಸಂಬಂಧವಾದ ಕೆಲವು ವಿಚಾರಗಳು

ಲೇಖಕ:— ಶ್ರೀ. ಜಿ. ರಾ. ತಾಪಡೆ ಎಮ್. ಎ, ಟೀ. ಡಿ.

ಶಾಲೆಯಲ್ಲಿ ಪ್ರತಿನಿತ್ಯ ನಡೆಯುವ ಇತಿಹಾಸ, ಭೂಗೋಲ, ಆರೋಗ್ಯಶಾಸ್ತ್ರ
ಇತ್ಯಾದಿ ವಿಷಯಗಳಿಂದ ಸದ್ಯದ ವ್ಯವಹಾರಕ್ಕೆ ಕೂಡಲೆ ಉಪಯೋಗವಾ
ದಿದ್ದರೂ ಈ ವಿಷಯಗಳ ಜ್ಞಾನದಿಂದ ಜಗತ್ತಿನಲ್ಲಿಯ ವ್ಯವಹಾರಗಳು ಗೊತ್ತಾ
ಗುತ್ತವೆ. ಬೇರೆ ಬೇರೆ ಸಂಗತಿಗಳ ಕಾರ್ಯಕಾರಣ ಭಾವಗಳು ತಿಳಿಯುತ್ತವೆ
ಮತ್ತು ಜಗತ್ತಿನಲ್ಲಿಯ ವ್ಯವಹಾರಗಳನ್ನು ಕೇವಲ ಯಂತ್ರದಂತೆ ಮಾಡದೆ ಅವು
ಳನ್ನು ತಿಳಿದುಕೊಂಡು ಹ್ಯಾಗೆ ಮಾಡಬೇಕು ? ಇತ್ಯಾದಿ ಸಂಗತಿಗಳು ಗೊತ್ತಾಗ
ವವು. ಇದೇ ಸಾಮಾನ್ಯ ಶಿಕ್ಷಣದ ಉಪಯೋಗವಾಗಿರುವದು. ಶಿಕ್ಷಕನ
ಸಾಮಾನ್ಯ ಶಿಕ್ಷಣದ ಈ ಉಪಯೋಗವನ್ನು ತಿಳಿದಿರಲಿಕ್ಕೆ ಬೇಕು. ಕೇವಲ ಪರೀಕ್ಷೆ
ಪಾಸು ಮಾಡುವದರ ಕಡೆಗೇ ಮಾತ್ರ ಲಕ್ಷ್ಯವಿಡಬಾರದು.

ನಮ್ಮ ಶಿಕ್ಷಣವು ಜ್ಞಾನೇಂದ್ರಿಯಗಳ ಮಾರ್ಗವಾಗಿ ಆಗುವದೆಂದು ಮೇ
ವಿಚಾರ ಮಾಡಿದ್ದೇವೆ. ನಮ್ಮ ಸರ್ವ ಜ್ಞಾನೇಂದ್ರಿಯಗಳಿಗೂ ಬಾಹ್ಯ ಜಗತ್ತಿಗ
ಸಂಬಂಧವದೆ. ನಾವು ಒಂದು ಸಂಗತಿಯನ್ನು ಕೇಳಿದಾಗ ನಡೆಯುವ ವ್ಯಾಪಾ
ವನ್ನು ಕುರಿತು ವಿಚಾರಿಸುವ:—ಯಾರಾದರೂ ಮಾತಾಡಿದೊಡನೆ ಇಲ್ಲವೆ ಯಾ
ದೊಂದು ಶಬ್ದವನ್ನು ಉಂಟುಮಾಡಿದೊಡನೆಯೆ ಹವೆಯಲ್ಲಿ ಆಘಾತದಿಂ
ತೆರೆಗಳುಂಟಾಗುತ್ತವೆ. ಅವುಗಳಲ್ಲಿ ಕೆಲವು ಕಿವಿಯಲ್ಲಿ ಪ್ರವೇಶಿಸಿ ನಗಾರಿ
ಪಟಲದ ಮೇಲೆ ಅಪ್ಪಳಿಸಿ ಸಂಕೋಲೆಯಾಕಾರದ ಎಲುವುಗಳ ವ್ಯಾಪಾರದಿಂದಲೂ
ರಿಕೇಬಿನಾಕಾರದ ಎಲುವಿನ ಆಘಾತದಿಂದಲೂ ಜ್ಞಾನತಂತುಗಳು ತೇಲುತ್ತಿರುವ
ರಸದಲ್ಲಿ ಪ್ರವಾಹಗಳುಂಟಾಗಿ ಅವುಗಳ ದ್ವಾರದಿಂದ ಮಿದುಳಿಗೆ ಗೊತ್ತಾಗುತ್ತದೆ.
ಬಳಿಕ ಪೂರ್ವಜ್ಞಾನ–ಜಾಗ್ರುತಿಯಾಗಿ ಇಂಥದೇ ಒಂದು ಧ್ವನಿಯನ್ನು ಹಿಂದಕ್ಕೆ
ಕೇಳಿದ್ದೆವು ಎಂದು ಗೊತ್ತಾಗುತ್ತದೆ. ಬಳಿಕ ಇದು ಗಂಟೆಯ ಸಪ್ಪಳ, ಗ್ರಾಮ
ಫೋನೋದ ಧ್ವನಿ, ಮಾರ್ಗದಲ್ಲಿ ನಡೆದ ಭಜನೆಯ ಧ್ವನಿ ಈ ಪ್ರಕಾರ ವರ್ಗೀಕರಣ

ಮಾಡುತ್ತೇವೆ. ಇದೇ ರೀತಿಯಾಗಿ ಇತರ ಇಂದ್ರಿಯಗಳಿಂದಲೂ ಜ್ಞಾನವಾಗುತ್ತದೆ. ಪಂಚೇಂದ್ರಿಯಗಳಲ್ಲಿ ಕಣ್ಣು, ಮೂಗು, ಸ್ಪರ್ಶ, ಇವು ಮಹತ್ವವಾದವಿರುತ್ತವೆ. ಬಹಳ ಜ್ಞಾನವು ನಮಗೆ ಈ ಇಂದ್ರಿಯಗಳ ದ್ವಾರದಿಂದಲೇ ಆಗುತ್ತದೆ. ಐದು ಇಂದ್ರಿಯಗಳಿಗೂ ಮಿದುಳಿಗೂ ಜ್ಞಾನತಂತುಗಳಿಂದ ಸಂಬಂಧವಿರುತ್ತದೆ. ಜ್ಞಾನ ಸಂಗ್ರಹದ ಮುಖ್ಯ ಸ್ಥಳವು ಮಿದುಳು. ಅಲ್ಲಿಂದ ಶರೀರದ ತುಂಬ ಎಲ್ಲ ಕಡೆಗೂ ಜ್ಞಾನ ತಂತುಗಳು ಜಾಳಿಗೆಯಂತೆ ಪಸರಿಸಿರುತ್ತವೆ. ಮಿದುಳಿನ ತರುವಾಯದಲ್ಲಿ ಮಜ್ಜಾ ರಜ್ಜುಗಳು ಮಹತ್ವವಾದವು ಆಗಿರುತ್ತವೆ. ಸರ್ವ ಜ್ಞಾನೇಂದ್ರಿಯಗಳ ಸಂಬಂಧವು ಮಿದುಳಿಗೂ ಮಜ್ಜಾರಜ್ಜುವಿಗೂ ಇರುತ್ತದೆ. ಎಲ್ಲ ಜ್ಞಾನೇಂದ್ರಿಯ ಗಳು ಎಲ್ಲ ಹೊರಗಿನ ಜ್ಞಾನವನ್ನು ಒಳಗೆ ಎಳಕೊಳ್ಳುವ ಬಾಗಿಲುಗಳಂತೆ ಇರು ತ್ತವೆ. ಜ್ಞಾನ ತಂತುಗಳು ಆಜ್ಞಾನಗಳನ್ನು ಎಳೆದುಕೊಳ್ಳುವ ಸಾಧನವಾಗಿರು ತ್ತವೆ. ಮಿದುಳು ಜ್ಞಾನವನ್ನು ಸಂಗ್ರಹಿಸುವ ಸ್ಥಾನವಾಗಿರುತ್ತದೆ. ಮನಸ್ಸು, ಬಂದಬಂದಜ್ಞಾನವನ್ನೆಲ್ಲ ಸಂಗ್ರಹಿಸಿ ಇಟ್ಟುಕೊಂಡು ವ್ಯವಸ್ಥೆ ಇಡುತ್ತದೆ. ಜ್ಞಾನೇಂದ್ರಿಯಗಳು ಈ ಜ್ಞಾನ ಸಂಪಾದಿಸುವ ಸಾಧನಗಳಾಗಿರುವದರಿಂದ ಅವನ್ನು ಯೋಗ್ಯ ಸ್ಥಿತಿಯಲ್ಲಿ ಇಡಲಿಕ್ಕೆ ಬೇಕು. ಅವು ರೋಗಗ್ರಸ್ತವಾಗಿದ್ದರೆ ಇಲ್ಲವೆ ಏನಾದರೂ ಅಪಾಯ ಹೊಂದಿದ್ದರೆ ಜ್ಞಾನ ಸಂಪಾದನದ ಕಾರ್ಯವು ಸರಿಯಾಗಿ ಆಗಲಾರದು.

ಇದಲ್ಲದೆ ಈ ಇಂದ್ರಿಯಗಳು ತಮ್ಮ ತಮ್ಮ ಕೆಲಸಮಾಡಲು ತಕ್ಕಷ್ಟು ತಯಾರಾಗಿರಲಿಕ್ಕೆಬೇಕು. ಹೀಗಾಗಬೇಕಾದರೆ ಆ ಇಂದ್ರಿಯಗಳಿಗೆ ಜ್ಞಾನವನ್ನು ಸರಿಯಾಗಿ ಒಳಗೆ ತೆಗೆದುಕೊಳ್ಳುವ ರೂಢಿಯನ್ನು ಹಚ್ಚಲಿಕ್ಕೆ ಬೇಕಾಗುತ್ತದೆ. ಪ್ರತ್ಯೇಕ ಜ್ಞಾನೇಂದ್ರಿಯಗಳ ಶಕ್ತಿಯು ಈಗ ನಾವು ತಿಳಿದಿರುವದಕ್ಕಿಂತ ಹೆಚ್ಚಿಗೆ ಇರುತ್ತದೆ. ಉದಾ:— ಉಪಯೋಗದಿಂದ ನಾಯಿಯ ಘ್ರಾಣೇಂದ್ರಿಯವು ಹೆಚ್ಚು ತೀಕ್ಷ್ಣವಾಗಿರುತ್ತದೆ. ಕುರುಡನ ಸ್ಪರ್ಶೇಂದ್ರಿಯವು ನಮ್ಮ ಸ್ಪರ್ಶೇಂದ್ರಿಯ ಕ್ಕಿಂತ ಹೆಚ್ಚು ಜಾಗೃತವಿರುತ್ತದೆ. ಇದರಂತೆಯೇ ಹದ್ದಿನ ಕಣ್ಣುಗಳು ಉಪ ಯೋಗದಿಂದ ಹೆಚ್ಚು ತೀಕ್ಷ್ಣವಾಗಿರುತ್ತವೆ. ಸಾರಾಂಶ:— ಇಂದ್ರಿಯಗಳ ಉಪಯೋಗವನ್ನು ಹೆಚ್ಚೆಚ್ಚು ಮಾಡಿದಂತೆ ಅವು ಹೆಚ್ಚು ಹೆಚ್ಚು ತೀಕ್ಷ್ಣವಾಗುತ್ತವೆ. ಇದರಂತೆಯೇ ನಮ್ಮ ಬಾಲಕರ ಇಂದ್ರಿಯಗಳು ತೀಕ್ಷ್ಣವೂ ತಮ್ಮ ಕೆಲಸಕ್ಕೆ ಆಗ ತಕ್ಕಷ್ಟು ಸಾಮರ್ಥ್ಯವುಳ್ಳವೂ ಆಗಬೇಕಾದರೆ ಅವರಿಗೆ ಅವುಗಳ ಉಪಯೋಗವನ್ನು

ಮಾಡುವ ರೂಢಿಯನ್ನು ಹಚ್ಚಬೇಕು. ಇಂದ್ರಿಯ ಶಿಕ್ಷಣಕ್ಕೆ ಅವುಗಳ ಉಪಯೋ ಮಾಡುವ ರೂಢಿಯು ಶಕ್ಯವಿರುತ್ತದೆ. ಆದುದರಿಂದ ಇಂದ್ರಿಯ ಶಿಕ್ಷಣವು ಎ ಶಿಕ್ಷಣದ ತಳಹದಿಯಾಗಿರುತ್ತದೆ. ಚಿಕ್ಕಮಕ್ಕಳಿಗಾಗಿ ಹುಡುಕಿ ತೆಗೆದಿರುವ ಎ ಶಿಕ್ಷಣಪದ್ಧತಿಗಳಲ್ಲಿ ಇಂದ್ರಿಯ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯವಿದೆ. ಪ್ರತ್ಯ ಇಂದ್ರಿಯಗಳಿಂದ ದೊರಕಿಸಿದ ಜ್ಞಾನವು ಇತರ ಜ್ಞಾನಗಳಿಗಿಂತ ಹೆಚ್ಚಿಗೆ ದೃ ವಾದದ್ದಿರುತ್ತದೆ. ಯಾವದಾದರೊಂದು ಜ್ಞಾನಸಂಪಾದನೆಗಾಗಿ ಒಂದಕ್ಕಿಂತ ಹೆಚ್ಚ ಇಂದ್ರಿಯಗಳ ಉಪಯೋಗವಾಗಿದ್ದರೆ ಆಜ್ಞಾನವು ಹೆಚ್ಚು ದೃಢವಾದದ್ದೂ ಸ್ಥಿ ವಾದದ್ದೂ ಇರುತ್ತದೆ. ಶಿಕ್ಷಕರು ಕೇವಲ ವ್ಯಾಖ್ಯಾನರೂಪವಾಗಿ ಶಿಕ್ಷಣ ಕೊಡದೆ ಹುಡುಗರಿಗೆ ಪ್ರತ್ಯಕ್ಷ ವಸ್ತುಗಳ ದ್ವಾರದಿಂದ ಶಿಕ್ಷಣಕೊಡಬೇಕು. ವಸ್ತುಗಳನ್ನು ತೋರಿಸುತ್ತ ಅವರ ಕೂಡ ಮಾತಾಡುತ್ತ ಶಿಕ್ಷಣ ಸಾಗಿಸಬೇಕು. ವ್ಯಾಖ್ಯಾ ಶಿಕ್ಷಣವು ಕೇವಲ ಕರ್ಣೇಂದ್ರಿಯಕ್ಕೆ ಸಂಬಂಧಿಸಿರುತ್ತದೆ. ಇಂಥ ಜ್ಞಾನವು ಒಂದ ಕಿವಿಯಿಂದ ಸೇರಿ ಮತ್ತೊಂದು ಕಿವಿಯಿಂದ ಹಾದುಹೋಗುತ್ತದೆ. ಈ ಜ್ಞಾನಕ್ಕೆ ಚಕ್ಷು, ಸ್ಪರ್ಶೇಂದ್ರಿಯಗಳ ಬೆಂಬಲವಾದರೆ ಅಂಥ ಜ್ಞಾನವು ಚೆನ್ನಾಗಿ ಮನಸಿ ಹತ್ತುವದು ಹಾಗು ಮಕ್ಕಳ ಲಕ್ಷದಲ್ಲಿ ಚಿರಕಾಲ ನಿಲ್ಲುವದು.

ಜ್ಞಾನದೊರಕಿಸಲಿಕ್ಕೆ ಅವಧಾನದ ಆವಶ್ಯಕತೆಯು ಹೆಚ್ಚಿರುತ್ತದೆ. ಶಿಕ್ಷಕನ ಬೇಕಾದಷ್ಟು ಶ್ರಮದಿಂದ ತನ್ನಪಾಠದ ಸಿದ್ಧತೆಯನ್ನು ಮಾಡಿಕೊಂಡಿದ್ದರೂ ವಿದ್ಯಾರ್ಥಿಗಳಲ್ಲಿ ಅವಧಾನವೊಂದು ಇರದಿದ್ದರೆ ಆತನು ಪಟ್ಟ ಶ್ರಮವೆ ನಿರರ್ಥಕವಾಗುವದು. ವಿದ್ಯಾರ್ಥಿಗಳ ಅವಧಾನವನ್ನು ದೊರಕಿಸುವದು ಬಹ ಮಹತ್ವವಾದದ್ದು. ಚಿಕ್ಕಮಕ್ಕಳ ಚಿತ್ತವು ಚಂಚಲವಾಗಿರುವದರಿಂದ ಅದು ಕ್ಷಣ ಕ್ಷಣಕ್ಕೆ ಅತ್ತಇತ್ತ ಹೋಗುತ್ತದೆ. ಅಂದರೆ ಒತ್ತಟ್ಟಿಗೆ ಒಂದೇವಿಷಯದ ಕಡೆಗೆ ಉಳಿಯಲಾರದು. ಒಂದೊಂದು ವೇಳೆ ಮಕ್ಕಳ ಲಕ್ಷ್ಯವು ಯಾವದೊಂದು ವಿಷಯದಲ್ಲಿ ಮುಳುಗಿದಂತೆ ಕಂಡರೂ, ಆ ಸ್ಥಿತಿಯು ಬಹಳಹೊತ್ತು ಹಾಗೆಯೆ ನಿಲ್ಲುವದಿಲ್ಲ. ಯಾವದೊಂದು ದೊಡ್ಡ ಶಬ್ದವಾದರೆ ಸಾಕು, ರಾಜಮಾರ್ಗದಲ್ಲಿ ಭಜನೆಯಾಗಲಿ, ಗಾನವಾಗಲಿ, ಕೇಳಿದರೆ ಸಾಕು, ಸಮೀಪದಲ್ಲಿ ಎಲ್ಲಿಯಾದರೂ ಜಗಳಾಡುವದು, ಹಾಗು ಮಾತುಕಥೆಗಳು ಮುಂತಾದವುಗಳು ನಡೆದರೆ ತೀರಿತು, ಅವರ ಲಕ್ಷ್ಯವು ಕೂಡಲೇ ತಿರುಗಿ ಹೊಸ ವಿಷಯದ ಕಡೆಗೆ ಹೋಗುತ್ತದೆ. ಈ ಬಗೆಯ ಅವಧಾನಕ್ಕೆ ಅನೈಚ್ಛಿಕ ಅವಧಾನವೆಂದೆನ್ನುತ್ತಾರೆ. ಇದು ಚಿಕ್ಕಮಕ್ಕಳಲ್ಲಿ

ಹೆಚ್ಚಾಗಿರುತ್ತದೆ. ಅವರು ದೊಡ್ಡವರಾದಂತೆ ಮನಸ್ಸಿನ ಏಕಾಗ್ರತೆ ಮಾಡಿಕೊಳ್ಳಲಿಕ್ಕೆ ಸಮರ್ಥರಾಗುತ್ತಾರೆ. **ಸ್ವಪ್ರಯತ್ನದಿಂದ ಯಾವದೊಂದು ವಿಷಯದ ಕಡೆಗೆ ಲಕ್ಷ್ಯವನ್ನು ತೊಡಗಿಸುವದಕ್ಕೆ ಐಚ್ಛಿಕ ಅವಧಾನನೆಂದೆನುತ್ತಾರೆ.** ಇದು ದೊಡ್ಡ ಹುಡುಗರಲ್ಲಿರುತ್ತದೆ. ಯಾಕಂದರೆ ಅವರು ಯಾವದೊಂದು ಸಂಗತಿಯ ಜವಾಬುದಾರಿಯ ಮಹತ್ವವನ್ನು ತಿಳಿಯಲಿಕ್ಕೆ ತಕ್ಕವರಾಗಿರುತ್ತಾರೆ. ಆದ್ದರಿಂದ ಜವಾಬುದಾರಿಯ ಸಂಗಡವೇ ಐಚ್ಛಿಕ ಅವಧಾನವೂ ಹಿಂಬಾಲಿಸುತ್ತದೆ. ಆದರೆ ಚಿಕ್ಕವರಿಗೆ ಜವಾಬುದಾರಿಯು ತಿಳಿಯದ್ದರಿಂದ ಕೈಕೊಂಡ ಕೆಲಸವು ಅದೆಷ್ಟೇ ಮಹತ್ವದ್ದಿದ್ದರೂ ಅದರ ಕಡೆಗೆ ಅವರ ಲಕ್ಷ್ಯವು ಉಳಿಯುವದಿಲ್ಲ. ಆದುದರಿಂದ ಇಂಥ ಚಿಕ್ಕಮಕ್ಕಳ ಶಿಕ್ಷಕನು ಆಡುತ್ತಾಡುತ್ತಾ ಶಿಕ್ಷಣವನ್ನು ಕೊಡಬೇಕಾಗುತ್ತದೆ. ತರತರದ ಬಣ್ಣ ಆಕಾರಗಳುಳ್ಳ ಉಪಕರಣಗಳನ್ನೇ ಅವರು ನೋಡಲಿಕ್ಕೂ ಹಿಡಿಯಲಿಕ್ಕೂ ಹಾತೊರೆಯುತ್ತಿರುತ್ತಾರೆ.

ಈತರದ ಉದಾಹರಣಗಳುಳ್ಳ ಪಾಠಗಳಲ್ಲಿ ತಾವೇ ಏನಾದರೂ ಚಲನವಲನ ಮಾಡಲಿಕ್ಕೂ ಕೆಲಸಮಾಡಲಿಕ್ಕೂ ಮನಸ್ಸುಳ್ಳವರಾಗುತ್ತಾರೆ. ಆದ್ದರಿಂದ ಇಂಥ ಪಾಠಗಳಲ್ಲಿ ಅವರ ಲಕ್ಷವು ತಾನಾಗಿ ಉಳಿಯುತ್ತದೆ. ಯಾವಾಗ ಬರಿ ಕೂತಲ್ಲೇ ಕೂತು ಕೇವಲ ಕೇಳುವ ಶಿಕ್ಷಣ ಪದ್ಧತಿ ನಡೆಯುವದೋ ಆಗ ಅವರು ಜೀಸತ್ತು ಹೊರಗೆ ನೋಡಲಾರಂಭಿಸುವರು. ಆದುದರಿಂದ ಶಿಕ್ಷಕನು ತನ್ನ ಶಿಕ್ಷಣ ನಡೆದಾಗ ವಿದ್ಯಾರ್ಥಿಗಳ ಸಾಹಾಯ್ಯವನ್ನು ಹೆಚ್ಚೆಚ್ಚು ತೆಗೆದುಕೊಳ್ಳಬೇಕು. ಆ ಸಾಹಾಯ್ಯವು ಪ್ರಶ್ನರೂಪದಿಂದಲೇ ಇರಲಿ, ಇಲ್ಲವೆ ಕೃತಿಯ ರೂಪದಿಂದಲೇ ಇರಲಿ, ಹ್ಯಾಗಿದ್ದರೂ ಶಿಕ್ಷಕ-ವಿದ್ಯಾರ್ಥಿ ಇವರಿಬ್ಬರ ಪ್ರಯತ್ನಗಳು ಪಾಠದಲ್ಲಿ ಪೂರಾ ನಡೆಯಲಿಕ್ಕೇ ಬೇಕು. ಕೇವಲ ಶಿಕ್ಷಕನೊಬ್ಬನೇ ಯತ್ನಿಸುತ್ತಿರುವಾಗ ವಿದ್ಯಾರ್ಥಿಗಳು ಸುಮ್ಮನೆ ಕೂತರೆ ಆ ಪಾಠವು ಫಲಕಾರಿಯಾಗದು. ಸದ್ಯ ನಡೆಯುವ ಪಾಠದಲ್ಲಿ ತಮಗೆ ಸ್ಥಾನವಿರುವ ಎಂದು ವಿದ್ಯಾರ್ಥಿಗಳಿಗೆ ಆಗಾಗ ಅನಿಸುತ್ತಿರಲಿಕ್ಕೆ ಬೇಕು. ಯಾವದೇ ಪಾಠದಲ್ಲಿ ಯಾದರೂ ವಿದ್ಯಾರ್ಥಿಗಳ ಸಹಕಾರಿತ್ವವು ಅವಶ್ಯವು; ಅಂದರೆ ಶಿಕ್ಷಕರೂ ವಿದ್ಯಾರ್ಥಿಗಳು ಇಬ್ಬರೂ ಕೂಡಿಯೇ ಶಿಕ್ಷಣ ಕಾರ್ಯವಲ್ಲಿ ತೊಡಗಲಿಕ್ಕೆ ಬೇಕು. ಹೀಗಿದ್ದರೇ ಮಾತ್ರ ಪಾಠಗಳು ಚೆನ್ನಾಗಿ ಸಾಗಿ ಶಿಕ್ಷಣವು ಯಶಸ್ವಿಯಾಗುವದು. ವಿದ್ಯಾರ್ಥಿಗಳ ಅವಧಾನದ ವಿಷಯವಾಗಿ ಹೇಳುವಾಗ ಇನ್ನೊಂದು ಸಂಗತಿಯು ಲಕ್ಷವಲ್ಲಿಬರುತ್ತವೆ. ಕೇವಲ ಮನೋರಂಜನ ಮಾಡಿದರೆ ವಿದ್ಯಾರ್ಥಿಗಳ ಅವಧಾನವು ಕಾಯಲ್ಪಡುವ

ದೆಂದು ತಿಳಿಯಲಾಗದು. ಎಷ್ಟೋ ವಿದ್ಯಾರ್ಥಿಗಳು ಶಾರೀರಿಕ ಪೀಡೆಗಳುಳ್ಳವರಿರು
ತ್ತಾರೆ. ಅಂದರೆ ಕೆಲವರಿಗೆ ಕಣ್ಣು ನೆಟ್ಟಗೆ ಕಾಣಿಸುತ್ತಿರುವದಿಲ್ಲ, ಕೆಲವರಿಗೆ ಕಿವಿ
ಕೇಳಿಸುತ್ತಿರುವದಿಲ್ಲ, ಕೆಲವರಿಗೆ ಖಜ್ಜಿ ಹುರುಕುಗಳು ಆಗಿರುತ್ತವೆ, ಮತ್ತೆ ಕೆಲ
ವರಿಗೆ ಪೂರಾ ಹೊಟ್ಟೆ ತುಂಬಿರುವದಿಲ್ಲ, ಇನ್ನು ಕೆಲವರಿಗೆ ಮನೆಯವರ ಉಪದ್ರವ
ದಿಂದ ನಿದ್ದೆ ಚನ್ನಾಗಿ ಆಗಿರುವದಿಲ್ಲ. ಇಷ್ಟೆಲ್ಲ ತೊಂದರೆಗಳು ವಿದ್ಯಾರ್ಥಿಗಳ ಅವ
ಧಾನದ ಮೇಲೆ ಪರಿಣಮಿಸುವವು. ಈ ಪ್ರಸಂಗಗಳಲ್ಲಿ ವಿದ್ಯಾರ್ಥಿಗಳ ಲಕ್ಷವು ಇಲ್ಲ
ದಂತಾದರೆ ಅವರ ತಪ್ಪೇನೂ ಇರುವದಿಲ್ಲ. ಅವರವರ ಪರಿಸ್ಥಿತಿಯು ದೋಷವಾಗಿರು
ವದು. ಇಂಥ ವಿದ್ಯಾರ್ಥಿಗಳ ಮೇಲೆ ಶಿಕ್ಷಕನ ಸಹಾನುಭೂತಿಯು ಅವಶ್ಯವು.
ಅವನ ಸಹಾನುಭೂತಿಯು ಇರದಿದ್ದರೆ ಇಂಥ ವಿದ್ಯಾರ್ಥಿಗಳು ಶಿಕ್ಷಣಕ್ಕೆ ಎರವಾಗ
ಬೇಕಾಗುವದು.

ವಿದ್ಯಾರ್ಥಿಗಳ ಅವಧಾನವು ಕೆಡಲಿಕ್ಕೆ ಅವರ ಪರಿಸ್ಥಿತಿಯು ಕಾರಣವಾಗಿರು
ತ್ತದೆಂದು ಮೇಲೆ ಹೇಳಿದೆ. ಪರಿಸ್ಥಿತಿಯ ದೋಷದ ಮೂಲಕ ವಿದ್ಯಾರ್ಥಿಗಳು
ತಮ್ಮ ಇಚ್ಛೆಗಳನ್ನು ಬಚ್ಚಿಡುವ ಪ್ರಸಂಗ ಬರುವದು. ವಿದ್ಯಾರ್ಥಿಗಳು ಯಾವ
ದೊಂದು ಖಾದ್ಯವನ್ನು ತಿನ್ನಲು ಬಯಸುವರು; ಬೇಕಾದ ಆಟವಾಡಲು ಇಚ್ಛಿಸು
ವರು; ಎಲ್ಲಿಗಾದರೂ ಹೋಗಿ ಬರಬೇಕೆನ್ನುವರು. ಮನೆತನದ ಪರಿಸ್ಥಿತಿಯ ದೋಷ
ದಿಂದ ಅವರವರ ಇಚ್ಛೆಗಳು ಪೂರ್ಣವಾಗುವದಿಲ್ಲ. ಹೀಗೆ ಇಚ್ಛೆಗಳು ಕೊನೆಗಾಣ
ದ್ದರಿಂದ ಒಳಗೇ ನೊಂದುಕೊಳ್ಳುವರು. ಆದ್ದರಿಂದ ಉದಾಸೀನರಾಗಿ ಪಾಠಕ್ಕೆ
ಲಕ್ಷ ಕೊಡುವಂತೆ ಹೊರಗೆ ಮಾತ್ರ ತೋರಿಸುವರು. ಹೀಗಾಗಲಿಕ್ಕೆ ಅವರ ಅಸ್ವಸ್ಥ
ಮನಸ್ಸೇ ಕಾರಣವಾಗಿರುವದು. ಇಂಥವನೇ ಇನ್ನೊಬ್ಬನು ಶಿಕ್ಷಕನ ಕಡೆಗೆ ಲಕ್ಷ್ಯ
ವಿದ್ದಂತೆ ಹೊರಗೆ ತೋರಿಸುವನು. ಆಗ ಶಿಕ್ಷಕನು ಹೇಳಿದ್ದು ಅವನಿಗೆ ತಿಳಿಯುವದೇ
ಇಲ್ಲ. ಯಾಕಂದರೆ ಅವನ ಅಂತರಾತ್ಮವು ತನ್ನ ಇಚ್ಛಿತ ವಸ್ತುವಿನ ಕಡೆಗೆ ಇರು
ವದು. ಅವನ ಕನಸುಮನಸುಗಳಲ್ಲಿ ಅವನ ಇಚ್ಛೆಯೇ ತುಂಬಿತುಳುಕು
ಇರುವದು. ಇಂಥ ವಿದ್ಯಾರ್ಥಿಗಳ ಸ್ವಪ್ನವನ್ನು ವಿಚಾರಿಸುತ್ತ ಇದ್ದರೆ ಅವ
ಮುಚ್ಚಿದ ವಿಚಾರಗಳು ಪ್ರಕಟವಾಗುವವು. ವಿದ್ಯಾರ್ಥಿಗಳ ಸ್ವಪ್ನದ ವಿಷಯ
ವಾಗಿ ಶಿಕ್ಷಕನು ಆಗಾಗ ವಿಚಾರಿಸುತ್ತ ಇರಬೇಕು. ವಿದ್ಯಾರ್ಥಿಗಳು ಸುಳ್ಳು ಹೇಳು
ತ್ತಿರುವದಿಲ್ಲ. ನಿಜವಾದ ಈ ತರದ ಮಾಹಿತಿಯಿಂದ ವಿದ್ಯಾರ್ಥಿವರ್ಗದ ಅವಧಾನ
ಮೇಲೆ ಅವರ ಪರಿಸ್ಥಿತಿಯ ಪರಿಣಾಮವು ಹ್ಯಾಗಾಗುತ್ತಿರುವದೆಂಬದು ಚನ್ನಾಗಿ
ತಿಳಿಯುವದು.

ಶಿಕ್ಷಕನ ಭಾಷೆಯೂ ವಿದ್ಯಾರ್ಥಿಗಳ ವಿಷಯದ ಅಜ್ಞಾನವೂ ವಿದ್ಯಾರ್ಥಿಗಳ ಅನವಧಾನಕ್ಕೆ ಕಾರಣವಾಗುತ್ತಿರುತ್ತದೆ. ಭಾಷೆಯ ದೋಷದಿಂದ ಶಿಕ್ಷಕನು ಹೇಳಿದ್ದು ವಿದ್ಯಾರ್ಥಿಗಳಿಗೆ ತಿಳಿಯುತ್ತಿರುವದಿಲ್ಲ, ಒಮ್ಮೊಮ್ಮೆ ಶಿಕ್ಷಕನು ಅವಸರದಿಂದ ಹೇಳಿದರೆ ಇಲ್ಲವೆ ತೀರ ಸಾವಕಾಶ ಹೇಳಿದರೂ ಇದೇ ಪರಿಣಾಮವಾಗುವದು. ಒಮ್ಮೊಮ್ಮೆ ಶಿಕ್ಷಕನ ಭಾಷೆಯು ವಿದ್ಯಾರ್ಥಿಗಳ ಯೋಗ್ಯತೆಯನ್ನೇ ಮೀರುವದು. ಇವೆಲ್ಲ ತೊಂದರೆಗಳ ಮೂಲಕ ವರ್ಗದಲ್ಲಿ ನಡೆದ ವಿಷಯವು ತಿಳಿಯದ್ದರಿಂದ ಅವರು ದುರ್ಲಕ್ಷಿಸುವರು. ಹಿಂದಿನ ವಿಷಯವು ತಿಳಿಯದ್ದರಿಂದ ಮುಂದೆ ನಡೆಯುವ ವಿಷಯವು ಸಹ ದುರ್ಬೋಧವಾಗುವದು. ಆಗ ಶಿಕ್ಷಕನಾದರೂ ತಾನು ಹೇಳಿದ್ದು ವಿದ್ಯಾರ್ಥಿಗಳಿಗೆ ತಿಳಿಯಿತೋ ಇಲ್ಲವೋ, ಅಥವಾ ತನ್ನ ಭಾಷೆಯು ಅವರಿಗೆ ಸಮರ್ಪಕವಾಗಿರುವದೋ ಹೇಗೋ, ತಾನು ಹೇಳುವ ವಿಷಯದ ಸಂಗಡ ವಿದ್ಯಾರ್ಥಿಗಳು ಪ್ರಗತಿಹೊಂದಿದರೋ ಇಲ್ಲವೋ ಇತ್ಯಾದಿಯಾಗಿ ವಿಚಾರಿಸುತ್ತ ಇರಬೇಕು. ವೇಳಾಪತ್ರಿಕೆಗನುಸರಿಸಿ ಬರಿ ವಿಷಯವನ್ನು ಸಾಗಿಸಿದರೆ ತೀರಿತೆಂದು ತಿಳಿಯಬಾರದು. ಕೆಲವರು ವಿದ್ಯಾರ್ಥಿಗಳು ವರ್ಗದ ವಿಷಯಕ್ಕಿಂತ ಮುಂದೆ ಇರುವರು. ಇಂಥವರು ಸಹ ವರ್ಗದಲ್ಲಿ ನಡೆವ ಪಾಠದ ಕಡೆಗೆ ದುರ್ಲಕ್ಷಿಸುವರು. ಇಂಥ ವಿದ್ಯಾರ್ಥಿಗಳ ಕಡೆಗೆ ಲಕ್ಷಕೊಟ್ಟು ಅಂಥವರಿಗಾಗಿ ಯೋಗ್ಯ ಕೆಲಸವನ್ನು ಕೊಡಬೇಕು.

ಈ ವರೆಗೆ ಶಿಕ್ಷಕನು ವಿದ್ಯಾರ್ಥಿಗಳ ಬಾಹ್ಯ ಪರಿಸ್ಥಿತಿಯ ಕಡೆಗೆ ಹೇಗೆ ಲಕ್ಷ ಕೊಡಬೇಕೆಂಬವನ್ನು ವಿಚಾರಿಸಿದ್ದಾಯಿತು. ವಿದ್ಯಾರ್ಥಿಗಳ ಆನುವಂಶಿಕ ಪರಿಸ್ಥಿತಿಯ ಕಡೆಗೆ ಹೆಚ್ಚು ಲಕ್ಷಗೊಡಬಾರದು. ಯಾವನೊಬ್ಬ ಹುಡುಗನು ಎಂಥಲ್ಲಿ ಜನ್ಮ ಹೊಂದುವನೆಂಬದು ತಿಳಿಯುವದಿಲ್ಲ. ಇಷ್ಟಾಗಿ ಅದು ಅವನ ಸ್ವಾಧೀನವಲ್ಲ. ಆ ವಿಷಯಕ್ಕೆ ಮಹತ್ವ ಕೊಡುವದರಲ್ಲಿ ಅರ್ಥವೇನಿದೆ? ಆನುವಂಶಿಕ ಗುಣಗಳಿಂದ ಶಿಕ್ಷಣಕ್ಕೆ ಸಹಾಯ ದೊರೆಯುವದೇನೋ ನಿಜ. ಪರಿಸ್ಥಿತಿಯು ಅನುಕೂಲವಾದರೆ ಆನುವಂಶಿಕ ಗುಣಗಳು ಸಹ ಸುಧಾರಣೆ ಹೊಂದುವವು. ಯಾವ ಸಂತತಿಯಲ್ಲಿಯೇ ಮಗುವು ಜನಿಸಲಿ, ಆ ಮಗುವಿನ ಸುತ್ತುಮುತ್ತು ಯೋಗ್ಯ ಪರಿಸ್ಥಿತಿಯನ್ನು ಉಂಟುಮಾಡಿ ಸುಧಾರಣೆ ಮಾಡಿದ ಉದಾಹರಣಗಳು ಅನೇಕವಿದ್ದದ್ದು ಅನುಭವಕ್ಕೆ ಬಂದಿರುವದು. ಆಗ ಪರಿಸ್ಥಿತಿಗೆ ಒಳ್ಳೇ ಮಹತ್ವ ಬರುವದು. ಅದಕ್ಕಾಗಿ ಯೋಗ್ಯ ಪರಿಸ್ಥಿತಿಯನ್ನುಂಟುಮಾಡುವದು ಲಾಭದಾಯಕ ವಾಗಿರುವದು. ಶಾಲೆಯ ವಾತಾವರಣವು ರಮ್ಯವಿರಬೇಕು. ಶಿಕ್ಷಕನು ಪ್ರೇಮದ

ಬಳಿಕೆಯುವನೂ ಬುದ್ಧಿವಂತನೂ ಇರಬೇಕು. ಶಾಲೆಯ ಸ್ಥಳವು ಸಾಕಷ್ಟು ವಿಸ್ತಾರವಾದದ್ದೂ, ಹವೆಯಾಡುವಂಥಾದ್ದೂ ಇರಬೇಕು. ಕಲಿಸತಕ್ಕ ವಿಷಯವು ಹುಡುಗರಿಗೆ ರುಚಿಸುವಂಥದೂ, ತಕ್ಕಷ್ಟು ಇರತಕ್ಕದ್ದು. ಆ ವಿಷಯವು ಮಕ್ಕಳ ನಿತ್ಯದ ಆಯುಷ್ಯಕ್ಕೆ ಸಂಬಂಧಿಸಿರಬೇಕು. ಈ ರೀತಿಯಾಗಿ ಶಾಲೆಯು ಇದ್ದದ್ದಾದರೆ ಸಮಾಜಕ್ಕೂ, ಶಾಲೆಗೂ ಇರುವ ಅಭ್ಯಂತರವು ಇಲ್ಲದಂತಾಗುವದು. ಹುಡುಗರಲ್ಲಿರತಕ್ಕ ಸಹಜಪ್ರವೃತ್ತಿಯ (Instincts) ವಿಚಾರವನ್ನು ಶಿಕ್ಷಕನು ಮಾಡಬೇಕು. ಎಲ್ಲ ಪ್ರಾಣಿಗಳಲ್ಲಿರತಕ್ಕ ಸಾಮಾನ್ಯ ಸ್ವಾಭಾವಿಕ ಹುಟ್ಟು ಪ್ರವೃತ್ತಿಗಳು ಮಕ್ಕಳಲ್ಲಿರುತ್ತವೆ. ಮನೋವ್ಯಾಪಾರಗಳಲ್ಲಿ ಪ್ರವೃತ್ತಿಯು ಒಂದಾದದ್ದು. ಜ್ಞಾನ, ಭಾವನೆ, ಪ್ರವೃತ್ತಿ ಇವು ಮೂರು ಮನಸ್ಸಿನ ವ್ಯಾಪಾರಗಳಾಗಿರುವವು. ಎಷ್ಟೋ ಪ್ರವೃತ್ತಿಗಳು ಅಭ್ಯಾಸದಿಂದ ಬರುತ್ತವೆ; ಮತ್ತೆ ಕೆಲವು ಹುಟ್ಟಾ ಇರುವವು. ಹುಟ್ಟಾ ಪ್ರವೃತ್ತಿಗಳು ಯಾವವು ? ಅವುಗಳ ಉಪಯೋಗವು ನಮ್ಮ ಶಿಕ್ಷಣದಲ್ಲಿ ಹ್ಯಾಗಾಗುವದೆಂಬದನ್ನು ಸ್ವಲ್ಪದರಲ್ಲಿ ವಿಚಾರಿಸೋಣ. ಕೆಲ ಪಕ್ಷಿಗಳು ಗೂಡುಕಟ್ಟಿಕೊಳ್ಳುವವು; ಅವುಗಳಲ್ಲಿ ತಮ್ಮ ತತ್ತಿಗಳನ್ನಿಡುವವು; ಗಂಡು ಹೆಣ್ಣು ಪಕ್ಷಿಗಳು ಸರತಿಯಂತೆ ತತ್ತಿಗಳಿಗೆ ಕಾವುಕೊಡುವವು; ಮರಿ ಹೊರಬಿದ್ದ ಮೇಲೆ ಅವುಗಳಿಗೆ ಗುಟುಕು ಕೊಡುವವು. ಈ ಸಂಗತಿಗಳೆಲ್ಲ ಪಕ್ಷಿಗಳಲ್ಲಿ ಸ್ವಾಭಾವಿಕವಿರುವವಾದ್ದರಿಂದ ನೈಸರ್ಗಿಕ ಪ್ರವೃತ್ತಿಗಳೆನಿಸುವವು. ಒಂದಾನೊಂದು ವಿಶಿಷ್ಟಕಾಲವು ಪ್ರಾಪ್ತವಾದೊಡನೆಯೇ ಅವುಗಳಲ್ಲಿ ಈ ಪ್ರವೃತ್ತಿಗಳು ಕೂಡಲೆ ಉದ್ಭವಿಸುವವು. ಅವುಗಳಿಗೆ ತಕ್ಕಂತೆ ಪಕ್ಷಿಗಳಿಂದ ಕೃತಿಗಳು ಘಟಿಸುವವು. ಒಂದು ನಾಯಿಯ ಬಾಯಿಯಲ್ಲಿದ್ದ ರೊಟ್ಟಿಯ ತುಂಡನ್ನು ಮತ್ತೊಂದು ಅಪಹರಿಸಲಿಕ್ಕೆ ಯತ್ನಿಸಲು ಅವೆರಡು ನಾಯಿಗಳು ಗುರುಗುಟ್ಟಿ ನ್ಯಾಯಮಾಡತೊಡಗುವವು. ಅವುಗಳಲ್ಲಿ ಆಕಾಂಕ್ಷೆ, ಅಪಹಾರ, ತನ್ನದನ್ನು ತಾನು ಕಾದುಕೊಳ್ಳೋಣ ಈ ಗುಣಗಳು ಹುಟ್ಟಾ ಬಂದಿರುವವು. ಮಕ್ಕಳ ಬಕ್ಕಣದಲ್ಲಿ ಕಾಜಿನ ಚೂರುಗಳೂ, ಕಲ್ಲಿನ ತುಣುಕುಗಳೂ ಸಂಗ್ರಹವಾಗಿರುವವು. ಅವುಗಳ ಬೆಲೆಯು ನಮಗೆ ಏನೂ ತೋರುವದಿಲ್ಲ. ಹಾಗೆ ಸಂಗ್ರಹಿಸಲಿಕ್ಕೆ ಯಾರು ಹೇಳಿಕೊಟ್ಟಿರುವರು ? ಇದು ಸಹಜ ಪ್ರವೃತ್ತಿಯಾಗಿರುವದು. ಹೀಗೆಯೇ ಎಲ್ಲ ಪ್ರಾಣಿಗಳಲ್ಲಿಯೂ ಸಹಜ ಪ್ರವೃತ್ತಿಗಳಿರುವವು. ಮನುಷ್ಯೇತರ ಪ್ರಾಣಿಗಳಲ್ಲಿ ಈ ಪ್ರವೃತ್ತಿಯು ಬಲು ಬೇಗ ಒಡೆದು ಕಾಣುವದು. ಒಟ್ಟಿನಮೇಲೆ ಸರ್ವ ಪ್ರಾಣಿಗಳಲ್ಲಿ ಸಹಜ ಪ್ರವೃತ್ತಿಯು ಹೆಚ್ಚಾಗಿ ಇರುವದು. ಈ ಸಹಜ ಪ್ರವೃತ್ತಿಗಳನ್ನು ಉಪಯೋಗಮಾಡಿಕೊಂಡು

ಶಿಕ್ಷಣದ ಧೋರಣವನ್ನು ನಿಶ್ಚಯಿಸಬೇಕು. ಇದಕ್ಕೆ ವಿರುದ್ಧವಾಗಿ ನಡೆದದ್ದಾದರೆ ಶಿಕ್ಷಣ ಕಾರ್ಯದಲ್ಲಿ ಯಶಸ್ಸು ದೊರೆಯಲಾರದು. ಆದುದರಿಂದ ಈ ಸಹಜ ಪ್ರವೃತ್ತಿಗಳ ಮಾಹಿತಿಯು ಶಿಕ್ಷಕನಿಗೆ ಆಗುವದು ಅವಶ್ಯವು. ಸ್ವರಕ್ಷಣ, ತನ್ನ ವಂಶದ ಅಭಿವೃದ್ಧಿ ಈ ಎರಡು ಮಾತುಗಳು ಸಾಧಾರಣವಾಗಿ ಎಲ್ಲ ಪ್ರಾಣಿಗಳಲ್ಲಿ ಕಂಡು ಬರುತ್ತವೆ. ಈ ಬಗೆಯ ಪ್ರವೃತ್ತಿಗಳು ಅನೇಕವಿದ್ದರೂ ಕೆಳಗೆ ವಿವರಿಸಿದ ಪ್ರವೃತ್ತಿಗಳ ವಿಷಯವಾಗಿ ಶಿಕ್ಷಕನು ಅವಶ್ಯವಾಗಿ ವಿಚಾರಿಸಬೇಕು.

(೧) **ಕೃತಿಪ್ರೇಮ**:—ನಿರೋಗಿಯಾದ ಮಗುವು ಸುಮ್ಮನೆ ಎಂದೂ ಕೂಡಲಾಗದು. ಏನಾದರೂ ಚಲನವಲನ ಮಾಡುವದು ಅದರ ಹುಟ್ಟುಗುಣವಾಗಿರುವದು. ಇದಕ್ಕೆ ವಿಪರೀತವಾಗಿ ಸುಮ್ಮನೆ ಕುಳಿತರೆ ಅದಕ್ಕೆ ಸಮಾಧಾನವಾಗಲಾರದು. ಮಗುವಿಗೆ ದೇವರಂತೆ ಸುಮ್ಮನೆ ಕೂಡೆಂದು ಹೇಳುವದು, ಅದನ್ನು ಕಲ್ಲಿನಂತೆ ಮಾಡುವದೇ ಆಗಿರುವದು. ಜಗತ್ತನ್ನು ಸಾಗಿಸುವವನಾದ ದೇವರು ಸುಮ್ಮನೆ ಎಂದೂ ಕೂಡಲಾರನು. ಅವನ ವ್ಯಾಪಾರವು ಅವ್ಯಾಹತವಾಗಿ ನಡೆದಿರುವದು. ನಮ್ಮ ದೇವಾಲಯದಲ್ಲಿದ್ದ ಕಲ್ಲಿನ ಮೂರ್ತಿಯು ಕಣ್ಣಮುಂದೆ ಕಟ್ಟಿರುವದರಿಂದ "ದೇವರಂತೆ ಸುಮ್ಮನೆ ಕೂಡೆ"ಂದು ಹೇಳುವ ಪರಿಪಾಠವು ಉಂಟಾಗಿರುವದು. ಮಕ್ಕಳಿಗೆ ಸುಮ್ಮನೆ ಕೂಡೆಂದು ಹೇಳುವದು ನಿಸರ್ಗಕ್ಕೆ ವಿರುದ್ಧವಾಗಿರುವದು. ಮಕ್ಕಳಿಗೆ ಏನಾದರೊಂದು ಉದ್ಯೋಗವು ಬೇಕು. ಆದ್ದರಿಂದ ಅವರಿಗಾಗಿ ಏನಾದರೊಂದು ಹಸ್ತ ವ್ಯವಸಾಯದ ಉದ್ಯೋಗ ಮಾಡಲಿಕ್ಕೆಹೇಳಬೇಕು. ಶಿಕ್ಷಕನು ವಿಚಾರಮಾಡಿ ಪ್ರತ್ಯೇಕ ಪಾಠದಲ್ಲಿ ಹುಡುಗರಿಗಾಗಿ ಉಪಯುಕ್ತವಾದ ಹಾಗು ಪಾಠಕ್ಕೆ ಪೋಷಕವಾದ ಒಂದು ಹಸ್ತ ವ್ಯವಸಾಯವನ್ನು ಶೋಧಿಸಿ ಇಡಬೇಕು. ಇದರಿಂದ ಹುಡುಗರು ಸುಮ್ಮನೆಕುಳಿತಾಗ ಸಹ ಅವರಿಗಾಗಿ ಏನಾದರೂ ವ್ಯವಸಾಯವನ್ನು ಕಲ್ಪಿಸಿ ಹೇಳಬೇಕೆಂಬ ಸಂಗತಿಯು ಲಕ್ಷ್ಯಕ್ಕೆ ಬರುವದು. ಅಂದರೆ ವರ್ಗದಲ್ಲಿ ಆದಗುವ ಹುಡುಗಾಟಿಕೆಯುಗದ್ದಲ, ಹೊಡೆದಾಟ-ಬಡೆದಾಟಗಳು ಕಡಿಮೆಯಾಗುವವು.

(ಮುಂದೆ ಸಾಗಿದ್ದು).

ಪ್ರಕಟನೆ

೧೯೩೬ನೆಯ ಇಸವಿಯ ಹೆಣ್ಣುಮಕ್ಕಳ ವ್ಹ. ಫಾ ಪರೀಕ್ಷೆಯ (ಕನ್ನಡ, ಮರಾಠಿ, ಉರ್ದು) ವೇಳಾಪತ್ರಿಕೆ

ತಾರೀಖು	ಸ್ಟ್ಯಾ. ಟಾಯಿಮು ಇಂದ	ಸ್ಟ್ಯಾ. ಟಾಯಿಮು ವರೆಗೆ	ವಿಷಯಗಳು	ಗುಣಗಳು
ಮಂಗಳವಾರ ೧೦—೩—೩೬	೧೦	೧೦—೪೫	ಉಮೇದವಾರರ ಹಾಜರಿ ತೆಗೆದುಕೊಳ್ಳುವದು	
ಸದರ	೧೧	೨	೧ನೆಯ ಸದರು (ಬ) ಹಾಗು (ಕ) ದೇಶಭಾಷೆ	(ಬ) ೪೫, (ಕ) ೩೦
ಸದರ	೩	೫	೨ನೆಯ ಸದರು (ಬ) ಹಾಗು (ಅ) ಉಕ್ತಲೇಖನ, ನಿಬಂಧ, ಕೈಬರೆಹ.	(ಬ) ೧೫, (ಅ) ೬೦
ಬುಧವಾರ ೧೧—೩—೩೬	೧೧	೧	೫ನೆಯ ಸದರು ಇತಿಹಾಸ	೭೫
ಸದರ	೨	೪	೬ನೆಯ ಸದರು ಆರೋಗ್ಯಶಾಸ್ತ್ರ	೭೫
ಗುರುವಾರ ೧೨—೩—೩೬	೧೧	೨	೩ನೆಯ ಸದರು (ಅ) ಮತ್ತು (ಬ) ಗಣಿತ ಹಾಗು ಮನೆಯ ಜಮಾಖರ್ಚು	(ಅ) ೮೦, (ಬ) ೨೦
ಸದರ	೩	೫	೪ನೆಯ ಸದರು ಭೂಗೋಲ	೭೫
ಶನಿವಾರ ೧೪—೩—೩೬	೭—೩೦	೧೦—೩೦	೭ನೆಯ ಸದರು ಹೊಲಿಗೆಯ ಕೆಲಸ	೧೦೦
ಸದರ	೩	೫	೮ನೆಯ ಸದರು ಐಚ್ಛಿಕವಿಷಯಗಳು) *ಡ್ರಾಯಿಂಗ, ಪ್ರಕೃತಿವಿಮರ್ಶೆ, [ಗಾಯನ	೭೫

ಸೂಚನೆ— ೧ನೆಯ ಸದರು (ಅ) ಹಾಗು (ಡ) ಭಾಗದ ಬಾಯಿಪರೀಕ್ಷೆಯು ಪ್ರತಿದಿನ ಬರೆಹದ ಪರೀಕ್ಷೆ ಮುಗಿದ ಬಳಿಕ ಸಾಯಂಕಾಲ ಯೋಗ್ಯ ಕಾಲಾವಧಿಯ ವರೆಗೆ ತೆಗೆದುಕೊಳ್ಳಲ್ಪಡುವದು ಪರೀಕ್ಷೆಗೆ ಬರುವ ಉಮೇದವಾರರ ಸಂಖ್ಯೆಯನ್ನು ಅನುಲಕ್ಷಿಸಿ, ಹೊರಗಿನಿಂದ ಬಂದ ವಿದ್ಯಾರ್ಥಿನಿಯರ ಪರೀಕ್ಷೆಯು ಮೊದಲು ತೆಗೆದುಕೊಳ್ಳಲ್ಪಡುವದು; ಆಯಾ ಸೆಂಟರದ ಸ್ಥಳಿಕ ವಿದ್ಯಾರ್ಥಿನಿಯರು ಅವಶ್ಯವಿದ್ದರೆ ೧೫ನೆಯ ತಾರೀಖಿನ ದಿವಸ ಈ ಪರೀಕ್ಷೆಗೆ ಬರಬೇಕಾಗಬಹುದು

* ಉಮೇದವಾರರು ಒಂದು ಐಚ್ಛಿಕ ವಿಷಯವನ್ನು ತೆಗೆದುಕೊಳ್ಳಲೇಬೇಕು. ಉಮೇದವಾರರು ತಾ. ೧೦—*—೩೬ನೆಯ ದಿವಸ ಮಾತ್ರ ಪರೀಕ್ಷೆಯು ಆರಂಭವಾಗುವ ಮೊದಲು ಒಂದು ತಾಸು ಮುಂಚಿತವಾಗಿಯೇ ಪರೀಕ್ಷೆಯ ಸ್ಥಳದಲ್ಲಿ ಹಾಜರ ಇರಲಿಕ್ಕೆಬೇಕು.

ಪ್ರಕಟಣೆ

ನಂ. 47/P $\frac{6894}{10-1-39}$

ಮ್ಯಾನೇಜಿಂಗ ಡಾಯರೆಕ್ಟರ ಬಾಲ ಸಾಹಿತ್ಯ ಮಂಡಲ, ಮಂಗಳೂರ ಕೊಡಿ ...ಲ್ ಬಾಯಿಲ್ ಇವರಿಂದ ಪ್ರಕಾಶಿತವಾದ 'ಬೊಕ್ಕೆಬಾಯಿ ಕೊಕ್ಕರಾಜ'ವೆಂಬ ಸ್ತಕವು ಬೆಲೆ ೦-೧-೬. ಇದು ಪ್ರಾ ಶಾಲೆಗಳ ವಿದ್ಯಾರ್ಥಿಗಳ ಲಾಯಬ್ರರಿ ಕ್ಕಾಗಿ ಮಂಜೂರಾಗಿದೆ.

ಸೈಯದ ನೂರುಲ್ಲಾ
ಎ. ಇ. ದ. ಭಾಗ

ಪತ್ರಗಳ ಸಾರಾಂಶ

(೧) **ಶಾಳಾ ನಂದಗಡ, ಜಿಲ್ಲಾ ಬೆಳಗಾವ—** ಇಲ್ಲಿಯ ಭೆರಮಪ್ಪ ...ಥರ್ಡೆ ಇವರು ಬರೆದದ್ದು— ೧೫—೧—೧೯೩೬ನೆಯ ದಿವಸ ಇಲ್ಲಿಯ ಕನ್ನಡ ಗಂಡು ...ಕ್ಕಳ ಶಾಲೆಯಲ್ಲಿ ಬಾಲ ದಿನೋತ್ಸವವು ಜರುಗಿತು. ಇಲ್ಲಿಯ ವಿರಕ್ತಮಠಾಧಿ ...ಗಳಾದ ಶ್ರೀಮನ್ನಿರಂಜನ ಮಹಾಂತ ಸ್ವಾಮಿಯವರು ಅಧ್ಯಕ್ಷರಾಗಿದ್ದರು. ಆಗ ...ಲ್ಲಿಯ ಹೆಡ್‌ಮಾಸ್ತರ ಮಿ. ರಾ. ಶಾ. ಕುಲಕರ್ಣಿ ಇವರು ಬಾಲ ದಿನೋತ್ಸವದ ಹತ್ವದ ಬಗ್ಗೆ ಭಾಷಣ ಮಾಡಿದರು. ಆ ಮೇಲೆ ಅಧ್ಯಕ್ಷರು ಬಾಲಕರ ...ರ್ಮಿಕ ನೈತಿಕ ಶಿಕ್ಷಣಗಳ ವಿಷಯವಾಗಿ ಭಾಷಣ ಮಾಡಿದರು. ಹಾಗು ಬಾಲ ...ರ ಉತ್ತೇಜನಕ್ಕಾಗಿ ೩ ರೂ. ಗಳನ್ನು ಕೊಟ್ಟರು. ಊರ ಪ್ರಮುಖರು ಶಾಲೆಯ ...ಡುಗರಿಗೆ ಬೆಂಡು ಬತ್ತಾಸಗಳನ್ನು ಹಂಚಿದರು. ಬಳಿಕ ಪದ್ಧತಿಗನುಸರಿಸಿ ...ಂಬೂಲ ಪರಿಮಳ ದ್ರವ್ಯಗಳೊಂದಿಗೆ ಸಭೆ ವಿಸರ್ಜಿಸಲ್ಪಟ್ಟಿತು.

(೨) **ಶಾಳಾ ತವಗ, ಜಿಲ್ಲಾ ಬೆಳಗಾವ—** ಈ ಶಾಲೆಯ ಹೆಡ್‌ಮಾಸ್ತ ...ರು ಬರೆದದ್ದು— ತಾ॥ ೩೦—೧೨—೩೫ನೆಯ ದಿವಸ ಈವೂರ ವೇದಮೂರ್ತಿ ...ಂಜ್ಯೋತಿ ಶಿದ್ಲಿಂಗಯ್ಯ ಸ್ವಾಮಿ ತವಗಮಠ ಇವರು ನಮ್ಮ ಶಾಲೆಗೆ ಆಗಮಿಸಿ ...ದ್ಯಾರ್ಥಿಗಳಿಗಾಗಿ ಕೂಡಲಿಕ್ಕೆ ೧೦ ರೂ. ಬೆಲೆಯ ಗುಡಾರವನ್ನು ದಯಪಾಲಿಸಿ ...ರು. ಇದು ಸ್ತುತ್ಯವು.

(೩) **ಶಾಳಾ—ಎಲಿವಾಳ ತಾಲೂಕ ಕುಂದಗೋಳ—** ಇಲ್ಲಿಯ ಹೆಡ್ ...ಮಾಸ್ತರ ಮಿ. ಅರಳೀಕಟ್ಟಿ ಇವರು ಬರೆದದ್ದು:—

ಇಲ್ಲಿ ಕನ್ನಡ ಶಾಲೆಯಲ್ಲಿ ೬೦ ವರ್ಷದ "ಡೈಮಂಡ ಜುಬಿಲೀ" ಉತ್ಸವವು ...॥ ೨೦—೧—೩೬ನೆಯ ದಿವಸ ಒಳ್ಳೇ ಸಂಭ್ರಮದಿಂದ ಜರುಗಿತು. ಆ ವೇಳೆ ...ಲ್ಲಿ ಹೆ. ಮಾ. ರು ನೀತಿ ವಿಷಯಕ ಭಾಷಣ ಮಾಡಿ ವಿದ್ಯಾರ್ಥಿಗಳಿಗೆ ೧೦ ಪುಸ್ತಕ ...ಗಳನ್ನು ಭಕ್ಷೀಸ ಕೊಟ್ಟರು. ಅಧ್ಯಕ್ಷರು ಆಟವಾಡಿದ ವಿದ್ಯಾರ್ಥಿಗಳಿಗೆ ಪದಕ ...ಗಳನ್ನು ಕೊಟ್ಟು ಉತ್ತೇಜನಗೊಳಿಸಿದರು. ಶ್ರೀ. ವೀರಪ್ಪಣ್ಣಾ ಹೊಸಕಟ್ಟಿ ಇವರು ...೫ ರೂ. ವೆಚ್ಚ ಮಾಡಿ ಮಿಠಾಯಿ ಹಂಚಿದ ಬಳಿಕ ರೀತಿಗೆ ಸರಿಯಾಗಿ ಉತ್ಸವವು ...ಂಗವಾಯಿತು.

Reg. No. B. 3

ಜಾಹೀರ ನೋಟೀಸ

ದೇವಿಹೊಸೂರ ಒಕ್ಕಲತನ ಶಾಲೆಯ ಹೊಸ ವರ್ಗ

ಇದು, ತಾ|| ೧–೬–೧೯೩೬ನೇ ಇಸವಿಯ ದಿವಸ ಪ್ರಾರಂಭವಾಗುವದು. ಕಲಿಯುವ ಬಡ ಒಕ್ಕಲಿಗರ ಮಕ್ಕಳಿಗೆ ತಿಂಗಳೊಂದಕ್ಕೆ ೫ ರೂ. ಸ್ಕಾಲ ದೊರೆಯುವದು. ಶಾಲೆಯಲ್ಲಿ ಸೇರಲಿಚ್ಛಿಸುವ ಉಮೇದವಾರರು ತೀವ್ರವೇ ನಂತೆ ಅರ್ಜಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಬೇಕಾಗಿದ್ದಲ್ಲಿ ಪತ್ರ ಕೇಳಿಕೊಳ್ಳಬೇಕು.

ಅರ್ಜಿಯ ನಮೂನೆ

ಮಿ| ಹೆಡ್ ಮಾಸ್ತರ ಸಾಹೇಬ ಒಕ್ಕಲತನ ಶಾಲಾ ದೇವಿಹೊಸೂರ ಸೇವೆಗೆ—

ಕೆಳಗೆ ಸಹಿ ಮಾಡುವ ನಾನು ತಮ್ಮ ಶಾಲೆಯಲ್ಲಿ ಕಲಿಯಲು ಇಚ್ಛಿಸುತ್ತೆ ತಾವು ಕೇಳಿದ ಪ್ರಕಾರ ಕೆಳಗಿನಂತೆ ಮಾಹಿತಿ ಕೊಟ್ಟಿರುತ್ತೇನೆ.

(೧) ಅರ್ಜದಾರನ ಪೂರ್ಣ ಹೆಸರು.

(೨) ವಾಸಸ್ಥಳ, ಊರು, ತಾಲೂಕು.

(೩) ಜಾತಿ, ಮತ್ತು ಧರ್ಮ.

(೪) ವಯಸ್ಸು.

(೫) ಅರ್ಜದಾರನ ಮನೆಯವರಿಗಿರುವ ಕ್ಷೇತ್ರಮಾನವು ಇರುವ ಈ ವಿಷಯದ ಬಗ್ಗೆ ಗ್ರಾಮಸ್ಥರ ಸರ್ಟಿಫಿಕೇಟು ಅರ್ಜಿಯೊ ಇರತಕ್ಕದ್ದು.

(೬) ಹೊಲದ ಖಾತೇದಾರನಿಗೂ ಅರ್ಜದಾರನಿಗೂ ಇರುವ ಸಂ

(೭) ಅರ್ಜದಾರನ ವಿದ್ಯಾಭ್ಯಾಸ. ಈ ಬಗ್ಗೆ ಕಲಿತ ಶಾಲೆಯ ನಾ ಲಿವ್ಹಿಂಗ ಸರಟೀಫಿಕೇಟು ಅರ್ಜಿಯೊಂದಿಗೆ ಇರತಕ್ಕದ್ದು.

(೮) ಅರ್ಜದಾರನ ಪೂರ್ಣ ಪತ್ತೆ—ಹೆಸರು, ಊರು, ತಾಲೂಕು, ಪೋಸ್ಟ.

(೯) ಅರ್ಜಿಯ ತಾರೀಖು ಹಾಗು ಸಹಿ.

Sd/ T. N. CHAUGULE

ಹೆಡ್ ಮಾಸ್ತರ,

ಒಕ್ಕಲತನದ ಶಾ

ದೇವಿಹೊಸ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamik Shikshana

ಸಂಪಾದಕರು

ವೆಂಕಟೇಶ ನರಸಿಂಗರಾವ ಮಗದಾಳ, ಬಿ. ಎ.

ವಿಷಯಾನುಕ್ರಮಣಿಕೆಯು

ಪಾಲಕರ ದಿನ ೧
ಮಾನಸಶಾಸ್ತ್ರಸಂಬಂಧವಾದ ಕೆಲವು ವಿಚಾರಗಳು . . ೯
ಅಬಿಸೀನಿಯಾ ದೇಶವು . . . ೧೨
ರಾಷ್ಟ್ರಸಂಘ ೧೯
ಶ್ರೀರಾಮಚರಿತವು ೨೩
ಪ್ರಕಟನೆಗಳು ೨೭

Printed by K. R. Bhise at the Karnatak printing Works, Dharwar
and Published by V. N. Magdal. B. A., Head Master.

ಮಾರಾಟಕ್ಕೆ ಸಿದ್ಧವಿದೆ

ಗಣಿತ ಶಿಕ್ಷಕ

ಬ. ದು. ಹಿರೇಮಠ ಕೃತ

೩ನೆಯ ಆವೃತ್ತಿ

ಶಿಕ್ಷಕ ಬಾಂಧವರೇ, ಈ ಪುಸ್ತಕವು ಕನ್ನಡ ೫--೬-೭ ನೆಯ ಇಯತ್ತೆಗ
ಮತ್ತು ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಮತ್ತು ಮಾಧ್ಯಮಿಕ ಶಾಲೆಗ
ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಅಭ್ಯಾಸಕ್ರಮಕ್ಕನುಸರಿಸಿ ದ
ಸಲ್ಪಟ್ಟಿದೆ. ಇದರ ಮಹತ್ವವನ್ನು ವರ್ಣಿಸಲವಶ್ಯವಿಲ್ಲ ಕರ್ನಾಟಕದ **ಎಲ್ಲ** ಜ
ರಿಂದಲೂ ಆದರವನ್ನು ಹೊಂದಿರುವದು. ಆದುದರಿಂದಲೇ ಸ್ವಲ್ಪದಿವಸಗಳಲ್ಲಿಯೆ
ಇದು **ಮೂರನೆಯ ಆವೃತ್ತಿ**ಯನ್ನು ಪಡೆದಿರುವದು. ಒಂದು ಪ್ರತಿಯನ್ನಾದರ
ತರಿಸಿ ನೋಡಿದರೆ ಅದರ ಯೋಗ್ಯತೆಯು ತಮಗೂ ತಿಳಿಯುವದು.

ವ್ಯಾಪಾರಸ್ಥರಿಗೂ ಶಿಕ್ಷರಿಗೂ ಯೋಗ್ಯ ಸವಲತು ದೊರೆಯುವದು. ಪುಸ್ತ
ಗಳು ಏ. ಆರ್. ಶಿವನಾಗಪ್ಪ ಹುಬ್ಬಳ್ಳಿ ಇವರಲ್ಲಿಯೂ ಎಲ್ಲ ಊರುಗಳ ಪುಸ್ತ
ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ಬಸಪ್ರಭಯ್ಯ ದುಂಡಯ್ಯ ಹಿರೇಮಠ,
ಕನ್ನಡ ಶಾಲಾಮಾಸ್ತರ ವಿಜಾಪೂ

ಕನ್ನಡ ೪ನೇ ಇಯತ್ತೆಗಾಗಿ

ಪಠ್ಯಪುಸ್ತಕವೆಂದು ಕಮೀಟಿಯಿಂದ ಮಂಜೂರಾದ

ಕರ್ನಾಟಕ ಇತಿಹಾಸ ಬೋಧಿನಿ

ಹೊಸ ಚಿತ್ರಗಳು] **[ಹೊಸ ಮನೋರಂಜಕ ವಿಷಯ**

ಪ್ರೊ. ಸಾಸನೂರರವರ ಮುನ್ನುಡಿಯುಳ್ಳದ್ದು

ಶಿಕ್ಷಕರೆಲ್ಲರು ಓದಿ ವಿದ್ಯಾರ್ಥಿಗಳಿಗೆ ಕಲಿಸಲು ಯೋಗ್ಯವಾದ ಪುಸ್ತಕ

ಪ್ರಾಚೀನ ಶಿಲಾಶಾಸನ ತಾಮ್ರಪಟಗಳನ್ನು ಶೋಧಿಸಿ ಇತಿಹಾಸಜ್ಞರು ಮಾಹಿ
ಯನ್ನು ಸಂಗ್ರಹಿಸಿ ಮನೋರಂಜಕವಾಗಿಯೂ ಸ್ಫೂರ್ತಿದಾಯಕವಾಗಿಯೂ
ಪುಸ್ತಕ ಬರೆದಿದ್ದಾರೆ. ಚಾಲುಕ್ಯರ ಪುಲಕೇಶಿ, ಅಕ್ಕಣ್ಣ ಮಾದಣ್ಣರ ಕೊಲೆ, ಕಿ
ಬೀಳಗಿ, ಕೊಡಗು, ನ್ಯಾದಿ, ಅರಸರ ಹಾಗು ಶಿರಸಂಗಿ ದೇಸಾಯಿಯ
ವಿಷಯಗಳೆಲ್ಲ ಇವರಲ್ಲಿ ಅವೆ. ಭಾಷೆ ಸುಲಭ. ವಿಷಯ ಮನೋಹರ.
ಪುಸ್ತಕದ ಬಗ್ಗೆ ವಿದ್ವಜ್ಜನರ ಸದಭಿಪ್ರಾಯಗಳಿವೆ. ಬೆಲೆ ಎಂಟೇ ಆಣೆ.
ಪುಸ್ತಕವು ಎಲ್ಲ ಬುಕ್‌ಸೆಲರಲ್ಲಿ ಹಾಗು ಕೆಳಗಿನ ವಿಳಾಸದಲ್ಲಿಯೂ ದೊರೆಯುತ್ತ
ಯೋಗ್ಯ ಕಮಿಶನ್ ಪತ್ರವ್ಯವಹಾರದಿಂದ ಗೊತ್ತಾಗುವದು.

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ,
ಮಂಗಳವಾರಪೇಠ, ಧಾರವಾ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ಸಂಪುಟ ೭೨ ||| ಮಾರ್ಚ ೧೯೩೬ ||| ವರ್ಷ ೭ ಸಂ. ೧೨

ಪಾಲಕರ ದಿನ

ಟ್ರೇನಿಂಗ ಸ್ಕೂಲಿಗೆ ಜೋಡಿಸಿದ್ದ ಪ್ರಾಕ್ಟಿಸಿಂಗ ಸ್ಕೂಲಿನ ವಿದ್ಯಾರ್ಥಿಗಳ ಮೊದಲನೆಯ ಪಾಲಕರ ದಿನವನ್ನು ಕಳೆದ ತಿಂಗಳ ೨ನೆಯ ತಾರೀಖಿನ ದಿವಸ ಆಚರಿಸಿದ್ದಾಯಿತೆಂದೂ ಆದಿನ ಬಂದಿದ್ದ ಪಾಲಕರನ್ನು ಕುರಿತು ಟ್ರೇನಿಂಗ ಸ್ಕೂಲು ಹಾಗು ಪ್ರಾಕ್ಟಿಸಿಂಗ ಸ್ಕೂಲುಗಳಬಗ್ಗೆ ಸಂಕ್ಷಿಪ್ತವಾದ ವರದಿಯನ್ನು ಹೆಡ್ ಮಾಸ್ತರರಾದ ಮಿ. ವೆ. ನ. ಮುಗದಾಳ ಬಿ. ಎ., ಇವರು ಓದಿದರೆಂದೂ ನಮ್ಮ ವಾಚಕರಿಗೆ ಗೊತ್ತಿರುವದಷ್ಟೇ. ಈ ಯುಗವು ಶಿಕ್ಷಣದಲ್ಲಿ ಚಿಕ್ಕಮಕ್ಕಳ ಯುಗವೆಂದು ಹೆಸರಾಗಿದೆ. ಅವರ ಮಾನಸಿಕ ವಿಕಾಸವನ್ನೂ ಮನೋವಿಕಾರಗಳನ್ನೂ ಸಹಜಪ್ರವೃತ್ತಿಗಳನ್ನೂ ಅನುಸರಿಸಿಯೇ ಅವರ ಶಿಕ್ಷಣವು ಸಾಗತಕ್ಕದ್ದೆಂಬದು ಈಗ ಸರ್ವಸಮ್ಮತವಾದ ಮಾತಾಗಿದೆ. ಈ ಕಾರ್ಯವು ಚೆನ್ನಾಗಿ ಫಲಿಸಬೇಕಾದರೆ ಶಿಕ್ಷಕರಲ್ಲಿಯೂ ತಾಯ್ತಂದೆಪಾಲಕರುಗಳಲ್ಲಿಯೂ ನಿಜವಾದ ಸಹಾನುಭೂತಿಯೂ ಸಹಕಾರತೆಯೂ ಇರುವದು ಅತ್ಯಾವಶ್ಯಕವಾದದ್ದೆಂದು ಬೇರೆ ಹೇಳಬೇಕಾಗಿಲ್ಲ. ಇವು ಉಂಟಾಗಲಿಕ್ಕೆ ಇವರೀರ್ವರು ಮೇಲಿಂದಮೇಲೆ ಒಟ್ಟುಗೂಡಿ ಚಿಕ್ಕಮಕ್ಕಳ ಪ್ರಗತಿಯಬಗ್ಗೆ ವಿಚಾರವಿನಿಮಯ ಮಾಡುವದು ಮಹತ್ವದ ಮಾತು. ಆದ್ದರಿಂದ ಪ್ರಾಕ್ಟಿಸಿಂಗಸ್ಕೂಲಿನ ಈ ಊರ ವಿದ್ಯಾರ್ಥಿಗಳ

ಮಾರಾಟಕ್ಕೆ ಸಿದ್ಧವಿದೆ

ಗಣಿತ ಶಿಕ್ಷಕ

ಬ. ದು. ಹಿರೇಮಠ ಕೃತ

೩ನೆಯ ಆವೃತ್ತಿ

ಶಿಕ್ಷಕ ಬಾಂಧವರೇ, ಈ ಪುಸ್ತಕವು ಕನ್ನಡ ೫-೬-೭ ನೆಯ ಇಯತ್ತೆಗ ಮತ್ತು ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಮತ್ತು ಮಾಧ್ಯಮಿಕ ಶಾಲೆಗ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಅಭ್ಯಾಸಕ್ರಮಕ್ಕನುಸರಿಸಿ ರ ಸಲ್ಪಟ್ಟಿದೆ. ಇದರ ಮಹತ್ವವನ್ನು ವರ್ಣಿಸಲವಶ್ಯವಿಲ್ಲ ಕರ್ನಾಟಕದ ಎಲ್ಲ ಜ ರಿಂದಲೂ ಆದರವನ್ನು ಹೊಂದಿರುವದು. ಆದುದರಿಂದಲೇ ಸ್ವಲ್ಪದಿವಸಗಳಲ್ಲಿಯೆ ಇದು **ಮೂರನೆಯ ಆವೃತ್ತಿಯನ್ನು** ಪಡೆದಿರುವದು. ಒಂದು ಪ್ರತಿಯನ್ನಾದರ ತರಿಸಿ ನೋಡಿದರೆ ಅದರ ಯೋಗ್ಯತೆಯು ತಮಗೂ ತಿಳಿಯುವದು.

ವ್ಯಾಪಾರಸ್ಥರಿಗೂ ಶಿಕ್ಷರಿಗೂ ಯೋಗ್ಯ ಸವಲತು ದೊರೆಯುವದು. ಪುಸ್ತ ಗಳು ಎ. ಆರ್. ಶಿವನಾಗಪ್ಪ ಹುಬ್ಬಳ್ಳಿ ಇವರಲ್ಲಿಯೂ ಎಲ್ಲ ಊರುಗಳ ಪುಸ್ತ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ಬಸಪ್ರಭಯ್ಯ ದುಂಡಯ್ಯ ಹಿರೇಮಠ,

ಕನ್ನಡ ಶಾಲಾಮಾಸ್ತರ ವಿಜಾಪುರ

ಕನ್ನಡ ೪ನೇ ಇಯತ್ತೆಗಾಗಿ

ಪಠ್ಯಪುಸ್ತಕವೆಂದು ಕಮೀಟಿಯಿಂದ ಮಂಜೂರಾದ

ಕರ್ನಾಟಕ ಇತಿಹಾಸ ಬೋಧಿನಿ

ಹೊಸ ಚಿತ್ರಗಳು] **[ಹೊಸ ಮನೋರಂಜಕ ವಿಷಯ**

ಪ್ರೊ. ಸಾಸನೂರರವರ ಮುನ್ನುಡಿಯುಳ್ಳದ್ದು

ಶಿಕ್ಷಕರೆಲ್ಲರು ಓದಿ ವಿದ್ಯಾರ್ಥಿಗಳಿಗೆ ಕಲಿಸಲು ಯೋಗ್ಯವಾದ ಪುಸ್ತಕ

ಪ್ರಾಚೀನ ಶಿಲಾಶಾಸನ ತಾಮ್ರಪಟಗಳನ್ನು ಶೋಧಿಸಿ ಇತಿಹಾಸಜ್ಞರು ಮಾಹಿ ಯನ್ನು ಸಂಗ್ರಹಿಸಿ ಮನೋರಂಜಕವಾಗಿಯೂ ಸ್ಫೂರ್ತಿದಾಯಕವಾಗಿಯೂ ಪುಸ್ತಕ ಬರೆದಿದ್ದಾರೆ. ಚಾಲುಕ್ಯರ ಪುಲಕೇಶಿ, ಅಕ್ಕಣ್ಣ ಮಾದಣ್ಣರ ಕೊಲೆ, ಕೆಳ ಬೀಳಗಿ, ಕೊಡಗು, ಸ್ವಾದಿ, ಅರಸರ ಹಾಗು ಶಿರಸಂಗಿ ದೇಸಾಯಿಯ ವಿಷಯಗಳೆಲ್ಲ ಇದರಲ್ಲಿ ಅವೆ. ಭಾಷೆ ಸುಲಭ. ವಿಷಯ ಮನೋಹರ. ಪುಸ್ತಕದ ಬಗ್ಗೆ ವಿದ್ವಜ್ಜನರ ಸದಭಿಪ್ರಾಯಗಳಿವೆ. ಬೆಲೆ ಎಂಟೇ ಆಣೆ. ಪುಸ್ತಕವು ಎಲ್ಲ ಬುಕ್‌ಸೆಲರಲ್ಲಿ ಹಾಗು ಕೆಳಗಿನ ಪತ್ತೆಯಲ್ಲಿಯೂ ದೊರೆಯುತ್ತ ಯೋಗ್ಯ ಕಮಿಶನ್ ಪತ್ರವ್ಯವಹಾರದಿಂದ ಗೊತ್ತಾಗುವದು.

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ,

ಮಂಗಳವಾರಪೇಠ, ಧಾರವಾ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ಸಂಪುಟ ೭೨ ||| ಮಾರ್ಚ ೧೯೩೬ ||| ವರ್ಷ ೭ ಸಂ. ೧೨

ಪಾಲಕರ ದಿನ

ಟ್ರೇನಿಂಗ ಸ್ಕೂಲಿಗೆ ಜೋಡಿಸಿದ್ದ ಪ್ರಾಕ್ಟಿಸಿಂಗ ಸ್ಕೂಲಿನ ವಿದ್ಯಾರ್ಥಿಗಳ ಮೊದಲನೆಯ ಪಾಲಕರ ದಿನವನ್ನು ಕಳೆದ ತಿಂಗಳ ೨ನೆಯ ತಾರೀಖಿನ ದಿವಸ ಆಚರಿಸಿದ್ದಾಯಿತೆಂದೂ ಆದಿನ ಬಂದಿದ್ದ ಪಾಲಕರನ್ನು ಕುರಿತು ಟ್ರೇನಿಂಗ ಸ್ಕೂಲು ಹಾಗು ಪ್ರಾಕ್ಟಿಸಿಂಗ ಸ್ಕೂಲುಗಳಬಗ್ಗೆ ಸಂಕ್ಷಿಪ್ತವಾದ ವರದಿಯನ್ನು ಹೆಡ್ ಮಾಸ್ತರರಾದ ಮಿ. ವೆ. ನ. ಮುಗದಾಳ ಬಿ. ಎ., ಇವರು ಓದಿದರೆಂದೂ ನಮ್ಮ ವಾಚಕರಿಗೆ ಗೊತ್ತಿರುವದಷ್ಟೇ. ಈ ಯುಗವು ಶಿಕ್ಷಣದಲ್ಲಿ ಚಿಕ್ಕಮಕ್ಕಳ ಯುಗವೆಂದು ಹೆಸರಾಗಿದೆ. ಅವರ ಮಾನಸಿಕ ವಿಕಾಸವನ್ನೂ ಮನೋವಿಕಾರಗಳನ್ನೂ ಸಹಜಪ್ರವೃತ್ತಿಗಳನ್ನೂ ಅನುಸರಿಸಿಯೇ ಅವರ ಶಿಕ್ಷಣವು ಸಾಗತಕ್ಕದ್ದೆಂಬದು ಈಗ ಸರ್ವಸಮ್ಮತವಾದ ಮಾತಾಗಿದೆ. ಈ ಕಾರ್ಯವು ಚೆನ್ನಾಗಿ ಫಲಿಸಬೇಕಾದರೆ ಶಿಕ್ಷಕರಲ್ಲಿಯೂ ತಾಯ್ತಂದೆಪಾಲಕರುಗಳಲ್ಲಿಯೂ ನಿಜವಾದ ಸಹಾನುಭೂತಿಯೂ ಸಹಕಾರತೆಯೂ ಇರುವದು ಅತ್ಯಾವಶ್ಯಕವಾದದ್ದೆಂದು ಬೇರೆ ಹೇಳಬೇಕಾಗಿಲ್ಲ. ಇವು ಉಂಟಾಗಲಿಕ್ಕೆ ಇವರೀರ್ವರು ಮೇಲಿಂದಮೇಲೆ ಒಟ್ಟುಗೂಡಿ ಚಿಕ್ಕಮಕ್ಕಳ ಪ್ರಗತಿಯಬಗ್ಗೆ ವಿಚಾರವಿನಿಮಯ ಮಾಡುವದು ಮಹತ್ವದ ಮಾತು. ಆದ್ದರಿಂದ ಪ್ರಾಕ್ಟಿಸಿಂಗಸ್ಕೂಲಿನ ಈ ಊರ ವಿದ್ಯಾರ್ಥಿಗಳ

ಪಾಲಕರನ್ನು ಬರಮಾಡಿಕೊಂಡು ಅವರಿಗೆ ವಿದ್ಯಾರ್ಥಿಗಳ ಕೆಲಸವನ್ನು ತೋರಿಸಿ ಅವರೊಡನೆ ಸಹಕರಿಸಲು ಆಸ್ಥೆಯನ್ನು ಪ್ರಕಟಸಲಿಕ್ಕಾಗಿ ಈ ಪಾಲಕರ ದಿನವು ಫೇಬ್ರುವರಿತಿಂಗಳ ೨ನೆಯ ತಾರೀಖಿನ ಆದಿತ್ಯವಾರದ ದಿನ ಏರ್ಪಡಿಸಲ್ಪಟ್ಟಿತ್ತು. ಆ ದಿವಸ ಇಲ್ಲಿ ನಡೆದ ವಿವರವಾದ ಕಾರ್ಯಕ್ರಮವನ್ನು ನಮ್ಮ ವಾಚಕರಿಗಾಗಿ ಇಲ್ಲಿ ಕೊಟ್ಟಿರುತ್ತೇವೆ.

ಟ್ರೇನಿಂಗ ಸ್ಕೂಲಿಗೂ ಪ್ರಾಕ್ಟಿಸಿಂಗ ಸ್ಕೂಲಿಗೂ ಅತಿನಿಕಟವಾದ ಸಂಬಂಧ ವಿರುವದು ಎಲ್ಲರಿಗೂ ಗೊತ್ತಿರುವ ಮಾತು. ಟ್ರೇನಿಂಗಸ್ಕೂಲಿನಲ್ಲಿ ಹೊಸ ಪದ್ಧತಿಗಳ ಪರಿಚಯುವನ್ನು ಭಾವೀಶಿಕ್ಷಕರಿಗೆ ಮಾಡಿಕೊಟ್ಟು ಅವುಗಳನ್ನನುಸರಿಸಿ ಶಿಕ್ಷಣವನ್ನು ಸಾಗಿಸುವ ರೂಢಿಯನ್ನೂ ಮಾಡಿಕೊಡುವದಿರುವದು. ಅಂದ ಬಳಿಕ ಪ್ರಾ. ಸ್ಕೂಲಿನಲ್ಲಿ ಶಿಕ್ಷಕರು ನಮ್ಮ ವಿದ್ಯಾರ್ಥಿಗಳಿಗೆ ಮಾದರಿಯಾಗಿಯೂ ಮಾರ್ಗದರ್ಶಿಗಳಾಗಿಯೂ ಇರುವರು. ಇವರು ತಮ್ಮ ತಮ್ಮ ಇಯತ್ತೆಗಳ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಮಾಡಿಟ್ಟುಕೊಂಡ ಉಪಕರಣ ಮೊದಲಾದವುಗಳನ್ನು ಟ್ರೇನಿಂಗ ಸ್ಕೂಲಿನ ವಿದ್ಯಾರ್ಥಿಗಳು ವಿಚಾರಪೂರ್ವಕವಾಗಿ ವಿಮರ್ಶಿಸುವದಲ್ಲದೆ, ಮುಂದೆ ಹಳ್ಳಿಯಶಾಲೆಗಳಲ್ಲಿ ತಮ್ಮ ಉಪಯೋಗಕ್ಕಾಗಿ ಸಿದ್ಧಪಡಿಸಿಟ್ಟುಕೊಳ್ಳುವದೂ ಆವಶ್ಯಕವಾಗಿದೆ. ಈ ಮೂಲಕ ವಿದ್ಯಾರ್ಥಿಗಳ ಪಾಲಕರಿಗೆ ತಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಶಿಕ್ಷಕರು ಯಾವಬಗೆಯಾಗಿ ಸಹಾಯಕರಾಗಿರುವರೆಂಬದನ್ನು ತೋರಿಸುವದೂ ಮಹತ್ವವಾದದ್ದಾಗಿತ್ತು. ಆದ್ದರಿಂದ ಈ ಕಾರ್ಯಕ್ರಮದಲ್ಲಿ ಟ್ರೇನಿಂಗ ಸ್ಕೂಲಿನಲ್ಲಿ ಶಿಕ್ಷಕರ ವೃತ್ತಿಗೆ ಸಿದ್ಧರಾಗುತ್ತಿದ್ದ ವಿದ್ಯಾರ್ಥಿಗಳ ಕೆಲಸಗಳೂ ಸಮಾವೇಶಮಾಡಲ್ಪಟ್ಟಿದ್ದವು.

ಆ ದಿನ ಮಧ್ಯಾಹ್ನ ೩ ಗಂಟೆಗೆ ಸರಿಯಾಗಿ ಟ್ರೇನಿಂಗ ಸ್ಕೂಲಿನ ಹಾಗು ಪ್ರಾ. ಸ್ಕೂಲಿನ ವಿದ್ಯಾರ್ಥಿಗಳ ಬರೆಹ, ಡ್ರಾಯಿಂಗ, ಕೈಕೆಲಸ ಉಪಕರಣಗಳು ಮುಂತಾದವುಗಳ ಒಂದು ಪ್ರದರ್ಶನವನ್ನು ಏರ್ಪಡಿಸಿ ಪಾಲಕರಿಗೆಲ್ಲ ೪. ೮ ವರೆಗೆ ಅವನ್ನು ನಿರೀಕ್ಷಿಸಲು ಸಂಧಿಯೊನ್ನೊದಗಿಸಿಕೊಟ್ಟದ್ದಾಯಿತು. ಈ ಊರ ಪ್ರಮುಖ ಜನರೂ, ಶಿಕ್ಷಕರೂ, ಶಿಕ್ಷಣಾಭಿಮಾನಿಗಳೂ ಇವನ್ನು ನೋಡಿಕೊಂಡರು. ಜಿಲ್ಹೆಯ ಕಲೆಕ್ಟರರಾದ ಮೆ. **ಜಿ. ಎಫ್. ಎಸ್. ಕಾಲಿನ್ಸ** ಎಮ್. ಎ., ಐ. ಸಿ. ಎಸ್., ಸಿ. ಆಯ್. ಈ., ಓ. ಬಿ. ಈ. ದೊರೆಗಳು ಆ ದಿನದ ಸಮಾ

ರಂಭದ ಅಧ್ಯಕ್ಷಸ್ಥಾನವನ್ನು ವಹಿಸಲು ದಯವಿಟ್ಟು ಒಪ್ಪಿಕೊಂಡಿದ್ದರು. ಇವರು ಮಿಸೆಸ್ ಕಾಲಿನ್ಸರೊಡನೆ ಸರಿಯಾಗಿ ೪। ಗೆ ದಯಮಾಡಿಸಿದರು. ಟ್ರೇನಿಂಗ ಸ್ಕೂಲಿನ ಒಂದು ಸ್ಕೌಟ್ ಪಥಕವು ಅವರಿಗೆ ಸ್ವಾಗತವನ್ನಿತ್ತಿತು. ಇದೇ ಸಮಯಕ್ಕೆ ಊರ ಪ್ರಮುಖರೂ, ವಿದ್ಯಾಧಿಕಾರಿಗಳೂ ಆಗಮಿಸಿದ್ದರು. ಕೂಡಲೇ ಪ್ರಾ. ಸ್ಕೂಲಿನ ಒಂದು ಸ್ಕೌಟ ಪಥಕವು ಅವರಿಗೆ ಸ್ಕೌಟ ಸ್ವಾಗತವನ್ನು ಕೊಟ್ಟಿತು. ಆ ಬಳಿಕ ಬಾಲಕರ ಆಟ, ಸಾಭಿನಯ ಗೀತೆ, ೪-೫ ಈ ಇಯತ್ತೆಗಳ ಸಂಗೀತ ಡ್ರಿಲ್, ಸ್ಕೌಟ ಚಟುವಟಿಕೆಗಳು ಮುಂತಾದವು ನಡೆದವು. ಸುಮಾರು ೪॥ ಗೆ ಮಾ। ಕಲೆಕ್ಟರ ಸಾಹೇಬರೂ ಉಳಿದವರೂ ಟ್ರೇನಿಂಗ ಸ್ಕೂಲಿನ ವಿದ್ಯಾರ್ಥಿಗಳ ಕೈಕೆಲಸಗಳನ್ನು ನೋಡಲಾರಂಭಿಸಿದರು. ಸಾಲೆಯಲ್ಲಿ ಕಲಿಸುವ ಬಹುತರ ವಿಷಯಗಳಲ್ಲಿ ಉಪಯೋಗವಾಗುವ ಬಗೆಬಗೆಯ ಚಿತ್ರ, ನಕಾಶ, ಪಟ ಮುಂತಾದವುಗಳನ್ನು ಮನಮುಟ್ಟಿ ನೋಡಿ ಎಲ್ಲರೂ ಆನಂದಪಟ್ಟರು. ಇತಿಹಾಸ ಭೂಗೋಲ ವಿಷಯಗಳನ್ನು ಪುಸ್ತಕಗಳ ನೆರವಿಲ್ಲದೆ ಪಟ-ಚಿತ್ರ ಮುಂತಾದವುಗಳ ಸಹಾಯದಿಂದ ಹುಡುಗರೇ ಕಲಿಯಬಹುದಾದ ಉಪಕರಣಗಳು ಎಲ್ಲರನ್ನು ಕೌತುಕಗೊಳಿಸಿದವು. ೨ನೆಯ ಹಾಗು ೩ನೆಯ ವರ್ಷದ ವಿದ್ಯಾರ್ಥಿಗಳು ತಯಾರಿಸಿದ ಭೂಗೋಲದ ಬೇರೆ ಬೇರೆ ಪ್ರದೇಶಗಳ ಜನರ ಜೀವನವನ್ನು ಉದಹರಿಸುವ ಮಾಡೆಲಗಳು ಎಲ್ಲರನ್ನೂ ಆಕರ್ಷಿಸಿದವು. ಈ ವರುಷಗಳ ವರ್ಗದ ವಿದ್ಯಾರ್ಥಿಗಳು ಮಾಡಿದ ಬಾಯಂಡಿಂಗ ಹಾಗು ನೇಗೆಯ ಕೆಲಸಗಳು ಚೆನ್ನಾಗಿದ್ದವು. ಬಳಿಕ ಪ್ರಾ. ಸ್ಕೂಲಿನ ಬಾಲಕವರ್ಗದಿಂದಾರಂಭಿಸಿ ೭ನೇ ಇಯತ್ತೆ ವರೆಗಿನ ಎಲ್ಲ ಕ್ಲಾಸುಗಳ ಕೆಲಸಗಳನ್ನು ನೋಡಿಕೊಂಡು ಮೇಲಿನ ಇಯತ್ತೆಯ ವಿದ್ಯಾರ್ಥಿಗಳಿಗೆ ತೀರ ಸುಲಭವಾದ ಉಪಕರಣಗಳಿಂದಲೂ ಯಂತ್ರಸಾಮುಗ್ರಿಯಿಂದಲೂ ಶಾಸ್ತ್ರೀಯ ವಿಷಯವನ್ನು ಸಾಗಿಸುವ ಕ್ರಮವನ್ನು ಅವಲೋಕಿಸಿ, ಶಾಲೆಯತೋಟದಲ್ಲಿ ವಿದ್ಯಾರ್ಥಿಗಳು ಬೆಳಿಸಿದ ವನಸ್ಪತಿಗಳನ್ನೂ ಮಡಿಗಳನ್ನೂ ನಿರೀಕ್ಷಿಸಿ, ಅಲ್ಲಿಯೇ ಪ್ರಾ. ಸ್ಕೂ. ಶಿಕ್ಷಕರು ಟ್ರೇನಿಂಗ ಸ್ಕೂಲಿನ ವಿದ್ಯಾರ್ಥಿಗಳ ಸಹಾಯದಿಂದ ಮಾಡಿದ ಒಂದು ಮಾದರಿಯ ಹಳ್ಳಿ, ಹಿಂದುಸ್ತಾನದ ದೊಡ್ಡ ಮಾಡೆಲ್ಲು (೩೩'× ೨೦'), ಚಿಕ್ಕಮಕ್ಕಳಿಗೆ ಭೂಗೋಲದ ವ್ಯಾಖ್ಯೆಗಳನ್ನು ಪರಿಚಯಮಾಡಿಕೊಡಬಹುದಾದ ಯುರೋಪಖಂಡದ ಆಗ್ನೇಯಭಾಗದ ಭೂಪಟದ ಮಾಡೆಲ್, ಮಾರ್ಮುಗೋವೆಯ ಬಂದರದ ಮಾಡೆಲ್ ಇವುಗಳನ್ನು ದರ್ಶಿಸಿ ಎಲ್ಲರೂ ಆನಂದಪಟ್ಟರು. ಇಷ್ಟರಲ್ಲಿ ೫। ಗಂಟೆಯಾಯಿತು.

ಟ್ರೇನಿಂಗ ಸ್ಕೂಲಿನ ಜನರಲ್ ಹಾಲ್‌ದಲ್ಲಿ ಪಾಲಕರೂ ಆಮಂತ್ರಿತರಾದ ಇತರ ಶಿಕ್ಷಣಾಭಿಮಾನಿಗಳೂ ನೆರೆದು ಅಧ್ಯಕ್ಷರ ಬರವನ್ನು ನಿರೀಕ್ಷಿಸುತ್ತಿದ್ದರು. ಎಲ್ಲರೂ ಸ್ಥಾನಪನ್ನರಾದೊಡನೆಯೇ ಬಾಲಕರು ಸ್ವಾಗತಪದವನ್ನೂ ಈಶಸ್ತವನವನ್ನೂ ಸುಸ್ವರದಿಂದ ಹಾಡಿದರು. ಕೂಡಲೇ ಮಿ. ಮುಗದಾಳ ಬಿ. ಎ., ಹೆ. ಮಾ. ಟ್ರೇನಿಂಗ ಸ್ಕೂಲ ಧಾರವಾಡ ಇವರು ಪಾಲಕರನ್ನು ಕುರಿತು ತಯಾರಿಸಿದ ರಿಪೋರ್ಟನ್ನು ಕನ್ನಡದಲ್ಲಿ ಓದಿದರು. ಅದನ್ನು ಈ ಮೊದಲೇ ನಮ್ಮ ವಾಚಕರಿಗಾಗಿ ಪ್ರಸಿದ್ಧಪಡಿಸಿರುವೆವು. ಬಳಿಕ ಬಾಲಕರ ವರ್ಗದ ಇಬ್ಬರು ವಿದ್ಯಾರ್ಥಿಗಳು ಸಣ್ಣದೊಂದು ನಗೆಗೂಡಿದ ಸಂಭಾಷಣೆಯನ್ನು ಸಾಭಿನಯವಾಗಿ ಮಾಡಿದರು. ಬಳಿಕ ನಾಲ್ಕನೆಯ ಇಯತ್ತೆಯ ವಿದ್ಯಾರ್ಥಿಗಳು ಆರೋಗ್ಯವಿಷಯಕವಾದ ಒಂದು ಸಂಭಾಷಣೆಯನ್ನು ಅಭಿನಯಿಸಿದರು. ಮುಂದೆ ೧ನೆಯ ಇಯತ್ತೆಯ ಕೆಲವು ಬಾಲಕರು ತಮ್ಮ ಪುಸ್ತಕದಲ್ಲಿ ಬಂದ ರಾಕ್ಷಸನೂ ಮಣಿಗಾರನೂ ಎಂಬ ಪಾಠವನ್ನು ಅಭಿನಯಿಸಿ ತೋರಿಸಿದರು. ಇದಾದಮೇಲೆ ೩ನೆಯ ಇಯತ್ತೆಯ ವಿದ್ಯಾರ್ಥಿಗಳು ಕರ್ನಾಟಕದ ಬೇರೆ ಬೇರೆ ಭಾಗಗಳ ಮಹತ್ವವನ್ನು ಕುರಿತು ಸಂಭಾಷಣೆಯನ್ನು ಮಾಡಿದರು. ಕೊನೆಗೆ ಏಳನೆ ಇಯತ್ತೆಯ ಒಬ್ಬ ವಿದ್ಯಾರ್ಥಿಯು ಕುಮಾರವ್ಯಾಸನ ಮಹಾಭಾರತದೊಳಗಿನ ಕೃಷ್ಣಕರ್ಣರ ರಸಭರಿತವಾದ ಸಂವಾದವನ್ನು ಬಹು ಸರಸವಾಗಿ ಅಂದು ತೋರಿಸಿದನು.

ಮುಂದೆ ಅಧ್ಯಕ್ಷರಾದ ಮೆ॥ ಕಲೆಕ್ಟರ ದೊರೆಗಳು ಉತ್ತೇಜನಪರವಾದ ನಾಲ್ಕು ಮಾತುಗಳನ್ನಾಡಿದರು. ಇವರು ಮಾಡಿದ ಭಾಷಣದ ಸಾರಾಂಶವನ್ನು ಇಲ್ಲಿ ಕೊಟ್ಟಿರುವೆವು.

ಮಿ. ಮುಗದಾಳರೇ, ಸಭ್ಯಗೃಹಸ್ಥರೇ, ಗೃಹಿಣಿಯರೇ,

ಈ ದಿವಸ ನಮ್ಮನ್ನು ಸ್ವಾಗತಪೂರ್ವಕವಾಗಿ ಇಲ್ಲಿಗೆ ಬರಮಾಡಿಕೊಂಡದ್ದಕ್ಕಾಗಿ ನಿಮ್ಮೆಲ್ಲರಿಗೆ ನಾವು ಋಣಿಯಾಗಿರುವೆವು. ಈ ಸಂಸ್ಥೆಗಳನ್ನು ಸಂದರ್ಶಿಸಿ ಇಲ್ಲಿ ನಡೆಯುವ ಕೆಲಸಗಳನ್ನು ನೋಡುವ ಪ್ರಸಂಗವನ್ನು ಒದಗಿಸಿಕೊಟ್ಟದ್ದಕ್ಕಾಗಿ ಮಿ. ಮುಗದಾಳರಿಗೆ ನಾನು ವಿಶೇಷವಾಗಿ ಆಭಾರಿಯಾಗಿರುವೆನು. ಟ್ರೇನಿಂಗ ಸಂಸ್ಥೆಗಳ ಬಗ್ಗೆ ನಾನು ಈ ಮೊದಲೇ ಎಷ್ಟೋ ಸಂಗತಿಗಳನ್ನು ಕೇಳಿದವನಾಗಿದ್ದೆನು. ಆದರೂ ಈ ವರೆಗೆ ಟ್ರೇನಿಂಗ ಸಂಸ್ಥೆಗೆ ನಾನು ಭೆಟ್ಟಿಕೊಟ್ಟಿರಲಿಲ್ಲವೆಂದ

ನಾನು ಒಪ್ಪಿಕೊಳ್ಳುತ್ತೇನೆ. ಪ್ರಾಕ್ಟಿಸಿಂಗಸ್ಕೂಲವನ್ನಂತೂ ನಾನು ಇಂದಿನ ವರೆಗೆ ನೋಡಿದ್ದೇಇಲ್ಲ.

ಈ ಸಂಸ್ಥೆಗಳ ಇತಿಹಾಸದಲ್ಲಿ ಹೊಸಕಾಲವು ಆರಂಭವಾಗಿರುವದು. ಇಂಥ ಸಮಯದಲ್ಲಿ ಇವುಗಳನ್ನು ನೋಡಲು ನನಗೆ ಅನುಕೂಲುಂಟಾದದ್ದು ಸುದೈವವೆಂದು ನಾನು ಎಣಿಸುತ್ತೇನೆ. ಈ ಟ್ರೇನಿಂಗ ಸಂಸ್ಥೆಯಲ್ಲಿ ೨ನೆಯ ಹಾಗೂ ೩ನೆಯ ವರ್ಷಗಳ ವರ್ಗಗಳನ್ನು ಮತ್ತೆ ಆರಂಭಿಸಬೇಕೆಂಬದರ ಪ್ರಸ್ತಾಪವು ನಡೆದಾಗ ನಾನು ಮುಂಬಯಿಸರಕಾರದ ಮುಖ್ಯವಾದ ಒಂದು ಅಧಿಕಾರಸ್ಥಳದಲ್ಲಿದ್ದೆನು. ಆದ್ದರಿಂದ ಆ ಕಾರ್ಯಕಲಾಪಗಳು ರೂಪುಗೊಂಡು ಈ ಸಂಸ್ಥೆಯು ಪೂರ್ಣಾವಸ್ಥೆಯನ್ನು ಹೊಂದಿದ್ದನ್ನು ಪ್ರತ್ಯಕ್ಷವಾಗಿ ನೋಡುವ ಪ್ರಸಂಗವು ನನಗೆ ಬಂದದ್ದಕ್ಕಾಗಿ ನಾನು ತುಂಬ ಸಂತೋಷಪಡುತ್ತೇನೆ. ನಾಮದಾರ ಶಿಕ್ಷಣ ಮಂತ್ರಿಗಳು ಈ ಸಂಸ್ಥೆಗೆ ಬಂದು ಈ ವರ್ಗಗಳು ಆರಂಭವಾದದ್ದನ್ನು ಪ್ರಕಟಿಸಿದ ಸಂದರ್ಭದಲ್ಲಿ ಇಲ್ಲಿಯ ಹೆಡ್‌ಮಾಸ್ತರರು ಈ ಬದಲಾವಣೆಯನ್ನು ಬಹು ಮಾರ್ಮಿಕವಾಗಿ ವರ್ಣಿಸಿ ಹೇಳಿರುವರು. ಮುಂಬಯಿ ಕರ್ನಾಟಕದಲ್ಲಿ ಅದರಲ್ಲಿಯೂ ಮುಖ್ಯವಾಗಿ ಧಾರವಾಡ ಜಿಲ್ಹೆಯಲ್ಲಿ ಹೊಸ ಚೈತನ್ಯವು ತಲೆದೋರಿ, ಜನತೆಯಲ್ಲಿ ಉದಾರವಾದ ವಿಚಾರಗಳೂ ಉದಾತ್ತವಾದ ಭಾವನೆಗಳೂ ಜಾಗೃತವಾಗಬೇಕಾಗಿರುವ ಸಮಯದಲ್ಲಿ ಈ ಬದಲಾವಣೆಯು ಉಂಟಾಗಿರುವದೆಂದು ನಾನು ನಂಬಿದ್ದೇನೆ. ಜೀವನದ ಸಮಸ್ಯೆಯನ್ನು ಸಹೃದಯತೆಯಿಂದಲೂ ವಿಶಾಲ ಮನಸ್ಸಿನಿಂದಲೂ ಉದಾತ್ತವಾದ ಧ್ಯೇಯದಿಂದಲೂ ನೋಡುವಂಥ ಶಿಕ್ಷಕರು ಇಲ್ಲಿಂದ ನಮ್ಮ ಹಳ್ಳಿಗಳಿಗೆ ಹೋಗಲಾರಂಭಿಸಿದರೆ, ಈ ಕಾಲದಲ್ಲಿ ಅಲ್ಲಲ್ಲಿ ಕಾಣುತ್ತಿರುವ ಕೆಂದುಕುಂದುಗಳಿಂದೊಡಗೂಡಿದ ಮಾಂದ್ಯವನ್ನು ತಡೆದು ಜನರನ್ನು ಪ್ರಗತಿಮಾರ್ಗದಲ್ಲಿ ಮುಂದುವರಿಸಲು ತುಂಬ ಸಹಾಯವಾಗುವದು.

ಈ ಸಂಸ್ಥೆಗಳ ಪ್ರಗತಿಯು ಸರಿಯಾದ ದಾರಿಯಲ್ಲಿ ಸಾಗಲು ನಾನು ಮಾರ್ಗದರ್ಶಿಯಾಗಬೇಕೆಂದು ಮಿ. ಮುಗದಾಳರು ಸೂಚಿಸಿರುವರು. ಆದರೆ ಈ ಸಂಸ್ಥೆಗಳಬಗ್ಗೆ ನನಗೆ ತೀರ ಕಡಿಮೆ ಬಗೆಯ ಪರಿಚಯವಿರುವದೆಂದು ನಾನು ಈ ಮೊದಲೇ ಒಪ್ಪಿಕೊಂಡಿರುವೆನಷ್ಟೇ. ಆದರೂ, ಈಗ ನಾವು ಇಲ್ಲಿಗೆ ಬಂದದ್ದು ಆರಂಭದ ಒಂದು ಭೆಟ್ಟಿಯು; ಮುಂದೆ ಅನೇಕಸಾರೆ ಇಲ್ಲಿಗೆಬಂದು ಈ ಸಂಸ್ಥೆಗಳ ಪ್ರತಿನಿತ್ಯದ ಕೆಲಸವನ್ನು ಸಂದರ್ಶಿಸಿಕೊಂಡು ಹೋಗಬೇಕು ಎಂದು ಅವರು

ಬಿನ್ನವಿಸಿರುವರಷ್ಟೇ. ಅವರ ಬೇಡಿಕೆಯಂತೆ ಮುಂದೆ ಈ ಸಂಸ್ಥೆಗಳಿಗೆ ಭೆ ಕೊಡಲು ನಾನು ಉತ್ಕಂಠಿತನಾಗಿರುವೆನು. ಅವುಗಳಿಗೆ ನೆರವಾಗಲು ನಾ ಯಾವಾಗಲೂ ಸಿದ್ಧನಿರುವೆನೆಂದು ನಾನು ಸಾರಿಹೇಳಬಲ್ಲೆನು.

ಮಿ. ಮುಗದಾಳರು ಈಗ ಓದಿದ ರಿಪೋರ್ಟನಲ್ಲಿ ಪ್ರಾಕ್ಟಿಸಿಂಗಸ್ಕೂ ಬಗ್ಗೆ ಕಾಣಿಸಿದ ಸಂಗತಿಗಳಿಂದ ಆ ಸಂಸ್ಥೆಯಬಗ್ಗೆ ನನಗೆ ಸದಭಿಪ್ರಾಯವಾಗಿ ವದು. ಎರಡು ಸಂಗತಿಗಳು ನನ್ನ ಲಕ್ಷ್ಯವನ್ನು ವಿಶೇಷವಾಗಿ ಆಕರ್ಷಿಸಿರುವ ಮೊದಲನೆಯದು ಯಾವದೆಂದರೆ, ಈ ಸಾಲೆಯಲ್ಲಿ ಕಲಿಯುವವರು ಹೆಚ್ಚಿನ ಹಣವನ್ನು ಕೊಡಬೇಕಾಗಿದ್ದರೂ ಸಾಲೆಯಲ್ಲಿ ಸೇರುವಬಗ್ಗೆ ವಿದ್ಯಾರ್ಥಿಗ ಒಳ್ಳೇ ಮೇಲಾಟವಿರುತ್ತದೆ. ಎರಡನೆಯ ಸಂಗತಿಯೆಂದರೆ ಇಲ್ಲಿಯ ಬಾಲಕ ವರ್ಗದಲ್ಲಿ ಚಿಕ್ಕಮಕ್ಕಳು ಒಂದು ವರುಷಕ್ಕಿಂತ ಹೆಚ್ಚು ಅವಧಿಯವರೆಗೆ ಉಳಿಯ ವದೇ ಇಲ್ಲ. ನಾನಂತೂ ಹಳ್ಳಿಗಳಲ್ಲಿರುವ ಸಾಲೆಗಳಿಗೆ ಹೋಗಿ ಹೋಗಿ ಏನಿಲ್ಲ ದರೂ ಅರ್ಧದಷ್ಟು ಹುಡುಗರು ಬಾಲಕರ ವರ್ಗದಲ್ಲಿಯೂ ಮಿಕ್ಕ ಅರ್ಧದಷ ಹುಡುಗರು ಒಂದನೆಯ ಇಯತ್ತೆಯಲ್ಲಿಯೂ ಇರುವದನ್ನು ನೋಡಿನೋಡಿ ವ ಗುಂದಿರುವೆನು. ಈ ಪ್ರಾ. ಸ್ಕೂಲಿನಲ್ಲಿ ಬಾಲಕರ ವರ್ಗದಲ್ಲಿ ವರ್ಷಮೀರಿ ಯಾರ ಉಳಿಯುವದಿಲ್ಲೆಂಬದನ್ನು ಕೇಳಿ ನನಗೆ ಸಂತೋಷವಾಗಿದೆ.

ಈ ದಿವಸ ನಾನು ಉಪದೇಶಪರವಾದ ಮಾತುಗಳನ್ನು ಆಡಲಿಳಿಸು ದಿಲ್ಲೆಂದು ಈ ಮೊದಲು ಹೇಳಿದೆನು. ಆದರೂ ಟ್ರೇನಿಂಗ ಪಡೆದ ಶಿಕ್ಷಕ ಹಳ್ಳಿಗಳಲ್ಲಿ ಪಡೆಯಬಹುದಾದ ವರ್ಚಸ್ಸನ್ನು ಕುರಿತು ಒಂದೆರಡು ಮಾತ ಗಳನ್ನು ಹೇಳಬೇಕೆಂದು ನನಗೆ ತೋರುತ್ತದೆ. ನಮ್ಮ ಹಳ್ಳಿಗಳಲ್ಲಿ ಇರು ಜನರಲ್ಲಿ ಪ್ರವಾಸಗೈದು ಪ್ರಪಂಚಪರಿಚಯವನ್ನು ಮಾಡಿಕೊಂಡವರೆಂದರೆ ಇವರ ಇರುವರು. ಆದ್ದರಿಂದ ಅವರಿಗೆ ಹಳ್ಳಿಯಲ್ಲಿ ಪ್ರಬಲವಾದ ವರ್ಚಸ್ಸವು ಇರುತ್ತದೆ ಈ ಮೂಲಕ ಹಳ್ಳಿಯ ಪುನರುದ್ಧಾರದ ಕಾರ್ಯದಲ್ಲಿ ಇವರೇ ಮುಂದಾಳುಗಳ ಗಿರಬೇಕಾಗುತ್ತದೆ. ಈ ಟ್ರೇನಿಂಗ ಸಂಸ್ಥೆಯ ವಿದ್ಯಾರ್ಥಿಗಳಿಗೆ ನಾನು ಹೇ ಲಿಚ್ಛಿಸುವದೇನಂದರೆ:— ಹಳ್ಳಿಯ ಸುಧಾರಣೆಯು ಮುಂದುವರಿಯಲು ನೀ ವಿಶೇಷ ಸಹಾಯವನ್ನು ಮಾಡಲಾಪಿರಿ. ಈ ಸುಧಾರಣೆಯು ತೀವ್ರವಾ ಕೈಗೂಡಬೇಕಾದರೆ ಅದಕ್ಕೆ ಆವಶ್ಯಕವಾದ ಬಗೆಬಗೆಯ ಜ್ಞಾನವೂ ಭಾವನೆಗಳ ನಿಮ್ಮಲ್ಲಿ ಮೂಡಿ ಬಲಿತಿರಬೇಕಾಗುವವು. ಇವುಗಳನ್ನು ಪಡೆಯಲು ನಿಮ

ಗೊಡಗುವ ಪ್ರಸಂಗಗಳನ್ನು ನೀವು ಹುಸಿ ಹೋಗಗೊಡಬಾರದು. ಕೆಲವು ದಿವಸಗಳಿಂದ ಈ ವಿಷಯದಬಗ್ಗೆ ನನಗೆ ತೋರಿದ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ನಿಮ್ಮ ಮುಂದೆ ಇಡಬೇಕೆಂದು ನನಗೆ ಅನಿಸುತ್ತದೆ. ಈ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಕೆಲಸದ ಭಾರದ ಮೂಲಕ ವೇಳೆಯ ಬಿಡುವು ದೊರೆಯುವದು ಬಹು ಕಠಿಣವಾಗುತ್ತದೆ. ಹೀಗಿದ್ದರೂ, ತುಸು ವೇಳೆಯನ್ನು ಒದಗಿಸಿಕೊಟ್ಟು ಹಳ್ಳಿಯ ಸುಧಾರಣೆಯನ್ನು ಕೈಕೊಳ್ಳಲು ಬೇಕಾಗುವ ಜ್ಞಾನವನ್ನು ದೊರಕಿಸಿಕೊಳ್ಳಲಿಕ್ಕೆ ಈ ಸಂಸ್ಥೆಯು ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಟ್ಟರೆ ಹಾಗು ಆ ವಿಷಯದಲ್ಲಿ ತಜ್ಞರಾದ ಗೌರವ್ಯೋಪನ್ಯಾಸಕರಿಂದ ವ್ಯಾಖ್ಯಾನಗಳನ್ನು ಕೊಡಿಸುವ ವ್ಯವಸ್ಥೆ ಮಾಡಿದರೆ ತೀವ್ರದಲ್ಲಿಯೇ ಸುಪರಿಣಾಮಗಳಾಗುವವೆಂಬದರಲ್ಲಿ ಸಂದೇಹವಿಲ್ಲ. ಈ ದಿವಸ ನನಗೆ ಮತ್ತೊಂದು ವಿಚಾರವು ಹೊಳೆದಿರುವದು. ಅದು ಯಾವದೆಂದರೆ ಈ ಟ್ರೇನಿಂಗ ಸ್ಕೂಲಿನ ವಿದ್ಯಾರ್ಥಿಗಳ ಮುಖಾಂತರವಾಗಿ ಹಳ್ಳಿಗಳಲ್ಲಿ ಸ್ಕೌಟಿಂಗ ಚಟುವಟಿಕೆಗಳನ್ನು ಹರಡಬಹುದಾಗಿದೆ. ಈ ಜಿಲ್ಹೆಯಲ್ಲಿ ಸ್ಕೌಟುಗಳ ಸಂಖ್ಯೆಯು ದೊಡ್ಡದಿರುವದೆಂದು ನನಗೆ ಗೊತ್ತಿರುವದು. ಆದರೆ ಹಳ್ಳಿಯ ಸ್ಕೌಟ ಪಥಕಗಳು ಮಾತ್ರ ತೀರ ಸ್ವಲ್ಪವಾಗಿರುವದೆಂದು ನನಗೆ ತೋರುತ್ತದೆ. ನಮ್ಮ ಮುಂದಿನ ತಲೆಯ ಜನರ ಪ್ರಗತಿಯು ಸಾಧ್ಯವಾಗಬೇಕಾದರೆ ಹಳ್ಳಿಗಳಲ್ಲಿ ಸುಧಾರಣೆಯಾಗುವದೂ ಹಳ್ಳಿಯ ಸ್ಕೌಟ ಪಥಕಗಳು ಹೆಚ್ಚಾಗಿ ಕಾರ್ಯಪರರಾಗುವದೂ ಆವಶ್ಯಕವೆಂದು ನನಗೆ ತೋರುತ್ತದೆ.

ಕೊನೆಗೆ, ಹೆಡ್ ಮಾಸ್ತರರಾದ ಮಿ. ಮುಗದಾಳರೂ ಅವರು ಉಪಶಿಕ್ಷಕರೂ ಇವೆರಡೂ ಸಂಸ್ಥೆಗಳಲ್ಲಿ ಹೊಸ ಹೊಸ ಚಟುವಟಿಕೆಗಳನ್ನಾರಂಭಿಸಿ ಅವುಗಳಲ್ಲಿ ಹೊಸ ಚೈತನ್ಯವು ಮೂಡುವಂತೆ ಮಾಡಿದ್ದನ್ನು ಕಣ್ಣಾರೆಕಂಡು ನನಗೆ ತುಂಬ ಸಂತೋಷವಾಯಿತೆಂದೂ ಈಬಗ್ಗೆ ನಾನು ಅವರನ್ನು ಅಭಿನಂದಿಸುವೆನೆಂದೂ ನಾನು ಹೇಳದಿರಲಾರೆನು. ಅವರ ಮುಂದಿನ ಕಾರ್ಯಗಳಲ್ಲಿ ಅವರಿಗೆ ಸಂಪೂರ್ಣವಾಗಿ ಯಶಸ್ಸು ದೊರೆಯಲೆಂದು ನಾನು ಹಾರೈಸುತ್ತೇನೆ. ಈ ಕೆಲಸದಲ್ಲಿ ಇವರನ್ನೆಲ್ಲ ಹುರಿಗೊಳಿಸಿ ಇವರಿಗೆ ಯೋಗ್ಯವಾದ ಮಾರ್ಗವನ್ನು ತೋರಿಸಿ ಕೊಡುತ್ತಿರುವದಕ್ಕಾಗಿ ಈ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಮಿ. ಸಯ್ಯದ ನುರುಲ್ಲಾ ಇವರನ್ನು ನಾನು ಅಭಿನಂದಿಸುತ್ತೇನೆ. ಈ ದಿವಸ ನಮ್ಮನ್ನು

ಆಮಂತ್ರಿಸಿ ಇಲ್ಲಿಗೆ ಬರಮಾಡಿಕೊಂಡದ್ದಕ್ಕಾಗಿ ನಾನು ಮತ್ತೊಮ್ಮೆ ಉಪಕಾ[ರ]ವನ್ನು ಸ್ಮರಿಸುತ್ತೇನೆ.

ಆ ಬಳಿಕ ಸಭೆಗೆ ಬಂದಿದ್ದ ಪಾಲಕರಪರವಾಗಿ ಮಿ. ಎ. ಎಫ್. ಆಯ್[...] ಪಠಾಣ ಪ್ರೆಸಿಡೆಂಟ, ಧಾರವಾಡ ಮ್ಯುನಿಸಿಪಾಲಿಟಿ ಇವರು ಈ ಸಂಸ್ಥೆಗಳಲ್ಲಿ ನ[ಡೆ]ಯುವ ಕೆಲಸವನ್ನು ನೋಡಿ ಪಾಲಕರೆಲ್ಲರು ಪಟ್ಟ ಸಮಾಧಾನವನ್ನೂ [...] ಮುಗದಾಳ ಇವರು ಅವರನ್ನುದ್ದೇಶಿಸಿ ಸಹಕಾರಿತೆಯನ್ನು ಕೋರಿದ್ದಕ್ಕಾಗಿ ಅವ[...]ಗಾದ ಸಂತೋಷವನ್ನೂ ವ್ಯಕ್ತಪಡಿಸಿದರು.

ಪ್ರಾ. ಸ್ಕೂಲಿನ ಹೆಡ್‌ಮಾಸ್ತರರಾದ ಮಿ. ನಾ. ವೆ. ಕುರಡಿ ಇವರು [...] ಬಳಿಕ ಸಭೆಗೆ ಬಂದ ಗೃಹಸ್ಥರನ್ನೂ ಮೆ. ಕಲೆಕ್ಟರ ಸಾಹೇಬರು, ಹಾಗು ಮಿಸೆಸ[...] ಕಾಲಿನ್ಸ, ಎಜ್ಯುಕೇಶನಲ್ ಇನಸ್ಪೆಕ್ಟರ ದೊರೆಗಳು, ಶಿಕ್ಷಣಾಧಿಕಾರಿಗಳು, ಊ[ರ] ಮುಂದಾಳುಗಳು ಮೊದಲಾದವರು ಈ ಸಂಸ್ಥೆಗಳಬಗ್ಗೆ ಅಭಿಮಾನಪೂರ್ವಕವಾ[ಗಿ] ನಮ್ಮ ಆಮಂತ್ರಣವನ್ನು ಮನ್ನಿಸಿ ಬಂದು, ಆದಿತ್ಯವಾರದ ಬಿಡುವಿನ ದಿವ[ಸ] ತಮ್ಮ ಅಮೌಲ್ಯವೇಳೆಯನ್ನು ವೆಚ್ಚಮಾಡಿದ್ದಕ್ಕಾಗಿ ಆಭಾರವನ್ನು ಮನ್ನಿಸಿದರು. ಹಾಗೂ ಮೆ. ಕಲೆಕ್ಟರ ದೊರೆಗಳು ಫಿರತಿಯ ಭರದ ದಿನಗಳಲ್ಲಿ ಕೂಡ [...] ಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಿದ್ದಕ್ಕಾಗಿ ಸಂಸ್ಥೆಗಳಪರವಾಗಿ ಕೃತಜ್ಞತೆಯನ್ನು ವ್ಯಕ್ತಗೊಳಿಸಿದರು.

ಆ ಬಳಿಕ ಅತಿಥಿಗಳಿಗೆ ಹೂಗಳನ್ನೂ ಅಧ್ಯಕ್ಷರಿಗೆ ಹೂಮಾಲೆಗಳನ್ನೂ ಅರ್ಪಿಸಿ ಗೌರವಿಸಿದ್ದಾಯಿತು. ಪ್ರಾ. ಸ್ಕೂಲಿನ ಚಿಕ್ಕ ಬಾಲಕರು ರಾಷ್ಟ್ರಗೀ[ತ]ವನ್ನು ಹಾಡಿದರು. ಮಿ. ಮುಗದಾಳರು ಹೊಸ ಚಕ್ರವರ್ತಿಗಳ ಅಭ್ಯುದಯ[...]ವನ್ನು ಕುರಿತು ಜಯಘೋಷವನ್ನು ಸೂಚಿಸಲು ಸಭಿಕರೆಲ್ಲ ಒಳ್ಳೆಯ ಹುರು[ಪಿ]ನಿಂದ ಅದನ್ನು ಪ್ರತಿಘೋಷಿಸಿದರು.

ಮಾನಸಶಾಸ್ತ್ರಸಂಬಂಧವಾದ ಕೆಲವು ವಿಚಾರಗಳು

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು).

ಲೇಖಕ:— ಶ್ರೀ. ಬಿ. ರಾ. ಕಾವಡೆ ಎಮ್. ಎ., ಬೀ. ಈಡಿ.

(೨) **ಜಿಜ್ಞಾಸೆ:**— ಅಂದರೆ ಏನಾದರೂ ಹೊಸದನ್ನು ತಿಳಿದುಕೊಳ್ಳುವ ಅಪೇಕ್ಷೆ. ಇದು ಶಿಕ್ಷಣದ ತಳಹದಿಯಾಗಿರುವದು. ಕಲಿಯುವ ಇಚ್ಛೆಯು ಮಕ್ಕಳಲ್ಲಿ ಸ್ವಾಭಾವಿಕವಾಗಿ ಉಂಟಾಗುವಂತೆ ಮಾಡಬೇಕು. ಅಂಕಿಮಗ್ಗಿಗಳು ಆಗ ಅವರಿಗೆ ಬೇಕಾಗಿರಲಿಕ್ಕಿಲ್ಲ. ಆದರೆ ನೋಡಿದ ಸಂಗತಿಗಳಲ್ಲಿ ಇದು ಏನು? ಅದು ಹ್ಯಾಗೆ ಆಗಿದೆ? ಇತ್ಯಾದಿ ಜ್ಞಾನವು ಅವರಿಗೆ ಬೇಕಾಗಿರುವದು. ಮಕ್ಕಳು ಈಬಗೆಯ ಪ್ರಶ್ನ ಪಂಕ್ತಿಗಳನ್ನು ಮಾಡಿ ಹಿರಿಯರನ್ನು ಬೇಸರಗೊಳಿಸುವರು. ಹುಡುಗರು ದೊಡ್ಡವರಾಗುತ್ತ ನಡೆದಂತೆ ಈ ಪ್ರವೃತ್ತಿಯು ಅವರಲ್ಲಿ ಕಡಿಮೆಕಡಿಮೆಯಾಗುತ್ತ ನಡೆಯುವದು. ಹಾಯಸ್ಕೂಲುಗಳಲ್ಲಿಯೂ ಕಾಲೇಜಗಳಲ್ಲಿಯೂ ಪ್ರಬುದ್ಧ ವಿದ್ಯಾರ್ಥಿಗಳು ಬರಿ ಕೇಳುತ್ತ ಕೂಡುವವರ ಹೊರತಾಗಿ ಹೆಚ್ಚಿಗೇನೂ ಮಾಡುವದಿಲ್ಲ. ಯಾಕಂದರೆ ಅವರ ಜಿಜ್ಞಾಸಾಪ್ರವೃತ್ತಿಯು ಬೆಳವಣಿಗೆಯು ಹ್ಯಾಗೆ ಆಗತಕ್ಕದ್ದಿರುವದೋ ಹಾಗೆ ಆಗಿರುವದಿಲ್ಲ. ಅವರು ಮನೆಯಲ್ಲಿ ಪ್ರಶ್ನಗಳ ಸುರಿಮಳೆಯನ್ನು ಮಾಡಿದಾಗಲೆ ಹಿರಿಯರು ಸುಮ್ಮನೆ ಕೂಡೆಂದು ಅಬ್ಬರಿಸುವರು. ಶಾಲೆಯಲ್ಲಿ ಶಿಕ್ಷಕನು "ನೀನು ಜಾಣನಿದ್ದೀ" ಎಂದು ಉಪಹಾಸಮಾಡಿ ಪ್ರಶ್ನಗಳನ್ನು ಹೆಚ್ಚಾಗಿ ಮಾಡಗೊಡುವದಿಲ್ಲ. ಪ್ರಶ್ನಗಳಿಗೆ ಮನೆಯಲ್ಲಿಯೂ ಶಾಲೆಯಲ್ಲಿಯೂ ಉತ್ತೇಜನ ದೊರೆಯದ್ದರಿಂದ ಕೆಲಕಾಲದಮೇಲೆ ಜಿಜ್ಞಾಸಾಪ್ರವೃತ್ತಿಯು ಸಮೂಲ ನಾಶವಾಗಿ ಹೋಗಿ ಅವರು ಹೇಳಿದ್ದನ್ನು ಇದ್ದಕ್ಕಿದ್ದ ಹಾಗೆ ಬರೆದಿಡುವ ದೃಷ್ಟಿಯನ್ನು ಇಟ್ಟುಕೊಳ್ಳುತ್ತಾರೆ. ಆದುದರಿಂದ ನಮ್ಮಲ್ಲಿ ಹೆಚ್ಚಿನ ಶೋಧಕರೂ ಚಿಕಿತ್ಸಕರೂ ಉಂಟಾಗುವದಿಲ್ಲ. ಶಿಕ್ಷಕರೂ ಪಾಲಕರೂ ಮಕ್ಕಳಲ್ಲಿ ಸ್ವಾಭಾವಿಕವಾಗಿರುವ ಜಿಜ್ಞಾಸಾಪ್ರವೃತ್ತಿಗೆ ಉತ್ತೇಜನಕೊಡುವದು ಅವಶ್ಯಕವು.

(೩) **ಸಂಗ್ರಹಿಸುವ ಇಚ್ಛೆ:**— ಬೇರೆ ಬೇರೆ ಆಕಾರದ ಹಾಗು ತರತರದ ಬಣ್ಣದ ವಸ್ತುಗಳನ್ನು ಕೂಡಿಡುವ ಪ್ರವೃತ್ತಿಯು ಮಕ್ಕಳಲ್ಲಿ ಸ್ವಾಭಾವಿಕವಾಗಿರು

ತ್ತದೆ. ಈ ನೈಸರ್ಗಿಕ ಬಲವಿನ ಉಪಯೋಗವನ್ನು ಶಿಕ್ಷಕನು ಶಾಲೆಯ ವಸ್ತು ಸಂಗ್ರಹಾಲಯಕ್ಕೆ ಮಾಡಿಕೊಳ್ಳಬೇಕು. ಬೇರೆ ಬೇರೆ ಬಗೆಯ ಹೂವುಗಳು, ಬೇರೆ ಬೇರೆ ಆಕಾರದ ಕಲ್ಲುಗಳು, ತರತರದ ಧಾನ್ಯಗಳು, ಹಕ್ಕಿಗಳ ರೆಕ್ಕೆಗಳು, ಬೀಜ ಗಳು ಇತ್ಯಾದಿಗಳನ್ನು ಹುಡುಗರಿಂದ ತರಿಸಿ ಶಾಲೆಯ ವಸ್ತುಸಂಗ್ರಹಾಲಯವನ್ನು ಬೆಳಿಸಿ ಶಿಕ್ಷಣಕಾರ್ಯಕ್ಕೆ ಉಪಯೋಗಮಾಡಿಕೊಳ್ಳಬೇಕು.

(೪) **ಮಮತ್ವ:—** ನನ್ನದು, ನಿನ್ನದು ಎಂಬ ಭಾವನೆಯು ಮಕ್ಕಳಲ್ಲಿ ಹುಟ್ಟುಗುಣವಾಗಿರುವದು. ಇದರ ಲಾಭವನ್ನು ಶಿಕ್ಷಕರು ತೆಗೆದುಕೊಳ್ಳಲಿಕ್ಕೆ ಬರುವ ಹಾಗೆ ಇರುತ್ತದೆ. ಯಾವದಕ್ಕೆ ನಾವು 'ನನ್ನದು' ಎಂದೆನ್ನುವೆವೋ ಅದರ ಬಗ್ಗೆ ಹೆಚ್ಚು ಕಾಳಜಿಯನ್ನು ತೆಗೆದುಕೊಳ್ಳುವೆವು. ನನ್ನ ಮನೆ, ನನ್ನ ಶಾಲೆ, ನನ್ನ ಊರು, ನನ್ನ ಪುಸ್ತಕ, ನನ್ನದೇಶ ಎಂಬ ಕಲ್ಪನೆಗಳು ಹುಡುಗರಲ್ಲಿ ಕ್ರಮ ಕ್ರಮದಿಂದ ಬೆಳೆಯುತ್ತ ಹೋಗುವವು. ಇವುಗಳ ಸಂಬಂಧವಾಗಿ ಆದರ, ಪ್ರೇಮ, ಸ್ವಾಭಿಮಾನ ಇತ್ಯಾದಿಗಳನ್ನು ಉಂಟುಮಾಡಲಿಕ್ಕೆ ಬರುವದು.

(೫) **ಸ್ತುತಿ ಪ್ರಿಯತೆ:—**'ನೆಟ್ಟಗೆ' ಎಂದೆನಿಸಿಕೊಳ್ಳುವದು ಚಿಕ್ಕವರಿಗೆ ಪ್ರೀತಿಯ ವಿಷಯವಾಗಿರುತ್ತದೆ. ಭಲೆ ಭಲೆ ಎಂದು ಹುಡುಗರಿಂದ ಬೇಕಾ ದಷ್ಟು ಕೆಲಸಮಾಡಿಸಿಕೊಳ್ಳಬಹುದು. ಇದು ಅಳತೆಮೀರಿದರೆ ಹುಡುಗರು ಗರ್ವಿಷ್ಠರಾಗುವರು. ಯೋಗ್ಯ ಪ್ರಮಾಣದಿಂದ ಸ್ತುತಿಮಾಡಿ ಅವರಿಂದ ಹೆಚ್ಚಿನ ಕೆಲಸಗಳನ್ನು ಮಾಡಿಸಿಕೊಳ್ಳಬಹುದು. ಶಿಕ್ಷಣಕಾರ್ಯದಲ್ಲಿ ಶಿಕ್ಷಕರು ಇದರ ಉಪಯೋಗವನ್ನು ಮಾಡಿಕೊಳ್ಳಬೇಕು.

(೬) **ಭೀತಿ:—** ದೊಡ್ಡವರ ಕಡೆಯಿಂದಾಗಲಿ ಸಣ್ಣವರ ಕಡೆಯಿಂದಾಗಲಿ ಈ ಪ್ರವೃತ್ತಿಯ ಬಲದಿಂದ ಬೇಕಾದಷ್ಟು ಕೆಲಸ ಮಾಡಿಸಿಕೊಳ್ಳಬಹುದು. ಮೂಲತಃ ಇದು ಸ್ವಸಂರಕ್ಷಣಕ್ಕಾಗಿ ಇರುತ್ತದೆ. ನನ್ನದೆನಿಸುವ ವಸ್ತುಗಳು ಅಂದರೆ ನನ್ನ ಶರೀರ, ಧನ, ಮಾನ, ದೇಶ, ಬಂಧುಬಳಗ ಇತ್ಯಾದಿಗಳ ನಾಶವು ಇಲ್ಲವೆ ಅಪಹಾರವು ಪ್ರತಿಯೊಬ್ಬನಿಗೆ ಅಪ್ರಿಯವಾಗಿರುತ್ತದೆ. ಸಣ್ಣ ಮಕ್ಕಳಲ್ಲಿ ಸುಳ್ಳುಭೀತಿಯನ್ನು ಮಾತ್ರ ಉಂಟುಮಾಡಬಾರದು. ಹಾಗೆ ಮಾಡಿದರೆ ಅವರು ಅಂಜುಗುಳಿಗಳು ಆಗುತ್ತಾರೆ. ಈ ಪ್ರವೃತ್ತಿಯ ಉಪಯೋಗವನ್ನು ಶಿಕ್ಷಕನು ಯೋಗ್ಯ ಪ್ರಮಾಣದಿಂದ ಮಾಡಿಕೊಳ್ಳಲಿಕ್ಕೆ ಬರುತ್ತದೆ. ಕ್ಷಣಕ್ಷಣಕ್ಕೊಮ್ಮೆ

ಸುಷ್ಮ್ನನೆ ಬೆದರಿಸಹೋದರೆ ಅದಕ್ಕೇನೂ ಬೆಲೆ ಬಾರದೆ ಹೋಗುವದು. ಈ ಮಾತನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.

(೭) **ಅನುಕರಣ:**—ಅಂದರೆ ಎರಡನೆಯವರು ಮಾಡಿದಂತೆ ಮಾಡುವದು, ಅಂದಂತೆ ಅನ್ನುವದು, ನಡೆದಂತೆ ನಡೆಯುವದು. ಈ ಗುಣವು ಮಕ್ಕಳಲ್ಲಿ ಹೆಚ್ಚಾಗಿ ಇರುವದು. ಇದು ನೆಟ್ಟಗೂ ಹೌದು, ಕೆಟ್ಟದೂ ಸರಿ. ಅನುಕರಣಮಾಡಲಿಕ್ಕೆ ಯೋಗ್ಯ ಮಾದರಿ ಬೇಕು. ಈ ಬಗೆಯು ಸ್ತುತ್ಯ ಮಾದರಿಯು ಸರ್ವ ಕಾಲವೂ ಸನ್ನದ್ಧವಿರುವದಿಲ್ಲ. ಯಾವಾಗಲು ಮನೆಯವರೂ ಶಿಕ್ಷಕರೂ ಮಕ್ಕಳ ಇದಿರಿಗೆ ಚಲೋ ಉದಾಹರಣಗಳನ್ನಿಡಬೇಕು. ಅವರ ವರ್ತನಗಳು ನಿಜವಾಗಿ ಅನುಕರಣೀಯವೇ ಆಗಿರಬೇಕು. ಹಾಗಿಲ್ಲದಿದ್ದರೆ ಅವರು ಸುತ್ತಲಿನ ಜನರ ವರ್ತನಗಳ ಇಲ್ಲವೆ ಸಂಗತಿಗಳ ಅನುಕರಣ ಮಾಡತಕ್ಕವರೇ. ಅಂದಮೇಲೆ ಅಂಥಾನುಕರಣದ ದೋಷವು ಹಿರಿಯರದೇ ಎಂದು ತಿಳಿಯಲಿಕ್ಕೆ ಬೇಕು.

(೮) **ಸ್ಪರ್ಧೆ ಇಲ್ಲವೆ ಹವ್ಯಾಸ:**—ಇದು ಚಲೋಪ್ರವೃತ್ತಿಯು. ಆಟನೋಟಗಳಲ್ಲಿಯೂ ಶಾಲಾಭ್ಯಾಸಗಳಲ್ಲಿಯೂ ಈ ಪ್ರವೃತ್ತಿಯ ಚಟವನ್ನು ಮಕ್ಕಳಿಗೆ ಹಚ್ಚಬೇಕು. ಹಾಗೆಯೇ ಇತರ ಗುಣಗಳಲ್ಲಿಯೂ ಈ ಪರಿಪಾಠವನ್ನು ನೆಲೆಗೊಳಿಸಬೇಕು. ಸ್ವಚ್ಛವಾದ ಹಾಗು ಸರಿಯಾದ ಬಟ್ಟೆಬರೆ, ಅಚ್ಚುಕಟ್ಟಾದ ವರ್ತನ, ನಿಯಮಿತವಾಗಿ ಬರುವದು, ಹೋಗುವದು, ಕೆಲಸಮಾಡುವದು ಇತ್ಯಾದಿ ವಿಷಯಗಳಲ್ಲಿ ಹವ್ಯಾಸವನ್ನು ಉಪಯೋಗಿಸಲು ಬರುತ್ತದೆ. ನಿತ್ಯದ ಅಭ್ಯಾಸದಲ್ಲಿ ಇದನ್ನುಪಯೋಗಿಸುವದು ನೆಟ್ಟಗೆ. ಆದರೆ ಇದು ದ್ವೇಷವಾಗಿ ಪರಿಣಮಿಸದಂತೆ ಶಿಕ್ಷಕರು ಜಾಗರೂಕರಾಗಿರಬೇಕು.

ಮೇಲಿನ ಪ್ರವೃತ್ತಿಗಳಲ್ಲದೆ ಇನ್ನೂ ಕೆಲವು ಪ್ರವೃತ್ತಿಗಳನ್ನು ಕಂಡುಹಿಡಿಯಬೇಕು. ಪ್ರೇಮ, ಮರ್ಯಾದೆ, ಮಹತ್ವಾಕಾಂಕ್ಷೆ, ವಾತ್ಸಲ್ಯ, ತನ್ನ ದೊಡ್ಡತನದ ಪ್ರದರ್ಶನ, ನಮ್ರತೆ ಇತ್ಯಾದಿ. ಇವೆಲ್ಲ ಬಗೆಬಗೆಯ ಪ್ರಸಂಗಗಳಲ್ಲಿ ತೋರಿಬರುವವು. ಇನ್ನೆರಡು ಮನೋವ್ಯಾಪಾರಗಳು ಅಂದರೆ ಜ್ಞಾನ, ಭಾವನೆ ಮೊದಲಾದವುಗಳು ಮೇಲಿನ ಪ್ರವೃತ್ತಿಗಳಿಗೆ ಸಾಹಾಯ್ಯಕಾರಿಗಳಾಗುತ್ತವೆ. ಜ್ಞಾನ, ಭಾವನೆ, ಪ್ರವೃತ್ತಿ ಈ ವ್ಯಾಪಾರಗಳು ಪರಸ್ಪರಾವಲಂಬಿಗಳಾಗಿರುತ್ತವೆ. ಮೇಲಿನ ಪ್ರವೃತ್ತಿಗಳನ್ನೆಲ್ಲ ಶಿಕ್ಷಣದಲ್ಲಿ ಉಪಯೋಗಿಸಿಕೊಳ್ಳುವಾಗ ಜ್ಞಾನ, ಭಾವನೆ ಮೊದಲಾದ

ಮನೋವ್ಯಾಪಾರಗಳ ಕಡೆಗೆ ದುರ್ಲಕ್ಷಿಸಕೂಡದು. ಅನೇಕ ಸಾರೆ ಪ್ರವೃತ್ತಿಗಳಿಗೆ ಚಲನಕೊಡುವಾಗ ಜ್ಞಾನದ ಆವಶ್ಯಕತೆಯು ತೋರುತ್ತದೆ. ಯಾವದೊಂದು ಕೃತ್ಯವನ್ನು ಮಾಡುವಾಗಲೂ ಅದನ್ನು ಸಾಗಿಸುವಾಗಲೂ ಜ್ಞಾನವು ಬೇಕೆಬೇಕು ಅದರ ಹಿಂದೆಯೇ ಭಾವನೆಯ ಬೆಂಬಲವು ತಾನಾಗಿ ಸುರುವಾಗುತ್ತದೆ. ಸುಖ, ದುಃಖ ಸೇರಿಕೆ, ಪ್ರೀತಿ, ತಿರಸ್ಕಾರ, ಭೀತಿ ಇವೆಲ್ಲವು ಭಾವನೆಗಳು. ಯಾವದೊಂದು ವಿ ಯದ ಸೇರಿಕೆಯಾದ ವಿನಹ ಆ ವಿಷಯದ ಜ್ಞಾನವಾಗಲರಿಯದು. ಜ್ಞಾನದ ಹೊ ತಾಗಿ ಕೃತಿಯು ಉತ್ಪನ್ನವಾಗದು. ಒಮ್ಮೊಮ್ಮೆ ಇದಕ್ಕೆ ವ್ಯುತ್ಕ್ರಮವಾಗಿ ಯಾ ದೊಂದು ವಿಷಯದ ಜ್ಞಾನವಾದ ವಿನಹ ಅದರಲ್ಲಿ ಒಲವು ಉಂಟಾಗಲಾರದು ಪ್ರೇಮ, ಭೀತಿ ಮೊದಲಾದವುಗಳ ಉಗಮವು ಸಹ ಜ್ಞಾನದ ಹೊರತು ಆ ಲರಿಯದು. ಕೆಲ ಪ್ರಸಂಗಗಳಲ್ಲಿ ಕೇವಲ ರೂಢಿಯಬಲದಿಂದ ಕೆಲಸಮಾಡುತ್ತ ಮಾಡುತ್ತ ನಡೆಯಲು ಆ ಕೆಲಸದಲ್ಲಿ ಒಲವು ಉಂಟಾಗುತ್ತದೆ. ಆಗ ಯಾ ಮಾನಸಿಕ ವ್ಯಾಪಾರಗಳ ಉಪಯೋಗವನ್ನು ಯಾವಾಗಯಾವಾಗ ಉಪಯೋಗಿ ಬೇಕೆಂಬದನ್ನು ಶಿಕ್ಷಕರು ಮೊದಲೇ ವಿಚಾರಿಸಿ ನಿಶ್ಚಯಗೊಳಿಸಿಟ್ಟಿರಬೇಕು.

(ಮರಾಠೀ ಪ್ರಾ. ಶಿಕ್ಷಣದಿಂದ ಅವತರಿಸಿದ್ದು).

ಅಬಿಸೀನಿಯಾ ದೇಶವು

[ಒಂದು ಮರಾಠೀ ಪತ್ರಿಕೆಯ ಆಧಾರದಿಂದ ಬರೆದದ್ದು.]

ಲೇಖಕ:— ವಿ. ಎಲ್. ವ್ಹಿ. ಘಾಟಕ, ಕೋಟುಮಚಗಿ

ಸದ್ಯಕ್ಕೆ ನಡೆದ ಇಟಲಿ ಅಬಸೀನಿಯಗಳ ಯುದ್ಧದಿಂದ ಜಗತ್ತಿನ ಲಕ್ಷ್ಯವೆ ಅಬಸೀನಿಯಾ ದೇಶದ ಕಡೆಗೆ ಹೊರಳಿದೆ. ಸಮಗ್ರ ಆಫ್ರಿಕಾಖಂಡವು ಪಾಶ್ಚಾ ರಾಷ್ಟ್ರಗಳಲ್ಲೆಲ್ಲ ಹರಿದು ಹಂಚಿಹೋಗಿದ್ದು, ಅದರಲ್ಲಿ ಈವರೆಗೂ ಅಬಸೀನಿ ವೊಂದೇ ಹೇಗೆ ಹೇಗೋ ಉಳಿದ ಸ್ವತಂತ್ರ ದೇಶವಾಗಿದೆ. ಈ ದೇಶಕ್ಕೆ ಅ ಜನರು ' ಹಬಸೀ, ಎಂಬ ಮಿಶ್ರಜಾತಿಯ ಜನರದೇಶ ಎಂಬರ್ಥದ ' ಅಬಿ ನಿಯಾ ' ಎಂಬ ಹೆಸರನ್ನಿಟ್ಟಿರುವರು. ಆದರೆ ಅಲ್ಲಿಯ ನಿವಾಸಿಗಳಿಗೆ ಈ ಹೆಸ

ಸೂಚಿಸದಿರುವ ಮೂಲಕ ಅವರು ತಮಗೆ 'ಇಥೋಪಿಯನ್'ರೆಂದೂ, ತಮ್ಮ ನಾಡಿಗೆ ಇಥೋಪಿಯಾ, ಎಂದೂ ಕರೆದುಕೊಳ್ಳುತ್ತಾರೆ.

ಅಬಿಸೀನಿಯಾ ದೇಶವು ವಿಷುವವೃತ್ತದಿಂದ ಉತ್ತರಕ್ಕೆ ೫ ರಿಂದ ೧೫ ಈ ಅಂಶಗಳಲ್ಲಿದೆ. ಇದರಲ್ಲಿಯ ಪ್ರದೇಶವೆಲ್ಲ ಅತಿಶಯ ಗುಡ್ಡಗಾಡು ಇದ್ದಮೂಲಕ ಇಲ್ಲಿ ಎಲ್ಲ ಪ್ರಕಾರದ ಹವಾಮಾನವಿದೆ. ಈ ದೇಶಕ್ಕೆ ಸಮುದ್ರದ ದಂಡೆಯಿಲ್ಲ. ಇದರ ಉತ್ತರಕ್ಕೆ ಇಟಲಿಯ ವಶದಲ್ಲಿರುವ ' ಎರಿಟ್ರಿಯಾ' ಎಂಬ ಪ್ರದೇಶವೂ, ಪೂರ್ವಕ್ಕೆ ಫ್ರೆಂಚ-ಇಟಲಿಯನ-ಬ್ರಿಟೀಶ ಸೋಮಾಲಿಲಂಡವೂ, ದಕ್ಷಿಣಕ್ಕೆ ಬ್ರಿಟೀಶ ಆಫ್ರಿಕವೂ, ಪಶ್ಚಿಮಕ್ಕೆ ಅಂಗ್ಲೋ ಇಜಿಪ್ಸಿಶಿಯನ್ ಸೂದಾನವೂ ಇವೆ. ಬ್ರಿಟಿಶರ ಸರಹದ್ದು ೭೦,೦೦೦ ಮೈಲು ಇದೆ. ಈ ದೇಶದ ಕ್ಷೇತ್ರಫಲವು ೩,೫೦,೦೦೦ ಚೌರಸಮೈಲಿದೆ. ಅಂದರೆ ಇದು ಗ್ರೇಟಬ್ರಿಟನ್ನದ ನಾಲ್ವಡಿಯಷ್ಟು ದೊಡ್ಡದಿದೆ. ಈ ದೇಶಕ್ಕೆ "ಆಫ್ರಿಕಾಖಂಡದ ನೇಪಾಳ"ವೆಂದು ಅನ್ನುತ್ತಾರೆ. ಇಜಿಪ್ತ-ಸೂದಾನ ದೇಶಗಳಲ್ಲಿ ಹರಿದುಹೋಗಿರುವ ಬ್ಲೂನಾಇಲ್ ನದಿಯ ಉಗಮವು ಇದೇ ದೇಶದಲ್ಲಾಗಿದೆ. ದಡಸಾದ ಅರಣ್ಯ, ಬೆಳೆಯುಳ್ಳ ಭೂಮಿ, ವಿಪುಲಖನಿಜಸಂಪತ್ತು ಇವುಗಳ ಸಮೃದ್ಧಿಯುಳ್ಳ ಈ ದೇಶದ ಮೇಲೆ ಸಕಲ ಯುರೋಪಿಯನ್ ರಾಷ್ಟ್ರಗಳ ದೃಷ್ಟಿಯು ಈ ಮೊದಲೇ ಬೀಳಬೇಕಾಗಿತ್ತು. ಆದರೆ ಈ ಪ್ರದೇಶವೆಲ್ಲ ಕೇವಲ ಗುಡ್ಡಗಾಡಿದ್ದು, ಇಲ್ಲಿಯ ಜನರು ಗಟ್ಟಿಗರೂ; ಯುದ್ಧಪ್ರಿಯರೂ ಇರುವ ಮೂಲಕ ಯುರೋಪಿಯನ್ ರಾಷ್ಟ್ರಗಳು ಈ ದೇಶದ ಕಡೆಗೆ ವಿಶೇಷ ಲಕ್ಷ್ಯವನ್ನು ಕೊಡಲಿಲ್ಲ. ಅವರಲ್ಲಿ ಪೂರ್ವ-ಪಶ್ಚಿಮ-ದಕ್ಷಿಣ-ಆಫ್ರಿಕೆಗಳ ದೊಡ್ಡ ದೊಡ್ಡ ಭೂಭಾಗಗಳನ್ನು ಯುರೋಪಿಯನ್ ರಾಷ್ಟ್ರಗಳು ವಶಪಡಿಸಿಕೊಂಡದ್ದರಿಂದ ಅಬಿಸೀನಿಯದ ಕಡೆಗೆ ಈ ವರೆಗೆ ಯಾರೂ ಹೊರಳಿ ನೋಡಲಿಲ್ಲ.

ಇಜಿಪ್ತ ಹಾಗು ಅಬಿಸೀನಿಯಾ ಈ ಎರಡು ದೇಶಗಳ ಸಂಬಂಧವು ಬಹು ಪುರಾತನ ಕಾಲದಿಂದಿದೆ. ಎಷ್ಟೋ ಸಾರೆ ಎರಡೂ ದೇಶಗಳು ಒಬ್ಬ ರಾಜನ ಆಧಿಪತ್ಯದಲ್ಲಿಯೇ ಇದ್ದವು. ಯುರೋಪಖಂಡದಲ್ಲಿ ಕ್ರಿಸ್ತೀಧರ್ಮದ ಪ್ರಸಾರವಾಗುವ ಪೂರ್ವದಲ್ಲಿಯೇ ಅಬಿಸೀನಿಯದಲ್ಲಿ ಆ ಧರ್ಮವು ಹಬ್ಬುಗೊಂಡಿದೆ. ಅದರಿಂದ ಈ ದೇಶದಲ್ಲಿ ಹೆಚ್ಚು ಜನರು ಕ್ರಿಸ್ತೀಧರ್ಮದವರಿರುವರು. ಕೆಲವು ಕಾಲ ಮುಸಲ್ಮಾನೀ ಸತ್ತೆಯು ಈ ದೇಶದ ಮೇಲಿತ್ತು. ಆದರೆ ಇಲ್ಲಿಯ ಜನರು

ಪೋರ್ತುಗೀಜರ ಸಹಾಯದಿಂದ ಅದನ್ನು ಕಿತ್ತೊಗೆದರು. ಎರಡನೆಯ ಮೆನೆಲಿಕನೇ ಈ ದೇಶದ ಪ್ರಸಿದ್ಧ ಅರಸನು. ಇವನು ಎಲ್ಲ ಹಬಸೀ ಸರದಾರರನ್ನು ತನ್ನ ಅಂಕಿತದಲ್ಲಿಟ್ಟುಕೊಂಡು ರಾಜ್ಯವನ್ನು ವಿಸ್ತರಿಸಿದನು. ಇವನೇ ಕ್ರಿಸ್ತವರ್ಷ ೧೮೯೬ರಲ್ಲಿ ಅಬಿಸೀನಿಯಾ ದೇಶದಲ್ಲೊಳನುಗ್ಗಿದ ಇಟಾಲಿಯನ್‌ರನ್ನು ಪರಾಭವಗೊಳಿಸಿದನು. ಯುರೋಪಿಯನ್ ರಾಷ್ಟ್ರಗಳು ಅಬಿಸೀನಿಯವನ್ನು ಈ ವರೆಗೆ ಆಕ್ರಮಿಸದಿರಲಿಕ್ಕೆ ಇದೊಂದು ಮುಖ್ಯ ಕಾರಣವಾಯಿತು. ಈ ಮೆನೆಲಿಕ ರಾಜನೇ ಫ್ರೇಂಚ ಜನರಿಗೆ ಫ್ರೆಂಚ ಸೋಮಾಲಿಲಂಡದಲ್ಲಿಯ ಜಿಬೂಟಿ ಬಂದರದಿಂದ ಅಬಿಸೀನಿಯಾದ ರಾಜಧಾನಿಯಾದ ಆದೀಸ ಆಬಾಬಾದವರೆಗೆ ರೇಲ್ವೆಯನ್ನು ಹಾಕುವದಕ್ಕೆ ಅಪ್ಪಣೆಯನ್ನು ಕೊಟ್ಟನು. ಈ ಕೆಲಸವು ಕ್ರಿಸ್ತವರ್ಷ ೧೯೧೮ರಲ್ಲಿ ಪೂರ್ಣವಾಯಿತು.

ಅಬಿಸೀನಿಯಾದ ಸದ್ಯದ ರಾಜನ ಹೆಸರು ರಾಸತಫೋರಿ ಎಂಬುದಿದೆ. ಇವನು ಕ್ರಿಸ್ತವರ್ಷ ೧೯೩೦ ರಲ್ಲಿ ಪಟ್ಟಕ್ಕೆ ಕುಳಿತುಕೊಂಡಿರುವನು. ಇವನು ‘ಹೈಲೆಸೇಲಾಸಿ, ಎಂಬ ಹೊಸ ಹೆಸರನ್ನು ಧರಿಸಿದ್ದು, ತಾನು ನೆಗಸನೇಗಾಸ್ತಿ, ಅಂದರೆ ‘ ರಾಜಾಧಿರಾಜ’ ಎಂದು ಎನಿಸಿಕೊಳ್ಳುತ್ತಿರುವನು. ಇವನು ಕ್ರಿಸ್ತೀಧರ್ಮದವನಿದ್ದು ಇವನಿಗೆ ಫ್ರೆಂಚ-ಇಂಗ್ಲಿಶ ಭಾಷೆಗಳು ಚನ್ನಾಗಿ ಅವಗತವಿವೆ. ಈತನು ಒಳ್ಳೇ ಕರ್ತವ್ಯತತ್ಪರನಿದ್ದು, ತನ್ನ ದೇಶವನ್ನು ಸುಧಾರಿಸಲು ಬಹಳೇ ಹೆಣಗುತ್ತಿರುವನು. ರಾಜ್ಯದಲ್ಲಿಯ ಗುಲಾಮಗಿರಿಯನ್ನು ಕಿತ್ತೊಗೆಯುವದಕ್ಕೆ ಒಪ್ಪಿಕೊಂಡು ಇವನು ಅಬಿಸೀನಿಯಾ ದೇಶವನ್ನು “ಲೀಗ ಆಫ ನೆಶನ್ಸ”ದಲ್ಲಿ ಸೇರ್ಪಡಿಸಿರುವನು. ಅಬಿಸೀನಿಯಾದ ರಾಜ್ಯದಾಡಳಿತೆಯು ಇನ್ನೂ ಸರಂಜಾಮೀ ಪದ್ಧತಿಯದಿದೆ. ಅಲ್ಲಿಯ ರಾಜನು ತನ್ನ ಸರದಾರ-ಜಹಾಗೀರದಾರರನ್ನು ತನ್ನ ಅಂಕಿತದಲ್ಲಿಟ್ಟುಕೊಳ್ಳುವದು ಬಹಳ ಕಠಿಣವಿದೆ. ಈ ಸರಂಜಾಮೀ ಜನರು ಬಹಳ ಎಟ್ಟ ಇದ್ದು, ರಾಜನಿಗೆ ಖಂಡಣಿಯ ರಕಮು ಬೇಕಾಗಿದ್ದರೆ ಆವನು ಮನೆಮನೆಗೆ ಬಂದು ಅದನ್ನು ತೆಗೆದುಕೊಂಡು ಹೋಗಲಿ ಎಂದು ಅನ್ನುವರಂತೆ.

ಅಬಿಸೀನಿಯವು ಇನ್ನೂ ತೀರ ಹಿಂದುಳಿದ ದೇಶವಾಗಿದೆ. ಗುಲಾಮಗಿರಿಯ ವಿರುದ್ಧ ಕಟ್ಟಳೆಯಾಗಿದ್ದರೂ ಆ ದೇಶದಲ್ಲಿ ಗುಲಾಮಗಿರಿಯ ಪದ್ಧತಿಯು ಈ ವರೆಗೂ ನಷ್ಟವಾಗಿಲ್ಲ. ಕಬ್ಬಿಣ, ಕಲ್ಲಿದ್ದಲಿ, ಬಂಗಾರ, ಪ್ಲಾಟಿನಮ್, ತಾಮ್ರ ಮುಂತಾದ ಖನಿಜ ಪದಾರ್ಥಗಳು ಅಬಿಸೀನಿಯಾದಲ್ಲಿ ವಿಪುಲವಾಗಿ ದೊರೆಯುತ್ತವೆ. ಮಧ್ಯ

ಭಾಗದಲ್ಲಿ ಬೈಲು ಪ್ರದೇಶವಿದ್ದು, ಅಲ್ಲಿಯ ಹವೆಯು ಸೌಮ್ಯವೂ, ಉತ್ತಮವೂ ಇವೆ. ಭೂಮಿಯು ಬೆಳೆಯುಳ್ಳದ್ದಿರುವ ಮೂಲಕ ಮೆಕ್ಕೆಯು ಜೋಳ, ಗೋದಿ, ಬಾರ್ಲಿ, ರಾಯ ಮೊದಲಾದ ಧಾನ್ಯಗಳು ಬೆಳೆಯುವವಲ್ಲದೆ ಹತ್ತಿ, ಕಬ್ಬು ಇವುಗಳಾದರೂ ಚನ್ನಾಗಿ ಫಲಿಸುವವು. ಈ ದೇಶದಲ್ಲಿ ವರ್ಷದೊಳಗೆ ಎರಡೇ ಋತುಗಳಿರುತ್ತವೆ. ಅಕ್ಟೋಬರದಿಂದ ಜೂನದ ವರೆಗೆ ಒಣಹವೆ ಇರುತ್ತದೆ. ಜೂನದಿಂದ ಅಕ್ಟೋಬರದ ವರೆಗೆ ಮಾತ್ರ ಮಳೆಗಾಲವಿರುವದು. ಹುಲ್ಲುಗದ್ದೆಯ ಅಡವಿಗಳು ವಿಪುಲವಿರುವ ಮೂಲಕ ಆ ದೇಶವಲ್ಲಿ ಕುರಿ-ದನಗಳ ದೊಡ್ಡ ದೊಡ್ಡ ಹಿಂಡುಗಳು ಇರುವವು. ಅದರಿಂದ ಅಲ್ಲಿ ತೊಗಲಿನ ನಿರ್ಯಾತವು ದೊಡ್ಡ ಪ್ರಮಾಣದಿಂದಾಗುವದು. ಅಬಿಸೀನಿಯನ್ ಕುದುರೆಗಳೂ, ಹೇಸರಗತ್ತೆಗಳೂ ಒಳ್ಳೇ ಪ್ರಸಿದ್ಧವಿವೆ. ಮಾಲು ಒಯ್ಯುವ ಕೆಲಸವು ಇಲ್ಲಿ ಬಹುತರ ಹೇಸರಗತ್ತೆಗಳಿಂದಲೇ ನೆರವೇರುವದು. ದೇಶವೆಲ್ಲ ಗುಡ್ಡಗಾಡು ಇರುವ ಮೂಲಕ ಅಬಿಸೀನಿಯಾವಲ್ಲಿ ಚಲೋ ಮಾರ್ಗಗಳೇ ಇಲ್ಲ. ನದಿಗಳ ಉಪಯೋಗವು ಮಾರ್ಗದ ರೂಪದಲ್ಲಿ ಆಗುವದಿಲ್ಲ. ಯಾಕಂದರೆ ಅವು ಪರ್ವತ ಪ್ರದೇಶದಲ್ಲಿಯೇ ಹರಿಯುತ್ತವೆ. ವಿಮಾನವಲ್ಲಿ ಕುಳಿತು ನೋಡುವವರಿಗೆ ಹಳ್ಳಿಪಳ್ಳಿಗಳ ಅರ್ಥಾತ್ ಜನವಸತಿಯ ಚಿಹ್ನಗಳು ಸಹ ಕಾಣಿಸದಷ್ಟು ಅಲ್ಲಿ ದಟಸಾದ ಅರಣ್ಯಗಳಿವೆ.

ಅಬಿಸೀನಿಯಾದಲ್ಲಿ ರಾಜಧಾನಿ 'ಆದಿಸ ಆಬಾಬಾ' ಹಾಗು 'ಹಾರಾರ ದಿರೆ ದಾಬಾ' ಎಂಬ ಎರಡೇ ಪಟ್ಟಣಗಳಿವೆ. ಮೂರನೆಯದೊಂದು ಚಿಕ್ಕ ಪಟ್ಟಣವು ಆದಿಸ ಆಬಾಬಾ–ಜೆಬೂಟಿ' ರೇಲ್ವೆಯ ಮಾರ್ಗದಲ್ಲಿದ್ದು, ಅಲ್ಲಿ ಯುರೋಪಿಯನ್ ಜನರದೊಂದು ಚಿಕ್ಕ ವಸಾಹತು ಇದೆ. ಅದರ ಜನಸಂಖ್ಯೆಯು ೫,೦೦೦ ಇದೆ. ಇವುಗಳ ಹೊರತು ಮತ್ತೆ ಯಾವ ಪಟ್ಟಣಗಳೂ ಆ ದೇಶದಲ್ಲಿಲ್ಲ. ಆದೀಸ ಆಬಾಬಾದ ಲೋಕಸಂಖ್ಯೆಯು ೮೧,೦೦೦ ಇದ್ದು ಹಾರಾರದ ಲೋಕಸಂಖ್ಯೆಯು ೪೦,೦೦೦ ಇದೆ. ಒಟ್ಟು ಅಬಿಸೀನಿಯದ ಜನಸಂಖ್ಯೆಯು ಒಂದು ಒಂದೂಕಾಲು ಕೋಟಿಯಿದೆ. ಇಲ್ಲಿಯ ಜನರೆಲ್ಲ ಪ್ರಾಯಶಃ ಶೂರರೂ, ಯುದ್ಧಪ್ರಿಯರೂ ಇರುವರು. ಆಧುನಿಕ ಶಸ್ತ್ರಾಸ್ತ್ರಗಳ ಯಾವ ಕಲ್ಪನೆಯೂ ಇವರಿಗಿಲ್ಲ. ಈ ಜನರು ಅಶ್ವಾರೋಹಣ ಮಾಡುವದರಲ್ಲಿ ನಿಪುಣರಿರುವ ಮೂಲಕ ಅವರ ದಂಡಿನಲ್ಲಿ ಕುದುರೆಯ ರಾವುತರ ಸಂಖ್ಯೆಯೇ ಹೆಚ್ಚಾಗಿದೆ. ಅಬಿಸೀನಿಯದ ಒಟ್ಟು ಸೈನ್ಯವು ಎರಡು ಲಕ್ಷವಿದೆಯೆಂದು ತಿಳಿದದೆ. ಕೆಲವರು ಅದು ಹತ್ತುಲಕ್ಷವಿದೆಯೆಂದು ಹೇಳುತ್ತಾರೆ

ಆದರೆ ಸದ್ಯದ ಯುದ್ಧದ ಸ್ಥಿತಿಯು ಮೇಲಿಂದ ಆ ಸೈನ್ಯವು ಕಾದಲಿಕ್ಕೆ ತೀ ನಿರುಪಯುಕ್ತವೆಂದು ಎನಿಸಿದೆ.

ಈ ದೇಶದೊಡನೆ ಫ್ರಾನ್ಸ, ಇಂಗ್ಲಂಡ, ಇಟಲಿ, ಜಪಾನ ಈ ದೇಶಗ ಸಂಬಂಧವು ಹೆಚ್ಚಾಗಿದೆ. ಬೆಲ್ಜಿಯಮ, ಅಮೇರಿಕೆ ಇವುಗಳ ಸಂಬಂಧವು ತುಸುಮಟ್ಟಿ ಇದೆ.

ಫ್ರಾನ್ಸ ಹಾಗು ಇಥೋಪಿಯಾ ಇವುಗಳ ಸರಹದ್ದು ಒಟ್ಟು ೨೦೦ ಮೈಲಿ ಇದ್ದರೂ ಇಥೋಪಿಯದ ಎಲ್ಲ ವ್ಯಾಪಾರವು ' ಆದಿಸ ಅಬಾಬಾ-ಜೆಬೂಟಿ ' ಎಂ ರೇಲ್ವೆಯ ಮಾರ್ಗದಿಂದಲೇ ನಡೆಯುವದು. ಜೆಬೂತಿ, ಇದು ಫ್ರೆಂಚ ಸೋಮಾ ಲಂಡವಲ್ಲಿಯ ಬಂದರವಾಗಿದೆ. ಅಬಿಸೀನಿಯಾದಲ್ಲಿ ತಮ್ಮ ಇಚ್ಛೆಗೆ ಬಂದಂ ಬೇಕಾದಲ್ಲಿ ರೇಲ್ವೆಗಳನ್ನು ಹಾಕುವ ಒಟ್ಟು ಅಧಿಕಾರವು ಫ್ರಾನ್ಸಕ್ಕೆ ಇದೆ. ಇದಲ್ಲ ಮದ್ದುಗುಂಡಿನ ಪೂರೈಕೆಯಾದರೂ ಆ ದೇಶಕ್ಕೆ ಫ್ರಾನ್ಸದಿಂದಲೇ ಆಗುವದು. 'ಜೆಬೂತಿ' ಬಂದರವು ಫ್ರೆಂಚರ ವಶದಲ್ಲಿರುವ ಮೂಲಕ ಅಬಿಸೀನಿಯದ ಮಹಾದ್ವಾ ರವೇ ಅವರ ಕೈಯಲ್ಲಿದ್ದಂತಿದೆ.

ಇಂಗ್ಲೀಶ ವಸಾಹತಿನ ಹಾಗು ಇಥೋಪಿಯದ ಸರಹದ್ದು ೬,೦೦೦ ಮೈಲಿ ದಿದೆ. ಬ್ಲೂನಾಯಿಲ ನದಿಯ ಉಗಮಸ್ಥಾನವಾದ ' ಟಾನಾ ' ಸರೋವರವು ಇಥೋಪಿಯದ ಸೀಮೆಯಲ್ಲಿಯೇ ಇದೆ. ಅಬಿಸೀನಿಯದ ಜನರು ಈ ಬ್ಲೂನಾ ಯಿಲ್ ನದಿಗೆ ಒಡ್ಡು ಹಾಕಿ, ಕಾಲುವೆ ಮಾಡಿಕೊಂಡರೆ ಅದರ ನೀರು ಕಡಿಮೆ ಯಾಗಿ, ಇಜಿಪ್ತ-ಸೂದಾನ ದೇಶಗಳಲ್ಲಿಯ ಕೃಷಿಗೆ ಬಹಳ ಹಾನಿಯಾಗುವದು. ಅದಕ್ಕಾಗಿಯೇ ಬ್ರಿಟಿಶ ಸರಕಾರದವರು ತಮ್ಮ ಸಮ್ಮತಿಯ ವಿನಹ ಅಬಿಸೀನಿಯಾದ ಜನರು ಬ್ಲೂನಾಈಲ್ ನದಿಯ ನೀರು ತರುಬಕೂಡದೆಂದು ಈಬಳಗಾಗಿಯೇ ಆ ದೇಶದೊಡನೆ ಕರಾರು ಮಾಡಿಕೊಂಡಿರುವರು. ಆದರೆ ಸದ್ಯದ ಯುದ್ಧದಲ್ಲಿ ಇಟ ಲಿಯು ಅಬಿಸೀನಿಯವನ್ನು ನುಂಗಿದಲ್ಲಿ ಮಾತ್ರ ಆ ಕರಾರು ನಡೆಯುವದು ಕಠಿಣವಿದೆ.

ಅಬಿಸೀನಿಯಾ ಮತ್ತು ಜಪಾನ ಇವುಗಳ ಸಂಬಂಧವು ಇತ್ತೀಚಿನದಿದೆ. ಇಥೋಪಿಯದ ಬಾದಶಹರಿಗೆ ಜಪಾನೀ ಜನರ ಬಗ್ಗೆ ಅತ್ಯಂತ ಆದರವಿದೆ. ಜಪಾನೀ ತಜ್ಞರ ಸಹಾಯದಿಂದ ತನ್ನ ದೇಶವನ್ನು ಯುರೋಪಿಯನ್ ರಾಷ್ಟ್ರಗಳಂತೆ ಪ್ರಗತಿ ಪರವಾಗಿ ಮಾಡಬೇಕೆಂದು ಅಲ್ಲಿಯ ಅರಸನ ಮಹತ್ವಾಕಾಂಕ್ಷೆಯಿದೆ. ಜಪಾನೀ

ಜನರು "ಪೂರ್ವ ದಿಕ್ಕಿನ ಇಂಗ್ಲಿಷ" ರೆಂದು ಹೆಸರುಗೊಂಡಿದ್ದು, ಇಂಗ್ಲೀಷರ ಅನುಕರಣವನ್ನೇ ಮಾಡುತ್ತ ಅವರು ಸದ್ಯದಲ್ಲಿ ತಮ್ಮ ಸಾಮ್ರಾಜ್ಯವಿಸ್ತಾರದ ಕಾರ್ಯವನ್ನು ಸಾಗಿಸಿರುವರು. ವ್ಯಾಪಾರದ ನಿಮಿತ್ತದಿಂದ ಅವರು ಈ ಮೊದಲೇ ಅಬಿಸೀನಿಯದಲ್ಲಿ ಪ್ರವೇಶಿಸಿರುವರು. ಹತ್ತಿಯ ಬೆಳೆಗಾಗಿ ಇಪ್ಪತ್ತು ಲಕ್ಷ ಎಕರೆ ಭೂಮಿಯು ಅವರಿಗೆ ಆ ದೇಶದಲ್ಲಿ ದೊರಕಿದೆ. ಜಪಾನೀ ಬಟ್ಟೆಗೆ ಅಬಿಸೀನಿಯವು ಬಹು ದೊಡ್ಡ ಗಿರಾಕಿಯಾಗಿದೆ.

ಎಷ್ಟೋ ಶತಮಾನಗಳ ವರೆಗೆ ಇಟಲಿಯು ಬಹಳ ಹಿಂದುಳಿದ ರಾಷ್ಟ್ರವಾಗಿದ್ದ ಮೂಲಕ ಉಳಿದ ಯುರೋಪಿಯನ್ ರಾಷ್ಟ್ರಗಳಂತೆ ಅದಕ್ಕೆ ಉಪನಿವೇಶಗಳು ದೊರೆಯಲಿಲ್ಲ. ಆಫ್ರಿಕೆಯ ಉತ್ತರ ದಂಡೆಯ ಮೇಲಿನ 'ಟ್ಯೂನೀಸ'ದಲ್ಲಿ ಇಟಾಲಿಯನರು ಮೊದಲು ಬಂದು ನೆಲೆಗೊಂಡರು. ಆದರೆ ಜರ್ಮನಿ-ಇಂಗ್ಲಂಡಗಳ ಪ್ರೋತ್ಸಾಹದಿಂದ ಆ ಪ್ರದೇಶವು ಫ್ರಾನ್ಸದ 'ಪ್ರೊಟೆಕ್ಟೊರೇಟ, ಆಯಿತು. ಅದರಿಂದ ಇಟಲಿಯನರು ನಿರಾಶರಾಗಿ ಕೆಂಪುಸಮುದ್ರದ ಕಡೆಗೆ ತಮ್ಮ ಕೈಯನ್ನು ಚಾಚಿದರು. ಅಲ್ಲಿಯ **'ಆಸಾಬ,** ಬಂದರವನ್ನು ಇಟಲಿಯನ್ ಕಂಪನಿಯವರು ಓರ್ವ ಇಥೋಪಿಯನ್ ಮಾಂಡಲೀಕನಿಂದ ಕೊಂಡುಕೊಂಡರು. ಮುಂದೆ ಮೆಲ್ಲನೆ 'ಮಾಸೋವಾ' ಬಂದರವೂ ಇಟಲಿಯ ವಶದಲ್ಲಿ ಬಂದಿತು. ಈ ಬಂದರಗಳ ಪ್ರದೇಶವೇ 'ಇರಿಟ್ರಿಯಾ' ಎಂಬ ಹೆಸರಿನಿಂದ ಇಟಲಿಯ ಉಪನಿವೇಶವಾಯಿತು. 'ಇರಿಟ್ರಿಯಾ' 'ಸೋಮಾಲಿಲ್ಯಾಂಡ' ಇವೆರಡೂ ಪ್ರದೇಶಗಳು ಅತ್ಯಂತ ರುಕ್ಷವಿದ್ದು, ಅಲ್ಲಿಯ ಬೇಸಿಗೆಯು ಬಹಳ ಉಗ್ರವಿರುವ ಮೂಲಕ ಯುರೋಪಿಯನ್ ಜನರಿಗೆ ಅವು ಇರಲಿಕ್ಕೆ ತೀರ ನಿರುಪಯುಕ್ತವಾಗಿವೆ. ಆದರಿಂದ ಸಹಜವಾಗಿಯೇ ಅಬಿಸೀನಿಯದ ತಪ್ಪಲಿನ ಮೇಲೆ ಬಹುದಿವಸಗಳಿಂದ ಇಟಲಿಯ ದೃಷ್ಟಿಯಿದೆ. ಇಂಥ ಸ್ಥಿತಿಯಲ್ಲಿಯೇ 'ಉಚಾಲಿ' ಎಂಬಲ್ಲಿ ಇಟಲಿ-ಅಬಿಸೀನಿಯಾಗಳ ನಡುವೆ ಸ್ನೇಹದ ಒಪ್ಪಂದವಾಯಿತು. ಅದರ ಬರಹದ ಕಾಗದಗಳು ಎರಡು ಇದ್ದವು. ಇಟಲಿಯ ಕಡೆಗೆ ಇದ್ದ ಕಾಗದದಲ್ಲಿ "ಅಬಿಸೀನಿಯವು ಇಟಲಿಯ ಪ್ರೊಟೆಕ್ಟೊರೇಟ ಆಗಿದ್ದು, ಅದಕ್ಕಾಗಿ ಇನ್ನು ಮೇಲೆ ಆ ದೇಶದವರು ಪರಕೀಯ ರಾಷ್ಟ್ರಗಳೊಡನೆ ಇಟಲಿಯ ವಿದ್ಯಮಾನ ವ್ಯವಹರಿಸತಕ್ಕದ್ದು" ಎಂದು ಉಲ್ಲೇಖವಿತ್ತು. ಅಬಿಸೀನಿಯದ ಕಡೆಗೆ ಇದ್ದ ಕಾಗದದಲ್ಲಿ ಈ ಯಾವ ಸಂಗತಿಯೂ ಇದ್ದಿಲ್ಲ. ಆದರೆ ಈ ಮೋಸದ ಸಂಗತಿಯು ಗುಪ್ತವಾಗಿ ಉಳಿಯದೆ ಇಟಲಿಯ ಮೇಲೆ ಮತ್ಸರ ಮಾಡುವ ಇತರ ರಾಷ್ಟ್ರ

ಗಳಿಂದ ಬಹು ಬೇಗನೆ ಅಬಿಸೀನಿಯದ ರಾಜನ ಕಿವಿಗೆ ಮುಟ್ಟಿತು. ಅದರ ಪರ್ಯವಸಾನವೇ ಯುದ್ಧದಲ್ಲಿ ಪರಿಣಮಿಸಿ, ಕ್ರಿಸ್ತ ವರ್ಷ ೧೮೯೬ರಲ್ಲಿ ಇಟಲಿಯು ಪೂರ್ಣವಾಗಿ ಸೋತು, ಅಬಿಸೀನಿಯಾಕ್ಕೆ ಬಹು ದೊಡ್ಡ ಖಂಡಣಿ ಕೊಟ್ಟು, ಅದರ ಸ್ವಾತಂತ್ರ್ಯವನ್ನು ಒಪ್ಪಬೇಕಾಯಿತು. ಕೆಲ ದಿವಸಗಳ ಮೇಲೆ ಮತ್ತೆ ಉಭಯ ರಾಷ್ಟ್ರಗಳಲ್ಲಿ ಸ್ನೇಹದ ಒಪ್ಪಂದವಾಗಿ ಸಮುದ್ರದಿಂದ ೧೮೦ ಮೈಲಿನ ವರೆಗಿನ ಪ್ರದೇಶವು ಇಟಲಿಯನ್ ಸೋಮಾಲೀಲ್ಯಾಂಡದಲ್ಲಿಯೂ ಉಳಿದ ಎಲ್ಲ ಪ್ರದೇಶವು ಇಥೋಪಿಯದಲ್ಲಿಯೂ ಬರುವದೆಂದು ಗೊತ್ತಾಯಿತು. ಪ್ರತ್ಯಕ್ಷ ಅಳತೆ ಮಾಡಿ, ಗಡಿಯನ್ನು ಗೊತ್ತುಮಾಡುವ ಕೆಲಸ ಮಾತ್ರ ನೆರವೇರಲಿಲ್ಲ. ಇಂಗ್ಲಿಶ ಸರಹದ್ದಿನ ಅಳತೆಯಾದರೂ ಹೀಗೆಯೇ ಆಗಿದ್ದಿಲ್ಲ. ೧೯೩೪ನೆಯ ಡಿಸೆಂಬರ ತಿಂಗಳಲ್ಲಿ ಅದನ್ನು ಗೊತ್ತುಮಾಡಲು ಹೊರಟ ಇಂಗ್ಲಿಶ-ಅಬೀಸೀನಿಯನ್ ಕಮೀಶನದವರಿಗೆ 'ವಾಲ ವಾಲ' ಎಂಬಲ್ಲಿ ಇಟಲಿಯನ್ ಸೈನ್ಯದವರು ಅಡ್ಡಿ ಮಾಡಿದರು. ಆಗ ಕಮೀಶನದವರು ಆ ಗ್ರಾಮವು ಅಬಿಸೀನಿಯದ ಸೀಮೆಯ ಒಳಗೆ ೬೦ ಮೈಲು ಇರುವದೆಂದು ನಿದರ್ಶನಕ್ಕೆ ತಂದುಕೊಟ್ಟರೂ ಅದರ ಉಪಯೋಗವಾಗಲಿಲ್ಲ. ಅದರಿಂದ ಇಟಲಿ-ಅಬಿಸೀನಿಯಾಗಳಲ್ಲಿ ಚಿಕ್ಕದೊಂದು ಯುದ್ಧವಾಗಿ, ಅದರಲ್ಲಿ ಅಬಿಸೀನಿಯಾದ ಹಾನಿಯೇ ವಿಶೇಷವಾಗಿದ್ದರೂ ಅಲ್ಪಸ್ವಲ್ಪವಾಗಿ ಆದ ತಮ್ಮ ಹಾನಿಯನ್ನೇ ಮುಂದೆ ಮಾಡಿ, ಇಟಲಿಯವರು ಅಬಿಸೀನಿಯಾದೊಡನೆ ಕದನ ಹೂಡಿದರು.

ಅಬಿಸೀನಿಯಾ ದೇಶವು ರಾಷ್ಟ್ರ ಸಂಘದಲ್ಲಿ ಸಮಾವಿಷ್ಟವಾಗಿರುವ ಮೂಲಕ ಸಹಜವಾಗಿಯೇ ಸಂಘದ ಕಡೆಗೆ ಇಟಲಿಯ ವಿರುದ್ಧವಾಗಿ ಅದರ ಅಪೀಲು ನಡೆಯಿತು. ಸಂಘವು ಜಗತ್ತಿನ ಶಾಂತತೆಯ ದೆಸೆಯಿಂದ ಉಭಯ ರಾಷ್ಟ್ರಗಳಲ್ಲಿ ಸ್ನೇಹದ ಒಡಂಬಡಿಕೆ ಮಾಡಿಸುವ ಬಗ್ಗೆ ವಿಶ್ವಪ್ರಯತ್ನ ಮಾಡಿತು. ಸಂಘದ ಸೂಚನೆಗಳಿಗೆ ಅಬಿಸೀನಿಯಾದವರು ಪೂರ್ಣವಾಗಿ ಒಪ್ಪಿಕೊಂಡರು. ಆದರೆ ಇಟಲಿಯವರು ಮಾತ್ರ ಸಂಘದ ನಿರ್ಣಯವನ್ನು ಅಲ್ಲಗಳೆದು, ಕಳೆದ ೧೯೩೫ನೆಯ ಅಕ್ಟೋಬರ ೩ನೇ ತಾರೀಖಿನಿಂದ ಅಬಿಸೀನಿಯದೊಡನೆ ಅನ್ಯಾಯದಿಂದ ಯುದ್ಧವನ್ನು ಆರಂಭಮಾಡಿದರು. ಆಗ ರಾಷ್ಟ್ರಸಂಘದವರು ತಮ್ಮ ನಿರ್ಣಯವನ್ನು ಕಃಪದಾರ್ಥವೆಂದು ತಿಳಿದ ಇಟಲಿಯ ಮೇಲೆಯೇ ಎಲ್ಲ ಯುದ್ಧದ ಹೊಣೆಯನ್ನು ಹೊರಿಸಿ, ಆ ದೇಶದ ಮೇಲೆ ಎಲ್ಲ ರಾಷ್ಟ್ರದವರು ಆರ್ಥಿಕ ಬಹಿಷ್ಕಾರವನ್ನು ಹಾಕತಕ್ಕದ್ದೆಂದು ನಿರ್ಣೈಸಿದರು. ಆ ಮೇರೆಗೆ ಕಳೆದ ೧೯೩೫ನೆಯ ನವಂಬರ ತಿಂಗ

೧೮ನೇ ತಾರೀಖಿನಿಂದ ಬಹುತರ ಎಲ್ಲ ರಾಷ್ಟ್ರಗಳು ಇಟಲಿಯೊಡನೆ ಬಹಿಷ್ಕಾರ ಪತ್ರವನ್ನು ಪ್ರಾರಂಭಿಸಿವೆ. ಸದ್ಯದಲ್ಲಿ ನಡೆದ ಯುದ್ಧದ ಸ್ಥಿತಿಯು ಮೇಲಿಂದ ಅಬಿಸೀನಿಯವು ಹತಾಶವಾಗಹತ್ತಿದ್ದು, ಇಟಲಿಯ ಹೆಜ್ಜೆಯೇ ಮುಂದೆ ಬೀಳುತ್ತಿರುವಂತೆ ಕಾಣಿಸುತ್ತಿದೆ. ಇನ್ನು ಇಟಲಿಯು ಅಬಿಸೀನಿಯುವನ್ನು ಪೂರ್ಣವಾಗಿ ನುಂಗಿಬಿಡುವದೋ ಅಥವಾ ಅವೆರಡು ರಾಷ್ಟ್ರಗಳ ಘರ್ಷಣದಿಂದ ಪ್ರಪಂಚದಲ್ಲಿ ಮತ್ತೊಂದು ಮಹಾಯುದ್ಧವು ಪ್ರಜ್ವಲಿಸುವದೋ ಎಂಬವನ್ನು ನೋಡಬೇಕಾಗಿದೆ.

ರಾಷ್ಟ್ರಸಂಘ

ಲೇಖಕರು:—ಶ್ರೀ. ಜೇ. ಏ. ಬಳವಂತರಾವ, ಬಾಗಲಕೋಟ.

ಸಹಾಯಕ ಸಂಸ್ಥೆಗಳು

ರಾಷ್ಟ್ರಸಂಘದ ಕೆಲಸವು ಸುಸೂತ್ರವಾಗಿ ಸಾಗಬೇಕಾದರೆ, ಕೌನ್ಸಿಲಕ್ಕೆ ಅನೇಕ ಸಂಸ್ಥೆಗಳ ಸಹಾಯವು ಅವಶ್ಯವಾಗಿರುವದು. ಅಂತರರಾಷ್ಟ್ರೀಯ ಸಹಕಾರಿತೆಯ ಪ್ರಗತಿಯ ಕೆಲಸದಲ್ಲಿ ಈ ಸಹಾಯಕ ಸಂಸ್ಥೆಗಳ ಉಪಯೋಗವು ಬಹಳವಾಗಿ ಆಗುವದು. ಇವುಗಳಲ್ಲಿ ಕೆಲವು ಸ್ಥಿರ ಸಂಸ್ಥೆಗಳಾಗಿರುತ್ತವೆ; ಕೆಲವು ತಾತ್ಪೂರ್ತಿಕವಾಗಿರುತ್ತವೆ. ಇವುಗಳಲ್ಲಿ ಶಾಸ್ತ್ರೀಯ ಮಂಡಳಗಳು ಹಾಗು ಸಲ್ಲಾಗಾರ ಮಂಡಳಗಳು ಎಂಬೆರಡು ಮುಖ್ಯ ಭಾಗಗಳುಂಟು.

ಶಾಸ್ತ್ರೀಯ ಮಂಡಳಗಳಲ್ಲಿ (೧) ಆರ್ಥಿಕ ಮತ್ತು ಜಮಾಖರ್ಚಿನ ಸಂಬಂಧವಾದ (೨) ಅಂತರರಾಷ್ಟ್ರೀಯ ಮಾರ್ಗಗಳು ಹಾಗು ವಾಹನಗಳು ಇವುಗಳಿಗೆ ಸಂಬಂಧಿಸಿದ ಮತ್ತು (೩) ಆರೋಗ್ಯ ವಿಚಾರಗಳ ಸಂಬಂಧವಾದ ಹೀಗೆ ಮೂರು ಮುಖ್ಯ ಮಂಡಳಗಳಿರುತ್ತವೆ. ಜಗತ್ತಿನಲ್ಲಿ ಆರ್ಥಿಕ, ಜಮಾಖರ್ಚಿಗೆ ಸಂಬಂಧಿಸಿದ ಮತ್ತು ವ್ಯಾಪಾರವಿಷಯಕವಾದ ಅನೇಕ ಪ್ರಶ್ನೆಗಳಿದ್ದು, ಅವುಗಳ ಬಗ್ಗೆ ಆಗಾಗ್ಗೆ ದೇಶದೇಶಗಳಲ್ಲಿ ಜಗಳಗಳುಂಟಾಗುತ್ತಿರುತ್ತವೆ. ಬೇರೆ ಬೇರೆ ದೇಶಗಳಲ್ಲಿಯ ತಜ್ಞ

ಜನರು ಈ ಮಂಡಳಗಳಲ್ಲಿದ್ದು ವ್ಯಾವಹಾರಿಕ ರೀತಿಯಿಂದ ಆ ಪ್ರಶ್ನೆಗಳನ್ನು ಬಿಡಿಸಲಿಕ್ಕೆ ಪ್ರಯತ್ನ ಮಾಡುತ್ತಾರೆ. ಕೆಲವು ಮಹತ್ವದ ವಿಷಗಳ ಬಗ್ಗೆ ಈ ಮಂಡಳಗಳ ಸಂಯುಕ್ತ ಸಭೆಯು ಕೂಡಿ ನಿರ್ಣಯಗಳನ್ನು ಮಾಡುತ್ತಾರೆ. ಅವಶ್ಯವಿದ್ದಲ್ಲಿ ದೊಡ್ಡ ದೊಡ್ಡ ಬ್ಯಾಂಕುಗಳ ಡಾಯರೆಕ್ಟರರ, ಗಿರಣಿಗಳ ಮಾಲಕರ, ಕೂಲಿಕಾರ ಹಾಗು ಸರಕಾರದ ಪ್ರತಿನಿಧಿಗಳ ಸಲಹೆಗಳನ್ನೂ ಈ ಮಂಡಳದವರು ತೆಗೆದ ಕೊಂಡು, ತಮ್ಮ ಅಭಿಪ್ರಾಯದೊಂದಿಗೆ ರಿಪೋರ್ಟನ್ನು ಕೌನ್ಸಿಲಕ್ಕೆ ಒಪ್ಪಿಸುತ್ತಾರೆ

ಸಲ್ಲಾಗಾರ ಮಂಡಳಗಳಲ್ಲಿ ಕೆಳಗೆ ಹೇಳಿದವುಗಳು ಸ್ಥಿರ ಸಂಸ್ಥೆಗಳಾಗಿರುತ್ತವೆ :—(೧) ಸೈನ್ಯ, ಹಡಗುಪಡೆ ಮತ್ತು ವೈಮಾನಿಕ ಪ್ರಶ್ನೆಗಳ ಸಂಬಂಧವಾದ ಕಮಿಶನ್ (೨) ರಾಷ್ಟ್ರಪಾಲನ ಸಂಬಂಧವಾದ ಕಮಿಶನ್. (೩) ಮಕ್ಕಳ ಸಂರಕ್ಷಣ ಹಾಗು ಹಿತಸಂಬಂಧವಾದ ಕಮಿಶನ್. (೪) ಅಫು ಹಾಗು ಇತರ ಹಾನಿಕಾರಕ ಪದಾರ್ಥಗಳ ಸಂಬಂಧವಾದ ಕಮಿಟಿ. ಮತ್ತು (೫) ಬೌದ್ಧಿಕ ಸಹಕಾರ ಕಮಿಟಿ. ಈ ಮಂಡಳಗಳಿಗೆ ಯಾವದೊಂದು ವಿಷಯದ ನಿರ್ಣಯ ಮಾಡುವ ಅಧಿಕಾರವಿರುವದಿಲ್ಲ. ರಾಷ್ಟ್ರಸಂಘದ ಬೇರೆ ಬೇರೆ ರಾಜಕೀಯ ಶಾಖೆಗಳಿಗೆ ಬೇಕಾಗುವ ಸಾಧನಸಾಮಗ್ರಿಗಳನ್ನು ತಯಾರಿಸಿ, ಯೋಗ್ಯ ಸಲಹೆಗಳನ್ನು ಕೊಡುವದು ಈ ಮಂಡಳಗಳ ಕೆಲಸವಾಗಿರುವದು.

ಅಂತರ ರಾಷ್ಟ್ರೀಯ ನ್ಯಾಯಮಂದಿರ

ದೇಶದೇಶಗಳಲ್ಲಿಯ ನ್ಯಾಯಗಳನ್ನು ಶಾಂತರೀತಿಯಿಂದ ವಿಚಾರಮಾಡಿ ಯೋಗ್ಯ ನಿರ್ಣಯವನ್ನು ಕೊಡುವದಕ್ಕಾಗಿ, ಮತ್ತು ಅಸೆಂಬ್ಲಿ ಹಾಗು ಕೌನ್ಸಿಲ್‌ಗಳು ಕೇಳಿದ ಯಾವದೊಂದು ನ್ಯಾಯಸಂಬಂಧವಾದ ಅಥವಾ ಕಾಯದೆಗೆ ಸಂಬಂಧಿಸಿದ ವಿಷಯಕ್ಕೆ ಅಭಿಪ್ರಾಯಕೊಡುವದಕ್ಕಾಗಿ **ಹೇಗ** ಎಂಬಲ್ಲಿ ರಾಷ್ಟ್ರಸಂಘದಿಂದ ಸ್ಥಾಪಿಸಲ್ಪಟ್ಟ ಅಂತರರಾಷ್ಟ್ರೀಯ ನ್ಯಾಯಮಂದಿರವಿರುತ್ತದೆ. ೧೯೨೧ನೇ ಇಸವಿಯ ಸಪ್ಟಂಬರ ತಿಂಗಳಲ್ಲಿ ಈ ನ್ಯಾಯಮಂದಿರದ ಯೋಜನೆಗೆ ರಾಷ್ಟ್ರಸಂಘದ ಬಹುತರ ಎಲ್ಲ ಸಭಾಸದರ ಸಮ್ಮತಿಯು ದೊರೆಯಲು, ನ್ಯಾಯಾಧೀಶರು ನೇಮಿಸಲ್ಪಟ್ಟು, ೧೯೨೨ನೇ ಜಾನೇವರಿ ತಿಂಗಳದಲ್ಲಿ ನ್ಯಾಯಮಂದಿರದ ಮೊದಲನೇ ಅಧಿವೇಶನವು ಕೂಡಿತು. ಮತ್ತು ಅದರಲ್ಲಿ ನ್ಯಾಯವಿಚಾರಣೆಯ ಸಂಬಂಧವಾದ ನಿಯಮಗಳು ಮಂಜೂರ ಮಾಡಲ್ಪಟ್ಟವು.

ಮಿ॥ ಆ್ಯಂಡ್ರೂ ಕಾರ್ನೇಜಿ ಇವರ ಹಾಗು ಇತರ ಕೆಲವು ರಾಷ್ಟ್ರಗಳ ಉದಾರ ವಾದ ಧನಸಹಾಯದಿಂದ ಹೇಗದಲ್ಲಿ "ಶಾಂತತಾ ಪ್ರಾಸಾದ" ವೆಂಬ ನ್ಯಾಯ ಮಂದಿರವು ಕಟ್ಟಿಸಲ್ಪಟ್ಟಿರುತ್ತದೆ. ಈ ನ್ಯಾಯ ಕೋರ್ಟಿನಲ್ಲಿ ೧೫ ಜನ ನ್ಯಾಯಾಧೀಶರೂ ನಾಲ್ಕು ಜನ ಉಪನ್ಯಾಯಾಧೀಶರೂ ಇರುತ್ತಾರೆ. ನ್ಯಾಯಾಧೀಶರು ಕೌನ್ಸಿಲ್ ಹಾಗು ಅಸೆಂಬ್ಲಿಗಳ ಬಹುಮತದಿಂದ ಆರಿಸಲ್ಪಡುತ್ತಿದ್ದು, ಅವರ ಅವಧಿಯು ಒಂಬತ್ತು ವರುಷವಿರುತ್ತದೆ. ನ್ಯಾಯಾಧೀಶರು ತಮ್ಮತಮ್ಮೊಳಗೆ ಪ್ರತಿ ಮೂರು ವರುಷಗಳಿಗೊಮ್ಮೆ ಅಧ್ಯಕ್ಷ, ಉಪಾಧ್ಯಕ್ಷ, ರಜಿಸ್ಟ್ರಾರ ಮತ್ತು ಡೆಪೂಟಿ ರಜಿಸ್ಟ್ರಾರ ಇವರನ್ನು ಆರಿಸುತ್ತಾರೆ. ಅಧ್ಯಕ್ಷ ಮತ್ತು ರಜಿಸ್ಟ್ರಾರ ಇವರು ಹೇಗದಲ್ಲಿಯೇ ಸ್ಥಿರವಾಗಿ ಇರಬೇಕಾಗುತ್ತದೆ. ಪ್ರತಿವರುಷ ಜೂನ ೧೫ನೇ ತಾರೀಖಿಗೆ ನ್ಯಾಯ ಮಂದಿರದ ಸಾಮಾನ್ಯ ಸಭೆಯು ಕೂಡುತ್ತದೆ. ಆದರೆ, ಕೆಲಸದ ಮಹತ್ವದ ಮೇಲಿಂದ ಈ ನ್ಯಾಯ ಕೋರ್ಟು ಬೇಕಾದಾಗ್ಗೆ ಕೂಡಬಹುದು. ಕಳೆದ ಹತ್ತು ವರುಷಗಳಲ್ಲಿ, ಈ ನ್ಯಾಯಮಂದಿರವು ೨೦ ಸಾರೆ ಕೂಡಿರುವುದು.

ಅಂತರ ರಾಷ್ಟ್ರೀಯ ಮಜೂರ ಸಂಸ್ಥೆ

ಗಿರಣಿಗಳಲ್ಲಿ ಮತ್ತು ಅನೇಕ ಉದ್ಯೋಗಗಳಲ್ಲಿ ಕೆಲಸಮಾಡುವ ಜನರ ಸಂರಕ್ಷಣೆಯ ದೆಶೆಯಿಂದ ಈ ಸಂಸ್ಥೆಯು ಸ್ಥಾಪಿಸಲ್ಪಟ್ಟಿರುವದು. ಇದೊಂದು ಸ್ಥಿರ ಸಂಸ್ಥೆಯಾಗಿದ್ದು, ರಾಷ್ಟ್ರಸಂಘದ ಸಭಾಸದ ದೇಶಗಳೆಲ್ಲ ಇದರ ಸಭಾಸದರಾಗಿರುವರು. ೧೯೧೯ ನೇ ಇಸವಿಯಲ್ಲಿ ಬರ್ನ ಎಂಬಲ್ಲಿ ಅಂತರರಾಷ್ಟ್ರೀಯ ಮಜೂರ ಪರಿಷತ್ತು ಕೂಡಿಸಲ್ಪಟ್ಟು, ಜಗತ್ತಿನ ಬೇರೆ ಬೇರೆ ದೇಶಗಳಲ್ಲಿರುವ ಮಾಲಕರು ಹಾಗು ಕೂಲಿಕಾರರು ಇವರ ಪರಸ್ಪರ ಸಂಬಂಧವು ಹೇಗಿರಬೇಕು? ಕೂಲಿಕಾರರು ಕೆಲಸ ಮಾಡತಕ್ಕ ವೇಳೆ, ಅವರ ಪಗಾರ ಅಥವಾ ಕೂಲಿ, ಎಷ್ಟಿರಬೇಕು? ರಾಷ್ಟ್ರಸಂಘವು ಇವೆಲ್ಲ ಸಂಗತಿಗಳಬಗ್ಗೆ ಹೇಗೆ ಮೇಲ್ವಿಚಾರಣೆಯನ್ನು ಮಾಡಬೇಕು? ಎಂಬ ಅಂಶಗಳನ್ನು ವಿಚಾರಿಸಿ ರಿಪೋರ್ಟು ಮಾಡುವದಕ್ಕಾಗಿ ಹದಿನೈದು ಜನರ ಒಂದು ಕಮಿಶನ್ನು ನೇಮಿಸಲ್ಪಟ್ಟಿತು. ಆ ಕಮಿಶನ್ನದವರು ಸಾಮಾನ್ಯವಾದ ತತ್ವಗಳನ್ನು ಸಿಫಾರಸಮಾಡಿದರಲ್ಲದೆ, ಜಿನೀವ್ಹಾದಲ್ಲಿ ಅಂತರರಾಷ್ಟ್ರೀಯ ಮಜೂರ ಕಚೇರಿಯು ಇರತಕ್ಕದ್ದೆಂದೂ, ಪ್ರತಿವರುಷ ಅಂತರರಾಷ್ಟ್ರೀಯ ಮಜೂರ ಪರಿಷತ್ತು ಕೂಡಿಸಲ್ಪಡಬೇಕೆಂದೂ ತಮ್ಮ ಸ್ಪಷ್ಟವಾದ ಅಭಿಪ್ರಾಯ

ವನ್ನು ಕೊಟ್ಟರು. ಈ ತತ್ವಗಳಿಗೂ, ಕಮಿಶನದವರ ಯೋಜನೆಗೂ ರಾಷ್ಟ್ರ ಸಂಘದ ಬಹುತರ ಎಲ್ಲ ಸಭಾಸದರ ಸಮ್ಮತಿಯು ದೊರೆತಿರುವದು.

ರಾಷ್ಟ್ರಸಂಘದ ಅಸೆಂಬ್ಲಿಯಂತೆಯೇ ಮಜೂರ ಸಂಸ್ಥೆಯ ಮಜೂ ಪರಿಷತ್ತು ಇರುತ್ತದೆ. ಅಸಂಬ್ಲಿಯ ಕಾರ್ಯಕಾರೀ ಮಂಡಳವಾದ ಕೌನ್ಸಿಲದಂತೆ ಮಜೂರ ಪರಿಷತ್ತಿಗೂ "ನಿಯಂತ್ರಣ ಮಂಡಳ" ವೆಂಬ ಕಾರ್ಯಕಾರೀ ಸಭೆಯು ಇರುತ್ತದೆ. ಮಜೂರ ಪರಿಷತ್ತಿಗೆ ಪ್ರತಿಯೊಂದು ಸಭಾಸದ ದೇಶದಿಂದ ನಾಲ ಪ್ರತಿನಿಧಿಗಳನ್ನು ಕಳಿಸುವ ಅಧಿಕಾರವದೆ. ಈ ನಾಲ್ವರಲ್ಲಿ ಇಬ್ಬರು ಸರಕಾರೀ ಪ್ರ ನಿಧಿಗಳು, ಒಬ್ಬರು ಗಿರಣೀ ಮಾಲಕರ ಪ್ರತಿನಿಧಿ, ಒಬ್ಬರು ಕೂಲಿಕಾರ (ಮಜೂ ಜನರ ಪ್ರತಿನಿಧಿ ಇರುವರು. ನಿಯಂತ್ರಣ ಮಂಡಳದಲ್ಲಿ ೨೪ ಜನ ಸಭಾಸದರಿದ್ದು ಅವರಲ್ಲಿ ಹನ್ನೆರಡು ಜನರು ಸರಕಾರೀ ಪ್ರತಿನಿಧಿಗಳು, ೬ ಜನರು ಮಾಲಕರವ ಯಿಂದ ಉಳಿದ ಆರು ಜನರು ಕೂಲಿಕಾರರ ವತಿಯಿಂದ ಪ್ರತಿನಿಧಿಗಳು ಇರುತ್ತಾ ಈ ಮಂಡಳದ ಅವಧಿಯು ಮೂರು ವರುಷಗಳದಿದ್ದು, ಈ ಅವಧಿಯಬಗ್ಗೆ ತಮೊ ಳಗೆ ಒಬ್ಬ ಅಧ್ಯಕ್ಷನನ್ನು ಆರಿಸುವರು. ಮಜೂರ ಕಚೇರಿಯ ಡಾಯರೆಕ್ಟರನೆ ಈ ಮಂಡಳದ ಮುಖ್ಯ ಕಾರ್ಯದರ್ಶಿಯಾಗಿರುತ್ತಾನೆ.

ರಾಷ್ಟ್ರಸಂಘಕ್ಕೆ ಅನೇಕ ಸಹಾಯಕ ಸಂಸ್ಥೆಗಳಿರುವಂತೆ, ಮಜೂ ಸಂಸ್ಥೆಗೂ ಕೆಲವು ಮಹತ್ವದ ಸಹಾಯಕ ಕಮಿಟಿಗಳಿರುವವು. ಅವುಗಳಲ್ಲಿ (' ಕೂಲಿಕಾರ ಪಗಾರ, ಕೂಲಿ ಸಂಬಂಧವಾದ ಕಮಿಟಿ, (೨) ಆರೋಗ್ಯಸಂಬಂ ವಾದ ಕಮಿಟಿ, (೩) ನಿರುದ್ಯೋಗ ಸಂಬಂಧವಾದ ಕಮಿಟಿ, (೪) ಶೇತಕೀ ಸ ಗಾರ ಕಮಿಟಿ, ಕೂಲಿಕಾರರ ಸ್ಥಾನಾಂತರ ಕಮಿಟಿ, (೫) ಕೂಲಿಕಾರರ ಸ್ಥಿತಿ ಮೇಲ್ವಿಚಾರಕ ಕಮಿಟಿ ಮೊದಲಾದವುಗಳು ಮುಖ್ಯವಾಗಿರುವವು. ರಾಷ್ಟ್ರ ಘವು ಜಗತ್ತಿನ ರಾಜಕೀಯ ಸ್ಥಿತಿಯನ್ನು ಸುಧಾರಿಸಲಿಕ್ಕೆ ಪ್ರಯತ್ನಮಾಡುವಂ ಮಜೂರ ಸಂಸ್ಥೆಯು ಅಂತರರಾಷ್ಟ್ರೀಯ ಸಾಮಾಜಿಕ ಪರಿಸ್ಥಿತಿಯನ್ನೂ, ಆರ್ಥಿ ಸ್ಥಿತಿಯನ್ನೂ ಸುಧಾರಿಸುವದರಲ್ಲಿ ವಿಶೇಷ ಸಹಕಾರಿಯಾಗುವದೆಂಬ ಮಾತಿ ಏನೂ ಸಂಶಯವಿಲ್ಲ.

ಅಂತರ ರಾಷ್ಟ್ರೀಯ ಮಜೂರ ಸಂಸ್ಥೆಯ ೯ ತತ್ವಗಳನ್ನೂ, ರಾಷ್ಟ್ರಸಂಘ ಕರಾರನಾಮೆಯ ಮುಖ್ಯ ಕಲಮುಗಳನ್ನೂ ಕುರಿತು ಇನ್ನೊಮ್ಮೆ ಬರೆಯುವೆ

ಶ್ರೀರಾಮಚರಿತವು

(ಅಯೋಧ್ಯಾಕಾಂಡವು)

[ಪೂರ್ವಾರ್ಧವು ೧೧ ಅಧ್ಯಾಯಗಳು ಸುಮಾರು ೫೦೦ ಪದ್ಯಗಳು]

ಕವಿ:— ಸಾಲಿ ರಾಮಚಂದ್ರರಾಯರು ಬಿ.ಎ ,

ಧಾರವಾಡ ಮೋಹನಮುದ್ರಣಾಲಯದ ಮುದ್ದಾದ ಮುದ್ರಣ. ಕ್ಯಾಲಿಕೋ ಬೈಂಡು; ಬೆಲೆ ೧೨ ಆಣೆ ಮಾತ್ರ.

ಇದು ಸಾಲಿ ರಾಮಚಂದ್ರರಾಯರು ರಚಿಸುತ್ತಿರುವ ರಾಮಾಯಣದ ಅಯೋಧ್ಯಾಕಾಂಡದ ಭಾಗವು. ಇದರಲ್ಲಿ ಶ್ರೀರಾಮನಿಗೆ ದಶರಥನು ಯುವರಾಜ ಪಟ್ಟವನ್ನು ಕಟ್ಟಬೇಕೆಂದು ಪ್ರಯತ್ನಿಸುವುದು, ಅದಕ್ಕೆ ಕೈಕೇಯಿಯು ಅಡ್ಡಿಯನ್ನೊಡ್ಡುವುದು, ರಾಮನು ವನಕ್ಕೆ ತೆರಳುವುದು ಈ ಕಥೆಯಿದೆ. ಮೊದಲನೆಯದಾದ ಬಾಲಕಾಂಡದ ಪರಿಚಯವುಳ್ಳ, ಅದರ ತಿರುಳನ್ನರಿತ ವಾಚಕರಿಗೆ ಈ ಅಯೋಧ್ಯಾಕಾಂಡವು ತೀರ ಹೊಸದಲ್ಲವೆಂದು ಹೇಳಬಹುದು. ಅದೇ ಧ್ವನಿ, ಅದೇ ನಾದ, ಅದೇ ಇಂಪು.

ಆರಂಭದ ಶ್ರೀರಾಮನ ಪ್ರಸಂಗೋಚಿತ–ಸುಗುಣಗುಣಸ್ತವನವೇ ಪಾಠಕರನ್ನು ಪಠಣಕ್ಕೆ ಅಭಿಮುಖೀಕರಿಸಿಕೊಳ್ಳುತ್ತಿದೆ; ಕಿವಿಯಲ್ಲಿ ಅನುರಣಿಸುತ್ತಿದೆ.

“ ಎನಿತೋ ದಶರಥ ಜನಪನ ಸುಕೃತವು । ಅನುಪಮ ಗುಣಿ ರಾಮನು ಮಗನವನಾ ॥
ಭ್ರಾಜತ್ತತ್ವನು । ರಾಜಸುತನುತಾ । ರಾಜಿಸುತಿರುವನು । ತೇಜದರಾಶಿ ॥
ದಾಂತನು ಬಾಹ್ಯಾ । ಭ್ಯಂತರ ಶುಚಿ । ಯತ್ಯಂತಕುಶಲಮತಿ । ಶಾಂತಪ್ರಕೃತಿ ॥
ಪಿತೃಶುಶ್ರೂಷಾ । ರತಿಯವನುಕುಲೋ । ಚಿತಮತಿಭಾಸ್ವತ್ । ಪ್ರತಿಭಾಶಾಲಿ ॥
ಮೃದುಭಾಷಿ ಕಲಾ । ವಿದನು ಸಮುನ್ನತ । ಹೃದಯನುಕಂಗೊಳಿ । ಸಿದನು ದಯಾಬ್ಧಿ ॥ ಅಧ್ಯಾ. ೧, ೨-೬

ರಾಜನಾಗುವವನಿಗೆ ಇಷ್ಟಿದ್ದರೆ “ ಎನಿತೋ ದಶರಥಜನಪನ ಸುಕೃತವು ” ಎಂದೇ ಏಕೆ, ಎನಿತೋ...... ಜನಪದ ಸುಕೃತವು ಎಂದು ಹೇಳುವುದಕ್ಕೆ ಅನುಮಾನವೇಕೆ ?

ಕರ್ನಾಟಕ ಕಾಲೇಜಿನ ಕನ್ನಡ ಪ್ರೊ. ಶ್ರೀ. ಏ. ಟಿ. ಸಾಸನೂರ ಎಂ. ಏ ಅವರು ಇದರ ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ:—ಬಾಲಕಾಂಡದ ಅಂತರ್ಬಾಹ ಸೌಂದರ್ಯಗಳಿಗೆ ಮನಸೋತು ಹಲವರು ಮನವಾರೆ ಹೊಗಳುತ್ತಿರುವದನ್ನ ನೋಡಿದರೆ ಇಂತಹ ಕಾವ್ಯವೊಂದು ಜನತೆಗೆ ಬೇಕಾಗಿತ್ತೆಂಬದು ಸ್ಪಷ್ಟವಾಗುವ ರಿಂದ ಈ ಅಯೋಧ್ಯಾಕಾಂಡವಾದರೂ ಮೆಚ್ಚುಗೆಯನ್ನು ಪಡೆಯಬಹುದು ಇಲ್ಲಿ ಶ್ರೀಮಾನ್ ಸಾಲಿಯವರ ಕಾವ್ಯಗಳಲ್ಲಿ ಸಾಮಾನ್ಯವಾಗಿ ತೋರುವ ಸೊಗಸೆ ಲ್ಲವೂ ಇರುವದಲ್ಲದೆ ಶ್ರೀರಾಮನ ಉದಾತ್ತಜೀವನವು ಇನ್ನೂ ಸ್ಫುಟವಾಗಿರುವ ದೊಂದು ವಿಶೇಷವಾಗಿದೆ. "ಸದ್ಗುಣಧಾಮನಾಗಿ" "ಲೋಕಕ್ಷೇಮಾವಹ" ನಾಗಿರುವ ಈ ಮಹಾಮಹಿಮನು ತಂದೆಯೊಡನೆ, ತಾಯಂದಿರೊಡನೆ, ತಮ್ಮಂದಿರೊಡನೆ, ಸೀತೆಯೊಡನೆ, ಇನ್ನಿತರರೊಡನೆ ವರ್ತಿಸುವ ಉಚಿತವಾದ, ಉದಾರವಾದ, ನಯವಾದ ರೀತಿಯನ್ನು ನೋಡಿದರೆ, ಅವನ ಜೀವನದ ರಹಸ್ಯವೇ ಹೊಳೆಯುವಂತಿದೆ." ಈ ಮಾತು ಗಳಲ್ಲಿ ಅವರು ಈ ಕಾವ್ಯದ ಆಸ್ವಾದ ಸಾಮಗ್ರಿಯ ಬಹುಭಾಗವನ್ನು ಓದುಗರಿಗೆ ಸೂಚಿ ಸಿರುವರು. ಪ್ರೊ. ಸಾಸನೂರರವರು ಶ್ರೀರಾಮನ ಉದಾತ್ತಜೀವನವು ಈ ಕಾವ್ಯ ದಲ್ಲಿ ಒಡಮೂಡಿದೆಯೆಂದು ಹೇಳಿರುವುದು ಯಥಾರ್ಥವಾಗಿದೆಯೆಂಬುವನ್ನು ಪಟ್ಟಾ ಭಿಷೇಕ ಸಮಾಚಾರದಂತಹ ಸಂಪತ್ತಿನಲ್ಲಿಯೂ ಉಬ್ಬದ, ವನವಾಸಕ್ಕೆ ತೆರಳಬೇಕಾದ ಸಂದರ್ಭದಂತಹ ವಿಪತ್ತಿನಲ್ಲಿಯೂ ಕುಗ್ಗದ, ಏಕರೂಪವಾದ ಆತನ ಮನಃಸ್ಥಿತಿಯ ವರ್ಣನೆ ಮೊದಲಾದ ಸಂದರ್ಭಗಳನ್ನು ಓದಿ ಮನಗಾಣಬಹುದಾಗಿದೆ. ರಾಮನ ಹೊರತು ಉಳಿದ ವ್ಯಕ್ತಿಗಳ ಸ್ವಭಾವವೂ ಉಚಿತವಾಗಿ ಚಿತ್ರಿಸಲ್ಪಟ್ಟಿದೆ. ದಶರಥಮಹಾ ರಾಜನು ಮಗನಿಗೆ ಯುವರಾಜಪಟ್ಟವನ್ನು ಕಟ್ಟುವ ಸಂದರ್ಭದಲ್ಲಿ ಸಾಮಂತರು, ಸಚಿವರು, ಮಾನ್ಯರು ಮೊದಲಾದವರನ್ನು " ಬೇಕೈ ನಿಮ್ಮನುಮತಿಯಿದಕೆ " ಎಂದು ಕೇಳಿಕೊಳ್ಳುವನು. ಮಹಾರಾಣಿ ಕೌಸಲ್ಯೆಯು, ಮಗನ ಪಟ್ಟಾಭಿಷೇಕದಂತಹ ಆನಂದೋದ್ರೇಕದ ಪ್ರಸಂಗದಲ್ಲಿಯೂ, ಉಬ್ಬದೆ ತನ್ನ ನಿತ್ಯದ ಈಶ್ವರಾರಾಧನೆ ಯಲ್ಲಿ ಮಗ್ನೆಯಾಗಿರುವಳು. ರಾಮನು ಪಟ್ಟಾಭಿಷೇಕದ ಸಮಾಚಾರವನ್ನು ಹೇಳಲು ಬಂದಾಗ ಆಕೆಯ ಸ್ಥಿತಿ—

ಸ್ಥಿರಭಕ್ತಿಯಲೀ । ಸ್ವರ ಚಿಂತನದಲಿ । ಬೆರೆತಿರುವಳು ಮೈ । ಯ್ಮರೆತಿಹಳವಳು
॥ ೨೩ ॥

ಕಿರುನಗೆ ಮೊಗದಲಿ । ಮಿರುಗುತಲಿರುವುದು । ಅರೆಗಣ್ಣಿಂದಲಿ । ಹರಿವುದು
ಜಲವು ॥ ೨೪ ॥

ಇಂತಹ ಜೀವನ ಮಹಿಮೆಯನ್ನು ಕಂಡು ರಾಮನು ಕೂಡ-" ಜನಿಸಿದೆನಿವಳಲದೆನಿತು ಸುಕೃತಿಯೊ " ಎಂದು ತಾನು ಆಕೆಯ ಒಡಲಲ್ಲಿ ಜನಿಸಿದುದಕ್ಕೆ ಧನ್ಯತೆಯನ್ನು ತೋರ್ಪಡಿಸುತ್ತಾನೆ. ಪಟ್ಟಾಭಿಷಿಕ್ತನಾಗಲಿರುವ ಮಗನಿಗೆ ಆಕೆ ಮಾಡಿದ ಉಪದೇಶವನ್ನು ನೋಡಿರಿ—

"...... ....ಮಗು ಬಾಳ್ವೆಸುಕೃತಿಗೆ ನೆಲೆಯಾಗಿ ॥ ೨।೧೪ ॥
ಸಿರಿಯಿರಲಿರದಿರ। ಲಿರದು ಕೊರತೆ ಸ। ಚ್ಚರಿತವು ಬಾಳಿನ। ತಿರುಳ್ವೆರಾಮಾ ॥ ೨।೧೫ ॥
ನೆನೆ ರಘುಕುಲಜಾ। ತನು ದಶರಥತನ। ಯನು ಜನಕನಿಗಳಿ। ಯನು ನೀನೆಂದು ॥ ೨।೧೬ ॥
ಶಿವಮಸ್ತು ಸದಾ। ತವರಾಮ ತನೂ। ಭವ"... ॥ ೨।೧೭ "

ಎಷ್ಟು ಸಣ್ಣ ಉಪದೇಶವು ಎಷ್ಟೊಂದು ಅರ್ಥವನ್ನು ಒಳಗೊಂಡಿದೆ!

ಮಂಥರೆಯೆಂಬ ದಾಸಿಯ ದುರುಪದೇಶಕ್ಕೆ ಕಿವಿಯೊಡ್ಡಿದುದೇ ರಾಮನ ವನವಾಸದ ಕಾರಣವಷ್ಟೇ! ಆ ಉಪದೇಶವು ಅಷ್ಟು ಬೇಗನೆ ಸಂಕ್ರಮಿಸುವದಕ್ಕೆ ಅದು ಅಷ್ಟೊಂದು ಸಯುಕ್ತಿಕವಾಗಿರುವದೇ ಕಾರಣವಾಗಿದೆ. ವಿಸ್ತರ ಭಯದಿಂದ ಆ ಉಪದೇಶವನ್ನು ಇಲ್ಲಿ ಕೊಡಲಿಲ್ಲ. (೩. ೫–೧೪) ಕೈಕೇಯಿಯು ಸ್ವಭಾವದಿಂದ ಒಳ್ಳೆಯವಳು; ಮಂಥರೆಯ ಉಪದೇಶದಿಂದ ಆಕೆಯಲ್ಲಿ ತಾತ್ಕಾಲಿಕ ವಿಕಾರವುಂಟಾಗಿದೆಯೆಂಬುದು ಒಂದೇ ಪದ್ಯದಿಂದ ಸೂಚಿತವಾಗಿದೆ—

" ಅದೊ ಮಂಥರೆ ಹರ। ಮಿದ ಬಲೆಯೊಳು ಸಿಲು। ಕಿದಳಕಟಾ ಅರಿ। ಯದೆ ಕೈಕೇಯಿ " ॥ (೩–೧೫)

ಪ್ರಪಂಚದಲ್ಲಿ ಸ್ತ್ರೀಯ ಮಹತ್ವವು ಎಷ್ಟೆಂಬುದು ಒಂದೆಡೆ ಯಥಾರ್ಥವಾಗಿ ಚಿತ್ರಿತವಾಗಿದೆ ನೋಡಿರಿ—

" ಈ ಮನುಜನಿಗಾ। ರಾಮವ ನೀವಳು। ಸ್ತ್ರೀ ಮಾರ್ದವವನು। ಕೋಮಲತೆಯನು " ॥ (೫–೩)

" ಸರಸತೆ ಜಗಕೊದ। ವಿರುವುದು ವನಿತೆಯು। ರಿರವಿಂದವರಿಂ। ದಿರವಿಗೆ ಚೆಲುವು " ॥ (೫,೪)

ಸಂಸ್ಕೃತ ಅನುಷ್ಟುಪ್ ವೃತ್ತಕ್ಕಿಂತ ಸಣ್ಣದಾದ ವೃತ್ತದಿಂದ ದೊಡ್ಡ ಭಾವವನ್ನು ಪ್ರಕಟಿಸುವ ಕವಿಕೌಶಲ್ಯವು ವರ್ಣನೀಯವಾಗಿದೆ. ಕೆಳಗಿನ ಮಾತುಗಳಲ್ಲಿ ಈ ಅರ್ಥಗಾಂಭೀರ್ಯವನ್ನು ನೋಡಬಹುದಾಗಿದೆ—

ಪತಿಸತಿಯೆಂಬೀ । ದ್ವಿತಯದ ಜೀವದ । ಸ್ಥಿತಿ ಸುಖಗಳ ಸು । ಸ್ಥಿತಿಯ ಹುದಹುದು" ॥ (೮–೨)

ಮೊದಲೆರಡಿರುವಾ । ಹೃದಯಗಳೊಂದ । ಪ್ಪುದ ಕಿರುವುದದಾ । ವುದು ಕಾರಣವು ॥ (೮–೩)

ಎರಡೊಂದಾಗಲು । ಸರಸವು ಜೀವವು । ವಿರಸವದಹುದೊಂ । ದೆರಡಾದೊಡನೆ" ॥ (೮–೪)

ಸೀತಾದೇವಿ ರಾಮನೊಡನೆ ವನಕ್ಕೆ ಹೊರಡುವುದನ್ನು ನಿರ್ಧರಿಸಿ ಸಂಗಡ ಕರೆದೊಯ್ಯುವೆನೆಂದು ಆತನು ಅಭಿವಚನವನ್ನೀಯಲು ಆಕೆ—

"ಇದು ನಲ್ಲನ ನುಡಿ । ಯಿದು ರಾಮನ ನುಡಿ । ಇದು ನುಡಿಯೆನ್ನಯ । ಹೃದಯೇಶ್ವರನಾ" ॥ (೮,೪೦)

ಎಂದು ಆನಂದಿತಳಾಗುವಳು. ರಾಜ್ಯವೆಲ್ಲ ಭರತನದಾಗಿರಲು ಆಗ ಆಕೆಗೆ ತನ್ನ ಅರಮನೆಯು ಅನ್ಯರದಾಗಿ ತೋರುತ್ತಿದೆ. "ಎಲೆ ಎನಿತಚ್ಚರಿ । ನಿಲಯವಿದನ್ಯರ । ನಿಲಯದ ಪೋಲೀ । ಗಲೆ ತೋರುವುದು" ॥ (೮,೪೧)

ಇದಲ್ಲದೆ ಅರಮನೆಯ ಐಶ್ವರ್ಯಭೋಗವು ನೀರಸವಾಗಿ ತೋರುತ್ತಿದೆ

"ನಲ್ಲನದಲ್ಲದ । ಬೆಲ್ಲವು ನೀರಸ । ವಲ್ಲವೆ ಆತನ । ನಲ್ಲಳಬಾಯ್ಗೆ" ॥ (೮,೪೨)

ಅರ್ಧಾಂಗಿಯಾದ ಪತ್ನಿಯ, ಮತ್ತು ಪ್ರೇಮದ ಪತಿಯ ಚಿತ್ರವನ್ನು ಕವಿಯು ೮ನೆಯ ಅಧ್ಯಾಯದಲ್ಲಿ ಬಹು ಸೊಗಸಾಗಿ ಚಿತ್ರಿಸಿರುವನೆಂದು ಹೇಳಬಹುದು. ಆದುದರಿಂದ ಇಡಿ ೮ನೆಯ ಅಧ್ಯಾಯವು ಮತ್ತೆಮತ್ತೆ ಓದಬೇಕೆಂದೆನಿಸುವಂತಿದೆ

ಶ್ರೀಯುತ ಸಾಲಿರಾಮಚಂದ್ರರಾಯರ ಕೈ "ಸೋಪಡಗಿದ ಕೈ" ಅವರ ರಸ ಪಾಕವು ಕನ್ನಡಿಗರ ಹಸಿದ ಒಡಲನ್ನು ತಣಿಸಲೆಂದು ಹಾರೈಸುವೆವು.

೨೫–೧–೩೬
ಟ್ರೇ. ಕಾ. ಧಾರವಾಡ. } ಮ. ಪ್ರ. ಪೂಜಾರ

ಪ್ರಕಟನೆ

ಬುಕ್ ಕಮಿಟಿ ಧಾರವಾಡ ಇವರು ಮಂಜೂರ ಮಾಡಿದ ಪುಸ್ತಕಗಳ ಯಾದಿಯು ಫೇಬ್ರುವರಿ ೧೯೩೬

ನಂ.	ಪುಸ್ತಕಗಳ ಹೆಸರು	ಗ್ರಂ. ಕ. ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ	ಇ. ಸಾ. ರ ನಂ.	ಡಾ. ಸಾ. ರ. ನಂ.
೧	ಹೊಸ ಅಂಕಗಣಿತ ಭಾ. ೧. ೧೯೩೫	ಮಿ. ರಾಘವೇಂದ್ರ ಮಲ್ಯ	ಮಿ. ರಾಘವೇಂದ್ರ ಮಲ್ಯ ಟೀಚರ ೧. ಅ. ಹೈ. ಬೆಳಗಾವ	೦–೬–೦	ಪ್ರಾ. ಶಾ. ಗಳ ಟೆಕ್ಸ್ಟ ಬುಕ್ಕಾಗಿ	47/P.7864 / 20.2-36	S.86 c-641-c / 10-2-36
೨	ಅಂಕಗಣಿತ ಇನೆಯ ಇಯತ್ತೆಗಾಗಿ ೩ನೆ ಆವೃತ್ತಿ ೧೯೩೫	ಮಿ. ಬಿ. ಎಸ್ ಪುರೋಹಿತ ಅಸಿ। ಟೀಚರ ಟ್ರೇ. ಸ್ಕೂ. ಧಾರವಾಡ	ಮಿ. ಆರ್. ಎಸ್. ಪುರೋಹಿತ ಗಿಬ್ಬ ಟೌನ ಧಾರವಾಡ	೦–೬–೦	,,	7866 / ಸದರ	S.86-c-649-c / 8-2-36
೩	ಮಧುವನ ೧೯೩೫ ರ ಆವೃತ್ತಿ	ಎಡಿಟರ ಕಿರಿಯರ ಪ್ರಪಂಚ	ಕಿರಿಯರ ಪ್ರಪಂಚ ಉಡುಪಿ ಚಲೋದು	೧–೮–೦ ೨–೦–೦	ಪ್ರಾ. ಶಾ. ಟ್ರೇ. ಸ. ಗಳ ವಿ. ಗಳ ಶಿ. ರ. L ಬು. ಮಾ. ಶಾ. ಗಳ ಶಿ. ರ. L ಬುಕ್ಕಾಗಿ	ಸದರ 7860 / ಸದರ	ಸದರ 646 / 13/2/36
೪	ಪ್ರಪಂಚಪರಿಚಯ ೧೯೩೫ ಆವೃತ್ತಿ	ಮಿ. ಡಿ. ನರಸಿಂಹ ಎಮ್. ಎಸ್. ಸಿ. ಬಿ. ಕಾಮ್ ಪ್ರಿ೩ಲ ಮೈಸೂರ	ಕೆ. ಎ. ಚೌರಪ್ಪ ಮತ್ತು ಸನ್ಸ ಬೆಂಗಳೂರ ಸಿಟಿ	೦–೬–೦	ಸದರ ಮಾ. ಶಾ. ವಿ. L	ಸದರ 7878 / 20.2-36	ಸದರ 639-c / 10/2/36

ಯೋಗಮಕರಂದ ೧೯೩೫ರ ಆವೃತ್ತಿ	ಟ. ಕೃಷ್ಣಮಾಚಾರ ಮೈಸೂರ	ಗ್ರಂ. ಕರ್ತರು	೨-೮-೦	ಸದರ ಸದರ	ಸದರ 7884 / 20 2-36	ಸದರ 637 c / 4-2-36
ಪೈಗಂಬರ ಹಜರತ್ ಮುಹಮ್ಮದ ಇವರ ಚಿಕ್ಕ ಚರಿತ್ರ ೧೯೩೫	ಮಿ. ಮುಹಮ್ಮದ ಓಮರ, ರೀಡರ ಟು ದಿ. ಡಿ. ಎಸ್. ಪಿ. ವಿಜಾಪೂರ	ಡರೂಲ್ ಇಸಾಯತ್ ೩೦, ಮುಸ್ಲೀಮ್ ಹಾಲ್ ರೋಡ ಬೆಂಗಳೂರ ಸಿಟಿ	೦-೨-೦	ಪ್ರಾ. ಶಾ. ಗಳ ಟ್ರೇ. ಸಂ. ಗಳ ಮಾ. ಶಾ. ಗಳ ವಿ. ಗಳ L ಬುಕ್ಕಾಗಿ	ಸದರ 7856 / 20-2-36	ಸದರ 643 c / 10-2-36
ಸ್ವತಂತ್ರ ಜೀವನೋಪಾಯ ೨ನೆ ಆ. ೧೯೩೫	ಮ್ಯಾನೇಜರ ಕಿರಿಯರ ಪ್ರಪಂಚ ಉಡುಪಿ	ಕಿರಿಯರ ಪ್ರಪಂಚ ಉಡುಪಿ	೦-೨-೬	ಪ್ರಾ. ಶಾ. ಹಾಗು ಟ್ರೇ. ಸಂ. ಗಳ ಮಾ. ಶಾ. ವಿ. ಗಳ L ಬುಕ್ಕಾಗಿ	47/P 7874 / ಸದರ	S.86 c 647 c / 4-2-36
ಇಸ್ಲಾಮು ಧರ್ಮದ ಬಗ್ಗೆ ಪ್ರಶ್ನೋತ್ತರ ಮಾಲೆ	ಮಿ. ಮುಹಮ್ಮದ ಓಮರ, ರೀಡರ ಟು. ದಿ. ಡಿ. ಎಸ್. ಪಿ. ವಿಜಾಪುರ	ದಿ. ಅಂಜುಮನ್-ಎ ಟಾಸ್ಲೀಫ್-ವ-ತಲೀಫ, ಕರ್ನಾಟಕ, ವಿಜಾಪೂರ	೮-೧೧-೩	ಸದರ	,,7868 / ಸದರ ಮುಂದಿನ ಆವೃತ್ತಿಯಲ್ಲಿ ಕಾಗದ ಅಚ್ಚು ಸುಧಾರಿಸಬೇಕು.	ಸದರ 644 c / 10-2-36
ಕುರಾನೆ ಕರೀಮ ೧೯೩೪ರ ಆ.	ಸದರ	ದರೂಲ್ ಇಸ್ಲಾಯತ್ ಮು. ಹಾಲ್ ರೋಡ ಬೆಂಗಳೂರ	೦-೩-೦	ಸದರ	7870 / ಸದರ	ಸದರ 645 / ಸದರ
ಸಂಶಯ ಪಿಶಾಚಿ ೩ನೆ. ಆ. ೧೯೩೪	ದಿ. ಮ್ಯಾನೇಜರ ಕಿರಿಯರ ಪ್ರಪಂಚ	ಕಿರಿಯರ ಪ್ರಪಂಚ ಉಡುಪಿ	೦-೬-೦	ಸದರ	"7872 / ಸದರ	ಸದರ 648-c. / 4-2-36

	ಪುಸ್ತಕಗಳ ಹೆಸರು	ಗ್ರಂ ಕ. ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ	ಇ. ಸಾ. ರ. ಸಂ.	ಡಾ. ಸಾ. ರ. ನಂಬರ
೧	ಸರಸ್ವತಿ ವಿಜಯ ೧೯೩೩ರ ಆವೃತ್ತಿ	ಮಿ. ಎ. ಆರ್. ಶಿವನಾಗಪ್ಪ ಬುಕ್ ಸೇಲರ ಹುಬ್ಬಳ್ಳಿ	ಎ. ಆರ್. ಶಿವನಾಗಪ್ಪ ಬುಕ್‌ಸೇಲರ ಹುಬ್ಬಳ್ಳಿ	೦-೪-೦	ಪ್ರಾ. ಶಾ. ಗಳ ಮಾ. ಶಾ. ಗಳ ವಿ. ಗಳ L ಬುಕ್ಕಾಗಿ	ಸದರ 7858 / ಸದರ	ಸದರ 640 / 10-2-36
೨	ಗಣಿತ ಶಿಕ್ಷಕ ೧೯೩೫ರ ಆವೃತ್ತಿ	ಮಿ. ಬಿ. ಡಿ. ಹಿರೇಮಠ ಟೀಚರ ವಿಜಾಪೂರ	ಬಿ. ಡಿ. ಹಿರೇಮಠ ಕನ್ನಡ ಶಾಲಾ ವಿಜಾಪೂರ	೦-೧೪-೦	ಪ್ರಾ. ಶಾ. ಮಾ. ಶಾ. ಗಳ ಟ್ರೇ. ಸಂ. ಗಳ ಟೆಕ್ಸ್ಟ ಬುಕ್ಕಾಗಿ	ಸದರ 7862 / ಸದರ	ಸದರ 635 / 8-2-36
	ಸೂ—ಮುಂದಿನ ಆ.	ಯಲ್ಲಿ ಅಕ್ಷರ ಕಾಗದ	ಕ್ರಾ. ಆಕಾರ ಸುಧಾರಿಸಬೇಕು.				
೩	ಎಲ್. ಎಲ್. ಬಿ. ೧ನೆ ಆ. ೧೯೩೫	ಎ. ಆರ್. ಶಿವನಾಗಪ್ಪ ಬುಕ್ ಡಿಪೋ ಹುಬ್ಬಳ್ಳಿ	ಎ. ಆರ್. ಶಿವನಾಗಪ್ಪ ಹುಬ್ಬಳ್ಳಿ	೦-೧೦-೦	ಪ್ರಾ. ಶಾ. ಟ್ರೇ. ಸಂ. ಹಾಗು ಮಾ. ಶಾ. ಗಳ ಶಿಕ್ಷಕರ L ಬುಕ್ಕಾಗಿ	ಸದರ 7876 / ಸದರ	ಸದರ 638 c. / 4-2-36
೪	ಮೌರ್ಯಸಿಂಹಾಸನ ೩ನೆ ಆ. ೧೯೩೫	ಮ್ಯಾನೇಜರಬಾಸೆಲ್ ಮಿಶನ್‌ಬುಕ್ಕಡಿಪೋ ಮಂಗಳೂರ	ಬಾಸೆಲ್ ಮಿಶನ್ ಬುಕ್ ಡಿಪೋ ಮಂಗಳೂರ	೦-೪-೦	ಪ್ರಾ. ಶಾ. ಟ್ರೇ. ಸಂ. ವಿ. ಗಳ L ಬುಕ್ಕಾಗಿ ಹಾಗು ಮಾ. ಶಾ. ವಿ ಗಳ L ಬುಕ್ಕಾಗಿ	ಸದರ 7880 / ಸದರ	ಸದರ 633 c. / 4-2-36
೫	ಅನುಭವದರ್ಪಣ ೧ನೆ. ಆ. ೧೯೩೪	ಮಿ. ವಿರುಪಾಕ್ಷಪ್ಪ ಶಿವಲಿಂಗಪ್ಪ ಪಾವಟೆ ಹುಬ್ಬಳ್ಳಿ	ವ್ಹಿ. ಎಸ್. ಪಾವಟೆ ಹುಬ್ಬಳ್ಳಿ	೦-೩-೦	ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ಮಾ. ಶಾ. ವಿ. ಗಳ L ಬುಕ್ಕಾಗಿ	47/P7882 / 20-2-36	S.86c. 634c. / 4-2-36

೧೬. ತಿಳಿಗನ್ನಡವ್ಯಾಕರಣ ಭಾ. ೧. ೧೯೩೪ ರ ಆವೃತ್ತಿ	ಮಿ. ಆರ್. ಎನ್. ಸೂರ್ಯನಾರಾಯಣರಾವ ಸಂ. ಶಿ. ಮಹಾರಾಜಾ ಕಾ. ಮೈಸೂರ	ಮಿ. ಆರ್. ಎನ್. ಸೂರ್ಯನಾರಾಯಣರಾವ ಮಹಾರಾಜಾ ಕಾ. ಮೈಸೂರ	೦-೮-೦ ೦-೧೦-೦ ಚಲೋದು	ಪ್ರಾ. ಶಾ. ಟೆಕ್ಸ್ಟ ಬುಕ್ ಬುಕ್ ಕಮಿಟಿಯುವರ ಸೂಚನೆಯ ಮೇರೆಗೆ ಮುಂದಿನಆವೃತ್ತಿಯನ್ನು ಸುಧಾರಿಸಬೇಕು	ಸದರ 7965 / ಸದರ	ಸದರ 636 / 10-2-36
೧೭ ಕನ್ನಡ ಬಾಲಬೋಧೆ ೧೯೩೫ರ ಆವೃತ್ತಿ	ಮಿ. ಎಸ್. ಎಫ್, ಕಟ್ಟೀಮನಿ ಮಾ. ಕ. ಶಾಳಾ ಹುಬ್ಬಳ್ಳಿ	ಎಸ್. ಎಫ್. ಕಟ್ಟೀಮನಿ ಹುಬ್ಬಳ್ಳಿ	೦-೨-೦	ಸದರ ಬುಕ್ಕ ಕಮಿಟಿಯುವರ ಸೂಚನೆಯ ಮೇರೆಗೆ ಮುಂದಿನಆವೃತ್ತಿಯನ್ನು ಸುಧಾರಿಸಬೇಕು	ಸದರ 7967 / 24/2/36	ಸದರ 642 / 10-2-36

ಕ. ಪ್ರ. ಶಾ. ಪರೀಕ್ಷೆಯ (೧೯೩೭ ನೆಯ) ವೇಳಾಪತ್ರಿಕೆ.

ದಿವಸ ಹಾಗೂ ತಾರೀಖು	ವೇಳೆ		ವಿಷಯುಗಳು	ಗುಣಗಳು	ಶೆರಾ
	ಇಂದ	ವರೆಗೆ			
ಸೋಮವಾರ ೬-೪-೩೭	೧೦	೧೧	ಉಮೇದವಾರರ ಹಾಜರೀ ತಕ್ಕೊಳ್ಳುವದು		* ೨೫ ಗದ್ಯ ೨೦ ಪದ್ಯ
ಸದರ	೧೧	೧	೨ನೆಯ ಸದರ (ಅ) ಹಾಗು (ಬ) ನಿಬಂಧ, ರಿಪೋರ್ಟ ವ ಕೈಬರಹ	(ಅ)೫೦ ಮತ್ತು (ಬ) ೨೫	
ಸದರ	೨	೫	೫ನೆಯ ಸದರ ಆರೋಗ್ಯವಿಜ್ಞಾನ ವ ಶರೀರಶಾಸ್ತ್ರ; ಶಾಸ್ತ್ರೀಯ ವಿಷಯ (೬ನೆಯ ಪುಸ್ತಕ)	೧೦೦	
ಮಂಗಳವಾರ ೭-೪-೩೭	೧೧	೨	೩ನೆಯ ಸದರ (ಅ) ಗಣಿತ	(ಅ) ೧೦೦	
	೩	೬	೪ನೆಯ ಸದರ (ಅ) ಹಾಗು (ಬ) ಇತಿಹಾಸ ಮತ್ತು ಭೂಗೋಲ	(ಅ)೫೦ ಹಾಗು (ಬ) ೫೦	
ಬುಧವಾರ ೮-೪-೩೭	೧೧	೨	೩ನೆಯ ಸದರ (ಬ) ವ (ಕ) ಭೂಮಿತಿ ವ ದೇಶೀ ಜಮಾಖರ್ಚು	(ಬ)೫೦ ಹಾಗು (ಕ)೫೦	
ಸದರ	೩	೬	೧ನೆಯ ಸದರ (ಬ) ಹಾಗು (ಕ) ದೇಶಭಾಷೆ	(ಬ)೪೫*ಹಾಗು (ಕ)೩೦	
ಗುರುವಾರ ೯-೪-೩೭	೭	೧೧	ಬಾಯಿಪರೀಕ್ಷೆ—೧ನೆಯ ಸದರ (ಅ) ಹಾಗು (ಡ)	(ಅ) ೩೦ ಹಾಗು (ಡ)೨೦	
ಸದರ	೨	೬	ಪರಸ್ಥಳದವರ ಪರೀಕ್ಷೆ ಮೊದಲು ಆ ಮೇಲೆ ಸ್ಥಳಿಕರದು		

ಸೂಚನೆ— ಉಮೇದವಾರರು ಮೊದಲನೆಯ ದಿವಸ ಪರೀಕ್ಷೆ ಸುರುವು ಆಗುವ ಮೊದಲು ೧ ತಾಸು ಮುಂಚೆ ಪರೀಕ್ಷೆ ನಡೆಯುವ ಸ್ಥಳದಲ್ಲಿ ಹಾಜರ ಇರತಕ್ಕದ್ದು.

ಗಂಡುಮಕ್ಕಳ ಉರ್ದುಭಾಷೆಯ ವ್ಹ. ಫಾ. ಪರೀಕ್ಷೆಯ ವೇಳಾಪತ್ರಿಕೆ (೧೯೩೬)

ವಾರ ತಾರೀಖು	ವೇಳೆ ಇಂದ	ವೇಳೆ ವರೆಗೆ	ವಿಷಯ	ಗುಣಗಳು	ಷರಾ
			ಉಮೇದವಾರರ ಹಾಜರಿ ತಕ್ಕೊಳ್ಳುವದು		ಒಟ್ಟು ೧೦ ಒಟ್ಟು ೫೮
ಸೋಮವಾರ	೧೦	೧೧	೨ನೆಯ ಸದರ (ಅ) ವ (ಬ) * ಪಿಬಂಧ. ರಿಪೋರ್ಟ ವ ಕೈಬರಹ ದೇಶಭಾಷೆಯಲ್ಲಿ ವ್ಹರ್ನಾಕ್ಯುಲರ ಉರ್ದು ಉಮೇದವಾರರಿಗೆ *ಉರ್ದುಭಾಷೆಯಲ್ಲಿ ಉರ್ದುವ್ಹರ್ನಾಕ್ಯುಲರ ಉಮೇದವಾರರಿಗೆ	(ಅ) ೫೦ ಮತ್ತು (ಬ) ೨೫	
೬—೪—೩೬	೧೧	೧			
ಸದರ	೨	೫	೫ನೆಯ ಸದರ ಆರೋಗ್ಯವಿಜ್ಞಾನ ಅಥವಾ ಶಾರೀರಿಕ ಶಾಸ್ತ್ರ ಹಾಗು ಶಾಸ್ತ್ರೀಯ ವಿಷಯ	೧೦೦	
ಮಂಗಳವಾರ	೧೧	೨	೩ನೆಯ ಸದರ (ಅ) ಗಣಿತ	(ಅ) ೧೦೦	
೭—೪—೩೬	೩	೬	೪ನೆಯ ಸದರ (ಅ) ಹಾಗು (ಬ) ಇತಿಹಾಸ ಮತ್ತು ಭೂಗೋಲು	(ಅ) ೫೦ ಹಾಗು (ಬ) ೫೦	
ಬುಧವಾರ	೧೧	೨	೩ನೆಯ ಸದರ (ಬ) ಹಾಗು (ಕ) ಭೂಮಿತಿ ವ ದೇಶೀ ಜಮಾಖರ್ಚು	(ಬ) ೫೦ ಹಾಗು (ಕ) ೫೦	
೮—೪—೩೬	೩	೬	೧ನೆಯ ಸದರ (ಬ) ಹಾಗು (ಕ) ದೇಶಭಾಷೆ ಅಥವಾ ಉರ್ದು	(ಬ) ೪೫* ಹಾಗು (ಕ) ೩೦	
ಗುರುವಾರ	೭	೯	೬ನೆಯ ಸದರ (ಅ) ಉರ್ದು ಅಥವಾ ದೇಶಭಾಷೆ * ೪೦ ಬರಹದ ಕೆಲಸಕ್ಕೆ ೧೦ ಬಾಯಿ ಪರೀಕ್ಷೆಗಾಗಿ	(ಅ) ೫೦*	
೯—೪—೩೬					
,,	೯-೧೫	೧೦	ಬಾಯಿಪರೀಕ್ಷೆ ೬ನೆಯ ಸದರ (ಅ) ಭಾಗದೊಳಗಿನದು		
	೧೦	೧೧	ಸದರ (ಕ) ಭಾಗದೊಳಗಿನದು	(ಕ) ೧೫	
	೨	೩	೬ನೆಯ ಸದರ (ಬ) ಪತ್ರ ಅಥವಾ ರಿಪೋರ್ಟ *ಉರ್ದುದಲ್ಲಿ ವ್ಹರ್ನಾಕ್ಯುಲರ ಉ. ಉಮೇದವಾರರು ದೇ. ಭಾ. ಯಲ್ಲಿ ಉ. ವ್ಹ. ಉ. ವಾರರು	(ಬ) ೩೫	
			ಬಾಯಿಪರೀಕ್ಷೆ ೧ನೆಯ ಸದರ (ಅ) ವ (ಡ) ಸ್ಥಳಿಕರಿಗೆ ಮಾತ್ರ	(ಅ) ೩೦ (ಡ) ೨೦	

ದಿವಸ ಮತ್ತು ತಾರೀಖು	ವೇಳೆ ಇಂದ	ವೇಳೆ ವರೆಗೆ	ವಿಷಯ	ಗುಣಗಳು
ಸೋಮವಾರ ೬-೪-೩೬ ಸದರ	೧೦	೧೧	ಉಮೇದವಾರರ ಹಾಜರಿ ತೆಗೆದುಕೊಳ್ಳುವದು	
	೧೧	೧	೬ನೆಯ ಸದರ (ಅ) ಮತ್ತು (ಬ) ನಿಬಂಧ, ರಿಪೋರ್ಟ ವ ಕೈಬರೆಹ	(ಅ) ೫೦ (ಬ) ೨೫
	೨	೪	೫ನೆಯ ಸದರ (ಅ) ಶಾ. ವಿಷಯ ಹಾಗು (ಬ) ಆರೋಗ್ಯಶಾಸ್ತ್ರ	(ಅ) ೨೫ (ಬ) ೨೫
ಮಂಗಳವಾರ ೭-೪-೩೬	೧೧	೨	೩ನೆಯ ಸದರ (ಅ) ಗಣಿತ-(ಬ) ಕ್ಷೇತ್ರಫಲ (ಕ) ದೇಶೀ ಜಮಾಖರ್ಚು	(ಅ) ೫೦ (ಬ) ೨೫ (ಕ) ೨೫
,,	೩	೬	೪ನೆಯ ಸದರ (ಅ) ರಾಜ್ಯದಾಡಳಿತ (ಬ) ಸಹಕಾರತ್ವ (ಕ) ಭೂಗೋಲ	(ಅ) ೨೫ (ಬ) ೨೫ (ಕ) ೫೦
ಬುಧವಾರ ೮-೪-೩೬	೧೧	೨	೬ನೆಯ ಸದರ (ಅ) ಒಕ್ಕಲತನ ಹಾಗು (ಬ) ಪ್ರಕೃತಿ ವಿಮರ್ಶೆ	(ಅ) ೩೫ (ಬ) ೩೦
	೩	೬	೧ನೆಯ ಸದರ (ಬ) ಹಾಗು (ಕ) ದೇಶಭಾಷೆ	(ಬ) ೪೫ (ಕ) ೩೧
ಗುರುವಾರ ೯-೪-೩೬	*	*	ಪ್ರಾಕ್ಟಿಕಲ್ ಪರೀಕ್ಷೆ ೩ನೆಯ ಸದರಕ್ಕೆ ಸಂಬಂಧಿಸಿದ್ದು	೫೦
	*	*	,, ೬ನೆಯ ಸದರಕ್ಕೆ ಸಂಬಂಧಿಸಿದ್ದು	೩೫

ಸೂಚನೆ—೧ನೆಯ ಸದರಿನ (ಅ) ಹಾಗು (ಡ) ತೋಂಡೀಪರೀಕ್ಷೆಯನ್ನು ಪ್ರತಿದಿನ ಸಾಯಂಕಾಲಕ್ಕೆ ಬರೆಹ ಪರೀಕ್ಷೆ ಮುಗಿದಮೇಲೆ ತೆಗೆದುಕೊಳ್ಳಲಾದೀತು. ಮೊದಲು ಪರಸ್ಥಳದವರದು ಬಳಿಕ ಸ್ಥಳಿಕರದು.

* ರಾ॥ ಆ. ಓವ್ಹರಸೀಯರ ಸೂಚನೆ ಮೇರೆಗೆ ಸ್ಥಾನಿಕ ಪ್ರೆಸಿಡೆಂಟರು ವೇಳೆಯನ್ನು ನಿಶ್ಚಯಿಸುವರು. ಮೊದಲನೆಯ ದಿವಸ ಪರೀಕ್ಷೆ ನಡೆಯುವ ಮುಂಚೆ ೧ ತಾಸು ಮೊದಲು ಉಮೇದವಾರರು ತಮ್ಮ ಪರೀಕ್ಷೆ ನಡೆಯುವ ಸ್ಥಳದಲ್ಲಿ ಹಾಜರ ಇರಬೇಕು.

Reg. No. B. 369

ವಾಗ್ವಿಲಾಸ ಬುಕ್ ಡಿಪೋ ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕಮಿಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ಬೆಲೆ ರೂ. ಆ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦– ೮
ಮುಸಲ್ಮಾನರ ಆಳಿಕೆ ೫ನೇ ಇ. ಯು ಸಲುವಾಗಿ (ಹಳಿಪೇಟಕೃತ)	೦– ೬
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦– ೪
ಹಿಂದುಸ್ಥಾನದ ಇತಿಹಾಸ (ಬಸಪನಹಾಳಕೃತ)	೦– ೮
ಲಘುವ್ಯಾಕರಣ (ಪ್ರೈ. ಕಟ್ಟೀಕೃತ)	೦– ೩
ದೇಶೀ ಜಮಾಖರ್ಚು ಪ್ರವೇಶ (ನೇಗಿನಹಾಳ ಕೃತ) ೪ನೇ ಇ. ಗೆ	೦– ೨
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦–೧೦
ಚಿತ್ರಮಯ ಕೋಷ್ಟಕ (ಉಗ್ರಕೃತ) ೩ನೇ ಇ. ಗೆ	೦– ೩
ಗಣಿತಾದರ್ಶ (ಜೋಶಿ ಕೃತ) ೨ನೇ ಇ. ಗೆ	೦– ೪
,, ,, ೩ನೇ ,,	೦– ೫
,, ,, ೪ನೇ ,,	೦– ೬
ಅಂಕಗಣಿತ (ಗಾಂವಕರಕೃತ) ೩ನೇ ,,	೦– ೬
ಧಾರವಾಡ ಜಿಲ್ಲಾ ವರ್ಣನ (ಅಣ್ಣೀಗೇರಿ ಕೃತ) ೩ನೇ ,,	೦– ೪
ವಿಜಾಪೂರ ,, ,, (,,) ೩ನೇ ,,	೦– ೪
ಧಾರವಾಡ ಜಿಲ್ಹಾ ,, (ಕುಂದೀಕೃತ)	೦– ೫
ಹಿಂದುಸ್ಥಾನ ಭೂಗೋಲ (ಮುಗದಾಲಕೃತ)	೦– ೮
ಸುಗಮ ಕನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦–೧೦
ಭೂಗೋಲವಿದ್ಯೆ ೩ನೇ ಭಾಗ (ಪ್ರೈ. ಕಟ್ಟೀಕೃತ)	೦– ೫
,, ವಿಜ್ಞಾನ ಸಚಿತ್ರ (ನಾಡಿಗೇರಕೃತ)	೦–೧೨
ಕರ್ನಾಟಕ ಬಾಲಬೋಧಿನಿ (ಕರಿಬಸವ ಶಾಸ್ತ್ರೀಕೃತ)	–೦ ೩
ಎಲ್ ಎಲ್. ಬಿ ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦–೧೦
ಸರಸ್ವತಿ ವಿಜಯ (ಬೂದೀಹಾಳಕೃತ)	೦– ೪

ಪತ್ತೆ:— ಎ. ಆರ್. ಶಿವನಾಗಪ್ಪಾ,
ಬುಕ್ ಸೇಲರ ಹುಬ್ಬಳ್ಳಿ

ಫ್ರಿ ೨-೧೯೩೬ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamik Shikshana

ಸಂಪಾದಕರು

ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ವಿಷಯಾನುಕ್ರಮಣಿಕೆಯು

ಹಿಂದುಸ್ಥಾನದ ಶಿಕ್ಷಣ ೧
ಚಾರ್ಲ್ಸನ ಡಿಕಂರ್ಸು ೧೪
ಹ್ಯೂರಿಸ್ಟಿಕ್(ಶೋಧಕ)ಪದ್ಧತಿ ೨೦
ಕನ್ನಡ ವರ್ಣಪ್ರಾಯಿಂಜ ಪರೀಕ್ಷೆ ೨೪
ಕರ್ನಾಟಕ ಸಾಹಿತ್ಯ ಪರಿಷತ್ತಿನವರು ೨೫
ಪ್ರಕಟನೆಗಳು ೩೦

Printed by K. R. Bhise at the Karnatak printing Works, Dharwar
and Published by V. N. Magdal. B. A., Head Master,
Training School, Dharwar, at his Office.

ಮಾರಾಟಕ್ಕೆ ಸಿದ್ಧವಿದೆ

ಗಣಿತ ಶಿಕ್ಷಕ

ಬ. ದು. ಹಿರೇಮಠ ಕೃತ

೩ನೆಯ ಆವೃತ್ತಿ

ಶಿಕ್ಷಕ ಬಾಂಧವರೇ, ಈ ಪುಸ್ತಕವು ಕನ್ನಡ ೫-೬-೭ ನೆಯ ಇಯತ್ತೆಗ ಮತ್ತು ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಮತ್ತು ಮಾಧ್ಯಮಿಕ ಶಾಲೆಗ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ · ಅಭ್ಯಾಸಕ್ರಮಕ್ಕನುಸರಿಸಿ ರ ಸಲ್ಪಟ್ಟಿದೆ. ಇದರ ಮಹತ್ವವನ್ನು ವರ್ಣಿಸಲವಶ್ಯವಿಲ್ಲ ಕರ್ನಾಟಕದ ಎಲ್ಲ ಜ ರಿಂದಲೂ ಆದರವನ್ನು ಹೊಂದಿರುವದು. ಆದುದರಿಂದಲೇ ಸ್ವಲ್ಪದಿವಸಗಳಲ್ಲಿಯೆ ಇದು **ಮೂರನೆಯ ಆವೃತ್ತಿಯನ್ನು** ಪಡೆದಿರುವದು. ಒಂದು ಪ್ರತಿಯನ್ನಾದ ತರಿಸಿ ನೋಡಿದರೆ ಅದರ ಯೋಗ್ಯತೆಯು ತಮಗೂ ತಿಳಿಯುವದು.

ವ್ಯಾಪಾರಸ್ಥರಿಗೂ ಶಿಕ್ಷರಿಗೂ ಯೋಗ್ಯ ಸವಲತು ದೊರೆಯುವದು. ಪುಸ್ತ ಗಳು ಏ. ಆರ್. ಶಿವನಾಗಪ್ಪ ಹುಬ್ಬಳ್ಳಿ ಇವರಲ್ಲಿಯೂ ಎಲ್ಲ ಊರುಗಳ ಪುಸ್ತ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ಬಸಪ್ರಭಯ್ಯ ದುಂಡಯ್ಯ ಹಿರೇಮಠ,

ಕನ್ನಡ ಶಾಲಾಮಾಸ್ತರ ವಿಜಾಪು

ಕನ್ನಡ ೪ನೇ ಇಯತ್ತೆಗಾಗಿ

ಪಠ್ಯಪುಸ್ತಕವೆಂದು ಕಮೀಟಿಯಿಂದ ಮಂಜೂರಾದ

ಕರ್ನಾಟಕ ಇತಿಹಾಸ ಬೋಧಿನಿ

ಹೊಸ ಚಿತ್ರಗಳು] **[ಹೊಸ ಮನೋರಂಜಕ ವಿಷಯ**

ಪ್ರೊ. ಸಾಸನೂರರವರ ಮುನ್ನುಡಿಯುಳ್ಳದ್ದು

ಶಿಕ್ಷಕರೆಲ್ಲರು ಓದಿ ವಿದ್ಯಾರ್ಥಿಗಳಿಗೆ ಕಲಿಸಲು ಯೋಗ್ಯವಾದ ಪುಸ್ತ

ಪ್ರಾಚೀನ ಶಿಲಾಶಾಸನ ತಾಮ್ರಪಟಗಳನ್ನು ಶೋಧಿಸಿ ಇತಿಹಾಸಜ್ಞರು ಸಾ ಯನ್ನು ಸಂಗ್ರಹಿಸಿ ಮನೋರಂಜಕವಾಗಿಯೂ ಸ್ಫೂರ್ತಿದಾಯಕವಾಗಿಯೂ ಪುಸ್ತಕ ಬರೆದಿದ್ದಾರೆ. ಚಾಲುಕ್ಯರ ಪುಲಕೇಶಿ, ಅಕ್ಕಣ್ಣ ಮಾದಣ್ಣರ ಕೊಲೆ, ಕೆ ಬೀಳಗಿ, ಕೊಡಗು, ಸ್ವಾದಿ, ಅರಸರ ಹಾಗು ಶಿರಸಂಗಿ ದೇಸಾಯಿಯ ವಿಷಯಗಳೆಲ್ಲ ಇವರಲ್ಲಿ ಅವೆ. ಭಾಷೆ ಸುಲಭ. ವಿಷಯ ಮನೋಹರ. ಪುಸ್ತಕದ ಬಗ್ಗೆ ವಿದ್ವಜ್ಜನರ ಸದಭಿಪ್ರಾಯಗಳಿವೆ. ಬೆಲೆ ಎಂಟೇ ಆಣೆ ಪುಸ್ತಕವು ಎಲ್ಲ ಬುಕ್‌ಸೆಲರಲ್ಲಿ ಹಾಗು ಕೆಳಗಿನ ಪತ್ತೆಯಲ್ಲಿಯೂ ದೊರೆಯುತ್ ಯೋಗ್ಯ ಕಮಿಶನ್ ಪತ್ರವ್ಯವಹಾರದಿಂದ ಗೊತ್ತಾಗುವದು.

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ,

ಮಂಗಳವಾರಪೇಠ, ಧಾರವಾ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ಸಂಪುಟ ೭೩ ||| ಎಪ್ರಿಲ್ ೧೯೩೬ ||| ವರ್ಷ ೮ ಸಂ. ೧

ಹಿಂದುಸ್ಥಾನದ ಶಿಕ್ಷಣ

ಲಾರ್ಡ ಮೆಕಾಲೇ ದೊರೆಗಳು ಆಂಗ್ಲವಾಙ್ಮಯ ಸಂಸ್ಕೃತವಾಙ್ಮಯಗಳ ಬಗ್ಗೆ ನಡೆದ ಚರ್ಚೆಯನ್ನು ಮುಂದೆ ಕಾಣಿಸಿದಂತೆ ಸಂಕ್ಷೇಪಿಸಿದರು:— "೧೮೧೩ ರಲ್ಲಾದ ಪಾರ್ಲಿಮೆಂಟಿನ ಕಾಯಿದೆಯಾಗಲಿ, ನಾವು ಈ ವಿಷಯದ ಗ್ಗೆ ಕೊಟ್ಟ ವಚನಗಳಾಗಲಿ ನಾವು ಶಿಕ್ಷಣಕ್ಕಾಗಿ ತೆಗೆದಿಟ್ಟ ಹಣವನ್ನು ಇಂಥ ಂದು ವಾಙ್ಮಯದ ಅಭಿವೃದ್ಧಿಗಾಗಿಯೇ ವೆಚ್ಚಮಾಡಬೇಕೆಂದು ನಿರ್ಬಂಧಿ ಲ್ಲ. ಜ್ಞಾನದ ದೃಷ್ಟಿಯಿಂದ ತಕ್ಕುದನ್ನು ಅಭ್ಯಾಸಮಾಡಿಸಲಿಕ್ಕೆ ನಮಗೆ ಾವ ತಡೆಯೂ ಇಲ್ಲ. ಸಂಸ್ಕೃತ ಇಲ್ಲವೆ ಅರಬೀ ಪಾಂಡಿತ್ಯಕ್ಕಿಂತ ಇಂಗ್ಲಿಷ ಾಂಡಿತ್ಯವು ಹೆಚ್ಚಿನದಿರುವದು. ದೇಶೀಯರಿಗೆ ಇಂಗ್ಲಿಷ ಕಲಿಯಬೇಕೆಂಬ ತ್ಕಂಠೆಯು ಸಂಸ್ಕೃತ ಇಲ್ಲವೆ ಅರಬೀ ವಿದ್ಯವನ್ನು ಅಭ್ಯಾಸಿಸುವ ಕುತೂಹಲ ಕ್ಕಿಂತ ಹೆಚ್ಚಾಗಿರುವದು. ಧರ್ಮ ಇಲ್ಲವೆ ಕಾಯಿದೆಯ ದೃಷ್ಟಿಯಿಂದ ಪರೀಕ್ಷಿ ಲು ಸಂಸ್ಕೃತ ಇಲ್ಲವೆ ಅರಬೀ ಭಾಷೆಗಳು ಇಂಗ್ಲಿಷ ಭಾಷೆಗಿಂತ ಹೆಚ್ಚು ತ್ತೇಜನಾರ್ಹವಾಗಿಲ್ಲ. ಈ ದೇಶದ ಜನರನ್ನು [illegible] ಇಂಗ್ಲಿಷ ಪಂಡಿತ

ರನ್ನಾಗಿ ಮಾಡಬಹುದಾಗಿದೆ. ಈ ಉದ್ದಿಶ್ಯವಾಗಿಯೇ ನಾವು ಪ್ರಯ ಪಡತಕ್ಕದ್ದು. ”

“ ನನ್ನಿಂದ ವಿರುದ್ಧವಾದ ಅಭಿಪ್ರಾಯಗಳುಳ್ಳ ಸದ್‌ಗೃಹಸ್ಥರ ಒಂ ಮಾತಿಗೆ ನನ್ನ ಪೂರ್ಣ ಒಪ್ಪಿಗೆಯಿದೆ. ನಮ್ಮಲ್ಲಿರುವ ಅಲ್ಪಹಣದಿಂದ ಬ ಜನರ ಶಿಕ್ಷಣವನ್ನು ಕೈಕೊಳ್ಳುವದು ಅರಿದೆಂದು ನಾನೂ ಬಲ್ಲೆನು. ನಮ ನಮ್ಮ ಲಕ್ಷಾವಧಿ ಪ್ರಜೆಗಳಿಗೂ ಮಧ್ಯಸ್ಥರಾಗಿದ್ದು ರಾಜಾಧಿಕಾರಿಗಳಿಗೂ ಪ ಗಳಿಗೂ ಪರಸ್ಪರರ ಅಭಿಪ್ರಾಯಗಳನ್ನು ತಿಳಿಸುವಂಥ ಒಂದು ದೇಶೀಯ ವರ್ಗವು ನಮಗೆ ಆವಶ್ಯಕವಾಗಿರುವದು. ಈ ವರ್ಗದವರನ್ನು ಉಂಟುಮಾ ಲಿಕ್ಕೆ ನಾವು ಕೈಲಾದಷ್ಟು ಪ್ರಯತ್ನಿಸಬೇಕು. ಈ ವರ್ಗದ ಜನರು ರ ಮಾಂಸದಿಂದಲೂ ವರ್ಣದಿಂದಲೂ ಹಿಂದೀಯರಿರಬೇಕು. ಆದರೆ ಅವರ ರುಚಿ, ಅವರ ಅಭಿಪ್ರಾಯಗಳು, ಅವರ ನೈತಿಕಾಚರಣೆ ಹಾಗು ಬುದ್ಧಿಯು ಒ ಇಂಗ್ಲಿಷರದಾಗಿರಬೇಕು. ತಮ್ಮ ದೇಶಭಾಷೆಗಳ ಅಭಿವೃದ್ಧಿಯ ಕಾರ್ಯವ ನಾವು ಈ ಜನರಿಗೆ ಬಿಡಬೇಕು. ನಮ್ಮ ಭಾಷೆಯ ಶಾಸ್ತ್ರೀಯ ಪಾರಿಭಾಷಿ ಶಬ್ದಗಳನ್ನು ಅನುರೂಪವಾಗಿ ತರ್ಜುಮೆಮಾಡಿಕೊಂಡು ತಮ್ಮ ದೇಶದ ಬ ಜನರಲ್ಲಿ ಜ್ಞಾನವನ್ನು ಕ್ರಮದಿಂದ ಹರಡಲು ತಕ್ಕವಾಗುವಂತೆ ದೇಶಭಾ ಗಳನ್ನು ಇವರು ಸುಧಾರಿಸಬೇಕು.

ಹೀಗೆ ಆರಂಭಿಸಿದ ಇಂಗ್ಲಿಷ ವಿದ್ಯಾಪ್ರಚಾರದಲ್ಲಿಯೇ ಸದ್ಯದಲ್ಲಿ ದೇಶದ ಹರಡಿಕೊಳ್ಳುತ್ತಿರುವ ರಾಜಕೀಯ ಅಸಮಾಧಾನದ ಬೀಜಾರೋಪಣವಾ ತೆಂದು ಮೆಕಾಲೇ ಸಾಹೇಬರನ್ನು ಕಡುತರವಾಗಿ ಕೆಲವರು ಹಳಿಯುವದುಂಟ ಆದರೆ ಮೆಕಾಲೇ ದೊರೆಗಳು ಈ ದೇಶದಲ್ಲಿ ಇಂಗ್ಲಿಷ ವಿದ್ಯಾಭ್ಯಾಸವನ್ನು ಆರಂ ಸಿದರೆಂದು ಬಗೆಯುವದು ಸರಿಯಲ್ಲ. ಡೇವಿಡ್ ಹೇರ, ರಾಜಾರಾಮ ಮೋಹ ರಾಯ ಹಾಗು ಡಾಕ್ಟರ ಡಫ್ ಮೊದಲಾದ ಮಹಾನುಭಾವರ ನೇತೃತ್ವದ ಮುಂದುವರಿಯುತ್ತಿದ್ದ ಬಹು ಜನರಲ್ಲಿ ಹುಟ್ಟಿದ ಇಂಗ್ಲಿಷ ಭಾಷಾಭ್ಯಾಸದ ಆ ರತೆಗೆ ಮೆಕಾಲೇ ಸಾಹೇಬರು ತಮ್ಮ ಬೆಂಬಲವನ್ನು ಕೊಟ್ಟದ್ದು ಮಾತ್ರ ನಿಜ ಪ್ರವಾಹದಂತೆ ದಿನದಿನಕ್ಕೆ ಬಲಿಯುತ್ತಿದ್ದ ಈ ಜನಾಕಾಂಕ್ಷೆಯನ್ನು ಮೆಕಾ ದೊರೆಗಳು ತಡೆಯಲಿಕ್ಕೆ ಪ್ರಯತ್ನಿಸಿದ್ದರೆ ಅವರಿಗೆ ಯಶಸ್ಸುಬರುವ ಸಂಭ

ತಿರಲಿಲ್ಲ. ಕತ್ತಲುಹರಿದು ಬೆಳಕಾಗಲಾರಂಭಿಸಿತ್ತು. ಸರಕಾರದವರು ಕಪಾಟ ಗಳನ್ನು ತೆರೆಯದೆ ಮುಚ್ಚಿಕೊಂಡು ಕುಳಿತಿರಬೇಕೆಂದು ಕಟ್ಟಪ್ಪಣೆ ಮಾಡಿದ್ದರೂ ಮುಂಬೆಳಕು ಬಲಿತು ಬಿಸಿಲಾಗುವದು ನಿಲ್ಲುತ್ತಿರಲಿಲ್ಲ.

ತಾನು ಪುರಸ್ಕರಿಸುತ್ತಿದ್ದ ಧೋರಣದ ಭಾವೀ ಪರಿಣಾಮಗಳು ಏನಾಗ ಬಹುದೆಂಬದು ಮೆಕಾಲೆಗೆ ಗೊತ್ತಾಗಲಿಲ್ಲವೆಂದು ಯಾರೂ ಭಾವಿಸಲಾಗದು. ಇವನ್ನು ಈತನು ಚೆನ್ನಾಗಿ ಅರಿತಿದ್ದನು. ೧೮೩೩ರಲ್ಲಿ ಏತದ್ದೇಶೀಯರಿಗೆ ಕುಲ ಧರ್ಮ-ಜಾತಿ ಮುಂತಾದವುಗಳ ಭೇದಭಾವವಿಲ್ಲದೆ ಸರಕಾರದ ಹೆಚ್ಚಿನ ಉದ್ಯೋ ಗಗಳನ್ನು ಕೊಡಬೇಕೆಂಬ ಪ್ರಶ್ನವು ಹೊರಟಾಗ ಆತನು ಕಾಮನ್ಸ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಮುಂದೆ ಕಾಣಿಸಿದಂತೆ ನುಡಿದನು.—“ನಮ್ಮ (ಶಿಕ್ಷಣ) ಪದ್ಧತಿಯ ಮೂಲಕ ಹಿಂದುಸ್ತಾನದ ಜನರ ಮನಸ್ಸು ವಿಕಾಸಗೊಂಡು ಮೇರೆ ಮೀರಿ ಅಭಿವೃದ್ಧಿಗೊಳ್ಳಬಹುದು. ಅವರಲ್ಲಿ ಚೆನ್ನಾಗಿ ರಾಜ್ಯವಾಳುವ ಯೋಗ್ಯತೆ ಯನ್ನು ನಾವು ಉಂಟುಮಾಡಲು ಅದಕ್ಕೂ ಹೆಚ್ಚು ಚೆನ್ನಾಗಿ ರಾಜ್ಯವಾಳುವ ಯೋಗ್ಯತೆಯು ಅವರಲ್ಲಿ ಉಂಟಾಗಬಹುದು. ಯುರೋಪೀಯರ ಜ್ಞಾನವನ್ನು ಚೆನ್ನಾಗಿ ದೊರಕಿಸಿದ ಬಳಿಕ ಅವರು ಯುರೋಪೀಯರ ರಾಜ್ಯಪದ್ಧತಿಗಳನ್ನೂ ಸಂಸ್ಥೆಗಳನ್ನೂ ನಮ್ಮಿಂದ ಘಂಟಾಘೋಷವಾಗಿ ಕೇಳಬಹುದು. ಆ ಕಾಲವು ಮುಂದೆ ಬರಬಹುದೋ ಇಲ್ಲವೋ ಎಂಬದನ್ನು ನಾನು ಕಾಣೆನು. ಆದರೆ ಆ ಸುದಿನವನ್ನು ತಡೆಯಲಿಕ್ಕಾಗಲಿ ಮುಂದುದೂಡಲಿಕ್ಕಾಗಲಿ ನಾನು ಸರ್ವಥಾ ಪ್ರಯತ್ನಿಸಲಾರೆನು. ಆ ದಿನವು ಬಂದರೆ ಅದು ಇಂಗ್ಲಿಷ ಜನಾಂಗದ ಇತಿಹಾಸ ದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ದಿನವೇ ಸರಿ.”

ಆಗ ಲಾರ್ಡವಿಲಿಯಮ್ ಬೆಂಟಿಂಕನು ಹಿಂದುಸ್ತಾನದ ಗವ್ಹರ್ನರ ಜನರಲ್ಲ ನಿದ್ದನು. ಈತನು ಮೆಕಾಲೆ ಸಾಹೇಬರ ಅಭಿಪ್ರಾಯವನ್ನು ಪುರಸ್ಕರಿಸಿ ಒಂದು ಗೊತ್ತುವಳಿಯನ್ನು ಪ್ರಕಟಪಡಿಸಿದನು. ಅದರಲ್ಲಿ “ಹಿಂದುಸ್ತಾನದ ಜನರಲ್ಲಿ ಯುರೋಪೀಯರ ಶಾಸ್ತ್ರಗಳ ಹಾಗು ವಾಙ್ಮಯದ ಜ್ಞಾನವನ್ನು ಹರಡುವದೇ ಬ್ರಿಟಿಷ ಸರಕಾರದ ಹೆಗ್ಗುರಿಯಾಗಿರಬೇಕು. ಶಿಕ್ಷಣಕ್ಕಾಗಿ ಉಪಯೋಗಿಸುವ ಮೊತ್ತದ ಹಣವು ಇಂಗ್ಲಿಷ ವಿದ್ಯಾಭ್ಯಾಸಕ್ಕಾಗಿಯೇ ವಿನಿಯೋಗಿಸಲ್ಪಡುವದು ಮೇಲಾದದ್ದು” ಎಂಬ ಉಲ್ಲೇಖವಿತ್ತು.

ಕೆಲವರು ಮಾತ್ರ, ಸರಕಾರದವರು ಈ ರೀತಿಯಲ್ಲಿ ಆಂಗ್ಲ ವಿದ್ಯಾಭ್ಯಾಸಕ್ ತೋರಿಸಿದ ಪಕ್ಷಪಾತವು ಹಿಂದುಸ್ತಾನದ ಜನರ ಧರ್ಮಭಾವನೆಗಳನ್ನು ಸಡಿಲಿ ಲಿಕ್ಕೂ ಕ್ರಮ ಕ್ರಮವಾಗಿ ಹಿಂದೀಯರನ್ನು ಕ್ರಿಸ್ತರನ್ನು ಮಾಡಲಿಕ್ಕೂ ಸಹ ಯಕವಾಗುವದೆಂದು ಗೊಣಗಿದರು. ಈಬಗೆಯ ದುಷ್ಟ ಆರೋಪಗಳ ಕುರಿತು ಲಾರ್ಡ ಬೆಂಟಂಕನು ಪ್ರಕಟಪಡಿಸಿದ್ದೇನೆಂದರೆ "ಈಬಗೆಯ ಉದ್ದೇ ಗಳಿಂದ ಸರಕಾರದವರು ಎಂದೆಂದೂ ಪ್ರೇರಿತರಾಗಿಲ್ಲ; ಇಷ್ಟೇ ಅಲ್ಲ, ಇನ ಮುಂದೆ ಎಂದೂ ಪ್ರೇರಿತರಾಗುವ ಸಂಭವವಿಲ್ಲ."

"ಧರ್ಮ ವಿಷಯದಲ್ಲಿ ಕಠೋರವಾದ ನಿಷ್ಪಕ್ಷಪಾತದಿಂದ ಇರುವ ಬ್ರಿಟಿಷ ಆಡಳಿತೆಯ ಮೂಲತತ್ವವಾಗಿದೆ. ಪ್ರಜೆಗಳ ಧರ್ಮದಲ್ಲಿ ಕೈಹಾ ಲಿಕ್ಕಿಲ್ಲವೆಂದು ಅವರು ಆಣೆಯಿಟ್ಟುಕೊಂಡಿರುವರು. ಈ ಮಹತ್ವದ ಧೋರಣ ನನಗೆ ಪೂರ್ಣ ಸಮ್ಮತವಾದದ್ದು; ಇದರಲ್ಲಿ ನನಗೆ ತುಂಬ ನಂಬಿಗೆಯಿದೆ. ಶಿಕ್ಷ ವಿಷಯದಲ್ಲಿಯೂ ಈ ಧೋರಣವನ್ನೇ ನಾವು ಅನುಸರಿಸುವೆವು. ಸರಕಾರದವ ನಡಿಸುವ ಎಲ್ಲ ಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ಈ ತತ್ವವನ್ನು ಪೂರ್ಣ ವಾಗಿ ಅಮಲಿನಲ್ಲಿ ತರಲಾಗುವದು. ವಿದ್ಯಾರ್ಥಿಗಳ ಧಾರ್ಮಿಕ ಕಲ್ಪನೆಗಳ ಯಾರೂ ಕೈಹಾಕಲಾಗದು. ಕ್ರಿಸ್ತಧರ್ಮದ ಬೋಧೆಯನ್ನು ಪ್ರತ್ಯಕ್ಷವಾ ಯಾಗಲಿ ಅಪ್ರತ್ಯಕ್ಷವಾಗಿಯಾಗಲಿ ಸೇರಿಸಲಾಗದು. ಇಂಥ ಪ್ರಯತ್ನಗಳ ನಡೆದಿವೆಯೆಂಬದು ಕಂಡೊಡನೆಯೆ ಅವನ್ನು ಪೂರ್ಣವಾಗಿ ನಿಲ್ಲಿಸಿ ನಿರ್ಮೂ ಗೊಳಿಸಲಾಗುವದು."

ಹೀಗೆ ಸರಕಾರದವರು ಇಂಗ್ಲಿಷ ವಿದ್ಯಾಭ್ಯಾಸದ ಬಗ್ಗೆ ತಮ್ಮ ಧೋರ ವನ್ನು ನಿಶ್ಚಿತವಾಗಿ ಪ್ರಕಟಪಡಿಸಿದರೂ ಸಂಸ್ಕೃತ ಜ್ಞಾನ, ಇಂಗ್ಲಿಷ ವಿದ್ಯೆ ಇ ಗಳ ಬಗ್ಗೆ ಉತ್ಪನ್ನವಾಗಿದ್ದ ಚರ್ಚೆಯು ನಡೆದೇ ಇತ್ತು. ೧೮೩೯ರಲ್ಲಿ ಲಾಡ ಆಕ್‌ಲಂಡನು ಬ್ರಿಟಿಷ ಧೋರಣವನ್ನು ಮತ್ತೆ ಒತ್ತಿ ಹೇಳಿದನು. ಈತನು ಎರಡು ಪಕ್ಷದವರನ್ನು ಸಮಾಧಾನಪಡಿಸಿದನು. ಸಂಸ್ಕೃತಾಭ್ಯಾಸಕ್ಕೆ ತಡೆಹಾಕ ವದು ಸರಕಾರದ ಉದ್ದೇಶವಲ್ಲೆಂದು ಸಾರಿದನು; ಇಂಗ್ಲಿಷ ವಿದ್ಯಾಭ್ಯಾಸ ಎಳಸುವವರಿಗೆ ನೆರವಾಗುವದು ತಮ್ಮ ಧೋರಣವೆಂದು ಪ್ರಕಟಿಸಿದನು. ಹೀ ಲಾರ್ಡ ಆಕ್ಲಂಡನು ಉಭಯಪಕ್ಷದವರನ್ನು ಸಮಾಧಾನಗೊಳಿಸಲು ಯತ್ನಿ

ದರೂ ಈ ಚರ್ಚೆಯು ನಡೆದೇ ಇತ್ತು. ಕಡೆಗೆ ೧೮೪೧ರ ಕೋರ್ಟ ಆಫ್ ಡಿರೆ ಕ್ಟರರು ಲಾರ್ಡ ಬೆಂಟಂಕರ ಹಾಗು ಲಾರ್ಡ ಆಕ್‌ಲಂಡರ ಇಂಗ್ಲಿಷ ವಿದ್ಯಾ ಭ್ಯಾಸಕ್ಕೆ ಅನುಕೂಲವಾದ ಧೋರಣವನ್ನೇ ಪುರಸ್ಕರಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು.

೧೮೩೭ರಲ್ಲಿ ಲಾರ್ಡ ಆಕ್‌ಲಂಡನು ಹಿಂದುಸ್ತಾನದ ಕೋರ್ಟ ಕಚೇರಿಗಳಲ್ಲಿ ಪ್ರಚಾರದಲ್ಲಿದ್ದ ಪರಿಸಿಯನ್ ಭಾಷೆಯ ಬದಲಾಗಿ ದೇಶಭಾಷೆಗಳನ್ನು ಉಪ ಯೋಗಿಸಬೇಕೆಂದು ಅಪ್ಪಣೆಕೊಡಿಸಿದ ಮೂಲಕ ಇಂಗ್ಲಿಷ ಭಾಷಾಭ್ಯಾಸಕ್ಕೆ ಒಪ್ಪೇ ಕಳೆಯೇರಿತು. ಜನರ ಅತಿಹಿತದ ಮಾತುಗಳಿಗೆ ಸಂಬಂಧಿಸುವ ಸಂಗತಿ ಗಳ ವಿಚಾರಣೆಯು ಅವರಿಗೆ ಪರಿಚಿತವಾದ ಭಾಷೆಯಲ್ಲಿ ನಡೆಯುವದು ವಿಹಿತವು; ಆದ್ದರಿಂದ ಸರಕಾರದ ಕೋರ್ಟ ಕಚೇರಿಗಳಲ್ಲಿ ಇನ್ನುಮುಂದೆ ಪರಿಸಿಯನ್ ಭಾಷೆಯ ಬದಲಾಗಿ ಆಯಾ ಪ್ರಾಂತದ ಜನರ ದೇಶಭಾಷೆಯೇ ಉಪಯೋಗಿ ಸಲ್ಪಡಬೇಕು ಎಂದು ಆತನು ಹುಕುಮು ಕೊಟ್ಟನು.

೧೮೪೪ರಲ್ಲಿ ಸರಕಾರದ ಉದ್ಯೋಗಗಳಲ್ಲಿ ಎಂಥವರನ್ನು ನೇಮಿಸಿಕೊಳ್ಳ ತಕ್ಕದ್ದೆಂಬದನ್ನು ಕುರಿತು ಪ್ರಕಟಿಸುವಾಗ ಲಾರ್ಡ ಹಾರ್ಡಿಂಗನು ಸರಕಾರದ ವರು ಸ್ಥಾಪಿಸಿದ ಇಂಗ್ಲಿಷ ವಿದ್ಯಾಭ್ಯಾಸದ ಶಾಲೆಕಾಲೇಜುಗಳಲ್ಲಿ ಶಿಕ್ಷಣ ಪಡೆದ ವರಿಗೆ ಹೆಚ್ಚಿನ ಸವಲತ್ತನ್ನು ತೋರಿಸಬೇಕೆಂದೂ ಇವುಗಳಲ್ಲಿ ಸಾಮಾನ್ಯರಿಗಿಂತ ಅಧಿಕವಾದ ಬುದ್ಧಿಶಕ್ತಿಯನ್ನೂ ಪಾಂಡಿತ್ಯವನ್ನೂ ಪ್ರಕಟಿಸಿ ಹೆಸರಾದವರನ್ನು ಸರಕಾರದ ಅಧಿಕಾರದ ಸ್ಥಾನಗಳಿಗೆ ವಿಶೇಷವಾಗಿ ಆರಿಸಬೇಕೆಂದೂ ಅಪ್ಪಣೆ ಕೊಡಿಸಿದನು. ಈ ಹುಕುಮಿನಿಂದಲೂ ಇಂಗ್ಲಿಷ ವಿದ್ಯಾಭ್ಯಾಸಕ್ಕೆ ಬಲವಾದ ಉತ್ತೇಜನವು ದೊರೆತಿತು.

ಆ ಸಮಯದಲ್ಲಿ ಇಂಗ್ಲಿಷ ವಿದ್ಯೆಯ ಬಗ್ಗೆ ಹೀಗೆ ಬಹುಮತವು ಪ್ರಸನ್ನ ವಾಗಿದ್ದರೂ ಈ ವಿದ್ಯೆಯನ್ನು ಯಾವಭಾಷೆಯ ಮುಖಾಂತರವಾಗಿ ಅಭ್ಯಾಸ ಮಾಡಿಸುವದು ಉಚಿತವೆಂಬ ಪ್ರಶ್ನದ ಬಗ್ಗೆ ಮತಭೇದಗಳಾಗಿ ಎರಡು ಪಕ್ಷಗಳಲ್ಲಿ ಪ್ರಚಂಡವಾದ ಚರ್ಚೆಯು ನಡೆದಿತ್ತು. ಬಂಗಾಲದಲ್ಲಿ ಈ ಚರ್ಚೆಗೆ ಉಗ್ರವಾದ ಸ್ವರೂಪವು ಬಂದಿತ್ತು. ಮುಂಬಯಿ ಇಲಾಖೆಯ ವಿದ್ವಾಂಸರು ಮಾತ್ರ ದೇಶಭಾಷೆಗಳ ಮುಖಾಂತರವಾಗಿಯೇ ಇಂಗ್ಲಿಷಶಾಸ್ತ್ರಗಳ ಅಭ್ಯಾಸವು

ಜರಗತಕ್ಕದ್ದೆಂದು ನಿರ್ಣಯಿಸಿದ್ದರು. ಬಹುಜನರಿಗೆ ಪರಭಾಷೆಯಾಗಿಯೆ ಉಳಿಯುವಂಥ ಇಂಗ್ಲಿಷಭಾಷೆಯ ಮುಖಾಂತರ ದೇಶೀಯರಿಗೆ ವಿದ್ಯಾಮೃತವನ ಪಾನಮಾಡಿಸುವದರಿಂದ ಭಾವೀಪರಿಣಾಮಗಳು ಫಲದ್ರೂಪವಾಗದೆ ಉಳಿಯು ವೆಂದು ೧೮೨೧ ರಲ್ಲಿಯೇ ತಮ್ಮ ರಿಪೋರ್ಟದಲ್ಲಿ ಮುಂಬಯಿಯ ಎಜ್ಯುಕೇಶನ ಸಂಘದವರು ಪ್ರತಿಪಾದಿಸಿದ್ದರು. ೧೮೨೫-೨೬ರಲ್ಲಿ ಅವರು ಬರೆದ ರಿಪೋರ್ಟಿನ ಏತದ್ದೇಶೀಯರ ನೈತಿಕ ಹಾಗು ಬೌದ್ಧಿಕ ಸಂಸ್ಕೃತಿಯು ಸ್ವಭಾಷೆಯ ಮುಖಾಂತರ ವಿದ್ಯಾರ್ಜನೆಯನ್ನು ಮಾಡಿದರೆ ಕೈಗೊಡುವಂತೆ ಪರಭಾಷೆಯ ಮೂಲಕ ಶಿಕ್ಷಣಪಡೆಯುವದರಿಂದ ಸಾಧಿಸಲಾರದೆಂದೂ ಆದ್ದರಿಂದ ಇಂಗ್ಲಿ ಭಾಷೆಯ ಅಭ್ಯಾಸಕ್ಕೆ ಇಂಗ್ಲಿಷ ಶಾಲೆಗಳಲ್ಲಿ ದುಯ್ಯಮ ಮಹತ್ವವು ಮಾತ್ರ ಇರತಕ್ಕದ್ದೆಂದೂ ಅವರು ಅಭಿಪ್ರಾಯಪಟ್ಟರು.

ಈ ಸಂಘದವರ ಅಭಿಪ್ರಾಯವು ಮೌಂಟ ಸ್ಟುಅರ್ಟ ಎಲ್‌ಫಿನ್‌ಸ್ಟನ ರವರಿಗೆ ಪೂರ್ಣವಾಗಿ ಸಮ್ಮತವಾಗಿತ್ತು. ಆಗ ಅವರು ಪುಣೆಯ ಸಂಸ್ಕೃ ಕಾಲೇಜದ ಸುಪರಿಂಟೆಂಡೆಂಟರಾಗಿದ್ದರು. ಅವರ ಅಭಿಪ್ರಾಯವೂ ದೇಶಭಾಷೆಗ ಮುಖಾಂತರ ವಿದ್ಯಾಭ್ಯಾಸಮಾಡಿಸುವದೇ ಮೇಲಾದದ್ದೆಂದು ಇತ್ತು. ವಿದ್ಯಾ ವ್ಯಾಸಂಗವನ್ನು ಮಾಡಿ ಮುಂದಾದ ಜನರಿಂದ ತಮ್ಮ ದೇಶದ ಬಹುಜನರಿ ಲಾಭವಾಗಬೇಕಾದರೆ ಇಂಥ ಜನರಿಗೆ ಸಂಸ್ಕೃತ, ಇಂಗ್ಲಿಷಭಾಷೆಗಳ ಪ್ರಾವೀಣ್ಯತೆಯಿರುವದಲ್ಲದೆ ದೇಶಭಾಷೆಯಲ್ಲಿ ಪಾಂಡಿತ್ಯವಿರುವದೂ ಅತ್ಯಾ ವಶ್ಯಕವೆಂದು ಈತನು ಪ್ರತಿಪಾದಿಸಿದನು. ಸರಕಾರದ ಬಹುಜನಪ್ರಜರ ಜ್ಞಾನವು ಹರಡಬೇಕಾದರೆ ಇಂಗ್ಲಿಷವೂ ಸಂಸ್ಕೃತವೂ ಪ್ರಯೋಜನಕಾ ಯಲ್ಲೆಂದೂ ದೇಶಭಾಷಾಭ್ಯಾಸವೇ ಅದಕ್ಕೆ ತಕ್ಕ ಮಾರ್ಗವೂ ಸಾಧನವೂ ಎಂದೂ ಈತನು ಅಭಿಪ್ರಾಯಪಟ್ಟನು.

೧೮೪೩ರಲ್ಲಿ ಸರ್ ಎರ್‌ಸ್ಕಾಯಿನ ಪೆರೀ ಎಂಬವರು ಮುಂಬಯಿ ಎಜ್ಯು ಕೇಶನ್ ಬೋರ್ಡದ ಪ್ರೆಸಿಡೆಂಟರಾದರು. ಆಗ ಇಂಗ್ಲಿಷ ಭಾಷೆಯ ಮುಖಾಂತ ವಾಗಿಯೇ ಶಿಕ್ಷಣವು ಸಾಗಬೇಕೆಂಬ ಅಭಿಪ್ರಾಯಕ್ಕೆ ಬೆಂಬಲವು ದೊರೆತಿತು ಈ ಬಗ್ಗೆ ಬೋರ್ಡಿನಲ್ಲಿ ಬಲವಾದ ಚರ್ಚೆಯಾಯಿತು. ಈಬಗ್ಗೆ ಹಿಂದುಸ್ಥಾನ ಸರಕಾರದ ಅಭಿಪ್ರಾಯವನ್ನು ಕೇಳಬೇಕೆಂದು ನಿರ್ಣಯವಾಯಿತು. ಅವ ಲಾರ್ಡ ಬೆಂಟಿಂಕರ ಧೋರಣವನ್ನು ಸಮರ್ಥಿಸಿ ಅಭಿಪ್ರಾಯಕೊಟ್ಟರು.

ಹೀಗೆ ಬಂಗಾಲದಲ್ಲಿ ಇಂಗ್ಲಿಷವಿದ್ಯೆ ಪೌರ್ವಾತ್ಯವಿದ್ಯೆ ಇವುಗಳ ಬಗ್ಗೆ ವಾದವು ನಡೆದಿತ್ತು ; ಮುಂಬಯಿ ಇಲಾಖೆಯಲ್ಲಿ ಇಂಗ್ಲಿಷಭಾಷೆಯ ಮುಖಾಂತರ ಶಿಕ್ಷಣ, ದೇಶಭಾಷೆಗಳ ಮೂಲಕ ಶಿಕ್ಷಣ—ಈ ಪ್ರಶ್ನೆಯು ವಾದಗ್ರಸ್ತವಾದ ವಿಷಯವಾಗಿತ್ತು. ಈ ಬಗ್ಗೆ ನಾವು ಒಂದು ಸಂಗತಿಯನ್ನು ಲಕ್ಷ್ಯದಲ್ಲಿಡಬಹುದು. ಆರಂಭದಲ್ಲಿ ಸರಕಾರದವರು ದೇಶಭಾಷೆಗಳ ಮುಖಾಂತರವಾಗಿಯೇ ಶಿಕ್ಷಣವನ್ನು ಸಾಗಿಸುವದು ವಿಹಿತವೆಂದು ಅಭಿಪ್ರಾಯಪಟ್ಟಿದ್ದರು. ಆದರೆ ಈ ದೇಶದಲ್ಲಿ ಅವರ ಆಡಳಿತವು ಸ್ಥಿರವಾಗುತ್ತ ನಡೆದು ಅವರ ಬೇಡಿಕೆಗಳು ಹೆಚ್ಚಿದಂತೆ ವಿದ್ಯಾಭ್ಯಾಸವನ್ನು ಇಂಗ್ಲಿಷಭಾಷೆಯ ಮುಖಾಂತರ ಸಾಗಿಸಬೇಕೆಂದು ಅವರ ಅಭಿಪ್ರಾಯವಾಗಹತ್ತಿತು; ಅಂದರೆ, ಆಯಾಕಾಲದ ಆಡಳಿತದ ಗರಜುಗಳ ದೃಷ್ಟಿಯಿಂದಲೇ ಈ ಪ್ರಶ್ನದ ನಿರ್ಣಯವಾಗುತ್ತ ಹೋಯಿತೆಂಬ ಸಂಗತಿಯು ಸ್ಪಷ್ಟವಾದದ್ದು.

ಅಂತೂ, ಯಾವಭಾಷೆಯ ಮುಖಾಂತರ ವಿದ್ಯಾಭ್ಯಾಸವು ಸಾಗತಕ್ಕದ್ದೆಂಬ ಧೋರಣವನ್ನು ಸರಕಾರದವರು ಒಮ್ಮೆ ನಿಶ್ಚಯಪಡಿಸಿದ ಬಳಿಕ, ವಿದ್ಯಾಖಾತೆಯ ವ್ಯವಸ್ಥೆಯು ಚೆನ್ನಾಗಿ ಆಗುವ ಬಗ್ಗೆ ಯೋಜನೆಯಾಗಲಾರಂಭಿಸಿತು. ೧೮೨೩ರಲ್ಲಿ ಬಂಗಾಲದಲ್ಲಿ ಸ್ಥಾಪಿತವಾದ ಸಾರ್ವಜನಿಕ ಶಿಕ್ಷಣದ ಕಮಿಟಿಯ ಕಾರ್ಯಭಾರವು ಮಿತಿಮೀರಿ ಬೆಳೆದಿತ್ತು. ೧೮೪೨ರಲ್ಲಿ ಈ ಕಮಿಟಿಯ ಬದಲು ಬಂಗಾಲದಲ್ಲಿ ಶಿಕ್ಷಣ ಕೌನ್ಸಿಲ್ ಎಂಬ ಸಮಿತಿಯು ಸ್ಥಾಪನೆಯಾಯಿತು. ೧೮೪೦ರಲ್ಲಿ ಮುಂಬಯಿ ಇಲಾಖೆಯಲ್ಲಿ ಬೋರ್ಡ ಆಫ್ ಎಜ್ಯುಕೇಶನ್ ಎಂಬ ಸಂಘವು ಸ್ಥಾಪಿತವಾಗಿತ್ತು. ಇಂಥದೊಂದು ಸಂಘವು ಇದೇ ಸಮಯದ ಸುಮಾರಿಗೆ ಮದ್ರಾಸಿನಲ್ಲಿಯೂ ಸ್ಥಾಪಿಸಲ್ಪಟ್ಟಿತ್ತು.

ಆದರೂ ೧೮೫೪ರ ವರೆಗೆ ವ್ಯಾಪಕವಾದ ಶಿಕ್ಷಣವ್ಯವಸ್ಥೆಯು ಆಗಲಿಲ್ಲ. ಆವರುಷ ಅಂದರೆ ಕಂಪನಿಯವರ ಸನದು ಹೊಸದಾಗಿ ಮತ್ತೆ ಮುಂದುವರಿಸಲ್ಪಟ್ಟ ಕೂಡಲೆ ಬೊರ್ಡ ಆಫ್ ಕಂಟ್ರೋಲದ ಪ್ರೆಸಿಡೆಂಟರಾದ ಸರ್ ಚಾರ್ಲ್ಸ್ ವುಡ್‌ರೆಂಬವರು "ಹಿಂದುಸ್ತಾನದಲ್ಲಿಯ ಸಾಮಾನ್ಯ ಶಿಕ್ಷಣ" ಎಂಬ ವಿಷಯದ ಬಗ್ಗೆ ಒಂದು ಡಿಸ್ಪ್ಯಾಚ್ (ಪತ್ರಿಕೆ) ವನ್ನು ಬರೆದು ಕಳಿಸಿದರು. ಇದು ಬಹಳ ಮಹತ್ವದ ಪತ್ರಿಕೆಯಾಗಿತ್ತು. ಇದನ್ನು ಹಿಂದುಸ್ತಾನದ ಶಿಕ್ಷಣದ

"ದೊಡ್ಡ ಸನದು" ಎಂದು ಅನ್ನುವದುಂಟು. ಇದರಲ್ಲಿ ಪ್ರತಿಪಾದಿತವ ಮುಖ್ಯ ಮಾತುಗಳನ್ನು ಇಲ್ಲಿ ಸಂಕ್ಷೇಪದಲ್ಲಿ ಕೊಡುವೆವು.

ಕೋರ್ಟ ಆಫ್ ಡಿರೆಕ್ಟರರು ಶಿಕ್ಷಣಕ್ಕೆ ಉತ್ತೇಜನವನ್ನು ಕೊಡುವ ಮಹತ್ವದ ವಿಷಯವೆಂದು ಯಾವಾಗಲೂ ಎಣಿಸುವರು. ಇದರಿಂದ ಬೌದ್ಧಿ ಯೋಗ್ಯತೆಯು ಹೆಚ್ಚಾಗುವದಂತೂ ಇರಲಿ; ಶಿಕ್ಷಣವನ್ನು ಹೊಂದಿದ ನೈತಿಕ ಸ್ವಭಾವವೂ ಉಚ್ಚತರದ್ದಾಗುವದು. ಈ ಮೂಲಕ ಸರಕಾರದವ ಮೇಲ್ತರದ ಅಧಿಕಾರಸ್ಥರ ಪೂರಯಿಕೆಯಾಗುವದು. ಸರಕಾರಕ್ಕೆ ವಿಶ್ವಾ ಪೂರ್ವಕವಾಗಿ ಜವಾಬುದಾರಿಯ ಸ್ಥಳಗಳಲ್ಲಿ ಕೆಲಸಮಾಡುವ ಪ್ರಾಮಾಣಿ ಅಧಿಕಾರಸ್ಥರು ದೊರೆಯುವರು.

ಹಿಂದುಸ್ಥಾನದಲ್ಲಿ ಹೆಚ್ಚಾಗಿ ಅಭಿವೃದ್ಧಿಪಡೆಯಬೇಕಾಗಿರುವ ಶಿಕ್ಷಣ ಉದ್ದೇಶವು, ಯುರೋಪದ ಸುಧಾರಿಸಿದ ಕಲೆಗಳು, ಶಾಸ್ತ್ರಗಳು, ತತ್ವಜ್ಞಾ ವಾಙ್ಮಯ ಮುಂತಾದವುಗಳನ್ನು ಸಂಕ್ಷೇದಲ್ಲಿ ಹೇಳಬೇಕಾದರೆ ಯುರೋಪೀಂ ಜ್ಞಾನವನ್ನು ಹರಡುವದೇ ಆಗಿರುವದು.

ಹಿಂದುಸ್ತಾನದಲ್ಲಿ ಹಲವು ದೇಶಭಾಷೆಗಳ ಅಭ್ಯಾಸವನ್ನು ಮುಗ್ಗಿಸಿ ಅವುಗ ಬದಲಾಗಿ ಇಂಗ್ಲಿಷಭಾಷೆಯ ಅಭ್ಯಾಸವನ್ನು ಪ್ರಚಾರಪಡಿಸುವದು ಕಂಪನಿ ಸರಕಾರದ ಉದ್ದೇಶವಿಲ್ಲ. ಪ್ರಜೆಗಳಲ್ಲಿ ಬಹುಜನರಿಗೆ ಪರಿಚಿತವಿರುವ ದೇಶಭಾ ಗಳ ಉಪಯೋಗವನ್ನು ಹೆಚ್ಚಿಸುವದರ ಮಹತ್ವವು ಸರಕಾರಕ್ಕೆ ಗೊತ್ತಿರುವದ ಈ ಮೂಲಕ ಜನರ ಸಾಮಾನ್ಯ ಶಿಕ್ಷಣದಲ್ಲಿ ಇವುಗಳ ಅಭ್ಯಾಸವು ಒತ್ತರದಿಂ ಸಾಗಲಿಕ್ಕೆ ಬೇಕೆಂಬದು ಅನಿವಾರ್ಯವಾದದ್ದು. ಜನರಲ್ಲಿ ಬೇಡಿಕೆಯಿದ್ದ ಮಾತ್ರ ಇಂಗ್ಲಿಷ ಭಾಷಾಭ್ಯಾಸದ ಯೋಜನೆಯು ಆಗತಕ್ಕದ್ದು. ಇಲ್ಲಿಯಾದರ ಆಯಾಜಿಲ್ಲೆಯ ದೇಶಭಾಷೆಯ ಅಭ್ಯಾಸದ ಕಡೆಗೆ ಸಾಕಷ್ಟು ಲಕ್ಷ್ಯವನ್ ಪೂರಯಿಸಿದಬಳಿಕ ಹಾಗು ಆ ಭಾಷೆಯ ಮುಖಾಂತರ ದೊರೆಯಬಹುದಾ ಸಾಮಾನ್ಯಶಿಕ್ಷಣವನ್ನು ಸಾಗಿಸಿದ ಬಳಿಕ ಇಂಗ್ಲಿಷಭಾಷೆಯ ಅಭ್ಯಾಸವನ್ ಅದರೊಡನೆ ನೇರಿಸತಕ್ಕದ್ದು. ಆದ್ದರಿಂದ ಯುರೋಪೀಯ ಜ್ಞಾನವನ್ ಹಿಂದುಸ್ತಾನದ ಜನರಲ್ಲಿ ಹರಡಲು ದೇಶಭಾಷೆಗಳು ಹಾಗು ಇಂಗ್ಲೀಷಭಾಷ ಇವೆರಡೂ ಸಮಾನ ಸಾಧನಗಳಿರುವವೆಂದೂ ಇವೆರಡನ್ನೂ ಜೊತೆಯಲ್ಲಿಯೆ

ಭ್ಯಾಸಿಸುವದನ್ನು ನೋಡಬೇಕೆಂದೂ ಕಂಪನಿಯ ಸರಕಾರದವರ ಆಕಾಂ
ಕ್ಷೆಯು.

ಇನ್ನುಮುಂದೆ ಶಿಕ್ಷಣದ ವ್ಯವಸ್ಥೆಯನ್ನೂ ಮೇಲ್ವಿಚಾರಣೆಯನ್ನೂ ಮಾರ್ಗದರ್ಶನವನ್ನೂ ಸದ್ಯಕ್ಕಿಂತ ಹೆಚ್ಚು ಸ್ಥಿರವಾದ ತಳಹದಿಯಮೇಲೆ ನೆಗೊಳಿಸುವದು ಇಷ್ಟವಾದದ್ದೆಂದು ಸರಕಾರದವರ ಅಭಿಪ್ರಾಯವು. ಆದ್ದರಿಂದ ಸರಕಾರದ ಒಂದು ಭಾಗವೆಂದು ಅವರು ಹಿಂದುಸ್ತಾನದ ಪ್ರತಿಯೊಂದು ಇಲಾಖೆ ಯಲ್ಲಿ ಒಂದು ವಿದ್ಯಾಖಾತೆಯನ್ನು ಏರ್ಪಡಿಸಬೇಕೆಂದು ನಿಶ್ಚಯಿಸಿರುವರು. ಈ ಖಾತೆಗೆ ಒಬ್ಬ ಮುಖ್ಯಾಧಿಕಾರಿಯನ್ನು ನೇಮಿಸಿ ಆತನು ಆಖಾತೆಯ ವ್ಯವಸ್ಥೆಯ ಬಗ್ಗೆ ಪ್ರಾಂತಿಕ ಸರಕಾರಕ್ಕೆ ಜವಾಬುದಾರನಿರುವಂತೆ ಮಾಡುವರು.

ಹಿಂದುಸ್ತಾನದಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಯೋಗ್ಯ ಕಾಲವು ಬಂದಿರುವದೆಂದೂ ಕಂಪನಿ ಸರಕಾರದವರ ಅಭಿಪ್ರಾಯವು. ಈ ವಿಶ್ವವಿದ್ಯಾಲಯ ಗಳು ಹೆಚ್ಚಿನ ವಿದ್ಯಾಭ್ಯಾಸವನ್ನು ಮುಂದುವರಿಸುವ ಮಹತ್ತರವಾದ ಕಾರ್ಯ ವನ್ನು ಕೈಕೊಂಡು, ವಿದ್ಯೆ ಕಲಾವಾಙ್ಮಯಗಳಲ್ಲಿ ಹೆಚ್ಚಳವನ್ನು ಪಡೆದವರಿಗೆ ಪದವಿಗಳನ್ನು (ಯೋಗ್ಯತಾಪದವಿಗಳನ್ನು) ಕೊಡಬಹುದು. ಇವುಗಳಲ್ಲಿ ವಿಶೇಷ ಯೋಗ್ಯತೆಯನ್ನು ಹೊಂದಿದವರಿಗೆ ಈಬಗ್ಗೆ ಗುಣಗಳನ್ನು ಪ್ರತ್ಯೇಕವಾಗಿ ಕೊಟ್ಟು ಸದ್ಯೋಗ್ಯತೆಯಿಂದ ತೇರ್ಗಡೆ ಪಡೆದಬಗ್ಗೆ ಯೋಗ್ಯತಾಪತ್ರಗಳನ್ನು ಕೊಡಬಹುದು.

ಆರಂಭದಲ್ಲಿ ಪೌರ್ವಾತ್ಯ ವಿದ್ಯಾಭಿವೃದ್ಧಿಯೇ ಹಿಂದುಸ್ತಾನದ ಜನರಿಗೆ ಲಾಭವಹವಾದದ್ದೆಂದು ಎಷ್ಟೋ ಜನರು ಪ್ರತಿಪಾದಿಸಿದರು. ಯುರೋಪೀಯ ಜ್ಞಾನವನ್ನು ಹಿಂದುಸ್ತಾನದ ಸಂಸ್ಕೃತ ಮೊದಲಾದ ಪ್ರೌಢಭಾಷೆಗಳ ಮೂಲಕ ಕಲಿಸಿಕೊಡಲು ಪ್ರಯತ್ನಿಸುವದೇ ಶ್ರೇಯಸ್ಕರವೆಂದು ಇವರ ಅಂಬೋಣವು. ಈ ಅಭಿಪ್ರಾಯಗಳಿಗೆ ಮನ್ನಣೆ ದೊರೆಯದಿದ್ದದ್ದು ಆ ಕಾಲದ ವಿದ್ಯಾಪಕ್ಷ ಪಾತಿಗಳ ಜಾಣ್ಮೆಯ ಸಾಕ್ಷಿಯು ಎಂದು ಕಂಪನಿ ಸರಕಾರದವರ ಮತವು. ಆದರೆ ಈ ಮೂಲಕ ಸರಕಾರದವರು ಕೈಕೊಂಡ ಶಿಕ್ಷಣ ಪ್ರಸಾರದ ವ್ಯವಸ್ಥೆ ಯಲ್ಲಿ ಹಿಂದುಸ್ತಾನದ ತೀರ ಸ್ವಲ್ಪ ಜನರಿಗೆ ಮಾತ್ರ ಹೆಚ್ಚಿನ ತರಗತಿಯ ಶಿಕ್ಷಣವು ದೊರೆಯುತ್ತಿರುವದು; ಈ ಜನರು ಮೇಲಿನ ವರ್ಗಗಳ ಜನರೇ

ಆಗಿರುವರು. ಆದ್ದರಿಂದ ಇದಕ್ಕೂ ಹೆಚ್ಚು ಮಹತ್ವವಾದ ಒಂದು ಮಾತಿ ಕಡೆಗೆ ಸರಕಾರದವರ ಲಕ್ಷ್ಯವು ಹೋಗಬೇಕಾಗಿರುವದು. ಈ ಮಾತು ಈ ವರೆಗೆ ಅವರ ಲಕ್ಷ್ಯದಲ್ಲಿ ಬಂದಿಲ್ಲ. ಅದು ಯಾವದೆಂದರೆ ಹಿಂದುಸ್ತಾನ ಬಹುಜನರಿಗೆ ಅವರವರ ಸ್ಥಿತಿಗಳಿಗೆ ತಕ್ಕಂತೆ ಉಪಯುಕ್ತವೂ ವ್ಯವಹಾರಿಕವೂ ಆದ ಜ್ಞಾನದ ಲಾಭವಾಗಬೇಕಾಗಿದೆ. ಈ ಜನರಿಗೆ ಸರಕಾರದ ಸಹಾಯವಿಲ್ಲದ ತಕ್ಕ ಶಿಕ್ಷಣವು ದೊರೆಯುವದು ಅಶಾಧ್ಯದದ್ದು. ಇನ್ನು ಮುಂದೆ ಸರಕಾರದವರ ಪ್ರಯತ್ನಗಳು ಈ ಉದ್ದೇಶವು ಈಡೇರುವ ಮಾರ್ಗವನ್ನು ಕಂಡುಹಿಡಿಯುವದ ಕಡೆಗೆ ಸಾಗತಕ್ಕದ್ದು. ಈ ಉದ್ದೇಶವು ಸಫಲವಾಗಲಿಕ್ಕಾಗಿ ಸರಕಾರದವರು ಹಣವನ್ನು ಹೆಚ್ಚಾಗಿ ಮಂಜೂರ ಮಾಡಲು ಸಿದ್ಧರಿರುವರು.

ಹಿಂದುಸ್ತಾನದ ಪ್ರತಿಯೊಂದು ಜಿಲ್ಹೆಯಲ್ಲಿ ಇನ್ನುಮುಂದೆ ಕೆಲಜನ ಯುವ ಕರಿಗೆ ಮಾತ್ರ ಹೆಚ್ಚಿನ ಶಿಕ್ಷಣವು ದೊರೆಯುವ ಕೆಲವು ಶಿಕ್ಷಣಾಲಯಗಳು ಮಾತ್ರ ಇರಬಾರದು. ಸಮಾಜದ ಬೇರೆಬೇರೆ ಸ್ಥಿತಿಗಳಲ್ಲಿದ್ದ ಜನರಿಗೆ ಸದ್ಯಕ್ಕಿಂತ ಹೆಚ್ಚಿನ ಶಿಕ್ಷಣಾನುಕೂಲತೆಗಳು ದೊರೆತು ಶಿಕ್ಷಣ ಪಡೆದವರಿಗೆ ಸಮಾಜಕ್ಕೆ ಸಾಹಾಯ್ಯಕರಾಗಿ ಬಾಳುವ ಯೋಗ್ಯತೆಯು ಉಂಟಾಗುವಂಥ ಶಾಲೆಗಳು ಹೆಚ್ಚಾಗಿ ಇರತಕ್ಕದ್ದು.

ಬಹುಜನ ಪ್ರಜೆಗಳಿಗೆ ನಿಜವಾದ ಪ್ರಾಥಮಿಕ ಜ್ಞಾನವನ್ನು ಪೂರಯಿಸುವ ಶಾಲೆಗಳ ಸಂಖ್ಯೆಯು ಹೆಚ್ಚಾಗಬೇಕು. ಇವಕ್ಕೆ ಸರಕಾರದವರು ಸಹಾಯ್ಯಕ ದ್ರವ್ಯವನ್ನು ಕೊಟ್ಟು ಉತ್ತೇಜನಗೊಳಿಸಬೇಕು.

ಇಂಗ್ಲಂಡದಲ್ಲಿ ಗ್ರಾಂಟ ಇನ್ ಏಡ ಅಂದರೆ ಸಾಹಾಯ್ಯಕ ದ್ರವ್ಯವನ್ನು ಹಂಚುವ ಪದ್ಧತಿಯ ಮೂಲಕ ಶಿಕ್ಷಣಪ್ರಸಾರದ ವ್ಯವಸ್ಥೆಯು ತೀವ್ರವಾಗಿ ಫಲಕಾರಿಯಾಗುವದೆಂದು ಕಂಡುಬಂದಿದೆ. ಈ ಯೋಜನೆಯನ್ನು ಹಿಂದುಸ್ತಾನ ದಲ್ಲಿ ಪ್ರಚಾರದಲ್ಲಿ ತರಬೇಕೆಂದು ಸರಕಾರದವರು ನಿಶ್ಚಯಿಸಿರುವರು. ಹೀಗೆ ಸಾಹಾಯ್ಯವನ್ನು ಪಡೆಯುವ ಶಾಲೆಗಳಲ್ಲಿ ದೊರೆಯುವ ಧಾರ್ಮಿಕ ಶಿಕ್ಷಣದಲ್ಲಿ ಸರಕಾರದವರು ಕೈಹಾಕುವ ಗೊಡವೆಗೆ ಹೋಗಲೊಳಸುವದಿಲ್ಲ.

ಹಿಂದುಸ್ತಾನದ ಪ್ರತಿಯೊಂದು ಇಲಾಖೆಯಲ್ಲಿ ಶಿಕ್ಷಕರಿಗಾಗಿ ಟ್ರೇನಿಂಗ ಸ್ಕೂಲಗಳನ್ನೂ ಕ್ಲಾಸುಗಳನ್ನೂ ಆದಷ್ಟು ತೀವ್ರವಾಗಿ ಸ್ಥಾಪಿಸುವ ವ್ಯವಸ್ಥೆ

ಸಾಗಬೇಕು. ಹಿಂದುಸ್ತಾನದ ಜನರಿಗೆ ಸರಕಾರದ ಇತರ ಖಾತೆಗಳಲ್ಲಿ ನವ ಕರಿಯ ಸ್ಥಳಗಳು ದೊರೆಯುವಂತೆ ಶಿಕ್ಷಣ ಖಾತೆಯಲ್ಲಿಯೂ ಸ್ಥಳಗಳು ದೊರೆಯಬೇಕು.

ಸರಕಾರದಲ್ಲಿ ಸ್ಥಳಗಳು ದೊರೆಯಬೇಕಾದರೆ ಇತರ ಸಂಗತಿಗಳಲ್ಲಿ ಸಮಾನ ಯೋಗ್ಯತೆಯುಳ್ಳವರಲ್ಲಿ ಸರಿಯಾದ ಶಿಕ್ಷಣ ಪಡೆದವನಿಗೆ ಮೊದಲು ಸ್ಥಳವು ದೊರೆಯತಕ್ಕದ್ದು. ಈ ಶಿಕ್ಷಣವನ್ನು ಯಾವ ಶಾಲೆಯಲ್ಲಿ ಇಲ್ಲವೆ ಯಾವ ಮಾರ್ಗದಿಂದ ದೊರೆತಿರುವದೆಂಬುದನ್ನು ಎಣಿಸತಕ್ಕದ್ದಲ್ಲ. ಶಿಕ್ಷಣವಿಲ್ಲದವನಿಗಿಂತ ಶಿಕ್ಷಣ ಪಡೆದವನಿಗೆ ಸರಕಾರದ ಸ್ಥಳಗಳಿಗೆ ಹೆಚ್ಚಿನ ಬಾಧ್ಯತೆಯು ಇರತಕ್ಕದ್ದು.

ಹಿಂದುಸ್ತಾನದ ಜನರನ್ನು ವಿಶೇಷ ಉದ್ಯೋಗಗಳಿಗೆ ತಕ್ಕವರನ್ನಾಗಿ ಮಾಡಲು ಏರ್ಪಡಿಸಿದ ಶಿಕ್ಷಣಾಲಯಗಳ ವಿಷಯದಲ್ಲಿ ಸರಕಾರದವರು ಯಾವಾಗಲೂ ಹೆಚ್ಚಿನ ಆಸ್ಥೆಯುಳ್ಳವರಾಗಿರುವರು; ಅಂದರೆ ವೈದ್ಯಕಿ ಕಾಲೇಜುಗಳು, ಇಂಜಿನಿಯರಿಂಗ ಕಾಲೇಜುಗಳು, ಔದ್ಯೋಗಿಕ ಶಾಲೆಗಳು ಮುಂತಾದವು.

ಸರಕಾರದವರು ಹಿಂದುಸ್ತಾನದ ಹುಡಿಗೆಯರಿಗೆ ಮನಮುಟ್ಟ ವಿಶಾಲವಾದ ಸಾಹ್ಯಾಯ್ಯವನ್ನು ಮಾಡತಕ್ಕದ್ದೆಂದು ಗವ್ಹರ್ನರ ಜನರಲ್ಲರು ವ್ಯಕ್ತಗೊಳಿಸಿದ ಅಭಿಪ್ರಾಯವು ಕಂಪನಿ ಸರಕಾರಕ್ಕೆ ಪೂರ್ಣವಾಗಿ ಮಾನ್ಯವಿರುವದು.

ಸರಕಾರದವರು ಸ್ಥಾಪಿಸಿದ ಶಾಲೆ ಕಾಲೇಜ ಮುಂತಾದ ಸಂಸ್ಥೆಗಳು ಸಾರ್ವಜನಿಕ ಹಿತಕ್ಕಾಗಿಯೇ ಇರುವ ಮೂಲಕ ಅಲ್ಲಿ ದೊರೆಯುವ ಶಿಕ್ಷಣವು ಸಾಮಾನ್ಯವಾದದ್ದೇ ಇರಬೇಕಲ್ಲದೆ ಧಾರ್ಮಿಕ ವಿಷಯಗಳನ್ನೊಳಗೊಂಡದ್ದಿರಲಾಗದು.

ನಿಜವಾಗಿ ನೋಡಲು ಕಂಪನಿಯ ಸರಕಾರದವರು ಪ್ರಕಟಪಡಿಸಿದ ಈ ರಿಪೋರ್ಟು ಹಿಂದುಸ್ತಾನದ ಶಿಕ್ಷಣದಲ್ಲಿ ಹೊಸದೊಂದು ಯುಗವನ್ನು ಆರಂಭಿಸುವಂಥದಾಗಿತ್ತೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಹಿಂದುಸ್ತಾನದಲ್ಲಿ ಸರಕಾರದವರು ಕೊಡಬೇಕೆಂಬ ಶಿಕ್ಷಣದ ಉದ್ದೇಶವು ಯಾವದಿರಬೇಕು; ಧಾರ್ಮಿಕ ಶಿಕ್ಷಣದಬಗ್ಗೆ ಸರಕಾರದವರ ಧೋರಣವು ಯಾವಪ್ರಕಾರದ್ದಿರಬೇಕು; ಯಾವ ಭಾಷೆಯ ಮುಖಾಂತರವಾಗಿ ಏತದ್ದೇಶೀಯರಿಗೆ ಶಿಕ್ಷಣವು ದೊರೆಯಬೇಕು ಇವೇ ಮೊದಲಾದ ಬಹುದಿವಸದಿಂದ ವಾದಗ್ರಸ್ತವಾದ ವಿಷಯಗಳಬಗ್ಗೆ ನಿಶ್ಚಿತ

ವಾದ ಧೋರಣವು ಇದರಿಂದ ನಿರ್ಣಯಿತವಾಯಿತು. ಶಿಕ್ಷಣವ್ಯವಸ್ಥೆಯು ಹೊಸ ತಳಹದಿಯಮೇಲೆ ಸುಯೋಜಿತವಾಯಿತು ; ಬಹುಜನರ ಶಿಕ್ಷಣ ಇದರಿಂದ ಆರಂಭವಾಯಿತು ; ವಿಶ್ವವಿದ್ಯಾಲಯಗಳ ಉಚ್ಚತರದ ಶಿಕ್ಷಣ ಅಂಕುರವು ತಲೆದೋರಿತು. ಶಿಕ್ಷಣದಲ್ಲಿ ಖಾಸಗಿ ಪ್ರಯತ್ನಗಳಾಗಲಿಕ್ಕೆ ಅನು ದೊರೆತಿತು. ಹಿಂದುಸ್ತಾನದ ಶಿಕ್ಷಣಮಂದಿರಕ್ಕೆ ಇದು ಕಳಸದಂತೆ ಒ ಲಾರಂಭಿಸಿತು.

ಈ ಪತ್ರಿಕೆಯು ಹಿಂದುಸ್ತಾನದ ಸರಕಾರದವರ ಕೈಸೇರಿದೊಡನೆಯೆ ದೇಶದ ಎಲ್ಲ ಭಾಗಗಳಲ್ಲಿ ಶೈಕ್ಷಣಿಕ ಚಟುವಟಿಕೆಯು ಪ್ರಬಲವಾಗಿ ತೋ ಲಾರಂಭಿಸಿತು. ೧೮೫೫ರಲ್ಲಿ ಹಿಂದುಸ್ತಾನದ ಎಲ್ಲ ಪ್ರಾಂತಗಳಲ್ಲಿ ವಿದ್ಯಾಖಾತೆಗ ಏರ್ಪಡಿಸಲ್ಪಟ್ಟವು. ೧೮೫೭ರಲ್ಲಿ ಕಲಕತ್ತೆ, ಮುಂಬಯಿ, ಮದ್ರಾಸಗಳ ವಿಶ್ವವಿದ್ಯಾಲಯಗಳು ಸ್ಥಾಪಿತವಾದವು. ಇವು ಲಂಡನದ ವಿಶ್ವವಿದ್ಯಾಲಯ ಮಾದರಿಯ ವಿದ್ದವು ; ಅಂದರೆ ವಿದ್ಯಾರ್ಥಿಗಳನ್ನು ಬೇರೆ ಬೇರೆ ಪರೀಕ್ಷೆಗಳ ಪರೀಕ್ಷಿಸಿ ವಾಙ್ಮಯ, ಕಾಯಿದೆ, ವೈದ್ಯಕಿ, ಸಿವಿಲ್, ಎಂಜಿನಿಯರಿಂ ಮುಂತಾದ ಪರೀಕ್ಷೆಗಳಬಗ್ಗೆ ಡಿಗ್ರಿಗಳನ್ನು ಕೊಡಲಾರಂಭಿಸಿದವು. ಎ ಪ್ರಾಂತಗಳಲ್ಲಿ ಸಾಹಾಯ್ಯಕ ದ್ರವ್ಯವನ್ನು ಪಡೆದು ನಡೆಯುವ ಶಾಲೆಗಳ ಕಾಲೇಜುಗಳೂ ಸ್ಥಾಪಿತವಾದವು. ಈ ಮೇರೆಗೆ ಈ ಡಿಸ್ಪಾಚ್‌ವು (ಪತ್ರಿಕೆಯು ಸದ್ಯದ ಹಿಂದುಸ್ತಾನದ ಶಿಕ್ಷಣದ ಪದ್ಧತಿಯ ಮೂಲವಾಯಿತು.

ಈ ಪತ್ರಿಕೆಯ ಮೂಲಕ ಆರಂಭಿತವಾದ ಶಿಕ್ಷಣ ವ್ಯವಸ್ಥೆಯಲ್ಲಿ ಕಾಲಕ್ರ ದಲ್ಲಿ ದೋಷಗಳು ತಲೆದೋರಿದವೆಂಬುದು ನಿಜವು. ಆದರೆ ಅದರಲ್ಲಿ ನಿರ್ದಿ ವಾದ ವಿವರಗಳನ್ನು ದುರ್ಲಕ್ಷಿಸದ ಮೂಲಕವೇ ಈ ದೋಷಗಳು ಉಂಟಾ ವೆಂದು ಧಾರಾಳವಾಗಿ ಹೇಳಬಹುದು. ಉದಾಹರಣಾರ್ಥವಾಗಿ ವಿಶ್ವವಿದ್ಯಾಲ ಗಳಲ್ಲಿ ಹೆಚ್ಚಿನ ಯೋಗ್ಯತೆಯ ವಿದ್ಯಾಭ್ಯಾಸ (ಆನರ್ಸ ಕೋರ್ಸ) ದ ಬಗ್ಗೆ ಯೋಜ ಏರ್ಪಡಲಿಲ್ಲ ; ವಿಶೇಷ ವಿಷಯಗಳಿಗಾಗಿ ಪ್ರೊಫೆಸರರನ್ನು ನಿಯಮಿಸುವ ವ್ಯವ ಯಾಗಲಿಲ್ಲ. ದೇಶಭಾಷೆಯ ಅಭ್ಯಾಸದಬಗ್ಗೆ ತಕ್ಕ ಏರ್ಪಾಡು ಆಗಲಿ ವಿಶ್ವವಿದ್ಯಾಲಯದ ಸಿನೇಟ ಎಂಬ ಸಂಘಗಳಲ್ಲಿ ಕಾಲೇಜುಗಳ ಪ್ರೊಫೆಸರ ಸ್ಥಳದೊರೆಯಲಿಲ್ಲ. ಕಾಲೇಜುಗಳನ್ನು ನಿಯಮಿತಕಾಲದಲ್ಲಿ ಒಮ್ಮೆ ಇನ್‌ಸ್ಪ

ಡುವ ವ್ಯವಸ್ಥೆಯಾಗಲಿಲ್ಲ. ಬಹುಜನರಿಗೆ "ಸಮಾಜದ ಪ್ರತಿಯೊಂದು ಗತಿಯ ಸ್ಥಿತಿಗತಿಯಲ್ಲಿರುವವನಿಗೆ ಉಪಯುಕ್ತವೂ ವ್ಯವಹಾರಿಕವೂ ಆದ ನವನ್ನು" ಪೂರಯಿಸುವ ವ್ಯವಸ್ಥೆಯಾಗಲಿಲ್ಲ. ಸರಕಾರದ ಬೇರೆ ಬೇರೆ ತೆಗಳಲ್ಲಿ ಸೇರಲರ್ಹರಾದ ಜನರಿಗೆ ವಿಶೇಷ ಯೋಗ್ಯತೆಯ ಪರೀಕ್ಷೆಗಳನ್ನು ರ್ಪಡಿಸುವದಾಗಲಿಲ್ಲ. ಈ ಡಿಸ್ಪಾಚ್‌ದಲ್ಲಿ ಪ್ರತಿಪಾದಿತವಾದ ಸೂಚನೆಗಳನ್ನು ಗ್ರತೆಯಿಂದ ವಿಚಾರಮಾಡಿ ಅಮಲಿನಲ್ಲಿ ತಂದಿದ್ದರೆ ಇದರಿಂದ ಸ್ಥಾಪಿತವಾದ ಶ್ವವಿದ್ಯಾಲಯಗಳ ಯೋಜನೆಯು ಶಿಕ್ಷಣ ಪದ್ಧತಿಯು ಜನರ ಕಡುತರವಾದ ೕಕೆಗಳಿಗೆ ಪಾತ್ರವಾಗುತ್ತಿರಲಿಲ್ಲ. ಈ ಟೀಕೆಗಳ ಮೂಲಕವೇ ಸರಕಾರದವರು ೯೦೨ರಲ್ಲಿ ಹಿಂದುಸ್ತಾನದ ಯುನಿವ್ಹರ್ಸಿಟಿ ಕಮಿಶನನೆಂಬ ಸಮಿತಿಯನ್ನು ರ್ಮಿಸಿ ಶಿಕ್ಷಣಪದ್ಧತಿಯ ದೋಷಗಳನ್ನು ಪರೀಕ್ಷಿಸಬೇಕಾಯಿತು; ಹಾಗು ೯೦೪ರಲ್ಲಿ ಯೂನಿವ್ಹರ್ಸಿಟಿ ಕಾಯಿದೆಯನ್ನು ಪಾಸುಮಾಡಕೊಳ್ಳಬೇಕಾಯಿತು; ಮುತರವಾಗಿ ವಿಶ್ವವಿದ್ಯಾಲಯಗಳಲ್ಲಿ ದೊರೆಯುವ ಶಿಕ್ಷಣವನ್ನು ಪಡೆಯು ವರು ಸರಕಾರದ ನವಕರಿಗಳನ್ನು ದೊರಕಿಸುವ ಆಶೆಯಿಂದ ಅಭ್ಯಾಸಮಾಡುವ ುಂಟು; ಹೀಗಾಗದೆ ಶಿಕ್ಷಣದಿಂದ ಒದಗುವ ಸಂಸ್ಕೃತಿಗಾಗಿ ವಿದ್ಯಾರ್ಜನೆ ಲ್ಲಿ ವಿದ್ಯಾರ್ಥಿಗಳು ತೊಡಗುವವರಾಗಬಹುದಾಗಿತ್ತು. ವಿಶ್ವವಿದ್ಯಾಲಯದ ರೀಕ್ಷೆಗಳನ್ನು ಸರಕಾರದ ನವಕರಿಗಳಿಗೆ ಸೇರಲು ಯೋಗ್ಯತೆಯ ಪರೀಕ್ಷೆ ಕೆಂದು ಎಣಿಸದೆ, ಅವುಗಳಿಗಾಗಿ ಬೇರೆ ಬೇರೆ ಪರೀಕ್ಷೆಗಳ ಯೋಜನೆಯನ್ನು ಾಡಿದ್ದರೆ ಹೆಚ್ಚಿನ ಶಿಕ್ಷಣದ ಉಚ್ಚವಾದ ಧ್ಯೇಯವು ಸಫಲವಾಗಬಹುದಾಗಿತ್ತು ಥಮಿಕ ಶಿಕ್ಷಣವಾದರೂ ವ್ಯವಹಾರೋಪಯುಕ್ತವಾದ ಮಾರ್ಗದಲ್ಲಿ ಅಭಿ ದ್ಧಿಗೊಳ್ಳಬಹುದಾಗಿತ್ತು. ಸದ್ಯಕ್ಕೆ ಅದು ಭಾಷಾತ್ಮಕವಾದದ್ದೆಂದೂ ವ್ಯವ ರ ವಿಷಯಗಳಿಂದ ದೂರವಾದದ್ದೆಂದೂ ಇರುವ ಜನಾಪವಾದಕ್ಕೆ ಎಡೆ ುಂಟಾಗುತ್ತಿರಲಿಲ್ಲ.

ಇರಲಿ; ೧೮೫೪ ರ ಡಿಸ್ಪಾಚದ ಮೂಲಕ ಸ್ಥಾಪಿತವಾದ ಶಿಕ್ಷಣ ದ್ಧತಿಯ ಮೂಲಕ ಶಿಕ್ಷಣದಲ್ಲಿ ಒತ್ತರದ ಪ್ರಗತಿಯು ಉಂಟಾಯಿತೆನ್ನ ಹುದು. ೧೮೭೧ರಲ್ಲಿ ಶಿಕ್ಷಣ ವ್ಯವಸ್ಥೆಯು ಪ್ರಾಂತಿಕ ಸರಕಾರಗಳ ಕೈಸೇರಿತು. ಮೂಲಕ ಈ ಪ್ರಗತಿಗೆ ತೀವ್ರತೆಯುಂಟಾಯಿತು. ಲೋಕಲ್ ಬೋರ್ಡ ು ಮ್ಯುನಿಸಿಪಾಲಿಟಿಗಳೂ ಸ್ಥಾಪಿತವಾಗಿ ಸ್ಥಾನಿಕ ಕಾರ್ಯಗಳಿಗಾಗಿ ಸ್ಥಾನಿಕ

ಕರಗಳನ್ನು ಎತ್ತುವ ಅಧಿಕಾರವು ಅವುಗಳಿಗೆ ಪ್ರಾಪ್ತವಾಗಿ, ಶಿಕ್ಷಣ ವಿಷಯಕ ಅವುಗಳ ಕಕ್ಷೆಯಲ್ಲಿ ಬಂದ ಮೂಲಕ ಶಿಕ್ಷಣಾಭಿವೃದ್ಧಿಗೆ ಅನುವು ದೊರೆತಿತು.

೧೮೮೨-೮೩ ರಲ್ಲಿ ಲಾರ್ಡರಿಪನ್ನನು ಸರ್ ವುಲಿಯಮ್ ಹಂಟರ ಎಂಬವ ಅಧ್ಯಕ್ಷತೆಯಲ್ಲಿ ಹಿಂದುಸ್ತಾನದ ಶಿಕ್ಷಣದ ಕಮಿಶನವೊಂದನ್ನು ನಿಯಮಿಸಿ ೧೮೫೪ ರಿಂದ ೧೮೮೨ ರ ವರೆಗೆ ಹಿಂದುಸ್ತಾನದಲ್ಲಿ ಆದ ಶೈಕ್ಷಣಿಕ ಪ್ರಗತಿಯನ್ನು ಸೂಕ್ಷ್ಮವಾಗಿ ವಿಚಾರಿಸ ಹಚ್ಚಿದನು.

" ಚಾರ್ಲ್ಸ ಡಿಕಂಝ್ "

ಲೇಖಕ:—ಎ. ಬಿ. ಬಸರಿ ಮುಖ್ಯಾಧ್ಯಾಪಕ ಉರ್ದು ಕ್ಲಾಸ್ ಕೇಶವಪುರ ಹುಬ್ಬಳ್ಳಿ.

ಅಲ್ಪ ಪರಿಚಯ— ಯಾವನು ಬಡತನದ ವಿಷಯುಕ್ತ ಅನುಭವವನ್ನು ಹೊಂದಿದನೋ, ಬಡಜನರ ಸಲುವಾಗಿ ಜಗತ್ತನ್ನು ಸುಧಾರಿಸಿದನೋ, ಖಡ್ಗವ ರುವ ತನ್ನ ಲೆಕ್ಕಣಿಕೆಯಿಂದ ಬಡವರ ಸಂಕಟಗಳ ನಿವಾರಣೆಯನ್ನು ಮಾಡಲಿ ಧರ್ಮಯುದ್ಧವನ್ನು ಹೂಡಿದನೋ, " ಜನತಾಸೇವೆಯೇ ಈಶಸೇವೆ " ಯೆಂ ಭಾವಿಸಿಕೊಂಡಿದ್ದನೋ ಮತ್ತು ಆಂಗ್ಲ ಸಾಹಿತ್ಯಸಂಸ್ಥೆಯ ಪ್ರತಿಷ್ಠ ಸದಸ್ಯನೆ ಕೊಂಡನೋ ಅವನೇ " **ಚಾರ್ಲ್ಸ ಡಿಕಂಝ್** " ನು.

ಜನನ— ಆಂಗ್ಲ ದೇಶದ " ಪೋರ್ಟ್ಸ್‌ಮಾಥ " (Portsmouth ಬಂದರದ ಸಮೀಪದಲ್ಲಿರುವ " ಲ್ಯಾಂಡಪೋರ್ಟ " (Land-port) ಎ ಗ್ರಾಮದಲ್ಲಿ ತಾರೀಖು ೭ನೇ ಫೇಬ್ರುವರಿ ಸನ್ ೧೮೧೨ ನೇ ಇಸ್ವಿಯಲ್ಲಿ ಇವ ಜನಿಸಿದನು.

ಬಾಲ್ಯ— ಇವನು ೨ ವರ್ಷದವನಿದ್ದಾಗ್ಗೆ ಇವನ ಮಾತಾಪಿತರರು ಕೇಥಮ್ ” (Cathem) ಎಂಬ ನಗರಕ್ಕೆ ತೆರಳಿದರು. ಇಲ್ಲಿ ಆರು ವರುಷ ವರೆಗೆ ಇವನ ಮನೆತನದ ಉದರನಿರ್ವಾಹವು ಸೂಸೂತ್ರವಾಗಿ ಸಾಗಿತು. ಈ ವಧಿಯಲ್ಲಿ “ ಡಿಕಂಝು ” ನು ವಿದ್ಯಾಭ್ಯಾಸಕ್ಕಾಗಿ ಶಾಲಾಗೃಹದಲ್ಲಿ ಸೇರಿಸಲ್ಪ ಟ್ಟನು. ಅಲ್ಲಿ ಅವನು ತನ್ನ ಬಾಲ್ಯದ ಉತ್ತಮಕಾಲವನ್ನು ಪ್ರಾಥಮಿಕ ಶಿಕ್ಷಣ ಕಳೆದನು. ಹತ್ತನೇ ವರುಷದ ವಯಸ್ಸಿನಲ್ಲಿ ಈತನ ಮಾತಾಪಿತ್ರರು “ ಲಂಡನ London) ಪಟ್ಟಣಕ್ಕೆ ತೆರಳಬೇಕಾಯಿತು. ಆದರೆ ಇಲ್ಲಿಗೆ ಬಂದ ಸ್ವಲ್ಪ ವಧಿಯಲ್ಲಿಯೇ ಇವನ ಮನೆತನಕ್ಕೆ ದಾರಿದ್ರ್ಯಾವಸ್ಥೆಯು ಮುತ್ತಿಕೊಂಡಿತು. ವನ ತಂದೆಯು ಸಾಲದ ಮೂಲಕ ಸೆರೆಮನೆಗೆ ಕಳುಹಿಸಲ್ಪಟ್ಟನು. ಆ ಕಾಲದ ದ್ಧತಿಯಂತೆ ಸಾಲಗಾರನು ತನ್ನ ಹೆಂಡತಿಯನ್ನೂ ಅಲ್ಪವಯಿ ಮಕ್ಕಳನ್ನೂ ನ್ನೊಡನೆ ಸೆರೆಮನೆಯಲ್ಲಿಟ್ಟುಕೊಳ್ಳಲು ಸರಕಾರದ ಪರವಾನಿಗಿ ಇತ್ತು. ಊಟದ ವಸ್ಥೆಯನ್ನು ಮಾತ್ರ ಸೆರೆಯಾಳುಗಳೇ ಸ್ವತಃ ಅಲ್ಲಿಯೇ ದುಡಿದು ಮಾಡಿಕೊಳ್ಳ ಕಾಗುತ್ತಿತ್ತು. ಇಲ್ಲವೆ ತಮ್ಮ ಆಪ್ತೇಷ್ಟರ ಹತ್ತರ ಕೈಒಡ್ಡಿಬೇಡಿಕೊಂಡು ಹರಣಮಾಡಬೇಕಾಗುತ್ತಿತ್ತು.

ಇದೇ ಸಂಧಿಯಲ್ಲಿ “ ಡಿಕಂಝು ” ನು “ ಬ್ಲಾಕಿಂಗ ಫ್ಯಾಕ್ಟರಿ ” (Black- factory) ಬೂಟುಗಳಿಗೆ ಕರೀ ಪಾಲೀಸ ಮಾಡುವ ಕಾರಖಾನೆಯಲ್ಲಿ ಗಿ ದುಡಿಯುಹತ್ತಿದನು. ಇವನ ಒಬ್ಬ ೧೦–೧೨ ವರುಷದ ತಂಗಿಯೂ ಸಹ ಕಡೆಯಲ್ಲಿ ಸೇವಕಳಾಗಿ ನಿಂತಳು. ಮತ್ತು ಇವರ ಮಾತಾಪಿತರರು ಸಣ್ಣ ಜೀರಿ ಮಕ್ಕಳೊಂದಿಗೆ ಸೆರೆಮನೆಯ ಸಂಕಟಗಳನ್ನು ಸಹಿಸಹತ್ತಿದರು. ಈ ವಲ್ಲಿ “ ಡಿಕಂಝು ” ನಿಗೆ ಸಿಗುತ್ತಿದ್ದ ಕೂಲಿಯು ತೀರ ಸ್ವಲ್ಪ ಇದ್ದು ಅವ ಟ್ಟನ ಹೊಟ್ಟೆಗೆಮಾತ್ರ ಹಾಗೂ ಹೀಗೂ ಸಾಕಾಗುವಂತಿತ್ತು. ಪ್ರತಿ ರವಿವಾರ ನು ತನ್ನ ಸಹೋದರಿಯೊಡನೆ ಸೆರೆಮನೆಗೆ ಹೋಗಿ, ವಾರದಲ್ಲಿ ಇದೊಂದು ಸವನ್ನು ಮಾತ್ರ ಸಂಕಟದಲ್ಲಿ ಗೋಳಾಡುತ್ತಿದ್ದ ತನ್ನ ಪರಿವಾರದೊಡನೆ ಯತ್ತಿದ್ದನು. ಸಣ್ಣತಮ್ಮಂದಿರು ನಗುವದನ್ನೂ, ಅಳುವದನ್ನೂ ಹಗಲೆಲ್ಲ ಸಿ ರಾತ್ರಿಯಾದೊಡನೆ ತನ್ನ ಕತ್ತಲೆಯ ಕೋಣೆಗೆ ವಿಶ್ರಾಂತಿಗಾಗಿ ಮರಳಿ ಸತ್ತಿದ್ದನು. ಆದರೆ ಈ (ರವಿವಾರ) ದಿವಸದ ಹಗಲಿನ ಕೊಂಚ ಸಂತೋಷ ಬಹಳ ಸಂಕಟಗಳ ಪುನರಾವರ್ತನೆ ಮಾಡುತ್ತ ರಾತ್ರಿಯಲ್ಲಿ ರಕ್ತಗಂಬನಿ

ಗಳನ್ನು ಸುರಿಸುತ್ತಿದ್ದನು. ಅತ್ತ ಅವನ ಸಹೋದರಿಯು ತನ್ನ ನೌಕರಿಗ ತೆರಳುತ್ತಿದ್ದಳು.

ಸಂಕಟಕಾಲದ ಸಮಾಪ್ತಿ— "ಡಿಕಂಝುನ" ಸುದೈವದಿಂದ ಕ ಸಂಕಟಕಾಲವು ದೀರ್ಘಾವಧಿಯನ್ನು ಕಳೆಯಲಿಲ್ಲ. ತಂದೆಯು ಸೆರೆಮನೆಯಿಂ ಬಿಡುಗಡೆಯಾದನು. ಮತ್ತು "ಡಿಕಂಝು" ನನ್ನು ಪುನಃ ವಿದ್ಯಾಭ್ಯಾಸಕ್ಕೆ ಹಚ್ಚಿದನು. ಆತನು ಕಾರಖಾನೆಯ ತನ್ನ ಜೀವಾತ್ಮನನ್ನು ಸುಡಿಸುವಂಥ ಸೇ ಯಿಂದ ನಿವೃತ್ತನಾಗಿ ವಾಚನಾವಲೋಕನೆಯು ಪುನಃ ತನ್ನ ಮನರಂಜಿಸುವದನ್ನು ನೋಡಿ ಸಂತೋಷದ ವಾದನಗಳನ್ನು ಬಾರಿಸಹತ್ತಿದನು. "ಡಿಕಂಝು" ಬಡತನದ ಮೂಲಕ ಮಾನಸಿಕ ನೈತಿಕ ಪರಿಣಾಮಗಳಿಂದುಂಟಾದ ಈತನ ಆ ಬಲವು ಜಗತ್ತಿನ ಎಲ್ಲ ಬಡಜನರ ಹೀನತೆಯನ್ನು ಅಳಿಯುವದಕ್ಕೋಸುಗ ಇವನನ ಅಹೋರಾತ್ರಿ ಅವಿಶ್ರಾಂತ ಶ್ರಮವನ್ನು ವಹಿಸಲು ಸ್ಫೂರ್ತಿಯನ್ನುಂಟುಮಾಡಿತು ಆದ್ದರಿಂದ ಅವನು ತಾನು ಜೀವಂತನಿರುವವರೆಗೂ ಬಡವರ ಹೀನಾವಸ್ಥೆಯ ವಿರುದ್ಧ ಖಡ್ಗದಂತಿರುವ ತನ್ನ ಲೆಕ್ಕಣಿಕೆಯಿಂದ ಧರ್ಮಯುದ್ಧವನ್ನು ಮಾಡಿದನು ಆದ್ದರಿಂದಲೇ ಅವನು ಆಂಗ್ಲಸಾಹಿತ್ಯವೆಂಬ ರಣಭೂಮಿಯ ಸೇನಾಪತಿ ಎಂ ಬಿರುದನ್ನು ಪಡೆದನು.

ಶಿಕ್ಷಣ ಪ್ರೇಮವೂ ಕಥೆಗಳ ರಚಿಸುವಿಕೆಯೂ— "ಡಿಕಂಝು" ನಿ ಪುನಃ ಶಿಕ್ಷಣ ಹೊಂದುವ ಸುಸಮಯವು ಕೈಗೂಡಿತು. ಹೀನಾವಸ್ಥೆಯಿ ಮುಕ್ತನಾದನು. ಆತನು ಮನಸುಗೊಟ್ಟು ಶೈಕ್ಷಣಿಕ ಸಂಕಟಗಳನ್ನು ಸಹಿ ಹತ್ತಿದನು. ಬೂಟಪಾಲಿಸಿನ ಕಾರಖಾನೆಯಲ್ಲಿ ಇವನ ಸ್ಥಿತಿಯು, ಸವಿನು ಗಳನ್ನಾಡುವ ಗಿಳಿಯು ಪಂಜರದೊಳಗೆ ಸಿಕ್ಕುಬಿದ್ದಂತೆ ಆಗಿತ್ತು. ಈಗ ಶಾಲಾಗೃ ದಲ್ಲಿ ಮನಸಿನ ಒಲವಿಕೆಯಿಂದಲೂ, ಶಿಕ್ಷಣದ ಕಾರ್ಯಗಳಿಂದಲೂ, ಈತ ಇಂದ್ರಿಯ ಶಕ್ತಿಗಳಲ್ಲಿ ತೇಜವೂ, ಜ್ಯೋತಿಯೂ ಬೆಳೆಯಹತ್ತಿದವು. ಜ್ಞಾನ ಶಕ್ತಿಯು ವಿಕಾಸಹೊಂದಿತು. ವಿದ್ಯಾಭಿರುಚಿಯ ಲವಲವಿಕೆಯು ಬೆಳೆದದ್ದರಿಂ ಅದಕ್ಕೆ ತಕ್ಕ ಹೆಚ್ಚಿನ ಸಾಹಸಗಳಾದರೂ ಬೆಳೆದವು. ಯಾವದೇಹವು ಶಾರೀರಿ ಶ್ರಮದಿಂದಲೂ, ಆಹಾರದ ಕೊರತೆಯಿಂದಲೂ, ವ್ಯಾಯಾಮದ ಅನನುಕೂಲ ಯಿಂದಲೂ ಕ್ಷೀಣವಾಗುತ್ತ ನಡೆದಿತ್ತೋ ಅದು ಈಗ ಸ್ಫೂರ್ತಿದಾಯಕನ

ಬಲವುಳ್ಳದ್ದಾ ಆಯಿತು. ಇವೆಲ್ಲ ಕಾರ್ಯಗಳು ಈತನ ಸುದೈವದಿಂದ ಮುಂದೆ ಬೆಳೆಯುತಕ್ಕ ವೃಕ್ಷದ ಫಲಗಳ ಸೇವನೆಗೆ ಪುಷ್ಟೀಕರಣಗಳಾಗಹತ್ತಿದವು. ಈತನು ಕೇವಲ ಪುಸ್ತಕಗಳ ವಿದ್ಯೆಯಲ್ಲಿಯೇ ತೊಡಗಿರದೆ, ಸಣ್ಣ ಸಣ್ಣ ನೈತಿಕ ನಾಟಕಗಳನ್ನು ರಚಿಸಿಕೊಟ್ಟು ಗ್ಯಾದರಿಂಗಿನ ಸಮಯದಲ್ಲಿ ಹುಡುಗರು ನಾಟಕ ಆಡುವಾಗ್ಗೆ ಮುಖ್ಯವಾಗಿ ಇವನು ಹೆಚ್ಚು ಭಾಗವನ್ನು ವಹಿಸಿ ಎಲ್ಲರಿಗಿಂತಲೂ ಶ್ರೇಷ್ಠನೆಂದೆನಿಸಿಕೊಳ್ಳುತ್ತಿದ್ದನು.

ಕಾರಕೂನಿ— ೧೪ ವರುಷದ ವಯಸ್ಸಿನಲ್ಲಿ "ಡಿಕಂಝು"ನು ಶಾಲಾಗೃಹಕ್ಕೆ ಶರಣು ಹೊಡೆದನು. ಮತ್ತು ಒಬ್ಬ "ಸಾಲಿಸಿಟರ" (Solicitor.) ನಲ್ಲಿ ಕಾರಕೂನನಾದನು. ಇಲ್ಲಿ ಇವನು ಎಲ್ಲ ಕಾರಕೂನರಿಗಿಂತಲೂ ಕಡಿಮೆ ದರಗತಿಯಲ್ಲಿದ್ದನು. ಆದಾಗ್ಯೂ ಇಷ್ಟು ಚಿಕ್ಕವಯಸ್ಸಿನಲ್ಲಿ ಈ ನೌಕರಿ ಸಿಕ್ಕಿದ್ದೆಂದರೆ ಅವನ ಸುದೈವವೇಸರಿ. ಆದರೂ ಅವನು ಇಷ್ಟರಮೇಲೆಯೇ ತೃಪ್ತಿಯನ್ನು ಹೊಂದದೆ ತನ್ನ ಬೆಳವಣಿಗೆಯ ಮೊದಲನೆಯ ಮೆಟ್ಟಿನಮೇಲೆ ಹೆಜ್ಜೆಯನ್ನಿಡುವ ಸುಸಂಧಿಯು ದೊರೆತದ್ದರಿಂದ ಧೈರ್ಯಗುಂದದೆ ಮುಂದೆ ಸಾಗಹತ್ತಿದನು. ಕ್ಷುಲ್ಲಕ ಕಾರಕೂನಿಯ ಚಿಕ್ಕಸಂಬಳದ ಮೇಲೆ ಕೈಯೂರಿಕೊಂಡು ಕೂಡ್ರುವದು ಉಚಿತವಲ್ಲವೆಂದು ಭಾವಿಸಿ ಸಂಕ್ಷಿಪ್ತ ಬರೆಹ (Short hand.) ದ ಕಲೆಯನ್ನು ಅಭ್ಯಾಸಿಸಿದನು. ಇದರಿಂದ ಅವನ ಬೆಳವಣಿಗೆಯ ಮಾರ್ಗದಲ್ಲಿ ಬಿತ್ತರದಿಂದ ನಡೆಯಲು ಅವನಿಗೆ ಸಹಾಯವು ದೊರೆಕಿತು. ತದನಂತರ ಇವನ ನ್ಯಾಯಾಸ್ಥಾನದಲ್ಲಿ ಸಂಕ್ಷಿಪ್ತ ಬರೆಹದ ಉದ್ಯೋಗವನ್ನು ಕೈಕೊಂಡನು. ಮೊದಮೊದಲು ಇವನ ಆದಾಯವು ಸ್ವಲ್ಪ ಇದ್ದು ಬರಬರುತ್ತ ಬಹುಬೇಗನೆ ಇವರಲ್ಲಿ ವ್ಯತ್ಯಾಸವಾಯಿತು.

ವೃತ್ತ ಮತ್ತು ಮಂತ್ರಿಮಂಡಲ— ೧೯ ನೇ ವರುಷದ ಪ್ರಾಯದಲ್ಲಿ 'ಮಾರ್ನಿಂಗ ಕ್ರಾನಿಕಲ್" (Morning chronicle) ಎಂಬ ವೃತ್ತಪತ್ರದ, ಚಾಲಕನು ಈತನ ಸಂಕ್ಷಿಪ್ತ ಬರೆಹದ ಕಲೆಯನ್ನು ಮೆಚ್ಚಿ ಅದನ್ನು ರೂಢಿಯಲ್ಲಿ ತಂದು ಮಂತ್ರಿಮಂಡಲ (Parliament) ದ ಮೆಂಬರರ ಭಾಷಣಕ್ಕೆ ಸಂಬಂಧಪಟ್ಟ ನಿಜ ಸಂಗತಿಗಳನ್ನೂ ಒಮ್ಮೊಮ್ಮೆ ಅಕ್ಷರಶಃ ಭಾಷಣಗಳನ್ನೂ ಪ್ರಸಿದ್ಧಪಡಿಸುವದಕ್ಕೋಸ್ಕರ "ಡಿಕಂಝು" ನನ್ನು ತನ್ನ ಸಹಾಯಕನನ್ನಾಗಿ ನೇಮಿಸಿಕೊಂಡನು. ಈ ಕೆಲಸದಲ್ಲಿ "ಡಿಕಂಝು" ನು ತನ್ನ ಬುದ್ಧಿಚಾತುರ್ಯ ಮತ್ತು

ಕಾರ್ಯಸಿದ್ಧತೆಯು ನಿಜಸ್ವರೂಪವನ್ನು ವಾಚಕರಿಗೆ ಮನನವಾಗುವಂತೆ ತಿಳಿಸ ದ್ಯುಕ್ತನಾದನು. ಸಮಯಾನುಸಾರ ಸುಪ್ರಸಿದ್ಧ ಉಪನ್ಯಾಸಗಳ ಭಾಷಣವ ಕೇಳಿ ವೃತ್ತಪತ್ರದಲ್ಲಿ ಪ್ರಚುರ ಮಾಡುವ ಕುರಿತು ಪಾರ್ಲಿಮೆಂಟಿನಿಂದ ಹೊ ಲಂಡನ್ ಮತ್ತು ಬೇರೆ ಪಟ್ಟಣಗಳಿಗೆ ಕಳಿಸಲ್ಪಡುತ್ತಿದ್ದನು. ಈ ಕಾಲ "ಡಿಕಂರ್ಸು" ನಿಗೆ ಹೆಚ್ಚು ಅನುಭವವು ಪ್ರಾಪ್ತವಾಯಿತು. ದೊಡ್ಡ ಪಟ್ಟಣ ಪ್ರವಾಸದಿಂದಲೂ, ದೊಡ್ಡ ದೊಡ್ಡ ಸಭೆಗಳಲ್ಲಿ ಸೇರ್ಪಡೆಯಾಗುವದರಿಂದಲ ಉತ್ತಮೋತ್ತಮ ತತ್ವಜ್ಞಾನಿಗಳ ಹಾಗೂ ಉಪನ್ಯಾಸಕರ ಭೆಟ್ಟಿಯಿಂದ ವಿದ್ಯಾಭಿವೃದ್ಧಿಯ ಹೆಚ್ಚಿನ ಲಾಭವನ್ನು ಪಡೆದನು. ಇದರ ಹೊರ್ತು ಆ ಕಾಲ ರೇಲ್ವೆಯ ಪ್ರವಾಸವಿಲ್ಲದ್ದರಿಂದ ಕುದುರೆಯ ಗಾಡಿಗಳಲ್ಲಿಯೂ ಒಮ್ಮೊಮ್ಮೆ ಕಾ ನಡಿಗೆಯಿಂದಲೂ ಪ್ರಯಾಣ ಮಾಡಬೇಕಾಗುತ್ತಿತ್ತು. ಆದ್ದರಿಂದ ಅವನು ನಿಜವ ಪ್ರವಾಸಕನಾಗಿ, ಪ್ರವಾಸದಿಂದಾಗಬೇಕಾದ ಎಲ್ಲ ಲಾಭಗಳನ್ನು ಪಡೆಯುತ್ತಿದ್ದ ಉದಾಹರಣಾರ್ಥ:— ಉದ್ಭಿಜ್ಜ ಕೋಟಿಯ ಜೀವನಕ್ರಮ ಹಾಗೂ ಭಿನ್ನಾಭಿ ಒಡವೆಗಳ ನಿರೀಕ್ಷಣೆಯಿಂದಲೂ, ಬೇರೆಬೇರೆ ತರಗತಿಯ ಜನರ ಸಹವಾಸದಿಂದ ಪ್ರಾಪ್ತವಾಗಬೇಕಾದ ವಿಶೇಷ ಸಂಗತಿಗಳು ಇವನಲ್ಲಿ ತುಂಬಿಕೊಂಡವು. ಈ ಅನುಭವಗಳೂ, ಬಾಲ್ಯಾವಸ್ಥೆಯ ಬಡತನದ ಸಂಕಟಗಳೂ ಅವನು ಬರೆದ ಗ್ರ ಗಳ ರಚನೆಗೆ ಬಹಳ ಸಹಾಯವಾದವು. ಇವೆಲ್ಲ ಸ್ವಂತದ ಪ್ರಯೋಗ ಮ ಅನುಭವದ ಆಧಾರದಿಂದಲೇ ಮುಂದೆ ಅವನು ದೊಡ್ಡದೊಡ್ಡ ಕೆಲಸಗಳ ಕೊನೆಗಾಣಿಸಿದನು.

ಮೊದಲನೆಯ ಚಿಂತನಪರ ಲೇಖನ— ಕೊನೆಗೆ "ಡಿಕಂರ್ಸು" ಪರರ ಭಾಷಣಗಳನ್ನು ಪ್ರಚುರಮಾಡುವದನ್ನು ಬಿಟ್ಟು ಸ್ವಂತದ ಅನುಭವ ಬರೆಯುವ ಸುಸಮಯವು ಬಂದೊದಗಿತು. ಆಗ ಅವನು ತನ್ನ ಜ್ಞಾನೇಂದ್ರಿ ಶಕ್ತಿಗಳ ಬಲದಿಂದ ಜನರ ಮನವೊಲಿಸುವದಕ್ಕಾಗಿಯೂ, ಬಡಜನರ ಹೀನಾವ ಯನ್ನಳಿಸಿ ಉಚ್ಚಪ್ರತಿಯವರನ್ನಾಗಿ ಮಾಡುವದಕ್ಕಾಗಿಯೂ ತನ್ನ ಲೆಕ್ಕಣಿಕೆ ಎ ಕುದುರೆಯನ್ನು ಸಾಹಿತ್ಯದ ರಣಾಂಗಣದಲ್ಲಿ ಓಡಿಸಹತ್ತಿದನು. ಇವನ ಮೊ ನೆಯ ಚಿಂತನಪರಲೇಖನವು ಮುಗಿದೊಡನೆಯೇ ಹೆದರುತ್ತ ಅಂಚೆಯಲ್ಲಿ ಹಾಕಿದ ಈ ಲೇಖನದಿಂದ ವಾಚಕರಿಗಾದ ಸಂತೋಷದಿಂದ ಇವನಿಗೆ ಪ್ರತ್ಯುತ್ತರವಾಗಿ ಬ ಪತ್ರಗಳನ್ನು ನೋಡಿ, ತನ್ನೀ ಸಾಹಿತ್ಯ ಸೇವೆಯ ಪ್ರಥಮಸಾಹಸದ ಸಂತೋಷ ಎಣೆಯೇ ಇಲ್ಲದಂತಾಯಿತು.

ಕೀರ್ತಿಯ ರಾಜಮಾರ್ಗ— ಈಗಂತೂ ಯಾವ ತೊಂದರೆಗಳಿಲ್ಲದಂಥ ನಿಷ್ಕಂಟಕವಾದ ರಾಜಮಾರ್ಗವು ಇವನ ಕಣ್ಣೆದುರಿಗೆ ಕಾಣಹತ್ತಿತು. 'ಡಿಕಂಸ್ಸು'ನು ತನ್ನ ಸಾಹಿತ್ಯಸೇವೆಯ ಕಡಿವಾಣವನ್ನು ಕೈಯಲ್ಲಿ ಹಿಡಿದು ನಿರ್ಭಯನಾಗಿ ಓಡಿಸಹತ್ತಿದನು. ನೋಡನೋಡುವಷ್ಟರಲ್ಲಿ ಆತನು ತನ್ನ ಬಯಕೆಯ ಉಚ್ಚ ಪ್ರತಿಯ ಮೆಟ್ಟನ್ನೇರಿದನು. ಅಂದರೆ ಕಾದಂಬರಿಗಳನ್ನು ರಚಿಸುವದರಲ್ಲಿ ಒಳ್ಳೇ ಕೀರ್ತಿಯನ್ನು ಪಡೆದು ಆಂಗ್ಲಸಾಹಿತ್ಯಸೇವೆಯನ್ನು ಮಾಡುವ ಎಲ್ಲ ಸುಪ್ರಸಿದ್ಧ ಜನರಲ್ಲಿ ಶ್ರೇಷ್ಠನೆಂದೆನಿಸಿಕೊಂಡನು.

ಭಾಷಣ ಮತ್ತು ಬರೆಹ— "ಡಿಕಂಸ್ಸು"ನ ಚಾತುರ್ಯದ ಕೆಲಸಗಳೆಂದರೆ ಇವನು ಕೇವಲ ಮನುಷ್ಯ ಜೀವನದ ಸುಧಾರಣೆಯ ಮತ್ತು ಬಡಜನರ ಬಾಳುವಿಕೆಯಲ್ಲಿ ಸಂತೋಷದ ತೆರೆಗಳು ಅಲೆದಾಡುವಂಥ ಲೇಖನಗಳು; ಭಾಷಣಗಳು. ಚೇಷ್ಟೆಯೇ ಅವನ ಭಾಷಣದ ಮುಖ್ಯವಾದ ಅಂಗವಾಗಿರುತ್ತಿದ್ದು, ಅವನು ಜನ ನಗೆ ನಗೆಯಲ್ಲಿಯೇ ವೈದಾಂತಿಕ ತತ್ವಗಳನ್ನೂ ಮನುಷ್ಯಜನ್ಮದ ಮುಖ್ಯವಾದ ಉದ್ದೇಶಗಳ ತಾತ್ಪರ್ಯವನ್ನೂ ವರ್ಣಿಸುತ್ತಿದ್ದದರಿಂದ ಜನರೆಲ್ಲರೂ ಆಶ್ಚರ್ಯಚಕಿತರಾಗುತ್ತಿದ್ದರು. ಇವನ ಈ ತರದ ವಾಕ್ಯಗಳ ಪರಿಣಾಮದಿಂದಲೇ ನಿಜವಾಗಿಯೂ ಆಳರಸರ ಕಣ್ಣುಗಳು ತೆರೆದವು. ಬಡವರ ಬಯಕೆ ಮತ್ತು ಲಾಭಗಳನ್ನೇರ್ಪಡಿಸುವ ಕುರಿತು ಹೆಚ್ಚಿನ ತಿದ್ದುಪಡಿಗಳೂ, ಸುಧಾರಣೆಗಳೂ ಅನುಲಿನಲ್ಲಿ ಬಂದವು. ಸೆರೆಮನೆ ಹಾಗೂ ಕಾರಖಾನೆಗಳಲ್ಲಿಯ ಕೂಲಿಕಾರರ ಕೂಡ ಆಗುತ್ತಿದ್ದಂಥ ಬಲುಮೆ, ಪೀಡನಗಳ ನಿವಾರಣೆಯು "ಡಿಕಂಸ್ಸು"ನ ಜೀವನದ ಸಾಧನದಿಂದಲೇ ಪ್ರಾಪ್ತವಾಗಿದ್ದು, ಇದುವರೆಗೂ ಬಹುಶಃ ಉಳಿದಿರುವದು. ಇವನು ರಚಿಸಿದ ಎಷ್ಟೋ ಗ್ರಂಥಗಳಲ್ಲಿ ಮುಖ್ಯವಾಗಿ "ಡೆವ್ಹಿಡ್ ಕಾಪರ ಫೀಲ್ಡ" David copper field ಮತ್ತು "ಪಿಕ್ ವಿಕ್ ಪೇಪರ್ಸ" (Pickwick papers) ಇವು ಸುಪ್ರಸಿದ್ಧವಾಗಿರುವವು.

ಮರಣ— ಬಡವನಾಗಿ ಹುಟ್ಟಿ, ಬಡವನಾಗಿ ಬೆಳೆದು, ಬಡಜನರ ಹಿತಕ್ಕಾಗಿ ದುಡಿಯುತ್ತಿದ್ದಂಥ ತನ್ನ ಪವಿತ್ರವಾದ ದೇಹವನ್ನು ತಾರೀಖು ೯ ನೇ ಜೂನ ಸನ್ ೧೮೭೦ ನೆಯ ಇಸ್ವಿಯ ದಿವಸ ಮಣ್ಣಿಗರ್ಪಿಸಿ, ತಾನು ಮಾತ್ರ ಕೀರ್ತಿಯನ್ನು ಪಡಕೊಳ್ಳುತ್ತ ಪರಲೋಕಕ್ಕೆ ತೆರಳಿದನು. ಹೆಸರುವಾಸಿಯಾದ ಇವನ ಶವ

ವನ್ನು ರಾಜವೈಭವದೊಡನೊಯ್ದು ರಾಜಸ್ಮಶಾನ (Westminister Abbey) ದಲ್ಲಿ ಹುಗಿದರು. ಇವನ ಮರಣದ ದಿವಸ ದೇಶದ ಎಲ್ಲ ಜನರು ಅದರಲ್ಲಿಯೂ ಬಹುಶಃ ಬಡಜನರು ದುಃಖಸಾಗರದಲ್ಲಿ ಮುಳುಗಿದರು.

ಹ್ಯೂರಿಸ್ಟಿಕ್ (ಶೋಧಕ) ಪದ್ಧತಿ

ಮಿ॥ ಜಿ. ಕೆ. ಕೊಪ್ಪೀಕರ ಬಿ. ಎ. ಬಿ. ಎಸ್. ಸಿ. ಬೀ. ಟಿ. ಇವರು ಬರೆದದ್ದು.

ನಾನು ಪ್ರಾಥಮಿಕ ಶಿಕ್ಷಣದ ಸಂಚಿಕೆಯಲ್ಲಿ ಡಾಲ್ಟನ್ ಲ್ಯಾಬೋರೇಟರಿ ಪ್ಲಾನ್ ಎಂಬ ಪದ್ಧತಿಯ ಬಗ್ಗೆ ಒಂದು ಸಣ್ಣ ಲೇಖನವನ್ನು ಬರೆದದ್ದು ವಾಚಕರ ಲಕ್ಷ್ಯದಲ್ಲಿರಬಹುದೆಂದು ನಂಬಿದ್ದೇನೆ. ಅದರಲ್ಲಿ ಆ ಪದ್ಧತಿಯನ್ನು ಸ್ವಲ್ಪದರಲ್ಲಿ ವಿವರಿಸಿದ್ದಲ್ಲದೆ, ಅದು ವಿಶೇಷವಾಗಿ ನಮ್ಮಲ್ಲಿ ರೂಢವಾಗಲು ಯಾವ ತೊಂದರೆಗಳಿರುವವೆಂಬದನ್ನು ವಿವೇಚಿಸಿರುವೆನು. ಆ ಪದ್ಧತಿಯ ಮೇರೆಗೆ ವರ್ಗಗಳು ಇಲ್ಲ. ಅದರಲ್ಲಿರುವ ವರ್ಗಗಳೆಂದರೆ ವಿಷಯಗಳನ್ನನುಸರಿಸಿ ನಿರ್ಮಿಸಿದ ವರ್ಗಗಳ (ಕೋಣೆಗಳೇ) ಸರಿ. ವಿದ್ಯಾರ್ಥಿಯು ತನ್ನ ಮನಸಿಗೆ ಬಂದ ಕೋಣೆಗಳಿಗೆ ಹೋಗಿ ಅಭ್ಯಾಸವನ್ನು ಸಾಗಿಸಬಹುದು; ಅಲ್ಲಿ ತನಗೆ ಕೊಟ್ಟ ಅವಧಿಯಲ್ಲಿ ನೇಮಿಸಿದ ವಿಷಯ ಭಾಗವನ್ನು ಕೊಟ್ಟ ಸೂಚನೆಗಳ ಮೇರೆಗೆ ಪುಸ್ತಕಾಲಯ, ಉಪಕರಣ ಸಂಗ್ರಹ ಹಾಗು ಕೊನೆಗೆ ಶಿಕ್ಷಕರ ಸಹಾಯ ಇವುಗಳಿಂದ ಮುಗಿಸ ಮಾಡಿಕೊಳ್ಳಬೇಕಾಗುವದು. ಆದರೂ ಹೀಗೆ ಪಡೆದ ಸ್ವಾತಂತ್ರ್ಯಕ್ಕೆ ವಿದ್ಯಾರ್ಥಿಗೆ ಕೆಲವು ಸಿಮಿತ್ರುಗಳೂ ಇರುವವೆಂದು ಆ ಲೇಖನದಲ್ಲಿ ತೋರಿಸಿ ಕೊಟ್ಟಿರುವೆನು.

ಆ ಪದ್ಧತಿಯ ಮೇರೆಗೆ ನೇಮಿಸಿ ಕೊಡುವ ಅಭ್ಯಾಸದ ವಿಷಯ ಭಾಗವನ್ನು ಕುರಿತು ಇನ್ನೊಂದು ಲೇಖನದಲ್ಲಿ ವಿವರಣೆಯನ್ನು ಮಾಡುವೆನು. ಇದಕ್ಕಾಗಿ ವಿದ್ಯಾರ್ಥಿಯ ದೃಷ್ಟಿಕೋನವನ್ನನುಸರಿಸಿ ಬರೆದ ಪುಸ್ತಕಗಳ ಸಂಗ್ರಹವೊಂದು ಅತ್ಯಾವಶ್ಯಕವು. ನಮ್ಮ ದೇಶಭಾಷೆಗಳಲ್ಲಿ ಇಂಥ ಪುಸ್ತಕಗಳು ಅಪರೂಪವಾಗಿರುವವು.

ಈ ಲೇಖನದಲ್ಲಿ ಶಾಸ್ತ್ರೀಯ ವಿಷಯವನ್ನು ಕಲಿಸುವಾಗ ಅನುಸರಿಸಬೇಕಾದ ಹ್ಯೂರಿಸ್ಟಿಕ್ ಪದ್ಧತಿ ಎಂದು ಹೆಸರಾದ ಕ್ರಮವನ್ನು ಕುರಿತು ಬರೆಯಲಿಚ್ಛಿಸಿದ್ದೇನೆ. ...ಸ್ತ್ರೀಯ ವಿಷಯದ ಶಿಕ್ಷಣದಲ್ಲಿ ಈ ಪದ್ಧತಿಯ ಉಪಯೋಗವಾದಂದಿನಿಂದ ಆ ...ಷಯದ ಅಭ್ಯಾಸಕ್ರಮವು ಬಹಳ ಪರಿಣಾಮಕರವಾಗಿದೆಯೆಂದು ಶಿಕ್ಷಣ ಶಾಸ್ತ್ರ ...ರ ಅಭಿಪ್ರಾಯವು. ಇಂಗ್ಲಂಡಿನಲ್ಲಿ ಕೆಲವು ವರುಷಗಳ ಹಿಂದೆ ಇದ್ದ ಪ್ರೊಫೆಸರ ...ರ್ಮಸ್ಟ್ರಾಂಗರೆಂಬವರು ಇದನ್ನು ಮೊದಲು ಶಿಕ್ಷಕರ ನಿದರ್ಶನಕ್ಕೆ ತಂದುಕೊಟ್ಟರು. ...ಹ್ಯೂರಿಸ್ಟಿಕ್ ಎಂಬ ಶಬ್ದವು ಹ್ಯೂರಿಸ್ಕೋ ಅಂದರೆ ಶೋಧ ಮಾಡುವದು, ಹೊಸ ...ಾಗಿ ಕಂಡು ಹಿಡಿಯುವದು ಎಂಬ ಅರ್ಥದ ಗ್ರೀಕ ಭಾಷೆಯ ಶಬ್ದದಿಂದ ಆಗಿರು ...ದು.

ಈ ಪದ್ಧತಿಯ ಮೇರೆಗೆ ಶಾಸ್ತ್ರೀಯ ವಿಷಯವನ್ನು ಅಭ್ಯಾಸಿಸುವ ವಿದ್ಯಾ ...ರ್ಥಿಯು ಅದನ್ನು ಮೂಲ ಶೋಧಕನ ದೃಷ್ಟಿಯಿಂದ ಅಭ್ಯಾಸಿಸುವನು,- ಅಂದರೆ ...ವನ ಮನಸ್ಸಿನ ಒಲವು ಶೋಧಿಸುವದರ ಕಡೆಗೆ ಇರುವದು. ಇದು ಆರಂಭವಾದ ...ಮಯದಲ್ಲಿ ಇಂಗ್ಲಂಡಿನ ಶಾಲೆಗಳಲ್ಲಿ ಶಾಸ್ತ್ರಾಭ್ಯಾಸವೆಂದರೆ, ಪ್ರಯೋಗ ಶಾಲೆಗೆ ...ದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ, ಪ್ರಯೋಗಗಳನ್ನು ಮಾಡಿ ತೋರಿಸಿ ...ಬಗ್ಗೆ ಅವರಿಗೆ ವಿಶೇಷ ವಿವರಣೆಯನ್ನು ಶಿಕ್ಷಕನು ತಾನಾಗಿ ಹೇಳಿ, ಅಸಂಖ್ಯ ...ೂಚನೆಗಳನ್ನು ಕೊಟ್ಟು, ತಾನು ಹೇಳಿದ ನಿಯಮಗಳು ತಾನು ತೋರಿಸುವ ...ಪ್ರಯೋಗಗಳಿಂದ ಸಿದ್ಧವಾಗುವವೆಂಬದನ್ನು ಮನಗಾಣಿಸಿ ಕೊಟ್ಟು, ತಾನು ಹೇಳಿದ ...ಾಗು ತೋರಿಸಿ ಕೊಟ್ಟ ಸಂಗತಿಗಳನ್ನೇ ಹುಡುಗರು ತಿರುಗಿ ಹೇಳುವಂಥ ಪ್ರಶ್ನ ...ಗಳನ್ನು ಕೇಳಿ ಶಾಸ್ತ್ರೀಯ ಪಾಠಗಳನ್ನು ಸಾಗಿಸುವದು. ಇಷ್ಟೆಲ್ಲ ವಿವರಣೆಯಾದ ...ಳಿಕ ಶಿಕ್ಷಕರು ಕೇಳುವ ಪ್ರಶ್ನಗಳಲ್ಲಿ ಹುಡುಗನು ತಾನು ಮನಗಂಡದ್ದನ್ನೂ ...ಳಿದುಕೊಂಡದ್ದನ್ನೂ ಉತ್ತರವಾಗಿ ನುಡಿಯಬೇಕಾಗುತ್ತಿತ್ತು, ಅಲ್ಲದೆ ಅವರಲ್ಲಿ ...ಚಾರ ಮಾಡಿ ಹೊಸದಾಗಿ ಕಂಡುಹಿಡಿದು ಉತ್ತರ ಕೊಡುವ ಅಂಶಗಳು ಕ್ವಚಿ ...ತ್ತಾಗಿ ಮಾತ್ರ ಇರುತ್ತಿದ್ದವು. ಆದರೆ ಹ್ಯೂರಿಸ್ಟಿಕ್ ಪದ್ಧತಿಯ ಮೇರೆಗೆ ವಿದ್ಯಾ ...ರ್ಥಿಯು ಮೂಲ ಶೋಧಕನ ವಿಚಾರಸರಣಿಯಲ್ಲಿ ಸಹಾನುಭೂತಿಯುಳ್ಳವನಾಗು ...ವನು; ಆ ಮೂಲಕ ತಾನೂ ಹೊಸ ಶೋಧಕನಂತೆ ವಿಚಾರ ಮಾಡಲಾರಂಭಿಸು ...ವನು. ಆದ್ದರಿಂದ ಆತನಲ್ಲಿ ಈ ಬಗೆಯ ಬೌದ್ಧಿಕ ಚಟಗಳು ನೆಲೆಗೊಳ್ಳುವವು. ...ಮುಂದೆ ನಾವು ಹೇಳುವ ಕೆಲವು ಕಾರಣಗಳ ಮೂಲಕ ಹ್ಯೂರಿಸ್ಟಿಕ್ ಪದ್ಧತಿಯನ್ನು

ಸಹ ಕೇವಲವಾಗಿ ವರ್ಗಗಳಲ್ಲಿ ಅನುಸರಿಸುವದು ಗಡಚಾಗುವದು, ಅವು ಯಾವೆಂದರೆ,

೧ ಇನ್ನೂ ಚಿಕ್ಕವಯಸ್ಸಿನ ಹುಡುಗರಿಗೆ ಶಾಸ್ತ್ರಜ್ಞಾನವು ತೀರ ಕಡಿಯಿರುವ ಮೂಲಕ, ಶಿಕ್ಷಕನ ಸಹಾಯವನ್ನು ಸ್ವಲ್ಪವೂ ಅಪೇಕ್ಷಿಸದೆ, ತಾವ ಹೊಸ ಸಂಗತಿಗಳನ್ನು ಹುಡುಕಿ ತೆಗೆಯುವದು ಅವರಿಗೆ ಅರಿದಾಗುತ್ತದೆ.

೨ ಶಾಲೆಯಲ್ಲಿ ಶಾಸ್ತ್ರೀಯ ವಿಷಯಕ್ಕಾಗಿ ದೊರೆಯುವ ಅಲ್ಪಾವಧಿಯ ಪರೀಕ್ಷೆಯ ಅಗತ್ಯಗಳನ್ನು ನೋಡಿಕೊಂಡು ಶೋಧಕಪದ್ಧತಿಯನ್ನೇ ಅನುಸರಿ ತಾವು ಕಲಿಯಬೇಕಾದ ಎಲ್ಲ ಸಂಗತಿಗಳನ್ನು ಅಭ್ಯಾಸಮಾಡುವದು ಸುಲಭವಲ್ಲ.

ಆದರೂ, ಶಾಸ್ತ್ರಾಭ್ಯಾಸವನ್ನು ಫಲಕಾರಿಯಾಗುವಂತೆ ಮಾಡಿಸಲಪೇಕ್ಷಿಸು ಪ್ರತಿಯೊಬ್ಬ ಶಿಕ್ಷಕನು ಈ ಪದ್ಧತಿಯ ತತ್ವಗಳನ್ನು ಮರೆಯಲಾಗದು. ಶಿಕ್ಷಕನ ಈ ವಿಷಯವನ್ನು ಅಭ್ಯಾಸನ ಪದ್ಧತಿಯಿಂದ ಸಾಗಿಸತಕ್ಕದ್ದು ಅಂದರೆ ಏನು ಗೊತ್ತ ಹಿಡಿಯಬೇಕೆಂಬದನ್ನು ತಾನಾಗಿ ಹೇಳಿಬಿಡದೆ, ತಮಗೆ ಗೊತ್ತಾದ ಅಂದರೆ ತಾ ಹಿಂದೆ ಅಭ್ಯಾಸಿಸಿದ ಸಂಗತಿಗಳ ಮೂಲಕ ಮುಂದೆ ಹ್ಯಾಗೆ ಸಾಗಬಹುದು, ಯಾ ಮಾತುಗಳನ್ನು ಹುಡುಕುವ ಮಾರ್ಗದಲ್ಲಿ ಮುಂದುವರಿಯಬಹುದು, ಎಂದು ತಮ ಮುಂದಿನ ಅಭ್ಯಾಸದ ಮೆಟ್ಟನ್ನು ಒಂದು ಅಭ್ಯಸನದಂತೆ ವಿದ್ಯಾರ್ಥಿಗಳು ಎಣಿ ಕೊಳ್ಳಬಹುದು. ತಾವು ಕಲಿತ ವಿಷಯಗಳಿಗೆ ಸಂಬಂಧಿಸಿ ಹೊಸ ಪ್ರಶ್ನೆಗ ಯಾವವಾದರೂ ಹುಡುಗರಿಂದ ಸೂಚಿತವಾದರೆ ಅವುಗಳನ್ನು ಬಿಡಿಸೋಣವೆಂಬ ಅವರಿಗೆ ಉತ್ತೇಜನ ಕೊಡತಕ್ಕದ್ದು. ಶಿಕ್ಷಕರು ತಾವು ಮಾಡುವ ಪ್ರಯೋಗಗ ಉದ್ದಿಶ್ಯವನ್ನು ಹುಡುಗರಿಗೆ ಮೊದಲೇ ಹೇಳುವದು ಉಚಿತವು. ಆ ಪ್ರಯೋಗ ಆದ ಕೂಡಲೆ ಅದರಿಂದ ಗೊತ್ತಾಗುವ ಸಂಗತಿಗಳನ್ನು ಕಂಡುಹಿಡಿಯುವ ಹು ಗರಿಗೆ ಉತ್ತೇಜನ ಕೊಡತಕ್ಕದ್ದು ; ಶಿಕ್ಷಕನು ತಾನು ಕಂಡುಹಿಡಿದ ಇಲ್ಲವೆ ತ ಪಾಠಕ್ಕೆ ಬೇಕಾದ ಮಾತುಗಳು ಮಾತ್ರ ಸಿದ್ಧವಾಗುವವೆಂದು ತೋರಿಸಕೊ ಲಾಗದು. ಈ ಪದ್ಧತಿಯಿಂದ ವಿಷಯವನ್ನು ಸಾಗಿಸಿದರೆ ವಿದ್ಯಾರ್ಥಿಯನ ಶೋಧಕನ ಮಾರ್ಗದಲ್ಲಿ ಕ್ರಮಣಮಾಡಿಸಲು ಯೋಜಿಸಿದಂತಾಗುವದು. ಈ ಮಾತನ್ನು ಸರ್ ಟೀ ಪರಸೀ ನನ್ ಎಂಬವರು ಚೆನ್ನಾಗಿ ಹೇಳಿರುವರು. "ಶಿಕ್ಷಕ

ಿಷಯವೆಂಬ ಸಮುದ್ರದಲ್ಲಿ ಶೋಧಕನಂತೆ ತನ್ನ ವಿದ್ಯಾರ್ಥಿಗಳೊಂದಿಗೆ ಪರ್ಯ
ನವನ್ನು ಮಾಡತಕ್ಕದ್ದು."

ಇನ್ನು ಶೋಧಕ ಪದ್ಧತಿಯನ್ನನುಲಕ್ಷಿಸಿ ಕೊಟ್ಟ ಒಂದು ಶಾಸ್ತ್ರೀಯಪಾಠದ ಪ್ಪಣಿಗಳನ್ನು ವಾಚಕರಿಗಾಗಿ ಕೊಡಲಿಳಿಸುವೆನು. ಧಾರವಾಡದ ಟ್ರೇನಿಂಗ ಕ್ಕೂಲಿನಲ್ಲಿರುವ ಪ್ರ್ಯಾಕ್ಟಿಸಿಂಗ ಸ್ಕೂಲಿನ ೫ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಈ ಪಾಠವನ್ನು ಒಮ್ಮೆ ಕಲಿಸಿದೆನು. ಹಿಂದಿನ ಪಾಠದಲ್ಲಿ, ನಮ್ಮ ಸುತ್ತಲು ಹವೆಯು ಇರುವದೆಂದೂ, ನಾವು ರೂಢಿಯಲ್ಲಿ "ಖಾಲಿ" ಅಂದರೆ ಏನೂ ಇಲ್ಲದೆ ಇರುವ ಪ್ರದೇಶದಲ್ಲಿಯೂ ಹವೆಯು ತುಂಬಿಕೊಂಡಿರುವದೆಂದೂ ಈ ಹವೆಗೆ ಒತ್ತುವಿಕೆಯು ಇರುವದೆಂದೂ ವಿದ್ಯಾರ್ಥಿಗಳು ಕಲಿತಿದ್ದರು (ಕನ್ನಡ ೫ನೆಯ ಕ್ರಮಿಕ ಪುಸ್ತಕ, ೭೧ನೆಯ ಪಾಠ). ಗ್ಲಾಸ, ಟಂಬ್ಲರು, ಮಾಗ್‌ಡೆ ಬರ್ಗನ ಗೋಲಾರ್ಧಗಳು ಮುಂತಾದ ಉಪಕರಣಗಳ ಸಹಾಯದಿಂದ ಇದನ್ನು ತಿಳಿಸಲು ಬೇಕಾದ ಕೆಲವು ಪ್ರಯೋಗಗಳನ್ನೂ ಹಿಂದೆ ಕಲಿಸಿದ ಶಿಕ್ಷಕರು ಮಾಡಿತೋರಿಸಿದ್ದರು. ನ್ನುಮುಂದೆ ಹುಡುಗರಿಗೆ ಸ್ವಾಭಾವಿಕವಾಗಿ ಭಾರಮಾಪಕಯಂತ್ರ, ಅದನ್ನು ಿಸುವಕ್ರಮ ಮೊದಲಾದದ್ದರ ಅಭ್ಯಾಸವು ಮಾಡಬೇಕಾಗಿತ್ತು. ನಾನು "ಹವೆಯು ಎಷ್ಟು ಎತ್ತರವುಳ್ಳ ನೀರನ್ನು ಎತ್ತಿ ಹಿಡಿಯುವದು?" ಎಂಬ ್ರಶ್ನವನ್ನಿಟ್ಟುಕೊಂಡು ಪಾಠವನ್ನಾರಂಭಿಸಿದೆನು. ಆ ಪಾಠದ ಟಿಪ್ಪಣಿಯನು ುಂದಿನ ಸಂಚಿಕೆಯಲ್ಲಿ ಕೊಡುವೆವು.

ಕನ್ನಡ "ವರ್ಥಪ್ರಾಯಿಜ" ಪರೀಕ್ಷೆ ೧೯೩೭.

ಪರೀಕ್ಷೆಯ ತಾರೀಖು ಮತ್ತು ಸ್ಥಳ:—

೧೯೩೭ನೆಯ ಇಸವಿಯ ಜುಲಾಯಿ ತಿಂಗಳ **೭ನೆಯ ತಾರೀ** **(ಬುಧವಾರ)** ಮತ್ತು ಮುಂದಿನ ಎರಡು ದಿವಸಗಳಲ್ಲಿ **೧೨ ಗಂಟೆಯ** ಧಾರವಾಡ ಟ್ರೇನಿಂಗಸ್ಕೂಲಿನಲ್ಲಿ ಪರೀಕ್ಷೆಯು ನಡೆಯುವದು.

ಪರೀಕ್ಷೆಯ ವಿಷಯ ಮೊದಲಾದವು:—

(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯಪದ್ಯಭಾಗಗಳ ಅರ್ಥವಿವ ಮಾಡಲಿಕ್ಕೂ ಅವುಗಳಿಗೆ ಟೀಕೆಟಿಪ್ಪಣೆಗಳನ್ನು ಬರೆಯಲಿಕ್ಕೂ ಹಳೆಯ ಅಥ ಹೊಸಗನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕ

(ಬ) ವರ್ಥಸಾಹೇಬರು ರಚಿಸಿರುವ ಪ್ರಾಕ್ಕಾವ್ಯಮಾಲೆ ಎಂಬ ಗ್ರಂಥವ ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯ ಅರ್ಥವಿವರಣೆ, ಟೀಕೆಟಿಪ್ಪಣೆ, ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯ ಸಮಾವೇಶವಾಗುವದು. ಉಮೇದವಾರರು ಪರೀಕ್ಷೆಗಿರುವ ಒಟ್ಟು ಗುಣಗ ೧೦೦ಕ್ಕೆ ೭೫ಕ್ಕಿಂತ ಕಡಿಮೆಯಿಲ್ಲದಷ್ಟು ಗುಣಗಳನ್ನು ಪಡೆದಿರಬೇಕು; ಮ ಯಾವದೊಂದು ವಿಷಯವನ್ನು ತೀರ ಅಸಮಾಧಾನಕರವಾಗಿ ಬರೆದು ನಾಪಾಸಾ ಕೂಡದು.

ಪರೀಕ್ಷೆಯ ಇನಾಮು ಮೊದಲಾದವು:—

ಮೇಲೆ ಹೇಳಿದ ವಿಷಯಗಳಲ್ಲಿ ಪರೀಕ್ಷೆಕೊಟ್ಟು ಆ ನಿಯಮಗಳಿಗನುಸಾರವ ಪಾಸಾಗಿ ಮೊದಲನೆಯ ನಂಬರು ಪಡೆದ ದಕ್ಷಿಣಭಾಗದೊಳಗಿನ ಉತ್ತಮ ಉಮೇ ವಾರರಿಗೆ ೮೦ ರೂ. ಇನಾಮು ದೊರೆಯುವದು.

ಅರ್ಜಿಮಾಡತಕ್ಕ ಅವಧಿ:—

ಪರೀಕ್ಷೆಗೆ ಕೂಡಲಪೇಕ್ಷಿಸುವವರು ೧೯೩೭ನೆಯ ಇಸವಿಯ ಜೂನ ತಿ **ಆರನೆಯ** ತಾರೀಖಿನೊಳಗಾಗಿ ಮೆ॥ ಎಜ್ಯುಕೇಶನಲ್ ಇನ್ಸಪೇಕ್ಟರ, ದಕ್ಷಿಣಭಾ ಇವರಿಗೆ ಮುಟ್ಟುವಂತೆ ಅರ್ಜಿಯನ್ನು ಮಾಡತಕ್ಕದ್ದು.

ಕರ್ನಾಟಕ ಸಾಹಿತ್ಯಪರಿಷತ್ತಿನವರು

ಇವರು ಕನ್ನಡ ಅಕ್ಷರಸಂಸ್ಕರಣ ಸಮ್ಮೇಳನವೊಂದನ್ನು ಕೂಡಿಸುವವರಿರುವರು. ಆ ಬಗ್ಗೆ ಮುಂದೆ ಕೊಟ್ಟ ಮಾಹಿತಿಯನ್ನು ನಮ್ಮ ವಾಚಕರಿಗಾಗಿ ಪ್ರಸಿದ್ಧಿಸಿದ್ದೇವೆ.

ಕನ್ನಡದ ಕೈಬರಹದಲ್ಲಿಯೂ, ಅಚ್ಚಿನಲ್ಲಿಯೂ, ವೇಗವನ್ನೂ ಸ್ಫುಟತೆಯನ್ನೂ ಂದವನ್ನೂ ಹೆಚ್ಚುಮಾಡುವುದಕ್ಕೂ, ಬಾಲಕರ ಅಕ್ಷರಾಭ್ಯಾಸವನ್ನು ಸುಲಭ ಾಳಿಸುವುದಕ್ಕೂ ಕನ್ನಡ ಅಕ್ಷರಲಿಪಿ ಕ್ರಮದಲ್ಲಿ ಕೆಲವು ಮಾರ್ಪಾಟುಗಳನ್ನು ಾಡುವುದು ಯುಕ್ತವೆಂದು ಪರಿಷತ್ತಿಗೂ ಸಮ್ಮೇಳನಗಳಿಗೂ ಆಗಿಂದಾಗ್ಗೆ ೂಚನೆಗಳು ಬಂದಿರುತ್ತವೆ. ವಿದ್ಯಾಪ್ರಚಾರದ ಅಧಿಕಾರಿಗಳ ಗಮನಕ್ಕೂ ಸಹ ಂಥ ಸೂಚನೆಗಳು ಆಗಾಗ್ಗೆ ಬಂದಿವೆಯೆಂದು ತಿಳಿದುಬಂದಿದೆ.

ಈ ಸೂಚನೆಗಳನ್ನೂ ಈ ವಿಷಯದಲ್ಲಿ ಇನ್ನೂ ಬರಬಹುದಾದ ಹೊಸ ಲಹೆಗಳನ್ನೂ ಒಟ್ಟಿಗೆ ಪರೀಕ್ಷಿಸಿ, ಒಂದು ಸಮಂಜಸವಾದ ಅಕ್ಷರಸಂಸ್ಕರಣ ್ರಮವನ್ನು ಮಹಾಜನರ ಮತ್ತು ಅಧಿಕಾರಿಗಳ ಮುಂದಿರಿಸುವ ಕೆಲಸವನ್ನು ರಿಷತ್ತು ಕೈಕೊಳ್ಳುವುದು ಉಚಿತವೆಂದು ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ ಂ. ಎ., ಬಿ. ಎಲ್. ಅವರು ತಾ|| ೨೩–೨–೧೯೩೬ರಲ್ಲಿ ಪರಿಷತ್ತಿನ ಕಾರ್ಯನಿರ್ವಾ ಹಕ ಮಂಡಲಿಗೆ ಸೂಚಿಸಲಾಗಿ, ಕಾ|| ನಿ|| ಮಂಡಲಿಯು ಅದನ್ನು ಕುರಿತು ಆಲೋ ಚಿಸಿ, ಈ ಕೆಳಗಿನಂತೆ ತೀರ್ಮಾನಮಾಡಿರುತ್ತದೆ:—

"ಕನ್ನಡ ಅಕ್ಷರ ಲಿಪಿ ಸುಧಾರಣೆಯ ವಿಚಾರಗಳನ್ನು ಕುರಿತು ಆಲೋಚಿಸು ವುದಕ್ಕಾಗಿಯೂ ಮತ್ತು ಕನ್ನಡ ಮುದ್ರಣಾಕ್ಷರಗಳಲ್ಲಿ ಆಗಬೇಕಾದ ತಿದ್ದು ಪಾಟುಗಳನ್ನು ಕುರಿತು ಸಲಹೆಕೊಡುವುದಕ್ಕಾಗಿಯೂ ಮುಂದಿನ ವಿಶೇಷ ಸಾಹಿತ್ಯೋತ್ಸವ ಕಾಲದಲ್ಲಿ ಆ ವಿಷಯದಲ್ಲಿ ಪರಿಶ್ರಮಮಾಡಿರುವ ವಿದ್ವಾಂಸರ ಒಂದು ಸಮ್ಮೇಳನವನ್ನು ನಡಿಸತಕ್ಕದ್ದು."

ಈ ಕಾರ್ಯವನ್ನು ನಡಸಲು ಕಾ|| ನಿ|| ಮಂಡಲಿ ಒಂದು ಉಪಸಮಿತಿಯನ್ನು ಯಮಿಸಿರುತ್ತದೆ.

ಈ ವಿಚಾರದಲ್ಲಿ ಆಸಕ್ತಿಯುಳ್ಳ ಸಮಸ್ತವಿದ್ವಜ್ಜನರೂ ಈ ಸಮ್ಮೇಳನಕ್ಕೆ ದಯಮಾಡಿಸಿ, ಅದರ ಕಾರ್ಯಗಳಲ್ಲಿ ಸಹಕರಿಸಬೇಕೆಂದು ಪರಿಷತ್ತು ಬೇಡುತ್ತದೆ.

ಈ ಸಮ್ಮೇಳನಕ್ಕೆ ಬರಲು ತಗಲುವ ಪ್ರಯಾಣದ ವೆಚ್ಚದ ಬಗ್ಗೆ ವಿದ್ವಾಂಸರಾರಾದರೂ ಸಹಾಯವನ್ನು ಸ್ವೀಕರಿಸುವುದಾದರೆ, ಪರಿಷತ್ತು ತನಗೆ ಸಾಧ್ಯವಿರುವಷ್ಟು ಮಟ್ಟಿಗೆ ಸಹಾಯವನ್ನೀಯಬೇಕೆಂದು ಉದ್ದೇಶವಿಟ್ಟುಕೊಂಡಿದೆ.

ಈ ಕಾರ್ಯದಲ್ಲಿ ಆಸಕ್ತರಾಗಿರುವ ಮಹಾಶಯರೆಲ್ಲರೂ ತಮ್ಮ ತಮ್ಮ ಹೆಸರು, ವಿಳಾಸ ಮೊದಲಾದ ವಿವರಗಳನ್ನು **೧೯೩೬ ನೆಯ ಮಾರ್ಚಿ ತಾ|| ೩೧ ರೊಳಗಾಗಿ** ಪರಿಷತ್ತಿಗೆ ತಿಳಿಯಪಡಿಸಿದಲ್ಲಿ ಮುಂದಿನ ಕಾರ್ಯಗಳನ್ನು ನಡಸಲು ಅನುಕೂಲವಾಗುವುದು.

ಈ ವಿಚಾರಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು

ಎ. ಆರ್. ಕೃಷ್ಣಶಾಸ್ತ್ರಿ, ಎಂ. ಎ.,

ವ್ಯವಸ್ಥಾಪಕರು,

ಕನ್ನಡ ಅಕ್ಷರ ಸಂಸ್ಕರಣ ಸಮ್ಮೇಳನ,

ಕರ್ಣಾಟಕ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರ ಸಿಟಿ.

ಈ ವಿಳಾಸಕ್ಕೆ ಕಳಿಸತಕ್ಕದ್ದು.

ಕರ್ಣಾಟಕ ಸಾಹಿತ್ಯಪರಿಷತ್ತಿನವರು

ಇವರು ಕನ್ನಡ ಪದ್ಯ ಕಾವ್ಯಗಳನ್ನು ಓದುವ ಮತ್ತು ಗೀತಗಳನ್ನು ಹಾಡುವ ವಿದ್ಯೆ ಕಲಿಸಲು ಏರ್ಪಾಟುಮಾಡಿರುವರು. ಈ ಬಗ್ಗೆ ಮುಂದೆ ಕೊಟ್ಟ ಮಾಹಿತಿಯು ನಮ್ಮ ವಾಚಕರಿಗೆ ಉಪಯೋಗವುಳ್ಳದ್ದಾಗಬಹುದು.

(೧) ಕನ್ನಡ ಕಾವ್ಯಗಳನ್ನು ಕಿವಿಗಿಂಪಾಗುವಂತೆಯೂ ಅರ್ಥ ವಿಶದವಾಗು ...ತೆಯೂ ಓದುವ ವಿದ್ಯೆಯನ್ನು ಪ್ರಚಾರಪಡಿಸುವ ಉದ್ದೇಶದಿಂದ ಕರ್ಣಾಟಕ ...ಹಿತ್ಯ ಪರಿಷತ್ತು ಒಂದು ಗಮಕಕಲಾಭ್ಯಾಸ ಗೋಷ್ಠಿಯನ್ನು ಕಳೆದ ವರ್ಷ ...ಪ್ರಿಲ್-ಜೂನ್ ತಿಂಗಳುಗಳಲ್ಲಿ ಏರ್ಪಡಿಸಿದ್ದದ್ದು ಸರಿಯಷ್ಟೆ. ಅದರಂತೆ ಈ ...ರ್ಷವೂ ಒಂದು ಗಮಕಗಾನಕಲಾಭ್ಯಾಸದ ಗೋಷ್ಠಿಯನ್ನು ನಡಿಸಬೇಕೆಂದು ...ಷತ್ತು ನಿಶ್ಚಯಿಸಿರುತ್ತದೆ.

(೨) ಈ ಗೋಷ್ಠಿಯು ಈಸಲದ ಬೇಸಿಗೆಯ ರಜಾಕಾಲವಲ್ಲಿ, ಎಂದರೆ ...೬ನೆಯ ಇಸವಿ ಏಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ, ಬೆಂಗಳೂರಲ್ಲಿರುವ ...ಷನ್ಮಂದಿರದಲ್ಲಿ ನಡೆಯುವುದು.

(೩) ಪ್ರಸಿದ್ಧ ಗಮಕಿಗಳಾದ **ಶ್ರೀಮಾನ್ ಎಸ್. ಜಿ. ಬಿಂದೂರಾಯ** ...ವರು ಕಾವ್ಯವಾಚನದ ಬಗ್ಗೂ **ಶ್ರೀಮಾನ್ ಬಿ. ವೆಂಕಟಕೃಷ್ಣಪ್ಪ**, ಬಿ. ಎ., ...ರು ಕೀರ್ತನೆ, ದೇವರ ನಾಮ ಮೊದಲಾದವುಗಳ ಬಗ್ಗೂ ಶಿಕ್ಷಕರಾಗಿರಲು ...ಸಿಯಿಂದ ಒಪ್ಪಿರುತ್ತಾರೆ.

(೪) ಗಮಕಗೋಷ್ಠಿಯು ಭಾನುವಾರದ ಮತ್ತು ಇತರ ರಜಾದಿನಗಳ ...ರತು ಸಾಮಾನ್ಯವಾಗಿ ಪ್ರತಿದಿವಸವೂ-ಬೆಳಿಗ್ಗೆ ೭॥ ಘಂಟೆಯಿಂದ ೮॥ ಘಂಟೆಯ ...ಗೆ ಒಂದು ತರಗತಿಯಾಗಿಯೂ, ಸಾಯಂಕಾಲ ೬॥ ಘಂಟೆಯಿಂದ ೭॥ಘಂಟೆಯ ...ಗೆ ಮತ್ತೊಂದು ತರಗತಿಯಾಗಿಯೂ-ನಡೆಯುವುದು. ಗಾನಗೋಷ್ಠಿಯ ...ನಿಯಮವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು.

(೫) ಪ್ರತಿಯೊಂದು ತರಗತಿಗೂ ಸಾಮಾನ್ಯವಾಗಿ ಒಂದು ತಿಂಗಳಕಾ ಸತತವಾಗಿ ಅಭ್ಯಾಸನಡೆಯುವುದು. ಆ ಮೇಲೆ ಆಗಾಗ ಪುನರಾವರ್ತನೆ ನ ಯುವುದು.

(೬) ಈ ಗೋಷ್ಠಿಗೆ ಸೇರಲಿಚ್ಛಿಸುವವರು ಸಾಮಾನ್ಯವಾಗಿ ಕನ್ನಡ ಅಪ್ಪ ಸೆಕೆಂಡರಿ ಅಥವಾ ಎಸ್. ಎಸ್. ಎಲ್. ಸಿ. ತರಗತಿಯ ವಿದ್ಯಾರ್ಥಿಗಳಿಗೆ ಇ ಬೇಕಾದಷ್ಟಾದರೂ ಕನ್ನಡ ಭಾಷಾಸಾಮರ್ಥ್ಯವನ್ನು ಪಡೆದಿರಬೇಕು; ಮತ್ತು ಗಾನಕ್ಕೆ ಅನುಕೂಲವಾದ ಶಾರೀರಸಂಪತ್ತುಳ್ಳವರಾಗಿರಬೇಕು. ತಕ್ಕಮಟ್ಟ ಸಂಗೀತ ಜ್ಞಾನವಿದ್ದರೆ ಉತ್ತಮ.

(೭) ಗೋಷ್ಠಿಗೆ ಸೇರಿದವರು ತಿಂಗಳಿಗೆ ಒಂದುರೂಪಾಯಿಯಂತೆ ಕೊಡಬೇಕಾಗುವುದು.

(೮) ಈ ಗೋಷ್ಠಿಗೆ ಸೇರಲಿಚ್ಛಿಸುವವರು ತಮ್ಮ ಅಪೇಕ್ಷಾಪತ್ರವನ **೧೯೩೬ನೆಯ ಇಸವಿ ಎಪ್ರಿಲ್ ೧೦ನೆಯ ತಾರೀಖಿನೊಳಗಾಗಿ** ಪರಿಷತ್ತಿ ಕಚೇರಿಗೆ ತಲಪುವಂತೆ ಬರೆದುಕಳುಹಿಸಬೇಕು. ಅಪೇಕ್ಷಾಪತ್ರದಲ್ಲಿ ಈ ಕೆಳಗ ವಿವರಗಳನ್ನು ತಿಳಿಸಿರಬೇಕು

(೧) ಹೆಸರು, (೨) ವಯಸ್ಸು, (೩) ಉದ್ಯೋಗ, (೪) ಅವರಿಗಿರುವ ಭಾಷಾಸಾಮರ್ಥ್ಯ. (೫) ಅವರಿಗಿರುವ ಸಂಗೀತಪರಿಚ (೬) ವಿಶೇಷಾಂಶಗಳು, (೭) ವಿಳಾಸ; ಅಪೇಕ್ಷಾಪತ್ರದೊಡನೆ ಮೇ ಹೇಳಿರುವ ಫೀ ಒಂದು ರೂಪಾಯಿಯನ್ನು ಕಳುಹಿಸಿರಬೇಕು.

(೯) ಅಪೇಕ್ಷಾಪತ್ರಗಳನ್ನು ಅಂಗೀಕಾರಮಾಡುವದಕ್ಕೂ ಮಾಡದಿರುವ ದಕ್ಕೂ ಪರಿಷತ್ತಿಗೆ ಅಧಿಕಾರವಿರುತ್ತದೆ.

(೧೦) ಅಂಗೀಕಾರವಾದ ಬಳಿಕ ಅಪೇಕ್ಷಕರು ಯಾವಕಾರಣದಿಂದಲಾದರೂ ಗೋಷ್ಠಿಗೆ ಬಾರದೆ ನಿಂತರೆ ಅವರು ಕೊಟ್ಟ ಫೀಜನ್ನು ಹಿಂದಕ್ಕೆ ಕೊಡಲಾಗುವುದಿಲ್ಲ

(೧೧) ಈ ಗೋಷ್ಠಿಗೆ ಸೇರತಕ್ಕವರು ತಮ್ಮ ಭೋಜನ ವಸತಿಗ ಏರ್ಪಾಟನ್ನು ತಾವು ತಾವೇ ಮಾಡಿಕೊಳ್ಳಬೇಕು ಮತ್ತು ಅಭ್ಯಾಸಕ್ಕೆ ಗೊತ್ತು ಮಾಡುವ ಗ್ರಂಥಗಳ ಪ್ರತಿಯನ್ನು ತಾವೇ ಸಂಪಾದಿಸಿಕೊಂಡಿರಬೇಕು.

(೧೨) ಗೋಷ್ಠಿಯಲ್ಲಿ ಅಭ್ಯಾಸಮಾಡಲು ಈ ಕೆಳಗಿನ ಬಗೆಯ ಕಾವ್ಯಗಳಿಂದ ಗಗಳನ್ನು ಗೊತ್ತುಮಾಡಲಾಗುವದು.

(i) ಷಟ್ಪದೀ ಕಾವ್ಯಗಳು

(ii) ಚಂಪೂ ಕಾವ್ಯಗಳು

(iii) ಕೀರ್ತನೆ ದೇವರ ನಾಮ ಮೊದಲಾದ ಹಾಡುಗಳು

(iv) ಸೀಸ ಪದ್ಯ ಮೊದಲಾದ ಸಂಕೀರ್ಣಜಾತಿಯ ಪದ್ಯಗಳು

(೧೩) ಅಭ್ಯಾಸಿಗಳಿಗೆ ಅವರು ಅಭ್ಯಾಸಮಾಡುವ ಕಾವ್ಯಭಾಗಗಳ ಅರ್ಥ ರಸ್ಯ, ಆ ಕಾವ್ಯಕರ್ತರ ಕಾಲ ದೇಶ ವಿವರಗಳು ಮೊದಲಾದ ವಿಶೇಷಾಂಶ ನ್ನು ತಿಳಿಸಿಕೊಡಲು ಆಗಾಗ ಕೆಲವು ಉಪನ್ಯಾಸಗಳನ್ನು ಏರ್ಪಡಿಸಲಾಗುವದು.

(೧೪) ಗೋಷ್ಠಿಯ ಪರಿಸಮಾಪ್ತಿಯಲ್ಲಿ ಒಂದು **ಪರೀಕ್ಷೆ ನಡಸಿ** ರ್ಗ**ಡೆಹೊಂದಿದವರಿಗೆ ಪ್ರಶಸ್ತಿಪತ್ರ**ಗಳನ್ನು ಕೊಡಲಾಗುವುದು.

(೧೫) ಅಪೇಕ್ಷಕರು ಸಾಕಾದಷ್ಟು ಮಂದಿ ದೊರೆಯದೆ ಹೋದರೆ ಪರಿಷತ್ತು ಗೋಷ್ಠಿಯ ಏರ್ಪಾಟನ್ನು ಮಾಡದೆ ಬಿಡಬಹುದು.

(೧೬) ಈ ಗೋಷ್ಠಿಯು ಸಾಹಿತ್ಯದ ಸ್ವಾರಸ್ಯವನ್ನು ಜನರಿಗೆ ಅನುಭವ ಡಿಸಿಕೊಡುವುದಕ್ಕೂ, ಕನ್ನಡ ಹಾಡುಗಳಲ್ಲಿ ಜನರಿಗೆ ಹೆಚ್ಚಾಗಿ ಅಭಿರುಚಿ ನ್ನುಂಟುಮಾಡಿಸುವುದಕ್ಕೂ ಭಾಷಾಭಿಮಾನವನ್ನು ಜನರಲ್ಲಿ ಅಭಿವೃದ್ಧಿಪಡಿಸು ದಕ್ಕೂ ಅತ್ಯಂತ ಉಪಯುಕ್ತವಾದ ಸಾಧನವಾಗಿರುವುದರಿಂದ ವಿದ್ಯಾಭಿಮಾನಿ ಾದ ಎಲ್ಲ ಕನ್ನಡಿಗರೂ ಈ ವಿಚಾರಕ್ಕೆ ಕೃಪಾಪೂರ್ವಕವಾದ ಗಮನವನ್ನು ಟ್ಟು, ಈ ಏರ್ಪಾಟು ಶ್ರೇಯಸ್ಕರವಾಗಿ ನಡೆಯುವಂತೆ ಸಹಕರಿಸಬೇಕೆಂದು ಷತ್ತು ಬೇಡುತ್ತದೆ.

ಪ್ರಕಟನೆ

ಉರ್ದು ಬುಕ್ ಕಮೀಟಿ ಮುಂಬಯಿ ಇವರು ೭-೧೨-೧೯೩೫ ನೆಯ ದಿವಸ ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಮಂಜೂರು ಮಾಡಿದ ಪುಸ್ತಕಗಳ ಯಾದಿಯು—

ಪ್ರಾ.=ಪ್ರಾಥಮಿಕ, T=ಟೆಕ್ಸ್ಟ, L=ಲಾಯಬ್ರರಿ, ಶಿ=ಶಿಕ್ಷಕರು, ವಿ=ವಿದ್ಯಾರ್ಥಿಗಳು.

ನಂ	ಪುಸ್ತಕಗಳ ಹೆಸರು	ಗ್ರಂ. ಕ. ಹೆಸರು.	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ
೧	ಇಸ್ಲಾಮಿ ಕಹಾನಿಯಾಂ	ಮಹಮ್ಮದ ಹಸನ ಇಸ್ರಾಯಿಲಿ ಮುಂಬೈ.	ಅಜ್ಮಲ್ ಪ್ರೆಸ್ ಮುಂಬೈ	೦-೩-೦	ಪ್ರಾ. ಶಾ. ಗಳ L ಬುಕ್ಕಾಗಿ ಮಾತ್ರ
೨ ಮತ್ತು ೩	ಉರ್ದುಕಾ ಕಾಯಿದಾ ಭಾ. ೧ ಸದರ ಭಾ. ೨ ಸುಧಾರಿಸಿದ ಆ. ೨		ಅಂಜುಮನ್ ಇಹಿಮಾನ್ ಇ. ಇಸ್ಲಾಮ ಲಾಹೋರ	೦-೧-೦ ೦-೧-೩	ಪ್ರಾ. ಶಾ. ಗಳ T ಬುಕ್ಕಾಗಿ ಸದರ
೪	ಉರ್ದುಕಿ ಪಹಿಲೀ ಕಿತಾಬ ಆ. ೨		ಸದರ	೦-೪-೨	ಸದರ
೫	ಉರ್ದುಕಿ ದುಸರೀ ಕಿತಾಬ ಆ. ೨		ಸದರ	೦-೫-೪	ಸದರ
೬	ಉರ್ದುಕಿ ತಿಸರೀ ಕಿತಾಬ ಆ. ೨		ಸದರ	೦-೬-೨	ಸದರ

೮	ಸೀರತೆ ಮೊಹಮ್ಮದೀ	ಜಲಾಲುದ್ದೀನ ಅಹಮ್ಮದ ಜಾಫ್ರಿ	ಜಾಫ್ರಿ ಬ್ರದರ್ಸ ಅಲಹಾಬಾದ	೦-೧೨-೦	ಪ್ರಾ. ಶಾ. ಮಾ. ಶಾ. ಟ್ರೇ. ಸಂ. L ಬುಕ್ಕಾಗಿ
೯	ರಹನುಮಾಯಿಹಿಫ್‌ಜೆ ಸೆಹತ್ ಭಾ. ೧	ಎಮ್. ಮಹಮ್ಮದ ಹಯಾತ H.P.	ರಾ. ಸಾ. ಮುನ್ಷಿ ಗುಲಾಬಸಿಂಗ ಆ್ಯಂಡ ಸನ್ಸ ಲಾಹೋರ	೦-೩-೯	ಪ್ರಾ. ಶಾ.ಗಳ T ಬುಕ್ಕಾಗಿ ಮಾತ್ರ
೧೦	ಭಾ. ೨	ಸದರ	ಸದರ	೦-೪-೯	ಸದರ
೧೧	ಭಾ. ೩	ಸದರ	ಸದರ	೦-೪-೩	ಸದರ
೧೨	ದಿ ವರಲ್ಡ ಎ ಜನರಲ್ ಜಾಗ್ರಫಿ ಫಾರ ಇಂಡಿಯನ್ ಸ್ಕೂಲ್ಸ ಬಾಯು L Dudlay ಡಡ್ಲೆ ಭಾ.೧	Translateb by ಇಬಾದುರ್ ಅ. ರಹಮಾನಖಾನ	ಲಾಂಗಮನ್ಸ ಗ್ರೀನ ಆ್ಯಂಡ ಕಂ. ನಿಕೋಲ ರೋಡ ಬಾಂಬೇ	೧-೮-೦	ಪ್ರಾ. ಶಾ.ಗಳ ಮತ್ತು ಮಾ. ಶಾ.ಗಳ ಟ್ರೇ. ಸಂ.ಗಳ ಶಿ.ರ L ಬು. ಹಾಗೂ ಮಾ. ಶಾ.ಗಳ T ಬುಕ್ಕಾಗಿ ಮಾತ್ರ
೧೩	ಭಾ. ೨			೩-೦-೦	ಸದರ

ನಂ.	ಪುಸ್ತಕಗಳ ಹೆಸರು	ಗ್ರ. ಕ. ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ
೧೪ ೧೫ ೧೬ ೧೭	ಜಲೀದ ಉರ್ದು ಖುಷ್ ಖತೀ ಕಾಪಿ ೪ ಭಾಗಗಳು	ಎ. ಎನ್. ನವಾತ ರಹಾಜಹಾನಪುರಿ	ಇಲ್ಮಿಯಾ ಬುಕ್‌ಡಿಪೋ ಬಾಂಬೇ	ಪ್ರತಿ ಯೊಂದಕ್ಕೆ ೦—೧—೬	ಪ್ರಾ. ಶಾ. ಗಳ ಉಪಯೋಗಕ್ಕಾಗಿ
೧೮ ಮತ್ತು ೧೯	ದಿಲ್ ಚಸ್ಪ ತರೀಕೆ ಹಿಸಾಬ ಭಾಗ ೧ ಭಾಗ ೨		ನ್ಯೂ ಇಂಡಿಯಾ ಪಬ್ಲಿಶಿಂಗ ಕಂ. ಲಾಹೋರ	೧—೪—೦ ೦—೧೫—೦	ಪ್ರಾ. ಶಾ. T ಬುಕ್ಕಾಗಿ

ಎಸ್. ಜಿ. ಗಾಡಗೀಳ,
ಸೆ. ಉರ್ದು ಸ್ಕೂಲ ಕಮಿಟಿ,
ಮುಂಬೈ.

ತಿದ್ದುಪಡಿ

ಪ್ರಾಥಮಿಕ ಶಿಕ್ಷಣದ ಫೇಬ್ರುವರಿ ೧೯೩೬ ನೇ ಸಂಚಿಕೆಯ ಕವ್ಹರ ಪೇಜ ಲ್ಲಿ ಪ್ರಸಿದ್ಧಪಡಿಸಿದ ಪತ್ರ ನಂ. ೩ ರಲ್ಲಿ ಶಾಳಾ ಎಲಿವಾಳ ತಾಲೂಕ ಂದಗೋಳ ಇಲ್ಲಿಯ ಹೆಡ್‌ಮಾಸ್ತರ ಮಿ. ಅರಳೀಕಟ್ಟಿ ಇವರ ಬದಲಾಗಿ ಎಫ್. ಶಿರಗುಪ್ಪಿ ಎಂದು ಇರತಕ್ಕದ್ದು. ಅದೇ ಪತ್ರದಲ್ಲಿ ಶ್ರೀ. ರಪ್ಪಣ್ಣಾ ಹೊಸಕಟ್ಟಿ ಇವರ ಹೆಸರಿನ ಬದಲಾಗಿ ಶ್ರೀ. ವೀರಪ್ಪ ಅಣ್ಣಾ ಸಕೋಟಿ ಹುಬ್ಬಳ್ಳಿ ಎಂದು ಇರತಕ್ಕದ್ದು. ವಾಚಕರು ಮೇಲೆ ಬರೆದ ಕಾದ ಪ್ರಾ. ಶಿ. ದಲ್ಲಿ ತಿದ್ದಿಕೊಳ್ಳಬೇಕು.

೧೯೩೬ ಮಾರ್ಚ ತಿಂಗಳ ಪ್ರಾಥಮಿಕ ಶಿಕ್ಷಣದ ಪುಟ ೩೯ ರಲ್ಲಿ ಸ್ವತಿ ವಿಜಯ ೧೯೩೩ ರ ಆವೃತ್ತಿ ಈ ಗ್ರಂಥದ ಕರ್ತರ ಹೆಸರು ದೆ. ಗ್ರಂಥಕರ್ತರ ಹೆಸರು ಈ ಕಾಲಮಿನಲ್ಲಿ ಮಿ. ಬಿ. ಬಿ. ಬೂದಿಹಾಳ ರ ಎಂದು ತಿದ್ದಿಕೊಳ್ಳಬೇಕು.

Reg. No. B. 3೮

ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕ‍ಮಿಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ಬೆಲೆ ರೂ. ೦
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦– ೮
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳಿಪೇಟಕೃತ)	೦– ೮
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦– ೪
ಹಿಂದುಸ್ಥಾನದ ಇತಿಹಾಸ (ಬಸವನಾಳಕೃತ)	೦– ೮
ಲಘುವ್ಯಾಕರಣ (ವೈ. ಕಟ್ಟೀಕೃತ)	೦– ೨
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦– ೩
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦–೧೦
ಚಿತ್ರಮಯ ಕೋಷ್ಟಕ (ಉಗ್ರಕೃತ) ೩ನೇ ಇ. ಗೆ	೦– ೨
ಗಣಿತಾದರ್ಶ (ಜೋಶಿ ಕೃತ) ೨ನೇ ಇ. ಗೆ	೦– ೪
,, ,, ೩ನೇ ,,	೦– ೫
,, ,, ೪ನೇ ,,	೦– ೮
ಅಂಕಗಣಿತ (ಗಾಂವಕರಕೃತ) ೩ನೇ ,,	೦– ೫
ಧಾರವಾಡ ಜಿಲ್ಹಾ ವರ್ಣನೆ (ಅಣ್ಣೀಗೇರಿ ಕೃತ) ೩ನೇ ಇ. ಗೆ	೦– ೪
ವಿಜಾಪೂರ ,, ,, (,,) ೩ನೇ ,,	೦– ೪
ಧಾರವಾಡ ಜಿಲ್ಹಾ ,, (ಕುಂದಗೋಳಕೃತ)	೦– ೨
ಹಿಂದುಸ್ಥಾನ ಭೂಗೋಲು (ಮುಗದಾಲಕೃತ)	೦– ೪
ನುಡಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦–೧೨
ಭೂಗೋಲವಿದ್ಯೆ ೩ನೇ ಭಾಗ (ವೈ. ಕಟ್ಟೀಕೃತ)	೦– ೨
ವಿಜ್ಞಾನ ಸಚಿತ್ರ (ನಾಡಿಗೇರಕೃತ)	೦–೧೨
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦– ೨
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦–೧೦
ಸರಸ್ವತಿ ವಿಜಯ (ಬೂದೀಹಾಳಕೃತ)	೦– ೪

ಪತ್ತೆ:—**ವಿ. ಆರ್. ಶಿವನಾಗಪ್ಪ,**

ಬುಕ್‌ಸೇಲರ ಹುಬ್ಬಳ್ಳಿ

೨- ಜೂನ-೧೯೩೬ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamik Shikshana

ಸಂಪಾದಕರು

ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ವಿಷಯಾನುಕ್ರಮಣಿಕೆಯು

ಹಿಂದುಸ್ತಾನದ ಶಿಕ್ಷಣ ೧
ಸಾರದ ಟಿಪ್ಪಣಿ ೧೨
ಅನುಕರಣವೇ ನಿಜವಾದ ಶಿಕ್ಷಣ ೨೬
ಬಲೂಚಿಸ್ತಾನವು ೩೦
ಲವಂಗ ೩೪
ಗ್ರಾಮಸುಧಾರಣೆಗಾಗಿ ತೆರೆದ ಟ್ರೇನಿಂಗ ಕ್ಲಾಸು . . . ೩೯
ಹೆಣ್ಣುಮಕ್ಕಳ ಟ್ರೇ. ಕಾ. ಧಾರವಾಡ ೧೯೩೬ನೆಯ ಇಸ್ವಿಯಲ್ಲಿ
ಎಪ್ರಿಲ್ ತಿಂಗಳಲ್ಲಾದ ಸರ್ಟಿಫಿಕೆಟ ಪರೀಕ್ಷೆಯ ಪರಿಣಾಮ ೫೧
ಧಾರವಾಡ ಟ್ರೇ. ಸ್ಕೂಲಿನ ಪರೀಕ್ಷೆಯ ಪರಿಣಾಮ . . . ೫೩
೧೯೩೬ ನೆಯ ಇಸವಿಯ ಮಾರ್ಚ ತಿಂಗಳಲ್ಲಾದ . . .
ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮ . ೫೬

Printed by K. R. Bhise at the Karnatak printing Works, Dharwar
and Published by V. N. Magdal, B. A., Head Master,
Training School, Dharwar, at his Office.

ಮಾರಾಟಕ್ಕೆ ಸಿದ್ಧವಿದೆ
ಗಣಿತ ಶಿಕ್ಷಕ

ಬ. ಮ. ಹಿರೇಮಠ ಕೃತ

೩ನೆಯ ಆವೃತ್ತಿ

[illegible] ಈ ಪುಸ್ತಕವು ಕನ್ನಡ ೫–೬–೭ ನೆಯ ಇಯತ್ತೆ [illegible] ವಿದ್ಯಾರ್ಥಿಗಳಿಗೆ ಮತ್ತು ಮಾಧ್ಯಮಿಕ [illegible] [illegible] ವಾಗುವಂತೆ ಅಭ್ಯಾಸಕ್ರಮಕ್ಕನುಸರಿಸಿ [illegible] ಮಹತ್ವವನ್ನು ವರ್ಣಿಸಲವಶ್ಯವಿಲ್ಲ. ಕರ್ನಾಟಕದ ಎಲ್ಲ [illegible] ಮಾರಾಟವಾದುವು. ಆದುದರಿಂದಲೇ ಸ್ವಲ್ಪದಿವಸಗಳಲ್ಲಿ [illegible] ನೆಯ ಆವೃತ್ತಿಯನ್ನು ಪಡೆದಿರುವದು. ಒಂದು ಪ್ರತಿಯನ್ನಾ [illegible] ಉಪಯುಕ್ತತೆಯು ತಮಗೂ ತಿಳಿಯುವದು.

[illegible] ಶಿಕ್ಷಕರಿಗೂ ಯೋಗ್ಯ ಸವಲತ್ತು ದೊರೆಯುವದು. [illegible] ಇವರಲ್ಲಿಯೂ ಎಲ್ಲ ಊರುಗಳ [illegible] [illegible]

ಬಸಪ್ರಭಯ್ಯ ದುಂಡಯ್ಯ ಹಿರೇಮಠ,
ಕನ್ನಡ ಶಾಲಾಮಾಸ್ತರ [illegible]

ಕನ್ನಡ ೪ನೇ ಇಯತ್ತೆಗಾಗಿ

[illegible] ಕಮೀಟಿಯಿಂದ ಮಂಜೂರಾದ

ಕರ್ನಾಟಕ ಇತಿಹಾಸ ಬೋಧಿನಿ

[ಹೊಸ ಚಿತ್ರಗಳು] [ಹೊಸ ಮನೋರಂಜಕ [illegible]

ಪ್ರೊ. [illegible]ರವರ ಮುನ್ನುಡಿಯುಳ್ಳದ್ದು

ಶಿಕ್ಷಕರಿಗೆ [illegible] ವಿದ್ಯಾರ್ಥಿಗಳಿಗೆ ಕಲಿಸಲು ಯೋಗ್ಯವಾದ ಪು[illegible]

[illegible] ತಾಮ್ರಪಟಗಳನ್ನು ಶೋಧಿಸಿ ಇತಿಹಾಸಜ್ಞರು [illegible] ಮನೋರಂಜಕವಾಗಿಯೂ ಸ್ಫೂರ್ತಿದಾಯಕವಾಗಿಯೂ [illegible] ಪುಲಕೇಶಿ, ಅಕ್ಕಣ್ಣ ಮಾದಣ್ಣರ ಕೊಲೆ, [illegible] ಅರಸರ ಹಾಗು ಶಿರಸಂಗಿ ದೇ[illegible] [illegible] ಇವೆ. ಭಾಷೆ ಸುಲಭ. ವಿಷಯ ಮನೋ[illegible] [illegible] ಸದಭಿಪ್ರಾಯಗಳಿವೆ. ಬೆಲೆ ಎಂಟೇ [illegible] [illegible] ಹಾಗು ಕೆಳಗಿನ ಪತ್ತೆಯಲ್ಲಿಯೂ ದೊರೆಯು[illegible] [illegible] ಪತ್ರವ್ಯವಹಾರದಿಂದ ಗೊತ್ತಾಗುವದು.

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ,
ಮಂಗಳವಾರಪೇಠ, ಧಾರ[illegible]

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:—ವೆಂಕಟೇಶ ನರಸಿಂಗರಾವ ಮುಗದಾಳ, ಬಿ. ಎ.

ಸಂಪುಟ ೭೩ ||| ಮೇ–ಜೂನ ೧೯೩೬ ||| ವರ್ಷ ೮ ಸಂ. ೨–೩

ಹಿಂದುಸ್ತಾನದ ಶಿಕ್ಷಣ

ಶಿಕ್ಷಣದ ಪ್ರತಿಯೊಂದು ಶಾಖೆಯನ್ನೂ ಸರಕಾರದವರು ಎಚ್ಚರದಿಂದ ಭಿವೃದ್ಧಿಗೊಳಿಸತಕ್ಕದ್ದೆಂಬುದು ನಿಜವು. ಆದರೆ ದೇಶದ ಸದ್ಯದಸ್ಥಿತಿಯಲ್ಲಿ, ಹುಜನರ ಪ್ರಾಥಮಿಕ ಶಿಕ್ಷಣವು, ಆ ಬಗ್ಗೆ ಹಣದ ವ್ಯವಸ್ಥೆಯನ್ನು ಮಾಡು ಮು, ಶಿಕ್ಷಣದ ಈ ಅಂಗವನ್ನು ಮುಂದುವರಿಸುವದು, ಅದನ್ನು ಸುಧಾರಿಸು ದು ಇವೆಲ್ಲ ಸರಕಾರದವರ ಪ್ರಮುಖ ಕರ್ತವ್ಯಗಳಾಗಿರುವವು. ಅವರು ಈ ಗ್ಗೆ ಪ್ರಬಲವಾದ ಪ್ರಯತ್ನಗಳನ್ನು ಮಾಡತಕ್ಕದ್ದು. ಈ ವರೆಗೆ ಈ ದಿಶೆಯಲ್ಲಿ ಸಿದ ಪ್ರಯತ್ನಗಳನ್ನು ವಿಶೇಷವಾಗಿ ಹೆಚ್ಚಿಸತಕ್ಕದ್ದು. ಸಾರ್ವಜನಿಕ ಶಿಕ್ಷಣ ವಸ್ಥೆಯಲ್ಲಿ ಸ್ಥಾನಿಕ ಕರಗಳಿಂದ ಎತ್ತಿದ ಯಾವತ್ತೂ ಹಣವನ್ನೂ ಪ್ರಾಂತಿಕ ತ್ಪನ್ನದ ವಿಶೇಷ ಅಂಶವನ್ನೂ ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚಮಾಡುವದಿರುವ ದು ಸರಕಾರದವರು ಪ್ರಕಟಿಸತಕ್ಕದ್ದು.

ಮಾಧ್ಯಮಿಕ ಶಿಕ್ಷಣಕ್ಕೂ ಸರಕಾರಕ್ಕೂ ಇರುವ ಸಂಬಂಧವು ಪ್ರಾಥಮಿಕ ಕ್ಷಣಕ್ಕೂ ಸರಕಾರಕ್ಕೂ ಇರುವ ಸಂಬಂಧದಿಂದ ತೀರ ಭಿನ್ನವಾಗಿರುವದೆಂದು ಳಿಯಿಸತಕ್ಕದ್ದು. ಇದು ಹ್ಯಾಗೆಂದರೆ, ಸ್ಥಾನಿಕ ಸಹಕಾರವು ದೊರೆಯಲಿ, ರೆಯದಿರಲಿ ಸರಕಾರದವರು ಪ್ರಾಥಮಿಕ ಶಿಕ್ಷಣವು ಸಾಗಲು ಅವಶ್ಯವಾದ

ಏರ್ಪಾಡುಗಳನ್ನು ಮಾಡಲೇಬೇಕು; ಆದರೆ ಮಾಧ್ಯಮಿಕ ಶಿಕ್ಷಣದ ವಿಷಯದಲ್ಲಿ ಮಾತ್ರ ಸ್ಥಾನಿಕ ಸಹಕಾರವು ದೊರೆತರೆ ಮಾತ್ರ ಅದನ್ನು ನಡಿಸುವ ವ್ಯವಸ್ಥೆಯನ್ನು ಮಾಡಬಹುದು.

ಸಾಮಾನ್ಯವಾಗಿ ಇಂಗ್ಲಿಷ ಭಾಷಾಭ್ಯಾಸಕ್ಕಾಗಿ ಇನ್ನು ಮುಂದೆ ಮಾಧ್ಯಮಿಕ ಶಿಕ್ಷಣಾಲಯಗಳನ್ನು ಸರಕಾರದವರು ಸ್ಥಾಪಿಸತಕ್ಕದ್ದು. ಆದರೆ ಈ ಸಂಸ್ಥೆಗಳಿಗೆ ಸಹಾಯಕ ದ್ರವ್ಯವನ್ನು ಮಾತ್ರ ಕೊಡುವ ಪದ್ಧತಿಯಿಂದಲೇ ಇವುಗಳನ್ನು ಆರಂಭಿಸಲಿಕ್ಕೆ ಉತ್ತೇಜನಕೊಡತಕ್ಕದ್ದು.

ಸರಕಾರದವರು ಸ್ಥಾಪಿಸಿರುವ ಮಾಧ್ಯಮಿಕ ಶಾಲೆಗಳನ್ನು ಕ್ರಮವಾಗಿ ಸ್ಥಾನಿಕ ದೇಶೀಯ ಸಂಸ್ಥೆಗಳಿಗೆ ಒಪ್ಪಿಸುವದಿರುವದೆಂಬದನ್ನು ಎಲ್ಲ ಪ್ರಾಂತಗಳ ಶಾಲಾಖಾತೆಗಳ ಡಾಯರೆಕ್ಟರರು ಲಕ್ಷ್ಯದಲ್ಲಿಡತಕ್ಕದ್ದು. ಮೊದಲನೆಯ ಹಾಗು ಎರಡನೆಯ ತರಗತಿಗಳ ಇಂಗ್ಲಿಷ ಕಾಲೇಜುಗಳಿಗೆ ಸೇರಿಸಲ್ಪಟ್ಟ ಮಾಧ್ಯಮಿಕ ಶಾಲೆಗಳನ್ನೂ ಹೀಗೆಯೇ ಸ್ಥಾನಿಕ ಸಂಸ್ಥೆಗಳಿಗೆ ಒಪ್ಪಿಸುವ ಉದ್ದೇಶವನ್ನಿಟ್ಟು ಕೊಂಡಿರಬೇಕು. ಆದರೆ ಹೀಗೆ ಈ ಸರಕಾರದ ಶಾಲೆಗಳನ್ನು ದೇಶೀಯ ಸಂಸ್ಥೆಗಳಿಗೆ ಒಪ್ಪಿಸುವಾಗ ಶಿಕ್ಷಣದ ಗತಿಯು ಕುಂಠಿತವಾಗದಂತೆಯೂ ಶಿಕ್ಷಣ ಅನುಕೂಲತೆಗಳು ಕಡಿಮೆಯಾಗದಂತೆಯೂ, ಒಪ್ಪಿಸಿಕೊಟ್ಟ ಶಾಲೆಗಳು ಚೆನ್ನಾಗಿ ನಡೆಯುವದರಲ್ಲಿ ಕುಂದುಬಾರದಂತೆಯೂ ಎಚ್ಚರಗೊಳ್ಳತಕ್ಕದ್ದು.

ಇನ್ನು ಮುಂದೆ ಯಾವದೊಂದು ಜಿಲ್ಹೆಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಹೆಚ್ಚಿಸಬೇಕಾದಲ್ಲಿ ಸಹಾಯಕ ದ್ರವ್ಯದ ಪದ್ಧತಿಯಿಂದ ನಡೆಯುವ ಸಾಲೆಗಳನ್ನು ಹೆಚ್ಚಿಸಬೇಕು. ಆದರೆ ಆ ಜಿಲ್ಹೆಯಲ್ಲಿ ಸರಕಾರದವರು ಅಥವಾ ಬೇರೆಯವರು ನಡಿಸುತ್ತಿರುವ ಒಂದು ಮೇಲಾದ ಸ್ಥಿತಿಯಲ್ಲಿರುವ ಹಾಯಸ್ಕೂಲವೂ ಇದಕ್ಕೆ ವಿದ್ಯಾರ್ಥಿಗಳನ್ನು ಪೂರಯಿಸುವ ಇತರ ಶಾಲೆಗಳೂ ಇರುವವೆಂಬದನ್ನು ನೋಡಿ ಕೊಳ್ಳಬೇಕು.

ಸರಕಾರದ ಶಾಲೆಗಳನ್ನಾಗಲಿ ಕಾಲೇಜುಗಳನ್ನಾಗಲಿ ಖಾಸಗಿಯ ಸ್ಥಾನಿಕ ಸಂಸ್ಥೆಗಳಿಗೆ ಒಪ್ಪಿಸಬೇಕಾದರೆ ಇವುಗಳನ್ನು ಸ್ವೀಕರಿಸಿ ಸಾಗಿಸಲು ಇಂಥ ಸಂಸ್ಥೆಗಳಿಗೆ ಸಹಾಯವು ಬೇಕಾಗುವದು. ಮೊದಲು ಮೊದಲು ಈ ಬಗೆಯ ಶಾಲೆಗ

ಜ್ಞಾಗಬೇಕೆಂಬ ಉದ್ದೇಶದಿಂದ ಧಾರಾಳವಾದ ದರದಿಂದ ಅವರಿಗೆ ಸಹಾಯಕ ್ಯವನ್ನು ಒದಗಿಸಿಕೊಡಬೇಕು. ಈ ಶಾಲೆಗಳನ್ನು ಯೋಗ್ಯರೀತಿಯಿಂದ ಗಿಸಿಕೊಂಡು ಹೋಗಲಿಕ್ಕೆ ಅವರು ತಕ್ಕವರಿರುವರೆಂಬದನ್ನು ಮಾತ್ರ ಜಾಗ್ರತೆ ಯಿಂದ ನೋಡಿಕೊಳ್ಳಬೇಕು.

ಸಹಾಯಕ ದ್ರವ್ಯವನ್ನು ಹೊಂದಿ ಶಾಲೆಗಳನ್ನುಸ್ಥಾಪಿಸುವವರಿಗೆ ಉತ್ತೇಜನ ನ್ನು ಕೊಡಲಿಕ್ಕೆಬೇಕು. ಇದಕ್ಕಾಗಿ ಸರಕಾರದ ಶಾಲೆಗಳಲ್ಲಿ ಇರುವ ಜ್ಜಿನ ಫೀಹಣದ ದರವನ್ನು ಅವರು ತಮ್ಮ ಶಾಲೆಗಳಲ್ಲಿ ತೆಗೆದುಕೊಳ್ಳಬೇಕೆಂಬ ರ್ಬಂಧವನ್ನು ಹಾಕಬಾರದು.

ಈ ಶಿಫಾರಸುಗಳ ಪರಿಣಾಮವೇನಾಯಿತೆಂದರೆ (೧) ಇಡಿಯ ದೇಶದಲ್ಲಿ ಪ್ರಥಮಿಕ ಶಿಕ್ಷಣದ ಕಡೆಗೆ ಸರಕಾರದವರ ಹಾಗು ಜನತೆಯ ಲಕ್ಷ್ಯವು ಹೆಚ್ಚಾ ಯಿತು. (೨) ಮಾಧ್ಯಮಿಕ ಶಿಕ್ಷಣದ ವಿಷಯದಲ್ಲಿ ಸರಕಾರದವರ ಚಟುವಟಿಕೆ ಗೆ ನಿಶ್ಚಿತವಾದ ತಡೆಯುಂಟಾಯಿತು. (೩) ಶಿಕ್ಷಣ ವಿಷಯದಲ್ಲಿ ಖಾಸಗಿ ನರು ಮನಸು ಹಾಕಿ ಕಾರ್ಯಪ್ರವೃತ್ತರಾಗಲು ಎಡೆದೊರೆಯಿತು.

ಕಮಿಶನದವರು ಅಭ್ಯಾಸಪತ್ರಿಕೆ, ಪರೀಕ್ಷಾಕ್ರಮ ಮುಂತಾದವುಗಳ ಗ್ಗೆಯೂ ಕೆಲವು ಸೂಚನೆಗಳನ್ನು ಮಾಡಿದರು. ಅವುಗಳನ್ನು ಮುಂದೆ ಕೊಟ್ಟಿರುವೆವು.

ಪ್ರತಿಯೊಂದು ಪ್ರಾಂತದಲ್ಲಿಯ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಸಯ ಪತ್ರಿಕೆ ಹಾಗು ಪರೀಕ್ಷೆಯ ಕ್ರಮ ಇವುಗಳಲ್ಲಿ ತಿದ್ದುಪಡಿಯನ್ನು ಮಾಡ ಕು. ಇವು ಸದ್ಯಕ್ಕಿಂತ ಸುಲಭವೂ ಸರಳವೂ ಆಗತಕ್ಕದ್ದು. ವ್ಯವಹಾರಕ್ಕೆ ಪಯೋಗವಾಗುವ ವಿಷಯಗಳನ್ನು ಇದರಲ್ಲಿ ಹೆಚ್ಚಾಗಿ ಸೇರಿಸಬೇಕು. ಉದಾ ರಣಾರ್ಥವಾಗಿ ಗಣಿತದಲ್ಲಿ ದೇಶೀಯಪದ್ಧತಿಯಿಂದ ಮಾಡುವ ಉದಾಹರಣ ಳು, ಜಮಾಖರ್ಚು, ಕ್ಷೇತ್ರಫಲ, ಶಾಸ್ತ್ರೀಯ ಮೂಲ ತತ್ವಗಳು, ಇವುಗಳ ಜ್ಞಾನವನ್ನು ಕೃಷಿ, ಆರೋಗ್ಯ, ಕಲಾಕೌಶಲ್ಯಗಳು ಇವುಗಳಲ್ಲಿ ಮಾಡಿಕೊಳ್ಳುವ ಕಾರಗಳು ಮೊದಲಾದ ವಿಷಯಗಳ ಸಮಾವೇಶವಾಗತಕ್ಕದ್ದು. ಆದರೆ ಹಿಂದು ಸ್ಥಾನದ ಎಲ್ಲ ಪ್ರಾಂತಗಳಲ್ಲಿ ಒಂದೇ ಬಗೆಯ ಅಭ್ಯಾಸಪತ್ರಿಕೆಯಿರಬೇಕೆಂಬ ರ್ಬಂಧವನ್ನು ಮಾತ್ರ ಸೇರಿಸಲಾಗದು.

ಪಠ್ಯಪುಸ್ತಕಗಳನ್ನು ಆರಿಸುವದರಲ್ಲಿ ಶಾಲಾವ್ಯವಸ್ಥಾಪಕರಿಗೆ ಸ್ವಾತಂತ್ರ್ಯವನ್ನು ಕೊಡತಕ್ಕದ್ದು. ಇದರಲ್ಲಿ ಕೈಹಾಕಲಾಗದು.

ಒಂದು ಪ್ರಾಂತದ ಯಾವತ್ತು ಭಾಗಗಳಲ್ಲಿ ಒಂದೇಬಗೆಯ ಪರೀಕ್ಷಾಕ್ರಮದಿಂದ ತೆಗೆದುಕೊಂಡ ಪರೀಕ್ಷೆಗಳ ಪರಿಣಾಮವನ್ನು ಅನುಸರಿಸಿಯೇ ಒಂದು ವರ್ಗದಿಂದ ಮೇಲಿನ ವರ್ಗಕ್ಕೆ ಹುಡುಗರನ್ನು ಹಾಕಬೇಕೆಂದು ನಿರ್ಬಂಧವನ್ನು ಏರ್ಪಡಿಸಲಾಗದು.

ಹಾಯಸ್ಕೂಲುಗಳ ಮೇಲಿನ ವರ್ಗಗಳಲ್ಲಿ ಎರಡೆರಡು ಭಾಗಗಳನ್ನು ಮಾಡತಕ್ಕದ್ದು. ಒಂದು ಭಾಗದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಪ್ರವೇ[ಶ] ಪರೀಕ್ಷೆಗೆ ಕೂಡಲು ಅಭ್ಯಾಸಮಾಡುವವರಿರತಕ್ಕದ್ದು; ಮತ್ತೊಂದು ಭಾಗ[ದ] ವಿದ್ಯಾರ್ಥಿಗಳು ವ್ಯವಹಾರಿಕವಾಗಿ ವಿಷಯಗಳನ್ನು ಕಲಿಯುವವರಿರತಕ್ಕದ್ದು. ಇವರು ಶಾಲೆ ಬಿಟ್ಟಕೂಡಲೆ ವ್ಯಾಪಾರೋದ್ಯೋಗಗಳಲ್ಲಿ ತೊಡಗಲು ತಕ್ಕವರಾ[ಗ]ತಕ್ಕದ್ದು. ಈ ರೀತಿಯಲ್ಲಿ ಮಾಧ್ಯಮಿಕ ಶಿಕ್ಷಣದಲ್ಲಿ ದ್ವಿದಲವನ್ನು ಏರ್ಪಡಿಸಿ[ದ] ಬಳಿಕ ಇವೆರಡರಲ್ಲಿ ಯಾವದೊಂದು ಶಿಕ್ಷಣಕ್ರಮದಲ್ಲಿ ವಿದ್ಯಾರ್ಥಿಯು ತೇರ್ಗ[ಡೆ] ಹೊಂದಿರುವನೆಂದಾಗಲಿ ಇಂತಿಷ್ಟು ಪ್ರಾವೀಣ್ಯವನ್ನು ಪಡೆದಿರುವನೆಂದಾಗಲಿ ಕೊಡುವ ಯೋಗ್ಯತಾಪತ್ರಿಕೆಗಳು ಸರಕಾರದ ಉದ್ಯೋಗಗಳಲ್ಲಿ ಅವರನ್ನು ಸೇರಿಸಿಕೊಳ್ಳಲಿಕ್ಕೆ ತಕ್ಕವೆಂದು ಎಣಿಸಲ್ಪಡತಕ್ಕದ್ದು.

ಕಮಿಶನದವರು ಮಾಡಿದ ಶಿಫಾರಸುಗಳನ್ನು ಸರಕಾರದವರು ಸಾಮಾನ್ಯವಾಗಿ ಒಪ್ಪಿಕೊಂಡರು. ಇದೇ ಸಮಯಕ್ಕೆ ಮ್ಯುನಿಸಿಪಾಲಿಟಿಯು ಸಂಘಗಳೂ ಡಿಸ್ಟ್ರಿಕ್ಟ ಬೋರ್ಡುಗಳೂ ಸ್ಥಾಪಿತವಾದವು. ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯು ಈ ಬೋರ್ಡುಗಳಿಗೆ ಒಪ್ಪಿಸಲ್ಪಟ್ಟಿತು. ಈ ಮೂಲಕ ಪ್ರಾಥಮಿಕ ಶಿಕ್ಷಣದ[ಲ್ಲಿ] ಒಳ್ಳೆಯ ಸುಧಾರಣೆಯಾದದ್ದಲ್ಲದೆ ಅದು ಅಭಿವೃದ್ಧಿಯನ್ನು ಹೊಂದಿತು. ಸಹಾಯಕ ದ್ರವ್ಯವನ್ನು ಪಡೆದು ಶಿಕ್ಷಣ ಸಂಸ್ಥೆಗಳನ್ನು ನಡಿಸುವ ಪದ್ಧತಿಯು ಮುಂ[ದ]ವರಿದಂತಾಯಿತು.

ಲಾರ್ಡ ಕರಝುನ್ ದೊರೆಗಳು ಹಿಂದುಸ್ತಾನದ ವ್ಹಾಯಿಸರಾಯರಿದ್ದಾ[ಗ] ಶಿಕ್ಷಣದ ಪ್ರಗತಿಯ ಬಗ್ಗೆ ಮತ್ತೊಮ್ಮೆ ಅವರು ಸರ್ವತೋಮುಖವಾದ ವಿಚಾ[ರ]

ಣೆಯನ್ನು ಕೈಕೊಂಡರು. ಈ ವಿಚಾರಣೆಯಲ್ಲಿ ಅವರು ಈ ದೇಶದಲ್ಲಿ ಇದ್ದ ಎಲ್ಲ ಬಗೆಯ ಎಲ್ಲ ತರಗತಿಗಳ ಶಿಕ್ಷಣ ಸಂಸ್ಥೆಗಳನ್ನು ಕುರಿತು ಮಾಹಿತಿಯನ್ನು ಕಲೆ ಹಾಕಿದರು. ವಿಶ್ವವಿದ್ಯಾಲಯಗಳಿಂದ ಪ್ರಾಥಮಿಕ ಶಾಲೆಗಳವರೆಗೆ ಅವುಗಳ ತರಗತಿಗಳು, ಅವುಗಳಲ್ಲಿ ಉಪಯೋಗಿಸುವ ಶಿಕ್ಷಣ ಪದ್ಧತಿಗಳು, ಅವುಗಳ ವ್ಯವಸ್ಥಾಕ್ರಮ, ಒಲವುಗಳು- ಇವನ್ನೆಲ್ಲ ಕುರಿತು ಪರೀಕ್ಷಿಸಿದರು. ಒಟ್ಟಿನ ಮೇಲೆ ಹಿಂದುಸ್ತಾನದ ಶಿಕ್ಷಣ ಪ್ರಪಂಚವನ್ನು ಕುರಿತು ಸೂಕ್ಷ್ಮರೀತಿಯಿಂದ ವಿಚಾರಣೆಯನ್ನೇರ್ಪಡಿಸಿದರು. ೧೯೦೧ರಲ್ಲಿ ಇವೆಲ್ಲ ಸಂಸ್ಥೆಗಳ ಸ್ಥಿತಿಯು ಯಾವ ಪ್ರಕಾರದ್ದಿರುವದೆಂಬದನ್ನು ಗೊತ್ತುಪಡಿಸಿದರು. ಆ ವರುಷ ಸಪ್ಟಂಬರದಲ್ಲಿ ಎಲ್ಲ ಪ್ರಾಂತಗಳ ಶಾಲಾಖಾತೆಗಳ ಡಾಯರೆಕ್ಟರರ ಒಂದು ಸಮ್ಮೇಲನವನ್ನು ಕೂಡಿಸಿ ಶಿಕ್ಷಣದ ಯಾವತ್ತು ಅಂಗಗಳ ವಿಷಯವಾಗಿ ಚರ್ಚಿಸಿದರು. ಈ ಸಮ್ಮೇಲನ ದಲ್ಲಾದ ಚರ್ಚೆಯು ಹಲವು ಮಹತ್ವದ ಕಾರ್ಯಗಳ ರೂಪವಾಗಿ ಫಲಿತ ಾಯಿತು. ಇವುಗಳಲ್ಲಿ ಎಲ್ಲಕ್ಕೂ ಮಹತ್ವವಾದ ಕಾರ್ಯವೆಂದರೆ ಆಗ ಇದ್ದ ಲ್ಲ ವಿಶ್ವವಿದ್ಯಾಲಯಗಳು ಹೊಸ ರಚನೆಯನ್ನು ಹೊಂದಿದ್ದೇ ಸರಿ. ವಿಶ್ವ ದ್ಯಾಲಯಗಳಿಗೆ ಸಂಬಂಧಿಸಿದ ಕಾಲೇಜುಗಳನ್ನು ಕಾಲಕಾಲಕ್ಕೆ ಇನ್‌ಸ್ಪೆಕ್ಟ ಮಾಡಬೇಕೆಂದು ಗೊತ್ತಾಯಿತು. ಮಾಧ್ಯಮಿಕ ಹಾಗು ಪ್ರಾಥಮಿಕ ಶಾಲೆ ಗಳನ್ನು ರಿಆರ್ಗನಾಯಿಜ ಮಾಡುವ ಬಗ್ಗೆಯೂ ಇವುಗಳಿಗೆ ಸಹಾಯಕ ದ್ರವ್ಯ ವನ್ನು ಕೊಡುವ ಬಗ್ಗೆಯೂ ಹೊಸ ನೇಮಗಳನ್ನು ಮಾಡಲಾಯಿತು. ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ಹಾಗು ಕಾಲೇಜುಗಳಲ್ಲಿ ರೂಢವಿದ್ದ ಅಭ್ಯಾಸ ಪತ್ರಿಕೆ ಗಳಲ್ಲಿ ಬದಲಾವಣೆಗಳನ್ನು ಮಾಡಲಾಯಿತು.

ಈ ಸಮ್ಮೇಲನದಲ್ಲಿ ಚರ್ಚೆಯಾಗಿ ನಿರ್ಣಯಿಸಲ್ಪಟ್ಟ ಸಂಗತಿಗಳನ್ನು ಒಟ್ಟು ಗೂಡಿಸಿ ಸರಕಾರದವರು "ಹಿಂದುಸ್ತಾನದ ಶಿಕ್ಷಣವಿಷಯಕ ಧೋರಣವು" ಎಂಬ ಒಂದು ರಿಪೋರ್ಟನ್ನು (ಸರಕಾರದವರು ಮಾಡಿದ ಗೊತ್ತುವಳಿಯನ್ನು) ಪ್ರಸಿದ್ಧಪಡಿಸಿದರು. ಈ ಗೊತ್ತುವಳಿಯಲ್ಲಿ ೧೮೮೨ರಲ್ಲಿ ಕೂಡಿದ ಕಮಿಶನದವರು ಮಾಡಿದ ಶಿಫಾರಸುಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಒತ್ತರದಿಂದ ಮುಂದುವರಿ ಸುವದು ಸರಕಾರದ ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಿರುವದೆಂಬ ಮಾತನ್ನು ಪೂರ್ಣವಾಗಿ ಒಪ್ಪಿಕೊಂಡರು. ಹಿಂದುಸ್ತಾನದ ರಯತನಿಗಾಗಿ ಸುಲಭವೂ ಉಪಯುಕ್ತವೂ ಯೋಗ್ಯವೂ ಆದ ಮಾದರಿಯ ಪ್ರಾಥಮಿಕ ಶಾಲೆಗಳನ್ನು

ಸ್ಥಾಪಿಸುವದು ಒಳ್ಳೆಯ ಮಹತ್ವದ ಸಂಗತಿಯೆಂದು ಅಭಿಪ್ರಾಯಪಟ್ಟರು. ಸ ಕಾರದ ಶಾಲಾಖಾತೆಗಳ ಅಧಿಕಾರಿಗಳು ಮಾಧ್ಯಮಿಕ ಶಾಲೆಗಳನ್ನು ರಿಕಗ ನಾಯಿರ್ಝುಮಾಡುವ ಬಗ್ಗೆ ಕೆಲವು ಕರಾರುಗಳನ್ನು ಸೂಚಿಸಿದರು. ಪರಿಣಾಮ ಕರವಾದ ಶಿಕ್ಷಣಕ್ಕೆ ಅವಶ್ಯವಾದ ಶಿಕ್ಷಣದ ಮೂಲತತ್ವಗಳನ್ನು ಅನುಸರಿ ದಿರುವ ಸಂಸ್ಥೆಗಳಿಂದ ಬರುವ ವಿದ್ಯಾರ್ಥಿಗಳನ್ನು ವಿಶ್ವ ವಿದ್ಯಾಲಯಗಳ ಪರೀಕ್ಷೆ ಕೂಡಗೊಡಲಾಗದೆಂದು ನಿಯಂತ್ರಿಸಿದರು.

ಮಾಧ್ಯಮಿಕ ಶಿಕ್ಷಣದಲ್ಲಿ ಭಾಷಾತ್ಮಕ ವಿಷಯಗಳನ್ನು ಕಲಿಸುವ ಭಾ ವಲ್ಲದೆ ವ್ಯವಹಾರೋಪಯುಕ್ತವಾದ ಶಿಕ್ಷಣವನ್ನು ಒದಗಿಸಿಕೊಡುವ ಭಾಗ ಇರಬೇಕೆಂದು ೧೮೮೨ ರಲ್ಲಿ ನೆರೆದ ಕಮಿಶನದವರು ಶಿಫಾರಸು ಮಾಡಿದ್ದರಷ್ಟೇ ಈ ಕಾರ್ಯವು ಹೇಳಿಕೊಳ್ಳುವಷ್ಟು ಫಲಕಾರಿಯಾಗಿ ಪರಿಣಮಿಸಿಲ್ಲವೆಂದು ಇವ ನಿರ್ಣಯಿಸಿದರು. ಭಾಷಾತ್ಮಕ ಶಿಕ್ಷಣವೇ ವಿಶ್ವವಿದ್ಯಾಲಯಗಳನ್ನು ಸೇರು ವರಿಗೂ ಸರಕಾರದ ನವಕರಿಯನ್ನು ಕೈಕೊಳ್ಳುವವರಿಗೂ ಉಪಯುಕ್ತವೆನಿಸಿ ಮೂಲಕ ವಿದ್ಯಾರ್ಥಿಗಳಲ್ಲಿ ಬಹು ಜನರು ಈ ಶಿಕ್ಷಣಕ್ಕೇ ಮೋಹಿಸಿ ಇದನ್ನೆ ಕೈಕೊಳ್ಳುತ್ತಿರುವರೆಂದೂ ವ್ಯವಹಾರೋಪಯುಕ್ತವಾದ ಕಲೆಗಳ, ಉದ್ಯೋಗಗ ಇಲ್ಲವೆ ವ್ಯಾಪಾರಿಕ ವಿಷಯಗಳ ಶಿಕ್ಷಣವನ್ನು ಬೇಡುವವರು ತೀರ ಕಡಿಮೆ ಜನ ರಿರುವರೆಂದೂ ತೋರಿಸಿಕೊಟ್ಟರು. ಹೀಗಿದ್ದರೂ ಹಿಂದುಸ್ತಾನದ ಸರಕಾರದವರು ತಮ್ಮ ನಿರ್ದಿಷ್ಟವಾದ ಉದ್ದೇಶವನ್ನು ಬಿಟ್ಟುಕೊಡುವದಿಲ್ಲೆಂದು ನಿಶ್ಚಯಿಸಿದರು. ಈ ದೇಶದ ಸಾಮಾಜಿಕ ಹಾಗು ಔದ್ಯೋಗಿಕ ಸ್ಥಿತಿಯನ್ನು ಲಕ್ಷ್ಯಕ್ಕೆ ತಂದ ವ್ಯವಹಾರದಲ್ಲಿ ಜನರಿಗೆ ಬೇಕಾಗುವ ಬಗೆಬಗೆಯ ಜ್ಞಾನವನ್ನೂ ಜಾಣ್ಮೆಯನ್ನೂ ಒದಗಿಸಿಕೊಡಲಿಕ್ಕೆ ಅವಶ್ಯವಾದ ಹಲವು ಬಗೆಯ ಶಿಕ್ಷಣವನ್ನು ಹಲವು ಪ್ರಕಾ ರದ ಮಾಧ್ಯಮಿಕ ಶಾಲೆಗಳ ಮುಖಾಂತರವಾಗಿ ಪೂರೈಸುವದನ್ನು ನಿಶ್ಚಯಿಸಿದರು

ಶಾಲೆಗಳಲ್ಲಿ ಕಲಿಸುವ ಭಾಷೆಗಳಬಗ್ಗೆ ಅವರು ಅಭಿಪ್ರಾಯ ಪಟ್ಟದ್ದು:- ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ ಭಾಷೆಗೆ ಸ್ಥಳವಿಲ್ಲ; ಅದಕ್ಕೆ ಅಲ್ಲಿ ಸ್ಥಾನವನ ಕೊಡಲಾಗದು. ಈ ದೇಶದ ದೇಶಭಾಷೆಗಳಿಗೆ ಪ್ರತಿಯಾಗಿ ಇಂಗ್ಲಿಷ ಭಾಷೆಯನ ಕಲಿಸುವದು ಸರಕಾರದ ಧೋರಣವಾಗಿ ಎಂದೂ ಇರಲಿಲ್ಲ; ಅದು ಹಾಗೆ ಮುಂ ಯೂ ಇರಲಾರದು. ಇಂಗ್ಲಿಷ ಭಾಷೆಯ ಜ್ಞಾನವಿದ್ದ ಮನುಷ್ಯನಿಗೆ ಅದರಿಂ ವ್ಯವಹಾರದಲ್ಲಿ ಲಾಭವೂ ಉಪಯೋಗವೂ ಆಗುವದೆಂಬದರಲ್ಲಿ ಸಂದೇಹವಿಲ್

ಹಾಯಸ್ಕೂಲಿನ ಎಲ್ಲಕ್ಕೂ ಮೇಲಿನ ಇಯತ್ತೆಯ ಪರೀಕ್ಷೆಯು ಇಂಗ್ಲಿಷ ಭಾಷೆ ಯ ಮುಖಾಂತರವಾಗಿಯೇ ಆಗುತ್ತಿರುವದು. ಇವೆರಡು ಕಾರಣಗಳ ಮೂಲಕ ಹಾಯಸ್ಕೂಲುಗಳಲ್ಲಿ ಆರಂಭದ ಇಯತ್ತೆಗಳಲ್ಲಿಯೇ ಇಂಗ್ಲಿಷ ಭಾಷೆಯನ್ನು ಕಲಿಸಬೇಕಾಗುತ್ತದೆ; ಇಷ್ಟೇ ಅಲ್ಲ, ಇತರ ವಿಷಯಗಳನ್ನಾದರೂ ಇಂಗ್ಲಿಷಭಾಷೆಯ ಮುಖಾಂತರವಾಗಿಯೇ ಅಭ್ಯಾಸ ಮಾಡಿಸಬೇಕಾಗುತ್ತದೆ. ಹೀಗಿರುವ ಮೂಲಕ ಈ ಶಾಲೆಗಳಲ್ಲಿ ದೇಶಭಾಷೆಗಳ ಅಭ್ಯಾಸವು ಮೂಲೆಗೆ ಬೀಳುವ ಸಂಭವವು ಹೆಚ್ಚಾ ಗುತ್ತದೆ. ಆದರೆ ಶಿಕ್ಷಣದ ದೃಷ್ಟಿಯಿಂದ ಈ ದೋಷವಿರುವದು ಸರಿಯಲ್ಲ. ಈ ಒಲವನ್ನು ನಾವು ತಿದ್ದಿ ಸರಿಪಡಿಸಲೇಬೇಕು. ಮಗುವು ಇಂತಿಷ್ಟು ಪ್ರಾಥಮಿಕ ಶಿಕ್ಷಣವನ್ನು ಪಡೆದು ಮಾತೃಭಾಷೆಯನ್ನು ಸಾಕಷ್ಟು ಅಭ್ಯಾಸಮಾಡಿ ಶಿಕ್ಷಣದ ತಳಹದಿಯನ್ನು ಗಟ್ಟಿಯಾಗುವಂತೆ ಮಾಡಿಕೊಳ್ಳುವದಕ್ಕಿಂತ ಮುಂಚಿತವಾ ಗಿಯೇ ಇಂಗ್ಲಿಷ ಭಾಷೆಯನ್ನು ಅಭ್ಯಾಸಮಾಡಲಿಕ್ಕೆ ಹಚ್ಚುವದು ಸರಿಯಲ್ಲ. ಇದಲ್ಲದೆ, ಇಂಗ್ಲಿಷ ಭಾಷೆಯ ಅಭ್ಯಾಸವನ್ನು ಆರಂಭಿಸಿದರೂ ಇತರ ವಿಷಯ ಗಳನ್ನು ಹದಮೀರಿ ಇಂಗ್ಲಿಷ ಭಾಷೆಯ ಮುಖಾಂತರ ಕಲಿಯಹಚ್ಚುವದೂ ತಪ್ಪಾದದ್ದು. ಈ ದೇಶದ ಶಾಲೆಗಳಲ್ಲಿ, ಚೆನ್ನಾಗಿ ತಿಳಿದುಕೊಳ್ಳದೆ ಶಬ್ದ, ಶಬ್ದ ಸಮೂಹ, ಪಠ್ಯಪುಸ್ತಕದೊಳಗಿನ ವಾಕ್ಯಸಮೂಹ ಇಲ್ಲವೆ ಟಿಪ್ಪಣಿಗಳು ಮೊದ ಲಾದವುಗಳನ್ನು ಪಾಠಮಾಡಿಸುವ ರೂಢಿಯಿರುವದು ಕಂಡು ಬಂದಿದೆ. ತಮಗೆ ಕಲಿಸಿದ್ದನ್ನು ತಿಳಿದುಕೊಳ್ಳುವಷ್ಟು ಶಕ್ತಿಯು ಇಂಗ್ಲಿಷಿನಲ್ಲಿ ಉಂಟಾಗುವದಕ್ಕಿಂತ ಮೊದಲೇ ಆ ಭಾಷೆಯ ಮುಖಾಂತರವಾಗಿ ವಿಷಯಜ್ಞಾನವನ್ನು ಮಾಡಿಕೊಡಲು ಪ್ರಯತ್ನಪಡುವದಕ್ಕಾಗಿಯೇ ಹುಡುಗರನ್ನು ಕಂಠಪಾಠ ಮಾಡ ಹಚ್ಚಬೇಕಾ ಗುವದೆಂದು ಧಾರಾಳವಾಗಿ ಹೇಳಬಹುದು. ಹದಿಮೂರುವರ್ಷಕ್ಕಿಂತ ಮುಂಚಿತ ವಾಗಿಯೇ ಪರಭಾಷೆಯ ಮೂಲಕ ಎಲ್ಲ ವಿಷಯಗಳನ್ನು ಕಲಿಸುವದು ತಪ್ಪಾದ ದ್ದೆಂದು ಹೇಳಬಹುದು. ಈ ವಯಸ್ಸು ಮೀರಿದ ವಿದ್ಯಾರ್ಥಿಗಳು ಕೂಡ ಮುಂದೆ ದೇಶಭಾಷೆಯ ಅಭ್ಯಾಸವನ್ನು ಬಿಟ್ಟುಕೊಡಲಾಗದು. ಈ ಅಭ್ಯಾಸವು ಅವರ ಶಾಲೆಯ ಶಿಕ್ಷಣವು ಮುಗಿಯುವವರೆಗೆ ಮುಂದೆ ಸಾಗುತ್ತಿರತಕ್ಕದ್ದು.

ಮಾಧ್ಯಮಿಕ ಶಾಲೆಗಳಿಗೆ ಟ್ರೇಂಡರಾದ ಶಿಕ್ಷಕರನ್ನು ಹೆಚ್ಚಾಗಿ ಪೂರೈಸುವ ದಲ್ಲದೆ ಅವರಿಗೆ ಟ್ರೇನಿಂಗ ಪಡೆಯುವ ಕಾಲದಲ್ಲಿ ದೊರೆಯುವ ಶಿಕ್ಷಣದಲ್ಲಿಯೇ ಸುಧಾರಣೆಯಾಗಬೇಕೆಂದು ನಿಶ್ಚಯಿಸಿದರು.

ವಿಶ್ವವಿದ್ಯಾಲಯಗಳಬಗ್ಗೆಯೂ ಅನೇಕ ಸುಧಾರಣೆಗಳ ರೂಪರೇಷೆಯನ್ನು ಚಿತ್ರಿಸಿದರು. ಹಿಂದುಸ್ತಾನದ ವಿಶ್ವವಿದ್ಯಾಲಯಗಳೆಲ್ಲ ಕೇವಲ ಪರೀಕ್ಷಕ ಸಂಸ್ಥೆ ಗಳಾಗಿದ್ದವು; ಶಿಕ್ಷಣವನ್ನು ಕೈಕೊಳ್ಳುವದೂ ಈ ಸಂಸ್ಥೆಗಳ ಮಹತ್ವದ ಕಾರ್ಯ ವೆಂದು ನಿಶ್ಚಯಿಸಿದರು. ವಿಶ್ವವಿದ್ಯಾಲಯಗಳ ವ್ಯವಸ್ಥಾ ಕ್ರಮದಲ್ಲಿ ಬದಲಾವಣೆ ಗಳನ್ನು ನಿರ್ಣಯಿಸಿದರು. ಈ ಮೂಲಕ ಸ್ವತಂತ್ರವಾದ ವಿಶ್ವವಿದ್ಯಾಲಯಗಳಂ ಎಲ್ಲಕ್ಕೂ ಮೇಲಾದ ಶಿಕ್ಷಣ ಸಂಸ್ಥೆಗಳನ್ನು ಸರಕಾರದ ಸತ್ತೆಗೆ ಆಧೀನಪಡಿಸ ತ್ತಿರುವರೆಂದು ಸರಕಾರದಬಗ್ಗೆ ಕಡುತರವಾದ ಟೀಕೆಗಳು ಕೇಳಬರಹತ್ತಿದವು. ಆದರೂ ಇವರು ಏರ್ಪಡಿಸಿದ ಹೆಚ್ಚು ಕಟ್ಟಳೆಗಳ ಮೂಲಕ ವಿಶ್ವವಿದ್ಯಾಲಯಗಳಿ ಸಂಬಂಧಿಸಿದ ಕಾಲೇಜುಗಳ ಸ್ಥಿತಿಯು ಸುಧಾರಿಸಿರುವದೆಂದೂ ಅವುಗಳಲ್ಲಿ ಹೆಚ್ಚು ಪರಿಣಾಮಕರವಾದ ಶಿಕ್ಷಣವು ದೊರೆಯಲಾರಂಭಿಸಿರುವದೆಂದೂ ಅನುಭವದಿಂ ಗೊತ್ತಾಗಿರುವದು.

ಹಿಂದುಸ್ತಾನದ ಶಿಕ್ಷಣದ ಇತಿಹಾಸದಲ್ಲಿ ಈಬಳಿಕ ಸಂಭವಿಸಿದ ಮಹತ್ವ ಸಂಗತಿಯೆಂದರೆ ಜಾರ್ಜಬಾದಶಹರೂ ಮೇರೀ ಮಹಾರಾಣಿಯವರೂ ೧೯೧೧ ರಲ್ಲಿ ಈ ದೇಶಕ್ಕೆ ಬಂದು ದಿಲ್ಲಿಯಲ್ಲಿ ನಡೆದ ರಾಜ್ಯಾರೋಹಣ ಸಮಾರಂಭವು. ಆಗ ಸಾರ್ವಭೌಮರು ಹಿಂದುಸ್ಥಾನದ ಶಿಕ್ಷಣದ ಬಗ್ಗೆ ಅತಿ ಮಹತ್ವವುಳ್ಳ ಒಂದು ಸಂದೇಶವನ್ನು ಸಾರಿದರು. ಜನವರಿ ೧೯೧೨ ರಲ್ಲಿ ಕಲಕತ್ತೆಯ ವಿಶ್ವವಿದ್ಯಾಲಯ ದವರು ಬಾದಶಹರಿಗೆ ಮಾನಪತ್ರವನ್ನು ಅರ್ಪಿಸಿದಾಗ ಮಹಾನುಭಾವರಾದ ಸಾರ್ವಭೌಮರು ಆಜ್ಞಾಪಿಸಿದ್ದು :–"ಈ ದೇಶದತುಂಬ ಶಾಲೆಕಾಲೇಜಗಳು ಜಾಳಿಗೆ ಯಂತೆ ಹಬ್ಬಿರುವದನ್ನು ನೋಡುವದು ನಮ್ಮ ಅಪೇಕ್ಷೆಯಾಗಿದೆ. ಇವುಗಳಿಂದ ರಾಜನಿಷ್ಠರೂ, ಎದೆಗಾರರೂ, ದೇಶಕಲ್ಯಾಣಶೀಲರೂ ಆದ ನಾಗರಿಕರು ಹೊ ಬೀಳಬೇಕು. ಉದ್ಯೋಗ ವ್ಯವಸಾಯ ಮುಂತಾದ ಬಾಳುವೆಯ ಬಹುವಿಧದ ಚಟುವಟಿಕೆಗಳಲ್ಲಿ ಇವರು ಸ್ವಬಲದಿಂದ ದುಡಿದು ಕೃತಕೃತ್ಯರೆನಿಸುವವರಾಗ ಬೇಕು. ಜ್ಞಾನದ ಬೆಳಕು ಚೆನ್ನಾಗಿ ಬೆಳಗಿ ಇದರೊಡನೆ ಬರುವ ಹೆಚ್ಚಿನ ವಿಚಾರ ಜಾಗ್ರತಿಯೂ, ಆರಾಮವೂ, ಆರೋಗ್ಯವೂ ಎಲ್ಲ ಪ್ರಜೆಗಳಲ್ಲಿ ಹರಡಿ, ನಮ್ಮ ಹಿಂದುಸ್ತಾನದ ಪ್ರಜೆಗಳ ಮನೆತನಗಳು ಸುಖಸಮಾಧಾನಗಳುಳ್ಳವಾಗಿ ಅವರ ಶ್ರಮಕ್ಕೆ ತಕ್ಕ ಪ್ರತಿಫಲವು ದೊರೆಯಲೆಂದು ನಾವು ಕೋರುತ್ತೇವೆ. ಈ ನಮ್ಮ ಆಕಾಂಕ್ಷೆಯು ವಿದ್ಯಾಪ್ರಸಾರದಿಂದಲೇ ಈಡೇರುವದು. ಹಿಂದುಸ್ತಾನದ ಪ್ರಜೆಗಳ ಶಿಕ್ಷಣದ ವಿಷಯದಲ್ಲಿ ನಾವು ಯಾವಾಗಲೂ ಆತುರರಾಗಿರುವೆವು."

ರಾಜ್ಯಾರೋಹಣ ಸಮಾರಂಭಕಾಲಕ್ಕೆ ಬಹುಜನರ ಶಿಕ್ಷಣಕ್ಕಾಗಿ ಪ್ರತಿ ಷ ೫೦ ಲಕ್ಷ ರೂಪಾಯಿಯ ಸಹಾಯಕದ್ರವ್ಯವನ್ನು ವೆಚ್ಚಮಾಡಲಾಗುವ ಬು ಸಾರ್ವಭೌಮರು ಅಪ್ಪಣೆಕೊಡಿಸಿದ್ದರು. ಈ ದೇಶದ ಜನರ ಶಿಕ್ಷಣದ ತಮಗಿರುವ ಬಲವಾದ ಆಶೆಯನ್ನೂ ಆತುರವನ್ನೂ ಕಲಕತ್ತೆಯ ಷಣದಲ್ಲಿ ವ್ಯಕ್ತಪಡಿಸಿದರು. ಈ ಮೂಲಕ ದೇಶದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಯುಂಟಾಗಿ ಅದು ಭರದಿಂದ ಮುಂದಡಿಯಿಡಲಾರಂಭಿಸಿತು.

೧೯೧೩ ರಲ್ಲಿ ಲಾರ್ಡಹಾರ್ಡಿಂಗರ ಆಡಳಿತದಲ್ಲಿ ಶಿಕ್ಷಣದ ಸ್ಥಿತಿಯನ್ನು ರಿತು ಮತ್ತೆ ವಿಚಾರಮಾಡಲಾಯಿತು. ಆಗ ಸರಕಾರದವರು ಪ್ರಸಿದ್ಧ ಸಿದ ಪ್ರಕಟನೆಯಲ್ಲಿ ಶಾಲೆಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಭಾವಶೀಲಗಳನ್ನು ಯೋಗ್ಯದಿಶೆಯಲ್ಲಿ ಬಲಪಡಿಸುವದನ್ನು ಕುರಿತು ಅವರು ಹೇಳಿದರು. ಅವರು ದೃಢವಾಗಿ ಹೇಳಿದ ಕೆಲವು ಧೋರಣಗಳನ್ನು ಇಲ್ಲಿ ಟ್ಟಿರುವೆವು.

(೧) ಸದ್ಯದ ವಿದ್ಯಾಸಂಸ್ಥೆಗಳ ಸಂಖ್ಯೆಯನ್ನು ಬೆಳಿಸುವದಕ್ಕಿಂತ ಅವುಗ ದೊರೆಯುತ್ತಿರುವ ಶಿಕ್ಷಣವನ್ನು ಮೇಲ್ತರದ್ದನ್ನಾಗಿ ಮಾಡುವದು ಒಳಿತು.

(೨) ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳಲ್ಲಿ ದೊರೆಯುತ್ತಿರುವ ಕ್ಷಣದ ಮೂಲಕ ಸಾಮಾನ್ಯ ವಿದ್ಯಾರ್ಥಿಯು ವ್ಯವಹಾರಕ್ಕೂ ಬಾಳುವೆಗೂ ಕ್ಕನಾಗುವಂತೆ ಮಾಡುವದು ಉಚಿತವು. ಇದಕ್ಕಾಗಿ ಕೈಕೆಲಸ, ತೋಟದ ಸ, ಸೃಷ್ಟಿನಿರೀಕ್ಷಣ, ಭೂಗೋಲದ ವ್ಯವಹಾರಿಕ ಶಿಕ್ಷಣ, ಶಾಲೆಯ ಡುಗರ ಪ್ರವಾಸಗಳು ಮುಂತಾದವುಗಳನ್ನು ರೂಢಿಯಲ್ಲಿ ತರತಕ್ಕದ್ದು.

(೩) ಹೆಚ್ಚಿನ ವಿದ್ಯಾಭ್ಯಾಸ, ಶೋಧಕಶಿಕ್ಷಣ ಮೊದಲಾದವುಗಳು ರೆಯುವ ವ್ಯವಸ್ಥೆ ಮಾಡುವದು ಅವಶ್ಯಕವು. ಇವುಗಳಿಗಾಗಿ ಈ ದೇಶದ ದ್ಯಾರ್ಥಿಗಳು ಪರದೇಶಯಾತ್ರೆಗಳನ್ನು ಕೈಕೊಳ್ಳುವ ಪ್ರಸಂಗವು ಬರಲಾಗದು.

ಹುಡುಗಿಯರ ಶಿಕ್ಷಣದ ಬಗ್ಗೆ ಅವರು ಸಾರಿದ್ದೇನೆಂದರೆ, ಇದು ಪುಸ್ತಕ ಕ್ಷಣವಾಗಿರಬಾರದು. ಆದಷ್ಟು ವ್ಯವಹಾರಕ್ಕೆ ಸಂಬಂಧಿಸಿದ್ದಿರಬೇಕು. ಯರು ಸಮಾಜದಲ್ಲಿ ಪಡೆಯುವ ಸ್ಥಾನಕ್ಕೆ ಅದು ಹೊಂದಿಕೆಯುಳ್ಳದ್ದಾಗಿರ

ಬೇಕು. ಹುಡುಗರ ಶಿಕ್ಷಣಾಭ್ಯಾಸಕ್ರಮವನ್ನೇ ಅದು ಅನುಸರಿಸು ಸರಿಯಲ್ಲ. ಪರೀಕ್ಷೆಗಳಿಗೂ ಅಲ್ಲಿ ವಿಪರೀತ ಮಹತ್ವವನ್ನು ಕೊಡಲಾಗ

ಮಾಧ್ಯಮಿಕ ಶಿಕ್ಷಣವಿಷಯದಲ್ಲಿ ಖಾಸಗಿ ಸಂಸ್ಥೆಗಳಿಗೆ ಸಹಾಯಕ ವನ್ನು ಒದಗಿಸಿಕೊಟ್ಟು ಅದನ್ನು ವೃದ್ಧಿಗೊಳಿಸುವದೇ ಸರಕಾರದವರ ಧೋ ವಾಗಿತ್ತು. ಈ ಧೋರಣವನ್ನು ಸರಕಾರದವರು ಮತ್ತೆ ಒತ್ತಿಹೇಳಿದರು. ಸರಕಾ ವ್ಯವಸ್ಥೆಗಿಂತ ಖಾಸಗಿ ಸಂಸ್ಥೆಗಳ ವ್ಯವಸ್ಥೆಯು ಮೇಲ್ತರದ್ದಾಗುವದೆ ಸರಕಾರದವರು ನಂಬಿಲ್ಲ; ಆದರೆ ಪರಂಪರೆಯಾಗಿ ನಡೆದುಬಂದ ಪದ್ಧತಿಯ ಬದಲಿಸುವ ಕಾರಣವು ತೋರುವದಿಲ್ಲ; ಮೇಲಾಗಿ, ಈ ಪರಂಪರೆಯನ್ನು ಸ್ಥಿರ ಉಳಿಯುಗೊಡುವ ಮೂಲಕ ಪ್ರಾಥಮಿಕ ಶಿಕ್ಷಣವನ್ನು ಬೆಳಿಸಲಿಕ್ಕೂ ಸುಧಾ ಲಿಕ್ಕೂ ಬೇಕಾಗುವ ಹಣವನ್ನೂ ಸರಕಾರದ ಪ್ರಯತ್ನಗಳನ್ನೂ ಇದಕ್ಕಾಗಿ ವೆಚ್ಚಮಾಡಲು ಅನುಕೂಲವಾಗುವದು.

ವಿಶ್ವವಿದ್ಯಾಲಯಗಳ ವಿಷಯದಲ್ಲಿ ಸರಕಾರದವರ ಗೊತ್ತುವಳಿ ಒಂದೆರಡು ಮಹತ್ವದ ಮಾತುಗಳಿದ್ದವು. ಆವರೆಗೆ ಹಿಂದುಸ್ತಾನದ ಒಟ್ಟು ವಿಶ್ವವಿದ್ಯಾಲಯಗಳ ಆಶ್ರಯದಲ್ಲಿ ೧೮೬ ಕಾಲೇಜಗಳು ಇದ್ದವು. ಈ ಮೂ ಉಚ್ಚ ಶಿಕ್ಷಣವು ಬೆಳೆಯಲಿಕ್ಕೆ ಸಾಕಷ್ಟು ಅನುವು ಇಲ್ಲದಾಗಿದೆ. ಇನ್ನುಮು ಹಿಂದುಸ್ತಾನದ ಪ್ರತಿಯೊಂದು ಪ್ರಮುಖ ಪ್ರಾಂತಕ್ಕೆ ಒಂದು ವಿಶ್ವವಿದ್ಯಾಲ ವಿರುವದು ವಿಹಿತವು; ಇದಲ್ಲದೆ ಶಿಕ್ಷಣವನ್ನು ಕೊಡುವ (ಕೇವಲ ಪರೀಕ್ಷೆ ಮಾ ವಂಥವಲ್ಲ) ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವದು ಮಹತ್ವವಾದದ್ದು; ಗೊತ್ತುವಳಿಗನುಸಾರವಾಗಿ ಕೆಲವು ವರ್ಷಗಳಲ್ಲಿಯೇ ಪಾಟಣಾದಲ್ಲಿಯ ಬನಾರಸದಲ್ಲಿಯೂ ಹೊಸ ವಿಶ್ವವಿದ್ಯಾಲಯಗಳು ಸ್ಥಾಪಿಸಲ್ಪಟ್ಟವು.

ಹಿಂದುಸ್ತಾನದ ಶಿಕ್ಷಣದ ಇತಿಹಾಸದಲ್ಲಿ ಮುಂದೆ ಜರುಗಿದ ಮಹ ಸಂಗತಿಯೆಂದರೆ ಲಾರ್ಡ ಚೆಲ್ಮ್ಸಫರ್ಡರು ೧೯೧೭ರಲ್ಲಿ ನಿಯಮಿಸಿದ ಕಮಿಶನ ಇದು ಕಲಕತ್ತೆಯ ಯುನಿವರ್ಸಿಟಿ ಕಮಿಶನ್ ಎಂದು ಹೆಸರಾಗಿದೆ. ಇಂಗ್ಲ ದಲ್ಲಿಯ ಲೀಡ್ಸ ವಿಶ್ವವಿದ್ಯಾಲಯದ ಆಗಿನ ವ್ಹಾಯಿಸ ಚಾನ್ಸಲರರಾಗಿದ್ದ ಎಮ್ ಸಾಡ್ಲರರೆಂಬ ವಿದ್ವಾಂಸರು ಇದರ ಚೇರಮನ್ನರಾಗಿದ್ದರು. ಹಿ ಕಮಿಶನ್ನುಗಳಲ್ಲಿ ಯುರೋಪೀಯ ವಿದ್ವಾಂಸರೇ ಮೆಂಬರರಾಗಿ ನಿಯಮಿಸಲ್ಪ

ಸ್ತರು. ಆದರೆ ಈ ಕಮಿಶನ್ನದಲ್ಲಿ ಏತದ್ದೇಶೀಯರಾದ ಶಿಕ್ಷಣಜ್ಞರೂ ಸ್ತ್ರಂಸರೂ ಶಿಕ್ಷಣದ ಅನುಭವವುಳ್ಳ ಗೃಹಸ್ಥರೂ ಮೆಂಬರರಾಗಿ ನಿಯಮಿ ಸ್ಪಟ್ಟರು.

ಈ ಕಮಿಶನ್ನದವರು ಸರಕಾರದವರಿಗೆ ಮಾಡಿದ ಶಿಫಾರಸುಗಳಲ್ಲಿ ವಿಶೇಷ ಹತ್ವವಾದವುಗಳು ವಿಶ್ವವಿದ್ಯಾಲಯದ ಶಿಕ್ಷಣಕ್ಕೆ ಹಾಗು ಮಾಧ್ಯಮಿಕ ಣಕ್ಕೆ ಸಂಬಂಧಿಸಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿರುವೆವು.

(೧) ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವದು; ಈಗಿರುವ ವಿಶ್ವ ್ಯಾಲಯಗಳ ವ್ಯವಸ್ಥೆಯಲ್ಲಿ ಹೊಸ ರಚನೆಯನ್ನೇರ್ಪಡಿಸಿ ಸುಧಾರಿಸುವದು. ಗಳನ್ನು ಶಿಕ್ಷಣಕೊಡುವ ಸಂಸ್ಥೆಗಳನ್ನಾಗಿ ಮಾಡುವದು; ವಿದ್ಯಾರ್ಥಿಗಳು ತಿಗೃಹಗಳಲ್ಲಿ ವಾಸಮಾಡಿಕೊಂಡು ಶಿಕ್ಷಣವನ್ನು ಹೊಂದುತ್ತಿರುವಂತೆ ಡಿಸುವದು.

(೨) ವಿಶ್ವವಿದ್ಯಾಲಯಗಳ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸರಕಾರದವರು ಷ್ಟು ಕಡಿಮೆ ಕೈಹಾಕುವ ಏರ್ಪಾಡನ್ನು ಮಾಡುವದು.

(೩) ಪರೀಕ್ಷೆಗಳಲ್ಲಿ ಕೇವಲ "ಪಾಸು" ಆಗ ಬಹುದಾದ ಅಭ್ಯಾಸಪತ್ರಿಕೆ ಡುವದಲ್ಲದೆ "ಆನರ್ಸ" (ಅಂದರೆ ವಿಶೇಷ ಯೋಗ್ಯತೆ ಪಡೆದದ್ದನ್ನು) ಸುವ ಅಭ್ಯಾಸಪತ್ರಿಕೆಗಳನ್ನು ಯೋಜಿಸುವದು.

(೪) (ಅ) ಸರಕಾರದ ನವಕರಿಯ ಸ್ಥಳಗಳಲ್ಲಿ ಪ್ರತ್ಯೇಕವಾದ ಗುಂಪುಗ ಮಾಡಿ ಆಯಾ ಗುಂಪಿನಲ್ಲಿ ನವಕರಿಯನ್ನು ಸಂಪಾದಿಸಲಿಕ್ಕೆ ಅವಶ್ಯವಾದ ಣದ ತರಗತಿಯನ್ನು ನಿಶ್ಚಯಿಸಲಿಕ್ಕೂ (ಬ) ಸ್ಥಳಗಳು ಖಾಲಿಯಾದಂತೆ ಗಳನ್ನು ತುಂಬಲಿಕ್ಕಾಗಿ ಮೇಲೆ ಹೇಳಿದ ಯೋಗ್ಯತೆಯುಳ್ಳ ಉಮೇದವಾರ ಪರೀಕ್ಷಿಸಲಿಕ್ಕೂ (ಕ) ಪರೀಕ್ಷೆಯಿಲ್ಲದೆ ಸ್ಥಳಗಳಿಗೆ ಉಮೇದವಾರ ಆರಿಸುವ ಪ್ರಸಂಗವಿರುವಲ್ಲಿ ನಿಯಮಿಸಿಕೊಂಡವರನ್ನು ಯೋಗ್ಯರೆಂದು ಯಿಸಲಿಕ್ಕೂ ಸಣ್ಣ ಸಣ್ಣ ಸಿವಿಲ್ ಸರ್ವಿಸದ ಕಮಿಶನ್ನು (ಸಂಘ) ಗಳನ್ನು ಸುವದು.

೫) ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಆರೋಗ್ಯವನ್ನೂ ಶಾರೀ(ಬೆಳವಣಿಗೆಯನ್ನೂ ನೋಡಿಕೊಳ್ಳಲಿಕ್ಕಾಗಿ ಪ್ರತಿಯೊಂದು ವಿಶ್ವವಿದ್ಯಾಲ ದವರು ಶಾರೀರಿಕ ಶಿಕ್ಷಣದ ಡಾಯರೆಕ್ಟರರನ್ನು ನೇಮಿಸುವದು.

(೬) ಮಾಧ್ಯಮಿಕಶಾಲೆಗಳಿಗೆ ಶಿಕ್ಷಕರನ್ನು ಸಿದ್ಧಪಡಿಸಲು ಟ್ರೇನಿ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ವ್ಯವಸ್ಥೆಯನ್ನು ನಿರ್ಣಯಿಸುವದಕ್ಕಾ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣಖಾತೆಯೊಂದನ್ನು ಏರ್ಪಡಿಸುವದು.

ಈ ಶಿಫಾರಸುಗಳ ಮೂಲಕ ನಮ್ಮ ದೇಶದಲ್ಲಿರುವ ವಿಶ್ವವಿದ್ಯಾಲಯಗ ಸುಧಾರಣೆಗಳು ಉಂಟಾಗಿರುತ್ತವೆ. ಹೊಸದಾಗಿ ಸ್ಥಾಪಿಸಲ್ಪಟ್ಟ ಡಾ(ಪಾಟಣಾ, ರಂಗೂನ, ಲಖನೌ, ದಿಲ್ಲಿ, ಆಗ್ರಾ, ನಾಗಪೂರ, ಆಂಧ್ರ ಹಾಗು (ಮಲಾಯಿ ವಿಶ್ವವಿದ್ಯಾಲಯಗಳೆಲ್ಲ ಶಿಕ್ಷಣಕೊಡುವ ವಿಶ್ವವಿದ್ಯಾಲಯಗಳೆಂ ಹೆಸರಾಗಿವೆ.

ಈ ದೇಶದ ಶಿಕ್ಷಣದ ಇತಿಹಾಸದಲ್ಲಿ ಮುಂದೆ ಜರುಗಿದ ಮಹತ್ವದ ಸಂ(ಯೆಂದರೆ, ಆಂಗ್ಲೋ ಇಂಡಿಯನ್ನರ ಶಿಕ್ಷಣವನ್ನು ಬಿಟ್ಟು ಮಿಕ್ಕ ಏತದ್ದೇಶೀಯ(ಯಾವತ್ತು ಶಿಕ್ಷಣವ್ಯವಸ್ಥೆಯನ್ನು ಮೌಂಟಫರ್ಡ ರಿಫಾರ್ಮದ ಅನ್ವಯ ದೇಶೀ(ಶಿಕ್ಷಣಮಂತ್ರಿಗಳ ಸ್ವಾಧೀನಪಡಿಸಿದ್ದು. ಈ ಸುಧಾರಣೆಯು ೧೯೨೧ ರಲ್ಲಿ ಆರ(ವಾಯಿತು. ಪ್ರತಿಯೊಂದು ಪ್ರಾಂತದ ಪರಿಸ್ಥಿತಿಯು ಇತರ ಪ್ರಾಂತ(ಪರಿಸ್ಥಿತಿಯಿಂದ ಕೆಲವು ಮಹತ್ವದ ಅಂಶಗಳಲ್ಲಿ ಭಿನ್ನವಾದದ್ದಿರುವದು. ಆ(ಪ್ರಾಂತಗಳ ಶಿಕ್ಷಣ ಪದ್ಧತಿಗಳು ಅವುಗಳ ವಿಶೇಷ ಪರಿಸ್ಥಿತಿಗೆ ಹೊಂದಿಕೆಯು(ವಾಗತಕ್ಕದ್ದು. ಇದನ್ನು ಉಂಟುಮಾಡಿಕೊಳ್ಳಲಿಕ್ಕೆ ಈ ಸುಧಾರಣೆ(ಅನ್ವಯ ಕಾಯದೆಯಿಂದ ಅಧಿಕಾರವು ಪ್ರಾಪ್ತವಾಯಿತು. ಜನರ ಪ್ರತಿ(ಗಳಾದ ಆಯಾ ಕೌನ್ಸಿಲಗಳ ಮೆಂಬರರು ಶಿಕ್ಷಣದ ಬಗ್ಗೆ ಗೊತ್ತುವಳಿಗಳ(ಮಾಡಬಹುದೆಂದೂ ಬಜೆಟ್ಟನ್ನು (ಆಯವ್ಯಯದ ಅಂದಾಜುಪತ್ರಿಕೆಯನ್ನು ಪಾಸುಮಾಡುವಾಗ ಶಿಕ್ಷಣ ವ್ಯವಸ್ಥೆಯನ್ನು ಟೀಕಿಸಿ ಬೇಕಾದ ಬದಲಾ(ಗಳನ್ನು ಉಂಟುಮಾಡಬಹುದೆಂದೂ ಈ ಸುಧಾರಣೆಯು ಸಾರಿತು. ಮುಂಬ(ಇಲಾಖೆಯಲ್ಲಿ ಈ ಸುಧಾರಣೆಗಳು ಇನ್ನೂ ಹೇಳಿಕೊಳ್ಳುವಷ್ಟು ಉಂಟಾಗಿ ೧೯೧೪ ರಲ್ಲಿರುವ ಅಭ್ಯಾಸಪತ್ರಿಕೆಗಳೇ ನಮ್ಮಲ್ಲಿ ಇನ್ನೂ ಉಳಿದಿವೆ. ಆ(ಮುಂಬಯಿ ಇಲಾಖೆಯಲ್ಲಾದ ಎಲ್ಲಕ್ಕೂ ಹೆಚ್ಚಿನ ಬದಲಾವಣೆಯೆಂದರೆ ೧೯(ರಲ್ಲಿ ಪಾಸಾದ ಮುಂಬಯಿಯ ಪ್ರಾಥಮಿಕ ಶಿಕ್ಷಣದ ಕಾಯದೆಯು.

ಕಾಯದೆಯ ಮೂಲಕ ಈ ಇಲಾಖೆಯೊಳಗಿನ ಪ್ರಾಥಮಿಕ ಶಿಕ್ಷಣವು ಪೂರ್ಣವಾಗಿ ಸ್ಥಾನಿಕ ಸಂಘಗಳ ಆಡಳಿತಕ್ಕೆ ಒಳಪಟ್ಟಿರುವದು. ಆದರೆ ಈ ಕಾಯದೆಯಲ್ಲಿ ನ್ಯೂನತೆಗಳು ಉಳಿದಿರುವವು. ಈ ಮೂಲಕ ಲೋಕಲ್ ಅಥಾರಟಿಗಳಿಗೆ ಸ್ವತಂತ್ರವಾಗಿ ಒಂದು ಶಾಲೆಯನ್ನು ಹೊಸದಾಗಿ ತೆಗೆಯಲಿಕ್ಕಾಗಲಿ, ಒಬ್ಬ ಹೆಚ್ಚಿನ ಶಿಕ್ಷಕನನ್ನು ಹೊಸದಾಗಿ ನೇಮಿಸಿಕೊಳ್ಳಲಿಕ್ಕಾಗಲಿ ಬರುವಂತಿಲ್ಲ.

ಈ ಸುಧಾರಣೆಯ ಕಾಯದೆಯು ಅಮಲಿನಲ್ಲಿ ಬಂದ ತುಸುವರ್ಷಗಳಲ್ಲಿ ಈ ದೇಶದ ಶಿಕ್ಷಣದ ಸ್ಥಿತಿಯಲ್ಲಿ ಕಂಡುಬಂದ ಸಂಗತಿಗಳು ಒಳ್ಳೆಯ ಆಶ್ಚರ್ಯಕರವಾದವಿರುವವು. ಜನರಲ್ಲಿ ಎಲ್ಲಿಲ್ಲದ ಹುರುಪು ಹೊರಹೊಮ್ಮಿತು. ಎಂದೂ ಕಾಣದ ಭರದಿಂದ ಶಾಲೆಗಳಲ್ಲಿ ಹುಡುಗರ ಸಂಖ್ಯೆಯು ಹೆಚ್ಚಾಯಿತು. ಜನರಲ್ಲಿ ಶಿಕ್ಷಣದ ಉಪಯುಕ್ತತೆಯಬಗ್ಗೆ ಒಮ್ಮಿಂದೊಮ್ಮೆ ಬಲವಾದ ವಿಶ್ವಾಸವು ಮೂಡಿ ದೃಢವಾಯಿತು. ಮಕ್ಕಳ ಶಿಕ್ಷಣಕ್ಕಾಗಿ ತಾಯ್ತಂದೆಗಳು ಬೇಕಾದ ಕಷ್ಟನಷ್ಟಗಳನ್ನು ಸಹಿಸಲಿಕ್ಕೆ ಸಿದ್ಧರಾದರು. ತಮಗಿಂತ ಕಡಿಮೆ ಸ್ಥಿತಿಯಲ್ಲಿ ಹುಟ್ಟಿ ಕಷ್ಟದಿಂದ ದಿನಗಳನ್ನುಕಳೆಯುತ್ತಿರುವವರಬಗ್ಗೆ ಜನರಲ್ಲಿ ಸಹಾನುಭೂತಿಯು ಅಂಕುರಿಸಿತು. ಶಿಕ್ಷಣವನ್ನು ಹೆಚ್ಚಿಸಲಿಕ್ಕೂ ಸುಧಾರಿಸಲಿಕ್ಕೂ ಹೊಸ ಹೊಸ ಯೋಜನೆಗಳು ಯೋಚಿಸಲ್ಪಡಲಾರಂಭಿಸಿದವು. ಇವುಗಳ ಮೂಲಕ ಹಿಂದುಸ್ತಾನದ ಜನರಲ್ಲಿ ತುಸು ಅವಧಿಯಲ್ಲಿಯೇ ಸಾಕ್ಷರತೆಯು ಹಬ್ಬುವದೆಂದು ತೋರಹತ್ತಿತು. ಮುಸಲ್ಮಾನರು ಬಹುದಿನಗಳಿಂದ ಶಿಕ್ಷಣದಲ್ಲಿ ಹಿಂದುಳಿದವರೆನಿಸಿಕೊಂಡಿದ್ದರು. ಈ ಕೊರತೆಯನ್ನು ಹೋಗಲಾಡಿಸಿಕೊಳ್ಳಲಿಕ್ಕೆ ಅವರು ಆತುರದಿಂದ ಮುಂದ ವರಿದರು. ಹಿಂದುಸ್ತಾನದಲ್ಲಿ ಹುಡಿಗೆಯರ ಶಿಕ್ಷಣವು ಅತಿ ಮಂದವಾಗಿ ಹೆಜ್ಜೆ ಯಿಡುತ್ತಿತ್ತು. ಸುಶಿಕ್ಷಿತರೂ ವಿಶಾಲ ಹೃದಯರೂ ಆದ ಹೆಂಗಳೆಯರು ಮುಂದೆ ಬಂದು ಸ್ತ್ರೀಶಿಕ್ಷಣದ ಯೋಗ್ಯತೆಯನ್ನೂ ಅದರಿಂದೊದಗುವ ಲಾಭಗಳನ್ನೂ ಸಮಾಜದ ಲಕ್ಷ್ಯಕ್ಕೆ ತಂದುಕೊಟ್ಟು ಹಳೆಯ ಕಲ್ಪನೆಗಳನ್ನು ಬೇರ್ಪರಿಸಿ ಕಿತ್ತೊಗೆದು ಸ್ತ್ರೀವಿದ್ಯಾಭ್ಯಾಸಕ್ಕೆ ಉತ್ತೇಜನಕೊಟ್ಟರು. ಆದರೆ ದುರ್ದೈವದಿಂದ ಈ ಹುರುಪನ್ನು ಉಪಯೋಗಿಸಿ ಅದಕ್ಕೆ ಯೋಗ್ಯ ಮಾರ್ಗ ತೋರಿಸಿ ಅದರಿಂದೊದಗಬಹುದಾದ ಸುಪರಿಣಾಮಗಳನ್ನು ಕೈಗೂಡಿಸಿಕೊಳ್ಳುವ ಸುಸಂಧಿಯ ಲಾಭಮಾಡಿಕೊಳ್ಳುವ ಶಕ್ತಿಯು ಎಲ್ಲಿಯೂ ಕಾಣಲಿಲ್ಲ. ಆದ್ದರಿಂದ ಜನರಲ್ಲಿ ಉಂಟಾದ ಆತುರವು ಹುಸಿಯಾಗಿ ಹೋಯಿತು.

ಮುಂದೆ ಈ ದೇಶದ ರಾಜಕೀಯ ಪರಿಸ್ಥಿತಿಯನ್ನು ಅಭ್ಯಾಸಿಸಿ ಆ ಬ ವಿವರವಾದ ರಿಪೋರ್ಟನ್ನು ಒಪ್ಪಿಸಲಿಕ್ಕಾಗಿ ಬಾದಶಹರು ಒಂದು ಕಮಿಶನವನ ನಿಯಮಿಸಿದರು. ಶಿಕ್ಷಣವಿಷಯಕ ವಿಮರ್ಶೆಯನ್ನು ಮಾಡಿ ಕಮೀಶನದವ ರಿಪೋರ್ಟು ಮಾಡಲಿಕ್ಕಾಗಿ ಹಾರ್ಟಾಗ ಕಮಿಟಿಯೆಂದು ಹೆಸರಾದ ಒಂದು ತಜ್ಞ ಸಂಘವು ನಿಯಮಿಸಲ್ಪಟ್ಟಿತು. ಈ ಸಂಘದವರು ೧೯೩೧ ರಿಂದ ೧೯೩ ವರೆಗೆ ಈ ದೇಶದಲ್ಲಾದ ಶೈಕ್ಷಣಿಕ ಪ್ರಗತಿಯನ್ನು ಕುರಿತು ತಮ್ಮ ವರದಿಯ ಕೆಳಗೆ ಕಾಣಿಸಿದಂತೆ ಬರೆದಿರುವರು:—

ಇಡಿಯ ಶಿಕ್ಷಣ ವ್ಯವಸ್ಥೆಯಲ್ಲಿ ಅಪವ್ಯಯ (Waste) ವೂ ನಿಷ್ಫಲತೆಯ ಕಂಡುಬರುವವು. ನಮ್ಮ ಅಭಿಪ್ರಾಯದ ಮೇರೆಗೆ, ಪ್ರಾಥಮಿಕ ಶಿಕ್ಷಣ ಮೂಲಕ ಜನರಲ್ಲಿ ಸಾಕ್ಷರತೆಯು ಉಂಟಾಗಬೇಕು; ಶಾಲೆಕಲಿತವರಲ್ಲಿ ವಿಚಾ ಪೂರ್ವಕವಾಗಿ ತಮ್ಮ ವ್ಹೋಟು (ಮತ) ಕೊಡುವ ಯೋಗ್ಯತೆಯುಂಟಾ ಬೇಕು. ಆದರೆ ಇಲ್ಲಿ ನಡೆದ ಅಪವ್ಯಯವನ್ನು ನೋಡಿದರೆ ಭಯ ಬರುವದು ನಮ್ಮ ಗ್ರಹಿಕೆಯ ಮೇರೆಗೆ, ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯ ವಿಶೇಷವಾಗಿ ಬೆಳೆದಿರುವದಾದರೂ ಅದಕ್ಕೆ ತಕ್ಕಂತೆ ಜನರಲ್ಲಿ ಸಾಕ್ಷರತೆಯ ಹೆಚ್ಚಾಗಿಲ್ಲ. ಆರಂಭದ ವರ್ಗದಲ್ಲಿರುವ ಹುಡುಗಹುಡಿಗೆಯರಲ್ಲಿ ತೀರ ಸ್ವ ಜನರು ಮಾತ್ರ ನಾಲ್ಕನೆಯ ಇಯತ್ತೆಯವರೆಗೆ ಶಾಲೆಯಲ್ಲಿ ಉಳಿಯುತ್ತಾರೆ. ಇಯತ್ತೆಯಲ್ಲಿ ಉಳಿದವರು ಮಾತ್ರ ಸಾಕ್ಷರತೆಯನ್ನು ಹೊಂದಿರುವರೆಂದು ಹೇ ಬಹುದು ...ಸದ್ಯದಲ್ಲಿ ಹಳ್ಳಿಗಳಲ್ಲಿರುವ ಪರಿಸ್ಥಿತಿಯನ್ನು ಕುರಿತು ವಿಚಾರಿ ನೋಡಿದರೆ, ಹಾಗು ನಾಲ್ಕು ಇಯತ್ತೆಗಳನ್ನು ಕಲಿತುಬಿಟ್ಟವರಿಗಾಗಿ ದೇಶಭಾ ಗಳಲ್ಲಿ ಓದಿಕೊಳ್ಳಲಿಕ್ಕೆ ತಕ್ಕವಾಗಿರುವ ಪುಸ್ತಕಗಳು ತೀರ ಅಪರೂಪವಾಗಿ ವೆಂಬದನ್ನು ಲಕ್ಷ್ಯಕ್ಕೆ ತಂದರೆ, ಸಾಲೆ ಬಿಟ್ಟ ಹುಡುಗರು ಸಾಕ್ಷರರಾಗುವದ ಅಸಂಭವವೆಂದೇ ತೋರುತ್ತಿದೆ. ಇಷ್ಟೇ ಅಲ್ಲ; ಸಾಲೆಯಲ್ಲಿ ಓದುಬರಹಗಳನ್ನು ತಕ್ಕಮಟ್ಟಿಗೆ ಕಲಿತು ಸಾಕ್ಷರತೆಯನ್ನು ಹೊಂದಿರುವರೆಂದು ನಾವು ಎಣಿಸಿಕೊಳ್ಳು ವವರು ಸಹ ತೀವ್ರವಾಗಿ ಕಲಿತದ್ದನ್ನೆಲ್ಲ ಸಂಪೂರ್ಣವಾಗಿ ಮರೆತುಬಿಡುವರು.

ಈ ಅಪವ್ಯಯವು (Waste) ಹುಡುಗರ ವಿಷಯದಲ್ಲಿಗಿಂತ ಹುಡಿಗೆಯ ವಿಷಯದಲ್ಲಿ ಚಿಂತಾಜನಕವಾಗಿದೆ. ಮಾಧ್ಯಮಿಕ ಶಿಕ್ಷಣದಲ್ಲಿ ಕೆಲವಂಶಗಳ ಪ್ರಗತಿಯು ಕಂಡುಬಂದದ್ದು ನಿಜವು. ಮುಖ್ಯವಾಗಿ ಮಾಧ್ಯಮಿಕ ಶಿಕ್ಷಕ

ಸಾಮಾನ್ಯ ಯೋಗ್ಯತೆಯಲ್ಲಿ ಸುಧಾರಣೆಯು ತೋರಿರುವದು. ಅವರಿಗೆ ಶಿಕ್ಷಕರ ಶಿಕ್ಷಣ ಪಡೆಯಲು ಹೆಚ್ಚು ಅನುಕೂಲಗಳು ಉಂಟಾಗಿರುವವು. ಅವರ ನವಕರಿಯ ಸ್ಥಿತಿಯು ಹೆಚ್ಚು ಸ್ಥಿರತೆಯುಳ್ಳದ್ದಾಗಿರುವದು. ಅವರು ಶಾಲೆಯ ಚಟುವಟಿಕೆಗಳನ್ನು ಹೆಚ್ಚು ವ್ಯಾಪಕವಾಗಿ ಮಾಡುತ್ತಿರುವರು. ಇವೆಲ್ಲ ಇಷ್ಟವಾದ ಸಂಗತಿಗಳೇ ಸರಿ. ಆದರೆ ಮಾಧ್ಯಮಿಕ ಶಿಕ್ಷಣದ ವ್ಯವಸ್ಥೆಯಲ್ಲಿ ಬಲವಾದ ನ್ಯೂನತೆಗಳು ಸೇರಿಕೊಂಡಿರುವವು. ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಣವನ್ನು ಆರಂಭಿಸುವ ಪ್ರತಿಯೊಬ್ಬ ಹುಡುಗನು ಮುಂದೆ ತಾನು ವಿಶ್ವವಿದ್ಯಾಲಯಕ್ಕೆ ಹೋಗುವೆನೆಂದು ಭಾವಿಸುವನು; ಅದಕ್ಕಾಗಿಯೇ ಅವನನ್ನು ತಯಾರಿಸಬೇಕೆಂದು ಶಿಕ್ಷಕರು ಭಾವಿಸುವರು. ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಬಹಳ ಹುಡುಗರು ನಾಪಾಸ ಆಗುವರು. ವಿಶ್ವವಿದ್ಯಾಲಯದ ಮುಂದಿನ ಪರೀಕ್ಷೆಯಲ್ಲಿ ಸಹ ಅನೇಕ ಹುಡುಗರು ಉತ್ತೀರ್ಣವಾಗುವದಿಲ್ಲ. ಇದರಿಂದ ಪ್ರಯತ್ನದ ಪ್ರಳಯವೇ ಆಗುವದೆಂಬುದು ಸ್ಪಷ್ಟವು. ಔದ್ಯೋಗಿಕ ಶಿಕ್ಷಣವನ್ನು ಕೊಡುವಬಗ್ಗೆ ಪ್ರಯತ್ನಗಳು ನಡೆದಿರುವದು ನಿಜವು. ಆದರೆ ಈ ಶಿಕ್ಷಣಕ್ಕೂ ಸಾಮಾನ್ಯ ಶಿಕ್ಷಣಕ್ರಮಕ್ಕೂ ಸರಿಯಾದ ಸಂಬಂಧವಿರುವದಿಲ್ಲ. ಈ ಮೂಲಕ ಅದು ಫಲಕಾರಿಯಾಗಿಲ್ಲ. ಹಲವು ವಿಶ್ವವಿದ್ಯಾಲಯಗಳಲ್ಲಿಯೂ ಕಾಲೇಜುಗಳಲ್ಲಿಯೂ ಶಿಕ್ಷಣಪದ್ಧತಿಗಳಲ್ಲಿ ಸುಧಾರಣೆಯಾಗಿರುವದು; ಅಲ್ಲಿ ಶೋಧಕವ್ಯವಸಾಯಗಳು ನಡೆಯುತ್ತಿರುವದು ನಿಜವು; ಕೆಲವು ಕಾಲೇಜುಗಳಲ್ಲಿ ಸಾಂಘಿಕ ಬಾಳುವೆಯ ಶಿಕ್ಷಣವು ಮೊದಲಿಗಿಂತ ಹೆಚ್ಚಾಗಿ ದೊರೆಯುತ್ತಿರುವದು. ಆದರೂ ವಿಶ್ವವಿದ್ಯಾಲಯಗಳು ಮುಖ್ಯವಾಗಿ ವಿದ್ಯಾರ್ಥಿಗಳನ್ನು ಪರೀಕ್ಷಿಸಿ ಅವರಿಗೆ ಯೋಗ್ಯತಾಪತ್ರಗಳನ್ನು ಕೊಡಲಿಕ್ಕಾಗಿಯೇ ಇರುವವೆಂಬ ಭಾವನೆಯು ಈ ದೇಶದಲ್ಲಿ ಇನ್ನೂ ದೃಢವಾಗಿಯೇ ಉಳಿದಿರುವದು. ವಿಶಾಲಮನಸ್ಸು, ಸಹಿಷ್ಣುತೆ, ಸ್ವಾವಲಂಬನ ಮುಂತಾದ ಮನೋಗುಣಗಳುಳ್ಳ ನಾಗರಿಕರನ್ನು ಸಿದ್ಧಪಡಿಸುವದೇ ತಮ್ಮ ಮುಖ್ಯ ಕರ್ತವ್ಯವೆಂಬ ಭಾವನೆಯು ವಿಶ್ವವಿದ್ಯಾಲಯದ ಚಾಲಕರಲ್ಲಿ ಹರಡಿಕೊಳ್ಳುವದು ಮಹತ್ವದ್ದಾಗಿರುವದು. ಇದು ತೀವ್ರವೇ ಸಾಧ್ಯವಾಗಲೆಂದು ನಾವು ಕೋರುತ್ತೇವೆ. ಈ ವಿಶ್ವವಿದ್ಯಾಲಯಗಳಲ್ಲಿಯೂ ಕಾಲೇಜುಗಳಲ್ಲಿಯೂ ಕಲಿತಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಶಿಕ್ಷಣವನ್ನು ಹೊಂದಲಿಕ್ಕೆ ಬೇಕಾಗುವ ಬುದ್ಧಿಸಾಮರ್ಥ್ಯವಿಲ್ಲದವರು ಬೇಕಾದಷ್ಟು ಜನರಿರುವರು. ಈ ಮೂಲಕ ವಿಶ್ವವಿದ್ಯಾಲಯದ ಚಾಲಕರಿಗೂ ತೊಂದರೆಯಾಗುತ್ತಿರುವದು ನಿಜವು.

ಹಾರ್ಟಾಗ ಕಮೀಟಿಯವರು ರಿಪೋರ್ಟ ಮಾಡಿದ ಬಳಿಕ ಸಂದ ಅವಧಿ ಮುಖ್ಯ ಲಕ್ಷಣವೆಂದರೆ ಸರಕಾರಕ್ಕೆ ಹಣದ ಕೊರತೆಯುಂಟಾದದ್ದು. ಈ ಕೊ ತೆಯ ಮೂಲಕ ಸರಕಾರದವರು ಪ್ರಚಂಡವಾದ ಕಾಟಕಸರು ಮಾಡಬೇ ಯಿತು. ಈ ಕಾಟಕಸರಿನ ಅವಧಿಯು ಇನ್ನೂ ಮುಗಿದಿಲ್ಲ. ಇದರ ಮೂಲ ಪ್ರಗತಿಯು ಹ್ಯಾಗೆ ಕುಂಠಿತವಾಗಿದೆಯೆಂಬದು ಮುಂದೆ ಕೊಟ್ಟ ಸಂಖ್ಯೆಗಳಿ ಸ್ಪಷ್ಟವಾಗದಿರದು.

	೧೯೨೨	೧೯೨೭	೧೯೩೨
ರಿಕಗ್ನಾಯಿಝುಡ ಸಂಸ್ಥೆಗಳ ಒಟ್ಟು ಸಂಖ್ಯೆ	೧೭೩,೩೧೧	೨೧೧,೦೪೮	೨೨೨,೮೦೪
ಹೆಚ್ಚಾದದ್ದು	...	೩೭,೭೩೭	೧೧,೭೫೬
ಹೆಚ್ಚಾದದ್ದರ ನೂರರ ಪ್ರಮಾಣ	...	೨೧.೭೭	೫.೦೯
ರಿಕಗ್ನಾಯಿಝುಡ ಸಂಸ್ಥೆಗಳಲ್ಲಿದ್ದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ	೭,೭೪೨,೨೨೫	೧೧,೫೨೯,೩೫೦	೧೨,೧೨೨,೪೬೬
ಹೆಚ್ಚಾದದ್ದು	...	೨,೭೮೭,೦೨೫	೫೯೩,೧೧೬
ಹೆಚ್ಚಾದದ್ದರ ನೂರರ ಪ್ರಮಾಣ	...	೩೫.೯೯	೫.೧೪
ಒಟ್ಟುವೆಚ್ಚ	೧೮೩,೭೫೨,೯೬೯	೨೪೫,೮೪೭,೫೭೨	೨೭೧,೮೫೬,೬
ಹೆಚ್ಚಾದದ್ದು	...	೬೨,೦೯೪,೬೦೩	೨೬,೦೦೯,೦
ಹೆಚ್ಚಾದದ್ದರ ನೂರರ ಪ್ರಮಾಣ	...	೩೩.೭೯	೧೦.೫೭
ಸರಕಾರಕ್ಕೆ ತಗಲಿದ ಒಟ್ಟುವೆಚ್ಚ	೯೦,೨೩೦,೦೨೮	೧೧೯,೩೩೨,೮೫೪	೧೨೪,೬೦೩,೯
ಹೆಚ್ಚಾದದ್ದು	...	೨೯,೧೦೨,೮೨೬	೫,೨೭೧,೦
ಹೆಚ್ಚಾದದ್ದರ ನೂರರ ಪ್ರಮಾಣ	...	೩೨.೨೫	೪.೪೧

ಪಾಠದ ಟಿಪ್ಪಣಿ

ಹವೆಯ ಒತ್ತಡ

ಪಾಠದ **ಉದ್ದೇಶ**:— ಹವೆಯ ಒತ್ತುವಿಕೆಯನ್ನು ಅಳೆಯುವ ಬಗೆ.

(ಭಾರಮಾಪಕ ಯಂತ್ರದ ರಚನೆ).

ಉಪಕರಣಗಳು:— ಗ್ಯಾಸ್ ಜಾರ್, ಬಣ್ಣದ ನೀರುಳ್ಳ ಅಗಲವಾದ ಪಾತ್ರೆ, ಉದ್ದವಾದ ಕಾಜಿನ ನಳಿಕೆ—ಒಂದು ಕೊನೆಗೆ ರಬ್ಬರಿನ ನಳಿಕೆಯುಳ್ಳದ್ದು, ಇದನ್ನು ಒತ್ತಿ ಹಿಡಿಯುವ ಬಾಯಿಯು.

ಬಾರೋಮೀಟರದ ನಳಿಕೆ, ಪಾರಜ, ಒಂದು ಅಗಲ ಬಾಯಿಯ ಕುಪ್ಪಿ, ಸ್ಕೇಲು.

(ಮುಂದಿನ ಪುಟ ನೋಡಿರಿ.)

ಹಾರ್ಟಾಗ ಕಮೀಟಿಯವರು ರಿಪೋರ್ಟ ಮಾಡಿದ ಬಳಿಕ ಸಂದ ಅವಧಿ
ಮುಖ್ಯ ಲಕ್ಷಣವೆಂದರೆ ಸರಕಾರಕ್ಕೆ ಹಣದ ಕೊರತೆಯುಂಟಾದದ್ದು. ಈ ಕೊ
ತೆಯ ಮೂಲಕ ಸರಕಾರದವರು ಪ್ರಚಂಡವಾದ ಕಾಟಕಸರು ಮಾಡಬೇ
ಯಿತು. ಈ ಕಾಟಕಸರಿನ ಅವಧಿಯು ಇನ್ನೂ ಮುಗಿದಿಲ್ಲ. ಇದರ ಮೂ
ಪ್ರಗತಿಯು ಹ್ಯಾಗೆ ಕುಂಠಿತವಾಗಿದೆಯೆಂಬದು ಮುಂದೆ ಕೊಟ್ಟ ಸಂಖ್ಯೆಗಳಿಂ
ಸ್ಪಷ್ಟವಾಗದಿರದು.

	೧೯೨೨	೧೯೨೭	೧೯೩೨
ರಿಕಗ್ನಾಯಿಝುಡ ಸಂಸ್ಥೆಗಳ ಒಟ್ಟು ಸಂಖ್ಯೆ	೧೭೩,೨೧೧	೨೧೧,೦೪೮	೨೨೨,೮೦೪
ಹೆಚ್ಚಾದದ್ದು	...	೩೭,೭೩೭	೧೧,೭೫೬
ಹೆಚ್ಚಾದದ್ದರ ನೂರರ ಪ್ರಮಾಣ	...	೨೧.೭೭	೫.೦೯
ರಿಕಗ್ನಾಯಿಝುಡ ಸಂಸ್ಥೆಗಳಲ್ಲಿದ್ದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ	೭,೭೪೨,೨೨೫	೧೧,೫೨೯,೩೫೦	೧೨,೧೨೨,೪೬
ಹೆಚ್ಚಾದದ್ದು	...	೨,೭೮೭,೦೨೫	೫೯೩,೧೧೬
ಹೆಚ್ಚಾದದ್ದರ ನೂರರ ಪ್ರಮಾಣ	...	೩೫.೯೯	೫.೧೪
ಒಟ್ಟುವೆಚ್ಚ	೧೮೩,೭೫೨,೯೬೯	೨೪೫,೮೪೭,೫೭೨	೨೭೧,೮೫೬ ೬
ಹೆಚ್ಚಾದದ್ದು	...	೬೨,೧೬೪,೬೦೩	೨೬,೦೦೯,೦೫
ಹೆಚ್ಚಾದದ್ದರ ನೂರರ ಪ್ರಮಾಣ	...	೩೩.೭೯	೧೦.೫೭
ಸರಕಾರಕ್ಕೆ ತಗಲಿದ ಒಟ್ಟುವೆಚ್ಚ	೯೦,೨೩೦,೦೨೮	೧೧೯,೩೩೨,೮೫೪	೧೨೪ ೬೦೩,೯
ಹೆಚ್ಚಾದದ್ದು	...	೨೯,೧೦೨,೮೨೬	೫,೨೭೧,೦೫
ಹೆಚ್ಚಾದದ್ದರ ನೂರರ ಪ್ರಮಾಣ	...	೩೨.೨೫	೪.೪೧

ಪಾಠದ ಟಿಪ್ಪಣಿ

೫ನೆಯ ಇಯತ್ತೆ

ಪಾಠದ ಉದ್ದೇಶ:— ಹವೆಯ ಒತ್ತುವಿಕೆಯನ್ನು ಅಳೆಯುವ ಬಗೆ.

(ಭಾರಮಾಪಕ ಯಂತ್ರದ ರಚನೆ).

ಉಪಕರಣಗಳು:— ಗ್ಯಾಸ್ ಜಾರ್, ಬಣ್ಣದ ನೀರುಳ್ಳ ಅಗಲವಾದ ಪಾತ್ರೆ, ಉದ್ದನ್ನ ಕಾಜಿನ ನಳಿಕೆ—ಒಂದು ಕೊನೆಗೆ ರಬ್ಬರಿನ ನಳಿಕೆಯುಳ್ಳದ್ದು, ಇದನ್ನು ಒತ್ತಿ ಹಿಡಿಯುವ ಬಾಯಿಯು.

ಬಾರೋಮೀಟರದ ನಳಿಕೆ, ಪಾರಜ, ಒಂದು ಅಗಲ ಬಾಯಿಯ ಕುಪ್ಪಿ, ಸ್ಕೇಲು.

(ಮುಂದಿನ ಪುಟ ನೋಡಿರಿ.)

ವಿದ್ಯಾರ್ಥಿಗಳಿಗಿರುವ ಜ್ಞಾನ:— ನಮ್ಮ ಸುತ್ತಲು ಹವೆಯಿರುವದು. ಇದಕ್ಕೆ ಎಲ್ಲ ಕಡೆಯಿಂದ ಒತ್ತುವಿಕೆಯಿರುವದು.

ಪಂಟ್ಟ	ವಿಷಯ	ಕ್ರಮ
ಸಿದ್ಧತೆ	೧. ನಮ್ಮ ಸುತ್ತಲು ಹವೆ ಇದೆ. ನಾವು "ಖಾಲಿ" ಇರುವವೆಂಬ ಪದಾರ್ಥಗಳಲ್ಲಿಯೂ ಹವೆ ಇರುವದು. ೨. ಈ ಹವೆಗೆ ಎಲ್ಲ ದಿಕ್ಕುಗಳಲ್ಲಿಯೂ ಒತ್ತುವಿಕೆ ಇರುವದು.	ಶಿಕ್ಷಕನು ವಿದ್ಯಾರ್ಥಿಗಳಿಗೆ ಈ ಮೊದಲೇ ಗೊತ್ತಿರುವ ಸಂಗತಿಗಳಬಗ್ಗೆ ಪ್ರಶ್ನಗಳನ್ನು ಕೇಳುವನು. ಹಿಂದೆ ನೀವು ಹವೆಯ ಬಗ್ಗೆ ಕೆಲವು ಮಾತುಗಳನ್ನು ಗೊತ್ತುಮಾಡಿಕೊಂಡಿರಿ. ಅವು ಯಾವವು? ಈ ಸಂಗತಿಗಳು ನಮಗೆ ಯಾವ ಪ್ರಯೋಗಗಳಿಂದ ಗೊತ್ತಾದವು?



ಅ. ಗ್ಯಾಸಜಾರ

ಬ. ನೀರು

ಕ. ಮುಚ್ಚಳ. ಎಲ್ಲ ಆಕೃತಿಗಳಲ್ಲಿ ಬಾಣಗಳು ಹವೆಯ ಒತ್ತುವಿಕೆಯ ದಿಕ್ಕನ್ನು ತೋರಿಸುವವು.



ಆಕೃತಿ ೨

ಅ. ತೊಯಿಸಿದ ತೊಗಲು.

ಬ. ಕನ್ನಡಿಯ ಹರಳು.



ಆಕೃತಿ ೩

ಮ್ಯಾಗಡಿಬರ್ಗ ಗೋಲ

(ಹವೆಯಿಲ್ಲದ ಸ್ಥಿತಿ)

ಅ. ಚರ್ಮದ ತುಂಡು, ತೋಯಿಸಿ ಹಚ್ಚಿರುವದು.

ಬ. ಕನ್ನಡಿಯ ಹರಳು.

ಅ. ನಿರ್ವಾತವಾಡಿದ ಮ್ಯಾಗಡಿಬರ್ಗ ಬಟ್ಟಲುಗಳು.

ಪೆಟ್ಟು	ವಿಷಯ	ಕ್ರಮ
ಸಿದ್ಧತೆ		



ಆಕೃತಿ ೪

(ಬಾಣಗಳು ಹವೆಯ ಒತ್ತುವಿಕೆಯ ದಿಕ್ಕನ್ನು ತೋರಿಸುವವು.) **ಅ.** ವು ನೀರಿನ ಎತ್ತರವನ್ನು ತೋರಿಸುವದು. ಹವೆಯು **ಅ.** ದಷ್ಟು ಎತ್ತರವುಳ್ಳ ನೀರನ್ನು ಎತ್ತಿಹಿಡಿದಿರುವದು.

ಬ. ನೀರು

ಶಿಕ್ಷಕನು ಒಂದು ಕಾಜಿನ ಪಾತ್ರೆಯಲ್ಲಿ ನೀರು ತುಂಬಿ ಅದನ್ನು ನೀರಿನಲ್ಲಿ ಡಬ್ಬಾಗಿ ಮುಳುಗಿಸುವದು.

ಈ ಕಾಜಿನ ಪಾತ್ರೆಯಲ್ಲಿರುವ ಹವೆಯು ಎಷ್ಟು ಎತ್ತರ ನಿಂತಿರುವ ನೀರಿನ ಭಾರವನ್ನು ಎತ್ತಿ ಹಿಡಿದದೆ ?

ಕಾಜಿನ ಪಾತ್ರೆಯ ಮೇಲ್ಬದಿಯಲ್ಲಿ ನಾನು ಒಂದು ತೂತು ಮಾಡಿದರೆ ಏನಾದೀತು ?

ಇದು ಹವೆಯು ಎತ್ತಿ ಹಿಡಿಯಬಹುದಾದ ಎಲ್ಲಕ್ಕೂ ಹೆಚ್ಚು ಎತ್ತರವೋ ?

ಉದ್ದೇಶವನ್ನು ಹೇಳುವದು:— ಇಂದು ನಾವು " ಹವೆಯು ಎಷ್ಟು ಎತ್ತರವುಳ್ಳ ನೀರನ್ನು ಎತ್ತಿಹಿಡಿಯುವದು! " ಎಂಬ ಪ್ರಶ್ನದ ಉತ್ತರವನ್ನು ಹೇಳಲಿಕ್ಕೆ ಯತ್ನಿಸೋಣ.

	ವಿಷಯ	ಕ್ರಮ
ವಿವೇ-ಚನೆ ಭಾಗ ೧	 ಆಕೃತಿ ೫ ಹವೆಯು ಗೆರೆಯಷ್ಟು ಎತ್ತರವುಳ್ಳ ನೀರನ್ನು ಎತ್ತಿ ಹಿಡಿದಿರುವದು. (ಬಾಣಗಳು ಹವೆಯ ಒತ್ತುವಿಕೆಯ ದಿಕ್ಕನ್ನು ತೋರಿಸುವವು)	ಗೆರೆಯು ನೀರಿನ ಎಲ್ಲಕ್ಕೂ ಹೆಚ್ಚು ಎತ್ತರವಲ್ಲ ಎಂಬದನ್ನು ತೋರಿಸಲು ನಾವು ಏನು ಮಾಡಬೇಕು ? (ಉತ್ತರ—ಅದಕ್ಕೂ ಉದ್ದವಿರುವ ಕಾಜಿನ ನಳಿಕೆಯನ್ನು ಉಪಯೋಗಿಸಬೇಕು). ಒಂದು ಸ್ಕೇಲುಳ್ಳ ಕೊಳವೆಯನ್ನು ತೆಗೆದುಕೊಂಡು, ನೀರು ತುಂಬಿ, ಕಾಜಿನ ಕುಪ್ಪಿಯಲ್ಲಿ ಡಬ್ಬು ಹಾಕುವದು. ಈಗ ಎಷ್ಟು ಎತ್ತರವುಳ್ಳ ನೀರನ್ನು ಹವೆಯು ಎತ್ತಿಹಿಡಿಯಿತು? ಈ ಎತ್ತರವು ಎಲ್ಲಕ್ಕೂ ಹೆಚ್ಚಾದದ್ದೋ ? ಹ್ಯಾಗೆ ? ಇದಕ್ಕಿಂತ ಉದ್ದನ್ನ ನಳಿಕೆಯಲ್ಲಿ ನೀರು ತುಂಬಿ ಡಬ್ಬ ಹಾಕಿ ನೋಡಬೇಕೆಂಬ ಉತ್ತರವನ್ನು ಹೊರಡಿಸಬೇಕು.

ಮೆಟ್ಟು	ವಿಷಯ	ಕ್ರಮ



ಆಕೃತಿ ೬

ಈ ನಳಿಕೆಯು ತುಂಬ ನೀರಿದೆ. ನೀರು ಬೀಳುವದಿಲ್ಲ ಹವೆಯು ೩೪ ಫೂ. ಎತ್ತರ ನೀರನ್ನು ಎತ್ತಿ ಹಿಡಿಯುವದು.

ಹವೆಯು ಒತ್ತುವಿಕೆಯ ಬಗ್ಗೆ ನೀವು ಏನು ಹೇಳಬಹುದು? ಇದಕ್ಕಿಂತ ಹೆಚ್ಚು ಎತ್ತರವುಳ್ಳ ನೀರನ್ನು ಇದು ಎತ್ತಿ ಹಿಡಿಯಬಹುದೇ? (ಉತ್ತರ—ಹೌದು, ಹಿಡಿಯಬಹುದು).

೩೪ ಫೂ. ಎತ್ತರವುಳ್ಳ ನೀರನ್ನು ಹವೆಯು ಎತ್ತಿ ಹಿಡಿಯುವದೆಂದು ಶಿಕ್ಷಕನು ಹೇಳುವದು. ಇದನ್ನು ಸಿದ್ಧಮಾಡಲಿಕ್ಕೆ ಬೇಕಾಗುವ ಪ್ರಯೋಗವನ್ನು ವರ್ಗದಲ್ಲಿ ಮಾಡಿ ನೋಡಲಾಗುವದಿಲ್ಲ.

ಯಾಕೆಂದರೆ ಇದರಲ್ಲಿ ೩೪ ಫೂ. ಎತ್ತರವಿರುವ ನಳಿಕೆಯನ್ನು ಉಪಯೋಗಿಸಬೇಕಾಗುವದು.

ಮುಖ್ಯ	ವಿಷಯ	ಕ್ರಮ
ಭಾಗ ೧	ನೀರಿನ ಈ ಎತ್ತರವು ಹವೆಯ ಒತ್ತುವಿಕೆಯ ಮಾನವು—ಅಂದರೆ ಎಷ್ಟು ಎತ್ತರವುಳ್ಳ ನೀರನ್ನು ಹವೆಯು ಎತ್ತಿ ಹಿಡಿಯುವದೆಂಬದನ್ನು ನೋಡಿ ಹವೆಯ ಒತ್ತುವಿಕೆಯನ್ನು ಅಪ್ರತ್ಯಕ್ಷ ರೀತಿಯಿಂದ ಅಳೆದು ನೋಡುವದುಂಟು. ಈ ಯಂತ್ರವು ಹವೆಯ ಒತ್ತುವಿಕೆಯನ್ನು ಅಳೆಯುವದು. ಇದಕ್ಕೆ ಭಾರಮಾಪಕ ಯಂತ್ರವೆನ್ನುವರು.	ಹವೆಯ ಒತ್ತುವಿಕೆಯನ್ನು ಒಮ್ಮಿಂದೊಮ್ಮೆ ಹೆಚ್ಚಿಸಿದರೆ ನೀರಿನ ಈ ಎತ್ತರದ ಮೇಲೆ ಏನು ಪರಿಣಾಮವಾಗುವದು ? ಯಾವ ಸ್ಥಿತಿಯಲ್ಲಿ ನೀರಿನ ಎತ್ತರವು ಹೆಚ್ಚುಕಡಿಮೆಯಾಗದೆ ಉಳಿಯುವದು ? ಅಂದಮೇಲೆ ನೀರಿನ ಈ ಎತ್ತರವು ಏನು ತೋರಿಸುವದು ? ಈ ದೊಡ್ಡ ಯಂತ್ರಕ್ಕೆ ನೀವು ಯಾವ ಹೆಸರು ಕೊಡುವಿರಿ ?
ಭಾಗ ೨	ನೀರಿಗಿಂತ ಹೆಚ್ಚು ಭಾರವುಳ್ಳ ಪ್ರವಾಹಿಯು ಅದಕ್ಕಿಂತ ಕಡಿಮೆ ಎತ್ತರ ನಿಲ್ಲುವದು.	ಇದು ಒಂದು ಕೋಣೆಯಿಂದ ಮತ್ತೊಂದಕ್ಕೆ ಒಯ್ಯಲು ಅನುಕೂಲವಾದದ್ದಲ್ಲೆಂದು ಶಿಕ್ಷಕನು ವಿದ್ಯಾರ್ಥಿಗಳಿಂದ ಹೊರಡಿಸುವದು. ಈ ನಳಿಕೆಯು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುಲಭವಾಗಿ ಒಯ್ಯಲ್ಪಡುವಂಥದಾಗಬೇಕಾದರೆ ಏನು ಮಾಡಬೇಕಾದೀತು ?
	ಪಾರಜವು ನೀರಿಗಿಂತ ೧೩·೬ ಪಟ್ಟು ಭಾರವುಳ್ಳದ್ದಿರುವದು.	ವಿದ್ಯಾರ್ಥಿಗಳು ಪಾರಜದ ಭಾರವನ್ನು ಕೈಯಲ್ಲಿ ಹಿಡಿದು ಮನಗಾಣಬೇಕು. ಅಷ್ಟೇಗಾತ್ರವುಳ್ಳ ನೀರಿನ ಭಾರಕ್ಕೂ ಪಾರಜದ ಭಾರಕ್ಕೂ ಸರಿಹೋಲಿಸಿನೋಡಬೇಕು.

ಮೆಟ್ಟು	ವಿಷಯ	ಕ್ರಮ
	ಆಕೃತಿ. ೭ ಹವೆಯು ಸುಮಾರು ೩೭″ ಎತ್ತರವುಳ್ಳ ಪಾರಜವನ್ನು ಎತ್ತಿಹಿಡಿದಿರುವದು. ಪಾರಜದ ಎತ್ತರದಲ್ಲಿ ಹೆಚ್ಚುಕಡಿಮೆಗಳಾಗುವದರಿಂದ ಹವೆಯ ಒತ್ತುವಿಕೆಯ ಹೆಚ್ಚುಕಡಿಮೆಗಳು ಗೊತ್ತಾಗುವವು. ಇದು ಪ್ರಯೋಗಶಾಲೆಯಲ್ಲಿರುವ ಬ್ಯಾರೋಮೀಟರ	ಒಂದು ಬ್ಯಾರೋಮೀಟರ ನಳಿಕೆಯಲ್ಲಿ ಪಾರಜವನ್ನು ತುಂಬಿ ತುಸು ಪಾರಜವುಳ್ಳ ಹರವಾದ ಪಾತ್ರೆಯಲ್ಲಿ ಅದನ್ನು ಡಬ್ಬಹಾಕಬೇಕು. ಒಬ್ಬ ವಿದ್ಯಾರ್ಥಿಯು ಪಾರಜದ ಎತ್ತರವನ್ನು ಅಳೆದು ನೋಡಿ ಹೇಳಬೇಕು. ಈ ಪಾರಜದ ಎತ್ತರವು ಯಾವಾಗ ಹೆಚ್ಚು ಅಥವಾ ಕಡಿಮೆ ಆಗಬಹುದು? ಆದ್ದರಿಂದ ಪಾರಜದ ಈ ಎತ್ತರವು ಏನು ತೋರಿಸುವದು? ಯಾವ ಬ್ಯಾರೋಮೀಟರವನ್ನು ಸುಲಭವಾಗಿ ನಾವು ಉಪಯೋಗಮಾಡಲಾದೀತು? ನೀರಿನಿಂದ ತುಂಬಿದ ನಳಿಕೆಯು ಳ್ಳದ್ದೊ?

ಬ್ಯಾರೋಮೀಟರ ಯಂತ್ರವನ್ನು ಮಾಡಲಿಕ್ಕೆ ಕೆಳಗೆ ಕಾಣಿಸಿದವು ಬೇಕು.

೧. ಸುಮಾರು ೩೬" ಉದ್ದವಾದ ಕಾಜಿನ ನಳಿಕೆ.

೨. ಪಾರಜ.

೩. ಸಣ್ಣದೊಂದು ಬಟ್ಟಲ.



ಆಕೃತಿ ೮

ಪಾರಜದ ಎತ್ತರವು ನಳಿಕೆಯ ಉದ್ದಳತೆ ಇಲ್ಲವೆ ಅಗಲಳತೆಯನ್ನು ಅವಲಂಬಿಸುವದಿಲ್ಲ.

ಬ್ಯಾರೊಮೀಟರವನ್ನು ಮಾಡಲಿಕ್ಕೆ ಏನೇನು ಬೇಕಾಗುವದು ?

ನಳಿಕೆಯ ಉದ್ದಳತೆಯನ್ನಾಗಲಿ ಅಗಲಳತೆಯನ್ನಾಗಲಿ ಹೆಚ್ಚಿಸುವದರಿಂದ ಪಾರಜದ ಎತ್ತರದಲ್ಲಿ ಏನೂ ಹೆಚ್ಚುಕಡಿಮೆಯಾಗುವದಿಲ್ಲೆಂದು ಶಿಕ್ಷಕನು ತೋರಿಸಿಕೊಡುವದು.

ಆ ಬಳಿಕ ಶಿಕ್ಷಕನು ಪುಸ್ತಕದಲ್ಲಿ ಕೊಟ್ಟ ರೋಮನ್ ವೆಲ್ಸನ ಕಥೆಯನ್ನು ಹುಡುಗರಿಗೆ ಹೇಳುವದು. ನೀರಿನ ಪಂಪಿನಲ್ಲಿ ನೀರು ೩೪ ಫೂಟಗಿಂತ ಹೆಚ್ಚಿಗೆ ಏರುವದಿಲ್ಲೆಂಬದನ್ನೂ, ಇದಕ್ಕಿಂತ ಹೆಚ್ಚಿಗೆ ಏರಬೇಕಾದರೆ ಹವೆಯ ಒತ್ತುವಿಕೆಯು ಹೆಚ್ಚಾಗಬೇಕೆಂಬದನ್ನೂ ಇಟಾಲಿಯ ಶಾಸ್ತ್ರಜ್ಞನಾದ ಟಾರಿಸೇಲೀ ಎಂಬ ವಿದ್ವಾಂಸನು ಹ್ಯಾಗೆ ಶೋಧಿಸಿದನೆಂಬದನ್ನೂ ಶಿಕ್ಷಕನು ತಿಳಿಸಿಹೇಳುವದು. ಟಾರಿಸೇಲಿಯು ಮಾಡಿದ ವಿಚಾರವು ನಾವು ಈ ಪಾಠದಲ್ಲಿ ಮಾಡಿದ ವಿಚಾರದಂತೆಯೇ ಇತ್ತು.

ಅನುಕರಣವೇ ನಿಜವಾದ ಶಿಕ್ಷಣವು

ಶಿಕ್ಷಣದ ಅನೇಕ ತತ್ವಗಳನ್ನು ಬಾಯಿಂದ ಅಂದು ಅಬ್ಬರಮಾಡಿದರೆ ಶಿಕ್ಷಣದ ಪರಿಣಾಮವು ವಿದ್ಯಾರ್ಥಿಗಳ ಮೇಲೆ ಆಗಲಾರದು. ಶಿಕ್ಷಕನು ತಾನು ನುಡಿದಂತೆ ನಡೆಯುವವನಿರಬೇಕು. ಶಾಲೆಯಲ್ಲಿಯೇ ಶಿಕ್ಷಕರಿರುವರೆಂತಲ್ಲ, ತಾಯಿತಂದೆಗಳೂ ಗೃಹಶಿಕ್ಷಕರಾಗಿರುವರು. ವಿದ್ಯಾರ್ಥಿಗಳು ಬಹಳವೇಳೆ ಮನೆಯಲ್ಲಿಯೇ ಕಾಲಕಳೆಯುವದರಿಂದಲೂ ತಾಯಿತಂದೆಗಳಮೇಲೆ ಅವರ ಸ್ವಾಭಾವಿಕ ಭಕ್ತಿಯಿರುವದರಿಂದಲೂ ಚಿಕ್ಕಮಕ್ಕಳಿಗೆ ನಿಜವಾಗಿ ಅಕ್ಕರಪಡುವವರು ಅವರೇ ಅದುದರಿಂದಲೂ ಅವರೂ ಪ್ರೌಢರೇ ಅಂದರೆ ಸುಶಿಕ್ಷಿತರೇ ಆಗಬೇಕು; ಹಾಗು ಮಕ್ಕಳ ಹಿತದ ಸಲುವಾಗಿ ಯತ್ನಿಸುವವರೂ ಆಗಬೇಕು. ತಾಯಿಯ ಅನುಕರಣದಿಂದ ಜಗತ್ತಿನಲ್ಲಿ ಬೆಳಕಿಗೆ ಬಂದ ಒಬ್ಬ ವ್ಯಕ್ತಿಯ ದಿವ್ಯ ಉದಾಹರಣವು ಇದರಡಿಯಲ್ಲಿರುವದು.

ಆಯರ್ಲಂಡದಲ್ಲಿ ಮೊನಾಗನ್ ಎಂಬುದು ಒಂದು ಪ್ರಾಂತ. ಅಲ್ಲಿ ಒಂದು ಕುಟುಂಬವು ಇದ್ದಿತು. ಆ ಕುಟುಂಬದಲ್ಲಿ ಬಹಳ ಜನರಿರಲಿಲ್ಲ; ಗಂಡ, ಹೆಂಡತಿ ಮತ್ತು ಒಂದು ಮಗು. ೧೯ನೆಯ ಶತಮಾನದ ಮಧ್ಯದಲ್ಲಿ ಬರಗಾಲವು ಅಲ್ಲಿ ಹಣಕಿ ಹಾಕಿತು. ಇಂಥ ಸಣ್ಣ ಸಂಸಾರವೂ ಕೂಡ ತಾಪತ್ರಯದಿಂದ ಬಳಲಿ ಉಪಜೀವನಕ್ಕಾಗಿ ಸ್ಕಾಟಲಂಡದ ಗ್ಲಾಸಗೋ ಪಟ್ಟಣಕ್ಕೆ ಬಂದಿತು.

ಆ ಮನೆತನದಲ್ಲಿದ್ದ ಒಬ್ಬಳೇ ಒಬ್ಬ ಹೆಂಗಸು ಒಳ್ಳೇ ಸದ್ಗುಣಿಯೂ ಅಚ್ಚುಕಟ್ಟುತನಕ್ಕೆ ಮೆಚ್ಚಿದವಳೂ ಶ್ರಮಸಹಿಷ್ಣುವೂ ಮಿತವ್ಯಯಿಯೂ ಆಗಿದ್ದಳು. ಆಕೆಯು ತೀರ ಬಡವೆಯಾಗಿದ್ದುದರಿಂದ ತೀರ ಸಾಧಾರಣ ಪ್ರತಿಯ ಮನೆಯೇ ವಸತಿಗಾಗಿ ದೊರೆಯುತ್ತಿತ್ತು. ಅದು ಅವಳ ಆಧಿಪತ್ಯಕ್ಕೆ ಒಳಗಾದ ತುಸು ದಿನಗಳೊಳಗಾಗಿ ಹಸನವಾಗುತ್ತಿತ್ತು. ಬಳಿಕ ಇದ್ದ ಅಲ್ಪ ವಸ್ತುಗಳಿಂದಲೇ ಅಂದವಾಗುತ್ತಿತ್ತು. ಆ ಮೇಲೆ ಪೇಟೆಯಿಂದ ತಂದ ಅಲ್ಪ ಬೆಲೆಬಾಳುವ ವಸ್ತುಗಳಿಂದ ಅಲಂಕೃತವಾಗಿ ಮೆರೆಯುತ್ತಿತ್ತು. ಕುಮಾರನು ಹೊರಗಿನಿಂದ ಬಂದೊಡನೆಯೇ ಹೊಸ್ತಿಲಬಳಿ ಇದ್ದ ಚಾಪೆಗೆ ಕಾಲೊರಸಿ ಬರಬೇಕಾಗುತ್ತಿದ್ದಿತು. ಅವನು **ಕುಮಾರನಿದ್ದರೂ**

ಮನೆಯಲ್ಲಿ ಕಡ್ಡಿ, ಕಾಗದದ ಚೂರು, ಕಟ್ಟಿಗೆ ತುಣುಕುಗಳನ್ನು ಹರವಲು ಅಸಮರ್ಥನಾಗಿದ್ದನು ಸತ್ಯ-ಸಾಹಸ-ಸರಲತನಗಳೇ ಆಕೆಯ ಜೀವನತತ್ವಗಳು. ಇವುಗಳನ್ನೆಲ್ಲ ತನ್ನ ಮುದ್ದುಮಗನ ಮನಸ್ಸಿನಲ್ಲಿ ನೆಡಲು ಹಗಲಿರುಳು ಹೆಣಗುವಳು. ಮಗನ ದಿನಚರ್ಯೆಯನ್ನು ಗೊತ್ತುಮಾಡಿಕೊಟ್ಟಿದ್ದಳು. ಅವನು ತಪ್ಪದೆ ಕ್ರೈಸ್ತಾಲಯಕ್ಕೆ ಹೋಗಿಬರಬೇಕಾಗುತ್ತಿತ್ತು. ತಾಯಿಯುಸ್ವಭಾವಕ್ಕನುಸರಿಸಿ ಅವನೂ ತಯಾರಾದದರಿಂದ ಅವಳು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಆನಂದದಿಂದಲೂ ಸ್ವಾಭಾವಿಕವಾಗಿಯೂ ತೀಡುತ್ತಿದ್ದನು.

ಅವರ ಪ್ರಪಂಚವು ಬಡತನದ್ದಾದುದರಿಂದ ಸಣ್ಣವಸಿರುವಾಗಲೇ ಒಂದು ಚಿಕ್ಕತಕ್ಕಡಿ ಅಂಗಡಿಯನ್ನು ಸಾಗಿಸಲಾರಂಭಿಸಿದನು. ಹಡಗದಿಂದ ಅಂಗಡಿಗೆ ಚಿಕ್ಕ ಕೈಬಂಡಿಯಿಂದ ಸಾಮಾನು ತರುತ್ತಿದ್ದನು. ಅವನ ಎಲ್ಲ ಕೆಲಸಗಳಿಗಾಗಿ ತಾಯಿಯ ಬೆಂಬಲವಿತ್ತು. ಗಿರಾಕಿಗಳ ಮನೆಗೆ ಸಾಮಾನು ಮುಟ್ಟಿಸುವ ಪ್ರಸಂಗ ಬಂದರೆ ನಾಲಕರು ಒಯ್ಯುವದಕ್ಕಿಂತ ಹೆಚ್ಚು ಸುರಕ್ಷಿತೆಯಿಂದ ಸಕಾಲಕ್ಕೆ ಮುಟ್ಟಿಸುತ್ತಿದ್ದನು. ಅಂಗಡಿಯು ಸ್ವಚ್ಛವಾಗಿಯೂ ಅಚ್ಚುಕಟ್ಟುತನದ್ದಾಗಿಯೂ ಇದ್ದುದರಿಂದ ಸಾಮಾನುಗಳು ದೊಡ್ಡ ಅಂಗಡಿಗಿಂತಲೂ ನೆಟ್ಟಗೆ ಇರುತ್ತಿದ್ದವು. ಆಗಿಂದಾಗ ಹಡಗದಿಂದ ಜೀನಸು ತರುತ್ತಿದ್ದದರಿಂದ ಹೊಸ ಜೀನಸುಗಳು ದೊರೆಯುತ್ತಿದ್ದವು. ಕುಮಾರನೂ ತೀರ ಸಣ್ಣವನಿದ್ದದರಿಂದ ಅವನ ಗುಣಗಳಿಗೆ ಮೆಚ್ಚಿ ಎಲ್ಲರೂ 'ಲಿಪ್ಟನ್' ಲಿಪ್ಟನ್, ಎಂದು ಕರೆಯುತ್ತಿದ್ದರು. ಅವನು ಗಿರಾಕಿಗಳಿಗೆ ಕೋಳಿಯ ಮೊಟ್ಟೆಗಳನ್ನು ಕೊಡುವಾಗ ತಾನೇ ಕೊಡುತ್ತಿದ್ದನು. ಇಲ್ಲವೆ ತನ್ನ ತಾಯಿಯ ಕೈಯಿಂದ ಕೊಡಿಸುತ್ತಿದ್ದನು ತಂದೆಯಕಡೆಯಿಂದ ಕೊಡಿಸುತ್ತಿದ್ದಿಲ್ಲ. ತಮ್ಮಿರ್ವರ ಕೈಗಳು ಸಣ್ಣವಾದುದರಿಂದ ಕೊಟ್ಟಷ್ಟು ಮೊಟ್ಟೆಗಳು ಈಡು ತೋರುತ್ತಿದ್ದವು. ತೀರ ಚಿಕ್ಕವಯಸ್ಸಿನಲ್ಲಿಯೇ ವ್ಯಾಪಾರದ ಈ ಬಗೆಯ ಹತ್ತೋಟಿಗಳು ಅವನಿಗೆ ಗೊತ್ತಿದ್ದವು. ಈ ಪ್ರಕಾರ ಉದ್ಯೋಗದಲ್ಲಿ ತೊಡಗಿದ್ದರೂ ಸೆಂಟ ಆಂಡ್ರ್ಯೂಸಪ್ಯಾರಿಸ್ ಶಾಲೆಗೆ ಹೋಗುತ್ತಿದ್ದನು.

ಹಡಗಕ್ಕೆ ಜೀನಸು ತರಲಿಕ್ಕೆ ಹೋದಾಗ ಅದು ಬರುವದು ತಡವಾದರೆ ಸುಮ್ಮನೆ ಕೂಡದೆ ಅಲ್ಲಿ ಬರಹೋಗುವ ವರ್ತಕರ ಗೊತ್ತುಮಾಡಿಕೊಳ್ಳುತ್ತಿದ್ದನು. ಹೊಸ ಹಡಗು ಬಂದರೆ ಇದೆಲ್ಲಿಯದೆಂದು ಕೇಳಿ ದೇಶದೇಶಗಳ ಹೆಸರುಗಳನ್ನೂ ಮಾಹಿತಿಯನ್ನೂ ಕೇಳಿಕೊಳ್ಳುತ್ತಿದ್ದನು.

ಅದು ಕಠಿಣ ಕಾಲವಾದುದರಿಂದಲೂ ಕೆಲಕಾರಣದಿಂದಲೂ ಅವರ ಅಂಗಡಿಗೆ ಅಳಿಗಾಲವೊದಗಿತು. ಬಳಿಕ ಸಿರಿವಂತರ ಮನೆಯಲ್ಲಿ ಸಣ್ಣ ಚಾಕರಿ ಮಾಡಿ ದಿನಗೂಲಿಯನ್ನು ತಂದು ಆನಂದದಿಂದ ತಾಯಿಗೆ ಒಪ್ಪಿಸುತ್ತಿದ್ದನು. ತಮ್ಮ ಬಡತನಕ್ಕಾಗಿ ವಿದ್ಯೆಕಲಿಯುವ ಕುಮಾರನು ಕೂಲಿಯವನಾಗಬೇಕಾಯಿತೆಂದು ತಾಯಿಯು ಒಳಗೇ ಮರುಕುಪಡುತ್ತಿದ್ದಳು. ಅಲ್ಲಿ ಇಲ್ಲಿ ಚಾಕರಿ ಮಾಡುತ್ತ ಹಡಗಿನಲ್ಲಿ ('Cabin Boy') ಕ್ಯಾಬಿನ್ ಬಾಯ್ ಆಗಿ ಹಸಿ ಸಂಬಳಕ್ಕೆ ಸೇರಿದನು. ಹಸಿ ಸಂಬಳವೆಂದರೆ ಹೊಟ್ಟೆಬಟ್ಟೆಗೆ ಮಾಲಕರೇ ಕೊಟ್ಟು ಮೇಲೆ ಅವರೇ ದಿನಸಂಬಳ ಕೊಡುವದು. ಇಷ್ಟರಲ್ಲಿ ವ್ಯಾಪಾರದಿಂದ ಒಟ್ಟುಗೂಡಿಸಿ ತಾಯಿಯ ಹತ್ತಿರ ಗಂಟು ಕೂಡಿಸಿ ಕೊಟ್ಟಿದ್ದನು. ಮೊದಲಿನಿಂದಲೂ ದೇಶವಿದೇಶಗಳ ಹೆಸರು ಕೇಳಿದ್ದರಿಂದ ನ್ಯೂಯಾರ್ಕಿಗೆ ಹೋಗಬೇಕೆಂದು ಹವಣಿಸಿ ತಾಯಿಯಿಂದ ಅಪ್ಪಣೆ ಪಡೆದನು. ನ್ಯೂಯಾರ್ಕಿಗೆ ಹೋಗಿ ಇಳಿದಾಗ ಅವನ ಕಿಸೆಯಲ್ಲಿ ೩೦ ಶಿಲಿಂಗುಗಳಿದ್ದರೂ ಹಾಟಲ್ಲಕ್ಕೆ ಹೋಗಿ 'ಈದಿನ ಜನರನ್ನು ಸೇರಿಸಿ ಊಟದಗಿರಾಕಿಗಳನ್ನು ಸಂಗ್ರಹಿಸಿಕೊಟ್ಟರೆ ನನಗೇನು ಕೊಡುವಿರೆಂದು' ಕೇಳಿ ತನ್ನ ಊಟ ಪುಕ್ಕಟೆ ದೊರೆಯುವಂತೆ ಅವರಿಂದ ಪ್ರತಿಲಾಭ ಪಡೆದನು. ಆಗ ಅವನಿಗೆ ಹದಿನೈದೇ ವರ್ಷ. ಮುಂದೆ ಉದ್ಯೋಗದ ರಜಿಸ್ಟರಿನಲ್ಲಿ ಹೆಸರು ಬರೆಯಿಸಲು ತುಸು ದಿವಸಗಳಲ್ಲಿ ವರ್ಜಿನಿಯ ಪ್ರಾಂತದ ತೋಟಗಳಲ್ಲಿ ಕೆಲಸವೊಂದು ದೊರಕಿತು. ಅಲ್ಲಿ ಮೈಗಳ್ಳನಾಗದೆ ದುಡಿದು ಯಜಮಾನರ ಮೆಚ್ಚುಗೆಗೆ ಪಾತ್ರನಾಗಿ ಹಣಗಳಿಸಿ ಮರಳಿ ನ್ಯೂಯಾರ್ಕಿಗೆ ಬಂದನು. ಅಲ್ಲಿ ಒಂದು ಹೆಸರಾದ ಅಂಗಡಿಯಲ್ಲಿ ಕೆಲಸಮಾಡಿ ತನ್ನ ಪ್ರಾಮಾಣಿಕತನ-ಕರ್ತವ್ಯ ದಕ್ಷತೆಗಳಿಂದ ಅವರಿಗೆ ಬೇಕಾಗಿ ಅಲ್ಲಿಯೂ ಹಣಕೂಡಿಸಿದನು. ಅಲ್ಲಿಯೇ ಇದ್ದರೆ ನೆಟ್ಟಗಿತ್ತು. ತಾಯ್ತಂದೆಗಳ ದರ್ಶನದ ಹಂಬಲವುಂಟಾಗಿ ತಿರುಗಿ ಊರಿಗೆ ಬಂದನು. ಬರುವಾಗ ತಾಯಿಗಾಗಿ ಒರಗುವ ಖುರ್ಚಿಯನ್ನೂ ಹಿಟ್ಟಿನ ಚೀಲಗಳನ್ನೂ ತಂದನು.

ಬಳಿಕ ಊರಲ್ಲಿ ಬೆಣ್ಣೆ, ರೋಟಿ, ಬಿಸ್ಕೇಟಿನ ಅಂಗಡಿ ತೆಗೆದನು. ಅಮೇರಿಕೆದಲ್ಲಿ ತನಗೆ ಗೊತ್ತಾದ ಅನುಭವಗಳನ್ನೆಲ್ಲ ಉಪಯೋಗಿಸಿದ್ದರಿಂದ ಬಲು ಬೇಗ ಹೆಸರಾದನು. ಅಷ್ಟರಲ್ಲಿ ಧನಸಂಚಯಿಸಲು ದೊಡ್ಡ ಅಂಗಡಿ ತೆರೆದನು. ಅಂಗಡಿಯನ್ನು ಕಂಡರೆ ಮೋಹಿಸುವಂತೆ ಸಿಂಗರಿಸಿದನು. ಒಳಗಿನ ಜೀನಸುಗಳಂತೂ ಬಹಳ ನಿರ್ಮಲ. ಒಟ್ಟಾಗಿ ತರಿಸುತ್ತಿದ್ದದರಿಂದ ಬೆಲೆ ಕಡಿಮೆ. **ಪ್ರಾಮಾಣಿಕತನ**ದಿಂದಲೂ ಜೀನಸುಗಳನ್ನು ಕೊಡುತ್ತಿದ್ದನು. ತುಸುದಿವಸಗಳಲ್ಲಿ ತನ್ನ ಅಂಗಡಿಯ

ಜಾಹಿರಾತಿಗಾಗಿಯೇ ಹೆಚ್ಚು ಹಣ ವೆಚ್ಚಮಾಡಿದನು. ಆ ಅಂಗಡಿ ವ್ಯಾಪಾರವು ಬೆಳೆದು ದಿಗ್ದೇಶಗಳ ಹಳೆ ಹೊಸ ಪತ್ರಿಕೆಗಳಲ್ಲೆಲ್ಲ ಅವನ ಜಾಹಿರಾತು ತುಂಬಿ ಹೋಯಿತು.

ಮುಂದೆ ಹಂದಿಗಳ ವ್ಯಾಪಾರವನ್ನು ಸಹ ಬೆಳೆಯಿಸಿದನು. ಅವುಗಳ ಕತ್ತಿಗೆ 'ಲಿಪ್ಟನ್ನನ ಅನಾಥರು' ಎಂದು ಬರೆದ ಹಲಗೆಗಳನ್ನು ತೂಗಹಾಕುತ್ತಿದ್ದನು. ಇಷ್ಟರಲ್ಲಿ ಅವನ ಅಂಗಡಿಯಲ್ಲಿ ಎಷ್ಟೋ ಜನರು ಕೆಲಸಮಾಡಿ ಜೀವಿಸುತ್ತಿದ್ದರು. ಅವರಲ್ಲಿ ಅನಾಥರೇ ಹೆಚ್ಚು. ಅಂಗಡಿಯ ಮೇಲೆ ನಗೆಬರೆಹಗಳನ್ನೂ ವ್ಯಂಗ ಚಿತ್ರಗಳನ್ನೂ ಬರೆಯಿಸುತ್ತಿದ್ದನು. ದೇಶವಿದೇಶಗಳಿಂದ ಅಲ್ಲಲ್ಲಿ ಚೆನ್ನಾಗಿ ದೊರೆಯುವ ಜಿನಸುಗಳನ್ನು ತರಿಸುತ್ತಿದ್ದನು. ಅವನು ಶಿಕಾಗೋ ಮಾಂತ್ರಿಯಾಲಗಳಲ್ಲಿ ತನ್ನ ಅಂಗಡಿಗಳನ್ನು ಅಲ್ಲಿಯ ಪರಿಸ್ಥಿತಿಗೆ ತಕ್ಕಂತೆ ಸ್ಥಾಪಿಸಿದನು. ಆಗ ಯುರೋಪ ಖಾನಪಾನಗಳಲ್ಲಿ ಕಾಫಿ, ಟೀ ಗಳು ಒಳ್ಳೇ ಬೇಕಾದುವಾದದರಿಂದ ಸಿಂಹಲದ್ವೀಪದ ಕಾಫೀ ತೋಟಗಳನ್ನು ಕೊಂಡುಕೊಂಡು ಮೇಲಿನ ಪಟ್ಟಣಗಳಲ್ಲೆಲ್ಲ ಕಾಫಿ, ಟೀ ಗಳ ಡಬ್ಬಿಗಳನ್ನು ಮಾರತೊಡಗಿದನು. ಕಲಕತ್ತೆ ಕೋಲಂಬೋಗಳಲ್ಲಿ ಟೀ ಮಾರುವ ಕಿರಕೋಳ ಅಂಗಡಿಗಳನ್ನು ಸ್ಥಾಪಿಸಿದನು. ಅಗಣಿತ ಸಾಹಸದಿಂದಲೂ ಎಡೆಗಾರಿಕೆಯಿಂದಲೂ ತೋಟಗಳನ್ನೇ ಬೆಳೆಸಿ ಅಲ್ಲಿ ಹುಟ್ಟಿದ ಟೀ, ಕಾಫಿಗಳನ್ನು ತನ್ನ ದೇಶವಿದೇಶಗಳ ಅಂಗಡಿಗಳಲ್ಲಿ ಮಾರತೊಡಗಿದನು. ನಾವುಗಾರಿಕೆಯ ಹುಚ್ಚು ಹೆಚ್ಚಾಗುತ್ತಲೇ ಇದ್ದಿತು. ತಾಯಿತಂದೆಗಳು ಅವನ ವೈಭವವನ್ನು ಕಂಡು ಹಿರಿಹಿರಿ ಹಿಗ್ಗಿದರು. ಸ್ಕಾಟಲಂಡದ ನಾಮಾಂಕಿತ ವರ್ತಕರಲ್ಲಿ ಮೇಲುಗೈ ಆದನು. ಇಂತಹ ವರ್ತಕರು ಸರಕಾರಕ್ಕೂ ದೇಶಕ್ಕೂ ಬೆಳಕನ್ನುಂಟುಮಾಡುವರು. ಸ್ಕಾಟಲಂಡದಲ್ಲಿ ಸೇಂಟಅಂಡ್ರೂಸ ಸಾಧುಗಳ ಸನ್ಮಾನಕ್ಕಾಗಿ ಜರುಗುವ ಭೋಜನ ಸಮಾರಂಭದಲ್ಲಿ ಅಲ್ಲಿಯ ಗವ್ಹರ್ನರರು ಸಹ ಲಿಪ್ಟನ್ನನಂತಹ ವರ್ತಕರ ನಾಮನಿರ್ದೇಶವನ್ನು ಮಾಡಿ ಅವರು ಬ್ರಿಟಿಶ ಸಾಮ್ರಾಜ್ಯಸೌಧವನ್ನು ನಿರ್ಮಿಸಲು ಪಟ್ಟ ಶ್ರಮವನ್ನು ವಿವರಿಸಲು ಮರೆಯಲಿಲ್ಲ.

ವ್ಯಾಪಾರೋದ್ಯೋಗಗಳಿಗೆ ಧನಸಂಗ್ರಹವೂ ಸೊಬಗುಳ್ಳ ಸರಕುಗಳೂ ಬೇಕಾಗುವವಲ್ಲದೆ ಸಹೃದಯತೆ-ಸೌಜನ್ಯಗಳೂ ಅತ್ಯಾವಶ್ಯಕ. ನಯನುಡಿಗಳಿಂದ ಗ್ರಾಹಕರನ್ನು ಮನ್ನಿಸಬೇಕಾದುದಲ್ಲದೆ ನಂಬಿಗೆಯಿಂದಲೂ ಉತ್ತಮ ವಸ್ತುಗಳನ್ನು

ಅದು ಕಠಿಣ ಕಾಲವಾದುದರಿಂದಲೂ ಕೆಲಕಾರಣದಿಂದಲೂ ಅವರ ಅಂಗಡಿಗೆ ಅಳಿಗಾಲವೊದಗಿತು. ಬಳಿಕ ಸಿರಿವಂತರ ಮನೆಯಲ್ಲಿ ಸಣ್ಣ ಚಾಕರಿ ಮಾಡಿ ಬಿನ್ನ ಗೂಲಿಯನ್ನು ತಂದು ಆನಂದದಿಂದ ತಾಯಿಗೆ ಒಪ್ಪಿಸುತ್ತಿದ್ದನು. ತನ್ನ ಬಡತನ ಕ್ಕಾಗಿ ವಿದ್ಯೆಕಲಿಯುವ ಕುಮಾರನು ಕೂಲಿಯವನಾಗಬೇಕಾಯಿತೆಂದು ತಾಯಿಯು ಒಳಗೇ ಮರುಕುಪಡುತ್ತಿದ್ದಳು. ಅಲ್ಲಿ ಇಲ್ಲಿ ಚಾಕರಿ ಮಾಡುತ್ತ ಹಡಗಿನಲ್ಲಿ ('Cabin Boy') ಕ್ಯಾಬಿನ್ ಬಾಯ್ ಆಗಿ ಹಸಿ ಸಂಬಳಕ್ಕೆ ಸೇರಿದನು. ಹಸಿ ಸಂಬಳವೆಂದರೆ ಹೊಟ್ಟೆಬಟ್ಟೆಗೆ ಮಾಲಕರೇ ಕೊಟ್ಟು ಮೇಲೆ ಅವರೇ ದಿನಸಂಬಳ ಕೊಡುವದು. ಇಷ್ಟರಲ್ಲಿ ವ್ಯಾಪಾರದಿಂದ ಒಟ್ಟುಗೂಡಿಸಿ ತಾಯಿಯ ಹತ್ತಿರ ಗಂಟು ಕೂಡಿಸಿ ಕೊಟ್ಟಿದ್ದನು. ಮೊದಲಿನಿಂದಲೂ ದೇಶವಿದೇಶಗಳ ಹೆಸರು ಕೇಳಿದ್ದರಿಂದ ನ್ಯೂಯಾರ್ಕಿಗೆ ಹೋಗಬೇಕೆಂದು ಹವಣಿಸಿ ತಾಯಿಯಿಂದ ಅಪ್ಪಣೆ ಪಡೆದನು. ನ್ಯೂಯಾರ್ಕಿಗೆ ಹೋಗಿ ಇಳಿದಾಗ ಅವನ ಕಿಸೆಯಲ್ಲಿ ೩೦ ಶಿಲಿಂಗುಗಳಿದ್ದರೂ ಹಾಟೆ ಲ್ಲಕ್ಕೆ ಹೋಗಿ 'ಈದಿನ ಜನರನ್ನು ಸೇರಿಸಿ ಊಟದಗಿರಾಕಿಗಳನ್ನು ಸಂಗ್ರಹಿಸಿಕೊಟ್ಟರೆ ನನಗೇನು ಕೊಡುವಿರೆಂದು' ಕೇಳಿ ತನ್ನ ಊಟ ಪುಕ್ಕಟೆ ದೊರೆಯುವಂತೆ ಅವರಿಂದ ಪ್ರತಿಲಾಭ ಪಡೆದನು. ಆಗ ಅವನಿಗೆ ಹದಿನೈದೇವರ್ಷ. ಮುಂದೆ ಉದ್ಯೋಗದ ರಜಿಸ್ಟರಿನಲ್ಲಿ ಹೆಸರು ಬರೆಯಿಸಲು ತುಸು ದಿವಸಗಳಲ್ಲಿ ವರ್ಜಿನಿಯ ಪ್ರಾಂತದ ತೋಟಗಳಲ್ಲಿ ಕೆಲಸವೊಂದು ದೊರಕಿತು. ಅಲ್ಲಿ ಮೈಗಳ್ಳನಾಗದೆ ದುಡಿದು ಯಜ ಮಾನರ ಮೆಚ್ಚುಗೆಗೆ ಪಾತ್ರನಾಗಿ ಹಣಗಳಿಸಿ ಮರಳಿ ನ್ಯೂಯಾರ್ಕಿಗೆ ಬಂದನು. ಅಲ್ಲಿ ಒಂದು ಹೆಸರಾದ ಅಂಗಡಿಯಲ್ಲಿ ಕೆಲಸಮಾಡಿ ತನ್ನ ಪ್ರಾಮಾಣಿಕತನ-ಕರ್ತವ್ಯ ದಕ್ಷತೆಗಳಿಂದ ಅವರಿಗೆ ಬೇಕಾಗಿ ಅಲ್ಲಿಯೂ ಹಣಕೂಡಿಸಿದನು. ಅಲ್ಲಿಯೇ ಇದ್ದರೆ ನೆಟ್ಟಗಿತ್ತು. ತಾಯ್ತಂದೆಗಳ ದರ್ಶನದ ಹಂಬಲವುಂಟಾಗಿ ತಿರುಗಿ ಊರಿಗೆ ಬಂದನು ಬರುವಾಗ ತಾಯಿಗಾಗಿ ಒರಗುವ ಕುರ್ಚಿಯನ್ನೂ ಹಿಟ್ಟಿನ ಚೀಲಗಳನ್ನೂ ತಂದನು

ಬಳಿಕ ಊರಲ್ಲಿ ಬೆಣ್ಣೆ, ರೋಟಿ, ಬಿಸ್ಕೇಟಿನ ಅಂಗಡಿ ತೆಗೆದನು. ಅಮೇರಿಕ ದಲ್ಲಿ ತನಗೆ ಗೊತ್ತಾದ ಅನುಭವಗಳನ್ನೆಲ್ಲ ಉಪಯೋಗಿಸಿದ್ದರಿಂದ ಬಲು ಬೇಗ ಹೆಸರಾದನು. ಅಷ್ಟರಲ್ಲಿ ಧನಸಂಚಯಿಸಲು ದೊಡ್ಡ ಅಂಗಡಿ ತೆರೆದನು. ಅಂಗಡಿ ಯನ್ನು ಕಂಡರೆ ಮೋಹಿಸುವಂತೆ ಸಿಂಗರಿಸಿದನು. ಒಳಗಿನ ಜೀನಸುಗಳಂತೂ ಬಹಳ ನಿರ್ಮಲ. ಒಟ್ಟಾಗಿ ತರಿಸುತ್ತಿದ್ದದರಿಂದ ಬೆಲೆ ಕಡಿಮೆ. ಪ್ರಾಮಾಣಿಕತನ ದಿಂದಲೂ ಜೀನಸುಗಳನ್ನು ಕೊಡುತ್ತಿದ್ದನು. ತುಸುದಿವಸಗಳಲ್ಲಿ ತನ್ನ ಅಂಗಡಿಯ

ಜಾಹಿರಾತಿಗಾಗಿಯೇ ಹೆಚ್ಚು ಹಣ ವೆಚ್ಚಮಾಡಿದನು. ಆ ಅಂಗಡಿ ವ್ಯಾಪಾರವು ಬೆಳೆದು ದಿಗ್ದೇಶಗಳ ಹಳೆ ಹೊಸ ಪತ್ರಿಕೆಗಳಲ್ಲೆಲ್ಲ ಅವನ ಜಾಹಿರಾತು ತುಂಬಿ ಹೋಯಿತು.

ಮುಂದೆ ಹಂದಿಗಳ ವ್ಯಾಪಾರವನ್ನು ಸಹ ಬೆಳೆಯಿಸಿದನು. ಅವುಗಳ ಕತ್ತಿಗೆ 'ಲಿಪ್ಟನ್ನನ ಅನಾಥರು' ಎಂದು ಬರೆದ ಹಲಗೆಗಳನ್ನು ತೂಗಹಾಕುತ್ತಿದ್ದನು. ಇಷ್ಟರಲ್ಲಿ ಅವನ ಅಂಗಡಿಯಲ್ಲಿ ಎಷ್ಟೋ ಜನರು ಕೆಲಸಮಾಡಿ ಜೀವಿಸುತ್ತಿದ್ದರು. ಅವರಲ್ಲಿ ಅನಾಥರೇ ಹೆಚ್ಚು. ಅಂಗಡಿಯ ಮೇಲೆ ನಗೆಬರೆಹಗಳನ್ನೂ ವ್ಯಂಗ ಚಿತ್ರಗಳನ್ನೂ ಬರೆಯಿಸುತ್ತಿದ್ದನು. ದೇಶವಿದೇಶಗಳಿಂದ ಅಲ್ಲಲ್ಲಿ ಚೆನ್ನಾಗಿ ದೊರೆಯುವ ಜಿನಸುಗಳನ್ನು ತರಿಸುತ್ತಿದ್ದನು. ಅವನು ಶಿಕಾಗೋ ಮಾಂತ್ರಿಯಾಲಗಳಲ್ಲಿ ತನ್ನ ಅಂಗಡಿಗಳನ್ನು ಅಲ್ಲಿಯ ಪರಿಸ್ಥಿತಿಗೆ ತಕ್ಕಂತೆ ಸ್ಥಾಪಿಸಿದನು. ಆಗ ಯುರೋಪ ಕಾನಡಾಗಳಲ್ಲಿ ಕಾಫಿ, ಟೀ ಗಳು ಒಳ್ಳೇ ಬೇಕಾದುವಾದದರಿಂದ ಸಿಂಹಲದ್ವೀಪದ ಕಾಫೀ ತೋಟಗಳನ್ನು ಕೊಂಡುಕೊಂಡು ಮೇಲಿನ ಪಟ್ಟಣಗಳಲ್ಲೆಲ್ಲ ಕಾಫಿ, ಟೀಗಳ ಡಬ್ಬಿಗಳನ್ನು ಮಾರತೊಡಗಿದನು. ಕಲಕತ್ತೆ ಕೋಲಂಬೋಗಳಲ್ಲಿ ಟೀ ಮಾರುವ ಕಿರಕೋಳ ಅಂಗಡಿಗಳನ್ನು ಸ್ಥಾಪಿಸಿದನು. ಅಗಣಿತ ಸಾಹಸದಿಂದಲೂ ಎದೆಗಾರಿಕೆಯಿಂದಲೂ ತೋಟಗಳನ್ನೇ ಬೆಳೆಸಿ ಅಲ್ಲಿ ಹುಟ್ಟಿದ ಟೀ, ಕಾಫಿಗಳನ್ನು ತನ್ನ ದೇಶವಿದೇಶಗಳ ಅಂಗಡಿಗಳಲ್ಲಿ ಮಾರತೊಡಗಿದನು. ಸಾವುಗಾರಿಕೆಯ ಹುಚ್ಚು ಹೆಚ್ಚಾಗುತ್ತಲೇ ಇದ್ದಿತು. ತಾಯಿತಂದೆಗಳು ಅವನ ವೈಭವವನ್ನು ಕಂಡು ಹಿರಿಹಿರಿ ಹಿಗ್ಗಿದರು. ಸ್ಕಾಟಲಂಡದ ನಾಮಾಂಕಿತ ವರ್ತಕರಲ್ಲಿ ಮೇಲುಗೈ ಆದನು. ಇಂತಹ ವರ್ತಕರು ಸರಕಾರಕ್ಕೂ ದೇಶಕ್ಕೂ ಬೆಳಕನ್ನುಂಟುಮಾಡುವರು. ಸ್ಕಾಟಲಂಡದಲ್ಲಿ ಸೇಂಟಅಂಡ್ರೂಸ ಸಾಧುಗಳ ಸನ್ಮಾನಕ್ಕಾಗಿ ಜರುಗುವ ಭೋಜನ ಸಮಾರಂಭದಲ್ಲಿ ಅಲ್ಲಿಯ ಗವ್ಹರ್ನರರು ಸಹ ಲಿಪ್ಟನ್ನನಂತಹ ವರ್ತಕರ ನಾಮನಿರ್ದೇಶವನ್ನು ಮಾಡಿ ಅವರು ಬ್ರಿಟಿಶ ಸಾಮ್ರಾಜ್ಯಸೌಧವನ್ನು ನಿರ್ಮಿಸಲು ಪಟ್ಟ ಶ್ರಮವನ್ನು ವಿವರಿಸಲು ಮರೆಯಲಿಲ್ಲ.

ವ್ಯಾಪಾರೋದ್ಯೋಗಗಳಿಗೆ ಧನಸಂಗ್ರಹವೂ ಸೊಬಗುಳ್ಳ ಸರಕಗಳೂ ಬೇಕಾಗುವವಲ್ಲದೆ ಸಹೃದಯತೆ-ಸೌಜನ್ಯಗಳೂ ಅತ್ಯಾವಶ್ಯಕ. ನಯನುಡಿಗಳಿಂದ ಗ್ರಾಹಕರನ್ನು ಮನ್ನಿಸಬೇಕಾದುದಲ್ಲದೆ ನಂಬಿಗೆಯಿಂದಲೂ ಉತ್ತಮ ವಸ್ತುಗಳನ್ನು

ನೀಡೋಣದರಿಂದಲೂ ಗ್ರಾಹಕರ ಹಿತಚಿಂತನದಿಂದಲೂ ಅವರ ಹಣದ ಉಳಿಸುವಿಕೆ ಯಿಂದಲೂ ಅವರನ್ನು ಪ್ರಸನ್ನೀಕರಿಸಿಕೊಳ್ಳಬೇಕಾಗುವದು.

ತನ್ನ ಸ್ವಾವಲಂಬನ, ಧೈರ್ಯ, ಪ್ರಾಮಾಣಿಕತನ, ಅಚ್ಚುಕಟ್ಟುತನ ಪರರ ಹಿತಚಿಂತನ, ಶ್ರಮಸಹಿಷ್ಣುತೆ, ಸ್ವಚ್ಛತೆ ಇತ್ಯಾದಿ ಸದ್ಗುಣಗಳಿಂದ ಒಬ್ಬ ಬಡಹುಡು ಗನು ಜಗತ್ತನ್ನು ದಂಗುಬಡಿಸುವ ಸಿರಿವಂತನಾದನು; ವರ್ತಕರಿಗೆಲ್ಲ ಇತ್ಯಾದಿ ಸದ್ಗುಣಗಳನ್ನು ಬೀರಿದನು; ಉದ್ಯೋಗಹೀನರಿಗೆ ಉದ್ಯೋಗದ ಗೌರವದ ಮಂತ್ರ ವನ್ನು ಕಲಿಸಿದನು; ಚಿಕ್ಕಂದಿನಲ್ಲಿಯ ಅವನ ಗುಣಗಳೇ ಕೊನೆಯವರೆಗೆ ಉಪಯೋಗವಾದವು. ನಡುವೇ ಕಲಿಯಲು ಯತ್ನಿಸಿದರೆ ಆ ಗುಣಗಳು ಬಾರವು. ಚಿಕ್ಕಂದಿನಿಂವ ಸಣ್ಣಮನೆ, ಶಾಲೆಗಳಲ್ಲಿ ಪ್ರಕಾಶಿತವಾದ ಗುಣಗಳೇ ಮುಂದೆ ದೇಶ ವಿದೇಶಗಳಲ್ಲಿ ಅವನ ಹೆಸರಿನೊಂದಿಗೆ ಹರಡಿದವು. ಅವನಿಂದ ಅವನ ತಂದೆತಾಯಿಗಳ ಹೆಸರು ಬೆಳಕಿಗೆ ಬಂದವು. ಕೊನೆಗೆ ನಾಡ ವರ್ತಕರಿಗೆಲ್ಲ ವ್ಯಾಪಾರದ ಗುರು ಮಂತ್ರವನ್ನು ಬೀರಿದನು. ಕಡೆಗೆ ೮೦ ವರ್ಷದವನಾಗಿ ತೀರಿಕೊಂಡನು. ಅವನು ತೀರಿಹೋದರೂ ಅಂಗಡಿ, ವತ್ರಮಾನಪತ್ರಿಕೆ, ಡಬ್ಬಿಗಳ ಕವರು, ಚಹದ ತೋಟ ಉಗೆಬಂಡಿಗಳ ಅಂಗಡಿಗಳು ಇತ್ಯಾದಿಗಳಲ್ಲೆಲ್ಲ ಅವನ ಹೆಸರು ರಜಿಸ್ಟರಮಾಡಿಟ್ಟಂತೆ ಆಗಿರುವದು.

ಬಲೂಚಿಸ್ತಾನವು

[ಒಂದು ಮರಾಠೀ ಪತ್ರಿಕೆಯ ಅನುವಾದವು]

ಬರೆಹಗಾರ:—ಶ್ರೀ. ಲಕ್ಷ್ಮಣ, ವಿಶ್ವನಾಥ, ಘಾಟಕ, ಕೋಟುಮಚಗಿ

ಬಲೂಚಿಸ್ತಾನವು ಕೇವಲ ಗುಡ್ಡದ ಪ್ರದೇಶವಾಗಿದೆ. ಪರ್ವತ, ದಿನ್ನಿ, ಕೊಳ್ಳ, ತಪ್ಪಲು ಇವುಗಳಿಂದಲೇ ಆ ದೇಶವು ಸಂಪೂರ್ಣವಾಗಿ ವ್ಯಾಪಿಸಿದೆ. ಚಂದ್ರ-ಮಂಗಳ ಇವುಗಳ ಮೇಲೆ ಕಂಡುಬರುವ ಸ್ಥಿತಿಯಂತೆಯೇ ಬಲೂಚಿಸ್ತಾ

ನವ ರಚನೆಯಿದೆ. ಎಷ್ಟೋ ಮೈಲುಗಳ ವರೆಗೆ ಒಂದೇಸವನೆ ಅಲ್ಲಿ ಕೆಂಪು ಮಣ್ಣು ಪಸರಿಸಿದ್ದು ಕಂಡುಬರುತ್ತದೆ. ಅಲ್ಲಿಯ ವಿಧವಿಧದ ಭಾಷೆ-ನಡಾವಳಿಗಳನ್ನು ನೋಡಿದರೆ ಅದೊಂದು ವಿಚಿತ್ರ ದೇಶವೆಂದು ಕಂಡುಬರುವದು. ಕ್ಷೇತ್ರಫಲದ ದೃಷ್ಟಿಯಿಂದ ಅದು ಹಿಂದುಸ್ಥಾನದಲ್ಲಿಯ ಐದನೆಯ ನಂಬರಿನ ಪ್ರಾಂತವಾಗಿದ್ದು, ಅಲ್ಲಿ ಜನವಸತಿಯು ಮಾತ್ರ ತೀರ ವಿರಲವಾಗಿದೆ. ಕೆಲಾತ, ಲಾಸಬೇಲಾ, ಈ ಎರಡು ಬಲೂಚಿಸ್ಥಾನದ ಸಂಸ್ಥಾನಗಳಲ್ಲಿ ಪ್ರತಿಮೈಲಿಗೆ ೪·೫ ದಂತೆ ಜನಸಂಖ್ಯೆಯ ಪ್ರಮಾಣವಿದೆ. ಕ್ವೇಟಾ ಪಟ್ಟಣವೊಂದನ್ನು ಬಿಟ್ಟರೆ ಉಳಿದ ಬ್ರಿಟಿಶ ಬಲೂಚಿಸ್ಥಾನದಲ್ಲಿ ಈ ಪ್ರಮಾಣವು ಮೈಲಿಗೆ ೫ ರಂತೆ ಬೀಳುತ್ತದೆ.

ಕ್ವೇಟಾ ಪಟ್ಟಣವು ಬ್ರಿಟೀಶ ಬಲೂಚಿಸ್ಥಾನದ ರಾಜಧಾನಿಯಾಗಿದ್ದು, ಅಲ್ಲಿ ಜನಸಂಖ್ಯೆಯ ಪ್ರಮಾಣವು ಮೈಲಿಗೆ ೨೬ ರಂತೆ ಬೀಳುವದು. ಇಲ್ಲಿ ಸಾಧಾರಣ ಮಳೆಯಾಗುವದು. ಚಳಿಗಾಲದಲ್ಲಿ ಸಾಕಷ್ಟು ಬರ್ಫವೂ ಬೀಳುವದು; ಅದರಿಂದ ಇಲ್ಲಿಯ ಬಾವಿಗಳಲ್ಲಿ ನೀರಿನ ಕೊರತೆಯಾಗುವದಿಲ್ಲ ಕ್ವೇಟಾ ಪಟ್ಟಣವು ದಂಡಿನ ಠಾಣ್ಯವಿದ್ದುದರಿಂದ ಅಲ್ಲಿ ಪಕ್ಕಾ-ಮಾರ್ಗ, ರೇಲ್ವೆ, ನೀರು ಇವುಗಳ ಒಳ್ಳೇ ಅನುಕೂಲತೆಯಿದೆ. ವ್ಯಾಪಾರವಾದರೂ ಅಲ್ಲಿ ವಿಶೇಷವಾಗಿ ನಡೆಯುವದು. ಕ್ವೇಟಾ ನಗರವು ಸಮುದ್ರದ ಪಾತಳಿಯಿಲದ ೫,೫೦೦ ಫೂಟು ಎತ್ತರದ ಮೇಲಿದೆ. ಅದರಿಂದ ಅಲ್ಲಿ ತಾಪದಾಯಕವಾದ ಬೇಸಿಗೆಯಾಗುವದಿಲ್ಲ. ಚಳಿಗಾಲವೇ ಮಾತ್ರ ಕೆಲ ಮಟ್ಟಿಗೆ ಹೆಚ್ಚು ಕಷ್ಟದಾಯಕವಾಗಿರುವದು. ಮಳೆಗಾಲವು ಆರಂಭವಾದೊಡನೆಯೇ ಅಲ್ಲಿಯ ಗುಲಾಬಿಯ ಬನಗಳು ಪುಷ್ಪದಿಂದ ತುಂಬಿ, ನಿಸರ್ಗದ ಶೋಭೆಯನ್ನು ಹೆಚ್ಚಿಸುವವು. ಕ್ವೇಟಾ ನಗರವು ಗುಲಾಬಿಯ ಪುಷ್ಪಗಳ ಸುಂದರವಾದ ಆಗರವಾಗಿದೆ. ಈ ಪಟ್ಟಣವು ಅಗಲವೂ, ಬೆಳೆಯುಳ್ಳದ್ದೂ ಆಗಿರುವ ಒಂದು ಸಮನೆಲದ ಮೇಲೆ ನೆಲಸಿದೆ. ಇದರ ನಾಲ್ಕೂ ಬದಿಗೆ ಪರ್ವತಗಳಿದ್ದು, ಅವುಗಳ ಮೇಲೆ ಕೆಂಪು-ಹಳದಿ-ಕಪ್ಪು-ನೀಲಿ-ಬಿಳಿಯ ಬಣ್ಣಗಳು ಕಾಣುವದರಿಂದ ಚಕ್ಷುರಿಂದ್ರಿಯಕ್ಕೆ ಒಳ್ಳೇ ಆಹ್ಲಾದವಾಗುವದು.

ಕ್ವೇಟಾ ಪಟ್ಟಣವನ್ನು ಕ್ರಿಸ್ತಶಕ ೧೮೭೬ ರಲ್ಲಿ ಬ್ರಿಟಿಶರು ನೆಲೆಗೊಳಿಸಿ, ಖಾನನ ರಾಜ್ಯದಲ್ಲಿ ತಮ್ಮ ದಂಡನ್ನು ಇಟ್ಟರು. ಹಿಂದುಸ್ಥಾನದಲ್ಲಾದ ಪರಕೀಯರ ಮೊದಲಿನ ಎಷ್ಟೋ ದಾಳಿಗಳು ಇಲ್ಲಿಂದಲೇ ಆಗಿವೆ. ಬ್ರಿಟಿಶರು ಅಲ್ಲಿ

ನೆಲಿಸಿದಂದಿನಿಂದ ಅದರ ಪೂರ್ವದ ಸ್ವರೂಪವು ಸಮೂಲ ಬದಲಾಗಿ, ಈಗ ಅದು ಬಲೂಚಿಸ್ತಾನಕ್ಕಿಂತಲೂ ತೀರ ಭಿನ್ನವಾಗಿ ಕಂಡುಬರುವದು. ಅಲ್ಲಿ ಬ್ರಿಟಿಶರು ಉದ್ದವಾದ ಎಷ್ಟೋ ಮಾರ್ಗಗಳನ್ನು ಮಾಡಿಸಿರುವರು. ಒಟ್ಟಿಗೆ ಬ್ರಿಟಿಶ ಬಲೂಚಿಸ್ತಾನದಲ್ಲಿ ೯೭೫ ಮೈಲು ಉದ್ದವಾದ ಪಕ್ಕಾ ಮಾರ್ಗಗಳೂ, ೨೨೧೫ ಮೈಲು ಉದ್ದವಾದ ಕಚ್ಚಾಮಾರ್ಗಗಳೂ ಸದ್ಯದಲ್ಲಿವೆ.

ಬಲೂಚಿಸ್ತಾನದಲ್ಲಿ ಕೆಲಾತ, ಲಾಸಬೇಲಾ ಈ ಎರಡೇ ಸಂಸ್ಥಾನಗಳಿವೆ. ಕೆಲಾತದ ಲೋಕಸಂಖ್ಯೆಯು ೩೪ ಲಕ್ಷವಿದ್ದು, ಅದರ ಕ್ಷೇತ್ರಫಲವು ೭೩,೨೭೮ ಚೌ ಮೈಲಿವೆ. ಅಲ್ಲಿ ಕ್ರಿಸ್ತವರ್ಷ ೧೯೨೬ ರ ವರೆಗೆ ಗುಲಾಮಗಿರಿಯ ಪದ್ಧತಿಯಿತ್ತು. ಆದರೆ ಈಗ ಅದು ತೆಗೆದು ಹಾಕಲ್ಪಟ್ಟದೆ. ಅಲ್ಲಿ ಶಾಲೆ, ಆಸ್ಪತ್ರಿ ಇವು ಇತ್ತಿತ್ತ ಸ್ಥಾಪನೆಯಾಗಹತ್ತಿವೆ. ಲಾಸಬೇಲಾ ಸಂಸ್ಥಾನದಲ್ಲಿ ಹೆಚ್ಚು ದಟ್ಟವಾದ ಜನವಸತಿಯಿದೆ.

ಬಲೂಚಿಸ್ತಾನದಲ್ಲಿ ಕ್ವೇಟಾ ಮತ್ತು ಚಮನ ಇವುಗಳ ನಡುವೆ ೩೪ ಮೈಲು ಉದ್ದವಾದ ಒಂದು ಬೋಗದೆಯಿದೆ, ಅದಕ್ಕೆ "ಕೋಜಕ ಬೋಗದಾ" ಎಂದೆನ್ನುತ್ತಾರೆ. ಹಿಂದುಸ್ತಾನದಲ್ಲಿ ಮತ್ತೆಲ್ಲಿಯೂ ಇಂಥ ದೊಡ್ಡ ಬೋಗದೆಯಿಲ್ಲ.

ಬಲೂಚಿಸ್ತಾನದಲ್ಲಿ ಉಪಜೀವನದ ಅನೇಕ ಹೋರಿಗಳಿವೆ. ಬಲೂಚಿ ಜನರು ಮುಖ್ಯತಃ ಯಾವನೊಬ್ಬ ಜಮೀನದಾರನ ಆಶ್ರಯದಲ್ಲಿದ್ದು, ತಮ್ಮ ಶ್ರಮದ ಪ್ರತಿಫಲವೆಂದು ಅವನಿಂದ ಅವರು ಕಾಳುಕಡಿಗಳನ್ನು ತೆಗೆದುಕೊಳ್ಳುವರು. ಕೆಲವರು ರೇಲ್ವೆಯಲ್ಲಿ ಕೂಲಿಯ ಕೆಲಸಕ್ಕೆ ನಿಂತು, ಮುಂದೆ ಜವಾಬದಾರರಾಗಿ ಕೂಲಿಕಾರರನ್ನು ಪೂರೈಸುವ ಉದ್ಯೋಗವನ್ನು ಕೈಕೊಳ್ಳುವರು. ಕೆಲವರು ಸಣ್ಣ ಪುಟ್ಟ ಮಾಲಿನ ವ್ಯಾಪಾರಿಗಳಾಗಿ ಸಿಂಧಪ್ರಾಂತದವರೆಗೆ ಸಂಚರಿಸುವರು. ಬೇರೆ ಕೆಲವರು ಬಾಡಿಗೆಯಿಂದ ಒಂಟೆಗಳನ್ನು ತೆಗೆದುಕೊಂಡು, ಸರಕಾರದ ಮಾಲು ಒಯ್ಯುವ ಹಾಗೂ ತರುವ ಕೆಲಸವನ್ನು ಮಾಡುವರು. ಬಲೂಚಿ ಜನರು ಸ್ವತಃ ಕೂಲಿಕಾರರಿದ್ದರೂ ತಮ್ಮನ್ನು "ಜಮೀನದಾರ" ರೆಂದು ಕರೆದುಕೊಳ್ಳುವದರಲ್ಲಿ ಹೆಚ್ಚು ಅಭಿಮಾನ ಪಡುವರು. ಮೊದಲು ಅವರ ದೇಶದಲ್ಲಿ ಯಾವಕಾಲವಲ್ಲಿಯೂ ಶಾಂತತೆಯಿರುತ್ತಿದ್ದಿಲ್ಲ. ಆದರೆ ಈಗ ಅಲ್ಲಿ ನಡುನಡುವೆ ಕೆಲವೊಂದು ಅವಧಿಯವರೆಗಾದರೂ ಸಾಕಷ್ಟು ಶಾಂತತೆಯಿರುತ್ತದೆ.

ಬ್ರಿಟಿಶ ಸರಕಾರದವರು ಕ್ವೇಟಾದಲ್ಲಿರುವ ದಂಡಿನ ಪಾಳಯದಿಂದ ಇರಾಣ, ಅಫಗಾಣಿಸ್ತಾನ, ಝೋಬ, ವಝೀರಿಸ್ತಾನ ಎಂಬ ಬಲೂಚಿಸ್ತಾನದ ನಾಲ್ಕು ಸರಹದ್ದುಗಳನ್ನು ಕಾಯಬೇಕಾಗುತ್ತದೆ. ಇರಾಣೀ ಹಾಗೂ ಬಲೂಚಿ ಈ ಎರಡು ಜನಾಂಗಗಳಲ್ಲಿ ಹುಟ್ಟು ಹಗೆತನವಿದೆ. ಅದರಿಂದ ಅವೆರಡು ಜಾತಿಗಳಲ್ಲಿ ಮೇಲಿಂದ ಮೇಲೆ ಬಡಿದಾಟವಾಗುತ್ತಿರುತ್ತದೆ. ಅಫಗಾಣಿಸ್ತಾನದಲ್ಲಿಯ ತಂಡಗಳು ಕಳ್ಳತನ ದಲ್ಲಿ ಒಳ್ಳೇ ಹೆಸರಾಗಿವೆ. ಅದರಿಂದ ಅವರನ್ನು ಯಾವಾಗಲೂ ಕಾಯಬೇಕಾಗು ತ್ತದೆ. ಚಮನದ ಸಮೀಪದಲ್ಲಿರುವ ಸರಹದ್ದು ಇನ್ನೂ ಪೂರ್ಣ ನಿಶ್ಚಿತವಾಗದಿರುವ ಮೂಲಕ ಅಲ್ಲಿ ಸ್ಥಾನಿಕ ಜಗಳಗಳು ಮೇಲಿಂದಮೇಲೆ ಹೆಚ್ಚಾಗಿ ಒದಗುವವು. ಝೋಬದ ಸೀಮೆಯ ಮೇಲೆ ಸುಲೇಮಾನಿಖೇಲ ಎಂಬ ಜನರು ಯಾವಾಗಲೂ ಪುಂಡತನವನ್ನು ನಡೆಯಿಸುವರು. ಕಾಕೇಶ ಎಂಬದೊಂದು ಸದಾ ಸಂಚರಿಸುವ ಜಾತಿಯು ಇಲ್ಲಿ ೧೦,೦೦೦ ಚೌರಸ ಮೈಲಿನ ಪ್ರದೇಶದೊಳಗೆ ಪಸರಿಸಿದ್ದು, ಕುಂದಾರ, ಝೋಬ, ಲೋರಾಲ್ಯೆ ಈ ನದಿಗಳ ದಂಡೆಯಲ್ಲಿ ಅದರ ಭ್ರಮಣವಿರುತ್ತದೆ. ವಝೀರಿಸ್ತಾನದಲ್ಲಿಯ ವಝೀರ, ಮಹಸೂದ ಈ ಕಳ್ಳರ ಗುಂಪುಗಳು ಈಗೀಗ ತಮ್ಮ ಕಳ್ಳತನದ ವ್ಯವಸಾಯವನ್ನು ಬಿಟ್ಟು ಬೇರೆ ಉದ್ಯೋಗಗಳನ್ನು ಕೈಕೊಂಡಿವೆ.

ಸರ್ ರಾಬರ್ಟ ಸಡಮನ್ನನೇ ಕ್ವೇಟಾದ ಮೂಲ ನಿರ್ಮಾಣಕನಿದ್ದು, ಅವನ ಯೋಚನೆಯಿಂದಲೇ ಈ ಭಾಗದಲ್ಲಿ ಸಾಕಷ್ಟು ಶಾಂತತೆ ನೆಲೆಗೊಂಡಿದೆಯೆಂದು ಪ್ರತೀತಿಯಿದೆ. ಈ ಪ್ರಾಂತದಲ್ಲಿ ಉತ್ತರದ ಕಡೆಯ ಕಂದರದಿಂದಲೇ ಜನರ ಹೋಗಬರುವಿಕೆಯು ಹೆಚ್ಚಾಗಿ ನಡೆಯುತ್ತದೆ. ಬೋಲನ ಘಟ್ಟದಿಂದ ಕ್ವೇಟಾಕ್ಕೆ ಬಂದು, ಅಲ್ಲಿಂದ ಪಿಶಿನ-ಚಮನಗಳ ಮಾರ್ಗದಿಂದ ಅಫಗಾಣಿಸ್ತಾನಕ್ಕೆ ಹೋಗ ಲಿಕ್ಕೆ ಅನುಕೂಲತೆಯಿದೆ. ಇಲ್ಲಿ ಒಂದೇ ರೇಲ್ವೆಯ ಮಾರ್ಗವಿದ್ದು, ಅದು ಶಹಾರಿಗ ಮತ್ತು ಕ್ವೇಟಾ ಈ ಭಾಗಗಳಲ್ಲಿ ಹಾದುಹೋಗುವದು. ಚಮನದ ವರೆಗೆ ಈ ರೇಲ್ವೆಯದೊಂದು ಶಾಖೆಯೊಡೆದಿದೆ. ಎರಡನೆಯದೊಂದು ಶಾಖೆಯು ಸ್ಪೆಝುಾನೊ ದಿಂದ ಇರಾಣದ ಸಮೀಪದಲ್ಲಿರುವ ಡುಝುಡಬದ ವರೆಗೆ ಹೋಗಿದೆ.

ಬಲೂಚಿಸ್ತಾನದಲ್ಲಿ ಬಲೂಚಿ, ಪುಸ್ತು, ಬ್ರಾಹುಈ, ಸಿಂಧಿ, ಪಂಜಾಬಿ, ಹಿಂದಿ ಎಂಬ ಮುಖ್ಯವಾದ ಆರುಭಾಷೆಗಳು ನಡೆಯುತ್ತಿದ್ದು, ಮುಸಲ್ಮಾನ, ಹಿಂದು, ಶೀಖ, ಯುರೋಪಿಯನ್ ಎಂಬ ನಾಲ್ಕು ಜನಾಂಗಗಳು ಅಲ್ಲಿ ನೆಲಸಿವೆ.

ಅವರಲ್ಲೆಲ್ಲ ಮುಸಲ್ಮಾನರೇ ಬಹು ಸಂಖ್ಯೆಯವರಾಗಿದ್ದು, ಅವರು ಸುನ್ನೀಪಂಥದವರಿರುವರು.

ಕಳೆದ ವರ್ಷದ ಭೂಕಂಪದಿಂದ ಕ್ವೆಟಾಪಟ್ಟಣವೂ, ಅದರ ಸಮೀಪದಲ್ಲಿರುವ ಬಲೂಚಿಸ್ತಾನದ ಕೆಲ ಭಾಗವೂ ಉಧ್ವಸ್ತವಾಗಿದ್ದು, ಅದರ ಪುನರ್ಘಟನೆಯ ಕಾರ್ಯವನ್ನು ಬ್ರಿಟಿಶ ಸರಕಾರದವರು ನಡೆಯಿಸಿರುವರು.

ಲವಂಗ

ಲೇಖಕ:— ಶ್ರೀ. ಎಲ್. ವ್ಹಿ. ಫಾಟಕ, ಕೋಟುಮಚಗಿ

ಲವಂಗದ ಜನ್ಮಸ್ಥಾನವು ಮೊಲಕ್ಕಾ ನಡುಗಡ್ಡೆಯಿದೆ. ಪೋರ್ತುಗೀಜರು ಸಮುದ್ರ ಸಂಚಾರದ ಕಾರ್ಯವನ್ನು ಕೈಕೊಂಡ ಮೇಲೆ ಅವರಿಗೆ ಈ ನಡುಗಡ್ಡೆಯ ಪರಿಚಯವಾಗಿ, ಅದರ ಪ್ರಾಪ್ತಿಯಾಯಿತು. ಮುಂದೆ ೧೦೦ ವರ್ಷಗಳ ಮೇಲೆ ಡಚ್ಚ ಜನರು ಪೋರ್ತುಗೀಜರನ್ನು ಓಡಿಸಿ ಅವರ ವಶದಲ್ಲಿರುವ ಲವಂಗದ ಎಲ್ಲ ನಡುಗಡ್ಡೆಗಳನ್ನು ತೆಗೆದುಕೊಂಡರು. ಜಗತ್ತಿನಲ್ಲಿ ತನ್ನೊಡನೆ ಯಾರೂ ಸ್ಪರ್ಧೆ ಮಾಡಬಾರದೆಂದು ಡಚ್ಚರು ಲವಂಗದ ಎಲ್ಲ ಅರಣ್ಯಗಳನ್ನು ಸುಟ್ಟು, ಮೊಲಕ್ಕಾ ನಡುಗಡ್ಡೆಯಲ್ಲಿಯ ಅಂಬೋಇನಾ ಎಂಬ ಭಾಗವನ್ನಷ್ಟೇ ಲವಂಗದ ಬೆಳೆಗಾಗಿ ಕಾದಿಟ್ಟರು. ಅಲ್ಲಿಂದ ಲವಂಗದ ಬೀಜಗಳು ಕಳವಿನಿಂದ ತರಲ್ಪಟ್ಟು, ಸನ್ ೧೭೭೦ ರಲ್ಲಿ ಮಾರಿಶಸ ನಡುಗಡ್ಡೆಯೊಳಗೆ ಅವರ ಬೆಳೆಯು ಆರಂಭವಾಯಿತು. ಮಾರಿಶಸದಿಂದ ಲವಂಗದ ಬೀಜಗಳು ಮುಂದೆ ಝಾಂಜಿಬಾರಕ್ಕೆ ಬಂದವು.

ಸದ್ಯದಲ್ಲಿ ಮೊಲಕ್ಕಾ, ಸುಮಾತ್ರಾ, ಮಾದಾಗಾಸ್ಕರ, ವೆಸ್ಟಇಂಡೀಜ ಈ ನಡುಗಡ್ಡೆಗಳಲ್ಲಿ ಹೆಚ್ಚು ದಕ್ಷತೆಯಿಂದಲೂ, ಶಾಸ್ತ್ರೀಯ ಪದ್ಧತಿಯಿಂದಲೂ ಲವಂಗದ ಗಿಡಗಳು ಬೆಳೆಸಲ್ಪಡುತ್ತವೆ. ಆದರೆ ಈ ಎಲ್ಲ ನಡುಗಡ್ಡೆಗಳಲ್ಲಾಗುವ ಲವಂಗಗಳ ಮುಮ್ಮಡಿಯಷ್ಟು ಲವಂಗಗಳು ಝಾಂಜೀಬಾರ ಎಂಬ ಒಂದೇ

ನಡುಗಡ್ಡೆಯಲ್ಲಾಗುತ್ತವೆ. ಈ ನಡುಗಡ್ಡೆಯಲ್ಲಿ ತೀರ ದುರ್ಲಕ್ಷ್ಯದಿಂದ ಲವಂಗದ ಗಿಡಗಳು ಬೆಳೆಯಿಸಲ್ಪಡುತ್ತವೆ. ಆದರೂ ಸೃಷ್ಟಿಯ ಅನುಕೂಲತೆಯಿಂದಲೇ ಅಲ್ಲಿ ಹೆಚ್ಚಾಗಿ ಬೆಳೆಬರುತ್ತದೆ. ಝಾಂಜಿಬಾರ ಹಾಗು ಅದರ ಸಮೀಪದ ಸಣ್ಣ ನಡುಗಡ್ಡೆಗಳು ಇವುಗಳಲ್ಲಿ ಜಗತ್ತಿನಲ್ಲಿ ಹುಟ್ಟುವಳಿಯಾಗುವ ಲವಂಗಗಳ ಕ್ಕಿಇಲ್ಲವೆ ಕ್ಷಿ ದಷ್ಟು ಭಾಗವು ಉತ್ಪತ್ತಿಯಾಗುವದು. ಝಾಂಜೀಬಾರ ದ್ವೀಪವು ೫೦ ಮೈಲು ಉದ್ದ ೨೪ ಮೈಲು ಅಗಲವಿದೆ. ಪೆಂಬಾ ನಡುಗಡ್ಡೆಯು ಇದಕ್ಕಿಂತಲೂ ಸಣ್ಣದಿದೆ.

ಅರಬ ಜನರಲ್ಲಿ ಪರದೇಶದೊಳಗೆ ದೊರೆತ ಬೀಜಗಳನ್ನೆಲ್ಲ ಸಂಗ್ರಹಿಸಿ ಸ್ವದೇಶದಲ್ಲಿ ತರುವ ಪರಿಪಾಠವಿದೆ. ಕ್ರಿಸ್ತವರ್ಷ ೧೮೧೮ ರಲ್ಲಿ ಹರಾಮಲ್ಲಿ ಎಂಬ ಓರ್ವ ಅರಬನು ಝಾಂಜಿಬಾರದಲ್ಲಿ ಮೊಟ್ಟಮೊದಲು ಲವಂಗದ ಬೀಜವನ್ನು ತಂದನೆಂದು ಅಲ್ಲಿಯ ಜನರ ಹೇಳಿಕೆಯಿದೆ. ಮುಂದೆ ೧೦ ವರ್ಷಗಳ ನಂತರ ಸಯ್ಯದ ಸೇದನೆಂಬ ಅಲ್ಲಿಯ ಸುಲ್ತಾನನು ಲವಂಗದ ಮಹತ್ವವನ್ನು ಲಕ್ಷಕ್ಕೆ ತಂದು, ತನ್ನ ಪ್ರಜೆಗಳಿಗೆ ಆ ಗಿಡಗಳನ್ನು ಬೆಳೆಯಿಸುವ ಬಗ್ಗೆ ಆಜ್ಞೆಮಾಡಿದನು. ಆಗ ಆ ದೇಶದಲ್ಲಿ ಗುಲಾಮರಿಗೇನೂ ಕೊರತೆ ಇದ್ದಿಲ್ಲ. ಭೂಮಿಯೂ ಬೇಕಾದಷ್ಟಿತ್ತು. ಅದರಿಂದ ಅಲ್ಪಾವಧಿಯಲ್ಲಿಯೇ ಆ ನಾಡು ಲವಂಗದ ಗಿಡಗಳಿಂದ ತುಂಬಿಹೋಯಿತು.

ಲವಂಗದ ಗಿಡಗಳು ಬೆಳೆದು ದೊಡ್ಡವಾಗಲಿಕ್ಕೆ ೫ರಿಂದ ೬ ವರ್ಷಗಳ ಅವಧಿ ಬೇಕಾಗುತ್ತದೆ. ಆ ಗಿಡಗಳು ನೋಡಲಿಕ್ಕೆ ಸುಂದರವೂ, ಆಹ್ಲಾದಕರವೂ ಆಗಿರುತ್ತವೆ. ಅವನ್ನು ಸಮಾನ ಅಂತರದಿಂದ ಸಾಲುಸಾಲಾಗಿ ಹಚ್ಚುವ ಪದ್ಧತಿಯಿರುವದರಿಂದ ಅವುಗಳ ಗುಂಪು ನೋಟಕ್ಕೆ ಬಹು ಚಂದಕಾಣುವದು. ಲವಂಗದ ಗಿಡಗಳು ೪೦ ಫೂಟಗಿಂತಲೂ ಹೆಚ್ಚು ಎತ್ತರ ಬೆಳೆಯುತ್ತವೆ. ಇವುಗಳಿಗೆ ಎಲೆಗಳು ಹೆಚ್ಚಾಗಿದ್ದು, ಬೊಡ್ಡೆ ಟೊಂಗೆಗಳನ್ನು ಸಹ ಅವು ಪೂರ್ಣ ಮುಚ್ಚಿಬಿಡುವವು. ಈ ಗಿಡಗಳಿಗೆ ಮೊಗ್ಗೆ-ಪುಷ್ಪಗಳಾದವೆಂದರೆ ಅವು ಅತ್ಯಂತ ಶೋಭಾಯಮಾನವಾಗಿ ಕಾಣುವವು. ಇವುಗಳ ಎಲೆಗಳು ಕೆಂಪು, ನಸುಗೆಂಪು, ಗುಲಾಬಿ ಹಚ್ಚಗೆ ಹೀಗೆ ವಿಧವಿಧದ ಬಣ್ಣದವಿರುವ ಮೂಲಕ ಅವುಗಳಾದರೂ ಹೆಚ್ಚು ಆಕರ್ಷಕವಿರುವವು. ಪುಷ್ಪಗಳ ಬಣ್ಣವು ಹಸರು-ಹಳದಿಗಳ ಮಿಶ್ರಣದ್ದಿದ್ದು, ಅವರಲ್ಲಿ ಬಂಗಾರದ ಬಣ್ಣದ ಛಾಯೆಯಿರುತ್ತದೆ.

ಅವರಲ್ಲೆಲ್ಲ ಮುಸಲ್ಮಾನರೇ ಬಹು ಸಂಖ್ಯೆಯವರಾಗಿದ್ದು, ಅವರು ಸುನ್ನೀಪಂಥದವರಿರುವರು.

ಕಳೆದ ವರ್ಷದ ಭೂಕಂಪದಿಂದ ಕ್ವೇಟಾಪಟ್ಟಣವೂ, ಅದರ ಸಮೀಪದಲ್ಲಿರುವ ಬಲೂಚಿಸ್ತಾನದ ಕೆಲ ಭಾಗವೂ ಉಧ್ವಸ್ತವಾಗಿದ್ದು, ಅದರ ಪುನರ್ಘಟನೆಯ ಕಾರ್ಯವನ್ನು ಬ್ರಿಟಿಶ ಸರಕಾರದವರು ನಡೆಯಿಸಿರುವರು.

ಲವಂಗ

ಲೇಖಕ:— ಶ್ರೀ. ಎಲ್. ವ್ಹಿ. ಘಾಟಕ, ಕೋಟುಮಚಗಿ

ಲವಂಗದ ಜನ್ಮಸ್ಥಾನವು ಮೊಲಕ್ಕಾ ನಡುಗಡ್ಡೆಯಿದೆ. ಪೋರ್ತುಗೀಜರು ಸಮುದ್ರ ಸಂಚಾರದ ಕಾರ್ಯವನ್ನು ಕೈಕೊಂಡ ಮೇಲೆ ಅವರಿಗೆ ಈ ನಡುಗಡ್ಡೆಯ ಪರಿಚಯವಾಗಿ, ಅದರ ಪ್ರಾಪ್ತಿಯಾಯಿತು. ಮುಂದೆ ೧೦೦ ವರ್ಷಗಳ ಮೇಲೆ ಡಚ್ಚ ಜನರು ಪೋರ್ತುಗೀಜರನ್ನು ಓಡಿಸಿ ಅವರ ವಶದಲ್ಲಿರುವ ಲವಂಗದ ಎಲ್ಲ ನಡುಗಡ್ಡೆಗಳನ್ನು ತೆಗೆದುಕೊಂಡರು. ಜಗತ್ತಿನಲ್ಲಿ ತನ್ನೊಡನೆ ಯಾರೂ ಸ್ಪರ್ಧೆ ಮಾಡಬಾರದೆಂದು ಡಚ್ಚರು ಲವಂಗದ ಎಲ್ಲ ಅರಣ್ಯಗಳನ್ನು ಸುಟ್ಟು, ಮೊಲಕ್ಕಾ ನಡುಗಡ್ಡೆಯಲ್ಲಿಯ ಅಂಬೋಇನಾ ಎಂಬ ಭಾಗವನ್ನಷ್ಟೇ ಲವಂಗದ ಬೆಳೆಗಾಗಿ ಕಾದಿಟ್ಟರು. ಅಲ್ಲಿಂದ ಲವಂಗದ ಬೀಜಗಳು ಕಳವಿನಿಂದ ತರಲ್ಪಟ್ಟು, ಸನ್ ೧೭೭೦ ರಲ್ಲಿ ಮಾರಿಶಸ ನಡುಗಡ್ಡೆಯೊಳಗೆ ಅವರ ಬೆಳೆಯು ಆರಂಭವಾಯಿತು. ಮಾರಿಶಸದಿಂದ ಲವಂಗದ ಬೀಜಗಳು ಮುಂದೆ ಝಾಂಜಿಬಾರಕ್ಕೆ ಬಂದವು.

ಸದ್ಯದಲ್ಲಿ ಮೊಲಕ್ಕಾ, ಸುಮಾತ್ರಾ, ಮಾದಾಗಾಸ್ಕರ, ವೆಸ್ಟಇಂಡೀಜ ಈ ನಡುಗಡ್ಡೆಗಳಲ್ಲಿ ಹೆಚ್ಚು ದಕ್ಷತೆಯಿಂದಲೂ, ಶಾಸ್ತ್ರೀಯ ಪದ್ಧತಿಯಿಂದಲೂ ಲವಂಗದ ಗಿಡಗಳು ಬೆಳೆಸಲ್ಪಡುತ್ತವೆ. ಆದರೆ ಈ ಎಲ್ಲ ನಡುಗಡ್ಡೆಗಳಲ್ಲಾಗುವ ಲವಂಗಗಳ ಮುನ್ಮಡಿಯಷ್ಟು ಲವಂಗಗಳು ಝಾಂಜೀಬಾರ ಎಂಬ ಒಂದೇ

ನಡುಗಡ್ಡೆಯಲ್ಲಾಗುತ್ತವೆ. ಈ ನಡುಗಡ್ಡೆಯಲ್ಲಿ ತೀರ ದುರ್ಲಕ್ಷದಿಂದ ಲವಂಗದ ಗಿಡಗಳು ಬೆಳೆಯಿಸಲ್ಪಡುತ್ತವೆ. ಆದರೂ ಸೃಷ್ಟಿಯ ಅನುಕೂಲತೆಯಿಂದಲೇ ಅಲ್ಲಿ ಹೆಚ್ಚಾಗಿ ಬೆಳೆಬರುತ್ತದೆ. ಝಾಂಜಿಬಾರ ಹಾಗು ಅದರ ಸಮೀಪದ ಸಣ್ಣ ನಡುಗಡ್ಡೆಗಳು ಇವುಗಳಲ್ಲಿ ಜಗತ್ತಿನಲ್ಲಿ ಹುಟ್ಟುವಳಿಯಾಗುವ ಲವಂಗಗಳ ಕ್ಕಿ ಇಲ್ಲವೆ ಕ್ಷಿ ದಷ್ಟು ಭಾಗವು ಉತ್ಪತ್ತಿಯಾಗುವದು. ಝಾಂಜೀಬಾರ ದ್ವೀಪವು ೫೦ ಮೈಲು ಉದ್ದ ೨೪ ಮೈಲು ಅಗಲವಿದೆ. ಪೆಂಬಾ ನಡುಗಡ್ಡೆಯು ಇದಕ್ಕಿಂತಲೂ ಸಣ್ಣದಿದೆ.

ಅರಬ ಜನರಲ್ಲಿ ಪರದೇಶದೊಳಗೆ ದೊರಿತ ಬೀಜಗಳನ್ನೆಲ್ಲ ಸಂಗ್ರಹಿಸಿ ಸ್ವದೇಶದಲ್ಲಿ ತರುವ ಪರಿಪಾಠವಿದೆ. ಕ್ರಿಸ್ತವರ್ಷ ೧೮೭೮ ರಲ್ಲಿ ಹರಾಮುಲ್ಲಿ ಎಂಬ ಓರ್ವ ಅರಬನು ಝಾಂಜಿಬಾರದಲ್ಲಿ ಮೊಟ್ಟಮೊದಲು ಲವಂಗದ ಬೀಜವನ್ನು ತಂದ ನೆಂದು ಅಲ್ಲಿಯ ಜನರ ಹೇಳಿಕೆಯಿದೆ. ಮುಂದೆ ೧೦ ವರ್ಷಗಳ ನಂತರ ಸಯ್ಯದ ಸೇದನೆಂಬ ಅಲ್ಲಿಯ ಸುಲ್ತಾನನು ಲವಂಗದ ಮಹತ್ವವನ್ನು ಲಕ್ಷಕ್ಕೆ ತಂದು, ತನ್ನ ಪ್ರಜೆಗಳಿಗೆ ಆ ಗಿಡಗಳನ್ನು ಬೆಳೆಯಿಸುವ ಬಗ್ಗೆ ಆಜ್ಞೆಮಾಡಿದನು. ಆಗ ಆ ದೇಶದಲ್ಲಿ ಗುಲಾಮರಿಗೇನೂ ಕೊರತೆ ಇದ್ದಿಲ್ಲ. ಭೂಮಿಯೂ ಬೇಕಾದಷ್ಟಿತ್ತು. ಅದರಿಂದ ಅಲ್ಪಾವಧಿಯಲ್ಲಿಯೇ ಆ ನಾಡು ಲವಂಗದ ಗಿಡಗಳಿಂದ ತುಂಬಿಹೋಯಿತು.

ಲವಂಗದ ಗಿಡಗಳು ಬೆಳೆದು ದೊಡ್ಡವಾಗಲಿಕ್ಕೆ ೫ರಿಂದ ೭ ವರ್ಷಗಳ ಅವಧಿ ಬೇಕಾಗುತ್ತದೆ. ಆ ಗಿಡಗಳು ನೋಡಲಿಕ್ಕೆ ಸುಂದರವೂ, ಆಹ್ಲಾದಕರವೂ ಆಗಿ ರುತ್ತವೆ. ಅವನ್ನು ಸಮಾನ ಅಂತರದಿಂದ ಸಾಲುಸಾಲಾಗಿ ಹಚ್ಚುವ ಪದ್ಧತಿ ಯಿರುವದರಿಂದ ಅವುಗಳ ಗುಂಪು ನೋಟಕ್ಕೆ ಬಹು ಚಂದಕಾಣುವದು. ಲವಂಗದ ಗಿಡಗಳು ೪೦ ಫೂಟಗಿಂತಲೂ ಹೆಚ್ಚು ಎತ್ತರ ಬೆಳೆಯುತ್ತವೆ. ಇವುಗಳಿಗೆ ಎಲೆಗಳು ಹೆಚ್ಚಾಗಿದ್ದು, ಬೊಡ್ಡೆ ಟೊಂಗೆಗಳನ್ನು ಸಹ ಅವು ಪೂರ್ಣ ಮುಚ್ಚಿ ಬಿಡುವವು. ಈ ಗಿಡಗಳಿಗೆ ಮೊಗ್ಗೆ-ಪುಷ್ಪಗಳಾದವೆಂದರೆ ಅವು ಅತ್ಯಂತ ಶೋಭಾಯ ಮಾನವಾಗಿ ಕಾಣುವವು. ಇವುಗಳ ಎಲೆಗಳು ಕೆಂಪು, ನಸುಗೆಂಪು, ಗುಲಾಬಿ ಪಚ್ಚಗೆ ಹೀಗೆ ವಿಧವಿಧದ ಬಣ್ಣದವಿರುವ ಮೂಲಕ ಅವುಗಳಾವರೂ ಹೆಚ್ಚು ಆಕರ್ಷಕವಿರುವವು. ಪುಷ್ಪಗಳ ಬಣ್ಣವು ಹಸರು-ಹಳದಿಗಳ ಮಿಶ್ರಣದ್ದಿದ್ದು, ಅವರಲ್ಲಿ ಬಂಗಾರದ ಬಣ್ಣದ ಛಾಯೆಯಿರುತ್ತದೆ.

ಝಾಂಜೀಬಾರದಲ್ಲಿಯ ಭೂಮಿಯು ಲವಂಗದ ಗಿಡಗಳ ಬೆಳವಣಿಗೆಗೆ ಒಳ್ಳೇ ಅನುಕೂಲವಿದೆ. ಜಗತ್ತಿನಲ್ಲಿ ಮತ್ತೆಲ್ಲಿಯೂ ಇಲ್ಲಿಯಂಥ ಶ್ರೇಷ್ಠಪ್ರತಿಯ ಲವಂಗಗಳಾಗುವದಿಲ್ಲ. ಮೇಲ್ಭಾಗದಲ್ಲಿರುವ ಜಿಗುಟು ಮಣ್ಣು, ಕೆಳಭಾಗದಲ್ಲಿ ಬಹಳ ಆಳವಾಗಿರುವ ಉಸುಕಿನತರ ಇವುಗಳಿಂದ ಅಲ್ಲಿಯ ಭೂಮಿಯು ಲವಂಗದ ಬೆಳೆಗೆ ಒಳ್ಳೇ ಉಪಯುಕ್ತವಾಗಿದೆ. ಆದರೆ ಇಂಥ ಭೂಮಿಯಿದ್ದಲ್ಲೆಲ್ಲ ಉತ್ತಮವಾದ ಲವಂಗಗಳಾಗುತ್ತವೆಂಬ ನಿಯಮ ಮಾತ್ರ ಇಲ್ಲ. ಝಾಂಜೀಬಾರದಿಂದ ೧೫೦ ಮೈಲಿನ ಮೇಲಿರುವ ಮಾಫಿಕಾ ನಡುಗಡ್ಡೆಯಲ್ಲಿ ಸಕಲ ಶಾಸ್ತ್ರೀಯ ಸಾಧನಗಳಿಂದ ಲವಂಗದ ಗಿಡಗಳನ್ನು ಬೆಳೆಯಿಸಲು ಜರ್ಮನ್ ಜನರು ಮಾಡಿದ ಪ್ರಯತ್ನವು ಸಂಪೂರ್ಣ ನಿಷ್ಫಲವಾಗಿ ಹೋಯಿತು !

ಝಾಂಜೀಬಾರ ದ್ವೀಪದಲ್ಲಿ ಕಾಲಿಟ್ಟೊಡನೆಯೇ ಅಲ್ಲಿ ಲವಂಗದ ಸುಗಂಧದಿಂದ ಯುಕ್ತವಾದ ವಾಯುಲಹರಿಯು ಮನಸ್ಸಿಗೆ ಆಹ್ಲಾದಕರವಾಗುವಂತೆ ಬೀಸಹತ್ತುವದು. ಈ ನಡುಗಡ್ಡೆಯಲ್ಲಿ ಮೊದಲು ಗುಲಾಮರ ಹಾಗು ಹಸ್ತಿದಂತದ ವ್ಯಾಪಾರವು ನಡೆಯುತ್ತಿತ್ತು. ಆದರೆ ಈಗ ಅವರ ಸ್ಥಳವನ್ನೆಲ್ಲ ಹೆಚ್ಚಾಗಿ ಲವಂಗದ ವ್ಯಾಪಾರವೇ ವ್ಯಾಪಿಸಿದೆ. ಝಾಂಜೀಬಾರದ ದಂಡೆಯ ಸಮುದ್ರದಲ್ಲಿ ಸಹ ಕೆಲ ಅಂತರದ ವರೆಗೆ ಲವಂಗದ ಸುಗಂಧವು ಪಸರಿಸಿರುತ್ತದೆ. ಅದರಿಂದ ಝಾಂಜೀಬಾರವು ಲವಂಗದ ನಡುಗಡ್ಡೆಯೆಂದೂ, ಲವಂಗವು ಝಾಂಜೀಬಾರದ ಅತ್ತರವೆಂದೂ ಒಳ್ಳೇ ವಿಖ್ಯಾತವಾಗಿದೆ!

ಪೇಟೆಯಲ್ಲಿ ಮಾರಲಿಕ್ಕೆ ದೊರೆಯುವ ಲವಂಗಗಳೆಲ್ಲ ಅವುಗಳ ಪುಷ್ಪಗಳ ಬೆಳವಣಿಗೆಯು ಪೂರ್ಣವಾಗುವ ಪೂರ್ವದಲ್ಲಿಯೇ ಹರಿದವುಗಳಾಗಿರುತ್ತವೆ. ಲವಂಗಗಳೆಂದರೆ ಲವಂಗದ ಗಿಡಗಳ ಮುಗ್ಧ ಕಲಿಕೆಗಳೇ ಆಗಿವೆ ! ಆಫ್ರಿಕೆಯಲ್ಲಿಯ ತಾಪಕರವಾದ ಸೂರ್ಯಕಿರಣಗಳು ಗಿಡಗಳ ಮೇಲೆ ಬೀಳುವ ಪೂರ್ವದಲ್ಲಿಯೇ ಹಾಗು ಅವುಗಳ ಪುಷ್ಪಗಳು ವಿಕಸನಹೊಂದುವ ಮೊದಲೇ ಲವಂಗಗಳು ಹರಿಯಲ್ಪಡುವವು. ಅಕ್ಟೋಬರ ತಿಂಗಳಿನಲ್ಲಿ ಮಳೆಗಾಲ ಮುಗಿದಮೇಲೆ ಲವಂಗದ ಮೊಗ್ಗೆಗಳ ಮೊದಲಿನ ಹಸರು ಬಣ್ಣವು ಹೋಗಿ, ಅವುಗಳಿಗೆ ಮುಂದೆ ಗುಲಾಬೀ ಬಣ್ಣವೂ, ಆನಂತರ ಕೆಂಪು ಬಣ್ಣವೂ ಪ್ರಾಪ್ತವಾಗುವದು. ಒಡನೆಯೇ ಅರಬ ಜನರು ಮಂಗಗಳಂತೆ ಲವಂಗದ ಗಿಡಗಳನ್ನು ಅಡರುವರು, ಆಗ ಅವರ ಕೊರ

ಟ್ಲಿ ಚೀಲಗಳಿದ್ದು, ಅವುಗಳಲ್ಲಿ ಕೈಗೆ ಸಿಕ್ಕ ಲವಂಗಗಳನ್ನು ಹರಿದು ಸಂಗ್ರಹಿಸುವರು. ಕೈಗೆ ಬಾರದವುಗಳನ್ನು ದೋಟಿಯಿಂದ ಜಗ್ಗಿ, ಹರಿದುಕೊಳ್ಳುವರು. ದೋಟಿಯಿಂದಲೂ ಸುಲಭವಾಗಿ ಬಾರದವುಗಳ ಟೊಂಗೆಗಳನ್ನೇ ಮುರಿದು ಚಲ್ಲಿ, ಅವುಗಳಲ್ಲಿರುವ ಲವಂಗಗಳನ್ನು ಹಿಂದುಗಡೆ ಸಾವಕಾಶವಾಗಿ ಹರಿದುಕೊಳ್ಳುವರು. ಅರಬ ಸ್ತ್ರೀಯರು ಈ ಕೆಲಸವನ್ನು ಒಳ್ಳೇ ಚಪಲತನದಿಂದ ಮಾಡುವರು.

ಲವಂಗದ ಗಿಡಗಳ ಬೀಜಗಳು ಬಿದ್ದು, ಅವುಗಳ ಸಮೀಪದಲ್ಲಿ ಅನೇಕ ಸಸಿಗಳುದ್ಭವಿಸುವವು. ಆದರೆ ಝಾಂಜೀಬಾರದ ಅರಬರಿಗೆ ಲವಂಗವನ್ನು ಬೆಳೆಯಿಸುವ ಶಾಸ್ತ್ರೀಯ ಕಲೆಯು ಅವಗತವಿಲ್ಲದ್ದರಿಂದ ಅವರು ಆ ಅಗಿಗಳನ್ನುಕೀಳುವದಿಲ್ಲ, ಗಿಡಗಳ ಸುತ್ತುಮುತ್ತು ಹುಲ್ಲು-ಅಡವಿಯ ಕಸ ಬೆಳೆದರೂ ಸಹ ಅವರು ಅದರ ಕಡೆಗೆ ಲಕ್ಷ ಕೊಡುವದಿಲ್ಲ. ತೀರ ಹೆಚ್ಚಾದರೆ ಮಾತ್ರ ಅದಕ್ಕೆ ಬೆಂಕಿಹಚ್ಚಿಬಿಡುವರು. ಆಗ ಅದರ ಜ್ವಾಲೆಗಳು ಲವಂಗದ ಗಿಡಗಳ ಬೊಡ್ಡೆ-ಟೊಂಗೆಗಳಿಗೆ ಸಹ ಹತ್ತುವವು. ಉರಿಯ ಝಳದಿಂದಲೂ, ಗೆದ್ದಲಿ ಹತ್ತುವದರಿಂದಲೂ ಆ ಗಿಡಗಳು ಸಾಯದೆ ಹಾಗೆಯೇ ಬೆಳೆಯುತ್ತಹೋಗುವವು. ಭೂಮಿಯ ಗುಣದಿಂದಲೂ, ಅವುಗಳ ಜಾತಿಯೇ ಹೆಚ್ಚು ಗಟ್ಟಿತನದ್ದಿರುವದರಿಂದಲೂ ಆ ಗಿಡಗಳು ಬೇಗ ನಾಶವಾಗುವದಿಲ್ಲ.

ಲವಂಗಗಳನ್ನು ಹರಿಯುವ ಕೆಲಸವನ್ನು ಮುಂಜಾವಿನಲ್ಲಿಯೇ ಮುಗಿಸಿ, ಆ ಮೇಲೆ ಅವುಗಳನ್ನು ಒಂದು ಮಧ್ಯವರ್ತಿಯಾದ ಸ್ಥಳದಲ್ಲಿ ಮಾವಿನ ಮರದ ಕೆಳಗೆ ಇಲ್ಲವೆ ಚಪ್ಪರದಲ್ಲಿ ಸುರುವಿ, ಅವುಗಳ ಸುತ್ತುಮುತ್ತಲಿನ ಆವರಣವನ್ನು ಹರಿದು ಚಲ್ಲಿ ಸ್ವಚ್ಛಮಾಡುವರು. ಅನಂತರ ಆ ಲವಂಗಗಳನ್ನು ೫-೬ ದಿವಸಗಳವರೆಗೆ ಬಿಸಿಲಲ್ಲಿ ಚಾಪೆಯ ಮೇಲೆ ಹರವುವರು. ಅದರಿಂದ ಮುಂದೆ ಅವುಗಳಿಗೆ ಕೃಷ್ಣವರ್ಣಬರುವದು. ಇವೇ ನಾವು ಇಲ್ಲಿ ತಿನ್ನತಕ್ಕ ಲವಂಗಗಳು. ಹೀಗೆ ಅವರು ಬಿಸಿಲಲ್ಲಿ ಹರವಿದ ಸಮಯದಲ್ಲಿ ಒಮ್ಮೊಮ್ಮೆ ಮಳೆ ಬೀಳಹತ್ತಿದರೆ ಇಲ್ಲವೆ ಆಗುವ ಚಿಹ್ನ ತಲೆದೋರಿದರೆ ಅರಬರು ಆಗ ಗಾಬರಿಯಾಗಿ ಚೀರುತ್ತ, ಆ ಲವಂಗಗಳನ್ನೆಲ್ಲ ತಮ್ಮ ಮನೆಯಲ್ಲಿ ಒಯ್ದು ಸುರುವುವರು. ಮುಂದೆ ಬಿಸಿಲು ಬಿದ್ದಾಗ ಅವನ್ನು ಚೆನ್ನಾಗಿ ಒಣಗಿಸುವರು. ಈ ಪ್ರಕಾರ ಒಣಗಿದ ಲವಂಗಗಳನ್ನೆಲ್ಲ ಅರಬ ಸ್ತ್ರೀಯರು ತಮ್ಮ ತಲೆಯ ಮೇಲೆ ಹೊತ್ತುಕೊಂಡು, ಪದಗಳನ್ನು ಹಾಡುತ್ತ

ಝಾಂಜಿಬಾರ ಪಟ್ಟಣಕ್ಕೆ ತರುವರು. ಲವಂಗದ ಒಜ್ಜೆ ಹೊರಲಿಕ್ಕೆ ಅಲ್ಲಿ ಕತ್ತೆ, ಮೋಟಾರ, ರೈಲು ಇವುಗಳ ಉಪಯೋಗವೂ ಆಗುವದು.

ಝಾಂಜಿಬಾರದಲ್ಲಿ ಲವಂಗಗಳಿಲ್ಲ ಬಂದಮೇಲೆ ಅಲ್ಲಿಯು ಕಸ್ಟಮಹೌಸದಲ್ಲಿ ಅವುಗಳ ಪ್ರಚಂಡವಾದ ಗುಂಪುಗಳನ್ನು ಮಾಡುವರು. ಅಲ್ಲಿಯೇ ಅವುಗಳ ವ್ಯಾಪಾರವಾಗುವದು. ಆ ವ್ಯಾಪಾರದ ಭಾಷೆಯು ಹೊರಗಿನ ಮನುಷ್ಯನಿಗೆ ತಿಳಿಯುವದು ಅಶಕ್ಯವಿದೆ. ಅಲ್ಲಿ ಮಾಲಕರು ಮನಬಂದಂತೆ ತಮ್ಮ ಮಾಲಿನ ಸ್ತುತಿ ಮಾಡುವರು. ಕೊಳ್ಳುವವರು ಒಂದು ಸೆರೆಲವಂಗಗಳನ್ನು ತೆಗೆದುಕೊಂಡು, ಅವನ್ನು ತಿಕ್ಕಿ, ಅವುಗಳಲ್ಲಿರುವ ಎಣ್ಣೆಯ ಪ್ರಮಾಣವನ್ನು ನೋಡಿಕೊಳ್ಳುವರು. ಹಸಿ ಇರುವ ಲವಂಗಗಳು ತೂಕದಲ್ಲಿ ಜಡವಿರುವ ಮೂಲಕ ಅವುಗಳ ವ್ಯಾಪಾರವು ಬಹಳ ಜೇಗ ಮುಗಿಯುವದು. ಆದರೆ ಒಣಗಿದ ಲವಂಗಗಳನ್ನು ಮಾತ್ರ ಮಾರುವವರು ಹಾಗೆ ಬೇಗನೆ ಸರಿದು ಕೊಡುವದಿಲ್ಲ. ತೂಕವು ಹೆಚ್ಚಾಗಲೆಂದು ಮಾರುವವರು ಬೇಕಾಗಿಯೇ ಆ ಲವಂಗಗಳಿಗೆ ನೀರು ಹೊಡೆಯುವರು. ಅಲ್ಲಿ ಈ ಲವಂಗಗಳನ್ನು ಖರೀದಿಮಾಡುವದಕ್ಕಾಗಿ ಹಿಂದೀ ವರ್ತಕರೂ ಬರುವರು. ಕೈಯನ್ನು ಮುಚ್ಚಿಕೊಂಡು, ಇಲ್ಲವೆ ಅಂಗೈಮೇಲೆ ಬೊಟ್ಟಿನಿಂದ ಗುರುತುಮಾಡಿ, ದಲಾಲರ ವಿದ್ಯಮಾನ ಅಲ್ಲಿ ವ್ಯಾಪಾರ ಮುಗಿಯುವದು. ಆದರೆ ಈ ಕೆಲಸಕ್ಕೆ ಮಾತ್ರ ಬಹಳ ವೇಳೆ ಬೇಕಾಗುವದು.

ಲವಂಗಗಳನ್ನು ಚೀಲದಲ್ಲಿ ಇಲ್ಲವೆ ಹುಲ್ಲಿನ ಚಾಪೆಯಲ್ಲಿ ಹಾಕಿ, ಆಮೇಲೆ ಅವನ್ನು ಹಡಗದಲ್ಲಿ ಹೇರುವರು. ಪ್ರತಿಯೊಂದು ಚೀಲದಲ್ಲಿ ೧೪೦ ಪೌಂಡು ಲವಂಗಗಳಿರುವವು. ಕ್ರಿಸ್ತವರ್ಷ ೧೯೨೧ರ ಪೂರ್ವದಲ್ಲಿ ಇಂಗ್ಲಂಡದ ಜನರು ಮುಖದಿಂದ ಹೊರಡುವ ಮದ್ಯದ ದುರ್ಗಂಧವನ್ನು ಮುಚ್ಚುವದಕ್ಕಾಗಿ ಲವಂಗಗಳನ್ನು ಹೆಚ್ಚಾಗಿ ತಿನ್ನುತ್ತಿದ್ದರು. ಆದರೆ ಈಗ ಮದ್ಯದ ವ್ಯೆಸನವೇ ಹೊರಟು ಹೋಗಿರುವ ಮೂಲಕ ಅವರಲ್ಲಿ ಈಗ ಲವಂಗದ ಉಪಯೋಗವು ಹೆಚ್ಚಾಗಿ ಆಗುವದಿಲ್ಲ. ಇದರಂತೆಯೇ ಮೊದಲು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಲವಂಗದ ಎಣ್ಣೆಯಿಂದ ಸ್ವಾದಯುಕ್ತವಾದ "ವ್ಹನಲೀನ" ಎಂಬ ಪದಾರ್ಥವನ್ನು ಸಿದ್ಧಗೊಳಿಸುತ್ತಿದ್ದರು ಆದರೆ ಈಗ ಆ ದ್ರವ್ಯವು ಡಾಂಬರದಿಂದ ಹೊರಡಹತ್ತಿರುವ ಮೂಲಕ ಲವಂಗದ ಮಹತ್ವವು ಬಹಳೇ ಕಡಿಮೆಯಾಗಿದೆ. ಲವಂಗದಿಂದ ಮತ್ತೆ ಯಾವ ಪದಾರ್ಥ

ಗಳನ್ನು ಸಿದ್ಧಗೊಳಿಸಬಹುದೆಂಬ ವಿಚಾರದಲ್ಲಿ ಸದ್ಯಕ್ಕೆ ಪಾಶ್ಚಾತ್ಯ ಶಾಸ್ತ್ರಜ್ಞರು ತೊಡಗಿರುವರು.

ಝಾಂಜೀಬಾರ ಹಾಗು ಪಾಂಬಾ ಈ ಎರಡೂ ನಡುಗಡ್ಡೆಗಳಲ್ಲಿಯ ಎಲ್ಲ ಭೂಮಿಯು ಸದ್ಯಕ್ಕೆ ಲವಂಗದ ಗಿಡಗಳಿಂದಲೇ ವ್ಯಾಪಿಸಿ ಹೋಗಿದೆ. ಅಲ್ಲಿಯ ಅರಬ ಜಮೀನದಾರರು ಒಂದು ಕಾಲದಲ್ಲಿ ಒಳ್ಳೇ ಶ್ರೀಮಂತರೂ ಸಮರ್ಥರೂ ಆಗಿದ್ದರು. ಆದರೆ ಈಗ ಮಾತ್ರ ಅವರು ಹಿಂದೀ ಸಾವುಕಾರರಲ್ಲಿ ಸಾಲಗಾರರಾಗಿ ತೀರ ನಿಕೃಷ್ಟ ಸ್ಥಿತಿಯಲ್ಲಿರುವರು. ಅದರಿಂದ ಲವಂಗದ ವ್ಯವಸಾಯವು ಅವರಿಂದ ನೀಗದಂತಾಗಿದೆ. ಇತ್ತೀತ್ತಲಾಗಿ ಝಾಂಜೀಬಾರದಲ್ಲಿಯ ಹಿಂದೀ ಜನರ ಮೇಲೆ ಅಲ್ಲಿಯ ಸರಕಾರದಿಂದ ಅನೇಕ ನಿಮಂತ್ರಣಗಳು ಹಾಕಲ್ಪಟ್ಟಿರುವ ಮೂಲಕ ಲವಂಗದ ವ್ಯಾಪಾರವು ಮೊದಲಿನಂತೆ ಭರದಿಂದ ಸಾಗದಂತಾಗಿದೆ.

[ಒಂದು ಮರಾಠೀ ಲೇಖದ ಆಧಾರದಿಂದ]

ಗ್ರಾಮಸುಧಾರಣೆಗಾಗಿ ತೆರೆದ ಟ್ರೇನಿಂಗಕ್ಲಾಸು

———(೦)———

ಲೇಖಕ— ರಾಘವೇಂದ್ರ ದೇವರಾವ ಕುಲಕರ್ಣಿ ಹೆ. ಮಾಸ್ತರ ಅಗಡಿ ಕ. ಶಾಳಾ

ಹಿಂದುಸ್ಥಾನದ ಸರಕಾರದವರು, ಗ್ರಾಮಸುಧಾರಣೆ ಮಾಡಬೇಕೆಂದು ಈಮೊದಲು ಗೊತ್ತುಮಾಡಿದ ಮೇರೆಗೆ ಮೆ॥ ಕಲೇಕ್ಟರ ಸಾಹೇಬ ಧಾರವಾಡ ರವರು ರಾ. ಬ. ಬಿ. ಎಲ್. ಪಾಟೀಲ, ಡಿ. ಎಲ್. ಬಿ. ಪ್ರಸಿಡೆಂಟ ಧಾರವಾಡ ಇವರ ಸೂಚನೆಯ ಮೇರೆಗೆ ಈವರ್ಗವನ್ನು ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ತಾ॥ ೧೫-೫-೧೯೩೬ ರಿಂದ ೨೫-೫-೩೬ ರ ವರೆಗೆ ತೆಗೆದಿರುವರು. ಈ ಕ್ಲಾಸಿನಲ್ಲಿ ಶಿಕ್ಷಕರು ೨೮ ಜನರು; ಗ್ರಾಮಸ್ಥರು ಹಾಗೂ ರೈತರು ಕೂಡಿ ೩೭ ಜನರು; ಈ ಪ್ರಕಾರ ೬೫ ಜನರು ಶಿಕ್ಷಣ ಪಡೆದರು. ಈ ಶಿಕ್ಷಣವು ಬಹಳೇ ಯಶಸ್ವಿಯಾಗಿ ಸಾಗಿತು. ಗ್ರಾಮಸುಧಾರಣೆಗೆ ಅವಶ್ಯವಾದ ವಿಷಯಗಳನ್ನು ಆರಿಸಿ, ಆಯಾ ವಿಷಯಗಳಲ್ಲಿ ತಜ್ಞರಾದ ಸದ್ಗೃಹಸ್ಥರಿಂದ ವ್ಯಾಖ್ಯಾನಗಳನ್ನು ಕೊಡಿಸುವ ವ್ಯವಸ್ಥೆ

ಯಾಗಿತ್ತು. ಶ್ರೀಯುತ ಮಧ್ವರಾವ ಕಮಲಾಪೂರ ಬಿ. ಎ., ಎಲ್‌ಎಲ್. ಬಿ ಧಾರವಾಡ ಎಂಬ ಅನುಭವಿಕರೂ ಕರ್ತತವ್ಯದಕ್ಷರೂ ಗ್ರಾಮಸುಧಾರಣೆಯ ಹಿತಚಿಂತಕರೂ ಈವರ್ಗದ ಸೆಕ್ರೆಟರಿಗಳಾಗಿದ್ದರು. ಇವರಿಗೆ ಶ್ರೀಯುತ ಗೋವಿಂದ ಗೌಡರು ಹುಲಕೋಟಿ ಎಂಬವರು ಸಹಾಯಕರಾಗಿದ್ದರು. ವರ್ಗದ ಉದ್ಘಾಟನ ಸಮಾರಂಭವು, ಮೆ॥ ಕಲೇಕ್ಟರ ಸಾ॥ ರವರ ಅಪ್ಪಣೆ ಮೇರೆಗೆ ಮೆ॥ ಬೈತಮಂಗಳ ಸಾ॥ ಪರ್ಸನಲ್ ಅ. ಕಲೇಕ್ಟರ ಸಾ॥ ಧಾರವಾಡರವರಿಂದ ಜರಗಿತು.

ವರ್ಗದಲ್ಲಿ ನಡೆದ ವಿಷಯುಗಳ ವಿವರವು

ಅ. ನಂ.	ವಿಷಯ	ವ್ಯಾಖ್ಯಾತರು
೧	ಹಳ್ಳಿಗಳ ಮುಖ್ಯ ಉಪಯೋಗವಾದ ಒಕ್ಕಲತನದ ವಿಷಯವಾಗಿ	ರಾ॥ ಬ॥ ಸಾಲೀಮಠ ಸಾ॥ ಡೆ. ಡಾ. ಅಗ್ರಿಕಲ್ಚರಲ್ ಧಾರವಾಡ
೨	ಒಕ್ಕಲತನದಲ್ಲಿ ಉಪಯೋಗಿಸುವ ಕಬ್ಬಿಣರೆಂಟೆ, ಗೊಬ್ಬರಗಳ ವಿಷಯವಾಗಿ	ಮೆ॥ ವ್ಹಿ. ಎಸ್. ಕುಲಕರ್ಣಿ ಬಿ. ಎ. ಜಿ. ಶೇತಕಿ ಫಾರ್ಮ ಧಾರವಾಡ
೩	ನಮ್ಮಲ್ಲಿಯ ಮುಖ್ಯ ಪೈರುಗಳಾದ ಜೋಳ, ಹತ್ತಿ, ಗೋದಿ, ಶೇಂಗಾ, ತಂಬಾಕ, ಕಡ್ಲಿ, ಇತ್ಯಾದಿ ಬೆಳೆಗಳ ವಿಷಯವಾಗಿ	ಶ್ರೀ ಕಡಕೋಳ ಶೇತಕಿ ಫಾರ್ಮ ಸುಪರಿಂಟೆಂಡೆಂಟ ಧಾರವಾಡ
೪	ಹಳ್ಳಿಯ ಶಿಕ್ಷಣ	ಮೆ॥ ವ್ಹಿ. ಎನ್. ಮುಗಡಾಳ ಸಾ॥ ಪ್ರಿನ್ಸಿಪಾಲ ಟ್ರೇ. ಕಾ. ಧಾರವಾಡ
೫	ಹಳ್ಳಿಗಳ ಆರ್ಥಿಕ ಸುಧಾರಣೆ	ಶ್ರೀಯುತ ಗುಂಜಿಕರ ಬಿ. ಕಾಮ್. ಮ್ಯಾನೇಜರ ಸದರ್ನ ಮರಾಠಾ ಬ್ಯಾಂಕ, ಧಾರವಾಡ
೬	ಭಾರತೀಯರ ಸಂಸ್ಕೃತಿ	ಶ್ರೀಯುತ ಮಳೀಮಠ ವಕೀಲ ಬಿ. ಎ. ಎಲ್‌ಎಲ್. ಬಿ. ಧಾರವಾಡ
೭	ಹತ್ತಿಯ ಬೆಳೆ	ರಾ. ಸಾ. ಜಿ. ಎಲ್. ಕೊಟ್ಟೂರ ಕಾಟನ್ ಬ್ರೀಡರ ಧಾರವಾಡ

೮	ಹತ್ತಿಯ ಬೀಜ	ಶ್ರೀ. ವ್ಹಿ. ಸಿ. ಪಾವಟೆ, ಶೇತಕಿ ಫಾರ್ಮ ಧಾರವಾಡ
೯	ಸಹಕಾರ ತತ್ವ	ಶ್ರೀ. ಬಸರೂರ
೧೦	ಮಾವಿನ ಗಿಡದ ಸಾಗುವಳಿ	ಶ್ರೀ. ಕುಲಕರ್ಣಿ, ಬಿ. ಎ. ಜಿ. ಶೇತಕಿ ಫಾರ್ಮ ಧಾರವಾಡ.
೧೧	ಗನ್ನ ಕ್ಲಬ್ಬ	ಶ್ರೀಯುತ ಭಟ್ಟ ಅಗ್ರಿ. ಓಹ್ವರ್ಸಿಯರ ಧಾರವಾಡ
೧೨	ಸಹಕಾರದ ಕಾಯಿದೆ ಹಾಗೂ ನೈತಿಕ ಸುಧಾರಣೆ	ಶ್ರೀ. ಬಸರೂರ ಎಮ್. ಎಮ್.
೧೩	ಹೊಲದ ಒಡ್ಡು	ಶ್ರೀ. ಮುತಾಲಿಕ ದೇಸಾಯಿ ಶೇತಕಿಖಾತೆ ಧಾರವಾಡ
೧೪	ಹಳ್ಳಿಗಳ ಆರೋಗ್ಯ	ಡಾ. ಕಾಂತರಾವ ಕಮಲಾಪೂರ ಎಮ್. ಬಿ. ಬಿ. ಎಸ್. ಧಾರವಾಡ
೧೫	ಹಿಂದುಸ್ಥಾನದ ಸಹಕಾರಿ ಸಂಘಗಳು	ಶ್ರೀ. ಗಾವಕಾರ ಸೀನಿಯರ ಸುಪರವಾಯ್ಜರ ಧಾರವಾಡ
೧೬	ಹಳ್ಳಿಯ ಶಿಕ್ಷಣ	ಮೆ|| ಆರ್. ಕೆ. ನಾಯಕ ಆಡ್ಮಿನಿಸ್ಟ್ರೇಟಿವ್ಹ ಆಫೀಸರ ಡಿ. ಎಸ್ ಬಿ. ಧಾರವಾಡ.
೧೭	ಶಾರೀರ ಶಾಸ್ತ್ರ	ಡಾಕ್ಟರ ಕುಲಕರ್ಣಿ ಧಾರವಾಡ
೧೮	ಕರ್ನಾಟಕ ಸಹಕಾರಿ ಸಂಘಗಳು	ಶ್ರೀ. ಬಸರೂರಕರ
೧೯	ಕೋಳಿಗಳನ್ನು ಸಾಕುವ ಸಂಘ	ಶ್ರೀ. ಪಿ. ಎಸ್. ಇನಾಮದಾರ ಶೇತಕಿಖಾತೆ ಸಬ್‌ಓವ್ಹರ್ಸಿಯರ ಧಾರವಾಡ
೨೦	ಕೆರೆಕಾಲುವೆಗಳು ಹಾಗು ಲೈನರಸ್ತೆಗಳು	ಮೆ|| ರಾಮಸ್ವಾಮಿ ಇಂಜನೀಯರ ಡಿ. ಎಲ್. ಬಿ. ಧಾರವಾಡ

೨೧	ಹಳ್ಳಿಗಳ ಸುಧಾರಣೆ	ಶ್ರೀಯುತ ಎಮ್. ಎಸ್. ಕುಲಕರ್ಣಿ, ಗದಗಬೆಟಗೇರಿ
೨೨	ಸ್ಕೌಟ ಶಿಕ್ಷಣ	ಶ್ರೀ. ಹಲಸಿಗಿ ಬಿ. ಎ. ಆರ್ಗ-ನಾಯ್ಝರ ಸ್ಕೌಟಖಾತೆ
೨೩	ಬಿನ್‌ಪತ್ತಿನ ಸಂಘಗಳು	ಶ್ರೀ. ತಿವಾರಿ ಶೇತಕಿಖಾತೆ, ಆರ್ಗನಾಯ್ಝರ ಧಾರವಾಡ
೨೪	ದನಗಳ ಸಂಗೋಪನ	ಶ್ರೀ. ಬಸರೂರ ಎಮ್. ಎಸ್.
೨೫	ರಿಫಾರ್ಮ ಆ್ಯಕ್ಟ	ಶ್ರೀಯುತ ವಿಶ್ವನಾಥರಾವ ಜೋಗ ಬಿ.ಎ., ಎಲ್‌ಎಲ್. ಬಿ, ವಕೀಲ ಎಮ್.ಎಲ್.ಸಿ., ಧಾರವಾಡ
೨೬	ಗ್ರಾಮಪಂಚಾಯತಿ	ಶ್ರೀ ಪಾಡಗಾಂವಕರ ಚೀಫ ಆಫೀಸರ ಡಿ. ಎಲ್. ಬಿ. ಧಾರವಾಡ
೨೭	ಹಳ್ಳಿಯ ಶಿಕ್ಷಣ	ಶ್ರೀ ಎಸ್. ಎಫ್. ಮುರಡೂರ ಸು॥ ಡಿ. ಎಸ್. ಬಿ. ಧಾರವಾಡ
೨೮	ಸ್ತ್ರೀಶಿಕ್ಷಣ	ಮಿಸ್. ಯಲಾಯಿರ್ಝಾ ಲೇಡಿ ಟ್ರೇ. ಕಾ. ವಿಮೆನ್ ಧಾರವಾಡ

ಈಪ್ರಕಾರ ವಿಷಯಗಳು ಸಮಂಜಸವಾಗಿಯೂ, ಹಳ್ಳಿಯಜನರಿಗೆ ಮನವರಿಕೆಯಾಗುವಂತೆ ತಿಳಿಸಲು ಬರುವಂತೆಯೂ ಸಾಗಿದವು. ಇವಲ್ಲದೆ ಸರಕಾರಿ ಶೇತಕಿ ಫಾರ್ಮಿಗೆ ನಮ್ಮನ್ನು ಕರಕೊಂಡು ಹೋಗಿ, ಮಾವಿನಗಿಡಗಳ ಕಲಂ ಕಟ್ಟುವದು. ಕಬ್ಬಿಣರಂಟೆ ಹೊಂದಿಸುವದು, ಶುದ್ಧವಾದ ಜಯವಂತಿ ಹತ್ತಿಯ ಬೀಜಗಳನ್ನು ಆರಿಸುವದು ಇತ್ಯಾದಿ ವಿಷಯಗಳನ್ನು ಪ್ರತ್ಯಕ್ಷವಾಗಿ ತೋರಿಸಿದರು.

ಧಾರವಾಡ ರೇಲ್ವೇ ಸ್ಟೇಶನ್ನದ ಹತ್ತರ ಮಿ॥ ಗದಗಕರ ಇವರು ತಮ್ಮ ಔದ್ಯೋಗಿಕ ಕಾರಖಾನೆಯಲ್ಲಿ ಎಲುವಿನ ಗೊಬ್ಬರ ತಯಾರಿಸುವದನ್ನು ನಮ್ಮಕ್ಷಮ ತೋರಿಸಿದರು ಮತ್ತು ಅದರ ಉಪಯೋಗವನ್ನು ತಿಳಿಸಿಕೊಟ್ಟರು. ಕುಸಿಬಿಯಿಂದ ಎಣ್ಣೆ ತೆಗೆಯುವ ಯಂತ್ರವನ್ನು ತೋರಿಸಿದರು. ಶೀಗೀಕಾಯಿ ಪುಡಿಯನ್ನು ಸಹ ಯಂತ್ರದಿಂದಲೇ ಮಾಡುವದನ್ನು ತೋರಿಸಿದರು.

ಒಟ್ಟಿನ ಮೇಲೆ ಗ್ರಾಮಸುಧಾರಣೆಗೆ ಬೇಕಾಗುವ ಎಲ್ಲ ವಿಷಯಗಳನ್ನು ಏಕೀಕರಿಸಿ, ಹತ್ತು ದಿವಸಗಳಲ್ಲಿಯೇ ಸಾದ್ಯಂತವಾಗಿ ಮುಗಿಸಿದ್ದನ್ನು ಲಕ್ಷಕ್ಕೆ ತಂದರೆ, ವಿಷಯ ನಿಯೋಜಕರ ಕೌಶಲ್ಯವೂ ಅನುಭವವೂ ವ್ಯಕ್ತವಾಗುವಂತೆ ಅವೆ.

ಈ ವರ್ಗದಲ್ಲಿ ಕಲಿತುಹೋದ ಶಿಕ್ಷಕರೂ, ಗ್ರಾಮಸ್ಥರು ಹಾಗೂ ಇತರ ಸಭ್ಯಗೃಹಸ್ಥರೂ ತಮ್ಮ ಗ್ರಾಮಗಳಲ್ಲಿ ಮನಮುಟ್ಟಿ ಕೆಲಸ ಮಾಡಿದರೆ, ನಮಗೆ ಜ್ಞಾನಾಮೃತವನ್ನುಣಿಸಿದ ಮಹನೀಯರ ಹಾಗೂ ಸರಕಾರದವರ ಶ್ರಮ ಸಾಫಲ್ಯ ವಾಗುವದು. ಹಳ್ಳಿಗಳ ಉದ್ಧಾರವೂ ಆಗುವದು.

ಎಲ್ಲ ವಿಷಯಗಳು ಮಹತ್ವದವಾಗಿವೆ. ಆದರೆ ಅವನ್ನೆಲ್ಲ ವಿವರಿಸಿದರೆ ಲೇಖವು ಒಳ್ಳೇ ವಿಸ್ತೃತವಾಗುವದೆಂಬ ಭಯದಿಂದ ಮುಖ್ಯವಾದ ಒಂದೆರಡು ವಿಷಯಗಳನ್ನು ಕುರಿತು ವಿವೇಚಿಸಿರುವೆನು. ಅವು ವಾಚಕರಿಗೆ ಸಮರ್ಪಕವೆನಿಸಿ ದಲ್ಲಿ ಮಿಕ್ಕ ವಿಷಯಗಳನ್ನು ಹಿಂದಿನಿಂದ ಬರೆಯುವೆನು.

೧. ಹತ್ತಿಯ ಬೆಳೆ

ರಾವಸಾಹೇಬ ಕೊಟ್ಟೂರವರು ಬಹಳ ಸರಸವಾಗಿಯೂ ರೈತರಿಗೆ ಒಳ್ಳೇ ಉಪಯುಕ್ತ ಮಾಹಿತಿ ದೊರೆಯುವಂತೆಯೂ ಹೇಳಿದರು. ಅದರ ಸಾರಾಂಶವು ಕೆಳಗೆ ಬರೆದಂತೆ ಅದೆ.

ಪೃಥ್ವಿಯಲ್ಲಿ ಹತ್ತಿಯ ಬೆಳೆಯ ಪ್ರಮಾಣವು

ಹತ್ತಿಯು ಏಸಿಯಾ, ಅಮೇರಿಕಾ, ಆಫ್ರಿಕಾ ಈ ಮೂರು ಖಂಡಗಳಲ್ಲಿ ಬೆಳೆ ಯುವದು. ಇವುಗಳಲ್ಲೆಲ್ಲ ಒಟ್ಟಿಗೆ ೨ ಕೋಟಿ, ೫೦ ಲಕ್ಷ ಗಂಟು ದೊರೆಯು ವದು. ಅದರ ವಿವರ:—

ಸಂಯುಕ್ತ ಸಂಸ್ಥಾನ (ಅಮೇರಿಕಾ)	೧ ಕೋ.	೪೦	ಲಕ್ಷ	ಗಂಟು
ಹಿಂದುಸ್ಥಾನ	—	೫೦	,,	
ಚೀನ	—	೨೦	,,	
ರಸಿಯಾ (ಏಸಿಯಾ)	—	೨೦	,,	
ಇಜಿಪ್ತ	—	೧೦	,,	
ಉಳಿದ ದೇಶಗಳಲ್ಲಿ	—	೧೩	,,	

ಈ ಮೇಲಿನ ಕೋಷ್ಟಕದಿಂದ ಹತ್ತಿಯ ಬೆಳೆಯು ವಿಷಯವಾಗಿ ಹಿಂದುಸ್ಥಾನವು, ಪೃಥ್ವಿಯಲ್ಲಿ ಎರಡನೇ ನಂಬರಿನದಾಗಿದ್ದು ಒಟ್ಟು ಬೆಳೆಯ ⅕ ಪೈರು ಇಲ್ಲಿ ಬೆಳೆಯುವದೆಂದು ಗೊತ್ತಾಗುವದು.

ನಮ್ಮ ದೇಶದಲ್ಲಿ ಹತ್ತಿಯು ಸಾವಿರಾರು ವರ್ಷಗಳ ಹಿಂದಿನಿಂದ ಬೆಳೆಯುವದು. ಅಮೇರಿಕದಲ್ಲಿಯ ಜನರಿಗೆ ೪೦೦ ವರ್ಷಗಳ ಪೂರ್ವದಲ್ಲಿ ಹತ್ತಿಯು ಬೆಳೆಯು ಗೊತ್ತಿದ್ದಿಲ್ಲ. ಒಂದು ಪ್ರಾಣಿಯಿಂದ ಇಲ್ಲವೇ ಗಿಡದಿಂದ ಹತ್ತಿ ಬೆಳೆಯುತ್ತದೆಂದು ಅವರು ಅನ್ನುತ್ತಿದ್ದರು. ಇತ್ತೀಚೆಗೆ ಹಿಂದುಸ್ಥಾನದಿಂದ ಹತ್ತಿಯ ಬೀಜಗಳನ್ನು ಒಯ್ದು ಶಾಸ್ತ್ರೀಯ ಜ್ಞಾನದ ಬಲದಿಂದ ವಿಶೇಷ ಪೈರು ಬೆಳೆಯುಹತ್ತಿ ಜಗತ್ತಿನಲ್ಲಿ ಹತ್ತಿಯ ಬೆಳೆಯ ಬಗ್ಗೆ ಮೊದಲನೆಯ ನಂಬರು ಪಡೆದಿರುವರು.

ಹಿಂದುಸ್ಥಾನವಲ್ಲಿ ೧೮೧೫ ರಲ್ಲಿ ಧಾರವಾಡ ಜಿಲ್ಹೆಯಲ್ಲಿ ೬ ಲಕ್ಷ ಯಕರೆಯಲ್ಲಿ ಹತ್ತಿ ಬೆಳೆಯುತ್ತಿತ್ತೆಂದು ಗೊತ್ತಾಗಿದೆ. ಈಗ ೮ ಲಕ್ಷ ಎಕರೆ ಭೂಮಿಯಲ್ಲಿ ಹತ್ತಿ ಬೆಳೆಯುವದು.

ಹತ್ತಿಬೆಳೆಗೆ ಅವಶ್ಯವಾದ ಕೆಲವು ಸಂಗತಿಗಳು

೧. ಹತ್ತಿಬಿತ್ತುತಕ್ಕ ಭೂಮಿಯನ್ನು ಜನವರಿ, ಫೆಬ್ರುವರಿ, ಮಾರ್ಚ ತಿಂಗಳಲ್ಲಿ ಕಬ್ಬಿಣ ರಂಟೆಯಿಂದ ೬ ರಿಂದ ೮ ಇಂಚಿನ ವರೆಗೆ ಪೊಳ್ಳುಮಾಡಬೇಕು.

೨. ಮುಂಗಾರಿ ಹತ್ತಿಗೆ ಗೊಬ್ಬರ ಹಾಕಬೇಕು. ಹಿಂಗಾರಿ ಹತ್ತಿಗೆ ಕಾರಣವಿಲ್ಲ. ಯಾಕಂದರೆ ಹಿಂದಿನ ವರ್ಷ ಜೋಳ ಬಿತ್ತುವಾಗ ಗೊಬ್ಬರ ಹಾಕಿರುವರು. ಜೋಳದ ಬೇರುಗಳು ೧೮ ಇಂಚಿಗಿಂತ ಕೆಳಗೆ ಹೋಗುವದಿಲ್ಲ. ಆದ್ಧರಿಂದ ನೀರಿನ ಗುಂಟ ಇಳಿದ ಗೊಬ್ಬರವು ಹತ್ತಿಯ ಪೈರಿಗೆ ಸಿಗುವದು. ಇಷ್ಟಾಗಿ ಗೊಬ್ಬರ ಹಾಕಿದರೆ ಗಿಡಗಳು ದೊಡ್ಡವಾಗಿ ಎಲೆಗಳ ಸಂಖ್ಯೆ ಹೆಚ್ಚಾಗಿ ಹೂ ಕಾಯಿಗಳು ಹೆಚ್ಚಾಗಿ ಆಗುವದಿಲ್ಲ.

ಮುಂಗಾರಿ ಹತ್ತಿಗೆ ಮಳೆ ಬಹಳ ಆಗುವದರಿಂದ ಅದಕ್ಕೆ ಗೊಬ್ಬರದ ಅವಶ್ಯಕತೆ ಇರುತ್ತದೆ. ನಮ್ಮ ದೇಶದ ಭೂಮಿಗೆ ಶಗಣಿ ಗೊಬ್ಬರವೇ ಲೇಸು.

೩. ಹತ್ತಿ ಹಾಕಿದ ಹೊಲಕ್ಕೆ ಮುಂದಿನ ವರ್ಷ ಜೋಳಹಾಕಬೇಕು. ಗೋದಿ ಹಾಕಿದರೆ ರೋಗ ಬಹಳ.

೪. ಹತ್ತಿ ಹಾಕಿದ ಹೊಲಕ್ಕೆ ಮತ್ತೆ ಹತ್ತಿ ಹಾಕಿದರೆ ಶಿಡಿರೋಗ ಹಾಯು ವದು.

೫. **ಹತ್ತಿಯನ್ನು ಬಿತ್ತುವ ಹಂಗಾಮು**— ಎರೆನಾಡಿನಲ್ಲಿ ಜವಾರಿ ಹತ್ತಿಯನ್ನು ಮಘ ಮಳೆಗೆ ಅಂದರೆ ಸುಮಾರು ಅಗಸ್ಟ ೧೫ಕ್ಕೆ ಬಿತ್ತಬೇಕು. ಗಡಿನಾಡಿನವರು ಆಶ್ಲೇಷಾ ಮಳೆಯ ಕಡೆಯ ಭಾಗಕ್ಕೆ ಅಂದರೆ ಅಗಸ್ಟ ತಿಂಗಳ ಮೊದಲನೇ ವಾರದಲ್ಲಿ ಬಿತ್ತಬೇಕು. ಈ ಹಂಗಾಮುವು ಹಿಂದೆ ಮುಂದೆ ಆಗಬಾರದು. ಒಂದುವೇಳೆ ಜುಲೈ ತಿಂಗಳಲ್ಲಿ ಬಿತ್ತಿದರೆ ಗಿಡವು ಬಹಳ ಎತ್ತರ ಮಾತ್ರ ಬೆಳೆಯುವದು. ಸಪ್ಟಂಬರದಲ್ಲಿ ಬಿತ್ತಿದರೆ ೩ ಫೂಟು ಮಾತ್ರ ಬೆಳೆಯುವದು.

೬. ಗದಗ-ತಾಲೂಕಿನಲ್ಲಿ ಮಾತ್ರ ಸಪ್ಟಂಬರ ೧ ನೇ ವಾರದಲ್ಲಿ ಬಿತ್ತಿದರೂ ಅಲ್ಲಿಯ ಭೂ ಗುಣದಿಂದ ಬೆಳೆ ಚನ್ನಾಗಿ ಬರುವದು. ನವಂಬರ ತಿಂಗಳಲ್ಲಿ ಯಾವದೇ ತಾಲೂಕಿನಲ್ಲಿ ಬಿತ್ತಿದರೂ ಲಾಭವಿಲ್ಲ.

೭. ಜಯವಂತಿ, ಜವಾರಿ ಹತ್ತಿಯನ್ನು ಅಗಸ್ಟ ೧೫ ರೊಳಗೆ ಆಪಲಾಂಡ ಹತ್ತಿಯನ್ನು ಸಪ್ಟಂಬರ ೧೫ ರೊಳಗೆ ಬಿತ್ತಬೇಕು.

೮. ಬಿತ್ತುವದು ಬಹಳ ಅಂಗಲಾಗಬಾರದು. ೬ ಇಂಚು ಇಲ್ಲವೆ ೯ ಇಂಚಿಗೆ ಒಂದರಂತೆ ಬೀಜ ಬೀಳುವಂತೆ ಬಿತ್ತಬೇಕು. ೧ ಇಂಚಿಗಿಂತ ಕೆಳಗೆ ಬೀಜ ಬಿದ್ದರೆ ಹುಟ್ಟುವದಿಲ್ಲ. ಶೆಡ್ಡಿನಿಂದ ಬಿತ್ತಿದರೆ ಬೀಜಗಳು ಯೋಗ್ಯ ರೀತಿಯಿಂದ ಬೀಳುವವು. ಈ ಶೆಡ್ಡಿನಿಂದ ಬೀಜಹಾಕುವ ಕೆಲಸವನ್ನು ಬಹುಶಃ ಹೆಂಗಸರೇ ಮಾಡುವರು. ಅವರು ಬಿತ್ತುವಾಗ ಅಲಕ್ಷ ಮಾಡೋಣ, ಮಾತಾಡೋಣ, ಎಲಿಅಡಿಕಿಹಾಕೋಣ ಮೊದಲಾದ ಸಂಗತಿಗಳ ಕಡೆಗೆ ಲಕ್ಷಕೊಡುವವರಿಂದ ಬೀಜಗಳು ದೂರ ದೂರ ಬೀಳುವವು. ಕಾರಣ ಗುಜರಾಥದ ಕೂರಿಗೆಯಿಂದ ಬಿತ್ತುವದು ಒಳ್ಳೇದು, ಈ ಕೂರಿಗೆಯ ಬೆಲೆ ೭–೮ ರೂಪಾಯಿ ಇರುವದು.

೯. ಬಿತ್ತುವಾಗ ಸಾಲಿನ ನಡುವೆ ೨೪ ಇಂಚು, ಗಿಡದ ನಡುವೆ ೧೨ ಇಂಚು ಅಂತರವು, ಜವಾರಿಹತ್ತಿಗೆ ಕಸುವು ಇದ್ದ ಭೂಮಿಗೆ ಇರಬೇಕು. ಬಡ ಭೂಮಿಯಲ್ಲಿ ಜವಾರಿ ಹತ್ತಿಗೆ ಸಾಲಿನ ನಡುವೆ ೧೮ ಇಂಚು, ಗಿಡದ ನಡುವೆ ೯ ಇಂಚು ಅಂತರವಿದ್ದರೆ ಸಾಕು. ಇದೇ ಮಾತು ಜಯವಂತಿಗೂ ಇರುವದು.

೧೦. **ಎಡೆ ಹೊಡೆಯುವದು**—ಹತ್ತಿಯ ಉತ್ತಮ ಬೆಳೆ ಬರಬೇಕಾದರೆ ಎಡೆಯ ಮಹತ್ವವು ಬಹಳ ಇರುತ್ತದೆ. ಹೊಲವು ಹಸಿ ಇದ್ದಾಗ ತುಳಿಸಬಾರದು, ತಕ್ಕಷ್ಟು ಆರಿದ ಕೂಡಲೆ ಹೊಡೆಯಬೇಕು. ಕಡೆ ಎಡೆಯನ್ನು ಹೊಡೆಯುವಾಗ ೨ ಇಂಚು ಭೂಮಿ ಸೂಸುವಹಾಗಬೇಕು. ಅಂದರೆ ಹತ್ತಿ ಅದರುವದಿಲ್ಲ. ಇದನ್ನು ಒಕ್ಕಲಿಗರು ಎಂದೂ ಮರೆಯಬಾರದು.

೧೧. ಚಲೋ ಹತ್ತಿಬೆಳೆಯು ಬಂದ ಗಿಡದಲ್ಲಿ ೧೦೦ ಕ್ಕೆ ೬೦ ರಷ್ಟು ಹೂವು ಮತ್ತು ಕಾಯಿ ಆಗುವವು. ಉಳಿದ ೪೦ ಹೂವು ಉದುರುವವು.

೧೨. **ಬೀಜ** - ೧೦೦ ಕ್ಕೆ ೧೦೦ ಇಲ್ಲವೆ ೯೫ ಹುಟ್ಟಿದರೆ ಚಲೋ ಬೀಜ. ಚಲೋ ಬೀಜದ ಲಕ್ಷಣ, ದೊಡ್ಡ ಕಾಳು, ಮೂಗು ಹುಳಿಬಾರದು, ಕಪ್ಪು ಇರಬಾರದು. ೧೦೦ ಪೌಂಡು ನೀರಿನಲ್ಲಿ ೧೦ ಪೌಂಡು ಉಪ್ಪು ಹಾಕಿ ಹತ್ತಿಬೀಜ ಸುರುವಿದರೆ ಕೆಳಕ್ಕೆ ಕೂಡುವ ಬೀಜಗಳೆಲ್ಲ ಚಲೋ ಬೀಜಗಳೆಂದು ತಿಳಿಯಬೇಕು. ಇವು ನಿದಾನ ೧೦೦ ಕ್ಕೆ ೯೦ ರಷ್ಟಾದರೂ ಹೊರಡಬೇಕು. ರೈತರು ಬಿತ್ತುವ ಬೀಜ ೧೦೦ ಕ್ಕೆ ೪೦ ರಿಂದ ೫೦ ರ ವರೆಗೆ ಹುಟ್ಟುವವು. ಕಾರಣ ಚಲೋ ಬೀಜ ಕೊಳ್ಳಬೇಕು. ಇದು ಜವಾರಿ ಹತ್ತಿಯ ಚಲೋ ಬೀಜವನ್ನು ತಿಳಕೊಳ್ಳುವ ಉಪಾಯ.

ಹಿಂದುಸ್ಥಾನದಲ್ಲಿ ೧೫೦ ಜಾತಿಯ ಹತ್ತಿ ಅವೆ. ಜವಾರಿ, ಕೋಮಿಲಾ ಹತ್ತಿ ಇತ್ಯಾದಿ. ಇವೆಲ್ಲವುಗಳಲ್ಲಿ ನಮ್ಮ ಜವಾರಿ ಹತ್ತಿಯೇ ಶ್ರೇಷ್ಠವು. ಚಲೋ ಹತ್ತಿ ಅನ್ನಬೇಕಾದರೆ ಮೂರು ಗುಣಗಳು ಅವಶ್ಯ ಇರಬೇಕು. ೧. ಉತ್ಪನ್ನ ೨. ಅರಳೆ ಪ್ರಮಾಣ. ೩. ಉತಾರ.

ಇವು ಮೂರು ಜವಾರಿಹತ್ತಿಯಲ್ಲಿ ವಿಶೇಷವಾಗಿ ಕಂಡುಬರುವವು. ಆದರೆ ಅಮೇರಿಕದ ಹತ್ತಿಗಿಂತ ನಮ್ಮ ಜವಾರಿಹತ್ತಿಯ ಅರಳೆಯ ಪ್ರಮಾಣ ಕಡಿಮೆಯಾದ್ದರಿಂದ ೧೯೧೧ರಲ್ಲಿ ಧಾರವಾಡ ಫಾರ್ಮಿನವರು ಜವಾರಿಹತ್ತಿ ಹಾಗೂ ಖಾನದೇಶದ ಹತ್ತಿ ಇವೆರಡನ್ನು ಕಲಂ ಮಾಡಿ "ಧಾರವಾಡ ನಂಬರು ಒಂದು" ಎಂಬ ಜಾತಿಯನ್ನು ಮಾಡಿದರು. ಇದನ್ನು ೧೯೩೦ ರ ವರೆಗೆ ಬೆಳೆದರು. ಮುಂದೆ ಯಾಕೋ ಸಿಡಿಹಾಯಹತ್ತಿತು. ಆಗ ಜವಾರಿ ಹತ್ತಿಯೊಡನೆ ಬೇರೊಂದು ಹತ್ತಿ

ಕಲಂ ಮಾಡಿ ಧಾರವಾಡ ನಂಬರು ಎರಡು ಎಂದು ಹೆಸರಿಟ್ಟರು. ಇದರ ಉತ್ಪನ್ನವು ಬಹಳ ಬರಲಿಲ್ಲ. ಮುಂದೆ ಧಾರವಾಡ ನಂಬರು ೧, ಹಾಗೂ ಧಾರವಾಡ ನಂಬರು ಎರಡು ಇವೆರಡನ್ನು ಕೂಡಿಸಿ ಕಲಂಮಾಡಿ ಜಯವಂತಿ ಎಂಬ ಹೊಸ ಬೀಜವನ್ನು ಧಾರವಾಡ ಶೇತಕಿ ಫಾರ್ಮಿನವರು ಹುಡುಕಿ ತೆಗೆದಿದ್ದಾರೆ. ಅದು ಬಹಳೇ ಉಪಯುಕ್ತವಾದದ್ದೂ ಉದ್ದ ಎಳೆಹೊರಡುವಂಥಾದ್ದೂ ಆಗಿದೆ. ಆದ್ದರಿಂದ ಎಲ್ಲ ಜವಾರಿ ಹತ್ತಿ ಬೆಳೆಯುವ ರೈತರು ಇನ್ನು ಮುಂದೆ "ಜಯವಂತೀ" ಹತ್ತಿಯನ್ನೇ ಬಿತ್ತಬೇಕು. ಸರಕಾರದವರು ಇದರ ಬೀಜಗಳನ್ನು ಒದಗಿಸಿಕೊಡುವರು. ಈ ಹತ್ತಿಯನ್ನು ಮಾರುವ ಸಂಘಗಳನ್ನು ಮಾಡಿರುವರು. ಈ ಹತ್ತಿಯ ಉತ್ಪನ್ನವು ಜವಾರಿಗಿಂತ ಬಹಳಬರುವದು.

ಒಂದು ಯಕರೆಗೆ	ಜವಾರಿಹತ್ತಿ	ಜಯವಂತಿ ಹತ್ತಿ ಬಿತ್ತಿದರೆ
ಉತ್ಪನ್ನ	೫೦೦ ಪೌ.	೫೫೦ ಪೌ.
ಹಂಜಿಯ ಪ್ರಮಾಣ ೧೦೦ಕ್ಕೆ	೨೫	೨೮
ಉದ್ದಳತೆ (ತಾರು)	⅞ ಇಂಚು	೧ ಇಂಚು

ಇವು ಅಲ್ಲದೆ ಜಯವಂತಿಯಲ್ಲಿ ಕೆಳಗಿನ ಲಾಭಗಳು ಇರುವವು.

೧	ನೂಲಿನ ನಂಬರು	೩೬ರಿಂದ ೪೦
೨	ಲಿಂಟಿನ ಬಣ್ಣ	ತೀರ ಬೆಳ್ಳಗೆ
೩	ಎಲೆಯ ಪ್ರಮಾಣ	ಕಡಿಮೆ
೪	ಹುಳಹತ್ತುವ ಸಂಭವವು.	೧೦೦ಕ್ಕೆ ೪
೫	ಒಂದು ಎಕರೆ ಹತ್ತಿಬೆಳೆಯ ಕಿಮ್ಮತ್ತು	೫೮ ರೂ.

ಈ ಪ್ರಕಾರ ಲಾಭವಿರುವದರಿಂದ ಜವಾರಿ ಹತ್ತಿ ಬಿತ್ತುವ ಎಲ್ಲ ಭೂಮಿಯಲ್ಲಿ ಜಯವಂತಿ ಹತ್ತಿಯನ್ನು ಬಿತ್ತಬೇಕು. ಪರದೇಶದವರು ಸಹ ಈ ಹತ್ತಿಯಬಗ್ಗೆ ಸದಭಿಪ್ರಾಯವನ್ನು ವ್ಯಕ್ತಮಾಡಿರುವರು. ಒಂದು ಎಕರೆಗೆ ಜವಾರಿಗಿಂತ ೧೦ ಪೌಂಡು ಉತ್ಪನ್ನ (ರೊಕ್ಕ) ಹೆಚ್ಚುಬರುವದು.

ವಿಲಾಯತಿ ಹತ್ತಿ:— ಇದು ೧೮೩೦ ರಲ್ಲಿ ಧಾರವಾಡದ ಕಲೆಕ್ಟರರಾದ ಶಹಾ ಎಂಬವರಿಂದ ಬಂದಿತು. ಅಮೇರಿಕಾದಿಂದ ಬಂದಿತು, ಪರದೇಶದಿಂದ

ಬಂದಕಾರಣ ವಿಲಾಯತಿಯ ಹತ್ತಿ ಎಂಬ ಹೆಸರು ಉಂಟಾಯಿತು. ಆಗಿನ ಜನ ಪರದೇಶದ ಮಾಲಿಗೆ ವಿಲಾಯಿತಿ ಮಾಲು ಎಂದೆನ್ನುತ್ತಿದ್ದರು, ಅದು ಬಂದ ೭- ವರ್ಷದ ಮೇಲೆ ರೋಗ ಬಹಳ ಉಂಟಾದ್ದರಿಂದ ಇದನ್ನು ಬೆಳೆಯುವದು ಕಟ್ಟ ಯಿತು. ಆದರೆ ಈಗ್ಯೂ ರೋಣ, ಗದಗ ತಾಲೂಕಿನಲ್ಲಿ ಅದೆ. ತತಿ ಸಿಕ್ಕ ಜಯವಂತಿ ಬಿತ್ತುವದು ಒಳ್ಳೇದು. ಇಲ್ಲದಿದ್ದರೆ ರೋಣ ಗದಗ ತಾಲೂಕಿನವರ ವಿಲಾಯತಿ ಬೀಜ ಬಿತ್ತಬೇಕು. ಶುದ್ಧ ವಿಲಾಯತಿ ಬೀಜಗಳು ಕಡಿಮೆ. ವಿಲಾಯ ಯೊಡನೆ ಕಲಮುಮಾಡಿದ ಅಪಲಾಂಡ ಎಂಬ ಹತ್ತಿಯು ಪ್ರಸಿದ್ಧವದೆ. ವಿಲಾಯ ಬೀಜ ಬಿತ್ತುತಕ್ಕ ರೈತ ಬಾಂಧವರು ಅಪಲಾಂಡ ಹತ್ತಿ ಬೀಜ ಬಿತ್ತಬೇಕು.

ವಿಲಾಯತಿ ಅಪಲಾಂಡ ಹತ್ತಿಯ ತುಲನೆಯು ಕೆಳಗೆ ಬರೆದಂತೆ—

	ವಿಲಾಯತಿ	ಅಪಲಾಂಡ
೧ ಎಕರೆಗೆ ಉತ್ಪನ್ನ	೩೦೦ ಪೌಂಡು	೩೨೫ ಪೌಂಡ
೧೦೦ಕ್ಕೆ ಅರಳೆ ಪ್ರಮಾಣ	೨೯	೩೪
ಉತಾರ (ಎಳೆ)	⅞ ಇಂಚು	⅞ ಇಂಚು
ನೂಲಿನ ನಂಬರು	೧೫	೩೨

ಕಿಮ್ಮತ್ತು ವಿಲಾಯತಿಗಿಂತ ಅಪಲಾಂಡಕ್ಕೆ ಒಂದು ನಗಕ್ಕೆ ೧೦ರಿಂ ೧೫ ರೂ. ವರೆಗೆ ಹೆಚ್ಚು, ಈ ಪ್ರಕಾರ ಹತ್ತಿಯ ಮಾಹಿತಿ ಇರುತ್ತದೆ.

ಮೊ॥ ಮುಗದಾಳ ಸಾಹೇಬ, ಪ್ರಿನ್ಸಿಪಾಲ ಟ್ರೇನಿಂಗ ಕಾಲೇಜ ಫಾರ ಮೆನ್ ಧಾರವಾಡ ಇವರ ಭಾಷಣದ ಸಾರಾಂಶ.

ವಿಷಯ— ಹಳ್ಳಿಯ ಶಿಕ್ಷಣ

ಹಳ್ಳಿಯ ಶಿಕ್ಷಣದಲ್ಲಿ ಸಣ್ಣ ಹುಡುಗರ ಶಿಕ್ಷಣ, ದೊಡ್ಡವರ ಶಿಕ್ಷಣ ಎಂದು ಎರಡು ಭಾಗಗಳಾಗುವವು. ಸಣ್ಣ ಹುಡುಗರ ಶಿಕ್ಷಣವು ಶಾಲೆಗಳಲ್ಲಿ ನಡೆಯುವದು ಆದರೆ ಈಗ ದೊಡ್ಡವರ ಶಿಕ್ಷಣದ ಸಲುವಾಗಿಯೇ ನಾವು ನಾಲ್ಕು ಮಾತುಗಳನ್ನು ಹೇಳುವೆವು.

ಸರಿಯಾಗಿ ಸಂಸಾರವಮಾಡಿಕೊಂಡು, ನಾಲ್ಕು ಜನರೊಳಗೆ ಸೈ ಎನಿಸಿಕೊಂಡು ಹೋಗುವ ಪ್ರತಿಯೊಬ್ಬನಿಗೆ ಕಲಿತವನು ಅನ್ನಬಹುದು ಈ ಪ್ರಕಾರ ಕಲಿತ ಮನುಷ್ಯನು ಹಳ್ಳಿಯ ಜನರಿಗೆ ಉಪಯುಕ್ತವಾದ ಕೆಲವು ಸಂಗತಿಗಳನ್ನು ತಿಳಿಸಿಕೊಡಬೇಕಾಗುತ್ತದೆ. ಅವು ಯಾವವೆಂದರೆ—

೧. ಹವೆ, ಬೆಳಕು, ನೀರು, ಇವುಗಳ ಉಪಯೋಗವನ್ನು ಅರಿಯದವರೇ ಹಳ್ಳಿಗರಲ್ಲಿ ಹೆಚ್ಚು ಜನರಿರುವರು. ಅವರ ಮನೆಗಳು ಹೊಲಸುಳ್ಳವೂ, ಸುತ್ತಲೂ ಚಲೋ ಹವೆ ಬರದಂಥವೂ, ಬೆಳಕು ಇಲ್ಲದಂಥವೂ ಇರುವವು. ಅವುಗಳಿಂದ ಆಗುವ ದುಷ್ಪರಿಣಾಮಗಳನ್ನು ತಿಳಿಸಿ ಕೊಡಬೇಕು. ಅವರನ್ನು ಚಲೋ ಹವೆ ಬೆಳಕು ಇವುಗಳ ಉಪಯೋಗಮಾಡಿಕೊಳ್ಳಲಿಕ್ಕೆ ಹಚ್ಚಬೇಕು.

೨ **ಶಿಶುಸಂಗೋಪನವನ್ನು ಕಲಿಸಬೇಕು**—ಮಕ್ಕಳನ್ನು ಸಂರಕ್ಷಿಸುವದನ್ನು ಅರಿತವರಾಗದ್ದರಿಂದ ಎಷ್ಟೋ ಕೂಸುಗಳು ೫ ವರ್ಷದ ಒಳಗೇ ಸಾಯುವವು. ಶಿಶುಸಂಗೋಪನದ ಶಿಕ್ಷಣದಿಂದ ಈ ಅನರ್ಥವು ದೂರಾಗುವದು.

೩. **ಬಡತನ ದೂರಮಾಡುವದು**— ಇದಕ್ಕೆ ಉದ್ಯೋಗವನ್ನು ಕೈಕೊಳ್ಳುವದೇ ಮುಖ್ಯ ಉಪಾಯವು. ಉದ್ಯೋಗದಿಂದ ದೊರಕಿಸಿದ ಹಣದಿಂದ ತನ್ನ ಹಾಗೂ ತನ್ನ ಕುಟುಂಬದ ಉದರಪೋಷಣೆಯಾಗುವದು.

೪. **ಮೂಢಕಲ್ಪನೆಯನ್ನು ತೆಗೆದುಹಾಕುವದು**— ನಮ್ಮ ಹಳ್ಳಿಗರಲ್ಲಿ ಮೂಢ ಕಲ್ಪನೆ ಬಹಳ; ಅದರಿಂದ ನಮ್ಮ ಹಳ್ಳಿಯ ಸುಧಾರಣೆಗೆ ದೊಡ್ಡ ಅಡ್ಡಿಯಾಗಿದೆ. ಕಾರಣ ದೂರ ಮಾಡಬೇಕು.

೫. **ವೈಗಳ್ಳತನ ದೂರ ಮಾಡಬೇಕು**—

ಇವೆಲ್ಲ ಕೈಗೂಡಬೇಕೆಂದು ಬಯಸುವವನು ನಿರ್ಮಲವಾದ ಮನಸ್ಸಿನಿಂದ ಈ ಗ್ರಾಮಸುಧಾರಣೆಯನ್ನು ಮಾಡತೊಡಗಿದರೆ ಜನರು ಅದರಂತೆ ಆಚರಿಸುವರು. ನಮ್ಮಲ್ಲಿ ಏನಾದರೊಂದು ಸ್ವಾರ್ಥವಿದ್ದರೆ ಹಳ್ಳಿಯ ಜನರು ಅದನ್ನು ತಿಳಕೊಂಡು ನಾವು ಹೇಳಿದ ಯಾವ ಸಂಗತಿಯ ಕಡೆಗೂ ಲಕ್ಷಕೊಡುವದಿಲ್ಲ. ನಾವು ಯಾವಾಗಲೂ ಆದರ್ಶಭೂತರಾಗಿರತಕ್ಕದ್ದು. ಶುದ್ಧ ಮನಸ್ಸಿನಿಂದ ಕೆಲಸ ಮಾಡುವವನಲ್ಲಿ ಅಂಥ ಗುಣವು ಬಂದೇ ತೀರುವದು.

೨. ಹೇಳತಕ್ಕ ವಿಷಯದ ಜ್ಞಾನವನ್ನು ಪುಸ್ತಕದಿಂದ ಇಲ್ಲವೆ ಬಲ್ಲವರಿಂದ ತಿಳಕೊಂಡು ನಾವು ಅಂದರೆ ಗ್ರಾಮಸುಧಾರಣೆ ಮಾಡಲಪೇಕ್ಷಿಸುವವರು ಹೆಚ್ಚು ಜ್ಞಾನವನ್ನು ಸಂಪಾದಿಸಬೇಕು.

೩. ಹೇಳತಕ್ಕ ವಿಷಯವನ್ನು ಚಲೋ ರೀತಿಯಿಂದ ಕಥೆಯರೂಪವಾಗಿ ಹೇಳಬೇಕು. ಮುಖ್ಯವಾಗಿ ಜನರ ಮನರಂಜನೆಯಾಗುವಂತೆ ಹೇಳಬೇಕು.

೪. ಮ್ಯಾಜಿಕ್ ಲ್ಯಾಂಟರ್ನ ಸಹಾಯದಿಂದ ಗ್ರಾಮಸುಧಾರಣೆಯ ಕೆಲಸವನ್ನು ಜನರ ಮನಸ್ಸಿನಲ್ಲಿ ಬಿಂಬಿಸುವಂತೆ ಹೇಳುವದು ಒಳ್ಳೇದು.

೫. ಹಳ್ಳಿಗಳಲ್ಲಿ ಪ್ರಮುಖ ಜನರು ಯಾವ ಕಡೆಗೆ ದೃಷ್ಟಿಯನ್ನಿಡುವರೋ ಅದರ ಕಡೆಗೇ ಎಲ್ಲರು ಹೊರಳುವರು. ಕಾರಣ ಮುಖ್ಯ ಮುಖ್ಯ ಜನರ ಮಕ್ಕಳ ಕಡೆಯಿಂದ ಗ್ರಾಮಸುಧಾರಣೆಗೆ ಸಂಬಂಧಿಸಿದ ಸಂಗತಿಗಳನ್ನು ಸಂಭಾಷಣೆರೂಪವಾಗಿ ಹೇಳಿಸಬೇಕು. ತಮ್ಮ ಮಕ್ಕಳ ಸಂಭಾಷಣವನ್ನು ಪ್ರೀತಿಯಿಂದ ಕೇಳಲಿಕ್ಕೆ ಪ್ರಮುಖ ಜನರು ಬರುವರು. ಅವರನ್ನು ಹಿಂಬಾಲಿಸುವ ಜನರೂ ಕೇಳಿಕೊಂಡು ಅದರಂತೆ ನಡೆಯಲು ಮಾರ್ಗವಾಗುವದು.

೬. **ಹಳ್ಳಿಗಳ ಸುಧಾರಣೆಗೆ ಸ್ಕೌಟಿನ ಸಹಾಯ ತೆಗೆದುಕೊಳ್ಳಬೇಕು**—ಇದರಿಂದ ಊರ ಸ್ವಚ್ಛತೆ, ಆರೋಗ್ಯವಾದ ನೀರು, ಒಕ್ಕಟ್ಟು ಬೆಳಿಸೋಣ ಇವೇ ಮೊದಲಾದ ಸುಪರಿಣಾಮವನ್ನುಂಟುಮಾಡುವ ಕೆಲಸಗಳಿಗೆ ಸಹಾಯವಾಗುವದು. ಸ್ಕೌಟಿನ ಮುಖ್ಯ ಕೆಲಸ ಸ್ವಾರ್ಥಾಭಿಲಾಷೆ ಇಲ್ಲದೇ ಜನರಿಗೆ ಸಹಾಯ ಮಾಡುವದು ಇರುತ್ತದೆ.

೭. ಊರಲ್ಲಿ ಬೇರೆ ಬೇರೆ ಸಂಘಗಳನ್ನು ಮಾಡಿಕೊಳ್ಳುವದು, ಸಂಘಶಕ್ತಿಯಿಂದ ಇಚ್ಛಿತ ಕಾರ್ಯವು ಕೈಗೂಡುವದು. ಹೈನದ ಸಂಘ, ಕುರಿ ಸಂಘ, ಕೋಳಿ ಸಂಘ ಇತ್ಯಾದಿ.

೮. ಹಳ್ಳಿಯ ನೋಟ ಪುಸ್ತಕ ಇಟ್ಟರೆ ದಿನಾಲು ಏನೇನು ಮಾಹಿತಿ ಹೇಳಿದಿರಿ ಎಂಬದು ಗೊತ್ತಾಗುವದು. ಗ್ರಾಮಸುಧಾರಣೆಯು ಮೊದಲು ಪಂಜಾಬದಲ್ಲಿ ಆರಂಭಿತವಾಯಿತು. ಗೋರ್ಗಾವ ಜಿಲ್ಹೆಯ ಡೆಪುಟಿ ಕಮಿಶನರರು

(ಗಂಡಹೆಂಡರುಸಹ) ಈ ಗ್ರಾಮ ಸುಧಾರಣೆಯಲ್ಲಿ ಮನಸ್ಸುಹಾಕಿ ಹಳ್ಳಿಗರನ್ನು ಉತ್ತಮತರದಿಂದ ಮುಂದಕ್ಕೆ ತಂದರು. ಅವರು ತಾವು ಮಾಡಿದ ಪ್ರತಿಯೊಂದು ಸುಧಾರಣೆಯ ಕೆಲಸವನ್ನು ಬರೆದಿಡುತ್ತಿದ್ದರು. ಇದರಿಂದ ನಾವು ಮಾಡಿದ ಕೆಲಸವು ಕಣ್ಣ ಮುಂದೆ ನಿಂತು ಒಂದು ತರದ ಆನಂದವು ಉಂಟಾಗುವದು.

೯. "**ನಮ್ಮ ಹಳ್ಳಿಯ ವಿವೇಕ**" ಎಂಬ ಪುಸ್ತಕವನ್ನು ಓದಿಕೊಂಡರೆ ಗ್ರಾಮಸುಧಾರಣೆಯ ಎಷ್ಟೋಸಂಗತಿಗಳು ತಿಳಿಯುವವು. ಅವುಗಳನ್ನು ಉಳಿದ ಜನರಿಗೆ ಹೇಳಲಿಕ್ಕೆ ಸಹಾಯವಾಗುವದು.

ಇವೇ ಮೊದಲಾದ ವಿಷಯವನ್ನು ಕೂತವರ ಮನಸ್ಸಿನ ಮೇಲೆ ಪರಿಣಾಮವಾಗುವಂತೆಯೂ ಸರಸಾಗಿಯೂ ಹೇಳಿದರು.

ಹೆಣ್ಣುಮಕ್ಕಳ ಟ್ರೇನಿಂಗಕಾಲೇಜ ಧಾರವಾಡ ೧೯೩೭ನೆಯ ಇಸವಿಯಲ್ಲಿ ಎಪ್ರಿಲ ತಿಂಗಳಲ್ಲಾದ ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮವು

೧ನೇವರ್ಷ ಸೀನಿಯರಕ್ಲಾಸು

ನಂಬರು	ಹೆಸರು	ಜಿಲ್ಹೆ	ದೊರಕಿಸಿದ ಗುಣಗಳು
೧	ಮೇರಿ ಸಂತಾನ ಜಸಿಂತ	ಧಾರವಾಡ ಡಿ॥	೭೯೫
೨	ರೀತವ್ವಾ ಮುದಕಪ್ಪ ಎಲಿಸಿರೂರ	,,	೭೬೭
೩	ಕಾಶವ್ವಾ ಶಿವಲಿಂಗಶೆಟ್ಟಿ	ಬೆಳಗಾವ ಡಿ॥	೭೩೧
೪	ಬಸಲಿಂಗವ್ವಾ ಗಂಗಾಧರ ಕುರಿ	,,	೭೨೨
೫	ತಂಗೆವ್ವಾ ಸಾವಂತ ತಳವಾರ	,,	೬೮೮
೬	ಹನಮವ್ವಾ ಎಲ್ಲಪ್ಪಾ ಮೋಪಗಾರ	ವಿಜಾಪೂರ ಡಿ॥	೮೮೧

೭	ಮುದ್ದಿಬಾಯಿ ವೆಂಕಟ ಕಾನಡೆ	ಕಾರವಾರ ಡಿ॥	೮೦೫
೮	ರುದ್ರಪ್ಪಾ ದುಂಡಯ್ಯ ಜೆಳ್ಳಂಕಿಮಠ	ಹುಬ್ಬಳ್ಳಿ ಮುನಸಿಪಾಲ್ಟಿ	೯೧೫
೯	ಲಕ್ಷ್ಮೀಬಾಯಿ ರುದ್ರಪ್ಪಾ ಬಡಿಗೇರ	ವಿಜಾಪೂರ ಡಿ॥	೯೧೫
೧೦	ಕಮಲಾ ಆನಂದರಾವ ಯಾದವ	ಧಾರವಾಡ ಡಿ॥	೮೩೫

ಹೊರಗಿನಿಂದ ಕುಳಿತವರು

೧೧	ಭೀಮವ್ವಾ ಭರಮಪ್ಪಾ ಪಾಟೀಲ	ವಿಜಾಪೂರ ಡಿ. ಎಸ್. ಬಿ	೭೦೫
೧೨	ಚಂದ್ರಭಾಗಾ ಪ್ರಭು	ಬೆಳಗಾವ ಡಿ॥	೭೪೮

೨ನೆಯ ವರ್ಷದ ವರ್ಗ

೧೩	ಯಮುನಾ ಕಲ್ಲನಾಯಿಕ ನಾಯಿಕರ	ವಿಜಾಪೂರ ಡಿ. ಎಸ್. ಬಿ	೧೦೨೪
೧೪	ಶಂಕರವ್ವಾ ವೀರನಗೌಡಾ ಪಾಟೀಲ	ವಿಜಾಪೂರ ಡಿ॥	೯೬೦
೧೫	ದ್ವಾರಕಾ ನರಸಿಂಹ ರಾಯಣ್ಣನವರ	ಬೆಳಗಾವ ಡಿ॥	೮೯೪
೧೬	ಚಿನ್ನವ್ವಾ ಬಸಪ್ಪಾ ಹೆಗ್ಗೊಂಡ	ವಿಜಾಪೂರ ಡಿ॥	೧೦೨೮
೧೭	ರುದ್ರವ್ವಾ ಬಸವಂತ ಪೂಜಾರ	,,	೯೭೯
೧೮	ಸಂಗವ್ವಾ ಬಸೆಟ್ಟೆಪ್ಪಾ ಅಂಗಡಿ	,,	೯೨೬
೧೯	ಪುಥಳಾ ಲಕ್ಷ್ಮಣ ಮರಾಠೆ	,,	೮೯೬
೨೦	ಹನುಮಂತವ್ವಾ ಮಹಾದೇವಪ್ಪಾ ಚಿಕ್ಕಾಡಿ	,,	೮೭೧
೨೧	ವೆಂಕು ಬಸವಂತಪ್ಪಾ ಅಕ್ಕಿ	ಹುಬ್ಬಳ್ಳಿ ಮುನಸಿಪಾಲ್ಟಿ	೯೦೬
೨೨	ಸುವರ್ಣ ದೇವೇಂದ್ರಪ್ಪಾ ಬೋಗಾರ	ಧಾರವಾಡ ಮುನಸಿಪಾಲ್ಟಿ	೮೮೭

ಧಾರವಾಡ ಟ್ರೇನಿಂಗ ಸ್ಕೂಲಿನ ಪರೀಕ್ಷೆಯ ಪರಿಣಾಮ

೧೯೩೬ನೇ ಇಸ್ವಿ ಎಪ್ರಿಲ ತಿಂಗಳಲ್ಲಾದ ಟ್ರೇನಿಂಗ ಸ್ಕೂಲಿನ ಸರ್ಟಿಫಿಕೇಟ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರ ಹೆಸರುಗಳು ಹಾಗು ಒಟ್ಟು ಗುಣಗಳು

ನಂ.	ಹೆಸರು	ಗುಣಗಳು
	ಧಾರವಾಡ ಜಿಲ್ಲಾ	
	ಮು. ಫ. ಬಂಗಾರಿ	೮೮೬
೨	ಸ್ವಾ. ಭಿ ಕದರಮುಂಡಲಗಿ	೮೭೬
	ಬೆಳಗಾವ ಜಿಲ್ಲಾ	
೧	ವಿ. ಚೆ. ಹಳೇಜೋಳ	೮೧೩
೨	ಲಿ. ಸಂ. ಮೊಖಾಸಿ	೭೩೨
೩	ವಿ. ಗು. ಕುಂದಣಗಾರ	೬೪೩
	ವಿಜಾಪೂರ ಜಿಲ್ಲಾ	
೧	ಲ ಅ ಶಿರಹಟ್ಟಿ	೯೯೩
೨	ಮು. ತ. ನುರನಾಳ	೭೬೨
೩	ಶಿ. ಬ ತಿಪ್ಪಣ್ಣವರ	೭೫೯
೪	ಬ. ದು. ಹಿರೇಮಠ	೬೨೬
	ಸಂಸ್ಥಾನ	
೧	ತೀ. ರು. ಉಣ್ಣಿ	೬೫೬
	೨ನೆಯ ವರ್ಷ	
	ಧಾರವಾಡ ಜಿಲ್ಲಾ	
೧	ನೋ. ಯ. ಕಮಡೊಳ್ಳಿ	೮೫೩
೨	ಸ. ಕ. ಶಿವಯ್ಯನಮಠ	೮೦೯
೩	ಹ. ವಾ. ಶಿರಹಟ್ಟಿ	೭೯೨
೪	ಜ. ಬ. ಎಲವಿಗಿ	೭೮೩
೫	ವಿ. ಅಂ ಸಂಸಿ	೭೪೫
೬	ನಾ. ಲಿಂ. ಗುಡ್ಡೀಮಠ	೭೪೪
೭	ಬ. ವೀ. ರೋಣ	೭೪೦
೮	ಬ. ದಾ. ಬಾಳಿ	೬೭೨
೯	ರ ದ್ಯಾ. ಚಲವಾದಿ	೬೬೫
೧೦	ದಾ. ಅ. ಪಠಾಣ	೬೬೩
೧೧	ಗು. ಬ. ಗುಗ್ಗರಿ	೬೧೯
	ಬೆಳಗಾವ ಜಿಲ್ಲಾ	
೧	ಗಂ. ಚ. ಮಠದ	೮೪೪
೨	ವೀ. ಚ. ಕುಬಸದ	೮೦೬
೩	ಗ. ಬಾ. ಜಾಧವ	೭೪೧
೪	ಶಿ. ಭಿ. ಹುಡೇದ	೭೨೧
	ವಿಜಾಪುರ ಜಿಲ್ಲಾ	
೧	ದಾ. ಗೋ. ಜೋರಾಪುರ	೭೬೫
೨	ರಾ. ಮು. ವಸ್ತ್ರದ	೭೩೯

ನಂ	ಹೆಸರು	ಗುಣಗಳು
೩	ರಾ. ಶಿ. ಸಜ್ಜನ	೬೯೩
೪	ಶಿ. ಮ. ಕಟ್ಟೀಮನಿ	೬೫೬
೫	ರೇ. ರಾ. ಕನ್ನೂರ	೬೦೨
೬	ದ. ಭಿ. ಇಂಗಳೆ	೫೮೮

ಖಾಸಗೀ ಸಂಸ್ಥೆಗಳು

ನಂ	ಹೆಸರು	ಗುಣಗಳು
೧	ರಾ. ಸಾ. ಹಳ್ಯಾಳ	೭೧೪

೧ನೆಯ ವರ್ಷ

ಧಾರವಾಡ ಜಿಲ್ಲಾ

ನಂ	ಹೆಸರು	ಗುಣಗಳು
೧	ಬ. ಶಿ. ಶಿವಸಿಂಪಿಗೇರ	೮೬೫
೨	ಬ. ಹೀ. ನವಲಗುಂದ	೭೭೬
೩	ರಾ. ಬ. ಸೊನಗಾರ	೭೭೪
೪	ಬೀ ಜೀ. ಪಾಸಣ್ಣವರ	೭೪೦
೫	ಬಿ ಹ. ಪಾಟೀಲ	೭೩೫
೬	ಶ. ಚ. ಭುಲ್ಲಿ	೭೩೨
೭	ಲ. ಭೀ. ವರಾಹಮೂರ್ತಿ	೭೦೬
೮	ಚ. ಕ. ರೂಗಿ	೬೯೨
೯	ಗೌ. ಖಾ. ಮುಲ್ಲಾನವರ	೬೮೬
೧೦	ಮ. ಕೆ. ಮಾನೆ	೬೭೩
೧೧	ಶೀ. ಬ. ಮಾದಿಗೇರ	೬೬೨
೧೨	ವೀ. ಮಾ. ಹುರಳಿ	೬೫೪
೧೩	ನ. ಭೀ. ಹುದ್ದಾರ	೬೪೯
೧೪	ದೇ ವ್ರ. ಅಡಪಿಯುವಂ	೬೪೭
೧೫	ಬ. ರಾ. ವಡ್ಡರ	೬೩೩
೧೬	ಗೂ ಜಾ. ಭಾವಿಕಟ್ಟಿ	೫೭೨

ಬೆಳಗಾವ ಜಿಲ್ಲಾ

ಸಂ.	ಹೆಸರು	ಗುಣಗಳು
೧	ಶೀ. ಹ. ಚವಲಿ	೭೪೨
೨	ಗ. ಫ. ದಳವಾಯಿ	೭೩೭
೩	ಜಿ. ಚಿ. ದೇಸಾಯಿ	೭೦೮
೪	ವಿ. ಬ. ಭದ್ರಣ್ಣವರ	೬೯೬
೫	ಕಾ. ಗೌ. ಬಾಗವಾನ	೬೭೪
೬	ಚ. ಗ. ಹಿರೇಮಠ	೬೬೬
೭	ಶೀ. ಭೀ. ಕೊರವರ	೬೪೭
೮	ಬ. ದು. ನಾವಲಗಿ	೬೪೩
೯	ತಾ. ಗೊ. ಮಾನೆ	೬೨೨
೧೦	ಬಾ. ಸಂ. ಚೌಕಾಕೆ	೬೦೮
೧೧	ತ. ಅ. ಚಿಕ್ಕೋಡಿ	೬೦೮
೧೨	ಮ. ಮಾ. ಗೋಟಖಿಂಡಿ	೬೦೫

ವಿಜಾಪುರ ಜಿಲ್ಲಾ

ಸಂ.	ಹೆಸರು	ಗುಣಗಳು
೧	ಬಾ. ಚ ಬೋವೇರ	೭೬೭
೨	ಅ. ಶೀ. ಪಾಟೀಲ	೭೪೭
೩	ಬ. ಸು. ಹುನ್ನೂರ	೭೪೬
೪	ತ. ಮು ಹಾಳಕೇರಿ	೭೩೪
೫	ಬ. ಸೊ. ಬ್ಯಾಳಿ	೭೩೧
೬	ಶಿಂ. ಸ. ವಸ್ತ್ರದ	೬೬೮
೭	ಬ. ಗು. ಕೋಟಿ	೬೬೩
೮	ರಾ. ಭಿ. ದಾಸರ	೬೪೪
೯	ಲಿ. ಮು. ಚಲವಾದಿ	೬೦೫
೧೦	ಕೃ. ಗು. ಸೂಳಿಭಾಂವಿ	೫೯೬
೧೧	ಹು. ಇ. ಉಸ್ತಾದ	೫೭೦
೧೨	ಶ. ಯ. ಚಲವಾದಿ	೫೪೩

ಏಡೆಡ್ ಸ್ಕೂಲ್ಸ

ಸಂ.	ಹೆಸರು	ಗುಣಗಳು
೧	ಚ. ಗು. ಸಾವಂತವಾಡಿ	೭೬೩
೨	ಶಿ. ಬ. ಕೊಣ್ಣೂರ	೭೧೫

ನಂ.	ಹೆಸರು	ಗುಣಗಳು
೩	ಬಾ. ನಿ. ಭಾಪಿಹಾಳ	೬೬೮
೪	ವೀ. ಬೀ. ಗುರ್ಲಹೊಸೂರ	೫೮೪
೫	ವ. ದ್ಯಾ. ಜಂಬಿಗಿ	೭೨೩
೬	ಮಿ. ದ. ಬಿರಾದರ	೬೪೮
೭	ಭಾ. ಗೆ. ಖಾನಾಪೂರ	೫೬೬
೮	ನಾ ರಾ. ಭಟ್ಟ	೫೭೨

ಸಂಸ್ಥಾನ

ನಂ.	ಹೆಸರು	ಗುಣಗಳು
೧	ಕೃ. ವೆ. ಬಾಗೇವಾಡಿ	೭೭೩
೨	ಆ. ಭೀ ಮುರನಾಳ	೭೬೬
೩	ಅ. ಭೀ. ಪೂಜಾರ	೩೦೮
೪	ರು. ಮು. ರಾಚಣ್ಣವರ	೬೬೪
೫	ಸ. ಹು. ಜಾಧವ	೬೨೧
೬	ಈ. ನಾ. ಹುಲಮನಿ	೫೭೩

ಹೊರಗಿನಿಂದ ಕುಳಿತವರು

ನಂ.	ಹೆಸರು	ಗುಣಗಳು
೧	ಗು. ಗೊ. ಕುಲಕರ್ಣಿ	೬೩೩
೨	ಬ. ರಾ. ಕಂಬಾಳಿಮಠ	೬೨೧
೩	ನಾ. ಸಾ. ಸಜ್ಜನ	೫೭೭
೪	ಶಿ. ಗು. ಭೂಪಾಳಿ	೫೭೫
೫	ಹ. ಪ. ಪತಂಗಿ	೫೫೯

೧೯೩೬ ನೆಯ ಇಸವಿಯ ಮಾರ್ಚ ತಿಂಗಳಲ್ಲಾದ ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮ

ಧಾರವಾಡ ಜಿಲ್ಲೆ

ಧಾರವಾಡ ಸೆಂಟರ—ಕನ್ನಡ

ನಂಬರು	ಹೆಸರು	ದೊರಕಿಸಿದ ಗುಣಗಳು
೧	ಯಶೋದಾ ದೇವಪುತ್ರಪ್ಪ ಬಂಕಾಪುರ	೪೭೬
೨	ಸುಶೀಲಾ ಗುರಾಚಾರ್ಯ ಹಾನಗಲ್ಲ	೪೬೪
೩	ಗಂಗಾಬಾಯಿ ಮುತ್ತಪ್ಪ ಯಲಿಗಾರ	೪೫೩
೪	ಸುಂದ್ರಾ ಹಿರಾಚಪ್ಪ ಮರಾಠಾ	೪೩೪
೫	ಅಂಬಾಬಾಯಿ ವೆಂಕಪ್ಪ ಸೋನಾರ	೪೦೬
೬	ಹಂಪವ್ವ ಚನ್ನಪ್ಪ ಕೊಟೂರ	೩೯೬
೭	ಕಮಲಾಬಾಯಿ ಧರ್ಮಾಜಿ ಸಿಂಪಿ	೩೯೨
೮	ಯಲ್ಲವ್ವ ಸಣ್ಣಸಿದ್ಧಪ್ಪ ಕಾಸಂಬಿ	೩೮೫
೯	ತುಂಗಾಬಾಯಿ ನಾರಾಯಣಸ್ವಾಮಿ ದೇವಾಂಗಮಠ	೩೮೦
೧೦	ಮಾರ್ಥಾ ಲೋಕಪ್ಪ ಕರಿ	೩೭೫
೧೧	ರೇಣು ದೇವೇಂದ್ರಪ್ಪ ಒಂದಕುದರಿ	೩೭೦
೧೨	ಮಾರ್ಥಾ ಮರಿಯಾ ಜೋವೇಕರ	೩೬೮
೧೩	ಶಂಕ್ರೆವ್ವ ಗದಿಗೆಪ್ಪ ಶಿರಸಂಗಿ	೩೬೬
೧೪	ಅಂಬಕ್ಕಾ ರಾಮಚಂದ್ರ ಬಾಲೆಹೊಸೂರ	೩೬೦
೧೫	ಪಾರ್ವತೆವ್ವ ಫಕೀರಪ್ಪ ಗಾಣಿಗೇರ	೩೫೫
೧೬	ಪುಟ್ಟಾ ನಾಗಪ್ಪ ದಫೇದಾರ	೩೫೩
೧೭	ತಂಗವ್ವ ಸಿದ್ದಪ್ಪ ಕೊಪ್ಪದ	೩೪೦
೧೮	ಚಂಪಾ ವೀರಪ್ಪ ಹಳ್ಳಿ	೩೩೬
೧೯	ಯಮುನಾಬಾಯಿ ಹಣಮಂತರಾವ ಸಿಂದೆ	೩೩೪
೨೦	ಚಂದ್ರವ್ವ ಪ್ಯಾರವ್ವ ಜಾತಿಗೇರ	೩೩೨

೨೧	ಕೆರದೇವಿ ಬೀರಾ ನೇತ್ರಕರ	೩೨೬
೨೧	ಸೀತಾಬಾಯಿ ಭೀಮಸಿಂಗಪ್ಪ ರಜಪೂತ	೩೩೬
೨೩	ಸುಲೋಚನಾ ಕಾಶಿನಾಥಶಾಸ್ತ್ರಿ ಜೋಶಿ	೩೮೧
೨೪	ಅಂಬಾಬಾಯಿ ಸುಬ್ರಾವ ಕುಲಕರ್ಣಿ	೩೦೪
೨೫	ನೀಲವ್ವ ಬಸಪ್ಪ ಸ್ವಾಮತಿ	೨೯೩

ಮರಾಠಿ

೧	ನಲಿನಿ ಗೋಪಾಲ ಜೋಶಿ	೪೦೮
೨	ಕೃಷ್ಣಾತಾಯಿ ಲಕ್ಷ್ಮಣರಾವ ಧಾರವಾಡಕರ	೩೮೪
೩	ಪ್ರಯಾಗತಾಯಿ ನಾರಾಯಣರಾವ ನಾತು	೩೬೧
೪	ವಿಮಲಾತಾಯಿ ಗಂಗಾಧರಪಂತ ಓಕ	೩೬೦
೫	ರಮಾಬಾಯಿ ವಾಸುದೇವ ರಿಸಬೂಡ	೨೯೯

ಉರ್ದು

೧	ಶಕುಂತಲಾ ಮನಶೆಪ್ಪ ಧವಳೆ	೩೬೫

ಹುಬ್ಬಳ್ಳಿ ಸೆಂಟರ

ಕನ್ನಡ

೧	ವೀರವ್ವ ಗಂಟೆಪ್ಪ ತಾಮ್ರಹಳ್ಳಿ	೪೧೪
೨	ಮುತ್ತಮ್ಮ ಕಾಂತಪ್ಪ ಜೋಗುಳ	೪೦೩
೩	ಜೀವೂಬಾಯಿ ದಾನೇಲಪ್ಪ ಬೇಲಿ	೩೭೭
೪	ಸುಸನ್ನಾ ಜಾನ ಬಂಗೇರ	೩೭೫
೫	ತಂಗೆವ್ವ ಶಿವಪ್ಪ ಜವಳಿ	೩೭೨
೬	ಪದ್ಮಾವತಿ ಚಿನ್ನಪ್ಪ ದಂಡವತಿ	೩೬೯
೭	ಯಶೋದಾ ರಾಫೇಲಪ್ಪ ಖಾನಾಪುರ	೩೫೨
೮	ದೇವಮ್ಮ ಬಸನಗನಡ ಸಾಲ್ಮನಿ	೩೪೩
೯	ಕಮಲಾ ಹಜಾರಿಯಪ್ಪ ಬನ್ನಾ	೩೪೦
೧೦	ಹುಸೇನಬಿ ಹುಸೇನಸಾಹೇಬ ಹುಬ್ಬಳ್ಳಿ	೩೩೯
೧೧	ಫಕೀರವ್ವ ರಾಮಪ್ಪ ಗುಡಿಹಾಳ	೩೨೮

೧೨	ದಾಕ್ಷಾಯಿಣಿದೇವಿ ಲಿಂಗಯ್ಯ ಹಿರೇಮಠ	೩೧೬
೧೩	ಸುಭದ್ರಾ ಚನ್ನಪ್ಪ ಉತ್ತಂಗಿ	೩೧೧
೧೪	ಪ್ರೀತಾಬಾಯಿ ದೇವಪುತ್ರಪ್ಪ ಗೋಣಿ	೩೦೮
೧೫	ಚಂಪಾವತಿ ದಾನೇಲಪ್ಪ ಬಂಗಾರಿ	೩೦೧
೧೬	ಕಮಲಾಬಾಕ್ಷಿ ಆನಂದಪ್ಪ ಭಸ್ಮೆ	೨೯೬

ಮರಾಠಿ

೧	ಸಗುಣಾ ರಾಮಕೃಷ್ಣ ಮುಳ್ಳಪಟ್ಟಣ	೪೭
೨	ಗೋದಾವರಿ ರಘುನಾಥ ಮೋಡಕ	೪೪
೩	ದುರ್ಗಾ ಗಣಪತ ಮೂಡೂರ	೪೧
೪	ರುಕ್ಮಿಣಿ ತಿಪ್ಪಣ್ಣ ಶಿತೋಳೆ	೩೬
೫	ಕುಸುಮ ಗೋವಿಂದ ಪರ್ವೆ	೩೬
೬	ಶಕುಂತಲಾ ಗಂಗಾಧರ ಜೋಶಿ	೩೫
೭	ಮೆಹೆರ್ಜಾನ ತಾರಾಸಾನಿ ಲಕ್ಷ್ಮೇಶ್ವರ	೩೩
೮	ಲೀಲಾವತಿ ಕೃಷ್ಣ ಖಾನಾಪುರ	೩೨

ಉರ್ದು

೧	ಹಾತಿಮಬಿ ಖುದಾವಂದಸಾಹೇಬ ಬಂಕಾಪುರ	೩೪
೨	ಹಜರತ್‌ಬಿ ಹಜರತ್‌ಶಾ ತಂಡೂರ	೩೦
೩	ಮಸಾಬ್ಬಿ ಹಜರತ್‌ಸಾಹೇಬ ಹೆಬ್ಬಳ್ಳಿ	೨೯

ಗದಗ ಸೆಂಟರ

ಕನ್ನಡ

೧	ವೈದೇಹಿ ನಾರಾಯಣರಾವ ಡಂಬಳ	೪೩
೨	ಚನಬಸವ್ವ ಶಿದ್ಲಿಂಗಪ್ಪ ಕುಬಸದ	೪೦
೩	ಶಾರದಾ ಶೇಷಗಿರಿರಾವ ಕುಲಕರ್ಣಿ	೩೯
೪	ಶ್ರೀದೇವಿ ರಾಮಚಂದ್ರಪ್ಪ ಕುಷ್ಟಗಿ	೩೯
೫	ಬಸವಂಣೆವ್ವ ಬಸಪ್ಪ ಆದಿ	೩೭
೬	ಮಾರ್ಗರೆಟ್ ತರ್ಮನುವೇಲಪ್ಪ ಜೋಗುಳ	೩೬

೭	ಪ್ರಸನ್ನಿ ಸಾಮುವೇಲಪ್ಪ ಹವಳದ	೩೬೨
೮	ಮಾಣಿಕಾ ಧರ್ಮಪ್ಪ ಧರ್ಮದಾಸ	೩೫೯
೯	ಚನಬಸವ್ವ ತೋಟಯ್ಯ ಹಿರೇಮಠ	೩೫೦
೦	ಸುಭಕ್ತಿ ಚಿದಾನಂದಪ್ಪ ಕುರಿ	೩೪೮
೧	ಗಂಗಾಬಾಯಿ ಮುದಿಗೌಡಾ ಪಾಟೀಲ	೩೪೪
೨	ಅಮೃತಿ ಭೀಮಪ್ಪ ಬೋವೇರ	೩೪೧
೩	ದೈನಾ ಸುಕೀರ್ತಪ್ಪ ಉಳ್ಳೇಗಡ್ಡಿ	೩೩೫
೪	ಬಸವಣ್ಣೆವ್ವ ವೀರಪ್ಪ ಹುಲಗೂರ	೩೩೧
೫	ಚನಬಸವ್ವ ಸಂಗಪ್ಪ ಪಶುಪತಿಹಾಳ	೩೩೧
೬	ಚಂದ್ರಾ ಹೊನ್ನಪ್ಪ ಕುರಿ	೩೨೯
೭	ಶಿವಗಂಗವ್ವ ವೀರಯ್ಯ ನಂದಿಕೋಲಮಠ	೩೨೭
೮	ಮಾಲತಿ ನೀಲಕಂಠರಾವ ದೇಶಪಾಂಡೆ	೩೨೫
೯	ಜೀವರತ್ನಾ ಬೆಂಜಾಮಿನ್ ನೀಲಗಾರ	೩೧೭
೦	ಲಿಂಗವ್ವ ಹನಮಂತಪ್ಪ ಕಟ್ಟೀಮನಿ	೨೯೭

ಮರಾಠಿ

ಇಲ್ಲ

ಉರ್ದು

ಇಲ್ಲ

ವಿಜಾಪುರ ಸೆಂಟರ

ಕನ್ನಡ

ಉಷಕ್ಕಾ ನರಹರರಾವ ಕುಲಕರ್ಣಿ	೩೯೯
ಪದ್ಮಾವತಿ ಅನಂತರಾವ ಜೋಶಿ	೩೮೦
ಸುಶೀಲಾ ಅರೋಣಪ್ಪ ಜಂತ್ಲಿ	೩೫೮
ಚನ್ನವ್ವ ಶಿವಬಸಪ್ಪ ಯೆರನಾಳ	೩೫೭
ಕಾಶೀಬಾಯಿ ಮಡಿವಾಳಯ್ಯ ವಸ್ತ್ರದ	೩೧೯
ಗೌರವ್ವಾ ರಾಚಯ್ಯಾ ಕಣಬೂರ	೩೧೨

೭	ತ್ರಿವೇಣೀಬಾಯಿ ಮಧ್ವರಾವ ಬಿದರಕುಂದಿ	೩೧೨
೮	ಶಾಂತಾ ವಾಮನರಾವ ಘೋತ್ರಿಕರ	೩೮೭
೯	ಸರಸ್ವತಿಬಾಯಿ ರೇವಣಸಿದ್ಧಪ್ಪಾ ಮಣ್ಣೂರ	೨೯೪

ಮರಾಠಿ

೧	ಕಾಶೀಬಾಯಿ ಶಂಕರಲಾಲ ಅಗರವಾಲೆ	೩೪೪
೨	ಶೀಲವತಿ ಬಾಲಕೃಷ್ಣ ಕರಂದೀಕರ	೨೯೦

ಉರ್ದು

ಇಲ್ಲ

ಬೆಳಗಾವಿ ಜಿಲ್ಹಾ

ಬೆಳಗಾವಿ ಸೆಂಟರ

ಕನ್ನಡ

೧	ನರ್ಮದಾ ನರಸಿಂಹಾಚಾರ್ಯ ಹೊನವಾಡ	೪೨೨
೨	ಕಲ್ಲವ್ವಾ ಚನ್ನಪ್ಪಾ ಕಂಬಾರ	೪೦೭
೩	ಗ್ರೇಸ ಸಾಲಮನ ಲೂಥರ	೪೦೧
೪	ಅಕ್ಕುಬಾಯಿ ಸೋಮಗೌಡಾ ಪಾಟೀಲ	೩೮೭
೫	ಗಂಗಾಬಾಯಿ ಚನ್ನಬಸವಸ್ವಾಮಿ ಹಿರೇಮಠ	೩೮೪
೬	ಮಾರ್ಗಾರೆಟ್ ಸೈಮನ್ ಅರಳೀಕಟ್ಟಿ	೩೭೬
೭	ಕಮಲಾ ಚನ್ನಪ್ಪಾ ಬುಧರಪುರ	೩೭೩
೮	ಗ್ರೇಸ ಎಜಕಲ್ ಆಲದ	೩೬೯
೯	ತವನವ್ವಾ ಗೋವಿಂದಪ್ಪಾ ಕುಲಗೋಡ	೩೬೯
೧೦	ಶಿವಗಂಗವ್ವಾ ಫಕ್ಕಿರಗೌಡಾ ಪಾಟೀಲ	೩೬೮
೧೧	ಜಯವಂತಿ ನಿಂಗಪ್ಪಾ ಗೋಟಡಕಿ	೩೬೦
೧೨	ಗೌರವ್ವಾ ಸಿದ್ಧಪ್ಪಾ ಕೋಳಿ	೩೫೪
೧೩	ಪಾರ್ವತಿ ಗುರುಸಿದ್ಧಪ್ಪಾ ಭೋಜಣ್ಣವರ	೩೪೬
೧೪	ಮಲ್ಲವ್ವಾ ಪರಸಪ್ಪಾ ಸುಣಗಾರ	೩೩೯
೧೫	ಸುಮಿತ್ರಾಬಾಯಿ ರಾಮಚಂದ್ರರಾವ ಗುಳ-ಹೊಸೂರ	೩೩೬

೧೬	ಮನೋರಮಾ ಆನಂದರಾವ ದಮ್ಮಣಗಿ	೩೩೩
೧೭	ಮುರಿಗೆವ್ವಾ ಮಲ್ಲಪ್ಪಾ ಭೋಜ	೩೨೭
೧೮	ವಿಮಲಾ ಮಧ್ವರಾವ ಜೋಶಿ	೩೨೪
೧೯	ಬಸವ್ವಾ ಸಾವಿತ್ರೆವ್ವಾ ಪತ್ತಾರ	೩೨೩
೨೦	ತಂಗುಬಾಯಿ ಶ್ರೀನಿವಾಸರಾವ ಹುಯಿಲಗೋಳಕರ	೩೨೧
೨೧	ಸೋನುಬಾಯಿ ಗಣೇಶದೀಕ್ಷೀತ ಜೈನಿ	೩೧೯
೨೨	ತಾರಾಬಾಯಿ ತುಕಾರಾಮ ಸಿಂಧ್ಯೆ	೩೧೬
೨೩	ತುಲಸಾಬಾಯಿ ಭೀಮರಾವ ಭೋಸಲೆ	೩೧೨
೨೪	ಬಾಳಾಬಾಯಿ ಗಣಪತರಾವ ಶಿತೋಳೆ	೩೦೮
೨೫	ಭಾಗೀರಥಿ ಹನುಮಂತಪ್ಪಾ ಕೋಪರ್ಡೆ	೩೦೭
೨೬	ರಾಧಾಬಾಯಿ ಸುಂದ್ರಾಬಾಯಿ ಚಲ್ವಾದಿ	೩೦೪
೨೭	ಮೈನಾಬಾಯಿ ಅಪ್ಪಣ್ಣಾ ಮೇಕೇಗೋಳ	೨೯೯
೨೮	ಪಾರ್ವತೆವ್ವಾ ವೀರಪ್ಪಾ ಉಪ್ಪಿನ	೨೯೮
೨೯	ಸುಶೀಲಾಬಾಯಿ ಸಿದ್ದಲಿಂಗಯ್ಯಾ ಹಿರೇಮಠ	೨೭೭

ಮರಾಠಿ

೧	ಸುಶೀಲಾ ಮಹಾದೇವ ಸಾಠೆ	೪೪೦
೨	ಪ್ರಮೀಲಾ ವಿಷ್ಣು ದೇಶಪಾಂಡೆ	೪೩೬
೩	ಇಂದುಮತಿ ಹರಿಪಂತ ಗಿಂಡೆ	೪೧೧
೪	ಯೇಸುತಾಯಿ ವಿಷ್ಣುಪಂತ ಉತ್ತೂರಕರ	೪೧೦
೫	ಶಕುಂತಲಾಬಾಯಿ ಹನಮಂತರಾವ ಹಣಗಂಡಿ	೪೦೧
೬	ಇಂದುಮತಿ ಅನಂತರಾವ ದಳವಿ	೩೯೫
೭	ಉಷಾ ಗೋವಿಂದರಾವ ಉಣಕಲ್ಲ	೩೮೪
೮	ಕಮಲಾ ಲಕ್ಷ್ಮಣ ಸಿಣಗರವಾಡಿ	೩೮೦
೯	ಅಂಬಾಬಾಯಿ ಶಂಕರರಾವ ರೆಡ್ಕರ	೩೭೯
೧೦	ಚಂಪಾ ಅಣ್ಣಾಜಿ ಕುಲಕರ್ಣಿ	೩೫೮
೧೧	ಸುಶೀಲಾ ಚಿಂತಾಮಣಿ ದೇಶಪಾಂಡೆ	೩೫೭
೧೨	ಕಮಲಾ ಭಿಕಾಜಿ ಗುಂಜೀಕರ	೩೪೯

೭ ತ್ರಿವೇಣೀಬಾಯಿ ಮಧ್ವರಾವ ಬಿದರಕುಂದಿ ೩೧
೮ ಶಾಂತಾ ವಾಮನರಾವ ಘೋತ್ರಿಕರ ೩೮
೯ ಸರಸ್ವತಿಬಾಯಿ ರೇವಣಸಿದ್ದಪ್ಪಾ ಮಣ್ಣೂರ ೩೯

ಮರಾಠಿ

೧ ಕಾಶೀಬಾಯಿ ಶಂಕರಲಾಲ ಅಗರವಾಲೆ ೩೪
೨ ಶೀಲವತಿ ಬಾಲಕೃಷ್ಣ ಕರಂದೀಕರ ೩೯

ಉರ್ದು

ಇಲ್ಲ

ಬೆಳಗಾವಿ ಜಿಲ್ಲಾ

ಬೆಳಗಾವಿ ಸೆಂಟರ

ಕನ್ನಡ

೧ ನರ್ಮದಾ ನರಸಿಂಹಾಚಾರ್ಯ ಹೊನವಾಡ ೪೨
೨ ಕಲ್ಲವ್ವಾ ಚನ್ನಪ್ಪಾ ಕಂಬಾರ ೪೦
೩ ಗ್ರೇಸ ಸಾಲಮನ ಲೂಥರ ೪೦
೪ ಅಕ್ಕುಬಾಯಿ ಸೋಮಗೌಡಾ ಪಾಟೀಲ ೩೮
೫ ಗಂಗಾಬಾಯಿ ಚನ್ನಬಸವಸ್ವಾಮಿ ಹಿರೇಮಠ ೩೮
೬ ಮಾರ್ಗಾರೆಟ್ ಸೈಮನ್ ಅರಳೀಕಟ್ಟಿ ೩೭
೭ ಕಮಲಾ ಚನ್ನಪ್ಪಾ ಬುಧರಪುರ ೩೭
೮ ಗ್ರೇಸ ಎಜಕಲ್ ಆಲದ ೩೬
೯ ತವನವ್ವಾ ಗೋವಿಂದಪ್ಪಾ ಕುಲಗೋಡ ೩೬
೧೦ ಶಿವಗಂಗವ್ವಾ ಫಕ್ಕಿರಗೌಡಾ ಪಾಟೀಲ ೩೬
೧೧ ಜಯವಂತಿ ನಿಂಗಪ್ಪಾ ಗೋಟಡಕಿ ೩೬
೧೨ ಗೌರವ್ವಾ ಸಿದ್ದಪ್ಪಾ ಕೋಳಿ ೩
೧೩ ಪಾರ್ವತಿ ಗುರುಸಿದ್ದಪ್ಪಾ ಭೋಜಣ್ಣವರ ೩
೧೪ ಮಲ್ಲವ್ವಾ ಪರಸಪ್ಪಾ ಸುಣಗಾರ ೩
೧೫ ಸುಮಿತ್ರಾಬಾಯಿ ರಾಮಚಂದ್ರರಾವ ಗುಲ್ಲಹೊಸೂರ ೩

೧೬	ಮನೋರಮಾ ಆನಂದರಾವ ದಮ್ಮಣಗಿ	೩೩೩
೧೭	ಮುರಿಗೆವ್ವಾ ಮಲ್ಲಪ್ಪಾ ಭೋಜ	೩೯೭
೧೮	ವಿಮಲಾ ಮಧ್ವರಾವ ಜೋಶಿ	೩೨೪
೧೯	ಬಸವ್ವಾ ಸಾವಿತ್ರೆವ್ವಾ ಪತ್ತಾರ	೩೨೨
೨೦	ತಂಗುಬಾಯಿ ಶ್ರೀನಿವಾಸರಾವ ಹುಯಿಲಗೋಳಕರ	೩೨೧
೨೧	ಸೋನುಬಾಯಿ ಗಣೇಶದೀಕ್ಷಿತ ಚೈನಿ	೩೧೯
೨೨	ತಾರಾಬಾಯಿ ತುಕಾರಾಮ ಸಿಂಧ್ಯೆ	೩೧೬
೨೩	ತುಲಸಾಬಾಯಿ ಭೀಮರಾವ ಭೋಸಲೆ	೩೧೨
೨೪	ಬಾಳಾಬಾಯಿ ಗಣಪತರಾವ ಶಿತೋಳೆ	೩೦೮
೨೫	ಭಾಗೀರಥಿ ಹನುಮಂತಪ್ಪಾ ಕೋಪರ್ಡೆ	೩೦೭
೨೬	ರಾಧಾಬಾಯಿ ಸುಂದ್ರಾಬಾಯಿ ಚಲ್ವಾದಿ	೩೦೪
೨೭	ಮೈನಾಬಾಯಿ ಅಪ್ಪಣ್ಣಾ ಮೇಕೇಗೋಳ	೨೯೯
೨೮	ಪಾರ್ವತೆವ್ವಾ ವೀರಪ್ಪಾ ಉಪ್ಪಿನ	೨೯೮
೨೯	ಸುಶೀಲಾಬಾಯಿ ಸಿದ್ದಲಿಂಗಯ್ಯಾ ಹಿರೇಮಠ	೨೭೭

ಮರಾಠಿ

೧	ಸುಶೀಲಾ ಮಹಾದೇವ ಸಾಠೆ	೪೪೦
೨	ಪ್ರಮೀಲಾ ವಿಷ್ಣು ದೇಶಪಾಂಡೆ	೪೩೬
೩	ಇಂದುಮತಿ ಹರಿಪಂತ ಗಿಂಡೆ	೪೧೧
೪	ಯೇಸುತಾಯಿ ವಿಷ್ಣುಪಂತ ಉತ್ತೂರಕರ	೪೧೦
೫	ಶಕುಂತಲಾಬಾಯಿ ಹನಮಂತರಾವ ಹಣಗಂಡಿ	೪೦೧
೬	ಇಂದುಮತಿ ಅನಂತರಾವ ದಳವಿ	೩೯೫
೭	ಉಷಾ ಗೋವಿಂದರಾವ ಉಣಕಲ್ಲ	೩೮೪
೮	ಕಮಲಾ ಲಕ್ಷ್ಮಣ ಸಿಣಗರವಾಡಿ	೩೮೦
೯	ಅಂಬಾಬಾಯಿ ಶಂಕರರಾವ ರಿಸ್ಮರ	೩೭೯
೧೦	ಚಂಪಾ ಅಣ್ಣಾಜಿ ಕುಲಕರ್ಣಿ	೩೫೮
೧೧	ಸುಶೀಲಾ ಚಿಂತಾಮಣಿ ದೇಶಪಾಂಡೆ	೩೫೭
೧೨	ಕಮಲಾ ಭಿಕಾಜಿ ಗುಂಜೀಕರ	೩೪೬

೧೩ ಪ್ರೇಮಪತಿ ಗಣೇಶ ನಾಯಿಕ ಕಾಮತ ೩೪೧
೧೪ ಸರೋಜಿನಿ ಸೀತಾರಾಮ ಉಪಾಧ್ಯೆ ೩೩೩
೧೪ ಅನುಸೂಯಾ ಗಣಪತರಾವ ನಾಡಿಗೇರ ೩೩೩
೧೬ ಸಿಂಧು ವಿಷ್ಣುಭಟ್ಟ ಸದಲಗೇಕರ ೩೨೮
೧೭ ಸಾವಿತ್ರಿ ಪರಾಂಡೆ ೩೨೫
೧೮ ಚಂಪ್ರಭಾಗ ಮಂಗೇಶರಾವ ಫಡನೀಸ ೩೧೯
೧೯ ಕಮಲಾ ವಾಸುದೇವರಾವ ಕಾಮತ ೩೦೭
೨೦ ಶಾರದಾಬಾಯಿ ಗಣಪತರಾವ ಓಕ ೩೦೭
೨೧ ಮುಕ್ತಾ ನೀಲಕಂಠರಾವ ಹವಾಲದಾರ ೩೦೪
೨೨ ವಿಮಲ ಕೃಷ್ಣರಾವ ಕುಲಕರ್ಣಿ ೩೦೨
೨೩ ಇಂದಿರಾ ಬಾಳಪ್ಪಾ ಚಂದಗಡಕರ ೩೦೦
೨೪ ದುರ್ಗಾಬಾಯಿ ಘನಸೀಲ ಕರಂದೀಕರ ೨೯೮
೨೫ ವಿಮಲಾ ಬಾಲಕೃಷ್ಣ ಘಾಟಿಕ ೨೯೪

ಉರ್ದು

೧ ಐಶಾಬಿ ಮಹಮ್ಮದಹುಸೇನಸಾಬ ನದಾಫ ೩೯೨
೨ ಜಬುನ್ನಿಸಾ ಸುಲ್ತಾನಸಾಹೇಬ ಯವಾರಿ ೩೩೫

ಕಾರವಾರ ಸೆಂಟರ

ಕನ್ನಡ

೧ ನೀಲಾ ರಾಮಾ ಚಮಗಾರ ೩೭೮
೨ ಸುಶೀಲಾ ಸುಬ್ರಾಯ ಶೆಟ್ಟಿ ೩೩೦
೩ ಸೀತಾ ಮಹಾಬಳ ಭಟ್ಟ ೩೫೦
೪ ಲಲಿತಾ ಘಾತರ್ಪೇಕರ ೩೧೭
೫ ಬೇಯಿ ಮಂಗಳಿ ೨೯೭
೬ ಸಾವಿತ್ರಿಬಾಯಿ ದತ್ತಾತ್ರಯ ನಾಯ್ಕೋಡಕರ ೨೭೮

ಮರಾಠಿ

೧ ಹಿರಾ ವಿಠ್ಠಲ ಧುಮೆ ೩೫೧
೨ ಪ್ರೇಮಾ ಶಾನುರಾವ ಸುಕ್ಟನಕರ ೩೭೩

೩ ಶಾಂತಾ ದತ್ತಾತ್ರೆಯ ವಾಗಳೆ ೩೭೨

೪ ಅಂಬಾ ವಿಠ್ಠಲರಾವ ಧುಮೆ ೩೬೭

೫ ಕಲ್ಯಾಣಿ ಶಾಣು ಪ್ರಭು ೩೪೩

೬ ಲಕ್ಷ್ಮೀ ವಿನಾಯಕ ವಾಘ ೩೪೧

೭ ಜೋರ್ಜೀನ ಪೆದ್ರು ಅಲ್ಫೊನ್ಸೊ ೩೨೪

೮ ಶಾಂತಾ ನಾರಾಯಣ ಹಿಚಕಡ ೩೧೭

೯ ಅಹಿಲ್ಯಾ ಗಂಗಾಧರ ಘಾತರ್ಪೇಕರ ೩೧೪

೧೦ ಅಂಬಾ ಶಾನುರಾವ ಸುಕ್ಟನಕರ ೩೧೨

೧೧ ಇಂದಿರಾ ಮಂಗೇಶ ಪಿಂಗೆ ೩೦೫

೧೨ ಸುಶೀಲಾ ಭಾಸ್ಕರ ನಾಡಕರ್ಣಿ ೩೦೪

೧೩ ರಮಾ ವೈಕುಂಠ ಪಾಲೇಕರ ೩೦೧

೧೪ ಕಮಲಾ ಮುಕುಂದ ನಾಡಕರ್ಣಿ ೨೭೬

ಉರ್ದು

ಇಲ್ಲ

ಕೊಲ್ಹಾಪೂರ

ಮರಾಠಿ

೧ ಅಕುತಾಯಿ ಗೋವಿಂದ ಕೋಡವಡೇಕರ ೩೬೫

೨ ಯಮುತಾಯಿ ಅಚ್ಯುತ ಗದ್ರೆ ೩೬೦

೩ ಇಂದಿರಾ ಮಾಲೋಜಿ ಅವಳೆ ೩೫೮

೪ ರತ್ನಮಾಲಾ ಸಿದು ಕಾಳೆ ೩೪೬

೫ ಇಂದು ರಾಮಚಂದ್ರ ಹಿರಾಳಿಕರ ೩೪೫

೬ ವಿಮಲ ಮಲ್ಹಾರ ವಾಕನೀಸ ೩೪೪

೭ ಶೇವಂತಿ ದತ್ತಾತ್ರೆಯ ಸಿಂದೆ ೩೩೫

೮ ಶಾಂತಾತಾಯಿ ಬಾಬುರಾವ ಕಾಸಾರ ೩೩೩

೯ ಇಂದುತಾಯಿ ವಿಷ್ಣುಪಂತ ಗೋಸಾವಿ ೩೩೧

೧೦ ಸಾವಳಾ ಗೋವಿಂದ ಜೋಶಿ ೩೨೯

೧೧	ಸುಮನ ಕೇಶವ ಜೀಕನಾಳಕರ	೩೨೩
೧೨	ಮಾರ್ಥಾ ಆನಂದರಾವ ಫನ್ಸೋಪ್ಕರ	೩೧೮
೧೩	ಮನೋರಮಾ ಶಂಕರರಾವ ಗಾಯಕವಾಡ	೩೧೭
೧೪	ಶಾಂತಾ ಬಳವಂತ ಕುಲಕರ್ಣಿ	೩೧೬
೧೫	ಗಂಗು ದಾಮೋದರ ದೇಶಪಾಂಡೆ	೩೧೫
೧೬	ಶಾಂತಾ ಬಳವಂತ ಪತ್ರಾಪಳಿ	೩೧೪
೧೭	ಮಿಸೆಸ್ ಇಂದಿರಾ ದಾಮೋಧರ ಚರಣಕರ	೩೧೧
೧೮	ಶಕುಂತಲಾ ಹರಿಭಾವು ಸಂಗಾವಕರ	೩೧೦
೧೯	ಶಾಂತಾದೇವಿ ಮೋಹನಲಾಲ ಜೋಶಿ	೩೧೦
೨೦	ಕೃಷ್ಣಾ ತಾಯಿ ದತ್ತಾತ್ರಯ ಕುಲಕರ್ಣಿ	೩೦೮
೨೧	ಮಿಸೆಸ್ ಸರಸ್ವತಿಬಾಯಿ ಗಣಪತರಾವ ವಟ್ಪೂರಕರ	೩೦೮
೨೨	ಕಮಲ ಅಣ್ಣಪ್ಪಾ ಸಿಬೆ	೨೯೪
೨೩	ಬನುತಾಯಿ ರಘುನಾಥ ಗೋಖಲೆ	೨೯೪
೨೩	ಮಿಶಸ್ ಸುಶೀಲಾ ತಾಯಪ್ಪರಾವ ಖಡೆ	೨೯೪
೨೫	ಇಂದುಮತಿ ಪಾಂಡುರಂಗರಾವ ಥೋರಟ	೨೯೨
೨೬	ಸಿಂಧು ರಾಮಕೃಷ್ಣರಾವ ಕಾಳೆ	೨೮೯
೨೭	ಶಾಂತಾ ವೆಂಕಟೇಶ ಕುಲಕರ್ಣಿ	೨೮೫
೨೮	ಇಂದಿರಾ ಅರ್ಜುನರಾವ ರಾಣೆ	೨೭೯
೨೯	ಸುಶೀಲಾತಾಯಿ ಭಯ್ಯಾಸಾಹೇಬ ಪಟವರ್ಧನ	೨೭೯
೩೦	ಸಾವಿತ್ರಿ ಜಾನರಾವ ಮುರನಾಳ	೨೭೫
೩೧	ಸರಲಾ ಸಕ್ಕರಲಾಲ ಶಹಾ	೨೭೧
೩೨	ಕಮಲಾ ವಾಮನ ಸಾಳ್ವಿ	೨೬೬
೩೩	ದ್ವಾರಕಾತಾಯಿ ಭಯ್ಯಾಸಾಹೇಬ ಪಟವರ್ಧನ	೨೬೫
೩೪	ಭಬು ಬಂಡೋಪಂತ ಕುಲಕರ್ಣಿ	೨೬೪

ಬೇಗ ತರಿಸಿಕೊಳ್ಳಿರಿ]   [ಬೆಲೆ ೧೧ ಆಣೆ

ಕನ್ನಡ ಸುಲಭ ಭೂಮಿತಿ ೧ನೆಯ ಪುಸ್ತಕ

(೬ನೆಯ, ೭ನೆಯ ಇಯತ್ತೆಗಳ ಹಾಗು ಟ್ರೇ. ಸಂಸ್ಥೆಗಳಿಗೆ
ಮಂಜೂರಾದ **ಟೆಕ್ಸ್ಟ** ಪುಸ್ತಕ)

ವಿದ್ಯಾರ್ಥಿಗಳಿಗೂ, ಮಾಸ್ತರರಿಗೂ ಅತ್ಯಂತ ಉಪಯುಕ್ತವಾದ, ಹೊಸ ಮಾದರಿಯುಳ್ಳ ಪ್ರೊ. **ಪತ್ರಾವಳಿ** ಎಮ್. ಎ., ಬಾರ. ಆ್ಯಟ್. ಲಾ; ಗಣಿತಾಧ್ಯಾಪಕ **ಉಮಡಿ** ಎಮ್. ಏ. ಎಸ್. ಟಿ. ಸಿ. ಡಿ. ಹಾಗು ಗಣಿತಾಧ್ಯಾಪಕ **ವಾಳವೇಕರ** ಎಮ್. ಏ., ಎಸ್. ಟಿ. ಸಿ. ಡಿ. ಮೊದಲಾದ ತಜ್ಞರಿಂದ ಉತ್ತಮ ಅಭಿಪ್ರಾಯಗಳನ್ನು ಪಡೆದ ಈ ಪುಸ್ತಕವು ಮಾರಾಟಕ್ಕೆ ಸಿದ್ಧವಾಗಿದೆ. ಜಿಲ್ಹೆಯ ಸ್ಕೂಲ್‌ಬೋರ್ಡಿನವರು ಶಾಲೆಗಳಲ್ಲಿ ಈ ಪುಸ್ತಕವನ್ನು ಹಚ್ಚಬೇಕೆಂದು **ಸರಕ್ಯೂಲರ**ವನ್ನು ತೆಗೆದಿದ್ದಾರೆ. ಮಾಸ್ತರರಿಗೂ, ಪುಸ್ತಕವ್ಯಾಪಾರಿಗಳಿಗೂ ತುಂಬಾ ಕಮಿಶನ್ ಕೊಡುವೆವು. ಪುಸ್ತಕಗಳು ಡಿ. ಎಮ್. ಜೋಗಲ ಪ್ರಾ್ಯ. ಸ್ಕೂಲ್ ಟ್ರೇ. ಕಾ. ಪುಣೆ; ಜೆ. ಜಿ. ಕುಲಕರಣಿ ಪ್ರಾ್ಯ. ಸ್ಕೂಲ್ ಟ್ರೇ. ಕಾ. ಧಾರವಾಡ ಹಾಗು ನವೀನ ಕಿತಾಬಖಾನಾ ಪುಣೆ ೨ ಈ ಸ್ಥಳಗಳಲ್ಲಿ ದೊರೆಯುವವು.

Reg. No. B. 3891

ವಾಗ್ವಿಲಾಸ ಬುಕ್‌ಡೀಪೋ ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ಬೆಲೆ ರೂ ಆ ಪೈ
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦-೬-೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟೆಕೃತ)	೦-೮-೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦-೪-೦
ಹಿಂದುಸ್ಥಾನದ ಇತಿಹಾಸ (ಬನವನಾಳಕೃತ)	೦-೮-೬
ಲಘುವ್ಯಾಕರಣ (ವೈ. ಕಟ್ಟೀಕೃತ)	೦-೦-೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦-೩-೦
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦-೧೦-೬
ಚಿತ್ರಮಯ ಕೋಷ್ಟಕ (ಉಗ್ರಕೃತ) ೩ನೇ ಇ. ಗೆ	೦-೨-೦
ಗಣಿತಾದರ್ಶ (ಜೋಶಿ ಕೃತ) ೨ನೇ ಇ. ಗೆ	೦-೪-೦
,, ,, ೩ನೇ ,,	೦-೨-೦
,, , ೪ನೇ ,,	೦-೫-೦
ಅಂಕಗಣಿತ (ಗಾಂವಕರಕೃತ) ೩ನೇ ,,	೦-೫-೦
ಧಾರವಾಡ ಜಿಲ್ಹಾ ವರ್ಣನೆ (ಅಣ್ಣೀಗೇರಿ ಕೃತ) ೩ನೇ ಇ. ಗೆ	೦-೪-೦
ವಿಜಾಪೂರ ,, ,, (,,) ೩ನೇ ,,	೦-೪-೦
ಧಾರವಾಡ ಜಿಲ್ಹಾ ,, (ಕುರಡೀಕೃತ)	೦-೫-೦
ಹಿಂದುಸ್ಥಾನ ಭೂಗೋಲು (ಮುಗದಾಲಕೃತ)	೦-೮-೦
ನುಡಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦-೧೦-೦
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	೦-೫-೦
,, ವಿಜ್ಞಾನ ಸಚಿತ್ರ (ನಾಡಿಗೇರಕೃತ)	೦-೧೨-೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦-೨-೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦-೧೦-೦
ಸರಸ್ವತಿ ವಿಜಯ (ಬೂದೀಹಾಳಕೃತ)	೦-೪-೦

ಪತ್ತೆ:— **ಪಿ. ಆರ್. ಶಿವನಾಗಪ್ಪ,**
ಬುಕ್‌ಸೇಲರ ಹುಬ್ಬಳ್ಳಿ.

ಜುಲೈ-೧೯೩೬

Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

	ವಿಷಯ	ಪುಟ.
೧	ಶ್ರೀ. ಮುಗದಾಳ ವೆಂಕಟರಾಯರು	೧
೨	ನವರತ್ನಮಾಲೆ	೭
೩	ಪ್ರಕೃತಿ ವಿಮರ್ಶೆ	೯
೪	ಪಾಠದ ನಿರೀಕ್ಷಣೆ	೧೭
೫	ಭೂಗೋಲದ ಪಾಠಗಳು	೨೧
೬	ಹಳ್ಳಿಯ ಶಾಲೆಗಳ ವ್ಯಾಯಾಮವು	೩೦
೭	ಪತ್ರಗಳ ಸಾರಾಂಶ	೩೨ ಹಾಗು ಕವ್ಹರ ಪೇಜ ೩

Printed by K. R, Bhise at the Karnatak printing Works, Dharwar
and Published by D. V. Kale, B. A., Head Master.
Training School, Dharwar, at his Office.

ಬೇಗ ತರಿಸಿಕೊಳ್ಳಿರಿ] [ಬೆಲೆ ೧೧ ಆಣೆ

ಕನ್ನಡ ಸುಲಭ ಭೂಮಿತಿ ೧ನೆಯ ಪುಸ್ತಕ

(೬ನೆಯ, ೭ನೆಯ ಇಯತ್ತೆಗಳ ಹಾಗು ಟ್ರೇ. ಸಂಸ್ಥೆಗಳಿಗೆ ಮಂಜೂರಾದ **ಟೆಕ್ಸ್ಟ** ಪುಸ್ತಕ)

ವಿದ್ಯಾರ್ಥಿಗಳಿಗೂ, ಮಾಸ್ತರರಿಗೂ ಅತ್ಯಂತ ಉಪಯುಕ್ತವಾದ, ಹೊಸ ಮಾದರಿಯುಳ್ಳ ಪ್ರೊ. **ಪತ್ರಾವಳಿ** ಎಮ್. ಎ., ಬಾರ. ಆ್ಯಟ್. ಲಾ; ಗಣಿತಾಧ್ಯಾಪಕ **ಉಮಡಿ** ಎಮ್. ಏ. ಎಸ್. ಟಿ. ಸಿ. ಡಿ. ಹಾಗು ಗಣಿತಾಧ್ಯಾಪಕ **ಪಾಳನೇಕರ** ಎಮ್. ಏ., ಎಸ್. ಟಿ. ಸಿ. ಡಿ. ಮೊದಲಾದ ತಜ್ಞರಿಂದ ಉತ್ತಮ ಅಭಿಪ್ರಾಯಗಳನ್ನು ಪಡೆದ ಈ ಪುಸ್ತಕವು ಮಾರಾಟಕ್ಕೆ ಸಿದ್ಧವಾಗಿದೆ. ಜಿಲ್ಹೆಯ ಸ್ಕೂಲ್‌ಬೋರ್ಡಿನವರು ಶಾಲೆಗಳಲ್ಲಿ ಈ ಪುಸ್ತಕವನ್ನು ಹಚ್ಚಬೇಕೆಂದು **ಸರಕ್ಯೂಲರ**ವನ್ನು ತೆಗೆದಿದ್ದಾರೆ. ಮಾಸ್ತರರಿಗೂ, ಪುಸ್ತಕವ್ಯಾಪಾರಿಗಳಿಗೂ ತುಂಬಾ ಕಮಿಶನ್ ಕೊಡುವೆವು. ಪುಸ್ತಕಗಳು ಡಿ. ಎಮ್. **ಜೋಗಲ** ಪ್ರಾ್ಯ. ಸ್ಕೂಲ್ ಟ್ರೇ. ಕಾ. ಪುಣೆ; ಜೆ. ಜಿ. ಕುಲಕರಣಿ ಪ್ರಾ್ಯ. ಸ್ಕೂಲ್ ಟ್ರೇ. ಕಾ. ಧಾರವಾಡ ಹಾಗು ನವೀನ ಕಿತಾಬಖಾನಾ ಪುಣೆ ೨ ಈ ಸ್ಥಳಗಳಲ್ಲಿ ದೊರೆಯುವವು

ಮಾರಾಟಕ್ಕೆ ಸಿದ್ಧವಿದೆ

ಗಣಿತ ಶಿಕ್ಷಕ

ಬ. ದು. ಹಿರೇಮಠ ಕೃತ

೩ನೆಯ ಆವೃತ್ತಿ

ಶಿಕ್ಷಕ ಬಾಂಧವರೇ, ಈ ಪುಸ್ತಕವು ಕನ್ನಡ ೫–೬–೭ ನೆಯ ಇಯತ್ತೆಗಳ ಮತ್ತು ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಮತ್ತು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಅಭ್ಯಾಸಕ್ರಮಕ್ಕನುಸರಿಸಿ ರಚಿಸಲ್ಪಟ್ಟಿದೆ. ಇದರ ಮಹತ್ವವನ್ನು ವರ್ಣಿಸಲವಶ್ಯವಿಲ್ಲ. ಕರ್ನಾಟಕದ ಎಲ್ಲ ಜನರಿಂದಲೂ ಆದರವನ್ನು ಹೊಂದಿರುವದು. ಆದುದರಿಂದಲೇ ಸ್ವಲ್ಪದಿವಸಗಳಲ್ಲಿಯೇ ಇದು **ಮೂರನೆಯ ಆವೃತ್ತಿ**ಯನ್ನು ಪಡೆದಿರುವದು. ಒಂದು ಪ್ರತಿಯನ್ನಾದರೂ ತರಿಸಿ ನೋಡಿದರೆ ಅದರ ಯೋಗ್ಯತೆಯು ತಮಗೂ ತಿಳಿಯುವದು.

ವ್ಯಾಪಾರಸ್ಥರಿಗೂ ಶಿಕ್ಷಕರಿಗೂ ಯೋಗ್ಯ ಸವಲತು ದೊರೆಯುವದು. ಪುಸ್ತಕಗಳು **ಏ.** ಆರ್. ಶಿವನಾಗಪ್ಪ ಹುಬ್ಬಳ್ಳಿ ಇವರಲ್ಲಿಯೂ ಎಲ್ಲ ಊರುಗಳ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ಬಸಪ್ರಭಯ್ಯಾ ದುಂಡಯ್ಯಾ ಹಿರೇಮಠ,
ಕನ್ನಡ ಶಾಲಾಮಾಸ್ತರ ವಿಜಾಪುರ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು :— ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ಸಂಪುಟ ೭೪	ಜುಲೈ ೧೯೩೬	ವರ್ಷ ೮ ಸಂ. ೪

ಶುಭಾಕಾಂಕ್ಷೆ

ಶ್ರೀ ಮುಗದಾಳ ವೆಂಕಟರಾಯರು, B A. ಅವರು ಧಾರವಾಡ ಹೈಸ್ಕೂಲಿನ ಹೆಡ್ ಮಾಸ್ತರರಾದರೆಂಬ ಶುಭವಾರ್ತೆಯನ್ನು ತಮಗೆ ತಿಳಿಸಲು ನಮಗೆ ತುಂಬ ಸಂತೋಷವೆನಿಸುತ್ತದೆ. ಶ್ರೀ ವೆಂಕಟರಾಯರು ಪ್ರಾಥಮಿಕ ಶಿಕ್ಷಣದ ಸಂಪಾದಕರಿದ್ದುದರಿಂದ ಅದರ ವಾಚಕರಾದ ತಮಗೆ ಅವರೇನೂ ಅಪರಿಚಿತರಲ್ಲ. ಅವರ ಹೆಸರನ್ನು ಕೇಳಿದೊಡನೆಯೆ ತಾವೆಲ್ಲ, ವಿಶೇಷವಾಗಿ ಶಿಕ್ಷಕರೆಲ್ಲ, ಆನಂದೋತ್ಸಾಹಗಳಿಂದ ನಲಿವರೆಂಬ ವಿಷಯದಲ್ಲಿ ಸಂಶಯವಿಲ್ಲ. ಈ ಸಂದರ್ಭವು— ಅವರು ಯಾವ ಸ್ಕೂಲಿನಲ್ಲಿ ಕಡೆಕಡೆಯ ಸಹಾಯಾಧ್ಯಾಪಕ (Asst. Master) ರಾಗಿ ಸರಕಾರದ ನೌಕರಿಯನ್ನು ಪ್ರಾರಂಭಿಸಿದರೋ ಅದೇ ಸ್ಕೂಲಿನ ಮುಖ್ಯಾಧ್ಯಾಪಕ (Head Master) ರಾಗಿ ನಿಯಮಿಸಲ್ಪಟ್ಟಿರುವ ಈ ಸಮಯವು - ಅವರ ಆಯುಷ್ಯದಲ್ಲಿ ಹೊಸದೊಂದು ಪರಿವರ್ತನವು. ಈ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣದ ಸಂಪಾದಕರ ಸ್ಥಾನಕ್ಕೆ ಹೊಸದಾಗಿ ಬಂದ ನಾವು, ಅವರ ಶ್ರೇಯೋಭಿವೃದ್ಧಿಗೆ ಕಾರಣವಾಗಿರುವ ಅವರ ಚರಿತ್ರಾಂಶಗಳ ಸಿಂಹಾವಲೋಕನಮಾಡುವದು ಅಪ್ರಸ್ತುತವಾಗಲಾರದೆಂದು ನಂಬಿದ್ದೇವೆ.

(೧) **ಬುದ್ಧಿವತ್ತೆ ಮತ್ತು ಉದ್ಯೋಗ ಶೀಲತೆ ಇವು ಇರುವಲ್ಲಿ ಏಳಿಗೆಯು ಸಿದ್ಧವಾದದ್ದು.**—“ಬೆಳೆಯುಸಿರಿ ಮೊಳೆಯುಲ್ಲಿ ನೋಡು” ಎಂಬ ಗಾದೆಯಂತೆ ಶ್ರೀ. ವೆಂಕಟರಾಯರು ಬಾಲ್ಯದ ಪ್ರಾಥಮಿಕ ಶಿಕ್ಷಣದ ಕಾಲದಲ್ಲಿಯೇ ತಮ್ಮ ಪ್ರತಿಭೆ, ಉದ್ಯೋಗಶೀಲತೆ ಇವುಗಳಿಂದ ಉಳಿದ ವಿದ್ಯಾರ್ಥಿ

ಗಳಿಗಿಂತ ಉಚ್ಚಶ್ರೇಣಿಯುವರೆಂಬುದು ಯಾವಾಗಲೂ ಒಡೆದು ಕಾಣಿಸುತ್ತಿದ್ದಿತು. ಈ ಗುಣಗಳಿಂದಲೇ ಮುಂದೆ ಉಚ್ಚ ಶಿಕ್ಷಣದಲ್ಲಿ ಕೂಡ ಯಶಸ್ವಿಗಳಾಗಿ ಬಿ.ಏ. ಪರೀಕ್ಷೆಯಲ್ಲಿ ದ್ವಿತೀಯವರ್ಗದಲ್ಲಿ (Second class) ಪಾಸಾಗುವ ಮಾನವನ್ನು ಹೊಂದಿದರು. ಕಾಲೇಜದಲ್ಲಿ ಶಿಕ್ಷಣವೃತ್ತಿ (fellowship) ಯನ್ನು ಪಡೆದು ' ದಕ್ಷಿಣಾಫೆಲೋ ' ಗಳಾಗಿ ಆರಿಸಲ್ಪಟ್ಟರು. ಆಗ ಕನ್ನಡವನ್ನು ವಿಶೇಷವಾಗಿ ಅಭ್ಯಾಸಿಸುವದಕ್ಕೆ ಇವರಿಗೆ ಅನುಕೂಲತೆ ದೊರೆಯಿತು. ವಿದ್ಯಾರ್ಥಿದಶೆಯಲ್ಲಿ ಮುಂದುವರಿದ ಹತ್ತೆಂಟು ಜನ ಸಹಾಧ್ಯಾಯಿಮಿತ್ರರು ಇವರ ಸಾಹಚರ್ಯವನ್ನು ಬಯಸಿ ಯಾವಾಗಲೂ ಇವರ ಸಂಗಡ ಇರುತ್ತಿದ್ದರು. ಬುದ್ಧಿಮತ್ತೆ, ಉದ್ಯೋಗ ಈ ಗುಣಗಳ ಮೂಲಕವಾಗಿಯೇ ಇವರ ಅಧ್ಯಾಪಕವರ್ಗಕ್ಕಾಗಲಿ ಸ್ನೇಹಿತ ವರ್ಗಕ್ಕಾಗಲಿ ಇವರನ್ನು ಕಂಡರೆ ಅದೆಷ್ಟೊ ಪ್ರೀತಿ, ಅದೆಷ್ಟೊ ಆದರ. ಈ ಗುಣಗಳಮೂಲಕವಾಗಿಯೇ ಇವರು ನೌಕರಿಯನ್ನು ಅಪೇಕ್ಷಿಸಿದಾಗ ಧಾರವಾಡ ಹೈಸ್ಕೂಲಿನ ಅ॥ ಮಾ॥ ರ ಸ್ಥಳಕ್ಕೆ ಆದರಪೂರ್ವಕವಾದ ಕರೆ ಬಂದಿತು.

(೨) ಪ್ರತಿಭಾಶಾಲಿಗಳೂ ಉದ್ಯೋಗಿಗಳೂ ಆದವರು ಎಲ್ಲರಿಗೂ ಪ್ರಿಯರಾಗುವರು ; ಎಲ್ಲೆಲ್ಲಿಯೂ ಅವರೇ ಬೇಕು.—ಶ್ರೀ. ವೆಂಕಟರಾಯರಿಗೆ ಆಗಿನ ಕಾಲದ ವಿದ್ಯಾಖಾತೆಯ ಅಧಿಕಾರಿಗಳು ಕರೆದು ನೌಕರಿಯನ್ನು ಕೊಟ್ಟರು. ಆ ಕಾಲದಲ್ಲಿ ದ. ಭಾ. ದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಕರಂದೀಕರ ಸಾಹೇಬರೂ, ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಾಗಿದ್ದ ಲೋಕಪ್ರಿಯ ರೊದ್ದರಾಯರೂ, ಸರ್ವಮಾನ್ಯ ಜೋಶೀರಾಯರೂ ಇವರನ್ನು ಎಲ್ಲ ಕೆಲಸಗಳಲ್ಲಿ ಮುಂದೆ ಕರೆದು ಪ್ರೋತ್ಸಾಹಿಸಿದರು. ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದ ಲೇಡೀ ಸುಪರಿಂಟೆಂಡೆಂಟರಾದ ಮಿಸ್. ನ್ಯೂಲಂಡರವರೂ, ಮಿಸ್. ಮೆಕಾಫಿಯವರೂ ಇವರ ಕರ್ತೃತ್ವಶಕ್ತಿಯನ್ನೂ ಶಿಕ್ಷಣಕಲಾಭಿಜ್ಞತೆಯನ್ನೂ ಮನವಾರೆ ಹೊಗಳಿದ್ದಾರೆ. ಮುಂಬಯಿ ಇಲಾಖೆಯೊಳಗಿನ ಟ್ರೇನಿಂಗ್ ಸ್ಕೂಲುಗಳ ಇನಸ್ಪೆಕ್ಟರರೂ, ಕೆಲವು ದಿನಗಳ ಹಿಂದೆ ದ. ಭಾ. ದ ಎಜ್ಯುಕೇಶನಲ್ ಇನಸ್ಪೆಕ್ಟರರೂ, ಆಗಿದ್ದ ಮೆ॥ ವಕೀಲ ಸಾಹೇಬರಿಗೆ ಇವರು ಅತ್ಯಂತ ಪ್ರೀತಿಯವರಾಗಿದ್ದರು. ವಿದ್ಯಾಖಾತೆಯ ಡಾಯರೆಕ್ಟರ ಸಾಹೇಬರವರ ಕಚೇರಿಯ "ಸುಪರಿಂಟೆಂಡೆಂಟ್" ಕೆಲಸಕ್ಕೆ ದ. ಭಾ. ದಿಂದ ಒಬ್ಬರನ್ನು ಆರಿಸಿಕೊಳ್ಳು

ನಡಿದ್ದಾಗ ಇವರೇ ಆರಿಸಲ್ಪಟ್ಟರು. ಸರಕಾರದ ಹೊಸ ಧೋರಣದ ಮೇರೆಗೆ ಪ್ರತಿಜಿಲ್ಲೆಗೆ ಒಂದೊಂದು ಟ್ರೇನಿಂಗ್ ಸ್ಕೂಲನ್ನು ಆರಂಭಿಸಬೇಕೆಂದು ಗೊತ್ತಾ ದಾಗ ಟ್ರೇನಿಂಗ ಸ್ಕೂಲಿನ ಮೊದಲನೆಯ ಹೆಡ್‌ಮಾಸ್ತರರಾಗಿ ನಿಯಮಿಸಲ್ಪಟ್ಟವ ರೆಂದರೆ ಶ್ರೀ ವೆಂಕಟರಾಯರು. ಮತ್ತು ಒತ್ತಾಯದ ಪ್ರಾಥಮಿಕ ಶಿಕ್ಷಣದ

ಶ್ರೀಯುತ ಮುಗದಾಳ ವೆಂಕಟರಾಯರು, B. A.

ಕಾಯಿದೆಯು ಪಾಸಾದ ತರುವಾಯ ಪ್ರಾಥಮಿಕ ಶಿಕ್ಷಣದ ಸರ್ವಾಧಿಕಾರವನ್ನು ಜಿಲ್ಹಾ ಲೋ. ಬೋ. ಗಳಿಗೆ ಒಪ್ಪಿಸಿದ ಸಂದರ್ಭದಲ್ಲಿ ಅಲ್ಲಿಯ ಶಾಲಾಖಾತೆಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಪರೀಕ್ಷಿಸುವ ವಿಶೇಷಾಧಿಕಾರಿ (Special

officer on audit duty) ಯೊಬ್ಬರನ್ನು ನಿಯಮಿಸುವ ವಿಚಾರವಿದ್ದಾಗಲೂ ಸರಕಾರದವರು ಇವರನ್ನೇ ಆರಿಸಿದರು.

ಶ್ರೀ. ವೆಂಕಟರಾಯರು ಸಚ್ಛಿಕ್ಷಕರು; ಶಿಕ್ಷಣ ಕಲೆಯು ಇವರ **ಹುಟ್ಟುಗುಣವು** — ಎಸ್. ಟಿ. ಸೀ. ಡಿ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿ (First Class) ಯಲ್ಲಿ ಪಾಸಾದುದೇ ಇವರ ಶಿಕ್ಷಣಕಲಾಪ್ರಾವೀಣ್ಯವನ್ನು ಜನರ ನಿದರ್ಶನಕ್ಕೆ ತಂದು ಕೊಟ್ಟಿತು. ಇವರು ತಮ್ಮ ನೌಕರಿಯ ಪ್ರಾಮುಖ್ಯವಾದ ಭಾಗವನ್ನೆಲ್ಲ ಪ್ರಾಥಮಿಕ ಶಿಕ್ಷಕರ ಸಹವಾಸದಲ್ಲಿ ಕಳೆದಿರುವರು. ನೌಕರಿಯನ್ನು ಮೊದಲು ಹೈಸ್ಕೂಲಿನಲ್ಲಿ ಪ್ರಾರಂಭಿಸಿದರೂ ಅಲ್ಪಾವಕಾಶದಲ್ಲಿಯೇ ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜಕ್ಕೆ ಬಂದುಬಿಟ್ಟರು. ಅಲ್ಲಿಂದ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜಕ್ಕೂ, ವಿಜಾಪುರದ ಟ್ರೇನಿಂಗ್ ಸ್ಕೂಲಿಗೂ ಹೋಗಿ ಮತ್ತೆ ಟ್ರೇನಿಂಗ್ ಕಾಲೇಜಕ್ಕೆ ತಿರುಗಿ ಬಂದರು. ತರುವಾಯ ೫-೬ ವರುಷ ಪರೀಕ್ಷಾಧಿಕಾರಿಗಳಾಗಿ ಕೆಲಸಮಾಡಿದ ಬಳಿಕ ಮತ್ತೆ ಟ್ರೇನಿಂಗ್ ಸ್ಕೂಲಿನ ಹೆಡ್‌ಮಾಸ್ತರರಾಗಿ ಬಂದರು. ಇವರು ಪದವೀಧರರಾಗಿ ಹೆಚ್ಚಿನ ತರಗತಿಗಳ ವಿದ್ಯಾರ್ಥಿಗಳಿಗೆ ಪಾಠಹೇಳುವ, ಇಲ್ಲವೆ ಪರೀಕ್ಷಾಧಿಕಾರಿಗಳ ಕೆಲಸವನ್ನು ಕೈಕೊಂಡಿದ್ದರೂ, ಚಿಕ್ಕಮಕ್ಕಳಿಗೆ ಪಾಠ ಹೇಳುವಂಥ ಬಿಗಿಯಾದ ಕೆಲಸವನ್ನು ಆತ್ಮಾದರದಿಂದಲೂ ಪ್ರೀತಿಯಿಂದಲೂ ಮಾಡಿ ಸಕಲರೂ ತಲೆದೂಗುವಂತೆ ನೆರವೇರಿಸುತ್ತಿದ್ದರು. ಕೆಲ ಶಿಕ್ಷಕರಲ್ಲಿ ಜ್ಞಾನಶಕ್ತಿ ಮಾತ್ರ ಹೆಚ್ಚಿಗೆ ಇರುವದು; ಕೆಲ ಶಿಕ್ಷಕರಲ್ಲಿ ಸಂಕ್ರಮಣ ಶಕ್ತಿ (ವಿದ್ಯಾರ್ಥಿಗಳ ಮನಸಿನ ಮೇಲೆ ಪರಿಣಾಮಮಾಡುವ ಶಕ್ತಿ) ಅಷ್ಟೇ ಹೆಚ್ಚಿಗೆ ಇರುವದು. ಈ ಎರಡೂ ಶಕ್ತಿಗಳು ಸಮಪ್ರಮಾಣದಲ್ಲಿ ಹೆಚ್ಚಿಗೆ ಇದ್ದ ಶಿಕ್ಷಕರೇ "**यस्योभयं साधु स शिक्षकाणां धुरि प्रतिष्ठापयितव्य एव**" ಎಂದು ಮಹಾಕವಿ ಕಾಲಿದಾಸನು ಹೇಳಿದಂತೆ, ಸಚ್ಛಿಕ್ಷಕರಾಗುವರೆಂಬುದು ನಿರ್ವಿವಾದದ್ದು. ವೆಂಕಟರಾಯರಲ್ಲಿ ಈ ಎರಡೂ ಶಕ್ತಿಗಳು ಸಮಸಮವಾಗಿ ಕಂಗೊಳಿಸುತ್ತಿವೆ. ಟ್ರೇನಿಂಗ್ ಕಾಲೇಜದ ವಿದ್ಯಾರ್ಥಿಗಳಿಗೆ ಮಾದರಿಗಾಗಿ ಕಲಿಸುತ್ತಿದ್ದ ಇವರ ಪಾಠಗಳು ನಿಜವಾಗಿ ಮಾದರಿಯಾಗಿಯೇ ಇರುತ್ತಿದ್ದವೆಂಬದನ್ನು ಎಲ್ಲರೂ ಬಲ್ಲರು. ಶಿಕ್ಷಕರ ಸಮ್ಮೇಲನಗಳಲ್ಲಿಯೂ ಪರೀಕ್ಷಾಧಿಕಾರಿಗಳಾಗಿ ಸಾಲೆಗಳಿಗೆ ಹೋದಾಗಲೂ ಇವರು ಕಲಿಸಿ ತೋರಿಸಿದ ಪಾಠಗಳು ಶಿಕ್ಷಕವೃಂದವನ್ನು ಬೆರಗುಗೊಳಿಸು

ತ್ತಿದ್ದವು. ಚಿಕ್ಕಮಕ್ಕಳ ಒಡನಾಟದಲ್ಲಿಯೇ ನಿರಂತರವಾಗಿ ಇದ್ದ ಅತ್ಯುತ್ತಮ ಶಿಕ್ಷಕರೆನಿಸಿಕೊಂಡ ಪ್ರಾ. ಶಿಕ್ಷಕರ ಪಾಠಗಳಿಗಿಂತಲೂ ಇವರ ಪಾಠಗಳು ಬಾಲಕರಿಗೆ ಹೆಚ್ಚು ಪ್ರಿಯುವಾಗುತ್ತಿದ್ದವು. ಹಾಗು ಶಿಕ್ಷಕರಿಗೆ ಮೇಲ್ಪಂಕ್ತಿಯು ವಾಗುತ್ತಿದ್ದವು.

೪. **ವೆಂಕಟರಾಯರ ವೈಶಿಷ್ಟ್ಯ**— ಇವರ ನಡತೆಯು ಹಿರಿಯರಿಗೂ ಕಿರಿಯರಿಗೂ, ಶ್ರೇಷ್ಠರಿಗೂ ಕನಿಷ್ಠರಿಗೂ ಕೂಡಿಯೇ ಪ್ರಿಯುಕರವಾಗಿ ಸಂತೋಷದಾಯಕವಾದುದು. ಇವರ ಮಾತಿನಲ್ಲಿ ದಕ್ಷಿಣಕರ್ಣಾಟಕದ ಸವಿ ಮಾತಿನ ನಯವೂ ಉತ್ತರಕರ್ನಾಟಕದ ಅಚ್ಚಗನ್ನಡ ಗಂಡು ನುಡಿಯು ಸೊಬಗೂ ಸಮ್ಮಿಶ್ರವಾಗಿರುವದರಿಂದ ಇವರ ಭಾಷಣವು ಕೇಳುವವರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸುವದು. ಸಭೆ-ಸಮ್ಮೇಲನಗಳಲ್ಲಿ ಮೊದಲುಗೊಂಡು ಚಿಕ್ಕಮಕ್ಕಳೊಡನೆ ಸಂಭಾಷಣ ಮಾಡುವಂಥ ತೀರ ಸಾಮಾನ್ಯಸಂದರ್ಭಗಳಲ್ಲಿ ಕೂಡ ಕಂಡುಬಂದ ಇವರ ಭಾಷಣದ ಸ್ವಾರಸ್ಯವನ್ನು ಅನೇಕರು ಹೊಗಳುತ್ತಿರುವರು. ದೀರ್ಘಾಲೋಚನೆ, ಪ್ರತಿಕೆಲಸದಲ್ಲಿಯೂ ಸಂಪೂರ್ಣವಾದ ಎಚ್ಚರಿಕೆ, ಈ ಗುಣಗಳಿಂದ ಇವರು ತಮ್ಮ ಕಾರ್ಯಕ್ಷೇತ್ರದಲ್ಲಿಯೂ ಸಾಮಾನ್ಯ ಜನರ ಸಂಗಡ ಸಂಭವಿಸುವ ನಿತ್ಯದ ವ್ಯವಹಾರಗಳಲ್ಲಿಯೂ ಸಂಪೂರ್ಣ ಯಶಸ್ವಿಗಳಾಗಿ ಮುಂದೆ ಬಂದಿರುವರು. ಕನ್ನಡ ಸಾಹಿತ್ಯದಲ್ಲಿ ಇವರಿಗೆ ಇನ್ನಿಲ್ಲದಷ್ಟು ಅಕ್ಕರತೆ. ಕನ್ನಡಭಾರತ ಜೈಮಿನಿಭಾರತಗಳು ಇವರ ವಾಚನದ ಪ್ರೀತಿಯ ಗ್ರಂಥಗಳು. ಈಚೆಗೆ ಕನ್ನಡಭಾರತವನ್ನು ದಿನಾಲು ಓದುತ್ತಿರುವದರಿಂದ ಕೆಲಕೆಲವು ಭಾಗಗಳು ಬಾಯಪಾಠ ಅನ್ನುವಷ್ಟು ಅವರಿಗೆ ಬಳಕೆಯಾಗಿವೆ. ಬೆಂಗಳೂರಿನ ಕರ್ನಾಟಕ ಸಾಹಿತ್ಯಪರಿಷತ್ತು, ಧಾರವಾಡದ ವಿದ್ಯಾವರ್ಧಕಸಂಘಗಳಂಥ ಪುರಾತನ ಸಂಘಗಳಿಗೆ ಇವರು ಬಹುಕಾಲದ ಹಿಂದೆಯೆ ಆಜೀವಸದಸ್ಯರಾಗಿರುವರು. ತಮ್ಮ ಪ್ರೀತಿಯ ವಿಷಯುವಾದ ಶಿಕ್ಷಣಕ್ಕೆ ಸಂಬಂಧಿಸಿದ 'ಶಿಕ್ಷಣ ಮೀಮಾಂಸೆ' ಎಂಬ ಉದ್ಗ್ರಂಥವೂ "ಪ್ರಾಚೀನ ಹಿಂದುಸ್ತಾನವೆಂ"ಬ ಐತಿಹಾಸಿಕ ಗ್ರಂಥವೂ ಚಿಕ್ಕಮಕ್ಕಳ ಅಭ್ಯಾಸಕ್ಕಾಗಿ ಬರೆದಿರುವ ಎರಡು ಭೂಗೋಲದ ಪುಸ್ತಕಗಳೂ ಇವರ ಸಾಹಿತ್ಯಸೇವೆಯ ಗುರುತುಗಳು.

ನೌಕರಿಯ ೨೮-೨೯ ವರ್ಷಗಳ ಅವಧಿಯಲ್ಲಿ ಇವರ ಕೆಲಸದ ಸಲುವಾಗಿ ಅಲ್ಪವಾದರೂ ಅಸಮಾಧಾನ ತೋರಿಸಿದ ವರಿಷ್ಠಾಧಿಕಾರಿಗಳೇ ಇಲ್ಲ. ಹಾಗೆಯೆ

officer on audit duty) ಯೊಬ್ಬರನ್ನು ನಿಯಮಿಸುವ ವಿಚಾರವಿದ್ದಾಗಲೂ ಸರಕಾರದವರು ಇವರನ್ನೇ ಆರಿಸಿದರು.

ಶ್ರೀ. ವೆಂಕಟರಾಯರು ಸಚ್ಛಿಕ್ಷಕರು; ಶಿಕ್ಷಣ ಕಲೆಯು ಇವರ **ಹುಟ್ಟುಗುಣವು** — ಎಸ್. ಟಿ. ಸೀ. ಡಿ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿ (First Class) ಯಲ್ಲಿ ಪಾಸಾದುದೇ ಇವರ ಶಿಕ್ಷಣಕಲಾಪ್ರಾವೀಣ್ಯವನ್ನು ಜನರ ನಿದರ್ಶನಕ್ಕೆ ತಂದು ಕೊಟ್ಟಿತು. ಇವರು ತಮ್ಮ ನೌಕರಿಯ ಪ್ರಾಮುಖ್ಯವಾದ ಭಾಗವನ್ನೆಲ್ಲ ಪ್ರಾಥಮಿಕ ಶಿಕ್ಷಕರ ಸಹವಾಸದಲ್ಲಿ ಕಳೆದಿರುವರು. ನೌಕರಿಯನ್ನು ಮೊದಲು ಹೈಸ್ಕೂಲಿನಲ್ಲಿ ಪ್ರಾರಂಭಿಸಿದರೂ ಅಲ್ಪಾವಕಾಶದಲ್ಲಿಯೇ ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜಕ್ಕೆ ಬಂದುಬಿಟ್ಟರು. ಅಲ್ಲಿಂದ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜಕ್ಕೂ, ವಿಜಾಪುರದ ಟ್ರೇನಿಂಗ್ ಸ್ಕೂಲಿಗೂ ಹೋಗಿ ಮತ್ತೆ ಟ್ರೇನಿಂಗ್ ಕಾಲೇಜಕ್ಕೆ ತಿರುಗಿ ಬಂದರು. ತರುವಾಯ ೫-೬ ವರುಷ ಪರೀಕ್ಷಾಧಿಕಾರಿಗಳಾಗಿ ಕೆಲಸಮಾಡಿದ ಬಳಿಕ ಮತ್ತೆ ಟ್ರೇನಿಂಗ್ ಸ್ಕೂಲಿನ ಹೆಡ್‌ಮಾಸ್ತರರಾಗಿ ಬಂದರು. ಇವರು ಪದವೀಧರರಾಗಿ ಹೆಚ್ಚಿನ ತರಗತಿಗಳ ವಿದ್ಯಾರ್ಥಿಗಳಿಗೆ ಪಾಠಹೇಳುವ, ಇಲ್ಲವೆ ಪರೀಕ್ಷಾಧಿಕಾರಿಗಳ ಕೆಲಸವನ್ನು ಕೈಕೊಂಡಿದ್ದರೂ, ಚಿಕ್ಕಮಕ್ಕಳಿಗೆ ಪಾಠ ಹೇಳುವಂಥ ಬಿಗಿಯಾದ ಕೆಲಸವನ್ನು ಅತ್ಯಾದರದಿಂದಲೂ ಪ್ರೀತಿಯಿಂದಲೂ ಮಾಡಿ ಸಕಲರೂ ತಲೆದೂಗುವಂತೆ ನೆರವೇರಿಸುತ್ತಿದ್ದರು. ಕೆಲ ಶಿಕ್ಷಕರಲ್ಲಿ ಜ್ಞಾನಶಕ್ತಿ ಮಾತ್ರ ಹೆಚ್ಚಿಗೆ ಇರುವದು; ಕೆಲ ಶಿಕ್ಷಕರಲ್ಲಿ ಸಂಕ್ರಮಣ ಶಕ್ತಿ (ವಿದ್ಯಾರ್ಥಿಗಳ ಮನಸಿನ ಮೇಲೆ ಪರಿಣಾಮಮಾಡುವ ಶಕ್ತಿ) ಅಷ್ಟೇ ಹೆಚ್ಚಿಗೆ ಇರುವದು. ಈ ಎರಡೂ ಶಕ್ತಿಗಳು ಸಮಪ್ರಮಾಣದಲ್ಲಿ ಹೆಚ್ಚಿಗೆ ಇದ್ದ ಶಿಕ್ಷಕರೇ "**यस्योभयं साधु स शिक्षकाणां धुरि प्रतिष्ठापयितव्य एव**" ಎಂದು ಮಹಾಕವಿ ಕಾಲಿದಾಸನು ಹೇಳಿದಂತೆ, ಸಚ್ಛಿಕ್ಷಕರಾಗುವರೆಂಬುದು ನಿರ್ವಿವಾದದ್ದು. ವೆಂಕಟರಾಯರಲ್ಲಿ ಈ ಎರಡೂ ಶಕ್ತಿಗಳು ಸಮಸಮವಾಗಿ ಕಂಗೊಳಿಸುತ್ತಿವೆ. ಟ್ರೇನಿಂಗ್ ಕಾಲೇಜದ ವಿದ್ಯಾರ್ಥಿಗಳಿಗೆ ಮಾದರಿಗಾಗಿ ಕಲಿಸುತ್ತಿದ್ದ ಇವರ ಪಾಠಗಳು ನಿಜವಾಗಿ ಮಾದರಿಯಾಗಿಯೇ ಇರುತ್ತಿದ್ದವೆಂಬುದನ್ನು ಎಲ್ಲರೂ ಬಲ್ಲರು. ಶಿಕ್ಷಕರ ಸಮ್ಮೇಲನಗಳಲ್ಲಿಯೂ ಪರೀಕ್ಷಾಧಿಕಾರಿಗಳಾಗಿ ಸಾಲೆಗಳಿಗೆ ಹೋದಾಗಲೂ ಇವರು ಕಲಿಸಿ ತೋರಿಸಿದ ಪಾಠಗಳು ಶಿಕ್ಷಕವೃಂದವನ್ನು ಬೆರಗುಗೊಳಿಸು

ತ್ತಿದ್ದವು. ಚಿಕ್ಕಮಕ್ಕಳ ಒಡನಾಟದಲ್ಲಿಯೇ ನಿರಂತರವಾಗಿ ಇದ್ದ ಅತ್ಯುತ್ತಮ ಶಿಕ್ಷಕರೆನಿಸಿಕೊಂಡ ಪ್ರಾ. ಶಿಕ್ಷಕರ ಪಾಠಗಳಿಗಿಂತಲೂ ಇವರ ಪಾಠಗಳು ಬಾಲಕರಿಗೆ ಹೆಚ್ಚು ಪ್ರಿಯವಾಗುತ್ತಿದ್ದವು. ಹಾಗು ಶಿಕ್ಷಕರಿಗೆ ಮೇಲ್ಪಂಕ್ತಿಯು ವಾಗುತ್ತಿದ್ದವು.

೪. **ವೆಂಕಟರಾಯರ ವೈಶಿಷ್ಟ್ಯ**— ಇವರ ನಡತೆಯು ಹಿರಿಯರಿಗೂ ಕಿರಿಯರಿಗೂ, ಶ್ರೇಷ್ಠರಿಗೂ ಕನಿಷ್ಠರಿಗೂ ಕೂಡಿಯೇ ಪ್ರಿಯಕರವಾಗಿ ಸಂತೋಷದಾಯಕವಾದುದು. ಇವರ ಮಾತಿನಲ್ಲಿ ದಕ್ಷಿಣಕರ್ಣಾಟಕದ ಸವಿಮಾತಿನ ನಯವೂ ಉತ್ತರಕರ್ನಾಟಕದ ಅಚ್ಚಗನ್ನಡ ಗಂಡು ನುಡಿಯ ಸೊಬಗೂ ಸಮ್ಮಿಶ್ರವಾಗಿರುವದರಿಂದ ಇವರ ಭಾಷಣವು ಕೇಳುವವರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸುವದು. ಸಭೆ-ಸಮ್ಮೇಲನಗಳಲ್ಲಿ ಮೊದಲುಗೊಂಡು ಚಿಕ್ಕಮಕ್ಕಳೊಡನೆ ಸಂಭಾಷಣ ಮಾಡುವಂಥ ತೀರ ಸಾಮಾನ್ಯಸಂದರ್ಭಗಳಲ್ಲಿ ಕೂಡ ಕಂಡುಬಂದ ಇವರ ಭಾಷಣದ ಸ್ವಾರಸ್ಯವನ್ನು ಅನೇಕರು ಹೊಗಳುತ್ತಿರುವರು. ದೀರ್ಘಾಲೋಚನೆ, ಪ್ರತಿಕೆಲಸದಲ್ಲಿಯೂ ಸಂಪೂರ್ಣವಾದ ಎಚ್ಚರಿಕೆ, ಈ ಗುಣಗಳಿಂದ ಇವರು ತಮ್ಮ ಕಾರ್ಯಕ್ಷೇತ್ರದಲ್ಲಿಯೂ ಸಾಮಾನ್ಯ ಜನರ ಸಂಗಡ ಸಂಭವಿಸುವ ನಿತ್ಯದ ವ್ಯವಹಾರಗಳಲ್ಲಿಯೂ ಸಂಪೂರ್ಣ ಯಶಸ್ವಿಗಳಾಗಿ ಮುಂದೆ ಬಂದಿರುವರು. ಕನ್ನಡ ಸಾಹಿತ್ಯದಲ್ಲಿ ಇವರಿಗೆ ಇನ್ನಿಲ್ಲದಷ್ಟು ಅಕ್ಕರತೆ. ಕನ್ನಡಭಾರತ ಜೈಮಿನಿಭಾರತಗಳು ಇವರ ವಾಚನದ ಪ್ರೀತಿಯ ಗ್ರಂಥಗಳು. ಈಚೆಗೆ ಕನ್ನಡಭಾರತವನ್ನು ದಿನಾಲು ಓದುತ್ತಿರುವದರಿಂದ ಕೆಲಕೆಲವು ಭಾಗಗಳು ಬಾಯಪಾಠ ಅನ್ನುವಷ್ಟು ಅವರಿಗೆ ಬಳಕೆಯಾಗಿವೆ. ಬೆಂಗಳೂರಿನ ಕರ್ನಾಟಕ ಸಾಹಿತ್ಯಪರಿಷತ್ತು, ಧಾರವಾಡದ ವಿದ್ಯಾವರ್ಧಕಸಂಘಗಳಂಥ ಪುರಾತನ ಸಂಘಗಳಿಗೆ ಇವರು ಬಹುಕಾಲದ ಹಿಂದೆಯೆ ಆಜೀವಸದಸ್ಯರಾಗಿರುವರು. ತಮ್ಮ ಪ್ರೀತಿಯ ವಿಷಯವಾದ ಶಿಕ್ಷಣಕ್ಕೆ ಸಂಬಂಧಿಸಿದ 'ಶಿಕ್ಷಣ ಮೀಮಾಂಸೆ' ಎಂಬ ಉದ್ಗ್ರಂಥವೂ "ಪ್ರಾಚೀನ ಹಿಂದುಸ್ತಾನವೆಂ"ಬ ಐತಿಹಾಸಿಕ ಗ್ರಂಥವೂ ಚಿಕ್ಕಮಕ್ಕಳ ಅಭ್ಯಾಸಕ್ಕಾಗಿ ಬರೆದಿರುವ ಎರಡು ಭೂಗೋಲದ ಪುಸ್ತಕಗಳೂ ಇವರ ಸಾಹಿತ್ಯಸೇವೆಯ ಗುರುತುಗಳು.

ನೌಕರಿಯ ೨೮-೨೯ ವರ್ಷಗಳ ಅವಧಿಯಲ್ಲಿ ಇವರ ಕೆಲಸದ ಸಲುವಾಗಿ ಅಲ್ಪವಾದರೂ ಅಸಮಾಧಾನ ತೋರಿಸಿದ ವರಿಷ್ಠಾಧಿಕಾರಿಗಳೇ ಇಲ್ಲ. ಹಾಗೆಯೆ

ತಮಗೆ ಇವರಿಂದ ಹಾನಿಯಾಯಿತೆಂದಾಗಲಿ ತೊಂದರೆಯಾಯಿತೆಂದಾಗಲಿ ದೂರಿದ ಇವರ ಕೈಕೆಳಗಿನ ನೌಕರರೂ ಇಲ್ಲ. ಸಕಲರಿಗೂ ಸಮರ್ಪಕವಾಗಿ ಪ್ರೇಮದ ಬಳಕೆಯಿಂದ ಕೆಲಸಮಾಡುವ ಹಿಡಿತವು ಇವರಿಗೆ ಸಂಪೂರ್ಣ ಸಾಧಿಸಿದೆ. ಕೆಲಸದಲ್ಲಿ ತಮ್ಮದೇ ಮೇಲ್ಪಂಕ್ತಿಯನ್ನು ತೋರಿಸುವದು, ಪ್ರೀತಿಯ ಸವಿಮಾತು, ಅಕೃತ್ರಿಮ ನಡತೆ, ಆಗಾಗ ಎಚ್ಚರಿಕೆ ಕೊಡುವದು ಇವೇ ಮೊದಲಾದ ಎಲ್ಲ ಉಪಾಯಗಳನ್ನು ಉಪಯೋಗಿಸಿ ಕೆಲಸಮಾಡಿಸಿಕೊಂಡು ಕೈಕೆಳಗಿನವರನ್ನು ಕಾದುಕೊಂಡು ಹೋಗುವದು ಇವರಿಗೆ ಮೈಯುಂಡಮಾತು. ಹೀಗಿರುವದರಿಂದ ಯಾವದಾದರೊಂದು ತೊಡಕಿನ ಜವಾಬದಾರಿಯ ಕೆಲಸವು ಬಂದಾಗಲೆಲ್ಲ ಇವರ ಮೇಲಧಿಕಾರಿಗಳಿಗೆ ಇವರ ಹೆಸರು ಕಣ್ಣಮುಂದೆ ಬರುತ್ತಿತ್ತು. ಇವರಲ್ಲಿ ಯಾವಾಗಲೂ ಒಡೆದುಕಾಣುವ ಶ್ರೇಷ್ಠವಾದ ವಿಶಿಷ್ಟ ಗುಣವೆಂದರೆ ತಮಗಿಂತ ಕೆಳಗಿನ ತರಗತಿಯ ಜನರೊಡನೆ ನಡೆಯುವಾಗ ತಾವು ಹೆಚ್ಚಿನವರೆಂಬ ಹೆಮ್ಮೆಗೆ ಸ್ವಲ್ಪವೂ ಇಂಬುಗೊಡದೆ ಅವರೊಡನೆ ಪ್ರೀತಿಯಿಂದಲೂ ಸಲುಗೆಯಿಂದಲೂ ನಡೆಯುವದು.

೫೦-೬೦ ವರ್ಷಗಳಿಂದಲೂ ನಡೆದು ಬಂದಿರುವ ದೊಡ್ಡ ಕಾಲೇಜವು ನಡುವೆ ಅನಿವಾರ್ಯ ತೊಂದರೆಗೀಡಾಗಿ ಸಣ್ಣ ಸಾಲೆಯಾಗಿದ್ದದ್ದು ಪುನಃ ಇವರ ಕಾಲದಲ್ಲಿ ಮೊನ್ನೆ ಮೊನ್ನೆ ಮುಂಚಿನ ಉನ್ನತಸ್ಥಿತಿಯನ್ನು ಪಡೆಯಿತು. ನೂತನ ಅಭ್ಯಾಸಕ್ರಮದೊಡನೆ ಹೊಸ ಉತ್ಸಾಹದಿಂದ ಹೆಚ್ಚಿನ ವರ್ಗಗಳು ಪ್ರಾರಂಭಿಸಲ್ಪಟ್ಟವು. ಈ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಅನುಭವಿಕರೂ ಅದರ ಪ್ರಸಾರ ಅಭಿವೃದ್ಧಿಗಳಿಗಾಗಿ ಮನಮುಟ್ಟಿ ಪ್ರಯತ್ನಿಸುವವರೂ ಆದ ವೆಂಕಟರಾಯರು ಪ್ರಾಥಮಿಕ ಶಿಕ್ಷಣದ ಕೇಂದ್ರವೆನಿಸಿದ ಟ್ರೇನಿಂಗ್ ಸ್ಕೂಲಿನಿಂದ ಬೇರೆಕಡೆಗೆ ಹೋದುದರಿಂದ ಒಮ್ಮೆಲಿ ಕೊರತೆಯಾದಂತಾಗುವದು ಆಶ್ಚರ್ಯವಲ್ಲ.

೫. **ಹೊಸಸ್ಥಳ**-ಸನ್ಮಾನ್ಯರಾಗಿ ಹೆಸರು ಪಡೆದು ಕೀರ್ತಿಶೇಷರಾದ ಕಾಣೆ, ಕೇಸ್ಕರ, ಜಠಾರ ಮುಂತಾದ ಪ್ರತಿಭಾಶಾಲಿಗಳು ಅಲಂಕರಿಸಿನ ಆಸನವನ್ನು ಇಂದು ಶ್ರೀ. ವೆಂಕಟರಾಯರು ಅಲಂಕರಿಸಿದ್ದಾರೆ. ಮಾಧ್ಯಮಿಕ ಶಿಕ್ಷಕವೃಂದಕ್ಕೆ ಅದೊಂದು ಅಪೇಕ್ಷಣೀಯವಾದ ಕೊನೆಯಮೆಟ್ಟಲು. ಅಲ್ಲಿಯೂ ಇವರ ವಿದ್ವತ್ತೆ, ಉದ್ಯೋಗ ಇವುಗಳಿಗೆ ತಕ್ಕ ಕಾರ್ಯಕ್ಷೇತ್ರವಿದೆ. ಇಂತಹ ಗೌರವದ ಸ್ಥಳಕ್ಕೆ ಹೋಗಿರುವ ಶ್ರೀ. ವೆಂಕಟರಾಯರು ಈ ಹೊಸ ಸ್ಥಳದಲ್ಲಿಯೂ

ಸಕಲರಿಗೂ ಪ್ರಿಯರಾಗಿ ಯಶಸ್ವಿಗಳಾಗುವರೆಂದು ನಂಬಿದ್ದೇವೆ. ಜಗದೀಶ್ವರನು ಅವರಿಗೆ ಈ ನೂತನ ಸ್ಥಳದಲ್ಲಿ ಸರ್ವವಿಧದ ಸುಖಸೌಕರ್ಯಗಳನ್ನೂ ಮಾನಮಾನ್ಯತೆಗಳನ್ನೂ ಒದಗಿಸಿಕೊಟ್ಟು ಕಾಪಾಡಲೆಂಬ ಶುಭಾಕಾಂಕ್ಷೆಯನ್ನು ಕೋರಿ ಈ ಚಿಕ್ಕ ಲೇಖನವನ್ನು ಮುಗಿಸುವೆವು.

ನವರತ್ನಮಾಲೆ

ಲೇ— ವಾ. ಶಿ. ಕುಲಕರ್ಣಿ. ೩ನೆಯ ವರ್ಷದ ವಿದ್ಯಾರ್ಥಿ ಟ್ರೇ. ಸ್ಕೂ ಧಾರವಾಡ

(ಗುರುವರ್ಯ ಮುಗದಾಳ ರಾಯರು ಹಾಯಸ್ಕೂಲಿನ ಹೆಡ್‌ಮಾಸ್ತರರಾದ ಶುಭಸಮಯದಲ್ಲಿ ಅರ್ಪಿತವಾದುದು.)

॥ ಕಂದ ॥ ಹಸನಗೆಯಿಂ ರಸ ನುಡಿಯಿಂ ।
ಮಿಸುಗುವ ಸಿರಿಮೊಗವದೆಂತು ಬಣ್ಣಿಸಲಳವೇ ॥
ಎಸೆವಂತರಂಗ ಪ್ರೇಮವು ।
ಪಸರಿಸಿ ಶೋಭಿಸಿತು ಶಿಷ್ಯಸಂದೋಹದೊಳು ॥ ೧ ॥

ಒಳ್ಳಿತು ಗುರುಗಳ ದರ್ಶನ- ॥
ಮೊಳ್ಳಿತವಂದಿರ ಹಿತೋಪದೇಶಶ್ರವಣಂ ॥
ಒಳ್ಳಿತ್ತವರ ಸಮಾಗಮು –
ಮೊಳ್ಳಿತು ಮೇಣವರ ಸದ್ಗುಣಾವಳಿ ಕಥನಂ ॥ ೨ ॥

ಗುರುವರರೆ ನಿಮ್ಮ ಪ್ರೇಮದ ।
ಝುರಿಯುದು ಪ್ರವಹಿಸಿತು ಶಿಷ್ಯವರ್ಗದೊಳಧಿಕಂ ॥
ಸುರುಚಿರ ನಿಮ್ಮಯ ಹೃದಯದ ।
ಪರಿಯುದನರಿಯುದೆಯೆ ಪೊಗಳ್ವುದೇಂ ಜನಸ್ತೋಮಂ ॥ ೩ ॥

ತೊಡವಾಗಸಕ್ಕೆ ನೇಸರ್ ।
ತೊಡವು ಕೊಳಕ್ಕಂಚೆ ತೊಡವು ನಂದನಕೆ ನವಿಲ್ ॥
ತೊಡವೈ ನಿಮ್ಮಯ ತಾಣವು ।
ದೃಢದಿಂ ಕಲಿತಿರ್ದ ಬುಧ ಸಮಾಜಕೆ ನಾಡೊಳ್ ॥ ೪ ॥

ದಕ್ಷತೆಯಿಂ ಶಿಕ್ಷಣವನು- ।
ಲಕ್ಷಿಸಿ ಶಿಕ್ಷಕರ ಶಿಕ್ಷಣಾಲಯದೊಳ್ ತಾ- ॥
ವಕ್ಷಯ ಹೆಸರನೆ ಪಡೆದಿರ- ।
ಲಾಕ್ಷಣದೊಳ್ ಮೊಳಗಿದುದು ಯಶೋದುಂದುಭಿಯು ! ।೫॥

ಸರಲತೆಯುಂ, ಕರುಣತೆಯುಂ, ।
ವಿರತಿಯದಿಲ್ಲದೆಯೆ ಗೈವ ಸತತೋದ್ಯೋಗಂ ॥
ತಿರೆಯೊಳ್ಮೆರೆಯುತಲಿಹುವೈ ।
ಗುರುವರ ! ದಶೆಯಧಿಕಮೆನಿಪುದೇನಚ್ಚರಿಯೇ ॥೬॥

ತಮ್ಮಯ ಪ್ರೇಮೆಯನೆಲ್ಲಂ ।
ನೆಮ್ಮದಿಯಿಂ ಗೂಡಿಸಲ್ಕೆ ಸುಲಭವೆ ? ಪಿರಿದುಂ ॥
ಹೆಮ್ಮಾನವನೀಯುಲಿಯಾ ।
ಬೊಮ್ಮನು ಸಿರಿಯರಸು ವಿನುತ ಶಿತಿಕಂಠನು ತಾಂ ॥೭॥

ಪಿರಿದಾಯುಷ್ಯವನೀಯುಲಿ ! ।
ಸರಸಿಜ ನಯನಂ ಜಗದೆ ವಿಪುಲ ಪೆರ್ಮೆಯುದಾ- ॥
ವರಿಸುವ ತೆರದಿಂ ಪೊರೆಯುಲಿ !! ।
ಸಿರಿಯುಂ ಪೆರ್ಚಿಸಲಿ !!! ಗುರುವಿಗನಿಶಂ ಘನದಿಂ ॥೮॥

ಸೊಗಯಿಸುವ ಪ್ರೇಮ ಬಂಧು ಬ- ।
ಳಗವನು ತಾಂ ಪುತ್ರ ಪೌತ್ರವರಕಲತ್ರವುಮಂ ॥
ಮುಗದಾಳ ರಾಯರಂ ಶ್ರೀ- ।
ಜಗದೀಶಂ ಪೊರೆಗೆ ! ದಯದಿ ನಿತ್ಯಂ ಸತ್ಯಂ ॥೯॥

ಶುಭಮಸ್ತು

ಪ್ರಕೃತಿ ವಿಮರ್ಶೆ

ಪ್ರಾಣಿಕೋಟಿ ಉದ್ಭಿಜ್ಜಕೋಟಿ ಖನಿಜಕೋಟಿಗಳಲ್ಲಿ ಸಮಾವೇಶವಾಗುವ ಪ್ರಾಣಿಗಳು, ವನಸ್ಪತಿಗಳು, ಖನಿಜಗಳು; ಚಳಿಮಳೆಗಳು, ಬಿಸಿಲುಬೇಗೆಗಳು, ಹಗಲುರಾತ್ರಿಗಳು, ಸೂರ್ಯ ಚಂದ್ರರು, ಗ್ರಹ ನಕ್ಷತ್ರಗಳು, ಇವೆಲ್ಲ ಪ್ರಕೃತಿ ವ್ಯಾಪಾರಗಳು. ಇವುಗಳ ಆಗು ಹೋಗುಗಳು, ಚಲನ ವಲನಗಳು, ಜೀವನ ಮರಣಗಳು, ಕಾರ್ಯ ಕಾರಣಗಳು ಮುಂತಾದವುಗಳೂ ಪ್ರಕೃತಿ ವ್ಯಾಪಾರಗಳೇ. ಇವೆಲ್ಲವುಗಳನ್ನು ನಿರೀಕ್ಷಿಸಿ ತಿಳಿದುಕೊಳ್ಳುವದೇ ಪ್ರಕೃತಿವಿಮರ್ಶೆ. ಆದರೆ ಇಲ್ಲಿಗೇ ಈ ವಿಚಾರವು ಮುಗಿದಂತಾಗಲಿಲ್ಲ.

"ಪ್ರಪಂಚಕ್ಕೆ ತಕ್ಕವರನ್ನಾಗಿ ಮಾಡುವದೇ ಶಿಕ್ಷಣದ ಗುರಿ" ಎಂದು ಹೇಳುವದುಂಟು. ಮನುಷ್ಯನೂ ಅನಂತ ಪ್ರಕೃತಿಯೊಳಗಿನ ಒಂದು ಜೀವಿ. ಅವನು ಪ್ರಕೃತಿ ವ್ಯಾಪಾರಗಳಿಗೆ ಆಧೀನನಾಗಿ ಬದುಕಬೇಕಾಗುವದು. ತಾನಿರುವ ಪ್ರಕೃತಿಯನ್ನು (ಪರಿಸ್ಥಿತಿಯನ್ನು) ತನಗೆ ಅನುಗುಣವಾಗಿ ಅಳವಡಿಸಿಕೊಂಡು ಯಶಸ್ವಿಯಾಗಿ ಬಾಳುವದೆಂದರೆ ಸುಲಭವಾದ ಮಾತಲ್ಲ. ಪ್ರಕೃತಿಯನ್ನು ವಶ ಮಾಡಿಕೊಂಡು ಯಶಸ್ವಿಯಾಗಿ ಬಾಳುವದೆಂದರೇನೆಂದು ಬೇರೆಗಾಗಿ ಕೇಳುವ ಕಾರಣವಿಲ್ಲ ಪವನಚಕ್ಕಿಯಿಂದ ನೀರು ಮೇಲಕ್ಕೆತ್ತಿ ಭೂಮಿಯನ್ನು ಬೆಳೆಯಿಸುವದು ಇದಕ್ಕೆ ಸುಲಭವಾದ ಉದಾಹರಣೆಯಾಗಬಹುದು. ಜಲಪ್ರಪಾತದ ಶಕ್ತಿಯಿಂದ ಯಂತ್ರಗಳನ್ನು ನಡೆಯಿಸುವದು, ವಿದ್ಯುತ್ತನ್ನು ಹುಟ್ಟಿಸಿ ನಾಡನ್ನು ಬೆಳಗಿಸುವದು, ಹಿಟ್ಟುಬೀಸುವ ಚಕ್ರವನ್ನು ಚಲಿಸುವದನ್ನು ಮೊದಲುಗೊಂಡು ಉಗಿಬಂಡಿಯನ್ನು ನಡೆಯಿಸುವದೇ ಮುಂತಾದ ಕಾರ್ಯಗಳನ್ನು ಮಾಡಿಸಿಕೊಳ್ಳುವದು, ಮೊದಲಾದವು ಪ್ರಕೃತಿಯನ್ನು ವಶಮಾಡಿಕೊಂಡುದರ ಪರಿಣಾಮವಲ್ಲದೆ ಬೇರೆಯೇನು?

ಪ್ರಾಣಿ ವನಸ್ಪತಿಗಳನ್ನು ವಿಶೇಷ ಪ್ರಕಾರದಿಂದ ಬೆಳೆಯಿಸುವದು, ಆಹಾರದ ಪದಾರ್ಥಗಳನ್ನು ಕಾದಿಡುವದು, ಆಹಾರದ ಪದಾರ್ಥಗಳನ್ನು ತಯಾರಿಸುವ ಕ್ರಮದಲ್ಲಿ ನೂತನ ಸುಧಾರಣೆಗಳನ್ನು ಮಾಡುವದು, ಬೇನೆಬೇಸರಿಕೆಗಳನ್ನು ನಿವಾರಿಸುವದು, ಇವೆಲ್ಲ ಸಹಜವಾಗಿ ನಡೆಯುವ

ಪ್ರಕೃತಿವ್ಯಾಪಾರಗಳನ್ನು ಬದಲಿಸಿ ಮಾಡಿರುವ ಸುಧಾರಣೆಯ ಫಲಗಳಾಗಿವೆ. ವನವಾಸಿಗಳಾದ ಕಾಡುಜನರಿಗೂ ನಗರವಾಸಿಗಳಾದ ಆಧುನಿಕ ನಾಗರಿಕರಿಗೂ ಅನೇಕ ವಿಷಯಗಳಲ್ಲಿ ತಾರತಮ್ಯವಿದ್ದೇ ಇದೆ. ಮಾನವನು ತನ್ನ ಬುದ್ಧಿಬಲದಿಂದ ನಿರ್ಮಿಸಿಕೊಂಡ ನಗರವಾಸದಲ್ಲಿ—ವನವಾಸದ ಪ್ರಕೃತಿ ಸಹಜವಾದ ಜೀವನದ ವಿಪರೀತ ಅವಸ್ಥೆಯಲ್ಲಿ—ಅಂದರೆ ಮಾನವಜೀವನಕ್ಕೆ ತೀರ ಅಸ್ವಾಭಾವಿಕವಾದ ಪರಿಸ್ಥಿತಿಯಲ್ಲಿ, ಆತನು ಅಶಕ್ತನೂ ಅಲ್ಪಾಯುಷಿಯೂ ನಾನಾರೋಗ ಪೀಡಿತನೂ ಆದರೆ ಆಶ್ಚರ್ಯವೇನು ? ಮನುಷ್ಯನ ಸುಖರೂಪ ಜೀವನಕ್ಕೆ—ವ್ಯಕ್ತಿವಿಷಯಕವಾದ ಹಾಗೂ ಸಮಾಜಕ್ಕೆ ಸಂಬಂಧಿಸಿದ ಪ್ರಕೃತಿ ನಿಯಮಗಳು ಯಾವವು? ಅವುಗಳನ್ನು ಅನುಸರಿಸಿ ನಡೆಯುವದು ಹೇಗೆ? ಆ ಪ್ರಕೃತಿನಿಯಮಗಳನ್ನು ಉಲ್ಲಂಘಿಸುವದರಿಂದಾಗುವ ದುಷ್ಪರಿಣಾಮಗಳು ಯಾವವು? ಇವನ್ನು ತಿಳಿದುಕೊಳ್ಳುವದು ಅತ್ಯಂತ ಮಹತ್ವದ ಮಾತು. ಅರ್ಥಾತ್ ಪರಿಸ್ಥಿತಿಗೆ ಅನುಗುಣವಾಗಿ ತನ್ನ ಜೀವನಕ್ರಮವನ್ನು ಸಂಪೂರ್ಣವಾಗಿ ಮಾರ್ಪಡಿಸಿಕೊಳ್ಳುವಷ್ಟು ಮಹತ್ವದಮಾತು ಪ್ರಪಂಚದಲ್ಲಿ ಬೇರೊಂದಿಲ್ಲ. ಆದುದರಿಂದ ಪ್ರಕೃತಿವಿಮರ್ಶೆಯ ವಿಷಯಗಳಲ್ಲಿ ಆಹಾರದ ಪದಾರ್ಥಗಳು ಮತ್ತು ಅವುಗಳ ಗುಣದೋಷಗಳು, ಮನುಷ್ಯನ ಶರೀರ ಹಾಗು ಅದರ ಕಾರ್ಯಗಳು, ಹವೆ, ಬೆಳಕು, ಶೀತೋಷ್ಣಗಳು, ಮನುಷ್ಯನ ಶರೀರದಮೇಲೆ ನಡೆಯುವ ಅಣುಜೀವಿಗಳ ವ್ಯಾಪಾರಗಳು ಮುಂತಾದವುಗಳ ಸಮಾವೇಶವಾಗಬೇಕಾಗುವದು. ಮತ್ತು ಮನುಷ್ಯನ ಸ್ವಾಭಾವಿಕ ಸುಖಜೀವನಕ್ಕೆ ವಿರೋಧಕಾರಿಯಾದ ಪಡದೆಯೊಳಗಿನ ವಾಸ, ಬಾಲವಿವಾಹ ಮುಂತಾದ ವಿಷಯಗಳ ವಿಚಾರಗಳೂ ಅದರಲ್ಲಿ ಆನುಷಂಗಿಕವಾಗಿ ಬರಬೇಕಾಗುವದು. ಪ್ರಾಥಮಿಕಶಾಲೆಗಳ ಅಭ್ಯಾಸಕ್ರಮವನ್ನು ಮುಗಿಸಿ ಮನೆಗೆಲಸಕ್ಕೆ ಹೋಗುವ ವಿದ್ಯಾರ್ಥಿಗೆ ಈ ವಿಷಯದಲ್ಲಿ ಇಷ್ಟುಮಟ್ಟಿಗಾದರೂ ಜ್ಞಾನವಾಗಿರುವದು ತೀರ ಆವಶ್ಯಕವೆನಿಸುವದು. ಈ ದೃಷ್ಟಿಯನ್ನಿಟ್ಟುಕೊಂಡು ಸಾಗಿಸುವ ಪ್ರಕೃತಿವಿಮರ್ಶೆಗೆ ಅಥವಾ ಸೃಷ್ಟಿನಿರೀಕ್ಷಣೆಗೆ ಈಗಿನ ಹೊಸ ಕಾಲದಲ್ಲಿ (General Science) ಸೃಷ್ಟಿಜ್ಞಾನವೆಂದು ಹೆಸರುಕೊಟ್ಟಿರುವರು. ಆದುದರಿಂದ ಪ್ರಕೃತಿವಿಮರ್ಶೆಯ ಪಾಠಗಳ ಮುಖ್ಯ ಗುಟ್ಟು-ಅದರ ಅಭ್ಯಾಸದ ಪ್ರಾಮುಖ್ಯವಾದ ಗುರಿಯು- ಪ್ರಕೃತಿಯನ್ನು ತನಗೆ ಅಳವಡಿಸಿಕೊಳ್ಳುವದು ಇಲ್ಲವೆ ಪರಿಸ್ಥಿತಿಗೆ ತಕ್ಕಂತೆ ತನ್ನನ್ನು ಮಾರ್ಪಡಿಸಿಕೊಳ್ಳುವದು ಇದೇ ಆಗಿರಬೇಕೆಂದು ಬೇರೆ ಹೇಳಬೇಕಾಗಿಲ್ಲ.

ಪ್ರಕೃತಿಯಲ್ಲಿ ನಿರುಪಯುಕ್ತ ಪದಾರ್ಥಗಳು ತೀರ ವಿರಳ. ಅಡವಿಯೊಳಗಿನ ಇಲ್ಲವೆ ಜನವಸತಿಗೊಳಗಾದ ಪ್ರದೇಶಗಳಲ್ಲಿರುವ ಹಲಕೆಲವು ಗಿಡಗಂಟಿಗಳೂ ಪ್ರಾಣಿಗಳೂ ನಮಗೆ ಪ್ರಕೃತಕ್ಕೆ ನಿರುಪಯೋಗಿಯಾಗಿ ತೋರಿದರೂ ದೀರ್ಘಾಲೋಚನೆಯಿಂದ ಅವುಗಳ ಆವಶ್ಯಕತೆಯು ಕಂಡುಬಾರದೆ ಇರದು. ಅಡವಿಯ ನಾಶದಿಂದ ಮಳೆಯು ಕಡಿಮೆಯಾಗುವದು ಅನುಭವದ ಮಾತು. ಹಲವುತರದ ಹಕ್ಕಿಗಳು ವನಸ್ಪತಿಗಳ ಬೆಳೆವಣಿಗೆಗೆ ವಿರೋಧಿಯಾದ ಹುಳಹುಪ್ಪಡಿಗಳನ್ನು ತಿಂದು ಜೀವಿಸುವದರಿಂದ ಅವು ಸಾಮಾನ್ಯರ ದೃಷ್ಟಿಗೆ ನಿರುಪಯೋಗಿಯಾಗಿದ್ದರೂ ಅಪ್ರತ್ಯಕ್ಷವಾಗಿ ಒಕ್ಕಲಿಗರಿಗೆ ಮಹೋಪಕಾರಮಾಡುತ್ತಿರುವವು. ಹಕ್ಕಿಗಳು ಹುಳಹುಪ್ಪಡಿಗಳನ್ನು ಆರಿಸುವದರಿಂದ, ಹಾವುಗಳು ಇಲಿಗಳನ್ನು ತಿನ್ನುವದರಿಂದ, ಜನರಿಗೆ ಉಪಕಾರಿಗಳಾಗುವಂತೆಯೇ ಮಿಕದ ಬಾಧೆಯಾಗುವ ಹೊಲಗಳ ರೈತರು ಅಲ್ಲಿಗೆ ಹುಲಿಯ ಬರುವಿಕೆಯನ್ನು ನಿರೀಕ್ಷಿಸುತ್ತಿರುವದು ಎಲ್ಲರಿಗೂ ತಿಳಿದ ಮಾತೇ ಸರಿ. ಯಾಕಂದರೆ ಹುಲಿಯಿರುವಲ್ಲಿ ಮಿಕಗಳು ಬದುಕಲಾರವು. ಈ ರೀತಿಯಾಗಿ ಪ್ರಪಂಚದ ಎಲ್ಲ ಪ್ರಾಣಿ ವನಸ್ಪತಿಗಳು ಒಂದಿಲ್ಲೊಂದು ರೀತಿಯಿಂದ ನಮಗೆ ಉಪಕಾರಿಗಳೇ ಆಗಿರುವವು. ಈ ಮಾತನ್ನೇ ಪ್ರಕೃತಿವಿಮರ್ಶೆಯಿಂದ ಬಾಲಕರು ಕಲಿತು ಆಚರಣೆಯಲ್ಲಿ ತಂದುಕೊಳ್ಳಬೇಕಾಗುವದು.

ನಮ್ಮ ದೇಶದ ಬಾಲಕರಿಗೆ ಪ್ರಕೃತಿವಿಮರ್ಶೆಯು ಅತಿ ಮಹತ್ವದ ವಿಷಯವಾಗಿದೆ. ನಮಗೆ ಪ್ರಾಣಿ ವನಸ್ಪತಿಗಳ ಜೀವನವನ್ನು ಅಭ್ಯಾಸಿಸುವ ರೂಢಿ ಇಲ್ಲ. ಹಾಗು ಆ ವಿಷಯದಲ್ಲಿ ನಮಗಿರುವ ಜ್ಞಾನವು ಇನ್ನೂ ಅಪೂರ್ಣವಾಗಿಯೇ ಇದೆ. ನಮ್ಮವರು ಪೂರ್ವಕಾಲದಿಂದಲೂ ಅನೇಕ ವನಸ್ಪತಿಗಳನ್ನು ಮಾನವ ಜೀವನಕ್ಕೆ ಅನುಕೂಲವಾದ ರೀತಿಯಲ್ಲಿ ಬೆಳೆಯಿಸುತ್ತ ಬಂದಿರುವರು. ರೇಶಿಮೆಯ ಹುಳ, ಜೇನ್ನೊಣ ಮುಂತಾದ ಕ್ಷುದ್ರ ಪ್ರಾಣಿಗಳನ್ನು ಮೊದಲುಗೊಂಡು ಕಾಡಾನೆಗಳಂಥ ಪ್ರಬಲ ಪ್ರಾಣಿಗಳನ್ನು ಕೂಡ ಈಲುಮಾಡಿಕೊಂಡು, ಸಾಕಿ, ಅವುಗಳಿಂದ ಕೆಲಸಮಾಡಿಸಿಕೊಳ್ಳುವದು ನಮಗೆ ಅಪರಿಚಿತವಾದ ಮಾತಲ್ಲ. ಆದುದರಿಂದ ಮಾನವರಿಗೆ ಉಪಕಾರಿಗಳಾದ ಪ್ರಾಣಿ ವನಸ್ಪತಿಗಳನ್ನು ನಿರೀಕ್ಷಿಸಿ ಅವನ್ನು ನಮಗೆ ಅನುಕೂಲವಾದ ರೀತಿಯಲ್ಲಿ ಮಾರ್ಪಡಿಸಿ ಬೆಳೆಯಿಸಿಕೊಂಡು ನಮ್ಮ ಜೀವನವನ್ನು ಸುಖಿಯಾಗಿ ಮಾಡಿಕೊಳ್ಳಲು ನಾವು ಯತ್ನಿಸಬಹುದು; ನಮ್ಮ ಬಾಲಕರಲ್ಲಿ ಆ ರೂಢಿಯನ್ನು ಹುಟ್ಟಿಸಲೂಬಹುದು. ಇದರಿಂದ ಮನುಷ್ಯ

ಪ್ರಾಣಿಯ ಜ್ಞಾನದ ಬೆಳೆವಣಿಗೆಗೆ ತಕ್ಕ ಸಹಾಯವೂ ಆಗಬಹುದು; ಅವನ ಸಂಪದಭಿವೃದ್ಧಿಗೂ ಅನುಕೂಲವಾಗಬಹುದು ; ಎಂಬ ಮಾತುಗಳನ್ನು ಶಿಕ್ಷಕರು ಪ್ರಕೃತಿವಿಮರ್ಶೆಯ ಪಾಠಗಳನ್ನು ಸಾಗಿಸುವಾಗ ಮರೆಯಕೂಡದು.

ಪ್ರಕೃತಿವಿಮರ್ಶೆಯ ಪಾಠಗಳಿಂದ ಬಾಲಕರ ಚಟವೂ ಶೀಲವೂ ಮಾರ್ಪಟ್ಟು ಅವರು ಒಳ್ಳೆಯ ದಾರಿಗೆ ಬರಲು ಅನುಕೂಲವಾಗಬಹುದು. "ಪ್ರಕೃತಿವಿಮರ್ಶೆಯೆಂದರೆ ಒಂದು ವಿಷಯವಲ್ಲ; ಅದು ಜ್ಞಾನಾರ್ಜನೆಯ ಒಂದು ಪದ್ಧತಿ" ಎಂದು ಹೇಳುವದುಂಟು. ಆದರೆ ನಾವು ಹಿಂದೆ ಹೇಳಿದಂತೆ ಪ್ರಕೃತಿವಿಮರ್ಶೆಯೆಂದರೆ ಸೃಷ್ಟಿಜ್ಞಾನ (General Science) ಎಂಬ ಅರ್ಥವನ್ನಿಟ್ಟುಕೊಂಡಾಗ ಈ ವಾದಕ್ಕೆ ಆಸ್ಪದವುಳಿಯಲಾರದೆಂಬದು ಸಹಜವು. ಪ್ರಕೃತಿಯಲ್ಲಿಯ ಪದಾರ್ಥಗಳನ್ನು ನಿರೀಕ್ಷಿಸುವದು, ಆ ನಿರೀಕ್ಷಣೆಯನ್ನು ಬರೆದಿಡುವದು, ವರ್ಗೀಕರಿಸಿ ಕೊನೆಗೆ ಅವುಗಳ ಫಲಿತಗಳನ್ನು ನಿರ್ಣಯಿಸುವದು ಇವೆಲ್ಲ ಶಾಸ್ತ್ರಜ್ಞರ ಕಾರ್ಯಗಳು. ನಮ್ಮ ದೇಶದ ಶಿಕ್ಷಣ ಕ್ರಮದಲ್ಲಿ ಒಂದು ಪ್ರಬಲವಾದ ದೋಷವಿದೆ. ಏನೆಂದರೆ ಬಾಲಕರ ಕೈಯೊಳಗೆ ಪುಸ್ತಕಗಳನ್ನು ಕೊಟ್ಟು ಒಂದೊಂದು ಭಾಗಗಳನ್ನು ಪಾಠಮಾಡಿಸಿ ಕೇಳಿದ ಪ್ರಶ್ನೆಗೆ ಏನಾದರೊಂದು ಉತ್ತರವನ್ನು ಹೇಳಲು ಕಲಿಸಿಬಿಟ್ಟರೆ ಅವರಿಗೆ ಆ ವಿಷಯದ ಜ್ಞಾನವಾದಂತಾಯಿತೆಂದು ನಮ್ಮಲ್ಲಿ ಬಹುಜನ ಶಿಕ್ಷಕರ ತಿಳಿವಳಿಕೆಯಾಗಿದೆ. ಇದು ತೀರ ತಪ್ಪು. ಪ್ರಕೃತಿವಿಮರ್ಶೆಯ ಪಾಠಗಳಲ್ಲಂತೂ ಇದು ಕೇವಲ ನಿಷ್ಪ್ರಯೋಜನವಾದ ಮಾರ್ಗ. ಸ್ವಪ್ರಯತ್ನದಿಂದ ಜ್ಞಾನಸಂಪಾದನೆ ಮಾಡುವದರಿಂದಾಗುವ ಆನಂದ, ನಿರೀಕ್ಷಣಶಕ್ತಿಯ ಬೆಳೆವಣಿಗೆ, ಸ್ವತಂತ್ರ ಶೋಧಕಬುದ್ಧಿಯ ವಿಕಾಸ, ಇವುಗಳಿಗೆ ಪ್ರಕೃತಿವಿಮರ್ಶೆಯ ಪಾಠಗಳಲ್ಲಿರುವಷ್ಟು ಅನುಕೂಲತೆಯು ಇನ್ನಾವ ವಿಷಯದಲ್ಲಿಯೂ ಇರದು. ಇದು ಕುತೂಹಲಬುದ್ಧಿಯನ್ನು ಜಾಗ್ರತಗೊಳಿಸಿ, ತನ್ನ ಜ್ಞಾನವನ್ನು ತಾನೇ ಸಂಪಾದಿಸಿಕೊಳ್ಳುವ ಮಾರ್ಗಕ್ಕೆ ಬಾಲಕರನ್ನು ಒಯ್ದು ಹಚ್ಚಿ, ತನ್ನ ಪ್ರಶ್ನೆಗಳಿಗೆ ತಾನೇ ಉತ್ತರ ಪಡೆಯುವದಕ್ಕೆ ಪ್ರೇರಣೆಮಾಡುತ್ತಿರುವದು. ಪ್ರಕೃತಿಯಲ್ಲಿ ನಡೆಯುತ್ತಿರುವ ಅಗಾಧ ಕೃತಿಗಳನ್ನೂ ಪರಮೇಶ್ವರನ ಅಗಾಧಲೀಲೆಗಳನ್ನೂ ನೋಡಿದ ಬಾಲಕನು ಮಾನವಶಕ್ತಿಯ ಅಲ್ಪತೆಯನ್ನು ಕಂಡು ತಾನು ಈ ವಿಶ್ವದಲ್ಲಿ ಕೇವಲ ಕ್ಷುದ್ರಜೀವಿಯೆಂಬ ಅಭಿಪ್ರಾಯವನ್ನು ಅರಿತುಕೊಂಡು ದುರಭಿಮಾನ-ದುರ

ಹಂಕಾರಗಳನ್ನು ತೊರೆದು ಸಜ್ಜನನಾಗಬಹುದು; ತಾನು ಪರಪುಷ್ಟನೆಂಬದನ್ನು ಅರಿತುಕೊಂಡು ಪರೋಪಕಾರಿಯಾದ ಸುಶೀಲನಾಗಬಹುದು; ದೇವರಲ್ಲಿ ಭಕ್ತಿ-ವಂತನಾಗಬಹುದು. ಪಕ್ಷಿಗಳ ಗರಿಗಳ ಸೌಂದರ್ಯ, ಹುಳಗಳು ಅಡಗಿರುವ ಚಿಪ್ಪು ಶಿಂಪುಗಳ ಭದ್ರತೆ, ಸ್ಫಟಕಗಳ ವಿಚಿತ್ರವಾದ ಘಟನೆ, ಹೂವುಗಳ ಬಣ್ಣ ವಾಸನೆಗಳ ಮನೋಹರತೆ, ಗ್ರಹನಕ್ಷತ್ರಗಳ ಅಗಣ್ಯವಾದ ಅಂತರ, ಪಶು ಪಕ್ಷಿಗಳ ವಿಚಿತ್ರವಾದ ಬುದ್ಧಿಕೌಶಲ್ಯ ಇವನ್ನು ನೋಡಿದ ಬಾಲಕರು ಸೃಷ್ಟಿ ಕರ್ತನ ವಿಷಯದಲ್ಲಿ ಪೂಜ್ಯಬುದ್ಧಿ ಭಕ್ತಿಭಾವಗಳನ್ನು ಸಹಜವಾಗಿ ತೋರ್ಪಡಿಸ ಬಹುದು. ಶಿಕ್ಷಕರು ಮಾತ್ರ ಈ ದೃಷ್ಟಿಯನ್ನಿಟ್ಟುಕೊಂಡು ತಮ್ಮ ಬಾಲಕ ರನ್ನು ಈ ಮಾರ್ಗಕ್ಕೆ ಒಯ್ದು ಹಚ್ಚಿ ಅವರ ವಿಚಾರಕ್ರಮಕ್ಕೆ ಈ ದಿಕ್ಕಿನಲ್ಲಿ ಚಾಲನೆ ಕೊಡುವದು ಅವಶ್ಯವಾದ ಮಾತು.

ಪ್ರಕೃತಿವಿಮರ್ಶೆಯ ಪಾಠಗಳು ಸಾಲೆಯಲ್ಲಿರುವಾಗಲಷ್ಟೇ ನಡೆಯು ಬೇಕೆಂದಾಗಲಿ, ಸಾಲೆಯ ಅಭ್ಯಾಸವನ್ನು ಮುಗಿಸಿದ ವಿದ್ಯಾರ್ಥಿಗಳು ಅದನ್ನು ಮುಂದೆ ಸಾಗಿಸಕೂಡದೆಂದಾಗಲಿ ಮಾತ್ರ ಅರ್ಥ ಮಾಡಕೂಡದು. ಸಾಲೆಯ ವೇಳಾಪತ್ರಿಕೆಯಲ್ಲಿ ಅಥವಾ ಅಭ್ಯಾಸಕ್ರಮದಲ್ಲಿ ಈ ವಿಷಯದ ಸಮಾವೇಶಮಾಡಿ ಕೊಳ್ಳುವದು ಕೇವಲ ಶಿಕ್ಷಕನ ಅನುಕೂಲತೆಗಾಗಿ, ಇಲ್ಲವೆ ವಿದ್ಯಾರ್ಥಿಗಳಿಗೆ ಮಾರ್ಗತೋರಿಸಿಕೊಡುವದಕ್ಕಾಗಿ ಮಾತ್ರ. ಮನುಷ್ಯಪ್ರಾಣಿಯು ಆಜನ್ಮ ಪ್ರಕೃ ತಿಯ ಉಪಾಸಕನು; ಪ್ರಕೃತಿಯೇ ಮಾನವನ ಗುರು; ಪ್ರಕೃತಿಯೇ ಅವನು ಓದುವ ಬಹು ವಿಶಾಲಗ್ರಂಥ. ಹುಟ್ಟಿದಂದಿನಿಂದ ಸಾಯುವವರೆಗೂ ಮನುಷ್ಯನು ವಿದ್ಯಾರ್ಥಿ ಯಾಗಿಯೇ ಇರುವನು. ಈ ವಿಚಾರಗಳನ್ನು ಬಾಲಕರ ಮನಸ್ಸಿನಲ್ಲಿ ಹುಟ್ಟಿಸು ವದು ಪ್ರತಿಯೊಂದು ಪ್ರಕೃತಿವಿಮರ್ಶೆಯ ಪಾಠದಲ್ಲಿ ನಡೆಯಬೇಕಾದ ಉಪಸಂಹಾ ರದ ವಿಭಾಗವಾಗಿರಬೇಕೆಂದರೆ ಅತಿಶಯೋಕ್ತಿಯಾಗದು. ಪ್ರಕೃತಿವಿಮರ್ಶೆಯ ಅಭ್ಯಾಸಕ್ರಮದಲ್ಲಿ ಯಾವ ಯಾವ ವಿಷಯಗಳ ಸಮಾವೇಶವಾಗಬೇಕು? ಸಾಲೆಯ ವೇಳೆಯಲ್ಲಿ ಎಷ್ಟು ಕಾಲವು ಈ ವಿಷಯಕ್ಕೆ ಸಲ್ಲಬೇಕು? ಎಂಬದು ನಿರ್ದಿಷ್ಟವಾಗಿ ಹೇಳಬಹುದಾದ ಮಾತಲ್ಲ. ಯಾಕೆಂದರೆ ಅದು ಶಾಲೆಯ ಸ್ಥಳ, ಬಾಲಕರ ಪರಿಸ್ಥಿತಿ, ಶಿಕ್ಷಕರ ಅನುಕೂಲತೆ ಇವೇ ಮುಂತಾದ ಅನೇಕ ಉಪಾಧಿ ಗಳನ್ನು ಅನುಲಕ್ಷಿಸಿ ನಿರ್ಣಯಿಸಿಕೊಳ್ಳಬೇಕಾದ ಮಾತು. ಆದ್ದರಿಂದ ಇಲ್ಲಿ ಕೆಲವು ಸಾಮಾನ್ಯ ವಿಚಾರಗಳನ್ನಷ್ಟೇ ಹೇಳುವೆವು.

ಹಿಂದೆ ಹೇಳಿದ ಪ್ರಕೃತಿವಿಮರ್ಶೆಯ ಪಾಠಗಳ ಧ್ಯೇಯವನ್ನು ಅನುಲಕ್ಷಿಸಿ ನೋಡಿದರೆ ಆ ಪಾಠಗಳಲ್ಲಿ ಯಾವ ಯಾವ ವಿಷಯಗಳನ್ನು ಕಲಿಸಬೇಕೆಂಬ ಮಾತು ತಾನೇ ಸಿದ್ಧವಾಗುವದು. ಪ್ರಾಣಿವನಸ್ಪತಿಗಳ ಹಾಗು ಖನಿಜಗಳ ಸಂಬಂಧವು ಮನುಷ್ಯನ ಜೀವನಕ್ಕೆ ಎಷ್ಟು ಮಟ್ಟಿಗೆ ಉಂಟಾಗುವದೆಂಬದೂ ಚಳಿಮಳೆಗಳು, ಗಾಳಿ ಬಿಸಿಲುಗಳು, ಶೀತೋಷ್ಣಗಳು, ಹಗಲು ರಾತ್ರಿಗಳು, ಸೂರ್ಯಚಂದ್ರರು, ಗ್ರಹ ನಕ್ಷತ್ರಗಳು, ಅವುಗಳ ಸ್ಥಿತಿ, ಚಲನವಲನ, ಇವೇ ಮುಂತಾದ ಪ್ರಕೃತಿ ವ್ಯಾಪಾರಗಳಮೂಲಕ ಮನುಷ್ಯನ ಜೀವನದಲ್ಲಾಗುವ ಪರಿಣಾಮಗಳು ಇವೆಲ್ಲ ನಮಗೆ ಆವಶ್ಯಕ ವಿಷಯಗಳು. ಅವನ್ನು ಯಾವ ಕ್ರಮದಿಂದ ಅಳವಡಿಸಿಕೊಂಡು ಎಷ್ಟು ಮಟ್ಟಿಗೆ ಅವನ್ನು ನಿರೀಕ್ಷಿಸಿ ತಿಳಿದುಕೊಳ್ಳಬಹುದೆಂಬದು ಆಯಾ ಶಿಕ್ಷಕರನ್ನೂ ಬಾಲಕರನ್ನೂ ಅವರ ಪರಿಸ್ಥಿತಿಯನ್ನೂ ಅವಲಂಬಿಸಿರುವದು. ನಾವು ಹೇಳಬಹುದಾದ ಮಾತು ಇಷ್ಟೇ:—

(೧) ಶಿಕ್ಷಕನು ತನ್ನ ಜ್ಞಾನವನ್ನು ಬಾಲಕರ ತಲೆಯಲ್ಲಿ ತುಂಬಲಿಕ್ಕೆ ಪ್ರಯತ್ನ ಪಡಕೂಡದು. ಆ ಜ್ಞಾನವು ಬಾಲಕರು ತಮ್ಮ ಕುತೂಹಲದ ಮೂಲಕ ಪ್ರಯತ್ನ ಮಾಡಿ ದೊರಕಿಸಿದ್ದಿರಬೇಕು. ಶಿಕ್ಷಕನು ಅವರಿಗೆ ಆವಶ್ಯಕವೆನಿಸಿದಾಗ ಮಾತ್ರ ಮಾರ್ಗದರ್ಶಿಯಾದ ಸಹಾಯಕನಾಗಿ ಮುಂದೆ ಬರಬೇಕು.

(೨) ಬಾಲಕರು ಅಭ್ಯಾಸ ಮಾಡತಕ್ಕ ಪ್ರಾಣಿ ವನಸ್ಪತಿ ಮೊದಲಾದವುಗಳನ್ನು ಪ್ರಕೃತಿಯಲ್ಲಿ ಸ್ವಾಭಾವಿಕವಾದ ಸ್ಥಿತಿಯಲ್ಲಿರುವಾಗಲೇ ನಿರೀಕ್ಷಣೆ ಮಾಡತಕ್ಕದ್ದು.

(೩) ತಮ್ಮ ನಿರೀಕ್ಷಣೆಯ ಕಾಲದಲ್ಲಿ ಆ ಪ್ರಾಣಿ ವನಸ್ಪತಿ ಮೊದಲಾದವುಗಳಿಗೆ ತೊಂದರೆಯಾಗಲಿ ಅಪಾಯವಾಗಲಿ ತಟ್ಟದಂತೆ ಬಾಲಕರು ಎಚ್ಚರಗೊಳ್ಳಬೇಕು.

(೪) ನೋಡಿದ ಸಂಗತಿಗಳನ್ನು ಕುರಿತು ಶಿಕ್ಷಕರೂ ಬಾಲಕರೂ ಸೇರಿ ಸಂಭಾಷಣೆ ಮಾಡಿ ಆ ಸಂಭಾಷಣೆಯಲ್ಲಿ ಆ ವಿಷಯದ ನಿಜವಾದ ಸಂಗತಿಯಷ್ಟೇ ಬಾಲಕರ ಮನಸ್ಸಿನಲ್ಲಿ ದೃಢವಾಗುವಂತೆ ಯತ್ನಿಸತಕ್ಕದ್ದು.

(೫) ಬಾಲಕರು ತಾವು ನೋಡಿ ತಿಳಿದ ಸಂಗತಿಗಳ ಸಂಕ್ಷೇಪ ಟಿಪ್ಪಣಿಗಳನ್ನು ಬರೆದಿಡಬೇಕು.

(೬) ಬಾಲಕರು ತಾವು ನೋಡಿ ತಿಳಿದ ವಸ್ತುಗಳ ಇಲ್ಲವೆ ವ್ಯಾಪಾರಗಳ ಮುಖ್ಯಾಂಶಗಳನ್ನು ಚಿತ್ರಿಸಿ ಇಟ್ಟುಕೊಳ್ಳುವ ರೂಢಿಯುಳ್ಳವರಾಗಿರಬೇಕು.

(೭) ಬಾಲಕರು ತಾವು ನೋಡಿ ತಿಳಿದ ವಿಷಯುಗಳಲ್ಲಿ ಸಂಗ್ರಹಕ್ಕೆ ಯೋಗ್ಯವಾದ ವಸ್ತುಗಳಿದ್ದರೆ ಅವನ್ನು ವ್ಯವಸ್ಥಿತವಾಗಿ ಸಂಗ್ರಹಿಸುವ ಚಟವುಳ್ಳವರಾಗಿರಬೇಕು.

(೮) ಇಂಥ ಸಂಗ್ರಹ, ಟಿಪ್ಪಣಿ-ಪುಸ್ತಕಗಳು, ಬಾಲಕರು ತೆಗೆದ ಚಿತ್ರಗಳು, ಇವನ್ನು ವ್ಯವಸ್ಥೆಗೊಳಿಸಲಿಕ್ಕೆ ಶಿಕ್ಷಕನು ಸಹಾಯುಮಾಡಬಹುದು, ಇಷ್ಟೇ ಅಲ್ಲದೆ ಅದರಲ್ಲಿ ಶಿಕ್ಷಕರ ಸ್ವಂತ ಕೈವಾಡವು ತೀರ ಸ್ವಲ್ಪವೇ ಇರಬೇಕು; ಇರಲೇ ಕೂಡದೆಂದರೂ ಸರಿಯೇ.

(೯) ಬಾಲಕರು ತಮ್ಮ ಮನೆಗಳಲ್ಲಿ ಬೆಕ್ಕು, ನಾಯಿ, ಗಿಳಿ, ಪಾರಿವಾಳ ದನಗಳು, ಆಡು, ಕೋಳಿ ಮುಂತಾದ ಪ್ರಾಣಿಗಳನ್ನು ಸಾಕಬಹುದು. ತಮ್ಮ ನಿರೀಕ್ಷಣೆಗಾಗಿಯೋ, ತಮ್ಮ ಸುಖ ಸಮಾಧಾನಗಳಿಗೆಂದೋ, ಚಿಕ್ಕದೊಂದು ತೋಟವನ್ನು ಮಾಡಿ ಅದರಲ್ಲಿ ಜಾಜಿ ಮಲ್ಲಿಗೆ ಗುಲಾಬಿ ಮುಂತಾದ ಹೂಗಿಡಗಳನ್ನೂ ಕಾಯಿಪಲ್ಲೆ ತೊಪ್ಪಲು ಪಲ್ಲೆಗಳ ಗಿಡಬಳ್ಳಿಗಳನ್ನೂ ಬೆಳೆಯಿಸಬಹುದು. ಈ ಸಂದರ್ಭದಲ್ಲಿ ತಾವು ಸಾಕಿದ ಪ್ರಾಣಿಗಳಿಗೆ ತೊಂದರೆಕೊಡುವ ಉಣ್ಣೆ ಚಿಕ್ಕಾಡು ಮುಂತಾದ ಪರೋಪಜೀವಿಗಳಾದ ಕ್ಷುದ್ರ ಜಂತುಗಳ ಹಾಗು ಆ ಪ್ರಾಣಿಗಳಿಗೆ ಬರುವ ಬಗೆಬಗೆಯ ಬೇನೆಗಳ ಮತ್ತು ಅವುಗಳ ನಿವಾರಣೋಪಾಯುಗಳ ಸಂಬಂಧದಿಂದಲೂ ತಾವು ತೋಟದಲ್ಲಿ ಬೆಳೆಯಿಸಿದ ವನಸ್ಪತಿಗಳಿಗೆ ತಗಲುವ ರೋಗಗಳ ಮತ್ತು ಅವುಗಳನ್ನು ತಿಂದು ಕೆಡಿಸುವ ಪಶುಪಕ್ಷಿ ಕ್ರಿಮಿ ಕೀಟಕಗಳ ವಿಷಯುವಾಗಿಯೂ ಬಂದರಿಕೆ ಮುಂತಾದ ಪರೋಪ ಜೀವೀ ವನಸ್ಪತಿಗಳ ವಿಷಯುದಲ್ಲಿಯೂ ಆ ಬೆಳೆಗಳಿಗೆ ಉಪಕಾರಿಗಳಾದ ಸಂಗತಿಗಳನ್ನು ಕುರಿತೂ ಬಾಲಕರು ಕ್ರಮದಿಂದ ಅಭ್ಯಾಸಮಾಡಬೇಕಾಗುವದು. ಹಾಗು ಅವೆಲ್ಲವುಗಳ ಟಿಪ್ಪಣಿಯನ್ನಿಡಬೇಕು.

(೧೦) ಮಳೆಗಾಲದಲ್ಲಿ ತುಂಬಿ ಹರಿಯುವ ಕಾಲುವೆಗಳು, ಚಿಕ್ಕ ಹಳ್ಳಗಳು, ಹೊಳೆಗಳು ಸಾಧ್ಯವಿದ್ದಲ್ಲಿ ಸಮುದ್ರ ಇವನ್ನು ಬಾಲಕರು ನೋಡಿರಬೇಕು. ಅವನ್ನೇ ಮಿಕ್ಕ ಕಾಲಗಳಲ್ಲಿಯೂ ನೋಡಿ ಕಾಲಾನುರೋಧದಿಂದ ಅವುಗಳಲ್ಲಾ

ಗುವ ಬದಲಾವಣೆಗಳನ್ನು ನಿರೀಕ್ಷಿಸಿ ಕಾರ್ಯಕಾರಣ ಭಾವಗಳನ್ನು ಪರ್ಯಾಲೋಚಿಸಿ, ಕೊನೆಗೊಂದು ನಿಜವಾದ ನಿರ್ಣಯಕ್ಕೆ ಮುಟ್ಟಿ ಅದನ್ನು ಬರೆದಿಡಬೇಕು. ಊರ ನೆರೆಯ ನೀರಿನ ಹೊಂಡಗಳಿಗೆ ಹೋಗಿ ಅಲ್ಲಿರುವ ಕಪ್ಪೆ ಮೀನು ಮುಂತಾದವುಗಳ ಜೀವನವನ್ನು ನಿರೀಕ್ಷಣೆಮಾಡಬೇಕು.

(೧೧) ಹಳ್ಳಿಯಲ್ಲಿಯ ರೈತರು ಬೆಳೆಯಿಸುವ ಹೊಲದ ಪೈರಿನ ಮತ್ತು ತೋಟದ ಪೈರಿನ ಬೆಳೆವಣಿಗೆ, ಅವುಗಳನ್ನು ಬಿತ್ತುವ ಇಲ್ಲವೆ ಬೇರೆ ರೀತಿಯಿಂದ ಬೆಳೆಯಿಸುವ ಕ್ರಮ, ಕಳೆ ತೆಗೆಯುವದು, ನೀರುಣ್ಣಿಸುವದು, ಬೀಜಗಳನ್ನು ಆರಿಸುವದು, ಇವೇ ಮುಂತಾದ ವಿಶೇಷ ಕಾರ್ಯಗಳನ್ನು ನಿರೀಕ್ಷಿಸಿ ಟಿಪ್ಪಣಿ ಮಾಡುವದಕ್ಕೆ ಹುಡುಗರು ಸಮರ್ಥರಾಗಬೇಕು.

(೧೨) ಈ ವಿಚಾರಗಳಿಂದ ಪ್ರಕೃತಿ ವಿಮರ್ಶೆ, ಭೂಗೋಲ, ಒಕ್ಕಲತನ ಈ ಮೂರೂ ವಿಷಯಗಳು ಪರಸ್ಪರ ನಿಕಟ ಸಂಬಂಧವುಳ್ಳವೆಂಬದೂ ಭಾಷಾಪಾಠ ಚಿತ್ರಕಲೆಯ ಪಾಠಗಳು ಅವಕ್ಕೆ ಅಪ್ರತ್ಯಕ್ಷ ಸಂಬಂಧವುಳ್ಳವೆಂಬದೂ ಸಿದ್ಧವಾಗುವದು. ಶಿಕ್ಷಕರು ಈ ಮಾತುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ತಮ್ಮ ಈ ಎಲ್ಲ ವಿಷಯಗಳ ಪಾಠಗಳ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಬೇಕು. ಪ್ರಕೃತಿ ವಿಮರ್ಶೆಯ ಪಾಠಗಳ ಉದ್ದೇಶವನ್ನು ಅನುಲಕ್ಷಿಸಿಯೇ ಅದರ ಅಭ್ಯಾಸ ಕ್ರಮವನ್ನು ಅನುಗೊಳಿಸಿಕೊಳ್ಳಬೇಕೆಂದು ಹಿಂದೆ ಹೇಳಿರುವಂತೆ ಆ ಅಭ್ಯಾಸವನ್ನು ಬಾಲಕರ ಮನಸ್ಸಿಗೆ ನಾಟುವಂತೆ ಕಲಿಸಬೇಕಾದ ಪದ್ಧತಿಯೂ ಕೂಡ ಆ ಉದ್ದೇಶ ಆ ಅಭ್ಯಾಸ ಕ್ರಮಗಳನ್ನು ಬಿಟ್ಟು ಉಳಿಯಲಾರದು. ಉದ್ದೇಶ ಸಾಧನೆಗಾಗಿಯೇ ಅಭ್ಯಾಸಕ್ರಮ; ಉದ್ದೇಶ ಸಾಧನೆಗಾಗಿಯೇ ಆ ಅಭ್ಯಾಸಕ್ರಮವನ್ನು ಕಲಿಸುವ ಪದ್ಧತಿ. ಆದ್ದರಿಂದ ಈ ಮೂರೂ ಒಂದನ್ನೊಂದು ಬಿಟ್ಟಿರುವದು ತೀರ ಅಸಂಭವನೀಯವಾದ ಮಾತು.

ಹಿಂದೆ ಹೇಳಿದ ಉದ್ದೇಶಗಳು ಪೂರ್ಣವಾಗಬೇಕಾದರೆ ಬಾಲಕರಲ್ಲಿ ಸ್ವಾಭಾವಿಕವಾಗಿರುವ ಒಲವುಗಳನ್ನು ಲಕ್ಷ್ಯಕ್ಕೆ ತಂದುಕೊಂಡು ನಮ್ಮ ಪಾಠಗಳನ್ನು ಸಾಗಿಸಬೇಕಾಗುವದು.

(ಮುಂದೆ ಸಾಗುವದು.)

ಪಾಠದ ನಿರೀಕ್ಷಣೆ

ಶಾಲೆಯ ಕೆಲಸದಲ್ಲಿ ಶಿಕ್ಷಕರ ಶ್ರಮವು ಸಾರ್ಥಕವಾಗಬೇಕಾದರೆ, ಅವರು ಕಲಿಸಿದ ಪಾಠಗಳು ಸರಿಯಾದ ಕ್ರಮದಿಂದ ಸಾಗಲಿಕ್ಕೆಬೇಕು. ಸರಿಯಾದ ಕ್ರಮದಿಂದ ಕಲಿಸುವದು ಸುಲಭವಲ್ಲ. ಜನ್ಮತಃ ಶಿಕ್ಷಕರಾಗಿರುವ ಕೆಲವರನ್ನು ಬಿಟ್ಟರೆ, ಮಿಕ್ಕವರು ಆ ಕಲೆಯನ್ನು ಕ್ರಮವಾಗಿ ಅಭ್ಯಾಸಮಾಡಿ ಕಲಿತುಕೊಳ್ಳಬೇಕಾಗುವದು. ಶಿಕ್ಷಣದ ತತ್ತ್ವಗಳನ್ನು ಮನವರಿಕೆಮಾಡಿಕೊಂಡು ಅವನ್ನು ಅನುಸರಿಸಿ ಸ್ವತಃ ಪಾಠಗಳನ್ನು ಕಲಿಸುವದು, ಆಗ ಸಂಭವಿಸುವ ತಪ್ಪುತಡೆಗಳನ್ನು ಬಲ್ಲವರಿಂದ ತಿಳಿದು ಸರಿಪಡಿಸಿಕೊಳ್ಳುವದು; ಅನ್ಯರು ಕಲಿಸಿದ ಪಾಠಗಳನ್ನು ನಿರೀಕ್ಷಿಸುವದು, ಆ ಸಮಯದಲ್ಲಿ ಲಕ್ಷ್ಯವಿಟ್ಟು ನೋಡಿ ಅವರು ಮಾಡುತ್ತಿರುವ ತಪ್ಪುತಡೆಗಳನ್ನು ಕಂಡುಹಿಡಿದು ತಮ್ಮ ಪಾಠಗಳಲ್ಲಿ ಅಂಥ ತಪ್ಪುಗಳಾಗದಂತೆ ಯತ್ನಿಸುವದು, ಇವು ಶಿಕ್ಷಣಕಲೆಯ ಅಭ್ಯಾಸದ ಸಾಧನಗಳು. ತಾನು ಕಲಿಸಿದ ಇಲ್ಲವೆ ಅನ್ಯರು ಕಲಿಸಿದ ಪಾಠಗಳ ಗುಣಾವಗುಣಗಳನ್ನು ಒರೆಗೆ ಹಚ್ಚಿ ಅರಿತುಕೊಳ್ಳಲು ಶಿಕ್ಷಕರಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದ ಇಲ್ಲಿ ಕೆಲವು ಮೆಟ್ಟಿಗಳನ್ನು ಕೊಡುವೆವು. ಇವನ್ನು ಲಕ್ಷ್ಯಗೊಟ್ಟು ಓದಿ ತಿಳಿದುಕೊಂಡರೆ ಪಾಠದ ಯೋಗ್ಯತೆಯನ್ನು ನಿರ್ಣಯಿಸಲು ಸುಲಭವಾಗುವದು.

(ಅ) **ಪಾಠದ ಉದ್ದೇಶ—**

(೧) ವಿದ್ಯಾರ್ಥಿಗಳ ಯೋಗ್ಯತೆಗೆ ಇಲ್ಲವೆ ಪಾಠದ ವಿಷಯಕ್ಕೆ ಅನುಗುಣವಾಗಿ ಉದ್ದೇಶವನ್ನು ಗೊತ್ತುಪಡಿಸಿಕೊಂಡಿದ್ದರೋ ?

(೨) ಶಿಕ್ಷಕರು ಆ ಉದ್ದೇಶವನ್ನು ಮುಂದಿಟ್ಟುಕೊಂಡು ಸಾಗಿದರೋ ? ಹಾಗಿಲ್ಲದಿದ್ದರೆ ಅದಕ್ಕೆ ಅವರು ಏನು ಕಾರಣ ಹೇಳಬಹುದು ?

(೩) ಶಿಕ್ಷಕರು ಆ ತಮ್ಮ ಉದ್ದೇಶವನ್ನು ವರ್ಗಕ್ಕೆ ತಿಳಿಸಿದರೋ? ವಿದ್ಯಾರ್ಥಿಗಳು ಅದನ್ನು ಸ್ಪಷ್ಟವಾಗಿ ತಿಳಿದುಕೊಂಡರೋ ?

(ಬ) ಪಾಠದ ತರಗತಿ ಅಥವಾ ಸಾಮಾನ್ಯ ಪದ್ಧತಿ—

(೧) ಪಾಠವನ್ನು ನೀವು ಯಾವ ತರಗತಿಗೆ ಸೇರಿಸುವಿರಿ ?

(ಕ) ಪೂರ್ವಸಿದ್ಧತೆ ಅಥವಾ ಉಪಕ್ರಮ—

(೧) ಪೂರ್ವಸಿದ್ಧತೆಯು ಹುರುಪುಹುಟ್ಟಿಸುವಂಥದಿತ್ತೋ ? ಹೆಚ್ಚು ಉದ್ದವಾಗಿತ್ತೋ ? ತೀರ ಸಂಕ್ಷೇಪವಾಗಿತ್ತೋ ?

(೨) ಅದು ವಿದ್ಯಾರ್ಥಿಗಳನ್ನು ಹೊಸ ಕೆಲಸಕ್ಕೆ ಸಿದ್ಧಗೊಳಿಸಿತೋ ?

(೩) ಪಾಠದ ಉದ್ದೇಶವು ಸ್ಪಷ್ಟವಾಯಿತೋ ?

(ಡ) ವಿಷಯ ವಿವೇಚನೆ—

(೧) **ವಿಷಯ—** ವಿಷಯವು ನಿರ್ದಿಷ್ಟವಾದದ್ದಿತ್ತೋ ?

(೨) ವಿಷಯವು ವರ್ಗಕ್ಕೆ ಅನುಗುಣವಾದದ್ದಿತ್ತೋ ? ಯೋಗ್ಯವಾದದ್ದಿತ್ತೋ ? ಸಾಕಷ್ಟಿತ್ತೋ ?

(೩) ವಿಷಯವನ್ನು ತಕ್ಕ ಕ್ರಮದಲ್ಲಿ ಹೊಂದಿಸಿಕೊಂಡಿದ್ದರೋ ?

(೪) **ಕ್ರಮ—**ವಿಷಯವಿವೇಚನೆಯ ಕ್ರಮವು (ಅ) ವಿಚಾರಶಕ್ತಿಯನ್ನೂ (ಬ) ಜ್ಞಾನವನ್ನೂ (ಕ) ಗ್ರಹಣಶಕ್ತಿಯನ್ನೂ ಬೆಳೆಯಿಸುವಂಥದಿತ್ತೋ ?

(೫) ಪಾಠವು ತೀರ ಸುಲಭವಾದದ್ದು ಅಥವಾ ತೀರ ಕಠಿಣವಾದದ್ದು ಇದ್ದಿತೋ ? ವಿದ್ಯಾರ್ಥಿಗಳು ಅದನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡುವಂತೆ ಉತ್ಸಾಹಜನಕವಾಗಿ ಸಾಗಿತೋ ?

(೬) ಪಾಠವು ವಿದ್ಯಾರ್ಥಿಗಳಲ್ಲಿ ಅಭಿರುಚಿಯನ್ನು ಹುಟ್ಟಿಸಿತೋ ? ಹಾಗಿಲ್ಲದಿದ್ದರೆ, ಅದಕ್ಕೆ ನೀವು ಏನು ಕಾರಣಗಳನ್ನು ಹೇಳುವಿರಿ ? ಇದಕ್ಕೆ ವಿಷಯದ ದೋಷವು ಕಾರಣವೋ ? ಶಿಕ್ಷಕನ ದೋಷವೋ ? ಅಥವಾ ಉಷ್ಣತೆ ದಣಿವು ಮುಂತಾದ ಬಾಹ್ಯ ಅಥವಾ ಶಾರೀರಿಕ ತೊಂದರೆಗಳು ಕಾರಣವಾದವೋ ?

(೭) ಎಲ್ಲ ಉದಾಹರಣೆಗಳೂ ವಿವರಣೆಯೂ ಸ್ಪಷ್ಟವೂ ಸಮರ್ಪಕವೂ ಉತ್ಸಾಹವನ್ನು ಹುಟ್ಟಿಸುವಂಥವೂ ಆಗಿದ್ದವೋ ?

(೮) ನಕಾಶಗಳು, ಚಿತ್ರಗಳು, ಆಕೃತಿಗಳು ಮುಂತಾದವುಗಳನ್ನು ಸರಿಯಾಗಿ ಉಪಯೋಗಿಸಿದರೋ ? ಅವನ್ನು ಎಲ್ಲರಿಗೂ ಕಾಣಿಸುವಂತೆ ಯೋಗ್ಯ ಸ್ಥಳದಲ್ಲಿ ಇಟ್ಟಿದ್ದರೋ ?

೩) ಚರ್ಚೆ ಮತ್ತು ಉಪಯೋಗ—

(೧) ಶಿಕ್ಷಕರು ತಮ್ಮ ಪಾಠದ ವಿಷಯವನ್ನು ತಿರುತಿರುಗಿ ಅಂದು ಅದನ್ನು ಹುಡುಗರ ತಲೆಯಲ್ಲಿ ತುಂಬಿದರೋ ? ಅಥವಾ ಉದಾಹರಣೆಗಳಿಂದ ವಿವರಿಸಿದರೋ ?

(೨) ವಿಷಯದ ಉಪಯೋಗವನ್ನು ಶಿಕ್ಷಕರೇ ಸೂಚಿಸಿದರೋ ? ಅಥವಾ ಬಾಲಕರು ಕಂಡುಹಿಡಿದರೋ ?

(೩) ಉಪಯೋಗವು ವ್ಯವಹಾರಕ್ಕೆ ಸಂಬಂಧಿಸಿದ್ದಾಗಿತ್ತೋ ? ಅದು ನೀತಿಗೆ ಸಂಬಂಧಿಸಿದ್ದಿತ್ತೋ ?

(೪) ವಿದ್ಯಾರ್ಥಿಗಳು ಹೊಸ ಜ್ಞಾನವನ್ನು ದೊರಕಿಸುವ ಅಭಿಲಾಷೆಯುಳ್ಳವರಾಗಿ ವರ್ಗದಿಂದ ಹೋದರೋ ?

೪) ಕರಿಯ ಹಲಗೆ—

(೧) ಕರಿಯ ಹಲಗೆಯನ್ನು ಯೋಗ್ಯ ಸ್ಥಳದಲ್ಲಿ ಇಟ್ಟಿದ್ದರೋ ?

(೨) ಕರಿಯ ಹಲಗೆಯ ಉಪಯೋಗವು ಸಾಕಾದಷ್ಟು ಆಯಿತೋ ? ಅನವಶ್ಯಕವಾಗಿ ಅದನ್ನು ಉಪಯೋಗಿಸಿದರೋ ?

(೩) ಕರಿಯ ಹಲಗೆಯ ಮೇಲಿನ ಕೆಲಸವು ಸರಿಯಾಗಿದ್ದಿತೋ ? ವ್ಯವಸ್ಥಿತವಾಗಿದ್ದಿತೋ ? ಸ್ಪಷ್ಟವಾಗಿದ್ದಿತೋ ? ಸಾಕಾಗುವಷ್ಟು ದೊಡ್ಡದಾಗಿದ್ದಿತೋ ?

(೪) ಕರಿಯ ಹಲಗೆಯ ಮೇಲಿನ ಕೆಲಸವನ್ನು ವಿದ್ಯಾರ್ಥಿಗಳು ಮಾಡಿದರೋ ? ಶಿಕ್ಷಕರು ಮಾಡಿದರೋ ? ಯಾವ ಪದ್ಧತಿಯು

ಯೋಗ್ಯವಾದದ್ದು ? ಶಿಕ್ಷಕರು ಕರಿಯ ಹಲಗೆಯ ಮೇಲೆ ಬರೆಯುತ್ತಿದ್ದಾಗ ವಿದ್ಯಾರ್ಥಿಗಳು ಯೋಗ್ಯ ಕೆಲಸದಲ್ಲಿ ತೊಡಗಿದ್ದರೋ ?

(ಗ) ಪ್ರಶ್ನೆ—

(೧) ಪ್ರಶ್ನೆಗಳು ಸ್ಪಷ್ಟವಾಗಿದ್ದವೋ ? ಸಮರ್ಪಕವಾಗಿದ್ದವೋ ? ಸಿಶ್ಚಿತವಾಗಿದ್ದವೋ ?

(೨) ಪ್ರಶ್ನೆಗಳು ವಿದ್ಯಾರ್ಥಿಗಳನ್ನು ವಿಚಾರಕ್ಕೆ ಹಚ್ಚುವಂಥವಿದ್ದವೋ ? ಹೆಚ್ಚು ಸೂಚನಾತ್ಮಕವಾಗಿದ್ದವೋ ? ಶಿಕ್ಷಕರು ಅನವಶ್ಯಕವಾಗಿ ಅವನ್ನು ತಿರುತಿರುಗಿ ಅನ್ನುತ್ತಿದ್ದರೋ ?

(೩) ಪ್ರಶ್ನಗಳು ಬಹುಶಃ ಒಂದೇ ಶಬ್ದದಿಂದ ಉತ್ತರಕೊಡುವಂಥವಿದ್ದವೋ ? ಹೌದು ಅಥವಾ ಇಲ್ಲ ಎಂಬ ಉತ್ತರಬರುವಂಥವಿದ್ದವೋ ?

(೪) ಪ್ರಶ್ನಗಳು ಪರಸ್ಪರ ಸಂಬಂಧವುಳ್ಳವಿದ್ದವೋ ?

(೫) ಎಲ್ಲ ವಿದ್ಯಾರ್ಥಿಗಳಿಗೂ ಸರಿಯಾಗಿ ಸರತಿಬರುವಂತೆ ಪ್ರಶ್ನಗಳನ್ನು ಕೇಳುತ್ತಿದ್ದರೋ ?

(೬) ಉತ್ತರಗಳನ್ನು ಸರಿಯಾಗಿ ಕೇಳಿಕೊಳ್ಳುತ್ತಿದ್ದರೋ ? ಅವುಗಳ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳುತ್ತಿದ್ದರೋ ?

(೭) ವಿದ್ಯಾರ್ಥಿಗಳೇನಾದರೂ ಪ್ರತಿಪ್ರಶ್ನೆ ಮಾಡಿದರೋ ?

(ಹ) ಶಿಕ್ಷಕರು—

(೧) ಶಿಕ್ಷಕರ ನಡತೆಯು ಸಹಾನುಭೂತಿಯುಳ್ಳದ್ದೂ ಆನಂದವೃತ್ತಿಯದೂ ಇತ್ತೋ ? ಅವರು ತಮ್ಮ ವರ್ಗವನ್ನು ಆನಂದವೃತ್ತಿಯಲ್ಲಿ ಇಟ್ಟಿದ್ದರೋ ?

(೨) ಶಿಕ್ಷಕರು ತಮ್ಮ ವರ್ಗವನ್ನು ಅಂಕಿತದಲ್ಲಿಟ್ಟುಕೊಂಡಿದ್ದರೋ ? ವಿದ್ಯಾರ್ಥಿಗಳ ಆಲಸ್ಯವನ್ನು ದೂರಮಾಡಿದರೋ ?

(೩) ಶಿಕ್ಷಕರು ಚಟುವಟಿಕೆಯುಳ್ಳವರೂ ಎಚ್ಚರುಳ್ಳವರೂ ಇದ್ದರೋ ?

(೪) ಶಿಕ್ಷಕರ ಭಾಷೆಯು ಉಚ್ಚಾರದಲ್ಲಿಯೂ ವ್ಯಾಕರಣ ವಿಷಯದಲ್ಲಿಯೂ ಶುದ್ಧವಾಗಿತ್ತೋ ?

(೫) ಶಿಕ್ಷಕರ ಧ್ವನಿಯು ಸ್ಪಷ್ಟವಾಗಿತ್ತೋ ? ಒದರಿಮಾತಾಡುತ್ತಿದ್ದರೋ ? ಗುಣುಗುಣು ಮಾತಾಡುತ್ತಿದ್ದರೋ ? ಧ್ವನಿಯು ಕೋಮಲವಾದದ್ದೂ ಇಂಪಾದದ್ದೂ ಇದ್ದಿತೋ ?

(೬) ಶಿಕ್ಷಕರ ಹಾವಭಾವ ಉಡುಗೆತೊಡುಗೆಗಳು ಸ್ವಾಭಾವಿಕವೂ ದರ್ಜೆಗೆ ಒಪ್ಪುವಂಥವೂ ಆಗಿದ್ದವೋ ?

(ಜ) ಈ ಕೆಳಗೆ ಹೇಳುವ ಕ್ರಮದಲ್ಲಿ ಪಾಠಕ್ಕೆ ಎಷ್ಟು ಗುಣಗಳನ್ನು ಕೊಡಬಹುದು ?

ಅ + ಉತ್ತಮೋತ್ತಮ.	ಬ + ನೆಟ್ಟಗೆ.	ಕ + ಕನಿಷ್ಠ
ಅ ಅತ್ಯುತ್ತಮ.	ಬ ಮಧ್ಯಮ.	ಕ ಕಾಡು
ಅ – ಉತ್ತಮ.	ಬ – ಸಾಧಾರಣ.	ಕ – ತೀರ ಕಾಡು

ಬ = ಒಟ್ಟು ಗುಣಗಳ ಅರ್ಧವೆಂದು ತಿಳಿಯಬಹುದು.

ಭೂಗೋಲದ ಪಾಠಗಳು

ಇಂದ್ರಿಯ ಪಾಟವ, ಮನೋವಿಕಾಸ, ವ್ಯವಹಾರಚತುರರಾದ ಸತ್ಪ್ರಜಾ ನಿರ್ಮಾಣ, ಇವೇ ಶಿಕ್ಷಣದ ಉತ್ತಮೋತ್ತಮ ಧ್ಯೇಯಗಳು. ಈ ಧ್ಯೇಯಗಳನ್ನು ಮುಂದಿಟ್ಟುಕೊಂಡೇ ಸಾಲೆಗಳಲ್ಲಿ ಬಾಲಕರ ಪಾಠಗಳು ಸಾಗಬೇಕು. ಶಿಕ್ಷಕರು ಈ ತಮ್ಮ ಧ್ಯೇಯಸಾಧನೆಯ ಕಾರ್ಯದಲ್ಲಿ ತೊಡಗಿರುವಾಗ ಅವರಿಗೆ ಒದಗುವ ತೊಡಕುಗಳು ಅನೇಕವಾಗಿದ್ದರೂ ಆಯಾ ವಿಷಯಗಳ ಜ್ಞಾನ, ಆ ಜ್ಞಾನವನ್ನು ಅನುಕೂಲವಾದ ಕ್ರಮದಲ್ಲಿ ಅಳವಡಿಸಿದ ಗ್ರಂಥಗಳು, ಇವು ಪ್ರಾಮುಖ್ಯವಾದವು. ಕನ್ನಡ ಶಿಕ್ಷಕರಿಗಿರುವ ಈ ತೊಂದರೆಯ ತೊಡಕನ್ನು ಬಿಡಿಸುವದು ಸುಲಭವಲ್ಲ ದಾದರೂ ಆ ಮಾರ್ಗದಲ್ಲಿ ಪ್ರಯತ್ನಿಸುವದು ನಮ್ಮ ಕರ್ತವ್ಯವಾಗಿದೆ. ಭೂಗೋ

ಲವು ಬಲು ನೀರಸವಾದ ವಿಷಯ. ಈಗಿರುವ ಭೂಗೋಲದ ಪುಸ್ತಕಗಳಲ್ಲಿ ವರ್ಣಿತವಾಗಿರುವ ವಿಷಯಗಳೂ ಅವುಗಳ ಯೋಜನೆಯೂ ಚಿಕ್ಕ ಬಾಲಕರ ಮನಸ್ಸನ್ನು ಆಕರ್ಷಿಸಲಾರವು; ಅಲ್ಲದೆ ಮೇಲೆ ಹೇಳಿದ ಶಿಕ್ಷಣದ ಧ್ಯೇಯಗಳನ್ನು ಅನುಸರಿಸಿ ಪಾಠಮಾಗಿಸಲು ಅನುಕೂಲವಾದ ಪದ್ಧತಿಯಲ್ಲಿಯೂ ಆ ವಿಷಯಗಳ ಯೋಜನೆಯಾಗಿರುವದಿಲ್ಲ. ಇನ್ನುಮುಂದೆ ಇಲ್ಲಿ ಹೇಳುವ ಕೆಲವು ಪಾಠಗಳನ್ನು ಓದಿದ ವಾಚಕರು ಈ ನಮ್ಮ ಗುರಿಯನ್ನು ಗುರುತಿಸಿ ಪ್ರತಿ ದಿನದ ತಮ್ಮ ಕಾರ್ಯಕ್ಕೆ ಅದರಿಂದ ತಕ್ಕ ನೆರವನ್ನು ಹೊಂದುವರೆಂದು ನಂಬಲಾಗಿದೆ.

ಕಲ್ಲೆಣ್ಣೆಯ ಕತೆ

''ಅತಿಪರಿಚಯವು ಅನಾದರಕ್ಕೆ ಕಾರಣ''ವೆಂದು ಹೇಳುವದುಂಟು. ನಾವು ದಿನಾಗಲು ನೋಡುವ, ಉಪಯೋಗಿಸುವ, ಅವುಗಳಿಂದ ಸುಖದುಃಖಗಳನ್ನು ಹೊಂದುತ್ತಿರುವ, ಅನೇಕ ಸಂಗತಿಗಳ ಮೂಲಗಳು ನಮಗೆ ತಿಳಿದಿರುವದಿಲ್ಲ; ಹಾಗೆ ತಿಳಿದುಕೊಳ್ಳಲು ನಾವು ಪ್ರಯತ್ನಪಡುತ್ತಿರುವದೂ ಇಲ್ಲ. ೫೦ ವರ್ಷಗಳ ಹಿಂದೆ ನಾವು ನಮ್ಮ ಮನೆಗಳಲ್ಲಿ ಪ್ರತಿನಿತ್ಯ ಉಪಯೋಗಿಸುತ್ತಿದ್ದ ಅನೇಕ ವಸ್ತುಗಳು ಈಗ ಅದೃಶ್ಯವಾಗಿ ಅವುಗಳ ಸ್ಥಳವನ್ನು ಬೇರೆ ಬಗೆಯ ಒಡವೆಗಳು ಆಕ್ರಮಿಸಿರುವವು. ಇದನ್ನು ನಾವು ತಿಳಿದೂ ತಿಳಿಯದಂತೆ ಇದ್ದೇವೆ. ನಮ್ಮ ಮನೆಗಳಲ್ಲಿ ಬಹುಕಾಲದಿಂದಲೂ ಒಪ್ಪುತ್ತಿದ್ದ ಚಿಕ್ಕ ದೀವಿಗೆಗಳು, ಕಂಚು ಹಿತ್ತಾಳಿಗಳ ಸಮೆಗಳು, ದೀಪಗಳು ಇವೆಲ್ಲ ಮಸುಕಾಗಿ ಮಾಯವಾಗಿ ಅವುಗಳ ಸ್ಥಳದಲ್ಲಿ ಕಂದೀಲು, ಲ್ಯಾಂಪು, ಗ್ಯಾಸದ ದೀಪಗಳು ಬೆಳಗತೊಡಗಿರುವದು ನಮಗೆ ಇಂದು ಆಶ್ಚರ್ಯವನ್ನುಂಟುಮಾಡದೆ ಇದ್ದರೂ ೫೦ ವರ್ಷಗಳ ಹಿಂದಿನ ಜನರಿಗೆ ಇವು ಮಾಟದ ಒಡವೆಗಳೆಂದು ತೋರುವಂತಿವೆ. ಈ ಹೊಸ ಮಾದರಿಯ ದೀಪಗಳಿಗಾಗಿ ಉಪಯೋಗಿಸುವ ಹಾಗು ಮೋಟಾರು ವಿಮಾನಗಳನ್ನು ನಡಿಸಲಿಕ್ಕೆ ಬೇಕಾಗುವ ಮುಖ್ಯ ಉರುವಲಾದ ಕಲ್ಲೆಣ್ಣೆಯ ಕತೆಯನ್ನು ಕುರಿತು ನಾಲ್ಕು ಮಾತುಗಳನ್ನು ಇಲ್ಲಿ ಹೇಳುವೆವು.

ಕಲ್ಲೆಣ್ಣೆಯು ಭೂಗರ್ಭದಲ್ಲಿ ಹುಗಿದಿರುವ ಒಂದು ಬಗೆಯ ಶಿಲೆಯ ಥರಗಳಲ್ಲಿ ಅಡಗಿರುವದು. ಆ ಕಲ್ಲುಗಳಲ್ಲಿ ಈ ಎಣ್ಣೆಯು ಹೇಗೆ ಉತ್ಪನ್ನವಾಗುವದೆಂಬದು ಇನ್ನೂ ಶಾಸ್ತ್ರಜ್ಞರ ಶೋಧನೆಗೆ ಒಳಗಾದ ವಿಷಯವಾಗಿದೆ. ಇಂದಿನ

ವರೆಗೆ ಆಗಿರುವ ಶೋಧಗಳಿಂದ ಇದು ಕಲ್ಲಿದ್ದಲಿಯಂತೆಯೇ- ಭೂಗರ್ಭದಲ್ಲಿ ಹುಗಿದುಹೋದ ಪ್ರಾಣಿ ವನಸ್ಪತಿಗಳ ಶರೀರಗಳ ಅವಶೇಷಗಳಲ್ಲಿ ರಾಸಾಯನಿಕ ವ್ಯಾಪಾರಗಳು ನಡೆದು—ಉತ್ಪನ್ನವಾಗುವದೆಂದು ತರ್ಕಿಸಲಾಗಿದೆ. ನಿಶ್ಚಿತವಾದ ನಿರ್ಣಯವು ಇನ್ನುಮುಂದೆಯೇ ಆಗಬೇಕಾಗಿರುವದು. ಅಮೇರಿಕದಲ್ಲಿ ಇದಕ್ಕೆ ಕಲ್ಲಿದ್ದಲಿಯ ಎಣ್ಣೆ (Coal-oil) ಎಂದೇ ಹೇಳುವರು.

ನಾವು ದೀಪಗಳಿಗಾಗಿ ಉಪಯೋಗಿಸುವ ಕಲ್ಲೆಣ್ಣೆಯು ಮೂಲದಲ್ಲಿ ಇಷ್ಟು ಸ್ವಚ್ಛವಾಗಿರುವದಿಲ್ಲವೆಂಬದನ್ನು ಹೇಳಬೇಕಾಗಿಲ್ಲ. ಅದು ಕಣಿಗಳಲ್ಲಿ ದೊರೆದಾಗ ರಾಡಿರಾಡಿಯಾಗಿ ದುರ್ವಾಸನೆಯುಳ್ಳ ಹೊಲಸು ಪದಾರ್ಥವಾಗಿರುವದು. ಅಂಥ ಹೊಲಸು ಎಣ್ಣೆಯನ್ನು ಬಗೆಬಗೆಯಿಂದ ಶುದ್ಧಮಾಡಿ ನಾವು ದೀಪಕ್ಕಾಗಿ ಉಪಯೋಗಿಸುವ ನಿರ್ಮಲವಾದ ಎಣ್ಣೆಯನ್ನು ತಯಾರಿಸುವರು. ಮೋಟಾರುಗಳನ್ನೂ ವಿಮಾನಗಳನ್ನೂ ನಡೆಯಿಸುವ ಎಂಜಿನುಗಳಿಗೆ ಉರುವಲದಂತೆ ಉಪಯೋಗಿಸುವ ಹಗುರಾದ ಪೆಟ್ರೋಲ ಎಂಬ ತಿಳಿ ಎಣ್ಣೆಯೂ ಯಂತ್ರಗಳ ಸೂಕ್ಷ್ಮಭಾಗಗಳಿಗೆ ಹೆರೆಯುವ ಎಣ್ಣೆಯಂತೆ ಉಪಯೋಗಿಸುವ ಭಾರವಾದ ದಟ್ಟ ಎಣ್ಣೆಯೂ ಇವರಿಂದಲೇ ಹುಟ್ಟುವವು. ಇದರಲ್ಲಿ ಸೇರಿರುವ ಒಂದುಬಗೆಯ ಖನಿಜ ಪದಾರ್ಥದಿಂದ ಮೇಣಬತ್ತಿಯನ್ನು ಮಾಡುವರು. ಈಗಿನ ಹೊಸಯುಗದಲ್ಲಿ ಮೋಟಾರು ವಿಮಾನಗಳಲ್ಲಿರುವ (Oil Engine) ಎಣ್ಣೆಯ ಎಂಜಿನುಗಳ ಮಹತ್ವವೆಷ್ಟೆಂಬದನ್ನು ನಾವು ಹೇಳುವ ಕಾರಣವಿಲ್ಲ. ಅವುಗಳಿಗೆ ಪೆಟ್ರೋಲು ಮುಖ್ಯ ಉರುವಲಾಗಿರುವದರಿಂದ ಆಧುನಿಕ ಕಾಲವು ಕಲ್ಲೆಣ್ಣೆಯ ಯುಗವೆಂದು ಹೇಳಲ್ಪಡುತ್ತಿರುವದು. ಮತ್ತು ಕಲ್ಲೆಣ್ಣೆಯು ವಿಪುಲವಾಗಿ ದೊರೆಯುವ ದೇಶವೇ ಭವಿಷ್ಯದಲ್ಲಿ ಉದ್ಯೋಗ ವ್ಯವಸಾಯಗಳಲ್ಲಿ ಮುಂದುವರಿದ ಸುಧಾರಣೆಹೊಂದಿದ ಪ್ರಬಲ ರಾಷ್ಟ್ರವೆಂದೆನಿಸಿಕೊಳ್ಳುವದೆಂದು ಶಾಸ್ತ್ರಜ್ಞರು ತರ್ಕಿಸಿ ಮಾತಾಡುತ್ತಿದ್ದಾರೆ.

ಆರಂಭದ ಸ್ಥಿತಿಯಲ್ಲಿ ಕಣಿಗಳಿಂದ ತೆಗೆದ ಕಲ್ಲೆಣ್ಣೆಯಿಂದ ಹೊರಡುವ ಪದಾರ್ಥಗಳಲ್ಲಿ ದೀಪಕ್ಕಾಗಿ ಉಪಯೋಗಿಸುವ ಎಣ್ಣೆಗೇ ಪ್ರಾಧಾನ್ಯವಿದ್ದಿತು ; ಅದರಿಂದ ಹೊರಡುವ ಮಿಕ್ಕ ಪದಾರ್ಥಗಳಿಗೆ ಬೆಲೆಯೇ ಇರಲಿಲ್ಲ, ಆದರೆ ಈಚೆಗೆ ಅದರಿಂದ ಹುಟ್ಟುವ ಮಿಕ್ಕ ಉಪವಸ್ತುಗಳಿಗೇ ಹೆಚ್ಚು ಪ್ರಾಮುಖ್ಯತೆಯುಂಟಾಗಿರುವದು. ೧೮೪೭ದಲ್ಲಿ "ಜೇಮ್ಸ ಯಂಗ್" ಎಂಬವನು ಕಲ್ಲೆಣ್ಣೆಯನ್ನು ತೆಗೆಯುವದನ್ನು ಕಂಡುಹಿಡಿದನು. ಆದರೆ ೧೮೬೦ ನೆಯ ಇಸ್ವಿಯ ವರೆಗೂ ಬೋರಿಂಗ ಬಾವಿಗಳನ್ನು

ತೋಡಿ ಎಣ್ಣೆಯನ್ನು ತೆಗೆಯುವ ಕ್ರಮವು ಪ್ರಾರಂಭವಾಗಲಿಲ್ಲ. ಆ ವರ್ಷ ಅಮೇರಿಕೆಯ ಯುನಾಯಿಟೆಡ್ ಸ್ಟೇಟ್ಸದಲ್ಲಿದ್ದ 'ಪೆನ್ಸಿಲ್‌ವ್ಯಾನಿಯಾ' ಎಂಬಲ್ಲಿ ಬೋರಿಂಗ ಬಾವಿಗಳನ್ನು ತೋಡಿ ದೊಡ್ಡ ಪ್ರಮಾಣದಿಂದ ಎಣ್ಣೆಯನ್ನು ತೆಗೆಯುವ ಕೆಲಸವು ಪ್ರಾರಂಭವಾಯಿತು. ಮೊತ್ತಮೊದಲು ಎಣ್ಣೆಯ ಬಾವಿಗಳನ್ನು ಅಗೆಯುವ ಕೆಲಸವು ತೀರ ಆಕಸ್ಮಿಕವಾಗಿ ಪ್ರಾರಂಭವಾಯಿತು. ನೀರಿಗಾಗಿ ಒಂದು ಸಾದಾ ಬಾವಿಯನ್ನು ತೋಡುವ ಕೆಲಸವು ನಡೆದಾಗ ಅಕಸ್ಮಾತ್ತಾಗಿ ಅದರಲ್ಲಿ ಕಲ್ಲೆಣ್ಣೆಯ ಶಲೆಯು ಹೊರಟು ತಗ್ಗು ತುಂಬಿ ಹರಿಯತೊಡಗಿತು. ಅದನ್ನು ಕಂಡು ಆ ಭಾಗದಲ್ಲಿ ಅನೇಕ ಬಾವಿಗಳನ್ನು ತೋಡಿ ಎಣ್ಣೆಯನ್ನು ತೆಗೆಯುವ ಕಾರಖಾನೆಯೇ ಪ್ರಾರಂಭವಾಯಿತು. ಅಂದಿನಿಂದ ಈಚೆಗೆ ಉತ್ತರ ಅಮೇರಿಕೆಯ ಅನೇಕ ಪ್ರದೇಶಗಳಲ್ಲಿಯೂ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿಯೂ ಕಲ್ಲೆಣ್ಣೆಯ ಕಣಿಗಳನ್ನು ಕಂಡುಹಿಡಿದು ಎಣ್ಣೆಯ ಕಾರಖಾನೆಗಳು ಪ್ರಾರಂಭವಾಗಿವೆ.

ಹುಬ್ಬಳ್ಳಿ ಧಾರವಾಡ ಮುಂತಾದ ಊರುಗಳಲ್ಲಿ ಬೋರಿಂಗ ಬಾವಿಗಳಿರುವದನ್ನೂ ಅವನ್ನು ತೋಡುವ ಕ್ರಮವನ್ನೂ ನೀವು ನೋಡಿರಬಹುದು. ಅದೇ ಕ್ರಮದಲ್ಲಿ ಕಲ್ಲೆಣ್ಣೆಯ ಬಾವಿಗಳನ್ನು ತೋಡುವರು. ಆದರೆ ಕಲ್ಲೆಣ್ಣೆಗಾಗಿ ತೋಡುವ ಬಾವಿಗಳು ಅತಿಶಯ ಆಳವಾಗಿರುವವು. ಗ್ಯಾಲಿಶಿಯಾದಲ್ಲಿಯ ಬಾವಿಗಳು ೪೦೦೦ ಫೂಟಿಗಿಂತ ಹೆಚ್ಚು ಆಳವಾಗಿರುವವು.

ಬೋರಿಂಗ ಬಾವಿಗಳನ್ನು ತೋಡುವ ಕೆಲಸವು ಸಾವಕಾಶವಾಗಿ ಸಾಗುವದು. ಶಿಲೆಗಳ ಥರಗಳು ಮಿದುವಾಗಿರುವಾಗ ಕೆಲಸವು ತೀವ್ರವಾಗಿಯೂ ಸುಲಭವಾಗಿಯೂ ನಡೆಯುವದು. ಆದರೆ ಬಿರುಸಾದ ಶಿಲೆಯು ಅಡ್ಡ ಬಂದರೆ ಆ ಕೆಲಸವು ಕಠಿಣವಾಗುವದಲ್ಲದೆ ಬಹಳ ಸಾವಕಾಶವಾಗಿ ಸಾಗುವದು. ಬೋರಿಂಗ ಬಾವಿಯ ಕೆಲಸವು ನಡೆವಲ್ಲಿ ನೆಲದ ಮೇಲೆ ೬೦-೮೦ ಫೂಟು ಎತ್ತರವಾದ ಗೋಪುರಾಕಾರದ ಕಟ್ಟೋಣವು ಕಾಣಿಸುವದು. ಕಲ್ಲೆಣ್ಣೆಯು ದೊರೆಯುವ ಸ್ಥಳದಲ್ಲಿ ಇಂಥ ಗೋಪುರಗಳು ಅಸಂಖ್ಯವಾಗಿದ್ದು ಅದೊಂದು ಗೋಪುರಗಳ ಅರಣ್ಯವೋ ಎಂಬಂತೆ ಕಾಣಿಸತೊಡಗುವದು. ಈ ಗೋಪುರಗಳು ತಳದಲ್ಲಿ ೨೦ ಫೂಟು ಚೌರಸವಾಗಿದ್ದು ಮೇಲ್ಗಡೆಗೆ ಸುಮಾರು ೪ ಫೂಟು ಚಚ್ಚೌಕಾಗಿರುವವು. ಈ ಬಾವಿಗಳಲ್ಲಿಯೂ ಬೋರಿಂಗ ಬಾವಿಗಳಂತೆಯೇ ಉಕ್ಕಿನ ಪೊಳ್ಳುಕೊಳವೆಗಳನ್ನು ನೆಲದೊಳಗೆ ನೇರಿಸುತ್ತ ಮುಂದೆ ಸಾಗುವರು. ಎಣ್ಣೆಯ ಶಲೆಯು ಹತ್ತಿದೆಂದರೆ ಒಮ್ಮೆಲೆ ಬಾವಿಯು

ತುಂಬಿಬಂದು ಅತಿಭರದಿಂದ ಮೇಲಕ್ಕೆ ಪುಟಿಯಹತ್ತುವದು. ಈ ಬುಗ್ಗೆಗಳು ಅತಿ ಪ್ರಬಲವಾದ ವೇಗದಿಂದ ೨೦೦-೩೦೦ ಫೂಟು ಎತ್ತರವಾಗಿ ಪುಟಿದು ಆಕಾಶದಲ್ಲಿ ಎಣ್ಣೆಯ ತುಷಾರಗಳನ್ನು ಪಸರಿಸಿ ಗಾಳಿಯಿಂದ ದೂರದವರೆಗೆ ಹಬ್ಬುವವು. ಒಮ್ಮೊಮ್ಮೆ ಈ ತುಂತುರಗಳ ಮೂಲಕ ಎಣ್ಣೆಯ ಬಾವಿಗೇ ಬೆಂಕಿ ಹತ್ತುವದೂ ಉಂಟು. ಇಂಥ ಅಗ್ನಿ ಕುಂಡವು ಬಹು ಭಯಂಕರವಾಗಿ ಉರಿಯಹತ್ತಿ ಹೊಗೆ ದುರ್ವಾಸನೆಗಳಿಂದ ಸುತ್ತಲಿನ ಪ್ರದೇಶವನ್ನೆಲ್ಲ ವ್ಯಾಪಿಸಿ ಅರ್ಥಹಾನಿ ಪ್ರಾಣಹಾನಿಗಳಿಗೆ ಕಾರಣವಾಗುವದು. ಬೋರಿಂಗ ಬಾವಿಗಳನ್ನು ತೋಡುವಾಗ ಬುಗ್ಗೆಗಳು ಪುಟಿಯಹತ್ತಿ ಅನಾಹೂತ ಅಪಘಾತಗಳು ಸಂಭವಿಸದಂತೆ ತುಂಬ ಎಚ್ಚರಿಕೆಯನ್ನಿಟ್ಟುಕೊಂಡೇ ಕೆಲಸಮಾಡುತ್ತಿರುವರು. ಕಲ್ಲೆಣ್ಣೆಯ ದೊಡ್ಡ ದೊಡ್ಡ ಕಣಿಗಳ ಪ್ರದೇಶದಲ್ಲಿ ಬೋರಿಂಗ ಬಾವಿಗಳಿಂದ ತೆಗೆದ ಎಣ್ಣೆಗಳನ್ನು ಸಂಗ್ರಹಿಸಿ ಅನೇಕ ಸಣ್ಣ ದೊಡ್ಡ ಸರೋವರಗಳನ್ನೇ ರಚಿಸಿರುವರು. ಅವುಗಳಲ್ಲಿ ಸಣ್ಣ ದೊಡ್ಡ ದೋಣಿಗಳಿಂದ ಜನರು ಅಡ್ಡಾಡುತ್ತಿರುವರು. ಇದರಿಂದ ಎಣ್ಣೆಯು ಎಷ್ಟು ದೊಡ್ಡ ಪ್ರಮಾಣದಿಂದ ತೆಗೆಯಲ್ಪಡುವದೆಂಬದನ್ನು ನೀವು ಕಲ್ಪಿಸಬಹುದು.

ಇನ್ನು, ಕಲ್ಲೆಣ್ಣೆಯ ಬುಗ್ಗೆಗಳು ಹೇಗೆ ಉಂಟಾಗುವವು? ಬೋರಿಂಗ ಬಾವಿಗಳಲ್ಲಿ ಹಿಂದೆ ಹೇಳಿದಂತೆ ಎಣ್ಣೆಯು ೨೦೦-೩೦೦ ಫೂಟು ಮೇಲಕ್ಕೆ ಪುಟಿಯುವದಕ್ಕೆ ಶಕ್ತಿಯು ಎಲ್ಲಿಂದ ದೊರೆಯುವದು? ಎಂಬದೊಂದುಪ್ರಶ್ನೆಯು ಇಲ್ಲಿ ಉತ್ಪನ್ನವಾಗುವದು. ಭೂಗರ್ಭದಲ್ಲಿ ಸಂಗ್ರಹವಾದ ಕಲ್ಲೆಣ್ಣೆಯೂ ಅದಕ್ಕೆ ಸಂಬಂಧಿಸಿದ ಅನೇಕ ಗ್ಯಾಸಗಳೂ ಬಿರುಸಾದ ಶಿಲೆಯ ವಿಶಾಲವಾದ ಥರಗಳ ನಡುವೆ ಸಿಕ್ಕಿಕೊಂಡು ಸುತ್ತಲಿನ ಭಾರದ ಮೂಲಕ ಒತ್ತಿ ಹಿಸುಕಲ್ಪಡುತ್ತಿರುವವು. ಬೋರಿಂಗ ಬಾವಿಗಳು ಮೇಲಿನ ಶಿಲೆಯ ಥರಗಳನ್ನು ಒಡೆದು ಎಣ್ಣೆಯ ಶಲೆಯನ್ನು ಮುಟ್ಟಿದೊಡನೆ ಅಕಸ್ಮಾತ್ತಾಗಿ ಅದಕ್ಕೆ ಚಿಕ್ಕದೊಂದು ಮಾರ್ಗವು ದೊರೆಯುವದರಿಂದ ಸುತ್ತಲಿನ ಭಾರದ ಮೂಲಕವಾದ ಒತ್ತುವಿಕೆಯೇ ಪ್ರಬಲಶಕ್ತಿಯಾಗಿ ಎಣ್ಣೆಯನ್ನು ಮೇಲಕ್ಕೆ ಪುಟಿಸುವದು. ಎಣ್ಣೆಯ ಶಲೆಗಳಲ್ಲಿಯ ಗ್ಯಾಸಗಳನ್ನು ಯಂತ್ರಗಳಲ್ಲಿ ಶಕ್ತಿಯನ್ನು ಹುಟ್ಟಿಸುವ ಉರುವಲದಂತೆಯೂ ದೀಪಕ್ಕಾಗಿ ಉಪಯೋಗಿಸುವ ಗ್ಯಾಸದಂತೆಯೂ ಉಪಯೋಗಿಸಿಕೊಳ್ಳುವರು. ಉತ್ತರ ಅಮೇರಿಕೆಯಲ್ಲಿಯೂ ಮಿಕ್ಕ ಕಡೆಯ ಕೆಲವು ಕಲ್ಲೆಣ್ಣೆಯ ಕಣಿಗಳಲ್ಲಿಯೂ ಇಂಥ ಗ್ಯಾಸವನ್ನು ದೊಡ್ಡ ದೊಡ್ಡ ಕೊಳವೆಗಳಲ್ಲಿ ಹಾಯಿಸಿ ದಟ್ಟಾದ ಜನವಸತಿಯಿರುವ ಇಲ್ಲವೆ ಉದ್ಯೋಗ ವ್ಯವಸಾಯಗಳ

ಕಾರಖಾನೆಗಳಿರುವ ದೂರದೂರದ ಸ್ಥಳಗಳಿಗೆ ಒಯ್ದು ಮೇಲೆ ಹೇಳಿದ ಕೆಲಸಗಳಿಗಾಗಿ ಉಪಯೋಗಿಸಿಕೊಳ್ಳುತ್ತಿರುವರು.

ಬೋರಿಂಗ ಬಾವಿಗಳಿಂದ ಹೊರಗೆ ತೆಗೆದ ಎಣ್ಣೆಯು ಅನೇಕ ಪದಾರ್ಥಗಳಿಂದ ಕೂಡಿದ್ದು ಅದನ್ನು ನಾನಾರೀತಿಗಳಿಂದ ಸ್ವಚ್ಛಮಾಡಿದ ತರುವಾಯವೇ ದೀಪಕ್ಕೆ ಉಪಯೋಗಿಸುವ ಎಣ್ಣೆಯಾಗುವದು. ಈ ಮಿಶ್ರ ಎಣ್ಣೆಯಿಂದ ಅನೇಕ ಪದಾರ್ಥಗಳು ಹುಟ್ಟುವವು. ತೀರ ಹಗುರಾದ ಎಣ್ಣೆಯೇ ದೀಪಕ್ಕಾಗಿ ಉಪಯೋಗಿಸುವ ಕಲ್ಲೆಣ್ಣೆಯು. ಅದರೊಳಗಿನ ಜಡವಾದ ಭಾಗದಿಂದ ಎಂಜಿನುಗಳಿಗೆ ಉರುವಲದಂತೆಯೂ ಹೆರೆಯುವ ಎಣ್ಣೆಯಂತೆಯೂ ಉಪಯೋಗಿಸುವ ದಟ್ಟ ಎಣ್ಣೆಯನ್ನು ತಯಾರಿಸುವರು. ಈ ಎಣ್ಣೆಯಿಂದ ತೆಗೆಯುವ ಪದಾರ್ಥಗಳಲ್ಲಿ ಪೆಟ್ರೋಲ ಅಥವಾ ಗ್ಯಾಸೋಲಿನ ಎಂಬ ತೀರ ತೆಳ್ಳಗಿನ ತೀವ್ರ ಜ್ವಾಲಾಗ್ರಹಿಯಾದ ಎಣ್ಣೆಯು ಅಥವಾ ಸ್ಪಿರಿಟು ಅತಿ ಮಹತ್ವದ್ದಾಗಿರುವದು. ಮೋಟಾರುಗಳಲ್ಲಿಯೂ ವಿಮಾನಗಳಲ್ಲಿಯೂ ಉಪಯೋಗಿಸುವ ಒಯಿಲ್ ಎಂಜಿನುಗಳಿಗೆ ಇದು ಅತ್ಯವಶ್ಯವಾಗಿದೆ. ಕಲ್ಲೆಣ್ಣೆಯಿಂದ ಮೇಣಬತ್ತಿಗೆ ಉಪಯೋಗಿಸುವ ಮೇಣ, ವ್ಹೆಸಲೀನು, ಬೆಂಜಾಯಿನು, ಇವುಗಳನ್ನು ತೆಗೆಯುವರು. ಕಣಿಗಳಿಂದ ತೆಗೆದ ಎಣ್ಣೆಯಿಂದ ಈ ಪದಾರ್ಥಗಳನ್ನೆಲ್ಲ ಹೇಗೆ ಬೇರ್ಪಡಿಸಿಕೊಳ್ಳುವರು ? ಇವೇ ಮುಂತಾದ ಸಂಗತಿಗಳನ್ನು ವಿವರಿಸಲಿಕ್ಕೆ ಇಲ್ಲಿ ಅವಕಾಶವಿಲ್ಲ; ಇದು ತಕ್ಕ ಸ್ಥಳವೂ ಅಲ್ಲ. ನಾವು ಹೇಳ ಹೊರಟಿದ್ದು ಕಲ್ಲೆಣ್ಣೆಯ ಕತೆಯನ್ನು; ಅಲ್ಲದೆ ಈ ವಿಷಯಗಳನ್ನು ತಿಳಿದುಕೊಳ್ಳಲಿಕ್ಕೆ ಹೆಚ್ಚಿನ ರಸಾಯನಶಾಸ್ತ್ರದ ಜ್ಞಾನವೂ ಅತ್ಯವಶ್ಯವಾಗಿದೆ. ಆದುದರಿಂದ ಕಲ್ಲೆಣ್ಣೆಯು ಕಣಿಗಳ ಬಾವಿಗಳಿಂದ ಹೊರಟು ನಮ್ಮ ಮನೆಗಳಲ್ಲಿಯ ದೀಪಗಳಿಗೆ ಬಂದು ಮುಟ್ಟುವ ವರೆಗಿನ ಅದರ ಪ್ರವಾಸವನ್ನು ವರ್ಣಿಸುವದಿಷ್ಟೇ ನಮ್ಮ ಇಂದಿನ ಕೆಲಸವೆಂದು ತಿಳಿದು ಮುಂದೆ ಸಾಗೋಣ.

ಉಗಿ ಬಂಡಿಯ ಸ್ಟೇಶನುಗಳಲ್ಲಿಯೂ ಬಂದರಗಳಲ್ಲಿಯೂ ನಾವು “ ಬರ್ಮಾ ಶೆಲ್ ಒಯಿಲ್ ಕಂಪನಿ ” ಮುಂತಾದ ಬರೆಹಗಳಿರುವ ದೊಡ್ಡ ದೊಡ್ಡ ಎಣ್ಣೆಯ ಉಗ್ರಾಣಗಳಿರುವದನ್ನೂ ಎತ್ತಿನ ಬಂಡಿಗಳ ಮೇಲೆ ಹೇರಿದ ದೊಡ್ಡ ದೊಡ್ಡ ಪೀಪಾಯಿಗಳ ಇಲ್ಲವೆ ಮೋಟಾರುಗಳ ಮೂಲಕ ಆ ಎಣ್ಣೆಯು ಊರೊಳಗೆ ಬರುತ್ತಿರುವದನ್ನೂ ನಮ್ಮಲ್ಲಿ ಬಹುಜನರು ನೋಡಿರುವರು. ಆದರೆ ಇದು ತೀರ ಅಲ್ಪ ಪ್ರಮಾಣದ ಹಾಗು ತೀರ ಸಾವಕಾಶವಾದ ಎಣ್ಣೆಯ ಪ್ರವಾಸವು. ಅಮೇರಿಕೆಯೊಳಗಿನ

ಎಣ್ಣೆಯ ಕಣಿಗಳ ವಿಶಾಲವಾದ ಪ್ರದೇಶದಲ್ಲಿ ದೊಡ್ಡ ಊರೊಳಗೆ ನೀರಿನ ನಳಗಳನ್ನು ಹಾಕುವಂತೆ ಬಹು ದೊಡ್ಡ ಪ್ರಮಾಣದ ನಳಗಳನ್ನು ಹಾಕಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಎಣ್ಣೆಯನ್ನು ಸಾಗಿಸುವರು. ಹಿಂದೆ ಹೇಳಿದ "ಪೆನ್ಸಿಲ್ವ್ಹಾನಿಯ"ದ ಕಣಿಗಳಿಂದ ಅಟ್ಲಾಂಟಿಕ್‌ಮಹಾಸಾಗರದ ದಂಡೆಯಮೇಲಿನ ನೂರಾರು ಮೈಲು ದೂರದಲ್ಲಿರುವ ಬಂದರಗಳವರೆಗೆ ಇಂಥ ನಳಗಳ ಮೂಲಕವಾಗಿಯೇ ಎಣ್ಣೆಯು ಸಾಗಿಸಲ್ಪಡುವದು. ಇದೊಂದೇ ಸ್ಥಳದ ನಳಗಳ ಪ್ರಮಾಣವು ತೀರ ಕಡಿಮೆಯೆಂದರೆ ೨೫೦೦೦ ಮೈಲುಗಳಾಗಬಹುದು. ಕಣಿಗಳ ಪ್ರದೇಶದಲ್ಲಿಯೂ ಬಂದರಗಳ ಮೇಲೆಯೂ ನಮ್ಮ ಕಲ್ಪನೆಗೆ ನಿಲುಕದಷ್ಟು ವಿಶಾಲವಾದ ಎಣ್ಣೆಯ ಉಗ್ರಾಣಗಳು ಯಾವಾಗಲೂ ತುಂಬಿ ತುಳುಕುತ್ತಿರುವವು.

ಜಲಮಾರ್ಗದಿಂದ ದೂರ ದೂರ ದೇಶಗಳಿಗೆ ಎಣ್ಣೆಯನ್ನು ಒಯ್ಯುವ ಹಡಗುಗಳು ಎಣ್ಣೆಯ ದೊಡ್ಡ ದೊಡ್ಡ ಉಗ್ರಾಣಗಳೆಂದೇ ಹೇಳಬೇಕಾಗುವದು. ಆ ಹಡಗಗಳಲ್ಲಿ ಹಡಗುನಡಿಸುವವರಿಗಾಗಿಯೂ ಯಂತ್ರಗಳಿಗಾಗಿಯೂ ತೀರ ಸ್ವಲ್ಪವೇ ಸ್ಥಳವಿದ್ದು ಮಿಕ್ಕದ್ದೆಲ್ಲ ಎಣ್ಣೆಯಿಂದ ತುಂಬಿರುವದು. ಇವುಗಳಿಗೆ 'ಟ್ಯಾಂಕರ್ಸ' ಎನ್ನುವರು. ಸಮುದ್ರದಲ್ಲಿಯ ಇಂಥ ಟ್ಯಾಂಕರುಗಳು ದಂಡೆಯಲ್ಲಿಯ ಎಣ್ಣೆಯ ಉಗ್ರಾಣಗಳಿಗೆ ಸಮೀಪವಾಗಿ ಬಂದು ನಿಂತ ಬಳಿಕ ದೊಡ್ಡ ದೊಡ್ಡ ನಳಗಳನ್ನು ಬಿಟ್ಟು ಪಂಪುಮಾಡಿ ಅದರಲ್ಲಿ ಎಣ್ಣೆಯನ್ನು ತುಂಬುವರು. ತರುವಾಯ ಅವು ಸಮುದ್ರದಲ್ಲಿ ಸಾಗಿ ಬೇರೆ ಬೇರೆ ಬಂದರಗಳಿಗೆ ಮುಟ್ಟಿದ ಬಳಿಕ ಒಳಗಿನ ನಳಗಳಿಂದ ಪಂಪುಮಾಡಿ ಎಣ್ಣೆಯನ್ನು ದಂಡೆಯಲ್ಲಿಯ ಉಗ್ರಾಣಗಳಲ್ಲಿ ಸುರಿಯುವರು. ಟ್ಯಾಂಕರುಗಳನ್ನು ನಡಿಸುವವರು ಸದಾ ಮೈತುಂಬ ಎಚ್ಚರಿಕೆಯಿಂದ ಇರಬೇಕಾಗುವದು. ಯಾಕಂದರೆ ಎಣ್ಣೆಯು ತೀವ್ರ ಜ್ವಾಲಾಗ್ರಾಹಿಯಾಗಿರುವದರಿಂದ ಹಡಗದ ಯಂತ್ರದ ಕೋಣೆಯಿಂದ ಇಲ್ಲವೆ ಬೇರೆ ಕಾರಣದಿಂದ ಬೆಂಕಿಯ ಒಂದು ಕಿಡಿಯು ಎಣ್ಣೆಯ ಉಗ್ರಾಣಕ್ಕೆ ಮುಟ್ಟಿದರೆ ಸಾಕು; ಒಂದೇ ಒಂದು ಕ್ಷಣದಲ್ಲಿ ಅಗ್ನಿಪ್ರಳಯವಾಗಿ ಹಡಗವೂ ಚಾಲಕರೂ ಮಾಯವಾಗಿ ಹೋಗಬಹುದು. ಇತ್ತೀಚೆಗೆ ಇಂಥ ಟ್ಯಾಂಕರುಗಳಲ್ಲಿ ಉಗಿಯ ಎಂಜಿನುಗಳ ಬದಲು ಎಣ್ಣೆಯ ಎಂಜಿನುಗಳನ್ನು ಇಟ್ಟು ಅವನ್ನು ನಡಿಸುವರು. ಇದರಿಂದ ಬೆಂಕಿಯ ಭಯವು ಕಡಿಮೆಯಾಗಿರುವದು. ಈ ರೀತಿಯಾಗಿ ಸಮುದ್ರದಂಡೆಯ ಬಂದರಗಳಲ್ಲಿಯ ಉಗ್ರಾಣಗಳಲ್ಲಿ ಸಂಗ್ರಹಿಸಿದ ಎಣ್ಣೆಯು ಉಗಿಬಂಡಿಗಳ ಮೂಲಕ ಒಳದೇಶಕ್ಕೆ

ಪ್ರಯಾಣಬೆಳಿಸಿ ಅಲ್ಲಲ್ಲಿಯ ಸಣ್ಣದೊಡ್ಡ ಸ್ಟೇಶನುಗಳಲ್ಲಿಯ ಚಿಕ್ಕದೊಡ್ಡ ಉಗ್ರಾಣಗಳಿಗೆ ಮುಟ್ಟುವದು. ಅಲ್ಲಿಂದ ಮುಂದೆ ಪಟ್ಟಣಗಳಿಗೂ ಹಳ್ಳಿಗಳಿಗೂ ಮೋಟಾರುಗಳಿಂದಲೂ ಡಬ್ಬಿಗಳಲ್ಲಿ ತುಂಬಿ ಚಕ್ಕಡಿಗಳಿಂದಲೂ ಸಾಗಿ ಮನೆಮನೆಗಳನ್ನು ಮುಟ್ಟುವದು.

ಆಧುನಿಕ ಕಾಲದಲ್ಲಿ ಕಲ್ಲೆಣ್ಣೆಯು ತುಂಬ ಮಹತ್ವದ ಪದಾರ್ಥವಾಗಿರುವದು. ಯುದ್ಧದ ಹಡಗುಗಳಲ್ಲಿಯೂ ವಿಮಾನಗಳಲ್ಲಿಯೂ ಉಪಯೋಗಿಸುವ ಎಂಜಿನುಗಳಿಗೆ ಪೆಟ್ರೋಲ ಎಣ್ಣೆಯು ಮುಖ್ಯ ಆಹಾರವಾಗಿದೆ. ಮೋಟಾರುಗಳಂತೂ ಇದಿಲ್ಲದೆ ನಡೆಯಲಾರವು. ಮೊನ್ನಿನ ಮಹಾಯುದ್ಧದಲ್ಲಿ ಮೆಸೋಪೊಟೋಮಿಯಾದ ರಣಭೂಮಿಯಲ್ಲಿ ತುರ್ಕೀಜನರೊಡನೆ ನಡೆದ ಘೋರ ಸಂಗ್ರಾಮಕ್ಕೆ ಬ್ರಿಟಿಶರು ಎಷ್ಟು ಮಹತ್ವವನ್ನು ಕೊಟ್ಟಿದ್ದರೆಂಬದನ್ನು ನೀವು ಓದಿ ಕೇಳಿರಬಹುದು. ಮೆಸೋಪೋಟೋಮಿಯಾದ ಪ್ರದೇಶದಲ್ಲಿದ್ದ ಕಲ್ಲೆಣ್ಣೆಯ ಕಣಿಗಳ ಪ್ರದೇಶವನ್ನೂ ಅಲ್ಲಿಂದ ಇರಾಣೀ ಆಖಾತದ ಮೇಲಿದ್ದ ಶಾತ-ಎಲ್-ಅರಬ ಬಂದರದಿಂದ ಕಣಿಗಳ ಪ್ರದೇಶದ ವರೆಗಿನ ಕಲ್ಲೆಣ್ಣೆಯ ನಳಗಳನ್ನು ಹಾಕಿರುವ ಭೂಭಾಗವನ್ನೂ ಸುರಕ್ಷಿತವಾಗಿಟ್ಟುಕೊಳ್ಳುವ ಉದ್ದೇಶದಿಂದಲೇ ಬ್ರಿಟಿಶ ಸೈನಿಕರು ತಮ್ಮ ವ್ಯೂಹವನ್ನು ರಚಿಸಿಕೊಂಡು ಮೈಯೊಳಗಿನ ರಕ್ತವೆಲ್ಲ ಬತ್ತಿಹೋಗುವಷ್ಟು ಶ್ರಮವನ್ನು ತಾಳಿಕೊಂಡು ಕಾದಾಡಬೇಕಾಯಿತು. ಯುದ್ಧದ ಹಡಗುಗಳಲ್ಲಿ ಉಗಿಯ ಎಂಜಿನುಗಳ ಬದಲು ಎಣ್ಣೆಯ ಎಂಜಿನುಗಳನ್ನು ಉಪಯೋಗಿಸುವದಕ್ಕೆ ಒಂದು ಮಹತ್ವದ ಕಾರಣವುಂಟು. ಉಗಿಯ ಯಂತ್ರದಿಂದ ನಡೆಯುವ ಹಡಗುಗಳು ಕಲ್ಲಿದ್ದಲಿಯನ್ನು ತೆಗೆದುಕೊಳ್ಳುವದಕ್ಕಾಗಿ ಆಗಾಗ ದಂಡೆಗೆ ಬರಲೇಬೇಕಾಗುವದು. ಆಗ ಶತ್ರುಗಳು ಅದರ ಮೇಲೆ ಹಲ್ಲೆಮಾಡುವದು ಸುಲಭವಾಗುವದು. ಆದರೆ ಎಣ್ಣೆಯ ಎಂಜಿನುಗಳ ಮೂಲಕ ನಡೆಯುವ ಹಡಗುಗಳು ಸಮುದ್ರದಲ್ಲಿ ಯಾವದೇ ಒಂದು ಗುಪ್ತ ಸ್ಥಳದಲ್ಲಿ ಅಡಗಿರಬಹುದು. ಎಣ್ಣೆಯು ತೀರಿದಾಗ ಹಿಂದೆ ಹೇಳಿದಂಥ ಟ್ಯಾಂಕರುಗಳು ಆ ಹಡಗಗಳಿರುವ ಸ್ಥಳಕ್ಕೇ ಹೋಗಿ ಎಣ್ಣೆಯನ್ನು ಪೂರೈಸಿಕೊಡಲು ಅನುಕೂಲವಾಗುವದು. ಅಲ್ಲದೆ ಕಲ್ಲಿದ್ದಲಿಗಿಂತಲೂ ಕಲ್ಲೆಣ್ಣೆಯಲ್ಲಿ ಯಂತ್ರವನ್ನು ನಡೆಯಿಸುವ ಶಕ್ತಿಯು ಹೆಚ್ಚು ಪ್ರಮಾಣದಿಂದ ಸಂಗ್ರಹವಾಗಿದ್ದು ಕಡಿಮೆ ಪ್ರಮಾಣದ ಎಣ್ಣೆಯಿಂದ ಹೆಚ್ಚು ಪ್ರಮಾಣದಿಂದ ಶಕ್ತಿಯನ್ನು ಹುಟ್ಟಿಸಲಿಕ್ಕೆ ಬರುವದು. ಆದ್ದರಿಂದ ಹಡಗದ ಮೇಲೆ ಸ್ವಲ್ಪ ಸ್ಥಳದಲ್ಲಿ ಹೆಚ್ಚು ದಿನಗಳ

ವರೆಗೆ ಸಾಕಾಗುವಷ್ಟು ಎಣ್ಣೆಯ ಉರುವಲವನ್ನು ಸಂಗ್ರಹಿಸಲು ಅನುಕೂಲವಾಗುವದು. ಜಗತ್ತಿನೊಳಗಿನ ಕಲ್ಲೆಣ್ಣೆಯು ಹುಟ್ಟುವ ದೇಶಗಳನ್ನು ಅನುಲಕ್ಷಿಸಿ ನೋಡಿದರೆ ಅಮೇರಿಕೆಯ ಯುನಾಯಿಟೆಡ್ ಸ್ಟೇಟ್ಸವು ಮೊದಲನೆಯ ನಂಬರು ಪಡೆಯುವದು. ಜಗತ್ತಿನಲ್ಲಿ ಪ್ರತಿವರ್ಷ ತೆಗೆಯಲ್ಪಡುವ ಕಲ್ಲೆಣ್ಣೆಯ ನಾಲ್ಕರಲ್ಲಿ ಮೂರು ಪಾಲು ಎಣ್ಣೆಯು ಯುನಾಯಿಟೆಡ್ ಸ್ಟೇಟ್ಸದಲ್ಲಿಯೇ ಹುಟ್ಟುವದು. ಅಮೇರಿಕೆಯಲ್ಲಿ ಹುಟ್ಟುವ ಎಣ್ಣೆಯ ೧/೨ ವು ಕಾಲಿಫೋರ್ನಿಯಾ ಸಂಸ್ಥಾನದಲ್ಲಿ ಹುಟ್ಟುವದು. ಅಂದರೆ ಇಡಿಯ ಜಗತ್ತಿನಲ್ಲಿ ಹುಟ್ಟುವ ಎಣ್ಣೆಯ ೧/೪ ವು ಕಾಲಿಫೋರ್ನಿಯಾದ ಕಣಿಗಳಿಂದ ಹೊರಡುವದೆಂದ ಹಾಗಾಯಿತು. ಇಪ್ಪತ್ತು ವರ್ಷಗಳ ಹಿಂದೆ ಅತಿ ಪ್ರಾಮುಖ್ಯವಾದ ಕಣಿಯೆಂದು ಹೆಸರಾದ ಪೆನ್ಸಿಲ್‌ವ್ಯಾನಿಯಾದ ಕಣಿಗಳಲ್ಲಿ ಈಗ ಕಾಲಿಫೋರ್ನಿಯಾದಲ್ಲಿ ಹುಟ್ಟುವ ಎಣ್ಣೆಯ ೧/೧೦ ದಷ್ಟು ಎಣ್ಣೆಯು ಹೊರಡುವದು. ಒಕ್ಲಾಹೋಮ ಸಂಸ್ಥಾನವು ಕಲ್ಲೆಣ್ಣೆಯ ಕಣಿಗಳಿಗಾಗಿ ಹೆಸರುಗೊಂಡ ಇನ್ನೊಂದು ಪ್ರದೇಶವು.

ಕಲ್ಲೆಣ್ಣೆಯ ಹುಟ್ಟುವಳಿಯ ದೃಷ್ಟಿಯಿಂದ ನೋಡಿದರೆ ಯುನಾಯಿಟೆಡ್ ಸ್ಟೇಟ್ಸಗಳ ತರುವಾಯ ಮೆಕ್ಸಿಕೋದ ಸ್ಥಾನವು ಬರುವದು; ಮತ್ತು ರಶಿಯದ ಸ್ಥಾನವು ಮೂರನೆಯದಾಗುವದು. ರಶಿಯಾದ ಕಲ್ಲೆಣ್ಣೆಯ ಕಣಿಗಳೆಲ್ಲ ಕಾಕೇಶಿಯದಲ್ಲಿಯೇ ಇರುವವು. ರಶಿಯಾದಲ್ಲಿ ದೊರೆಯುವ ಎಣ್ಣೆಯ ಮಾನವು ಯುನಾಯಿಟೆಡ್ ಸ್ಟೇಟ್ಸದಲ್ಲಿ ಹೊರಡುವ ಎಣ್ಣೆಯ ೧/೧೫ ದಷ್ಟು ಮಾತ್ರ ಇರುವದು. ಈ ಎಣಿಕೆಯಲ್ಲಿ ಮುಂದೆ ಸಾಗಿದರೆ ಇರಾಣದ ಹೆಸರು ನಾಲ್ಕನೆಯದಾಗುವದು. ಮತ್ತು ವೆನೆಜುಯೆಲಾ, ರುಮಾನಿಯಾ, ಡಚ್ ಈಸ್ಟಇಂಡಿಯಾ ದ್ವೀಪಗಳು, ಪೆರೂ, ಬ್ರಿಟಿಶ ಹಿಂದುಸ್ಥಾನ, ಆರ್ಜೆಂಟಾಯಿನಾ, ಪೋಲಂಡ, ತ್ರಿನಿದಾದ, ಸಾರವಾಕ, ಜಪಾನ, ದೇಶಗಳು ಕ್ರಮವಾಗಿ ಕಡಿಮೆ ಕಡಿಮೆ ಎಣ್ಣೆಯನ್ನು ಹುಟ್ಟಿಸುವ ದೇಶಗಳೆಂದು ಸದ್ಯದ ಲೆಕ್ಕದಿಂದ ಗೊತ್ತಾಗಿರುವದು. ಕಾನಡಾದಲ್ಲಿಯೂ ನ್ಯೂಝಿಲಂಡದಲ್ಲಿಯೂ ಈಚೆಗೆ ಕಲ್ಲೆಣ್ಣೆಯ ಬಾವಿಗಳನ್ನು ತೋಡಹತ್ತಿದ್ದಾರೆ. ಅಲ್ಲಿ ಆ ವ್ಯವಸಾಯವು ಮುಂದೆ ಹೆಚ್ಚು ದೊಡ್ಡಪ್ರಮಾಣದಿಂದ ನಡೆಯಬಹುದೆಂದು ತಜ್ಞರು ತರ್ಕಿಸಿರುವರು. ಬ್ರಿಟಿಶ ಸಾಮ್ರಾಜ್ಯವು ತನಗೆ ಬೇಕಾಗುವಷ್ಟು ಕಲ್ಲೆಣ್ಣೆಯನ್ನು ತನ್ನಲ್ಲಿಯೇ ಹುಟ್ಟಿಸಿಕೊಳ್ಳಬೇಕೆಂಬ ಅಭಿಲಾಷೆಯುಳ್ಳದ್ದಾಗಿರುವದು. ಭವಿಷ್ಯದಲ್ಲಿ ಔದ್ಯೋಗಿಕ ಆರ್ಥಿಕ ದೃಷ್ಟಿಯಲ್ಲಿ ಅತಿ ಮಹತ್ವದ ಖನಿಜವಾದ ಈ ಕಲ್ಲೆಣ್ಣೆಯ ಉತ್ಪತ್ತಿ (ಕತೆ) ಯ ಬಗ್ಗೆ ಜಗತ್ತಿನೊಳಗಿನ ಒಂದೊಂದು ದೇಶವೂ ಅತಿ ಕುತೂಹಲವುಳ್ಳದ್ದಾಗಿರುವದು.

ಹಳ್ಳಿಯ ಶಾಲೆಗಳ ವ್ಯಾಯಾಮವು

ಶಾರೀರಿಕ ವ್ಯಾಯಾಮದ ಆವಶ್ಯಕತೆಯು ಪಟ್ಟಣಗಳ ಶಾಲೆಗಳಿಗೆ ಇದ್ದಷ್ಟೇ ಹಳ್ಳಿಗಳ ಶಾಲೆಗಳಿಗೂ ಇರುತ್ತದೆ; ಆದರೂ ಕೆಲವು ಪ್ರಸಂಗಗಳಲ್ಲಿ ತುಸ ಹೆಚ್ಚು ಕಡಿಮೆಯಾಗಬಹುದು. ಪಟ್ಟಣಗಳ ಶಾಲೆಗಳ ಹುಡುಗರಿಗಿಂತ ಹಳ್ಳಿಗಳ ಶಾಲೆಗಳ ಹುಡುಗರಿಗೆ ನೈಸರ್ಗಿಕ ಆರೋಗ್ಯತೆಯ ಸಾಧನಗಳು ಹೆಚ್ಚು ಇರುತ್ತವೆಂಬ ತಿಳುವಳಿಕೆಯು ಎಲ್ಲರಿಗೂ ಇರುತ್ತದೆ. ಹಳ್ಳಿಯ ಹುಡುಗರ ತಂದೆತಾಯಿಗಳು ವಿಚಾರವಂತರೂ ಧನಿಕರೂ ಇದ್ದಲ್ಲಿ ಈ ಮಾತು ನಿಜವೇ ಸರಿ. ಇದಕ್ಕೆ ವಿಪರೀತವಾಗಿ ಬಡವರೂ ಅಶಿಕ್ಷಿತರೂ ಇದ್ದಲ್ಲಿ ಅಂಥ ಹುಡುಗರ ವ್ಯಾಯಾಮದ ವ್ಯವಸ್ಥೆಯನ್ನು ಶಾಲಾಚಾಲಕರು ಮಾಡುವದು ಅತ್ಯಾವಶ್ಯಕವು. ಹುಡುಗರು ಉತ್ತಮವಾದ ಬೈಲುಹವೆಯಲ್ಲಿಯೂ ಸೂರ್ಯಪ್ರಕಾಶದಲ್ಲಿಯೂ ಅಡ್ಡಾಡಲಿಕ್ಕೆ ಅನುಕೂಲತೆಗಳು ಬೇಕು. ಶಿಕ್ಷಕರು ಈ ವಿಷಯದಲ್ಲಿ ಹುಡುಗರಿಗೆ ಉತ್ತೇಜನ ಕೊಡಬೇಕಾಗುವದು ಹಳ್ಳಿಗರ ದಿನಚರ್ಯೆಯು ಯೋಗ್ಯವಾಗಿಯೂ ವ್ಯವಸ್ಥಿತವಾಗಿಯೂ ಪರಸ್ಪರ ಸಹಕಾರಿತೆಯುಳ್ಳದ್ದಾಗಿಯೂ ಇರುವದಿಲ್ಲ. ಆದುದರಿಂದ ಮೇಲೆ ಹೇಳಿದಂತೆ ಸರಿಯಾದ ವ್ಯವಸ್ಥೆಯಿಂದ ಇರಲಿಕ್ಕೆ ಕಲಿಸುವದೇ ಈ ವಿಷಯದ ಮೊದಲನೆಯ ಪಾಠವಾಗಿರಬೇಕು. ಇದಕ್ಕಾಗಿ ಹಳ್ಳಿಗರಲ್ಲಿ ಸಹಕಾರಿತ್ವವನ್ನು ಹೆಚ್ಚಿಸಿ, ಅವರ ಚಟುವಟಿಕೆಯನ್ನು ಬೆಳೆಯಿಸಿ, ಅವರಲ್ಲಿ ಪರಸ್ಪರ ಪ್ರೀತಿಯಿಂದ ಇರುವ ರೂಢಿಯನ್ನುಂಟುಮಾಡಲಿಕ್ಕೆ ಬೇಕು. ಸಣ್ಣ ಹಳ್ಳಿಗಳಲ್ಲಿ ದೂರದೂರದಲ್ಲಿದ್ದ ಮನೆಗಳಲ್ಲಿಯ ಹುಡುಗರ ಗುಂಪುಗಳನ್ನು ಮಾಡಿ ಆ ಗುಂಪುಗಳಿಗೆ ಹಿರಿಯಮಣಿಗಳನ್ನು ನಿಯಮಿಸಿ ಬೇರೆ ಬೇರೆ ಆಟಗಳನ್ನು ಆಡಿಸಬೇಕು.

ಕೆಲವು ಹಳ್ಳಿಗಳಲ್ಲಿ ಹುಡುಗರು ಹೆಚ್ಚು ದೂರದಿಂದ ದಾರಿಯನ್ನು ನಡೆದು ಶಾಲೆಗೆ ಹೋಗಬೇಕಾಗುತ್ತದೆ; ಆದುದರಿಂದ ಇಂಥ ಹುಡುಗರಿಗಾಗಿ ವ್ಯಾಯಾಮದ ತರಗತಿಗಳನ್ನು ನಿಯಮಿಸುವಾಗ ಈ ವಿಚಾರವನ್ನು ಲಕ್ಷ್ಯದಲ್ಲಿಟ್ಟಿರಬೇಕಾಗುವದು ಹೆಚ್ಚು ಮಾರ್ಗ ನಡೆಯುವದು ಹುಡುಗರಿಗೆ ಬೇಸರವನ್ನು ಉಂಟುಮಾಡಬಹುದು. ಇಂಥ ಮಕ್ಕಳಿಗೆ ಹೆಚ್ಚು ಶ್ರಮವಾಗುವಂಥ ವ್ಯಾಯಾಮದ ತರಗ

ಗಳನ್ನು ನೇಮಿಸಿದರೆ ಅವರಿಗೆ ಅಪಾಯವಾಗಬಹುದು ವ್ಯಾಯಾಮಗಳನ್ನು ಮಾಡಿಸುವಾಗ ಬಾಲಕರ ಚಿತ್ತೈಕಾಗ್ರತೆಯನ್ನು ಕಾದುಕೊಂಡು ಅವರ ಸ್ನಾಯು ಗಳು ಬಲಸಡುವಂತೆ ಮಾಡುವದು ಮಹತ್ವದ ಮಾತು. ಇಂಥ ಹುಡುಗರಿಗೆ ಶಾಲೆಗೆ ಬಂದ ಕೂಡಲೆ ವ್ಯಾಯಾಮದ ಪಾಠಗಳನ್ನು ಇಡಬಾರದು. ಹುಡುಗರು ಮಧ್ಯಾಹ್ನದ ಸೂಟಿಯನ್ನು ಶಾಲೆಯಲ್ಲಿಯೇ ಕಳೆದರೆ ಈ ವಿಷಯಕ್ಕೆ ಅನುಕೂಲ ವಾಗುವದು. ಕುಣಿಯುವದು ಉತ್ತಮ ವ್ಯಾಯಾಮವಾಗಿರುವದರಿಂದ ಅದನ್ನು ವ್ಯವಸ್ಥಿತವಾಗಿ ಕಲಿಸಿದರೆ ಹುಡುಗರಿಗೆ ಆನಂದವಾಗುವದು.

ವ್ಯಾಯಾಮದ ಸ್ಥಳವು—ವ್ಯಾಯಾಮದ ಸ್ಥಳವು ಒಮ್ಮೊಮ್ಮೆ ಚೆನ್ನಾಗಿರು ವದಿಲ್ಲ; ಆಟದ ಬೈಲುಗಳೂ ಹಿರಿದುಕಿರಿದಾಗಿಯೂ ಅಂಕಡೊಂಕಾಗಿಯೂ ಇರುತ್ತವೆ. ಇಂಥ ಪ್ರಸಂಗಗಳಲ್ಲಿ ಹುಡುಗರನ್ನು ಸಾಲಾಗಿ ನಿಲ್ಲಿಸುವದಕ್ಕಿಂತ ಪ್ರತಿಯೊಬ್ಬರು ತಮಗೆ ಉತ್ತಮ ಸ್ಥಳವು ದೊರೆಯುವಂತೆ ನೋಡಿಕೊಂಡು ನಿಲ್ಲಲಿಕ್ಕೆ ಹೇಳಬೇಕು. ಹಳ್ಳಿಗಳ ಒಳದಾರಿಗಳಲ್ಲಿ ವಿಶೇಷ ಓಡಾಟವಿಲ್ಲದ ಅಂದರೆ ಜನ ದಟ್ಟಣೆಯಿಲ್ಲದ ಸ್ಥಳಗಳಿರುತ್ತವೆ. ಅಂಥಲ್ಲಿ ಕಾಲುಬಡಿಯುತ್ತ (ಮಾರ್ಚಿಂಗ ಮಾಡುತ್ತ) ಓಡಾಡಲಿಕ್ಕೂ ಹಾರಲಿಕ್ಕೂ ಹುಡುಗರನ್ನು ಪ್ರೇರಿಸಬೇಕು. ಆಗ ಇಂಥ ಸ್ಥಳಗಳು ಆಟದ ಬೈಲುಗಳಿಗಿಂತ ಹೆಚ್ಚು ಪ್ರಯೋಜನಕರವಾಗುವವು. ಪಟ್ಟಣದ ಸಾಲೆಗಳಿಗಿಂತ ಹಳ್ಳಿಯ ಸಾಲೆಗಳಿಗೆ ಆಟದ ಬೈಲುಗಳು ಹೆಚ್ಚಾಗಿ ದೊರೆಯುವವೆಂದು ತಿಳಿಯುವದು ತಪ್ಪು. ಆದರೆ ಹತ್ತಿರವೇ ಸಪಾಟಾದ ಹೊಲ ವಿದ್ದರೆ ಇಲ್ಲವೆ ಹುಲ್ಲು ಭೂಮಿಯ ಬೈಲು ಇದ್ದರೆ ಅದನ್ನು ಆಟದ ಬೈಲಿನಂತೆ ಉಪಯೋಗಿಸಿಕೊಳ್ಳಬಹುದು. ಹುಲ್ಲುಗಾವಲವು ವ್ಯಾಯಾಮಕ್ಕೆ ವಿಶೇಷ ಅನುಕೂಲವಾದ ಸ್ಥಳವು; ಯಾಕಂದರೆ ಅಂಥಲ್ಲಿ ಬರಿಗಾಲಿನಿಂದ ಕವಾಯಿತ ಮಾಡಬಹುದು. ಅದರಂತೆಯೇ ಕಪ್ಪೆಯ ಆಟ, ಹಾರುವದು, ಕುಳಿತು ಏಳುವದು ಇತ್ಯಾದಿ ಕೆಲಸಗಳುಳ್ಳ ವ್ಯಾಯಾಮದ ತರಗತಿಗಳನ್ನು ಮಾಡಲಿಕ್ಕೆ ಹುಲ್ಲಿನ ನೆಲವು ಮೆತ್ತಗಿರುವದರಿಂದ ಹೆಚ್ಚು ಅನುಕೂಲವಾಗುವದು. ಜಾಣರಾದ ಶಿಕ್ಷಕರು ನೈಸರ್ಗಿಕವಾಗಿ ಸಿಗುವ ನದಿಯ ದಂಡೆ, ಗಿಡದ ಟೊಂಗೆಗಳು, ಬೈಲುಗಳು ಇವನ್ನೂ ವ್ಯಾಯಾಮದ ತರಗತಿಗಳಿಗಾಗಿ ಉಪಯೋಗಿಸಿಕೊಳ್ಳಲಿಕ್ಕೆ ಬರುತ್ತವೆ. ಇಂಥ ಸ್ಥಳಗಳಲ್ಲಿ ನಪಣೆ ಮುಂತಾದ ಧಾನ್ಯಗಳಿಂದಾಗಲಿ ಬೂದಿಯಿಂದಾಗಲಿ ಮಟ್ಟಿಗಲ್ಲಿ ನಿಂದಾಗಲಿ ಗೆರೆ ಕೊರೆದುಕೊಂಡು ಆಟವಾಡಿಸಬಹುದು.

ಹಳ್ಳಿಗಳಲ್ಲಿ ಶಾಲೆಗಳ ಪಟಾಂಗಣದಲ್ಲಿಯೇ ವ್ಯಾಯಾಮಮಾಡಲಿಕ್ಕೆ ಅನುಕೂಲವಾಗುವಂತೆ ತಕ್ಕಷ್ಟು ವಿಶಾಲವಾದ ಸ್ಥಳಗಳು ಇರುವದಿಲ್ಲ. ಆದರೂ ಅನುಕೂಲತೆಗಳನ್ನು ಮಾಡಿಕೊಂಡು ಹೆಚ್ಚು ಸ್ಥಳ ದೊರೆಯುವಲ್ಲಿ ವ್ಯಾಯಾಮದ ತರಗತಿಗಳನ್ನು ತೆಗೆದುಕೊಳ್ಳಬೇಕು. ಹೀಗೆ ಮಾಡಿದರೆ ಹೊರಗೆ ಹೋಗಿ ವ್ಯಾಯಾಮ ಮಾಡಲಿಕ್ಕೆ ಬಾರದ ಋತುಗಳಲ್ಲಿಯೂ ವ್ಯಾಯಾಮವನ್ನು ಅವ್ಯಾಹತವಾಗಿ ನಡೆಯಿಸಬಹುದು. ಕುಣಿಯುವದು, ಬಾಲಕರ ಆಟಗಳು ಇವುಗಳನ್ನು ಬೈಲಿನಲ್ಲಿಯೇ ಮಾಡಿಸಬೇಕು. ಯಾಕಂದರೆ ಈ ಬಗೆಯ ಆಟಗಳಿಂದ ಕೋಣೆಗಳ ನೆಲವು ಕೆಡುವದು. ಹಾಗು ಅಲ್ಲಿ ಬಹಳ ಹುಡುಗರು ಕೂಡಿದರೆ ಹವೆ ಕೆಡುವದು. ಶಾಲೆಯ ಹೆಡ್ ಮಾಸ್ತರರ ಅಪ್ಪಣೆಯಂತೆ ವೇಳಾಪತ್ರಿಕೆಯನ್ನು ರಚಿಸಿಕೊಂಡು ಶಾಲೆಯ ವೇಳೆಯಲ್ಲಿಯೂ ಕೂಡ ಕೆಲವು ವರ್ಗಗಳಿಗೆ ಬೈಲಿಗೆ ಹೋಗಿ ವ್ಯಾಯಾಮ ಮಾಡಿಸುವ ವ್ಯವಸ್ಥೆ ಮಾಡಬೇಕು.

ಕುಣಿಯುವದು ಉತ್ತಮ ತರಗತಿಯ ವ್ಯಾಯಾಮ ವಾಗಿರುವದು. ಕೆಲವು ವಿಶೇಷ ಪ್ರಕಾರದ ಕುಣಿಯುವ ಪದ್ಧತಿಯುಳ್ಳ ವ್ಯಾಯಾಮದ ತರಗತಿಗಳನ್ನು ಆರಿಸಿಕೊಂಡು ಬ್ಯಾಂಡು, ಗ್ರಾಮಾಫೋನೋ, ಕೊಳಲು ಇವುಗಳನ್ನು ಉಪಯೋಗಿಸಿಕೊಂಡು ಬೈಲು ಸ್ಥಳದಲ್ಲಿ ವ್ಯಾಯಾಮ ಮಾಡಿಸಬಹುದು. ಈಸುವದು ಉತ್ತಮ ವ್ಯಾಯಾಮವು. ಹೊಂಡ, ಸರೋವರ, ಸಣ್ಣ ಪ್ರವಾಹಗಳು ಇಂಥವನ್ನು ಈ ವ್ಯಾಯಾಮಕ್ಕಾಗಿ ಉಪಯೋಗಿಸಿಕೊಳ್ಳಬಹುದು.

ಪತ್ರಗಳ ಸಾರಾಂಶ

(೧) ಬೆಳಗಾಂವ ಜಿಲ್ಹೆಯೊಳಗಿನ **ನಂದಗಡ** ಶಾಲೆಯ ಹೆ. ಮಾ. ಶ್ರೀ. ರಾ. ಶಾ. ಕುಲಕರ್ಣಿ ಇವರು ಬರೆದದ್ದು—

"ಶಾಲೆಯ ವಾರ್ಷಿಕ ಪರೀಕ್ಷೆಯ ಪಾರಿತೋಷಿಕ ಸಮಾರಂಭವು ತಾ॥ ೨೫-೬-೧೯೩೭ನೆಯ ದಿವಸ ಶ್ರೀ. ಎಸ್. ವ್ಹಿ. ಹಂಜಿ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಆಗ ಶ್ರೀಯುತ ಪಾಥರ್ಡೆಯವರು ವಾರ್ಷಿಕ ರಿಪೋರ್ಟನ್ನು ಓದಿದರು. ವಿದ್ಯಾರ್ಥಿಗಳ ಸಂಗೀತ ಸಂಭಾಷಣೆಗಳು ಜರುಗಿದ ತರುವಾಯ ಶ್ರೀ. ಶಂಕರೆಪ್ಪ ಡಬ್ಬನವರ, ಶ್ರೀ. ಸಾತ್ವೀರಪ್ಪ ಪಾಟೀಲ, ಶ್ರೀ.

ಕೇಶವರಾವ ನರಗುಂದಕರ ಇವರು ಕ್ರಮವಾಗಿ ೨ ರೂ, ೧ ರೂ, ೧ ರೂ. ಗಳನು ಮಕ್ಕಳ ಉತ್ತೇಜನಾರ್ಥವಾಗಿ ದಯಪಾಲಿಸಿದರು. ಹಾಗು ಶ್ರೀಯುತ ರಂಗರಾವ ಕುಲಕರ್ಣಿ, ಶ್ರೀಯುತ ಬಸಪ್ಪ ಅರಗಾಂವಿ ಇವರು ವರ್ಗಣಿ ರೂಪದಿಂದ ೨೦ ರೂ. ಗಳನ್ನು ಕೂಡಿಸಿಕೊಟ್ಟರು. ಇದು ಸ್ತುತ್ಯವು."

(೨) ತಾ|| ೨೩–೬–೧೯೩೬ ನೆಯ ದಿವಸ ಶಿಗ್ಗಾವಿಯ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಬ್ರಿಟಿಶ ಸಾಮ್ರಾಜ್ಯದ ಸಾರ್ವಭೌಮರಾದ ಪರಮ ಪೂಜ್ಯ ಎಂಟನೆಯ ಎಡ್ವರ್ಡ ಬಾದಶಹರವರ ಜನ್ಮ ದಿವಸದ ಶುಭಕರ ಸಮಾರಂಭವು ಮೆ. ಮಾಮಲೇದಾರ ಸಾ|| ತಾಲೂಕ ಶಿಗ್ಗಾವ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತೆಂದೂ ಆಗ ಅಲ್ಲಿಯ ಸಬ್ ರಜಿಸ್ಟ್ರಾರರಾದ ಮಟ್ಟಿಕಲ್ಲಿ ಬಿ. ಎ. ಇವರು ಹೆಡ್‌ಮಾಸ್ತರ ಮಿ. ವೆ. ರಾ. ಮಠ ಇವರ ಕಾರ್ಯದಕ್ಷತೆಯನ್ನೂ ಶಿಕ್ಷಣದ ಕಳಕಳಿಯನ್ನೂ ವರ್ಣಿಸಿ ಶಾಲೆಯ ಉಪಯೋಗಕ್ಕಾಗಿ ೬ ರೂ. ಬೆಲೆ ಬಾಳುವ ಜಾಗಟೆಯನ್ನು ಕೊಟ್ಟರೆಂದೂ, ಶಾಸ್ತ್ರೀಯ ಪಾಠಗಳ ಉಪಕರಣಗಳನ್ನು ಒದಗಿಸಿಕೊಡುವದಕ್ಕಾಗಿ ಸಹಾಯಮಾಡುತ್ತೇವೆಂದೂ ಮೆ. ಮಾಮಲೇದಾರ ಸಾ|| ರವರೂ ಮೆ|| ಸಬ್ ರಜಿಸ್ಟ್ರಾರರವರೂ ಅಭಿವಚನವನ್ನಿತ್ತರೆಂದೂ **ಶ್ರೀ. ವನಹಳ್ಳಿ** ಎಂಬವರು ತಿಳಿಸಿರುವರು.

(೩) ಬಾಗಲಕೋಟ ತಾಲೂಕಿನೊಳಗಿನ ಮುರನಾಳ ಶಾಲೆಯಲ್ಲಿ ಪರಮ ಪೂಜ್ಯ ಬಾದಶಹರಾದ ೮ನೆಯ ಎಡ್ವರ್ಡರವರ ಜನ್ಮ ದಿನದ ಸಮಾರಂಭವು ಒಳ್ಳೇ ವೈಭವದಿಂದ ನಡೆಯಿತೆಂದೂ, ಸ್ಕೌಟ ಮಾಸ್ತರ ಶ್ರೀ. ಕೊರ್ತಿಯವರು ಉತ್ಸಾಹದಿಂದ ಕೆಲಸಮಾಡಿದರೆಂದೂ ಆಗ ಕುಲಕರ್ಣಿ ರಾಮರಾಯರು ವಿದ್ಯಾರ್ಥಿಗಳಿಗಾಗಿ ೨ ರೂ. ಗಳ ಮಿಠಾಯಿ ಹಂಚಿದರೆಂದೂ ಶ್ರೀ. **ಶೇಷೋ ಕೃಷ್ಣ ಕುಲಕರ್ಣಿ** ಇವರು ತಿಳಿಸಿರುವರು.

(೪) ವಿಜಾಪುರದ ಕನ್ನಡ ಗಂಡು ಮಕ್ಕಳ ೧೧ ನೆಯ ನಂಬರ ಶಾಲೆಯ ಹೆಡ್‌ಮಾಸ್ತರ **ಬುದ್ದಪ್ಪ ನಿಂಬರಗಿ** ಇವರು ತಾ|| ೨೭–೪–೧೯೩೬ನೆಯ ದಿವಸ ಮಹಜರ್ನ ಡಿ. ಲೋ. ಬೋ. ಪ್ರೆಸಿಡೆಂಟರಾದ ಶ್ರೀಮಂತ **ಗುರಶಿದ್ದಪ್ಪನವರು,** ಕೊಣ್ಣೂರ ದೇಸಾಯಿಯವರು ತಮ್ಮ ಶಾಲೆಗೆ ಆಗಮಿಸಿ ವಿದ್ಯಾರ್ಥಿಗಳ ಸಂಭಾಷಣ, ಶಾರೀರಿಕ ವ್ಯಾಯಾಮ ಇತ್ಯಾದಿಗಳನ್ನು ನೋಡಿ ಸಂತೋಷಭರಿತರಾಗಿ ಬಾಲಕ ಬಾಲಕಿಯರಿಗೆ ಬೆಂಡು ಬತ್ತಾಸುಗಳನ್ನು ಹಂಚುವದಕ್ಕಾಗಿ ೫ ರೂ. ಕೊಟ್ಟರೆಂದು ತಿಳಿಸಿರುವರು.

Reg. No. B. 3691

ವಾಗ್ವಿಲಾಸ ಬುಕ್‌ಡೀಪೋ ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕಮಿಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ಬೆಲೆ ರೂ. ಆ. ಪೈ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦- ೬-೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟೆಕೃತ)	೦- ೮-೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦- ೪-೦
ಹಿಂದುಸ್ಥಾನದ ಇತಿಹಾಸ (ಬಸವನಾಳಕೃತ)	೧- ೮-೬
ಲಘುವ್ಯಾಕರಣ (ವೈ. ಕಟ್ಟೀಕೃತ)	೦- ೦-೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦- ೩-೦
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦-೧೬-೬
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ. ಗೆ	೦- ೬-೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦- ೪-೦
,, ,, ೩ನೇ ,,	೦- ೫-೦
,, , ೪ನೇ ,,	೦- ೮-೦
ಅಂಕಗಣಿತ (ಗಾಂವಕರಕೃತ) ೩ನೇ ,,	೦- ೫-೦
ಧಾರವಾಡ ಜಿಲ್ಹಾ ವರ್ಣನೆ (ಅಣ್ಣೀಗೇರಿ ಕೃತ) ೩ನೇ ಇ. ಗೆ	೦- ೪-೦
ವಿಜಾಪೂರ ,, ,, (,,) ೩ನೇ ,,	೦- ೪-೦
ಧಾರವಾಡ ಜಿಲ್ಹಾ ,, (ಕುರಡೀಕೃತ)	೦- ೫-೦
ಹಿಂದುಸ್ಥಾನ ಭೂಗೋಲು (ಮುಗದಾಲಕೃತ)	೦- ೮-೦
ನುಡಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦-೧೨-೦
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	೦- ೫-೦
ವಿಜ್ಞಾನ ಸಚಿತ್ರ (ನಾಡಿಗೇರಕೃತ)	೦-೧೩-೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦- ೨-೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦-೧೦-೦
ಸರಸ್ವತಿ ವಿಜಯ (ಬೂದೀಹಾಳಕೃತ)	೦- ೪-೦

ಪತ್ತೆ:—**ವಿ. ಆರ್. ಶಿವನಾಗಪ್ಪಾ,**
ಬುಕ್‌ಸೇಲರ ಹುಬ್ಬಳ್ಳಿ.

ಆಗಸ್ಟ-೧೯೩೬

Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ನಂ	ವಿಷಯ	ಪುಟ
೧	ಆರೋಗ್ಯವೂ ; ಪ್ರಥಮ ಚಿಕಿತ್ಸೆಯೂ	೧
೨	ಕನ್ನಡ ಲಿಪಿಯ ಮಹತ್ವವೂ ಟಾಯಿಪ್‌ರಾಯಿಟರವೂ ...	೨
೩	ಪ್ರಕೃತಿ ವಿಮರ್ಶೆ	೬
೪	ಗ್ರಾಮಸುಧಾರಣೆಯ ವಿಚಾರಗಳು	೯
೫	ಭೂಗೋಲದ ಪಾಠಗಳು	೧೩
೬	ನರ್ಸರೀ ಸ್ಕೂಲುಗಳು (ಶಿಶುಶಾಲೆಗಳು)	೨೧
೭	೧೯೩೬ನೆಯ ಇಸ್ವಿಯ ಗಂಡುಮಕ್ಕಳ ವ್ಹ. ಫಾ. ಪರಿಕ್ಷೆಯ ಪರಿಣಾಮ	೨೪
೮	೧೯೩೬ನೆಯ ಇಸ್ವಿಯ ಹೆಣ್ಣುಮಕ್ಕಳ ಟ್ರೇ. ಕಾ. ಸರ್ಟಿಫಿಕೇಟ ಪರಿಕ್ಷೆಯ ಪರಿಣಾಮವು ಕಾರವಾರ ಡಿ. ...	೨೭
೯	ಪತ್ರವ್ಯವಹಾರಗಳು	೨೮
೧೦	ಮುಂಬಯಿಯ ಉದ್ರ್ದು ಬುಕ್ ಕಮಿಟಿಯವರು ಮಂಜೂರಮಾಡಿದ ಪುಸ್ತಕಗಳ ಯಾದಿಯು	೩೦

Printed by K. R. Bhise at the Karnatak printing Works, Dharwar and Published by D. V. Kale. B. A., Head Master. Training School, Dharwar. at his Office.

ಬೇಗ ತರಿಸಿಕೊಳ್ಳಿರಿ] [ಬೆಲೆ ೧೨ಆಣೆ

ಕನ್ನಡ ಸುಲಭ ಭೂಮಿತಿ ೧ನೆಯ ಪುಸ್ತಕ

(೬ನೆಯ. ೭ನೆಯ ಇಯತ್ತೆಗಳ ಹಾಗು ಟ್ರೇ. ಸಂಸ್ಥೆಗಳಿಗೆ
ಮಂಜೂರಾದ **ಟೆಕ್ಸ್ಟ** ಪುಸ್ತಕ)

ವಿದ್ಯಾರ್ಥಿಗಳಿಗೂ, ಮಾಸ್ತರರಿಗೂ ಅತ್ಯಂತ ಉಪಯುಕ್ತವಾದ, ಹೊಸ ಮಾದರಿಯುಳ್ಳ, ಪ್ರೊ. **ಪತ್ರಾವಳಿ** ಎಮ್. ಎ., ಬಾರ. ಆ್ಯಟ್. ಲಾ; ಗಣಿತಾಧ್ಯಾಪಕ **ಉಮಡಿ** ಎಮ್. ಎ. ಎಸ್. ಟಿ. ಸಿ. ಡಿ ಹಾಗು ಗಣಿತಾಧ್ಯಾಪಕ **ವಾಳವೇಕರ** ಎಮ್. ಎ., ಎಸ್. ಟಿ. ಸಿ. ಡಿ. ಮೊದಲಾದ ತಜ್ಞರಿಂದ ಉತ್ತಮ ಅಭಿಪ್ರಾಯಗಳನ್ನು ಪಡೆದ ಈ ಪುಸ್ತಕವು ಮಾರಾಟಕ್ಕೆ ಸಿದ್ಧವಾಗಿದೆ. ಜಿಲ್ಹೆಯ ಸ್ಕೂಲ್‌ಬೋರ್ಡಿನವರು ಶಾಲೆಗಳಲ್ಲಿ ಈ ಪುಸ್ತಕವನ್ನು ಹಚ್ಚಬೇಕೆಂದು **ಸರಕ್ಯೂಲರ**ವನ್ನು ತೆಗೆದಿದ್ದಾರೆ. ಮಾಸ್ತರರಿಗೂ, ಪುಸ್ತಕವ್ಯಾಪಾರಿಗಳಿಗೂ ತುಂಬಾ ಕಮಿಶನ್ ಕೊಡುವೆವು. ಪುಸ್ತಕಗಳು ಡಿ. ಎಮ್. ಜೋಗಲ ಪ್ರಾ್ಯ ಸ್ಕೂಲ್ ಟ್ರೇ. ಕಾ. ಪುಣೆ; ಜೆ. ಜಿ. ಕುಲಕರಣಿ ಪ್ರಾ್ಯ. ಸ್ಕೂಲ್ ಟ್ರೇ. ಕಾ. ಧಾರವಾಡ ಹಾಗು ನವೀನ ಕಿತಾಬಖಾನಾ ಪುಣೆ ೨ ಈ ಸ್ಥಳಗಳಲ್ಲಿ ದೊರೆಯುವವು

ಮಾರಾಟಕ್ಕೆ ಸಿದ್ಧವಿದೆ

ಗಣಿತ ಶಿಕ್ಷಕ

ಬ. ದು ಹಿರೇಮಠ ಕೃತ

೩ನೆಯ ಆವೃತ್ತಿ

ಶಿಕ್ಷಕ ಬಾಂಧವರೇ, ಈ ಪುಸ್ತಕವು ಕನ್ನಡ ೫-೬-೭ ನೆಯ ಇಯತ್ತೆಗಳು ಮತ್ತು ಸ್ಕೂ. ಫಾ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಮತ್ತು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಅಭ್ಯಾಸಕ್ರಮಕ್ಕನುಸರಿಸಿ ರಚಿಸಲ್ಪಟ್ಟಿದೆ. ಇದರ ಮಹತ್ವವನ್ನು ವರ್ಣಿಸಲವಶ್ಯವಿಲ್ಲ. ಕರ್ನಾಟಕದ ಎಲ್ಲ ಜನರಿಂದಲೂ ಆದರವನ್ನು ಹೊಂದಿರುವದು. ಆದುದರಿಂದಲೇ ಸ್ವಲ್ಪದಿವಸಗಳಲ್ಲಿಯೇ ಇದು **ಮೂರನೆಯ ಆವೃತ್ತಿ**ಯನ್ನು ಪಡೆದಿರುವದು ಒಂದು ಪ್ರತಿಯನ್ನಾದರೂ ತರಿಸಿ ನೋಡಿದರೆ ಅದರ ಯೋಗ್ಯತೆಯು ತಮಗೂ ತಿಳಿಯುವದು.

ವ್ಯಾಪಾರಸ್ಥರಿಗೂ ಶಿಕ್ಷಕರಿಗೂ ಯೋಗ್ಯ ಸವಲತು ದೊರೆಯುವದು. ಪುಸ್ತಕಗಳು ವಿ. ಆರ್. ಶಿವನಾಗಪ್ಪ ಹುಬ್ಬಳ್ಳಿ ಇವರಲ್ಲಿಯೂ ಎಲ್ಲ ಊರುಗಳ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ಬಸಪ್ರಭಯ್ಯ ದುಂಡಯ್ಯ ಹಿರೇಮಠ,
ಕನ್ನಡ ಶಾಲಾಮಾಸ್ತರ ವಿಜಾಪೂರ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ಸಂಪುಟ ೭೫	ಆಗಸ್ಟ ೧೯೩೬	ವರ್ಷ ೮ ಸಂ. ೫

೧. ಆರೋಗ್ಯವೂ ಪ್ರಥಮ ಚಿಕಿತ್ಸೆಯೂ

ತಾ. ೧೭-೭-೩೬ನೆಯ ದಿನ ಟ್ರೇನಿಂಗ ಸ್ಕೂಲಿನ ಹಿಂದಿನ ಹೆಡ್‌ಮಾಸ್ತರ ರಾಗಿದ್ದ ಶ್ರೀ. ಮುಗದಾಳ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಟ್ರೇನಿಂಗ ಸ್ಕೂಲಿನಲ್ಲಿ "ಆರೋಗ್ಯ ಮತ್ತು ಪ್ರಥಮ ಚಿಕಿತ್ಸೆ" ಈ ವಿಷಯುಗಳನ್ನು ಕಲಿಸುವ ಒಂದು ವರ್ಗವನ್ನು ಪ್ರಾರಂಭಿಸುವ ಕಾರ್ಯವು ನೆರವೇರಿಸಲ್ಪಟ್ಟಿತು. ಧಾರವಾಡದೊಳಗಿನ ಪ್ರಮುಖ ಡಾಕ್ಟರರ ಹಾಗು ಸದ್ಗೃಹಸ್ಥರ ನೆರವಿನಿಂದ ಈ ವರ್ಗವು ನಡೆಯಿಸಲ್ಪಡುವದು. ಶಿಕ್ಷಕರು ಹಳ್ಳಿಗಳಲ್ಲಿ ಸುಶಿಕ್ಷಿತರೂ ಪರೋಪಕಾರಿಗಳೂ ಆದ ವ್ಯಕ್ತಿಗಳೆಂದು ತಿಳಿಯಲ್ಪಡುವರು. ಅವರಿಗೆ ಊರ ಆರೋಗ್ಯಕ್ಕೆ ಸಂಬಂಧಿಸಿದ ಕೆಲವು ಮಾತುಗಳು ತಿಳಿದಿದ್ದರೆ ಮತ್ತು ಅಪಘಾತದ ಸಂದರ್ಭಗಳಲ್ಲಿ, ಡಾಕ್ಟರರ ಸಹಾಯುವು ದೊರೆಯುವ ವರೆಗಿನ ಕಾಲಾವಧಿಯಲ್ಲಿ, ಮಾಡಬೇಕಾದ ಹಲ ಕೆಲವು ವಿಚಾರಗಳನ್ನು ಅವರು ತಿಳಿದುಕೊಂಡಿದ್ದರೆ ಊರ ಜನರಿಗೂ ಶಾಲೆಗಳ ವಿದ್ಯಾರ್ಥಿಗಳಿಗೂ ತುಂಬ ಪ್ರಯೋಜನವುಂಟೆಂಬ ಮಾತನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿರುವದು. ಆದ್ದರಿಂದ ಈ ಧ್ಯೇಯುವನ್ನು ಸಾಧಿಸಲು ಬಯುಸಿ ಟ್ರೇನಿಂಗ ಸ್ಕೂಲಿನಲ್ಲಿ ಇಂಥದೊಂದು ವರ್ಗವು ಮೊನ್ನೆ ಪ್ರಾರಂಭಿಸಲ್ಪಟ್ಟಿರುವದು. ಡಾಕ್ಟರ ಜನರ ಹಾಗು ಮಿಕ್ಕ ಸದ್ಗೃಸ್ಥರ ನೆರವು ದೊರೆಯುಬಹುದಾದ ಎಲ್ಲ ಸ್ಥಳಗಳಲ್ಲಿ ಈ ತರದ ಯೋಜನೆಯುನ್ನು ಪ್ರಾರಂಭಿಸಿದರೆ

ಜನತೆಗೆ ಇದರಿಂದ ತುಂಬ ಪ್ರಯೋಜನವಾಗಬಹುದು. ಗ್ರಾಮಸುಧಾರಣೆಯ ಕಾರ್ಯಕ್ಕೂ ಇದರಿಂದ ವಿಶೇಷ ಅನುಕೂಲವಾಗಬಹುದು.

೨. ಕನ್ನಡಲಿಪಿಯ ಮಹತ್ವವೂ ಟಾಯಿಪರಾಯಿಟರವೂ

ಶ್ರೀ. **ನಾರಾಯಣಾಚಾರ್ಯ ಕೂಸನೂರ** ಇವರು ಮೊನ್ನೆ ತಾ. ೧೮-೭-೧೯೩೬ನೆಯದಿನ ಟ್ರೇನಿಂಗ ಸ್ಕೂಲಿನಲ್ಲಿ "ಕನ್ನಡಲಿಪಿಯ ಮಹತ್ವ ಮತ್ತು ಕನ್ನಡ ಟಾಯಿಪರಾಯಿಟರು" ಎಂಬ ವಿಷಯದಮೇಲೆ ಸುಶ್ರಾವ್ಯವಾದ ಭಾಷಣ ಮಾಡಿದರು. ಇವರು ನಮ್ಮ ಧಾರವಾಡ ಜಿಲ್ಹೆಯ ಹಾನಗಲ್ ತಾಲೂಕಿನೊಳಗಿನ ಒಂದು ಹಳ್ಳಿಯಾದ ಕೂಸನೂರ ನಿವಾಸಿಗಳು. ಅವರು ಈ ವಿಷಯಗಳನ್ನು ಬಹುಕಾಲದವರೆಗೆ ಅಭ್ಯಾಸಮಾಡಿ ಕೊನೆಗೆ ಒಂದು ಉಪಯುಕ್ತವಾದ ನಿರ್ಣಯಕ್ಕೆ ಬಂದು ಮುಟ್ಟಿರುವರು. ಅವರ ವಿಚಾರಗಳು ತುಂಬ ವಿಮರ್ಶಾರ್ಹವಾಗಿರುವದರಿಂದಲೂ, ಕನ್ನಡದ ಬೆಳೆವಣಿಗೆಗೂ ಕನ್ನಡಿಗರ ಶ್ರೇಯಸ್ಸಿಗೂ ಕಾರಣವಾದ ಈ ವಿಚಾರಗಳನ್ನು ನಮ್ಮ ವಾಚಕರು ತಿಳಿದಿರುವದು ಒಳ್ಳೆಯದೆಂಬ ಅಲೋಚನೆಯಿಂದಲೂ ಅವನ್ನು ಇಲ್ಲಿ ಸಂಕ್ಷೇಪವಾಗಿ ಕೊಟ್ಟಿರುವೆವು.



"೧. ಕನ್ನಡಲಿಪಿಯು ದ್ರಾವಿಡವರ್ಗಕ್ಕೆ ಸೇರಿದುದು. ನಮ್ಮ ದೇಶದ ಆರ್ಯವರ್ಗಕ್ಕೆ ಸೇರಿದ ನಾಗರಿ (ಮರಾಠಿ) ಗುಜರಾಥಿ ಮುಂತಾದ ಲಿಪಿಗಳಿಗೆ ಇಲ್ಲವೆ ಪಾರಸಿಕವರ್ಗಕ್ಕೆ ಸೇರಿದ ಲಿಪಿಗೆ ಅಥವಾ ರೋಮನ್‌ವರ್ಗಕ್ಕೆ ಸೇರಿದ ಪಾಶ್ಚಿಮಾತ್ಯದೇಶಗಳ ಇಂಗ್ಲಿಷು ಮುಂತಾದ ಲಿಪಿಗಳಿಗೆ ಇಲ್ಲದಿರುವ ವಿಶಿಷ್ಟ ಅನುಕೂಲತೆಯು ಕನ್ನಡಕ್ಕೆ ಇರುವದು. ಇಂಗ್ಲಿಷಿನ ವರ್ಣಮಾಲೆಯಲ್ಲಿ ೨೬ ಅಕ್ಷರಗಳಿದ್ದು ಅದರಲ್ಲಿ ನಮಗೆ ಬೇಕಾಗುವ ಎಲ್ಲ ಉಚ್ಚಾರಗಳನ್ನು ಬರೆದು ತೋರಿಸಲು ಅವಶ್ಯವಾಗಿ ಬೇಕಾಗುವ ಅಕ್ಷರಗಳಿಲ್ಲದ್ದರಿಂದ ಅಕ್ಷರಯೋಜನೆಯ (Spelling) ತೊಡಕು ಮಿತಿಮೀರಿರುವದು. ಈ ತೊಡಕನ್ನು ಹೇಗೆ ಬಿಡಿಸಬೇಕೆಂಬ ವಿಷಯದಲ್ಲಿ ಅಮೇರಿಕೆಯೇ ಮೊದಲಾದ ದೇಶಗಳು ವಿಚಾರ ಮಗ್ನವಾಗಿವೆ. ಇದೇ ಮಾತು ಪರ್ಶಿಯನ್ ಲಿಪಿಗೂ ಇನ್ನಷ್ಟು ಗಡುಸಾಗಿ ಅನ್ವಯಿಸು

ವದು. ಸ್ವರ ವ್ಯಂಜನಗಳ, ವ್ಯಂಜನವ್ಯಂಜನಗಳ ಸಂಯೋಗವು ಈ ಭಾಷೆಗಳಲ್ಲಿ ಇನ್ನಿಲ್ಲದಷ್ಟು ತೊಂದರೆಯುದಾಗಿರುವದು. ನಾಗರೀ ಲಿಪಿಗೂ ಈ ಸ್ವರವ್ಯಂಜನಗಳ ಹಾಗು ವ್ಯಂಜನವ್ಯಂಜನಗಳ (ಒತ್ತಕ್ಷರ) ಸಂಯೋಗದ ರೀತಿಯು ತುಂಬ ಬಗಿಯಾಗಿರುವದು. ಕೆಲವು ಸ್ವರಚಿಹ್ನಗಳು ಎಡಕ್ಕೆ ಕೆಲವು ಬಲಕ್ಕೆ ಕೆಲವು ಮೇಲ್ಗಡೆಗೆ ಮತ್ತೆ ಕೆಲವು ಕೆಳಗಡೆಗೆ ಸೇರಿಸಲ್ಪಡಬೇಕಾಗುವದರಿಂದಲೂ ಸಂಯುಕ್ತಾಕ್ಷರಗಳ ವಿಷಯುದಲ್ಲಿಯೂ ಇದೇ ತೊಂದರೆಯಿದ್ದುದರಿಂದಲೂ ಮುದ್ರಣಾಲಯುಗಳಲ್ಲಿ ಮೊಳೆ ಜೋಡಿಸುವವರಿಗೆ ಹೆಚ್ಚು ಶ್ರಮವೂ ಕಾಲವೂ ಬೇಕಾಗುವವು. ಕನ್ನಡಲಿಪಿಗೆ ಇದಾವ ತೊಂದರೆಯೂ ಇಲ್ಲ. ನಾಗರೀಲಿಪಿಯು ಬರೆಹದಲ್ಲಿರುವಂತೆ ಒಂದು ಅಕ್ಷರವನ್ನು ಬರೆಯುವಾಗ ನಡುವೆ ಅನೇಕ ಸಾರೆ ನಿಲ್ಲುವ ಕಾರಣವಿಲ್ಲದ್ದರಿಂದಲೂ, ಕನ್ನಡಲಿಪಿಯು ವರ್ತುಳ ಅರ್ಧವರ್ತುಳ ಮುಂತಾದ ದುಂಡಗಿನ ಆಕೃತಿಗಳ ಯೋಜನೆಯಿಂದಲೇ ಉಂಟಾಗಿರುವದರಿಂದ ಬರೆಹವು ಕಣ್ಣಿಗೂ ಮನೋಹರವಾಗಿ ತೋರುವದರಿಂದಲೂ, ನಮ್ಮ ದೇಶಕ್ಕೆ ಅತಿ ಪ್ರಾಚೀನವೂ ನಮ್ಮ ದೇಶದ ಎಲ್ಲ ಆಧುನಿಕ ಲಿಪಿಗಳ ಉತ್ಪತ್ತಿಗೆ ಕಾರಣವೂ ಆದ ಬ್ರಾಹ್ಮೀ ಲಿಪಿಯಿಂದಲೇ ಕನ್ನಡ ವರ್ಣಮಾಲೆಯು ಉತ್ಪತ್ತಿಯಾಗಿರುವದರಿಂದಲೂ, ಕನ್ನಡ ಲಿಪಿಯು ನಮ್ಮ ದೇಶದ– ಇಷ್ಟೇಯಾಕೆ ? ಪ್ರಪಂಚಕ್ಕೇ–ಸರ್ವಸಾಧಾರಣವಾದ ಲಿಪಿಯಾಗಲು ತಕ್ಕದ್ದಾಗಿದೆ ಈ ಮಾತನ್ನು ತಜ್ಞರು ನಿರಭಿಮಾನದಿಂದ ಒಪ್ಪಿಕೊಳ್ಳಲೇಬೇಕಾಗಿದೆ.

೨. ನಮ್ಮ ಲಿಪಿಗೆ ಇಷ್ಟೆಲ್ಲ ಸೌಕರ್ಯಗಳಿದ್ದರೂ ಇಷ್ಟೊಂದು ಗೌರವದ ಗುಣಗಳು ಅದರಲ್ಲಿ ಇರುತ್ತಿದ್ದರೂ ನಮ್ಮಲ್ಲಿ ಇನ್ನೂ ಟಾಯಿಪರಾಯಿಟರುಗಳು ಪ್ರಚಾರಕ್ಕೆ ಬಾರದಿರಲು ಕಾರಣವೇನೆಂದು ಯಾರಾದರೂ ಪ್ರಶ್ನೆ ಮಾಡಿದರೆ ಅದಕ್ಕೆ ಕನ್ನಡಿಗರ ಆಲಸ್ಯ ಅನಾದರಗಳೇ ಕಾರಣವೆಂದು ತಲೆತಗ್ಗಿಸಿ ಉತ್ತರ ಹೇಳಬೇಕಾಗುವದು. ಇಂಗ್ಲಿಷಿನ ಟಾಯಿಪರಾಯ್ಟರಿನಲ್ಲಿ ಎರಡು ಅಕ್ಷರ ಚಿಹ್ನಗಳಿರುವ ೪೨ ಇಲ್ಲವೆ ೩ ಅಕ್ಷರ ಚಿಹ್ನಗಳಿರುವ ೨೮ ಕೀಗಳು ಇರುವವು. ಅತ್ರೆಯುವರ ನಾಗರೀ ಟಾಯಿಪರಾಯಿಟರಿನಲ್ಲಿ ೩ ಗುರುತುಗಳು ಸೇರಿರುವ ೪೨ ಕೀಗಳು ಇರುವವು. ನಾನು ತಯಾರಿಸಲು ಬಯುಸುವ ಮಾದರಿಯ ಟಾಯಿಪರಾಯಿಟರಿನಲ್ಲಿ ೩ ಅಕ್ಷರಗಳ ಗುರುತುಗಳು ಸೇರಿರುವ ೪೨ರಿಂದ ೪೬ರ ವರೆಗೆ ಕೀಗಳು ಬೇಕಾಗಬಹುದೆಂದು ಗೊತ್ತುಮಾಡಿ

ಕೊಂಡಿರುವೆನು. ಅದರಲ್ಲಿ ಕೆಲವು ಸ್ವರಚಿಹ್ನಗಳ ಸಂಯೋಗಕ್ಕಾಗಿ ಒಂದ ಮೇಲೊಂದು ಮೂಡುವ (over laping) ಕೀಗಳೂ ಒತ್ತಕ್ಷರಗ ಯೋಜನೆಗಾಗಿ ಸರಿಯದಿರುವ (dead) ಕೀಗಳೂ ಬರುವವು. ಸಧ್ಯಕ ಇಂಗ್ಲಿಷ ಟಾಯಿಪರಾಯ್ಟರುಗಳ ಜೆಲೆಯು ೩೮೫ ರೂ. ಇರುವದು. ನಾಗರಿ ಟಾಯಿಪರಾಯ್ಟರುಗಳಿಗೆ ೩೬೦ ರೂ. ಗಳು ಬೀಳುವವು. ನಮ್ಮ ಈಗ ಅಂದಾಜಿನಂತೆ ಕನ್ನಡ ಟಾಯಿಪರಾಯ್ಟರುಗಳಿಗೆ ೩೫೦ ರೂ. ಜೆಲೆ ಬರಬಹ ದೆಂದು ತೋರುವದು. ಇಷ್ಟೆಲ್ಲ ಸೌಕರ್ಯಗಳನ್ನು ಕಂಡುಕೊಂಡು ಅನ ಕೂಲತೆಗಳನ್ನು ಕಲ್ಪಿಸಿಕೊಂಡು ಮುಂದೆಸಾಗಲು ಹೊರಟಿರುವ ಕೇವ ಕನ್ನಡಿಗನಾದ ನನ್ನ ಕಾರ್ಯಕ್ಕೆ ತಾವೆಲ್ಲರೂ ಸಹಾನುಭೂತಿಪೂರ್ಣವಾ ಸಹಾಯವನ್ನು ತೋರಿದರೆ ಪ್ರಕೃತಕ್ಕೆ ಉತ್ಸಾಹಜನಕವಾದ ನಾಲ್ಕು ಮಾತ ಗಳನ್ನಾಡಿ, ಈ ವಿಷಯದಲ್ಲಿ ಹೇಳತಕ್ಕದ್ದೇನಾದರೂ ಇದ್ದರೆ ಹೇಳಿ, ನಾನ ಕೈಕೊಂಡಿರುವ ಕನ್ನಡಮಾತೆಯ ಸೇವೆಗೆ ನನ್ನನ್ನು ಪ್ರೋತ್ಸಾಹಿದರೆ, ತಮ ಶ್ರೇಯಸ್ಸೂ ಕರ್ನಾಟಕ ದೇಶಕ್ಕೆ ಮಹದುಪಕಾರವೂ ಆಗುವದೆಂದು ಧೈರ್ಯ ದಿಂದ ಹೇಳಬಲ್ಲೆನು. ”

ಪ್ರಕೃತಿ ವಿಮರ್ಶೆ

[ಕಳೆದ ತಿಂಗಳ ಸಂಚಿಕೆಯಿಂದ ಮುಂದುವರಿದುದು]

ಬೆಳೆಯುವ ವನಸ್ಪತಿಗಳನ್ನೂ ಚಲಿಸುವ, ಅವರೊಡನೆ ಆಟವಾಡುವ ಮತ್ತು ತಮಗೆ ಉಪಕಾರಿಗಳೆಂಬ ಭಾವನೆಯಿರುವ ಪ್ರಾಣಿಗಳನ್ನೂ ಪ್ರೀತಿಸುವದು ಬಾಲ ಕರ ಹುಟ್ಟುಗುಣ ಎಂಬದು ಬಾಲಕರೊಡನೆ ಒಡನಾಡಿದವರೆಲ್ಲರೂ ಮನಗಂಡ ಮಾತು. ಆದುದರಿಂದ ಪ್ರಕೃತಿ ವಿಮರ್ಶೆಯು ಪಾಠಗಳು ಅವರ ಪರಿಚಯದ ವನಸ್ಪತಿಗಳನ್ನು ಬೆಳೆಯಿಸುವದು, ಅವರ ಪ್ರೀತಿಯ ಪ್ರಾಣಿಗಳನ್ನುಸಾಕುವದು, ಇವುಗಳಿಂದಲೇ ಪ್ರಾರಂಭವಾಗಬೇಕು. ಅರ್ಥಾತ್ ಈ ವಿಷಯದ ಅಭ್ಯಾಸದಲ್ಲಿ

ಇವೆರಡು ಮಾತುಗಳಿಗೆ ಪ್ರಾರಂಭದಿಂದಲೇ-ಅಲ್ಪ ಪ್ರಮಾಣದಿಂದಲೇ ಆಗಲೊಲ್ಲ ದೇಕೆ ?- ಪ್ರಾಧಾನ್ಯವಿರಬೇಕು.

ತಾವು ಕಂಡು ನೋಡಿದ ಸಂಗತಿಗಳನ್ನು ಕೈಗೆಸಿಕ್ಕ ಮಟ್ಟ, ಇದ್ದಲಿ, ಖಡು, ಬಳಪ, ಮುಂತಾದವುಗಳಿಂದ ಪ್ರತಿರೂಪಿಸುವ ಪ್ರವೃತ್ತಿಯೂ ಬಾಲಕರಿಗೆ ತೀರ ಸಹಜವಾದುದು. ಮತ್ತು ಆ ಚಿಕ್ಕ ವಯಸ್ಸಿನಲ್ಲಿ ಅವರಿಗೆ ಪೂರ್ಣವಾದ ಚಿತ್ರಗಳು ಬೇಕೆಂಬ ಆತುರತೆಯೂ ಇರಲಾರದು. ಮನುಷ್ಯನ ಮುಖದ ಚಿತ್ರ ವನ್ನು ಒಂದು ದೀರ್ಘ ವರ್ತುಳ, ಕಣ್ಣುಗಳ ಸ್ಥಳದಲ್ಲಿ ಎರಡು ಸೊನ್ನೆಗಳು, ಬಾಯಿಗಾಗಿ ಒಂದು ಗುರುತು ಇಷ್ಟೇ ಬರೆಹದಿಂದ ಪ್ರತಿರೂಪಿಸಿ ಬಿಟ್ಟರೆ ಅವರು ಅದಕ್ಕೆ ಮನವೊಚ್ಚಿ ಒಪ್ಪಿಕೊಳ್ಳುವರು. ಅಷ್ಟೇ ಚಿತ್ರವನ್ನು ಆ ಬಾಲಕರಿಂದಲೇ ತೆಗೆಯಿಸಿ ಬಿಟ್ಟರಂತೂ ಅವರಿಗಾಗುವ ಆನಂದಕ್ಕೆ ಪಾರವೇ ಇರದು. ಕಲಾವಿದ ನಾದ ಚಿತ್ರಕಾರನೊಬ್ಬನು ಉತ್ತಮೋತ್ತಮವಾದ ತೈಲ ಚಿತ್ರವನ್ನು ಬರೆದು ಪಾರಿ ತೋಷಿಕವನ್ನು ಪಡೆದಾಗ ಪಡುವ ಆನಂದಕ್ಕಿಂತಲೂ ಹೆಚ್ಚಿನ ಆನಂದವು ಆಗ ಆ ಬಾಲಕನಿಗಾಗಬಹುದು. ಬಾಲಕರ ಈ ಮನೋವೃತ್ತಿಯನ್ನು ಪ್ರಕೃತಿ ವಿಮ ರ್ಶೆಯ ಪಾಠಗಳಲ್ಲಿ ನಾವು ಚೆನ್ನಾಗಿ ಉಪಯೋಗಿಸಿಕೊಳ್ಳಬಹುದು. ಬಾಲಕ ರಿಗೆ ಬಣ್ಣದ ಮೇಲೆ ಪ್ರೀತಿ ಬಹಳ. ಬಣ್ಣದ ಖಡುವಿನಿಂದ ಚಿತ್ರಗಳನ್ನು ಬರೆ ಯುವ ರೂಢಿಯನ್ನಿಡುವದು ಬಹಳ ಒಳ್ಳೆಯದು. ಕರಿಯ ಹಲಗೆಯ ಮೇಲೆಯೂ ರಟ್ಟುಕಾಗದಗಳ ಮೇಲೆಯೂ ಚಿತ್ರಗಳನ್ನು ತೆಗೆಯಿಸಬಹುದು. ಬಾಲಕರಲ್ಲಿ ಚಿತ್ರಬರೆಯುವ ರೂಢಿಯು ಹೆಚ್ಚುತ್ತಹೋದಂತೆ ಹೆಚ್ಚು ಹೆಚ್ಚು ಪರಿ ಪೂರ್ಣವಾದ ಚಿತ್ರಗಳನ್ನು ತೆಗೆಯಲು ಅವರನ್ನು ಪ್ರೋತ್ಸಾಹಿಸಬಹುದು. ಉದ್ದು ದ್ದವಾದ ವರ್ಣನೆಗಳಿಗಿಂತಲೂ ಪರಿಪೂರ್ಣವಾದ ಚಿತ್ರವು ಬಾಲಕರ ಮನಸ್ಸನ್ನು ಆಕರ್ಷಿಸಿ ವಿಷಯವನ್ನು ತೀವ್ರವಾಗಿಯೂ ಸ್ಪಷ್ಟವಾಗಿಯೂ ಒಡಮೂಡಿಸುವ ದೆಂಬದನ್ನು ಮರೆಯಕೂಡದು. ಮೇಲಿನ ವರ್ಗಗಳಲ್ಲಿ ಚಿತ್ರಗಳೊಡನೆ ವರ್ಣನೆ ಗಳನ್ನೊಳಕೊಂಡ ಟಿಪ್ಪಣೆಗಳನ್ನೂ ಬರೆಯಿಸಿ ಇಡಬಹುದು.

ಕುತೂಹಲವು ಬಾಲಕರಲ್ಲಿ ಸ್ವಾಭಾವಿಕವಾಗಿರುವ ಇನ್ನೊಂದು ಮಹತ್ವದ ಒಲವು. ಬಾಲಕರ ಮನಸ್ಸಿಗೆ ಸಂಸ್ಕಾರವನ್ನುಂಟುಮಾಡಿ ಬುದ್ಧಿಯನ್ನು ವಿಕಾಸ ಗೊಳಿಸುವದಕ್ಕಾಗಿಯೇ ಅವರಲ್ಲಿ ದೇವರು ಈ ಗುಣವನ್ನು ಪ್ರಕೃತಿ ಸಹಜವಾಗಿ ಇಟ್ಟಿರುವನು. ಬಾಲಕರು ತಮ್ಮಷ್ಟಕ್ಕೆ ತಾವೇ ವಸ್ತುಗಳನ್ನು ಆರಿಸಿಕೊಂಡು

ನಿರೀಕ್ಷಣೆ ಮಾಡಲು ಪ್ರಾರಂಭಿಸುವಂತೆ ಮಾಡಬೇಕು. ತೀರ ಆವಶ್ಯಕವೆನಿಸುವ ಮತ್ತು ಬಾಲಕರು ತಾವೇ ಕಂಡುಹಿಡಿಯಲು ಸಾಧ್ಯವೇ ಇಲ್ಲದಂಥ ಮಹತ್ವದ ಮಾತುಗಳನ್ನಷ್ಟೇ ಪ್ರಶ್ನೆಗಳ ಮೂಲಕ ಸಾಕಷ್ಟು ಕುತೂಹಲವನ್ನು ಹುಟ್ಟಿಸಿದ ತರುವಾಯ ಶಿಕ್ಷಕರು ಅವರ ಮುಂದೆ ಇಡಬಹುದು. ಆದರೆ ಇವನ್ನು ತಮ್ಮ ಕೊನೆಯ ನಿರ್ಣಯವೆಂದಾಗಲಿ ಸಿದ್ಧಾಂತವೆಂದಾಗಲಿ ಹೇಳಕೂಡದು. ಆ ಮಾತನ್ನೇ ಬಾಲಕರು ಮತ್ತೆ ಮತ್ತೆ ನಿರೀಕ್ಷಿಸಿ ಪರೀಕ್ಷಿಸಿ ಮನಗಾಣಬೇಕೆಂಬದನ್ನು ಮರೆಯಲಾಗದು. ಮತ್ತು ಅವರು ಆ ನಿರ್ಣಯದ ದಾರಿಯಲ್ಲಿಯೇ ಮುಂದೆ ಸಾಗಿ ಹೆಚ್ಚಿನ ಸಂಗತಿಗಳನ್ನು ಕಂಡುಕೊಳ್ಳುವಂತೆ ಮಾಡಬೇಕು. ಬಾಲಕರು ತಮ್ಮಷ್ಟಕ್ಕೆ ತಾವೇ ಕಂಡುಕೊಂಡ ಸಂಗತಿಗಳನ್ನೂ, ಅವರು ಮಾಡಿದ ಸಣ್ಣ ಪುಟ್ಟ ಕೆಲಸಗಳನ್ನೂ ಶಿಕ್ಷಕರು ದುರ್ಲಕ್ಷಿಸಲಾಗದು. ಆಯಾ ಕೆಲಸಗಳಿಗೆ ಆವಶ್ಯವಿದ್ದಷ್ಟು ಮನ್ನಣೆಯನ್ನು ಕೊಟ್ಟು ಅವರನ್ನು ಮುಂದಿನ ಕೆಲಸಕ್ಕೆ ಪ್ರೋತ್ಸಾಹಿಸುತ್ತ ಸಾಗಬೇಕು. ಇದರಿಂದ ಬಾಲಕರ ಕುತೂಹಲ ಶಕ್ತಿಯು ಬೆಳೆಯುವದಲ್ಲದೆ ಕಾರ್ಯಪ್ರವೃತ್ತಿಯೂ ಹೆಚ್ಚುವದು.

ಬಾಲಕರಲ್ಲಿ ಪರರ ಗುಣದೋಷಗಳನ್ನು ಕಂಡುಹಿಡಿದು ನಿರ್ದಾಕ್ಷಿಣ್ಯದಿಂದ ನಿರ್ಣಯ ಹೇಳುವ ಶಕ್ತಿಯು ಒಂದು ಹುಟ್ಟುಗುಣವಾಗಿರುವದು. ಈ ಶಕ್ತಿಯನ್ನು ಉಪಯೋಗಿಸಿಕೊಂಡು ಅವರು ಮಾಡಿದ ಕೆಲಸಗಳ ಗುಣದೋಷಗಳನ್ನು ಅವರೇ ನಿರ್ಣಯಿಸಲಿಕ್ಕೆ ಪ್ರೋತ್ಸಾಹಿಸಬೇಕು; ಅವರು ಹೇಳುವ ಪ್ರತಿಯೊಂದು ನಿರ್ಣಯಕ್ಕೆ ತಕ್ಕ ಕಾರಣವನ್ನು ಕೊಡುವಂತೆ ಮಾಡಬೇಕು. ಶಿಕ್ಷಕರು ಬಾಲಕರ ಕೆಲಸಗಳನ್ನು ನೋಡಿ ತಪ್ಪಿದ್ದಲ್ಲಿ ಕಾಟುಹಾಕುತ್ತ ಹೋಗುವದರಿಂದ ಯಾವ ಪ್ರಯೋಜನವೂ ಆಗದು. ಪ್ರಕೃತಿವಿಮರ್ಶೆಯ ಪಾಠಗಳಲ್ಲಂತೂ ಯಾವದಾದರೊಂದು ಮಾತು, ಇದು ತೀರ ತಪ್ಪೆಂದು ತಟ್ಟನೆ ಹೇಳಿಬಿಡುವಷ್ಟು, ಎಂದೂ ಸುಲಭವಾಗಿರುವದಿಲ್ಲ; ಹಾಗೆ ಹೇಳಿಬಿಟ್ಟದ್ದು ತಾವು ದುಡುಕಿ ಮಾಡಿದ ತಪ್ಪೆಂದು ಅನೇಕಸಾರೆ ಹಿಂದಿನಿಂದ ತಿಳಿದುಬರಬಹುದು. ತಕ್ಕ ಆಧಾರಗಳಿಲ್ಲದಿರುವ ಯಾವದೊಂದು ನಿರ್ಣಯವು ಪ್ರಯೋಜನದ್ದಲ್ಲವೆಂದೂ ತಮ್ಮ ಟಿಪ್ಪಣಿ ಪುಸ್ತಕಗಳಲ್ಲಿ ಸತ್ಯಸಂಗತಿಗಳಷ್ಟೇ ಇರುವವೆಂಬದನ್ನು ನೋಡಿಕೊಳ್ಳುವ ಜವಾಬದಾರಿಯು ಅವರದೇ ಅಲ್ಲದೆ ಎಂದೂ ಶಿಕ್ಷಕನದಲ್ಲವೆಂದೂ ಬಾಲಕರು ಮನಗಂಡು ನಡೆಯುವಂತೆ ಮಾಡಬೇಕು. ಕೆಲವರು ಬಾಲಕರು

ಗುಂಪುಗೂಡಿಕೊಂಡು ಕೆಲಸಮಾಡಿದ ಬಳಿಕ ಒಬ್ಬರು ಇನ್ನೊಬ್ಬರ ಗುಣದೋಷಗಳನ್ನು ಕಂಡುಹಿಡಿದು ತಪ್ಪು ತಿದ್ದುವಂತೆ ಮಾಡಬೇಕು. ಪ್ರಕೃತಿ ವಿಮರ್ಶೆಯ ಪಾಠಗಳಲ್ಲಿ ಪ್ರತಿ ಹುಡುಗನು ತನ್ನ ಕೆಲಸವನ್ನು ತನ್ನಷ್ಟಕ್ಕೆ ತಾನೇ ಮಾಡಬೇಕೆಂದಾಗಲಿ ಅದರ ಗುಣದೋಷಗಳ ಸಂಪೂರ್ಣ ಜವಾಬದಾರಿಯು ಅವನದೇ ಎಂದಾಗಲಿ ಬೇರೆ ನಿರ್ಧರಿಸುವ ಆವಶ್ಯಕತೆಯಿರದು. ನಾಲ್ಕು ಜನರು ಕೂಡಿ ಕೆಲಸ ಮಾಡಿ ಒಬ್ಬರ ಕೊರತೆಗಳನ್ನು ಇನ್ನೊಬ್ಬರು ಪೂರೈಸಿ ಕೆಲಸ ಮಾಡುತ್ತ ಸಾಗುವದು ಹೆಚ್ಚು ಪರಿಣಾಮಕಾರಿಯಾಗುವದು. ಇದರಿಂದ ಅವರ ಜ್ಞಾನಾಭಿವೃದ್ಧಿಗೆ ಸಹಾಯವಾಗುವದು. ಇಷ್ಟೇ ಅಲ್ಲ, ಅವರಲ್ಲಿ ಪರಸ್ಪರ ಸಹಕಾರಿತೆಯಿಂದ ಕೆಲಸಮಾಡುವ ರೂಢಿಯುಂಟಾಗುವದು. ಯಾವದೊಂದು ಮಹತ್ವದ ಮಾತನ್ನು ವರ್ಗದ ಮುಂದಿಟ್ಟು ಅದರ ಸಂಬಂಧದಿಂದ ಪ್ರತಿ ಹುಡುಗನ ಅಭಿಪ್ರಾಯವನ್ನು ಕೇಳುವದರಿಂದಲೂ ಅವರು ಪರಸ್ಪರರ ಗುಣದೋಷಗಳನ್ನು ಖಂಡನಮಂಡನ ಮಾಡುತ್ತ ಸಾಗುವದರಿಂದಲೂ ತುಂಬ ಪ್ರಯೋಜನವುಂಟು.

ಬಾಲಕರು ಚಿತ್ರತೆಗೆಯುವದನ್ನು ಪ್ರೀತಿಸುವಂತೆಯೇ ಪ್ರತಿರೂಪಗಳನ್ನು ಮಾಡುವದರಲ್ಲಿಯೂ ಆಸ್ಥೆಯುಳ್ಳವರಾಗಿರುವರು. ಈ ಕೆಲಸಕ್ಕೆ ಬೇಕಾಗುವ ಉಪಕರಣಗಳನ್ನೆಲ್ಲ ಸಾಧ್ಯವಿದ್ದಮಟ್ಟಿಗೆ ಬಾಲಕರೇ ಒದಗಿಸಿಕೊಳ್ಳಬೇಕು. ಮತ್ತು ಅವರು ಮಾಡಿದ ಪ್ರತಿರೂಪ (ಮಾಡೆಲ್ಲು)ಗಳು ಕ್ರಮಕ್ರಮವಾಗಿ ಹೆಚ್ಚು ಹೆಚ್ಚು ಪರಿಪೂರ್ಣವಾಗುವಂತೆ ನೋಡಿಕೊಳ್ಳಬೇಕು.

ಪ್ರಯೋಗಗಳನ್ನು ಮಾಡಿ ನೋಡಿ ಯಾವದೊಂದು ಮಾತನ್ನು ಮನಗಾಣುವ ಸಂದರ್ಭವಿರುವಾಗ ಆ ಪ್ರಯೋಗಕ್ಕೆ ಬೇಕಾಗುವ ಉಪಕರಣಗಳನ್ನು ಸಾಧ್ಯವಿದ್ದ ಮಟ್ಟಿಗೂ ಬಾಲಕರೇ ಒದಗಿಸಿಕೊಳ್ಳತಕ್ಕದ್ದು. ಇದರಿಂದ ತುಂಬ ಪ್ರಯೋಜನವುಂಟು; ಯಾಕಂದರೆ ಬಾಲಕರು ಶಾಲೆಯ ಹೊರಗಡೆಯಲ್ಲಿ ಕೆಲಸ ಮಾಡುವಾಗಲೂ ಶಾಲೆಯ ವಯಸ್ಸು ಮೀರಿದ ಮುಂದಿನ ಆಯುಷ್ಯದಲ್ಲಿಯೂ ಈ ತರದ ಕೆಲಸ ಮಾಡುವ ರೂಢಿಯುಳ್ಳವರಾಗುವದು ನಮ್ಮ ಧ್ಯೇಯವಾಗಿರುವದರಿಂದಲೂ ಆ ಸಂದರ್ಭಗಳಲ್ಲೆಲ್ಲ ಅವರು ತಮಗೆ ಬೇಕಾಗುವ ಉಪಕರಣಗಳನ್ನು ತಾವೇ ಒದಗಿಸಿಕೊಳ್ಳಬೇಕಾಗುವದರಿಂದಲೂ ಆ ರೂಢಿಯನ್ನು ಈಗಿನಿಂದಲೇ ಮಾಡುವದು ಅತ್ಯವಶ್ಯವಾಗಿದೆ.

ಹುಡುಗರಿಗೆ ಯಾವ ಮಾತಿನಲ್ಲಿಯೇ ಆಗಲಿ ವಿವರಣೆಯೂ ಪರಿಪೂರ್ಣತೆಯೂ ಬೇಕೆನಿಸುವದು. ಅಡ್ಡ ತಿಡ್ಡ ಆಕೃತಿ, ಅಕ್ರಮವಾದ ವರ್ಣನೆ, ತಪ್ಪು ತಡೆಗಳುಳ್ಳ ಮಾತುಕತೆ ಇವು ಬಾಲಕರಿಗೆ ಸ್ವಾಭಾವಿಕವಾಗಿ ಸೇರುತ್ತಿರುವದಿಲ್ಲ. ಚಿಕ್ಕಮಕ್ಕಳ ಮುಂದೆ ಕತೆ ಹೇಳುವಾಗ ಒಮ್ಮೆ ಹೇಳಿದ ಮಾತನ್ನೇ ಮತ್ತೊಮ್ಮೆ ಬದಲು ಶಬ್ದಗಳಿಂದ ಹೇಳಿದರೆ ಅವರು ಅದನ್ನು ಒಪ್ಪಿಕೊಳ್ಳುತ್ತಿರುವದಿಲ್ಲವೆಂಬದು ಶಿಕ್ಷಕರ ದಿನದ ಅನುಭವದ ಸಂಗತಿಯಾಗಿದೆ. ಈ ಒಲವನ್ನು ಶಿಕ್ಷಕನು ಲಕ್ಷ್ಯದಲ್ಲಿಟ್ಟುಕೊಂಡು ಅದನ್ನು ಬೆಳೆಯಿಸುವದಕ್ಕೆ ಯತ್ನಿಸುತ್ತಿರಬೇಕು.

ಬಾಲಕರು ತಾವು ನೋಡಿದ ಪ್ರಾಣಿ ವನಸ್ಪತಿಗಳ ಯಾದಿಯನ್ನು ಇಟ್ಟಿರಬೇಕು. ಹವಾಮಾನದ ಪಟದಲ್ಲಿ ಪ್ರತಿ ತಿಂಗಳಲ್ಲಿ ಮಳೆ ಬೀಳುತ್ತಿದ್ದ ದಿನಗಳು ಎಷ್ಟು ? ಯಾವವು ? ಎಷ್ಟು ಮಳೆಯಾಯಿತು ? ಆ ದಿನದ ಉಷ್ಣತಾಮಾನವೆಷ್ಟು ? ಆಕಾಶವು ನಿರ್ಮಲವಾಗಿದ್ದ ದಿನಗಳು ಎಷ್ಟು ? ಯಾವವು? ಮುಂತಾದ ಸಂಗತಿಗಳನ್ನು ಕ್ರಮಕ್ರಮವಾಗಿ ಬರೆದಿಟ್ಟಿರಬೇಕು. ಅದರಂತೆಯೇ ಅವರ ಪಾಠಕ್ಕೆ ಸಂಬಂಧಿಸಿದ ವಸ್ತುಗಳನ್ನು ಸಂಗ್ರಹಿಸಿ ವಿವಕ್ಷಿತವಾದ ಸ್ಥಳದಲ್ಲಿ ಗೊತ್ತುಪಡಿಸಿದ ಕ್ರಮದಲ್ಲಿ ಹೊಂದಿಸಿಟ್ಟು ಬಳಿಯಲ್ಲಿಯೇ ಅವುಗಳ ಸಾಕಾದಷ್ಟು ವರ್ಣನೆಯನ್ನೂ ಬರೆದಿಡುವಂತೆ ಮಾಡಬೇಕು. ತಕ್ಕತಲೆಬರೆಹಗಳಿಲ್ಲದ ಸಂಗ್ರಹವು ಪ್ರಯೋಜನಕಾರಿಯಾದುದಲ್ಲವೆಂಬದನ್ನು ಮರೆಯಲಾಗದು. ಶಿಕ್ಷಕನು ಈ ಕಾರ್ಯದಲ್ಲಿ ಬಾಲಕರಿಗೆ ಕೇವಲ ಮಾರ್ಗದರ್ಶಿಯಾಗಿರಬೇಕಲ್ಲದೆ ತಾನೇ ಯಾವ ಕೆಲಸವನ್ನೂ ಮಾಡಕೂಡದು.

ಪ್ರಕೃತಿವಿಮರ್ಶೆಯ ಪಾಠಗಳನ್ನು ಚಿತ್ರಗಳು ಪ್ರತಿಮೆಗಳು (ಮಾಡೆಲ್ಲುಗಳು) ಇವುಗಳ ಸಹಾಯದಿಂದ ಎಂದೂ ಸಾಗಿಸಕೂಡದು. ಈ ವಿಷಯದಲ್ಲಿ ಪ್ರತ್ಯಕ್ಷ ವಸ್ತುವನ್ನು ಇಲ್ಲವೆ ಪ್ರಾಣಿಯನ್ನು ಅದರ ಸ್ವಾಭಾವಿಕವಾದ ಸ್ಥಿತಿಯಲ್ಲಿಯೇ ನಿರೀಕ್ಷಣೆಮಾಡಬೇಕೆಂಬದು ಎಂದೂ ಮುರಿಯಲಾಗದ ನಿರ್ಬಂಧವೆಂಬದನ್ನು ಸದಾ ಲಕ್ಷ್ಯದಲ್ಲಿಟ್ಟಿರಬೇಕು. ಆದುದರಿಂದ ಚಿತ್ರಗಳೂ ಪ್ರತಿಮೆಗಳೂ ಸಾಧ್ಯವಿದ್ದ ಮಟ್ಟಿಗೂ ಈ ಪಾಠದಲ್ಲಿ ಉಪಯೋಗಿಸಲ್ಪಡಲಾಗದು. ಕೆಲವೊಂದು ವಿಶಿಷ್ಟ ಸಂದರ್ಭಗಳಲ್ಲಿ ಇವನ್ನು ಉಪಯೋಗಿಸಬಹುದು. ಉದಾ: ಯಾವದಾದರೊಂದು ಸ್ಥಳದ ಪಕ್ಷಿಗಳ ಅಭ್ಯಾಸ ಮಾಡುವದಿದ್ದಾಗ ಅಲ್ಲಿಯ ಪಕ್ಷಿಗಳನ್ನು ತೋರಿಸುವ ಚಿತ್ರಪಟವನ್ನು ಬಾಲಕರು ನಿರೀಕ್ಷಿಸಿ ಬೇರೆಬೇರೆ ಪಕ್ಷಿಗಳನ್ನು ಗುರು

ತಿಸುವ ರೂಢಿ ಮಾಡಿಕೊಂಡರೆ ಆಯಾ ಜಾತಿಯ ಪಕ್ಷಿಗಳನ್ನು ಊರಲ್ಲಿ ಸ್ವಾಭಾವಿಕ ಸ್ಥಿತಿಯಲ್ಲಿ ನೋಡಿದಾಗ ಗುರುತುಹಿಡಿಯಲಿಕ್ಕೆ ಅದರಿಂದ ಪ್ರಯೋಜನವಾಗಬಹುದು. ಪ್ರತ್ಯಕ್ಷ ವಸ್ತುಗಳನ್ನು ತೋರಿಸಿಯೇ ಪಾಠಸಾಗಿಸುತ್ತೇನೆಂದು ಭಾವಿಸಿ ಹೂವಿನ ಪಾಠ ಕಲಿಸುವದಿದ್ದಾಗ ಅನೇಕಾನೇಕ ಜಾತಿಗಳ ಹೂವುಗಳನ್ನೆಲ್ಲ ಹರಿದು ತಂದು ಬುಟ್ಟಿಯಲ್ಲಿ ತುಂಬಿ ಹುಡುಗರ ಮುಂದಿಟ್ಟು ಪಾಠವನ್ನು ಪ್ರಾರಂಭಿಸುವದು ಎಂದೂ ಸರಿಯೆನಿಸಲಾರದು. ಗಿಡದಲ್ಲಿ ಸ್ವಾಭಾವಿಕ ಸ್ಥಿತಿಯಲ್ಲಿದ್ದ ಒಂದೇ ಹೂವಿಗೆ ಹರಿದು ತಂದ ಸಾವಿರ ಹೂಗಳೂ ಸರಿಯಾಗಲಾರವು.

ಆರಂಭದ ಪಾಠಗಳಲ್ಲಿ ಸಜೀವ ಸ್ವಾಭಾವಿಕ ಪ್ರಾಣಿ ವನಸ್ಪತಿಗಳನ್ನೇ ಬಾಲಕರು ನೋಡಬೇಕು. ಚಿಕ್ಕ ಬಾಲಕರಲ್ಲಿ ಹರಿಯುವ ಮುರಿಯುವ ಕೆಡಿಸುವ ಪ್ರವೃತ್ತಿ ಬಹಳ. ಇದನ್ನು ಶಿಕ್ಷಕನು ಯೋಗ್ಯ ಮಾರ್ಗದಿಂದ ಪ್ರತಿಬಂಧಿಸಬೇಕು. ಪ್ರಾಣಿ ವನಸ್ಪತಿಗಳ ವಿಷಯವಾಗಿ ತಕ್ಕಷ್ಟು ಸಹಾನುಭೂತಿಯುಳ್ಳವರಾಗಿ ಅವುಗಳಿಗೆ ತೊಂದರೆಯಾಗದಂತೆ ನಾವು ನಡೆದುಕೊಳ್ಳಬೇಕೆಂದೂ ಪ್ರಕೃತಿಯ ಸೌಂದರ್ಯವನ್ನು ನೋಡಿ ಆನಂದಪಡುವದಿಷ್ಟೇ ನಮ್ಮ ಕರ್ತವ್ಯವೆಂದೂ ಬಾಲಕರು ಮನಗಾಣುವಂತೆ ಮಾಡುವದು ಅತಿ ಮಹತ್ವದ ಮಾತು. ಉದಾ :- ಹೂವಿನ ವಿಷಯವಾಗಿ ಪಾಠ ನಡೆದಿದ್ದರೆ ಚಿಕ್ಕ ಬಾಲಕರು ಅದನ್ನು ಗಿಡದಲ್ಲಿರುವಾಗಲೇ ನೋಡಿ ನಿರೀಕ್ಷಿಸಬೇಕು. ೪ ನೆಯ ಇಯತ್ತೆಗಳ ವಿದ್ಯಾರ್ಥಿಗಳು ಮಾತ್ರ ಅವಶ್ಯಕವೆನಿಸುವ ಒಂದೆರಡು ಹೂಗಳನ್ನು ಕೈಗೆ ತೆಗೆದುಕೊಂಡು ಅವುಗಳ ಅವಯವಗಳನ್ನು ಬೇರೆ ಮಾಡಿ ನಿರೀಕ್ಷಿಸಬಹುದು. ಅದರಂತೆಯೇ ಕ್ರಿಮಿಕೀಟಕಗಳು ಪ್ರಾಣಿಗಳು ಇವುಗಳ ವಿಷಯದಲ್ಲಿಯೂ ತಕ್ಕಷ್ಟು ಎಚ್ಚರಿಕೆಯಿಂದಲೇ ಇರಬೇಕು.

ಗ್ರಾಮಸುಧಾರಣೆಯ ವಿಚಾರಗಳು

ಕಳೆದ ಜೂನ ತಿಂಗಳ ಸಂಚಿಕೆಯಲ್ಲಿ ಗ್ರಾಮಸುಧಾರಣೆಯ ವಿಷಯವಾಗಿ ಕೆಲವು ಮಹತ್ವದ ಸಂಗತಿಗಳು ಬರೆಯಲ್ಪಟ್ಟವೆ. ಅದಕ್ಕೇ ಸಂಬಂಧಿಸಿದ ಮತ್ತೆ ಕೆಲವು ಉಪವಿಷಯಗಳನ್ನು ಕುರಿತು ಇಲ್ಲಿ ಕೆಲವು ಮಾತುಗಳನ್ನು ಹೇಳುವೆವು.

೧ ಒಕ್ಕಲಿಗರ ಬಾಳುವೆ— ಕಾಲಕಾಲಕ್ಕೆ ಮಳೆ ಆಗದ್ದರಿಂದಲೂ ನೈತರ ನೂತನಕಾಲಕ್ಕನುಸರಿಸಿ ತಮ್ಮ ಉದ್ಯೋಗದಲ್ಲಿ ಸುಧಾರಣೆಮಾಡಿಕೊಳ್ಳದ್ದರಿಂದಲೂ ಹಳ್ಳಿಗಳು ಬಡತನದ ಬೀಡಾಗುತ್ತ ನಡೆದಿವೆ. ಹಳ್ಳಿಯ ಬಡತನವನ್ನು ದೂರಮಾಡುವದಕ್ಕಾಗಿ ಹೊಸ ಹೊಸ ಉಪಾಯಗಳನ್ನು ಆಲೋಚಿಸಿ ಅವುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಪ್ರಚಾರದಲ್ಲಿ ತರುವದೇ ಗ್ರಾಮಸುಧಾರಣೆಯ ಮುಖ್ಯವಾದ ದಾರಿಯೆಂದು ತಿಳಿಯಬೇಕು. ಹಳ್ಳಿಗರ ನಾಡಾಗಿರುವ ನಮ್ಮ ದೇಶದ ಬಡತನದ ಸ್ಥಿತಿಯನ್ನು ತಿಳಿಸುವಂತೆ ಈ ದೇಶದ ಪ್ರತಿಯೊಬ್ಬನ ವಾರ್ಷಿಕ ಉತ್ಪನ್ನವನ್ನು (ಸನ್ ೧೯೧೩ ೧೪ರಲ್ಲಿ)ಇತರ ದೇಶಗಳ ವಾರ್ಷಿಕ ಉತ್ಪನ್ನದೊಡನೆ ಹೋಲಿಸಿ ನೋಡಿರಿ.

ದೇಶಗಳು	ಅಲ್ಲಿಯ ಪ್ರತಿಯೊಬ್ಬನ ಸರಾಸರಿ ವಾರ್ಷಿಕ ಉತ್ಪನ್ನ
ಅಮೇರಿಕಾ	೭೨ ಪೌಂಡು
ಇಂಗ್ಲಂಡ	೫೨ ಪೌಂಡು
ಕಾನಡಾ	೪೦ ಪೌಂಡು
ಫ್ರಾನ್ಸ	೩೮ ಪೌಂಡು
ಜರ್ಮನಿ	೩೦ ಪೌಂಡು
ಹಿಂದುಸ್ಥಾನ	೩ ಪೌಂಡು

ಮುಂದೆ ೧೯೨೧-೧೯೨೨ ನೆಯ ವರ್ಷದಿಂದ ಕೆಲವು ವರ್ಷಗಳಲ್ಲಿ ನಮ್ಮಲ್ಲಿ ಮಳೆಬೆಳೆಗಳು ಚೆನ್ನಾಗಿ ಆದುದರಿಂದಲೂ ಕಾಳುಕಡಿ ಹತ್ತಿ ಇವುಗಳ ಬೆಲೆಯು ಏರಿದ್ದರಿಂದಲೂ ಉತ್ಪನ್ನವು ಸರಾಸರಿಯಾಗಿ ಸ್ವಲ್ಪ ಹೆಚ್ಚಾದರೂ ಕೊಳ್ಳುವ ಪದಾರ್ಥಗಳ ಪೇಟೆಯಧಾರಣೆಯೂ ಅದೇ ಪ್ರಮಾಣದಲ್ಲಿ ಬೆಳೆದದ್ದರಿಂದ ಜನರ ಜೀವನವು ಹೆಚ್ಚು ಸುಖಕರವಾಗಲಿಲ್ಲ. ಇದೇ ವೇಳೆಯಲ್ಲಿ ಇತರ ದೇಶಗಳಲ್ಲಿ ಭೌತಿಕ ಶಾಸ್ತ್ರದ ಪ್ರಗತಿಯಾಗಿ ಅವು ಹೆಚ್ಚು ಹೆಚ್ಚು ಸಂಪನ್ನವೂ ಸಮೃದ್ಧವೂ ಆಗುತ್ತ ನಡೆದು ಹಿಂದುಸ್ತಾನದ ವ್ಯಾಪಾರದ ಮೇಲೆ ಅದರ ಪರಿಣಾಮವಾಯಿತು. ಒಟ್ಟಿನಮೇಲೆ ಈ ಅವಧಿಯಲ್ಲಿಯೂ ನಮ್ಮವರ ವಾರ್ಷಿಕ ಉತ್ಪನ್ನವು ಹೆಚ್ಚದೆ ಅಷ್ಟೇ ಉಳಿಯಿತೆನ್ನಲಿಕ್ಕೆ ಏನೂ ಅಡ್ಡಿಯಿಲ್ಲ. ಈಗ ನಾಲ್ಕೈದು ವರ್ಷಗಳಿಂದ ಮಾತ್ರ ಸಾಕಷ್ಟು ಮಳೆಯು ಕಾಲಕಾಲಕ್ಕೆ ಆಗದ್ದರಿಂದ ನಮ್ಮದೇಶದ ಒಕ್ಕಲಿಗರ ಸ್ಥಿತಿಯು ತೀರ ಸಂಪುಷ್ಟಕ್ಕೆ ಬಂದಿದೆ. ಹಳ್ಳಿಗಳಿಗೆ ಹೋದ ಪ್ರತಿಯೊಬ್ಬ ಸುಧಾರ

ಕನಿಗೆ ಈ ಸಂಗತಿಯು ಮೊದಲು ಒಡೆದು ಕಾಣುವದು. ಈಗ ಹತ್ತು ಹದಿನೈದು ವರ್ಷಗಳ ಕೆಳಗೆ ಚೆನ್ನಾಗಿ ಬೆಳೆಯುವ ಹೊಲಗಳೆಲ್ಲ ಕರಿಕೆಯಿಂದ ಮುಚ್ಚಿ ಹೋಗಿವೆ. ಹೊಲಗಳ ಒಡ್ಡುಗಳೆಲ್ಲ ಒಡೆದು ಕೊರಕಲುಗಳು ಬಿದ್ದಿವೆ. ಒಳ್ಳೊಳ್ಳೆಯ ಭೂಮಿಗಳೆಷ್ಟೋ ಸಾಗಾಗದೆ ಬೀಳುಬಿದ್ದಿರುವವು. ಸಾಗಾದ ಭೂಮಿಗಳಲ್ಲಿ ಬೆಳೆದ ಕಾಳುಕಡಿಗಳಿಗೂ ಪೇಟೆಯಲ್ಲಿ ತಕ್ಕ ಬೆಲೆಯಿಲ್ಲ. ಹತ್ತಿ, ಗೋದಿ, ಜೋಳ ಅಕ್ಕಿ ಮೊದಲಾದ ಹುಟ್ಟುವಳಿಗಳ ಬೆಲೆ ಇಳಿದು ಹೋಗಿದೆ. ಆದುದರಿಂದ ರೈತರು ತೀರ ಕಂಗಾಲರಾಗಿರುತ್ತಾರೆ. ಭೂಮಿಗಳ ಮಾಲಕರು ರೈತರ ಮೇಲೆ ಮಾಡಿದ ಮುದ್ದತಿ ದಾವೆಗಳ ಸಂಖ್ಯೆಯು ಮಿತಿಮೀರಿ ಬೆಳೆದಿದೆ. ಹಣವನ್ನು ಕೊಡಬೇಕೆಂದು ಅಧಿಕಾರಿಗಳು ನಿರ್ಣಯಿಸಿದ ಹಣ ವಸೂಲ ಮಾಡಲಿಕ್ಕೆ ರೈತರ ಬಳಿಯಲ್ಲಿ ಧಾನ್ಯದವಸಗಳೂ ಉಳಿದಿರುವದಿಲ್ಲ. ಎತ್ತು, ಮನೆ ಇವುಗಳನ್ನು ಜಪ್ತಮಾಡಲಿಕ್ಕೆ ಕಾಯಿದೆಯಿಂದ ನಿರ್ಬಂಧವಿದೆ. ಆದುದರಿಂದ ತಮಗೆ ಬರತಕ್ಕದ್ದನ್ನು ಪಡೆಯಲು ಸಾಧ್ಯವಿಲ್ಲದಂತಾಗಲು ಜಮೀನದಾರರು ಸರಕಾರದ ತೆರಿಗೆಯನ್ನು ಕೊಡುವದಕ್ಕೂ ಅಸಮರ್ಥರಾಗಿರುವರು. ಒಟ್ಟಾರೆ ಹಳ್ಳಿಗಳ ಜೀವನ ಸಾಧನವಾದ ಒಕ್ಕಲತನವನ್ನು ಸುಧಾರಿಸುವದು ಗ್ರಾಮಸುಧಾರಣೆಯ ಮೊದಲನೆಯ ಕೆಲಸವಾಗಿದೆ. ತಜ್ಞರು ಸರಕಾರದ ಬೆಂಬಲದಿಂದ ಒಕ್ಕಲತನದ ಸುಧಾರಣೆಯ ವಿಷಯಗಳನ್ನು ಅಲ್ಲಲ್ಲಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ, ವರ್ಗಗಳನ್ನು ಪ್ರಾರಂಭಿಸಿ, ವಿಶದವಾಗಿ ತಿಳಿಸಿ ಹೇಳುತ್ತಿದ್ದಾರೆ. ಹಳ್ಳಿಗಳ ಶಾಲೆಯ ಮಾಸ್ತರರೂ ಸುಶಿಕ್ಷಿತರೂ ಅಧಿಕಾರಸ್ಥರೂ ರೈತರಿಗೆ ಈ ವಿಷಯವನ್ನು ತಿಳಿಯ ಹೇಳಿ ಕೈಲಾದ ಮಟ್ಟಿಗೆ ನೆರವಾಗುವದು ಅವಶ್ಯಕವಾಗಿದೆ.

೨. **ಆಹಾರ ಸಾಮುಗ್ರಿಗಳ ಕೊರತೆ**—ಹಳ್ಳಿಗಳಲ್ಲಿ ಬಡತನವು ನೆಲೆಗೊಂಡಿದೆಯೆಂದು ಹಿಂದೆ ಹೇಳಿದೆ. ಆದ್ದರಿಂದ ಹಣದ ಆಶೆಗಾಗಿ ಹೊರಗೆ ಹೋಗತಕ್ಕಷ್ಟು ಹೋಗಿ ಉಳಿಯುವ ಧಾನ್ಯವು ಅಲ್ಲಿಯ ಜನರ ಜೀವನಕ್ಕೆ ಸಾಲುವಷ್ಟು ಇಲ್ಲೆಂದು ಲೆಕ್ಕದಿಂದ ಗೊತ್ತಾಗಿದೆ. ಡಾ. ರಜನೀಕಾಂತದಾಸರು ಪ್ರತಿಯೊಬ್ಬನಿಗೆ ಪ್ರತಿದಿನ ೨೨ ಔಂಸಿನಂತೆ ಪ್ರತಿವರ್ಷಕ್ಕೆ ೫೧೦ ಪೌಂಡ ಧಾನ್ಯವು ಬೇಕೆಂದು ಗೊತ್ತು ಮಾಡಿ ನಮ್ಮ ದೇಶಕ್ಕೆ ಪ್ರತಿವರ್ಷ ೧೨೫ ದಶಲಕ್ಷ ಟನ್ನ ಧಾನ್ಯವು ಬೇಕೆಂದು ಲೆಕ್ಕ ತೆಗೆದಿದ್ದಾರೆ. ೧೯೨೧ನೆಯ ಇಸವಿಯಲ್ಲಿ ೮೦ ದಶಲಕ್ಷ ಟನ್ನ ಧಾನ್ಯವು ಮಾತ್ರ ನಮ್ಮಲ್ಲಿ

ಬೆಳೆದ ಲೆಕ್ಕವನ್ನು ನೋಡಲಾಗಿ ನಮ್ಮ ದೇಶಕ್ಕೆ ಬೇಕಾಗುವಷ್ಟು ಧಾನ್ಯವು ಇಲ್ಲಿ ಹುಟ್ಟುವದಿಲ್ಲವೆಂದು ಸಿದ್ಧವಾಗುವದು. ಅಂದಮೇಲೆ ಎಲ್ಲ ಹಳ್ಳಿಗಳಲ್ಲಿ ಸರಿಯಾಗಿ ಒಕ್ಕಲತನ ನಡೆಯುವ ಆವಶ್ಯಕತೆಯು ಎಷ್ಟಿರುತ್ತದೆಂಬದು ಸಹಜವಾಗಿ ಗೊತ್ತಾಗುವಂತೆ ಅದೆ.

೩. ಬೇನೆ ಬೇಸರಿಕೆಗಳು—ಮಲೆನಾಡಿನ ಹಳ್ಳಿಗಳಲ್ಲಿ ಮಲೇರಿಯಾ ರೋಗದಿಂದ ಸಾಯುವ ಹಾಗು ಬಲಹೀನರಾಗುವ ಜನರ ಸಂಖ್ಯೆಯು ಹೆಚ್ಚುತ್ತ ನಡೆದದೆ. ೧೯೦೧-೧೧ರ ನಡುವೆ ೮೬ ಲಕ್ಷ ಜನರೂ ೧೯೧೧-೨೧ ನಡುವಿನ ಅವಧಿಯಲ್ಲಿ ಲಕ್ಷ ಜನರೂ ನಮ್ಮ ದೇಶದಲ್ಲಿ ಈ ಬೇನೆಗೆ ತುತ್ತಾಗಿರುವರು. ಹೀಗೆ ಸಾಯುವವರ ಪ್ರಮಾಣವು ದಿನದಿನಕ್ಕೆ ಹೆಚ್ಚುತ್ತ ನಡೆದಿರುವದು ಬಹುದುಃಖದ ಸಂಗತಿಯು! ಹೀಗೆ ಸಾಯುವವರ ಸಂಖ್ಯೆಯಲ್ಲಿ ಹಳ್ಳಿವಾಡದವರೇ ಹೆಚ್ಚು. ಪಟ್ಟಣಗಳಲ್ಲಿ ಮುನಸಿಪಾಲಟಿಯವರೂ ಅಧಿಕಾರಸ್ಥರೂ ಆ ಬೇನೆ ಬಾರದಂತೆ ಪ್ರತಿಬಂಧಕ ಉಪಾಯಗಳನ್ನು ಕಲ್ಪಿಸುತ್ತಾರೆ. ಪಟ್ಟಣಿಗರಿಗೆ ಬೇನೆ ಬಂದಾಗ ಡಾಕ್ಟರರ ನೆರವೂ ದೊರೆಯುವದು. ಹಳ್ಳಿಗರಿಗೆ ಇವಾವ ನೆರವುಗಳೂ ದೊರೆಯುವದಿಲ್ಲ. ಈ ಬೇನೆಯಿಂದ ಸಾಯುವವರ ಸಂಖ್ಯೆಗಿಂತ ಸತ್ವಹೀನರಾಗಿ ಉಳಿಯುವವರ ಸಂಖ್ಯೆಯೂ ಸತ್ತ ಮನುಷ್ಯನ ಅನಾಥ ಹೆಂಡಿರು ಮಕ್ಕಳ ಸಂಖ್ಯೆಯೂ ಹೆಚ್ಚಾಗಿರುತ್ತದೆ. ಆದ್ದರಿಂದ ಮಲೇರಿಯಾ ರೋಗದ ಹಾವಳಿಯನ್ನು ತಡೆಯುವ ಉಪಾಯಗಳನ್ನು ಹಳ್ಳಿಯ ನಿವಾಸಿಗಳಿಗೆ ತಿಳಿಸಿಕೊಡುವದು ಒಂದು ಮಹತ್ವದ ಮಾತು. ಶಿಕ್ಷಕ ವರ್ಗವು ಈ ವಿಷಯಗಳ ಕಡೆಗೆ ಲಕ್ಷ್ಯಪೂರೈಸಿದರೆ ಸ್ವಾರ್ಥ ಪರಾರ್ಥಗಳೆರಡೂ ಸಾಧಿಸುವಂತಿವೆ.

—— o —— o ——

ಭೂಗೋಲದ ಪಾಠಗಳು

ಚಹಾಕಾಫಿಗಳು

ಪಾಶ್ಚಿಮಾತ್ಯ ದೇಶಗಳ ಸಂಸರ್ಗದಿಂದ ನಮ್ಮ ಜನರಲ್ಲಿ ಅನೇಕ ಗುಣಾವಗುಣಗಳು ಸೇರಿಕೊಂಡವೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಅವುಗಳಲ್ಲಿ ಚಹಾ ಕಾಫಿಗಳನ್ನು ಕುಡಿಯುವ ಅಭ್ಯಾಸವು ನಮ್ಮವರಲ್ಲಿ ದಿನದಿನಕ್ಕೂ ಹೆಚ್ಚುಹೆಚ್ಚಾಗಿ ಹಬ್ಬುತ್ತ ನಡೆದಿರುವ ಅತಿ ಪ್ರಬಲವಾದ ಒಂದು ರೂಢಿಯೆಂದು ಹೇಳಬೇಕಾಗಿದೆ. ಈಚೆಗೆ ಬಡವರಿಂದ ಶ್ರೀಮಂತರ ವರೆಗಿನ ಎಲ್ಲ ತರಗತಿಗಳ ಜನರೂ ನಮ್ಮಲ್ಲಿ ಚಹಾ ಕಾಫಿಗಳನ್ನು ಉಪಯೋಗಿಸುತ್ತಿರುವರು. ನಮಗೆ ಇಷ್ಟು ಅತಿ ಪರಿಚಿತವಾದ ಚಹಾ ಕಾಫಿಗಳ ಇತಿಹಾಸವನ್ನೂ ಅವುಗಳ ಸದ್ಯದ ಹುಟ್ಟುವಳಿ ಆಯಾತನಿರ್ಗತ ವ್ಯಾಪಾರಗಳ ಸಂಕ್ಷೇಪ ವಿವರಣೆಯನ್ನೂ ಹೇಳುವದೇ ಪ್ರಕೃತಲೇಖನದ ಉದ್ದೇಶವು. ಕಳೆದ ಸಂಚಿಕೆಯಲ್ಲಿ ವಿವರಿಸಿದ ಕಲ್ಲೆಣ್ಣೆಯ ಕತೆಯಂತೆಯೇ ಇದನ್ನೂ ಒಂದು ಭೂಗೋಲದ ಪಾಠವಾಗಿ ಶಿಕ್ಷಕರು ಉಪಯೋಗಿಸಿಕೊಳ್ಳಬಹುದು.

ಚಹಾ— ಚೀನ ದೇಶವು ಚಹಾದ ತವರುಮನೆ. ಅಲ್ಲಿಂದಲೇ ಅದು ಪಶ್ಚಿಮ ದೇಶಗಳಿಗೆ ಹೋಯಿತು. ಈ ವಿಷಯದಲ್ಲಿ ಒಂದು ಚಮತ್ಕಾರವಾದ ಕತೆಯನ್ನು ಹೇಳುವದುಂಟು. ಇಂಗ್ಲಂಡದೊಳಗಿನ ಒಬ್ಬ ಮುದುಕಿಗೆ ಪೂರ್ವದೇಶಗಳಿಗೆ ಪ್ರವಾಸಕ್ಕಾಗಿ ಬಂದ ಸ್ನೇಹಿತನೊಬ್ಬನು ೧ ಪೌಂಡು ಚಹಾವನ್ನು ಪ್ರೀತಿಯ ಗುರುತೆಂದು ಕಳುಹಿಸಿದನಂತೆ. ಅವನು ಅದನ್ನು ಹೇಗೆ ಉಪಯೋಗಿಸಬೇಕೆಂಬದನ್ನುಹೇಳುವಾಗ "ಇವನ್ನು ಕುದಿಯುವ ನೀರೊಳಗೆ ಹಾಕಿ ಚಹಾವನ್ನು ತಯಾರಿಸಿಕೊಳ್ಳಬೇಕು" ಎಂದಿಷ್ಟೇ ಹೇಳಿದ್ದನು. ಮುದುಕಿಯು ಅಷ್ಟೆಲ್ಲ ಪುಡಿಯನ್ನು ಕುದಿಯುವ ನೀರೊಳಗೆ ಸುರಿದು ಸ್ವಲ್ಪ ಹೊತ್ತು ಇಟ್ಟು ನೀರನ್ನೆಲ್ಲ ಬಸಿದು ಚೆಲ್ಲಿ ಬಿಟ್ಟು, ಉಳಿಯುವ ಎಲೆಯನ್ನು ರೊಟ್ಟಿ ಬೆಣ್ಣೆಗಳ ಸಂಗಡ ಪಲ್ಲೆಯಂತೆ ಬಡಿಸಿಕೊಂಡು ತಿನ್ನಲಿಕ್ಕೆ ಕುಳಿತಳಂತೆ. ಅದೆಷ್ಟು ಅಸಹ್ಯವಾಗಿದ್ದಿತೋ ನೀವೇ ಆಲೋಚಿಸಿರಿ. ಮುದುಕಿಯು ಚಹಾದೊಡನೆ ರೊಟ್ಟಿ ಬೆಣ್ಣೆಗಳನ್ನೂ ದನಕ್ಕೆ ಹಾಕಿ ತಾನು ಬೇರೆ ಊಟ ತರಿಸಿ ಉಂಡಳಂತೆ. ಈ ಸ್ಥಿತಿಯು ಬಹುಕಾಲ ಉಳಿಯಲಿಲ್ಲ. ಈಗಂತೂ ಇಂಗ್ಲಂಡದಲ್ಲಿ ಚಹಾ ಪಾನವು

ಎಷ್ಟು ಸಾರ್ವಜನಿಕವಾಗಿ ಜನರ ಜೀವನದ ಅತ್ಯವಶ್ಯವಾದ ಸಾಮಗ್ರಿಯೆನಿಸಿರುವ ದೆಂಬುದನ್ನು ಮುಂದೆ ನೋಡಬಹುದು.

ಚಹಾವು ಉಷ್ಣದೇಶಗಳಲ್ಲಿ ಬೆಳೆಯುವ ಒಂದು ಬಗೆಯ ಕಂಟಿಯ ಎಲೆ. ಅದನ್ನು ಹದನೋಡಿ ಕತ್ತರಿಸಿ ತಂದು ಒಣಗಿಸಿ ತಯಾರಿಸುವರು. ಹಿಂದೆ ಹೇಳಿದಂತೆ ಬ್ರಿಟಿಷರು ಫ್ರೆಂಚರು ಮೊದಲಾದ ಪಾಶ್ಚಿಮಾತ್ಯ ದೇಶಗಳ ಜನರು ನಮ್ಮ ದೇಶಕ್ಕೆ ಬಂದು ಇಲ್ಲಿ ನೆಲೆ ನಿಲ್ಲದಿದ್ದರೂ ಕೆಲಕಾಲದ ಮಟ್ಟಿಗಾದರೂ ವಾಸವಾಗಿದ್ದು ದೇಶೀ ಯರೊಡನೆ ಬಳಕೆ ಮಾಡತೊಡಗಿದ ತರುವಾಯವೇ ನಮ್ಮವರಲ್ಲಿ ಚಹಾಪಾನದ ಅಭ್ಯಾಸವು ಪ್ರಸಾರವಾಗುತ್ತ ಬಂದಿತು. ಸನ್ ೧೮೩೦ ರಲ್ಲಿ ಆಸಾಮದ ಬೆಟ್ಟ ಗಳಲ್ಲಿ ಚಹಾದ ಕಂಟಿಗಳು ಬೆಳೆದಿರುವದನ್ನು ನೋಡಿ ನಮ್ಮ ದೇಶದಲ್ಲಿ ಚಹಾದ ತೋಟಗಳನ್ನು ಪ್ರಾರಂಭಿಸಿದರೆ ಅದೊಂದು ಲಾಭಕರವಾದ ವ್ಯವಸಾಯವಾಗ ಬಹುದೆಂಬುದನ್ನು ಯುರೋಪಿಯನ್ನರು ಕಂಡುಕೊಂಡರು. ಈಸ್ಟ ಇಂಡಿಯಾ ಕಂಪನಿ ಯವರ ಲಕ್ಷ್ಯವು ಅತ್ತ ಕಡೆಗೆ ಹೋಗಲು ೧೮೩೪ ನೆಯ ಇಸ್ವಿಯಲ್ಲಿ ಮೊದಲನೆಯ ಚಹಾದ ತೋಟವು ಆರಂಭಿಸಲ್ಪಟ್ಟಿತು. ಆದರೂ ಅದೊಂದು ದೊಡ್ಡ ವ್ಯವಸಾಯ ವೆಂಬ ದೃಷ್ಟಿಯನ್ನಿಟ್ಟುಕೊಂಡ ಚಹಾದ ತೋಟಗಳು ೧೮೫೬ ರಿಂದ ೫೯ ವರೆಗಿನ ಕಾಲಾವಧಿಯಲ್ಲಿಯೇ ಪ್ರಾರಂಭವಾದವೆಂದು ಹೇಳಬೇಕಾಗಿದೆ. ಮತ್ತು ಅಂದಿನಿಂದ ಇಂದಿನವರೆಗಿನ ಸುಮಾರು ೬೦ ವರ್ಷಗಳ ಅಲ್ಪ ಅವಧಿಯಲ್ಲಿ ಬ್ರಿಟಿಷ ಸಾಮ್ರಾಜ್ಯವು ಜಗತ್ತಿನ ಚಹಾದ ತೋಟವೂ ಚಹಾದ ಅಂಗಡಿಯೂ ಎಂದು ಹೆಸರು ಪಡೆಯು ವಷ್ಟು ಈ ವ್ಯವಸಾಯವು ಬೆಳವಣಿಗೆ ಹೊಂದಿರುವದು. ಚಹಾದ ಕಂಟಿಗಳು ತಿಳಿಮಣ್ಣಿನ ಹೆಚ್ಚು ಸಾರವುಳ್ಳ ಭೂಮಿಯಲ್ಲಿ ಚೆನ್ನಾಗಿ ಬೆಳೆಯುವವು. ಆದರೆ ಭೂಮಿಯು ಎಷ್ಟೇ ಸಾರವುಳ್ಳದ್ದಿದ್ದರೂ ಜವುಳು ಪ್ರದೇಶದಲ್ಲಿ ಇವು ಹುಲುಸಾಗಿ ಬೆಳೆಯಲಾರವು. ವಿಶೇಷ ಮಳೆಯಾಗುತ್ತಿದ್ದು ಬಿದ್ದ ನೀರೆಲ್ಲ ಹರಿದು ಹೋಗಿ ಬಿಡು ವಂಥ ಗುಡ್ಡಗಳ ಇಳುಕಲಿನಲ್ಲಿ ಈ ಗಿಡಗಳು ಚೆನ್ನಾಗಿ ಬೆಳೆಯುವವು. ಈ ಗಿಡಗ ಳಿಗೆ ಬಿಸಿಲೂ ಬೇಕು. ಮಳೆಯ ನೀರು ಗಿಡದ ಬೇರುಗಳನ್ನು ತೊಯಿಸಿ ಹರಿದು ಹೋಗ ಬೇಕು; ಅಲ್ಲಿ ನಿಲ್ಲಬಾರದು. ಮೊದಲು ಅರಣ್ಯಗಳು ಬೆಳೆದಿದ್ದ ಇಂಥ ಗುಡ್ಡ ಗಾಡುಗಳಲ್ಲಿ, ಆರ್ದ್ರತೆಯುಳ್ಳ ಹವೆಯಿರುವ, ಉಷ್ಣದೇಶವಾಗಿದ್ದರೂ ಶೀತೋಷ್ಣ ಮಾನಗಳಲ್ಲಿ ತೀರ ವಿಷಮತೆಯಿಲ್ಲದಿರುವ, ಪ್ರದೇಶಗಳು ಚಹಾದ ತೋಟಕ್ಕೆ ಅತ್ಯು ತ್ತಮವಾದವೆಂದು ಗೊತ್ತಾಗಿವೆ. ಈಗಿನ ಚಹಾದ ತೋಟಗಳಿರುವ ಎಲ್ಲ ಪ್ರದೇಶಗಳು

ಒಂದಲ್ಲೊಂದು ಕಾಲದಲ್ಲಿ ಕಾಡಿನಿಂದ ಮುಚ್ಚಿದ್ದವು. ಚಹಾದ ತೋಟಗಳನ್ನು ಮಾಡಲಿಕ್ಕೆ ಆಳಿನ ಕೂಲಿಯ ವಿಷಯವೂ ಇನ್ನೊಂದು ಮಹತ್ವದ ವಿಚಾರಣೀಯವಾದ ಸಂಗತಿಯಾಗಿದೆ. ಹಿಂದುಸ್ತಾನ, ಚೀನ, ಸಿಂಹಲದ್ವೀಪ ಮತ್ತು ಜಪಾನದೇಶಗಳಲ್ಲಿಯೇ ಯಾಕೆ ವಿಸ್ತಾರವಾದ ಚಹಾದ ತೋಟಗಳಿರುವವೆಂಬದನ್ನು ಆಲೋಚಿಸಿ ನೋಡಿದರೆ ಈ ಮಾತು ತಿಳಿದುಬರುವದು. ಈ ದೇಶಗಳ ಜನರು ಬಡವರು; ಅಲ್ಪ ಸಂತೋಷಿಗಳು; ಶ್ರಮ ಸಹಿಷ್ಣುಗಳು; ಇವರ ಆಹಾರದಲ್ಲಿ ಅಕ್ಕಿಯೇ ಪ್ರಾಮುಖ್ಯವಾದ ಧಾನ್ಯ; ಇವರಿಗೆ ಬಟ್ಟೆಗಳ ಆವಶ್ಯಕತೆಯೂ ಕಡಿಮೆ. ಆದ್ದರಿಂದ ಇಲ್ಲಿ ಕೂಲಿಯದರವು ತೀರ ಕಡಿಮೆ. ಈ ಎಲ್ಲ ಮಾತುಗಳು ಅನುಕೂಲವಾಗಿರುವದರಿಂದ ಜಗತ್ತಿನಲ್ಲಿ ಹುಟ್ಟುವ ಚಹಾದ ದೊಡ್ಡ ಭಾಗವು ಹಿಂದುಸ್ತಾನ-ಸಿಂಹಲದ್ವೀಪಗಳಲ್ಲಿಯೇ ಹುಟ್ಟುವದು. ಮೂವತ್ತು ವರ್ಷಗಳ ಹಿಂದೆ ಚೀನವು ಚಹಾವನ್ನು ಬೆಳೆಯಿಸುವ ದೇಶಗಳಲ್ಲಿ ಮೊದಲನೆಯದೆಂದೂ ಇಂಗ್ಲಂಡಕ್ಕೆ ಬೇಕಾಗುವ ಚಹಾದ ನಾಲ್ಕುರಲ್ಲಿ ಮೂರು ಪಾಲಿಗಿಂತ ಹೆಚ್ಚು ಭಾಗವು ಇಲ್ಲಿಂದಲೇ ಹೋಗುತ್ತಿತ್ತೆಂದೂ ಕಂಡು ಬಂದಿರುವದು. ಆದರೆ ಈಚೆಗೆ ಹಿಂದುಸ್ತಾನ ಮತ್ತು ಸಿಂಹಲದ್ವೀಪಗಳಲ್ಲಿ ಚಹಾದ ತೋಟಗಳು ಹೆಚ್ಚಾದ್ದರಿಂದ ಚೀನವು ದಿನದಿನಕ್ಕೆ ಹಿಂದೆ ಬೀಳುತ್ತ ನಡೆದಿರುವದು. ಬ್ರಿಟಿಷರು ಹಿಂದುಸ್ತಾನ ಸಿಂಹಲದ್ವೀಪಗಳ ಚಹಾಕ್ಕೆ "ಎಂಪಾಯರ ಟೀ" ಎಂದು ಅಭಿಮಾನದ ಹೆಸರಿಟ್ಟುಕೊಂಡು ಅವನ್ನೇ ಹೆಚ್ಚಾಗಿ ಉಪಯೋಗಿಸುವರು. ಹಿಂದುಸ್ತಾನವು ಬ್ರಿಟಿಷ ಸಾಮ್ರಾಜ್ಯದ ಅಂಗವಾಗುವದಕ್ಕಿಂತ ಮೊದಲು ಇಂಗ್ಲಂಡದಲ್ಲಿ ೧ ಪೌಂಡ ಚಹಾಕ್ಕೆ ೧೫ ಶಿಲಿಂಗು ಬೀಳುತ್ತಿದ್ದರೆ ಈಗ ೨ ಶಿಲಿಂಗಿಗಿಂತ ಹೆಚ್ಚಿಗೆ ಬೆಲೆಯಾಗುವದಿಲ್ಲ.

ಹಿಂದುಸ್ತಾನದೊಳಗಿನ ಚಹಾ ಬೆಳೆಯುವ ಪ್ರದೇಶಗಳಲ್ಲಿ ಆಸಾಮವೂ ಬಂಗಾಲವೂ ಪ್ರಾಮುಖ್ಯವಾದವು. ನಮ್ಮ ದೇಶದಲ್ಲಿ ಹುಟ್ಟುವ ಚಹಾದಲ್ಲಿ ಅರ್ಧಕ್ಕಿಂತ ಹೆಚ್ಚು ಆಸಾಮದಲ್ಲಿಯೇ ಹುಟ್ಟುವದು. ಆಸಾಮದಲ್ಲಿ ಬ್ರಹ್ಮಪುತ್ರೆಯ ಕೊಳ್ಳವೂ ಕಾಚಾರ ಸಿಲ್ಹೆಟ ಜಿಲ್ಹೆಗಳೂ ಚಹಾದ ತೋಟಗಳೇ ಆಗಿವೆ. ಬಂಗಾಲದೊಳಗೆ ದಾರ್ಜಲಿಂಗ, ಜಲ್ಪೈಗಾರಿ, ಚಿತಗಾಂಗ ವಿಭಾಗಗಳಲ್ಲಿಯೇ ಹೆಚ್ಚು ಪ್ರಮಾಣದ ಚಹಾದ ತೋಟಗಳಿರುವವು. ಜಗತ್ತಿಗೆ ಬೇಕಾಗುವ ಒಟ್ಟು ಚಹಾದಲ್ಲಿ ೧೦೦ರಲ್ಲಿ ೪೦ ರಷ್ಟನ್ನು ಹಿಂದುಸ್ತಾನವು ಪೂರೈಸಿಕೊಡುವದು. ಮತ್ತು ಹಿಂದುಸ್ತಾನ ಸಿಂಹಳದ್ವೀಪಗಳ ಚಹಾವು ಮೇಲ್ತರಗತಿಯದೆಂದೂ ಎಣಿಸಲ್ಪಡುತ್ತಿದೆ.

ಜಗತ್ತಿನ ಚಹಾ ಕುಡಿಯುವ ದೇಶಗಳಲ್ಲಿ ಇಂಗ್ಲಂಡವು ಮೊದಲನೆಯ ದೆನಿಸಿಕೊಂಡಿದೆ, ಇಂಗ್ಲಂಡಕ್ಕೆ ಪ್ರತಿವರ್ಷ ೪೦ ಕೋಟಿ ಪೌಂಡು ಚಹಾವು ಬೇಕಾಗುವದಂತೆ. ಆಸ್ಟ್ರೇಲಿಯಾದಲ್ಲಿಯೂ ಚಹಾದ ಚಟವು ಮಿತಿಮೀರಿ ಹೆಚ್ಚಿದಿರುವದು. ಊಟದ ಸಮಯದಲ್ಲಿ ನಾವು ನೀರು ಕುಡಿಯುವಂತೆ ಅವರು ಚಹಾ ಕುಡಿಯುವರು. ಅವರ ಊಟ ಉಪಾಹಾರಗಳ ಸಮಯದಲ್ಲಿ ಚಹಾ ತುಂಬಿದ ಕಪ್ಪುಗಳು ಬಂದ ಹೊರತು ಕೆಲಸವು ಪ್ರಾರಂಭವಾಗಲಾರದು. ನಮ್ಮಲ್ಲಿ "ಊಟಕ್ಕೆ ಮೊದಲು ಉಪ್ಪಿನಕಾಯಿ" ಯಾಗಿರುವಂತೆ ಅವರಿಗೆ ಚಹಾವು ಊಟ ಉಪಾಹಾರಗಳ ಮೊದಲನೆಯ ಪದಾರ್ಥವಾಗಿರುವದು. ಇಂಗ್ಲಂಡ ಆಸ್ಟ್ರೇಲಿಯಾಗಳ ತರುವಾಯ ಹೆಚ್ಚು ಪ್ರಮಾಣದಿಂದ ಚಹಾ ಕುಡಿಯುವ ದೇಶವೆಂದರೆ ಚೀನವು. ಚೀನದಲ್ಲಿ ಚಹಾದ ತೋಟಗಳು ವಿಪುಲವಾಗಿರುವದರಿಂದ ಅದು ಪರ ದೇಶಗಳಿಂದ ಅಷ್ಟು ದೊಡ್ಡ ಪ್ರಮಾಣದಲ್ಲಿ ಚಹಾವನ್ನು ಕೊಂಡುಕೊಳ್ಳಬೇಕಾಗಿಲ್ಲ. ಬ್ರಿಟಿಷ ದ್ವೀಪಗಳ ನಿವಾಸಿಗಳಲ್ಲಿ ಪ್ರತಿಯೊಬ್ಬನಿಗೆ ೧ ವರ್ಷಕ್ಕೆ ಬೇಕಾಗುವ ಚಹಾದ ಸರಾಸರಿಯು ೯.೨೦ ಪೌಂಡು ಇರುವದು. ನಾವು ನಮ್ಮ ದೇಶದಲ್ಲಿ ಚಹಾಪಾನದ ವ್ಯಸನವು ಮಿತಿಮೀರುತ್ತ ನಡೆದಿದೆಯೆಂದು ಆಡಿಕೊಳ್ಳುತ್ತಿರುವೆವಾದರೂ ನಮ್ಮ ದೇಶದ ಒಟ್ಟು ಜನಸಂಖ್ಯೆಯ ಮಾನದಿಂದ ನೋಡಿದರೆ ಇದು ತೀರ ಸ್ವಲ್ಪವಿರುವದೆಂದು ಹೇಳಬೇಕಾಗುವದು. ನಮ್ಮ ದೇಶದಲ್ಲಿ ಪ್ರತಿಯೊಬ್ಬನಿಗೆ ಒಂದು ವರ್ಷಕ್ಕೆ ಬೇಕಾಗುವ ಚಹಾದ ಸರಾಸರಿಯು ಕೇವಲ. ೧೮ ಪೌಂಡು ಇರುವದು. ಇದರಿಂದ ನಮ್ಮವರ ಚಹಾಪಾನದ ಪ್ರಮಾಣವು ಬ್ರಿಟಿಷ ದ್ವೀಪಗಳ ನಿವಾಸಿಗಳ ಚಹಾಸೇವನೆಯ ಸರಾಸರಿ ಪ್ರಮಾಣದ ೫೦ ದಷ್ಟು ಮಾತ್ರ ಇರುವದೆಂದು ಕಂಡುಬರುವದು. ಆದರೂ ಇದೇ ಸಮಯದಲ್ಲಿ ಬ್ರಿಟಿಷ ದ್ವೀಪಗಳ ಪ್ರಜೆಗಳ ಸಾಂಪತ್ತಿಕ ಸ್ಥಿತಿಯ ಸರಾಸರಿಯನ್ನು ನಮ್ಮವರ ಸಾಂಪತ್ತಿಕ ಸ್ಥಿತಿಯ ಸರಾಸರಿಗೆ ಹೋಲಿಸಿ ನೋಡಿದರೆ ನಮ್ಮವರ ಇಷ್ಟೇ ಸ್ವಲ್ಪವೆಂದು ತೋರುವ ಚಹಾದ ವ್ಯಸನವು ಕೂಡ ನಮ್ಮ ಪ್ರಗತಿಗೆ ಪ್ರತಿಬಂಧಕವೆಂಬದು ತಾನೇ ಸಿದ್ಧವಾಗಬಹುದು. ಮಿತಿಮೀರಿದ ಚಹಾಪಾನದಿಂದ ಮನುಷ್ಯನ ಮಿದುಳು ಮಜ್ಜಾತಂತುಗಳ ಮೇಲೆ ಕೆಟ್ಟ ಪರಿಣಾಮವಾಗುವದೆಂದು ಡಾಕ್ಟರ ಜನರು ಅಭಿಪ್ರಾಯಪಡುವರು.

೧೯೩೨-೩೩ನೆಯ ಸಾಲಿನಲ್ಲಿ ನಮ್ಮ ದೇಶದ ಚಹಾದ ವ್ಯಾಪಾರವು ತುಂಬ ಆಪತ್ತಿಗೆ ಗುರಿಯಾಯಿತು. ಪರದೇಶದ ಮುಖ್ಯವಾಗಿ ಜಾವಾ ಸುಮಾತ್ರಾಗಳ

ಚಹಾದ ಅಗ್ಗವಾದ ಬೆಲೆಯು ಮೂಲಕವಾಗಿಯೂ, ಜಗತ್ತಿಗೆ ಬೇಕಾಗುವ ಮಾನಕ್ಕಿಂತಲೂ ಅದರ ಹುಟ್ಟುವಳಿಯ ಮಾನವು ಮಿತಿಮೀರಿದ್ದರಿಂದಲೂ, ಹಿಂದಿನ ಶಿಲಕು ದಿನದಿನಕ್ಕೆ ಹೆಚ್ಚುತ್ತ ನಡೆದದ್ದರಿಂದಲೂ ಈ ವರ್ಷದಲ್ಲಿ ಚಹಾದ ಬೆಲೆಯು ಅಳತೆನೆಟ್ಟು ಇಳಿದುಹೋಯಿತು. ೧೯೨೭-೨೮ರಲ್ಲಿ ಕಲಕತ್ತೆಯ ಚಹಾದ ಅಡ್ಡೆಯೊಳಗಿನ ಚಹಾದ ಸರಾಸರಿ ಬೆಲೆಯು ೧ ಪೌಂಡಿಗೆ ೧೪ ಆ. ೧೦ ಪೈ. ಇದ್ದದ್ದು ೧೯೨೯-೩೦ ರಲ್ಲಿ ೯ ಆ. ೧೧ ಪೈಗೆ ಇಳಿದು ೧೯೩೨-೩೩ರಲ್ಲಿ ೫ ಆ. ೨ ಪೈಗೆ ಬಿದ್ದುಹೋಯಿತು. ಈ ದುರವಸ್ಥೆಯನ್ನು ಹೋಗಲಾಡಿಸಲು ಚಹಾದ ತೋಟಗಳ ಒಡೆಯರೆಲ್ಲರೂ ಸೇರಿದ ಸಂಸ್ಥೆಯವರು ಕೆಲವು ವಿಶೇಷನಿಯಮಗಳನ್ನು ರಚಿಸಿಕೊಂಡು ಚಹಾದ ಹುಟ್ಟುವಳಿಯ ಮಾನವನ್ನು ನಿರ್ಬಂಧಿಸಿದರು. ಆ ನಿಯಮದ ಮೇರೆಗೆ ಬೇರೆ ಬೇರೆ ದೇಶಗಳ ಚಹಾದ ತೋಟಗಳ ವಿಸ್ತಾರವೂ ಚಹಾದ ಹುಟ್ಟುವಳಿಯ ಪ್ರಮಾಣವೂ ನಿರ್ಧರಿಸಲ್ಪಟ್ಟವು. ಇದರಿಂದ ೧೯೩೩-೩೪ರಲ್ಲಿ ೧ ಪೌಂಡು ಚಹಾದ ಸರಾಸರಿ ಬೆಲೆಯು ಮತ್ತೆ ೮ ಆ. ೧ ಪೈಗೆ ಏರಿತು. ಸುಶಿಕ್ಷಿತರಾದ ಬಂಡುವಲುಗಾರರು ನಡೆಯಿಸಿರುವ ವ್ಯವಸಾಯಕ್ಕೆ ಗಂಡಾಂತರವೊದಗಿದಾಗ ಅವರೆಲ್ಲರೂ ಐಕ್ಯದಿಂದ ನಡೆದು ಹೇಗೆ ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳುವರೆಂಬದು ಈ ಉದಾಹರಣೆಯಿಂದ ಚೆನ್ನಾಗಿ ಮನವರಿಕೆಯಾಗುವಂತಿದೆ.

ಕಾಫಿ:— ಚಹಾದಂತೆಯೇ ಕಾಫಿಯೂ ಉಷ್ಣ ಕಟಿಬಂಧದಲ್ಲಿ ಬೆಳೆಯುವ ಪೈರು. ತುಸ ಹೆಚ್ಚು ಕಡಿಮೆ ಚಹದ ಕಂಟಿಯಷ್ಟೇ ಎಂದರೆ ಸುಮಾರು ನಾಲ್ಕು ಫೂಟು ಎತ್ತರವಾಗಿ ಇದರ ಗಿಡಗಳನ್ನು ಬೆಳೆಯಿಸುವರು. ಈ ಗಿಡಗಳಿಗೆ ವಿಪುಲವಾಗಿ ಮಳೆಬೇಕು; ಉಷ್ಣತೆಯೂ ಬೇಕು; ಆದರೆ ಅತ್ಯುಷ್ಣವನ್ನು ತಾಳಿಕೊಳ್ಳಲಾರವು. ಆದುದರಿಂದ ಇದರ ಎಳೆ ಸಸಿಗಳನ್ನು ನೆಳಲಿನಲ್ಲಿ ಬೆಳೆಯಿಸುವರು. ಅದಕ್ಕಾಗಿಯೇ ವಿಶೇಷತರದಿಂದ ತಯಾರಿಸಿದ ತೋಟಗಳಲ್ಲಿ ರಬ್ಬರು ಹಾಲಿವಾಳ ಮುಂತಾದ ಎತ್ತರವಾಗಿ ಬೆಳೆದು ದಟ್ಟಾಗಿ ನೆಳಲು ಕೊಡುವ ಗಿಡಗಳ ನೆರಳಿನಲ್ಲಿ ಕಾಫಿಯ ಅಗೆಗಳನ್ನು ಹಚ್ಚಿ ಬೆಳೆಯಿಸುವದು. ಚಹಾದ ಕಂಟಿಗಳಂತೆಯೇ ಕಾಫಿಯ ಗಿಡಗಳಿಗೂ ಕಸುವುಳ್ಳ ಭೂಮಿಯೂ ಮಳೆಯ ನೀರೆಲ್ಲ ಹರಿದು ಹೋಗಿಬಿಡುವಂಥ ಗುಡ್ಡಗಾಡಿನ ಇಳುಕಲು ಪ್ರದೇಶವೂ ಬೇಕು. ಆದ್ದರಿಂದಲೇ ಹಳೆಯ ಅರಣ್ಯಗಳನ್ನು ಕಡಿದು ಸಾಗುಮಾಡಿದ ಕಸುವುಳ್ಳ ಗುಡ್ಡದ ಇಳುಕಲಿನ ಭೂಮಿಯಲ್ಲಿ ಕಾಫಿಯ ತೋಟಗಳನ್ನು ಮಾಡುವರು. ಗಿಡಗಳು ಹಚ್ಚಿದ ಮೂರು ವರ್ಷಕ್ಕೆ

ಹೂಬಿಡುವವು. ಎಲೆಗಳ ಜಿಡುಕಿನಲ್ಲಿ ಗೊಂಚಲು ಗೊಂಚಲಾಗಿ ಬಿಡುವ ಕಾಫಿಯ ಹೂವುಗಳ ಸುವಾಸನೆಯಿಂದ ತೋಟವೆಲ್ಲ ಗಮಗಮಿಸುವದು. ಬೊಂಗೆಗುಂಟ ಎರಡೂ ಮಗ್ಗಲು ಹಸುರು ಎಲೆಗಳ ನಡುವೆ ಕಾಫಿಯ ಹಣ್ಣುಗಳು ಸುಂದರವಾದ ಬಣ್ಣದಿಂದ ಮನೋಹರವಾಗಿ ತೋರುವ ಹವಳದ ಸರದಂತೆ ಒಪ್ಪುತ್ತಿರುವಾಗ ಆ ಸುಂದರ ಗಿಡಗಳು ನೋಡುವವರ ಕಣ್ಣು ಮನಸ್ಸುಗಳನ್ನು ಆಕರ್ಷಿಸುವವು. ಹಣ್ಣುಗಳು ಒಣಗಿದ ಬಳಿಕ ಮೇಲಿನ ತೆಳ್ಳಗಿನ ತಿಳಿಲನ್ನು ತಿಕ್ಕಿ ಉದುರಿಸಿದಮೇಲೆ ಕಾಫಿಯ ಬೀಜದ ಬೇಳೆಗಳು ಬಿಳಿಯ ಯಾಲಕ್ಕಿಯ ಕರೆಗಳ ಅರ್ಧದಂತೆ ಬಹು ಸುಂದರವಾಗಿ ತೋರುವವು. ಅವನ್ನು ಹದ ನೋಡಿ ಹುರಿದು ಪುಡಿಮಾಡಿದಬಳಿಕ ನಮಗೆ ಬೇಕಾಗುವ ಕಾಫಿಯ ಪುಡಿಯು ಸಿದ್ಧವಾಗುವದು.

ಡಚ್ಚ ಜನರು ಜಗತ್ತಿನ ಎಲ್ಲ ದೇಶಗಳ ಜನರಿಗಿಂತಲೂ ಮಿಗಿಲಾಗಿ ಕಾಫಿಯನ್ನು ಕುಡಿಯುವವರೆಂದು ಹೆಸರಾಗಿದ್ದಾರೆ. ೧೯೩೩ನೆಯ ಇಸ್ವಿಯ ಲೆಕ್ಕದಿಂದ ಪ್ರತಿಯೊಬ್ಬ ಡಚ್ಚ ಮನುಷ್ಯನು ವರ್ಷಕ್ಕೆ ಸರಾಸರಿ ೧೯ ಪೌಂಡು ಕಾಫಿಯನ್ನು ಉಪಯೋಗಿಸುವನೆಂದು ಕಂಡುಬಂದಿದೆ. ಸ್ವೀಡನ್ ಬೆಲ್ಜಿಯಮ್ ದೇಶಗಳ ಸ್ಥಾನವು ಈ ಲೆಕ್ಕದಲ್ಲಿ ಎರಡನೆಯದಾಗುವದು. ಮತ್ತು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಎಣಿಕೆಯು ಮೂರನೆಯದಾಗುವದು. ಅಲ್ಲಿ ಪ್ರತಿಯೊಬ್ಬನು ಪ್ರತಿ ವರ್ಷ ಉಪಯೋಗಿಸುವ ಕಾಫಿಯ ಸರಾಸರಿಯು ೧೨ ಪೌಂಡಾಗುವದಂತೆ. ಇದರಿಂದ ಜಗತ್ತಿನಲ್ಲಿ ಬೆಳೆಯುವ ಒಟ್ಟು ಕಾಫಿಯಲ್ಲಿ ಅರ್ಧದಷ್ಟು ಅಮೇರಿಕಕ್ಕೇ ಯಾಕೆ ಹೋಗುವದೆಂಬದರ ಕಾರಣವು ಸಹಜ ತಿಳಿಯುವಂತಿದೆ. ಸಂಯುಕ್ತ ಸಂಸ್ಥಾನಗಳಿಗೆ ಹೋಗುವ ಒಟ್ಟು ಕಾಫಿಯಲ್ಲಿ ಕೆಲವಂಶವು ಅಲ್ಲಿಂದ ಇಂಗ್ಲಂಡ ಮುಂತಾದ ದೇಶಗಳಿಗೆ ಸಾಗಿ ಹೋಗುವದೆಂಬದೇನೋ ನಿಜ. ಕಾಫಿಯ ಬೇಡಿಕೆಯ ಪ್ರಮಾಣವನ್ನು ನೋಡುತ್ತ ಹೋದರೆ ಸಂಯುಕ್ತ ಸಂಸ್ಥಾನಗಳ ತರುವಾಯ ಕ್ರಮವಾಗಿ ಫ್ರಾನ್ಸ, ದಕ್ಷಿಣ ಆಫ್ರಿಕೆ, ಫಿನಲಾಂಡ, ಸ್ವಿಟ್ಝರ್ಲಂಡ, ಇಟಾಲಿಗಳ ನಂಬರವೂ, ಇವುಗಳ ತರುವಾಯ ಬ್ರಿಟಿಶ ದ್ವೀಪಗಳ ಸ್ಥಾನವೂ ಬರುವವು. ೧೯೧೪ರಿಂದ ೧೯೧೮ ವರೆಗಿನ ಮಹಾಯುದ್ಧದ ಪೂರ್ವದಲ್ಲಿ ಜರ್ಮನಿಯು ಜಗತ್ತಿನ ಎಲ್ಲ ದೇಶಗಳಿಗಿಂತಲೂ ಹೆಚ್ಚು ಕಾಫಿಯನ್ನು ಸೇವಿಸುತ್ತಿತ್ತೆಂದು ಗೊತ್ತಾಗಿರುವದು. ಸನ್ ೧೯೩೫ರಿಂದ ಈಚೆಗೆ ನಮ್ಮದೇಶದಲ್ಲಿ ಕಾಫಿಯ ಪ್ರಚಾರವು ಹೆಚ್ಚುತ್ತ ನಡೆದಿರುವದು. ೧೯೩೫ ನಮ್ಮ ದೇಶದಲ್ಲಿ ಬೆಳೆದ ಒಟ್ಟು ೨೭೩೧೦೦ ಮಣ ಕಾಫಿಯಲ್ಲಿ ೨೦೨೯೦

ಮಣಗಳನ್ನು ಮಾತ್ರ ನಮ್ಮವರೇ ಉಪಯೋಗಿಸಿದರೆಂದೂ ೧೯೩೩ರಲ್ಲಿ ಬೆಳೆದ ೨೮೯೪೦೦ ಮಣ ಕಾಫಿಯಲ್ಲಿ ೧೨೦೭೦೦ ಮಣಗಳು ಇಲ್ಲಿಯೇ ಉಪಯೋಗಿಸಲ್ಪಟ್ಟವೆಂದೂ ಗೊತ್ತಾಗಿರುವದು. ಅಂದರೆ ೧೯೨೫ರಲ್ಲಿ ನಾವು ಉಪಯೋಗಿಸುತ್ತಿದ್ದ ಕಾಫಿಯು ಆರುಪಟ್ಟನ್ನು ೧೯೩೩ ರಲ್ಲಿ ಉಪಯೋಗಿಸಿದೆವೆಂದ ಹಾಗಾಯಿತು. ಮೇಲೆ ಹೇಳಿದ ಇತರ ದೇಶಗಳು ಕಾಫಿಯನ್ನು ಉಪಯೋಗಿಸುವ ಪ್ರಮಾಣವನ್ನು ನಮ್ಮ ದೇಶಕ್ಕೆ ಹೋಲಿಸಿ ನೋಡಿದರೆ ಅದು ಎಷ್ಟು ಅತ್ಯಲ್ಪವೆಂಬದು ತಿಳಿಯಬಹುದು.

ಕಾಫಿಯನ್ನು ಬೆಳೆಯಿಸುವ ದೇಶಗಳನ್ನೂ ಅಲ್ಲಿಯ ಹುಟ್ಟುವಳಿಯ ಮಾನವನ್ನೂ ಅನುಲಕ್ಷಿಸಿ ಕ್ರಮಗೊಳಿಸಿದರೆ ಬ್ರಾಝಿಲ್, ಕೋಲಂಬಿಯಾ, ಗ್ವಾತಿಮಾಲಾ, ವೆನೆಜುಎಲಾ, ಜಾವಾ ಮತ್ತು ಹಿಂದುಸ್ಥಾನ ದೇಶಗಳು ಒಂದರ ಹಿಂದೊಂದು ಬರುವವು. ಜಗತ್ತಿನ ಒಟ್ಟು ಹುಟ್ಟುವಳಿಯ ಐದು ಎಂಟನೆಯ ಅಂಶಗಳಷ್ಟು ಕಾಫಿಯನ್ನು ಬ್ರಾಝಿಲ್ ಒಂದೇದೇಶವು ಹುಟ್ಟಿಸುತ್ತಿರುವದರಿಂದ ಈ ದೃಷ್ಟಿಯಿಂದ ಅದಕ್ಕೆ ತುಂಬ ಮಹತ್ವವುಂಟಾಗಿರುವದು.

ಬ್ರಿಟಿಷ ಸಾಮ್ರಾಜ್ಯದಲ್ಲಿ ಹಿಂದುಸ್ಥಾನವೇ ಹೆಚ್ಚು ಪ್ರಮಾಣದಿಂದ ಕಾಫಿಯನ್ನು ಬೆಳೆಯಿಸುವ ದೇಶವು. ೧೭ನೆಯ ಶತಮಾನದಲ್ಲಿ ಅರಬರು ಈ ದೇಶಕ್ಕೆ ಮೊದಲು ಕಾಫಿಯ ಗಿಡಗಳನ್ನು ತಂದರೆಂದು ಸದ್ಯಕ್ಕೆ ಗೊತ್ತಿದ್ದ ಇತಿಹಾಸದಿಂದ ತಿಳಿದು ಬಂದಿದೆ. ಆದರೂ ಅದನ್ನು ಒಂದು ವ್ಯವಸಾಯವೆಂಬ ದೃಷ್ಟಿಯಿಂದ ಬೆಳೆಯಿಸುವ ಕ್ರಮವು ಬಹುಕಾಲದವರೆಗೆ ನಮ್ಮಲ್ಲಿ ರೂಢಿಯಾಗಲಿಲ್ಲ ಸನ್ ೧೮೪೦ರ ಸುಮಾರಕ್ಕೆ ಯುರೋಪಿಯನ್ನರು ಈ ವ್ಯವಸಾಯವನ್ನು ಪ್ರಾರಂಭಿಸಿದರು. ೧೮೭೦ನೆಯ ಇಸ್ವಿಯವರೆಗೂ ಅದು ಊರ್ಜಿತಾವಸ್ಥೆಯನ್ನು ಹೊಂದಲಿಲ್ಲ. ಕಾಫಿಯ ತೋಟಗಳು ದಕ್ಷಿಣ ಹಿಂದುಸ್ಥಾನದಲ್ಲಿಯೂ ಸಿಂಹಳ ದ್ವೀಪದಲ್ಲಿಯೂ ವಿಶೇಷವಾಗಿರುವವು. ಉತ್ತರ ಹಿಂದುಸ್ಥಾನದಲ್ಲಿ ಇವು ತೀರಕಡಿಮೆ. ೧೯೩೨–೩೩ನೇ ಸಾಲಿನಲ್ಲಿ ದಕ್ಷಿಣ ಹಿಂದುಸ್ಥಾನದೊಳಗೆ ೧೭೭೦೦೦ ಎಕರೆ ಭೂಮಿಯನ್ನು ಕಾಫಿಯ ತೋಟಗಳು ಆಕ್ರಮಿಸಿದ್ದವೆಂದು ಲೆಕ್ಕದಿಂದ ಗೊತ್ತಾಗಿದೆ. ಬ್ರಿಟಿಶ ದ್ವೀಪಗಳು ಫ್ರಾನ್ಸವೂ ನಮ್ಮದೇಶದ ಕಾಫಿಯ ಮುಖ್ಯ ಗಿರಾಕಿಗಳು ಸನ್೧೯೩೧-೩೨ನೇ ಸಾಲಿನಲ್ಲಿ ನಮ್ಮದೇಶದಿಂದ ಪರದೇಶಕ್ಕೆ ಹೋದ ಕಾಫಿಯ ಬೆಲೆಯು ೧೧೦ ಲಕ್ಷರೂಪಾಯಿಯಾಯಿತು. ಆ ವರ್ಷ ಬ್ರಿಟಿಷ ದ್ವೀಪಗಳು ೫೨ ಸಾವಿರ, ಫ್ರಾನ್ಸವು ೫೪ ಸಾವಿರ,

ಮಣ ಕಾಫಿಯನ್ನು ನಮ್ಮ ದೇಶದಿಂದ ತರಿಸಿಕೊಂಡವು. ನಾರ್ವೆ ಇತಾಲಿ ಜರ್ಮನಿಗಳಿಗೂ ನಮ್ಮ ದೇಶದಿಂದ ಕಾಫಿಯು ಹೋಗುವದು. ಆಸ್ಟ್ರೇಲಿಯಾ ನ್ಯೂಝೀಲಂಡಗಳಿಗೂ, ಇರಾಕ ಬೆಹರೀನ ನಡುಗಡ್ಡೆಗಳಿಗೂ ನಮ್ಮದೇಶದಿಂದ ಕಾಫಿಯು ಅಲ್ಪ ಪ್ರಮಾಣದಲ್ಲಿ ಹೋಗಿಬಿಡುವದು.

ನಮ್ಮ ದೇಶವು ಬಹು ದೊಡ್ಡ ಪ್ರಮಾಣದಿಂದ ಪರದೇಶಗಳಿಗೆ ಕಾಫಿಯನ್ನು ಪೂರೈಸುತ್ತಿದ್ದರೂ ಜಾವಾ, ಸಿಂಹಲದ್ವೀಪ, ಸ್ಟ್ರೇಟಸೆಟಲಮೆಂಟ ಮುಂತಾದವುಗಳಿಂದ ನಮ್ಮ ದೇಶಕ್ಕೆ ಕಾಫಿಯು ಬರುವದುಂಟು. ಈ ಹೊರಗಿನಿಂದ ಬರುವ ಕಾಫಿಯಲ್ಲಿ ಬಹಳ ಭಾಗವು ಮಸ್ಕತ್ ಬಂದರಕ್ಕೂ ಇರಾಕ ಪ್ರಾಂತಕ್ಕೂ ಬೆಹರೀನ ನಡುಗಡ್ಡೆಗಳಿಗೂ ಹೋಗಿಬಿಡುವದು.

ಸಿಂಹಲ ದ್ವೀಪವು ಕಾಫಿಯ ಬೆಳೆಗೆ ಅನುಕೂಲಪರಿಸ್ಥಿತಿಯುಳ್ಳದ್ದಿರುವದರಿಂದ ಬಹುಕಾಲದ ವರೆಗೆ ಅಲ್ಲಿ ಹೆಸರಾದ ಕಾಫಿಯ ತೋಟಗಳಿದ್ದವು. ಆದರೆ ಕೆಲವು ವರ್ಷಗಳ ಹಿಂದೆ ಅಲ್ಲಿಯ ಕಾಫಿಯ ಗಿಡಗಳಿಗೆ ಒಂದು ತರದ ಬೇನೆಯು ಬರಹತ್ತಿ ತೋಟಿಗರು ಬಹಳ ಆಪತ್ತಿಗೀಡಾದರು. ಈಚೆಗೆ ಅಲ್ಲಿಯ ಕಾಫಿಯ ತೋಟಗಳೆಲ್ಲ ಚಹಾ, ಸಿಂಕೋನಾ, ರಬ್ಬರಿನ ಗಿಡಗಳ ತೋಟಗಳಾಗಿ ಮಾರ್ಪಡುತ್ತ ನಡೆದಿವೆ. ಆವರೂ ಎಷ್ಟೋ ತೋಟಿಗರು ಶಾಸ್ತ್ರೀಯ ಉಪಾಯಗಳನ್ನು ಕೈಕೊಂಡು ಆ ಬೇನೆಯನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸುತ್ತಿದ್ದಾರೆ.

ಬ್ರಿಟಿಷ ಸಾಮ್ರಾಜ್ಯದಲ್ಲಿ, ಬಹುಶಃ ಜಗತ್ತಿನಲ್ಲಿಯೇ, ಹೆಸರಾದ ಒಳ್ಳೆಯ ಕಾಫಿಯನ್ನು ಬೆಳೆಯುವ ಪ್ರದೇಶವೆಂದರೆ ಜಮೇಕಾದೊಳಗಿನ ನೀಲ ಪರ್ವತಗಳು (Blue mountain). ನೀಲ ಪರ್ವತಗಳ ಕಾಫಿಗೆ ಮಿಕ್ಕ ಎಲ್ಲ ದೇಶಗಳ ಕಾಫಿಗಳಿಗಿಂತ ಬೆಲೆ ಹೆಚ್ಚು.

ನಮ್ಮ ದೇಶದ ಚಹಾಕಾಫಿಗಳ ತೋಟಗಳ ಒಡೆತನ ಆಡಳತೆಗಳು ಬಹುಶಃ ಯುರೋಪಿಯನ್ ಕಂಪನಿಗೇ ಸೇರಿವೆ. ಮೈಸೂರು ಕೊಡಗು ನಾಡುಗಳಲ್ಲಿಯೂ ಮಿಕ್ಕ ಕೆಲವೆಡೆಗಳಲ್ಲಿಯೂ ಅಲ್ಪ ಪ್ರಮಾಣದಿಂದ ಇವು ಹಲವು ದೇಶೀಯ ವ್ಯಕ್ತಿಗಳ ಹಾಗು ಕಂಪನಿಗಳ ಒಡೆತನಕ್ಕೆ ಸೇರಿವೆ.

ನರ್ಸರೀ ಸ್ಕೂಲುಗಳು (ಶಿಶುಶಾಲೆಗಳು)

(೧) **ಆವಶ್ಯಕತೆ**—ಶಿಕ್ಷಣದಲ್ಲಿ ಪ್ರಗತಿಯನ್ನು ಹೊಂದಿದ ದೇಶಗಳಲ್ಲಿ ಕೂಡ ಮೊನ್ನೆಮೊನ್ನಿನ ವರೆಗೂ ಬಾಲಕರು ಐದು ಇಲ್ಲವೆ ಆರು ವರ್ಷದವರಾಗುವವರೆಗೂ ಶಾಲೆಗೆ ಹೋಗುತ್ತಿರಲಿಲ್ಲ. ಅಷ್ಟು ವಯಸ್ಸಿನವರಾಗುವ ವರೆಗೂ ಬಾಲಕರ ಆರೈಕೆಯೂ ಅಭ್ಯಾಸವೂ ಮನೆಯಲ್ಲಿಯೇ ನಡೆಯತಕ್ಕದ್ದೆಂದು ತಿಳಿಯಲ್ಪಡುತ್ತಿತ್ತು.

ಸಾಂಪ್ರತ ಕಾಲದಲ್ಲಿ ಮೇಲೆ ಹೇಳಿದ ವಿಚಾರಗಳು ಉಳಿದಿಲ್ಲ. ಚಿಕ್ಕ ಬಾಲಕರು ೨ ರಿಂದ ೫ ವರ್ಷಗಳ ವರೆಗಿನ ವಯಸ್ಸಿನಲ್ಲಿ ಎಳೆಯ ಗಿಡವು ಬಗ್ಗಿಸಿದಂತೆ ಬಗ್ಗುವ ಹಾಗೆ, ತುಂಬ ಬದಲಾಗುವ ಪ್ರಕೃತಿಯವರಾಗಿರುವರು. ಎಳೆಯ ಗಿಡದಲ್ಲಿ ಹಾಕಿದ ಕಚ್ಚು ದಿನದಿನಕ್ಕೆ ಬೆಳೆಯುತ್ತ ಹೋಗುವಂತೆ ಚಿಕ್ಕ ಬಾಲಕರ ಮನಸ್ಸಿನಲ್ಲುಂಟಾದ ಭಾವನೆಗಳು ಮುಂದೆ ಬೆಳೆಯುತ್ತ ಹೋಗುವವು. ಆ ವಯಸ್ಸಿನಲ್ಲಿ ಅವರು ಕಲಿಸಿದಂತೆ ಕಲಿಯುವರು. "ಮೂರು ವರ್ಷದ ಬುದ್ಧಿ ನೂರು ವರ್ಷದ ತನಕ" ಎಂಬ ನಮ್ಮ ನಾಣ್ಣುಡಿಯೂ ಇದೇ ಅರ್ಥವನ್ನು ಕೊಡುವದು. ಆದ್ದರಿಂದ ಬಾಲಕರ ಬೆಳವಣಿಗೆಗೂ ಸುಸ್ಥಿತಿಗೂ ಈ ವಯಸ್ಸಿನಲ್ಲಿಯ ಆರೈಕೆಯೂ ಅವರ ಮೇಲಾಗುವ ಪರಿಸ್ಥಿತಿಯ ಪರಿಣಾಮವೂ ಅತಿಶಯ ಮಹತ್ವದವೆಂದು ಸಕಲರೂ ಒಪ್ಪಿಕೊಳ್ಳಹತ್ತಿದ್ದಾರೆ. ಸಾಮಾನ್ಯಸ್ಥಿತಿಯ ಮನೆತನದಲ್ಲಿ ಚಿಕ್ಕ ಬಾಲಕರ ಪರಿಪೂರ್ಣವಾದ ಬೆಳವಣಿಗೆಗೆ ಆವಶ್ಯಕವೆನಿಸುವ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಡಲು ಸಾಧ್ಯವಿರುವದಿಲ್ಲ. ಕೆಲಕೆಲವು ಕುಟುಂಬಗಳ ಜನರಿಗೆ ಆರೋಗ್ಯದ ನಿಯಮಗಳ ಜ್ಞಾನವಿಲ್ಲದಿರುವದರಿಂದಲೂ ಬಾಲಕರ ಬೆಳವಣಿಗೆಯ ಸಂಬಂಧದ ತಿಳಿವಳಿಕೆಯಿಲ್ಲದ್ದರಿಂದಲೂ ಆ ಮನೆತನದ ಚಿಕ್ಕ ಬಾಲಕರ ಬೆಳವಣಿಗೆಯು ಕುಂಠಿತವಾಗುವದಲ್ಲದೆ ಆ ಬಾಲಕರು ಅನೇಕ ಅಪಾಯಗಳಿಗೂ ಗುರಿಯಾಗುವರು. ಅಲ್ಲದೆ ಚಿಕ್ಕ ಮಕ್ಕಳಿಗೆ ತಮ್ಮದೇ ವಯಸ್ಸಿನ ಓರಗೆಯ ಗೆಳೆಯರೊಡನೆ ಕೂಡಿ ಆಡಿ ಕಾಲಕಳೆಯುವದು ಅತಿಶಯ ಪ್ರೀತಿಯ ವಿಷಯ; ಹಾಗು ಆವಶ್ಯಕವಾದ ಮಾತು.

ಐದಾರು ವರ್ಷ ವಯಸ್ಸಾದಾಗ ಸಾಲೆಗೆ ಬಂದ ಬಾಲಕರನ್ನು ಪರೀಕ್ಷಿಸಿ ನೋಡಿದರೆ ಅವರಲ್ಲಿ ಕಂಡುಬರುವ ಅನೇಕಾನೇಕ-ಶಾರೀರಕ-ಕೊರತೆಗಳಿಗೆ ತಂದೆ ತಾಯಿಗಳೇ ಕಾರಣರೆಂದು ಹೇಳಬೇಕಾಗುವದು. ಈ ವಿಷಯದ ಅಜ್ಞಾನದ ಮೂಲಕವಾಗಿ ಇಲ್ಲವೆ ಬೇರೆ ಕಾರಣಗಳಿಂದ ತಂದೆತಾಯಿಗಳು ಚಿಕ್ಕ ವಯಸ್ಸಿನ ಬಾಲಕರನ್ನು ದುರ್ಲಕ್ಷಿಸಿದ್ದರಿಂದಲೇ ಈ ದುಷ್ಪರಿಣಾಮವಾಗಿರುವದೆಂದೂ ಅಥವಾ ಚಿಕ್ಕಮಕ್ಕಳ ಆರೈಕೆ-ಅಭ್ಯಾಸಗಳ ವಿಚಾರಗಳನ್ನು ವಿಶಿಷ್ಟ ರೀತಿಯಿಂದ ತಿಳಿದು ಕೊಂಡವರ ಸಹವಾಸದಲ್ಲಿ ಇರುತ್ತಿದ್ದು ಅವರ ಸಹಾಯ ಸಲಹೆಗಳನ್ನು ಪಡೆಯು ತ್ತಿದ್ದರೆ ಇಂಥ ಕೊರತೆಗಳು ಉಂಟಾಗುತ್ತಿರಲೇ ಇಲ್ಲವೆಂದೂ ಒಂದು ವೇಳೆ ಅಲ್ಪ ಸ್ವಲ್ಪ ಕಂಡುಬಂದರೂ ಅವು ಅಷ್ಟು ಪ್ರಬಲವಾಗುತ್ತಿರಲಿಲ್ಲವೆಂದೂ ತಜ್ಞರಾದ ಡಾಕ್ಟರರು ಅಭಿಪ್ರಾಯಪಡುವರು. ಬಡತನದ ಬಾಳುವೆಯ ಕುಟುಂಬದ ಶಿಶು ಗಳು, ಮನೆಯಲ್ಲಿ ಜನರು ಗುಂಪುಗುಂಪಾಗಿ ವಾಸಿಸುವದರಿಂದ, ಕೊಳೆಯಾದ ಆಹಾರವನ್ನು ಸೇವಿಸುವದರಿಂದ ಇಲ್ಲವೆ ಸಾಕಾದಷ್ಟು ಪೌಷ್ಟಿಕ ಆಹಾರವು ದೊರೆ ಯದ್ದರಿಂದ, ಅನೇಕ ಕಷ್ಟಗಳಿಗೆ ಈಡಾಗುವರೆಂಬದು ಸತ್ಯವೇ ಸರಿ. ಮತ್ತು ತಂದೆ ತಾಯಿಗಳು ತಮ್ಮ ಶಿಶುಗಳನ್ನು ಹೀಗೆ ದುರ್ಲಕ್ಷಿಸುವದಕ್ಕೆ ಅವರ ಬಡತನವೇ ಮುಖ್ಯ ಕಾರಣವಾಗಿರುವದು ತಾಯಿಯು ಕೂಲಿಕುಂಬಳಿಗಾಗಿ ಹಗಲೆಲ್ಲ ಹೊರಗೆ ಹೋಗುವ ಪ್ರಸಂಗದಲ್ಲಿಯಂತೂ ಮಗುವಿನ ಆರೈಕೆಯು ಸರಿಯಾಗಿ ನಡೆಯುವ ಸಂಭವವೇ ಇರುವದಿಲ್ಲ. ನಮ್ಮ ದೇಶದಲ್ಲಿಯಂತೂ ಶಿಶುಗಳನ್ನೂ ಚಿಕ್ಕ ಬಾಲಕ ರನ್ನೂ ದುರ್ಲಕ್ಷಿಸುವದರಿಂದ ಎಷ್ಟು ಅನರ್ಥಗಳು ಸಂಭವಿಸುವವೆಂಬದನ್ನು ಎಲ್ಲರೂ ಬಲ್ಲರು ಇಂಥ ಬಾಲಕರು ಬದುಕಿದ್ದರೆ ಅವರ ಬೆಳೆವಣಿಗೆಯು ಕುಂಠಿತ ವಾಗುವದು; ಅವರ ಪ್ರಕೃತಿಯು ಅಶಕ್ತವಾಗುವದು; (ದೇವರ ದಯೆಯಿಂದಲೇ ಅಸಾಮಾನ್ಯವಾದ ಉತ್ಕೃಷ್ಟ ಪ್ರಕೃತಿಯದಾಗಿ ಹುಟ್ಟಿದ ಕೆಲವೊಂದು ಶಿಶುವಿನ ಮಾತು ಬೇರೆ) ಅವರಲ್ಲಿ ದುಷ್ಟ ಚಟಗಳು ಸೇರುವವು. ಇಂಗ್ಲಂಡ ದೇಶದ ನರ್ಸರಿ ಸ್ಕೂಲುಗಳಲ್ಲಿ ಇಂಥ ಬಡತನದ ಬಾಲಕರು ಸಾಲೆಯಲ್ಲಿರುವಾಗ ಅವರಿಗೆ ಸ್ನಾನ, ಊಟ, ಉಡುಗೆ ತೊಡುಗೆಗಳು ಇವೆಲ್ಲ ಬಹುಶಃ ಪುಕ್ಕಟೆಯಾಗಿ ದೊರೆಯುವ ವ್ಯವಸ್ಥೆಯಿರುವದು.

ಹಿಂದೆ ಹೇಳಿದಂತೆ ೨ ರಿಂದ ೫ ವರ್ಷಗಳ ವರೆಗಿನ ವಯಸ್ಸಿನಲ್ಲಿ ಬಾಲಕರ ಶಾರೀರಕ ಬೌದ್ಧಿಕ ಮತ್ತು ನೈತಿಕ ಪ್ರಕೃತಿಯು ಅತಿಶಯ ಕೋಮಲವಾಗಿದ್ದು

ಆಗ ಅವುಗಳಿಗೆ ಉಂಟಾದ ಪರಿಣಾಮುಗಳು ಚಿರಸ್ಥಾಯಿಯಾಗುವ ಸಂಭವವು ಬಹಳ. ಆದ್ದರಿಂದ ಈ ವಯಸ್ಸಿನಲ್ಲಿ ಅವರಿಗೆ ಆನುಕೂಲವಾದ ಪರಿಸ್ಥಿತಿಯನ್ನು ಒದಗಿಸಿ ಕೊಡುವದೂ ಅವರ ಮನಃಪ್ರವೃತ್ತಿಗಳಿಗೆ ಒಳ್ಳೆಯ ಮಾರ್ಗವು ಹತ್ತುವಂತೆ ಮಾಡುವದೂ ಅತಿ ಮಹತ್ವದ ಮಾತುಗಳಾಗಿವೆ. ಆದ್ದರಿಂದಲೇ ಇವನ್ನೆಲ್ಲ ಒದಗಿಸಿ ಕೊಡುವ ನರ್ಸರೀಸ್ಕೂಲುಗಳು(ಶಿಶು ಶಾಲೆಗಳು) ಅತಿಶಯ ಮಹತ್ವದವಾಗಿರುವವು.

೨. **ಶಿಶು ಶಾಲೆಗಳು ಈ ಧ್ಯೇಯಗಳನ್ನಿಟ್ಟುಕೊಂಡಿರಬೇಕು:—**

(೧) ಬಾಲಕರಿಗೆ ಶುದ್ಧ ಹವೆ, ಬೆಳಕು, ವಿಶಾಲವಾದ ಸ್ಥಳ ಇವು ಸಾಕಾದಷ್ಟು ದೊರೆಯುವಂಥ ಆರೋಗ್ಯಕರವಾದ ಬಾಹ್ಯ ಆವರಣವನ್ನು ಒದಗಿಸಿಕೊಡುವದು.

(೨) ಬಾಲಕರು ನಿರೋಗಿಯಾಗಿಯೂ ಆನಂದದಿಂದಲೂ ಇರಲು ಬೇಕಾದ ಅನುಕೂಲತೆಗಳನ್ನು ಒದಗಿಸಿಕೊಟ್ಟು ಅವರ ಶಾರೀರಿಕ ಆರೋಗ್ಯತೆಯ ವಿಷಯದಲ್ಲಿ ತುಂಬ ಎಚ್ಚರಿಕೆಯಿಂದಿರುವದು.

(೩) ಬಾಲಕರಲ್ಲಿ ವೈಯಕ್ತಿಕವಾಗಿ ಒಳ್ಳೆಯ ಚಟಗಳೂ ರೂಢಿಗಳೂ ಹುಟ್ಟಿ ಬೆಳೆಯುವಂತೆ ಮಾಡುವದು.

(೪) ಬಾಲಕರ ಬುದ್ಧಿಶಕ್ತಿಯ ಬೆಳವಣಿಗೆಗೆ ಅನುಕೂಲವಾದ ಸಂದರ್ಭಗಳನ್ನು ಒದಗಿಸಿಕೊಡುವದು. ಅವರಲ್ಲಿ ಆತ್ಮಸಂಯಮನ, ಆತ್ಮವಿಶ್ವಾಸ, ಚಟುವಟಿಕೆ ಈ ಗುಣಗಳ ಬೆಳವಣಿಗೆಯಾಗುವಂತೆ ಮಾಡುವದು

(೫) ಚಿಕ್ಕಮಕ್ಕಳಿಗೆ ಬೇಕೇಬೇಕಾಗುವ ಸಮಾನ ವಯಸ್ಸಿನ, ಓರಗೆಯ ಗೆಳೆಯರ, ಒಡನಾಟವನ್ನು ಒದಗಿಸಿಕೊಡುವದು.

(೬) ಬಾಲಕರ ಪಾಲಕರೊಡನೆ ಸಹಕಾರಿತೆಯಿಂದ ನಡೆದು ಅವರಿಗೆ ತಮ್ಮ ಮಕ್ಕಳ ಕುಂದುಕೊರತೆಗಳನ್ನು ತಿಳಿಸಿ ಆ ವಿಷಯದಲ್ಲಿ ಆವಶ್ಯಕವೆನಿಸುವ ಸಂಗತಿಗಳನ್ನು ಅವರಿಗೆ ಕಲಿಸುವದು.

(ಮುಂದೆ ಸಾಗುವದು)

೧೯೩೬ನೆಯ ಇಸ್ವಿ ಎಪ್ರಿಲ್ ತಿಂಗಳಿನಲ್ಲಿ ಆದ ವ್ಹ. ಫಾ. ಪರೀಕ್ಷೆಯ ಪರಿಣಾಮವು

ಕಾರವಾರ ಜಿಲ್ಹೆ

ಕಾರವಾರ ಸೆಂಟೆರು

(ಕನ್ನಡ)

ಅ. ನಂ.	ಹೆಸರು	ಗುಣಗಳು
೧	ಗುರುಪಾದಯ್ಯ ಚನಮಲ್ಲಯ್ಯ ಮದನಳ್ಳಿ	೩೮೪
೨	ಕೇಶವ ಗಣಪಯ್ಯ ಶೆಟ್ಟಿ	೩೪೧
೩	ಶೇಷಗಿರಿ ಗಣಪಯ್ಯ ಪೈ	೩೪೧
೪	ತಿಮ್ಮಯ್ಯ ನಾಗಪ್ಪಶೆಟ್ಟಿ ಭಾವೀಕೇರಿ	೩೩೯
೫	ಕೇಶವ ಬೇಡು	೩೩೩
೬	ಸುಬ್ರಾಯ ರಾಮಾ ಮಡಿವಾಳ	೩೩೩
೭	ಗಣೇಶ ನಾಗಪ್ಪ ಶೆಟ್ಟಿ	೩೩೦
೮	ಫ್ರಾನ್ಸಿಸ್ ಬಸ್ತ್ಯಾಂ ಬೋರ್ಜ	೩೨೯
೯	ರಾಮಚಂದ್ರ ಮಾಧವ ಶೆಟ್ಟಿ	೩೨೮
೯	ವಿಠೋಬಾ ಅನಂತ ಕಾಮತ	೩೨೮
೧೧	ಪಾಂಡುರಂಗ ಭಿಕ್ಕು ಕಾಮತ	೩೨೭
೧೨	ನಾರಾಯಣ ಗಣಪಯ್ಯ ಶೆಟ್ಟಿ	೩೨೭
೧೩	ವೆಂಕಟೇಶ ದುರಗಪ್ಪ ದೈವಜ್ಞ	೩೨೦
೧೪	ಜಾಕು ಫ್ರಾನ್ಸಿಸ್ ಫರ್ನಾಂಡೀಜ	೩೧೬
೧೫	ವಿಘ್ನೇಶ್ವರ ಗಣೇಶ ಕೊಡ್ಲೀಕೇರಿ	೩೧೩
೧೬	ಹಮ್ಮಣ್ಣಾ ವೆಂಕಣ್ಣಾ ನಾಯಕ	೩೧೨

೧೭	ಏಸು ರಾಮಾ ಚಮಗಾರ	೩೧೦
೧೮	ಗಜಾನನ ಸುಬ್ರಾಯ ಪ್ರಸಾದ	೩೦೭
೧೮	ಕೃಷ್ಣ ಗಣೇಶಶಾಸ್ತ್ರಿ ಹೊಸಮನಿ	೩೦೭
೨೦	ದತ್ತಾತ್ರಯ ಅಂಬಾರಾಮ ಉಪಾಧ್ಯ	೩೦೫
೨೦	ತಿಮ್ಮಣ್ಣ ಹೊನ್ನಯ್ಯನಾಯಿಕ ಕುಚಿನಾಡ	೩೦೫
೨೨	ಶಾಂಬಾ ಲಕ್ಷ್ಮಣ ದೇಸಾಯಿ	೩೦೪
೨೩	ವೆಂಕಟರಮಣ ರಾಮಚಂದ್ರ ದೇವಳಿ	೩೦೨
೨೪	ಮಹಾಬಳೇಶ್ವರ ಮಾಣಿ ನಾಯಕ	೨೯೭
೨೪	ವಿಘ್ನೇಶ್ವರ ಮಂಜಪ್ಪ ಹೆಗಡೆ	೨೯೭
೨೬	ಪೀರಾಖಾನ ಇಸ್ಮಾಯಿಲ್‌ಖಾನ	೨೯೫
೨೭	ಅಬ್ದುಲ್‌ರಹಿಮಾನ್ ಶೇಖಫರೀದ	೨೮೮
೨೭	ದಾಸಾ ಮೂಡ್ಲಗಿರಿ ಶಾನಭಾಗ	೨೮೮
೨೯	ನರಸಿಂಗ ವೆಂಕಟರಮಣ ತಾಂಬ್ರಗೌರಿ	೨೮೭
೩೦	ದುರ್ಗಯ್ಯ ತಿಪ್ಪಯ್ಯ	೨೮೫
೩೧	ಗಣಪತ ಮಹಾಬಳೇಶ್ವರ ಹೆಗಡೆ	೨೮೪
೩೨	ಅಬ್ದುಲ್‌ಗಫಾರ್ ಅಬ್ದುಲ್ ರಹಿಮಾನ್	೨೮೩
೩೨	ಲಕ್ಷ್ಮಣ ಹನುಮಂತ ಕಾಮತ	೨೮೩
೩೪	ಅನಂತ ನಾರಾಯಣ	೨೮೨
೩೪	ಸುಬ್ರಾಯ ನಾರಾಯಣ ಹೆಗಡೆ	೨೮೨
೩೬	ಗೋವಿಂದ ಮಹಾಬಳೇಶ್ವರಭಟ್ಟ	೨೮೦
೩೬	ವಿಠೋಬಾ ತಿಮ್ಮಾ ದೇಸಾಯಿ	೨೮೦
೩೮	ಮನೋಹರ ಕೃಷ್ಣ ತೆಲಂಗ	೨೭೭
೩೮	ವೆಂಕಟೇಶ ವೈಕುಂಠ ಮಹಾಳೆ	೨೭೭
೪೦	ಕಾಶೀನಾಥ ಪುಂಡಲೀಕ ಪವಾರ	೨೭೩
೪೧	ನಾರಾಯಣ ಕೃಷ್ಣ ಗಾಂವಕರ	೨೭೨
೪೨	ಜಯರಾಮ ವಿಶ್ವನಾಥ ಸಿದ್ಧೇಶ್ವರ	೨೭೧
೪೩	ಅಂತೋನ ಸಾಲ್ವಾಡೋರ ರೊಡ್ರಿಕ್ಸ	೨೭೦

೪—೨೦೦೯

೪೪	ಮನೋಹರ ವೆಂಕಟೇಶ ಶಾನಭಾಗ	೨೭
೪೫	ಬಬಾಲೊ ಸಾವಳೋ ಕಿಂಡಳಿಕರ	೨೬
೪೬	ನಾರಾಯಣ ವೆಂಕಾ ನಾಯಿಕ	೨೬
೪೭	ಶಂಕರ ನಾಗಪ್ಪಾ ನಾಮಧಾರಿ	೨೬
೪೮	ವಾಸುದೇವ ವೆಂಕಟರಾವ ಬಾಳಗಿ	೨೬
೪೯	ವಿಠ್ಠಲ ಮುಕುಂದ ಬಾಂಡೇಕರ	೨೬
೫೦	ಕೃಷ್ಣ ವೆಂಕಪ್ಪಾ ಹೆಗಡೆ	೨೬
೫೧	ಬೊಮ್ಮಯ್ಯ ವೆಂಕಟರಾವ ಶೇಟ ರಾಯಕರ	೨೬
೫೨	ಅಂದ್ರ್ಯ-ಸಾಲ್ವಾಡೋರ ಅಂತೋನ ಫರ್ನಾಂಡಿಸ	೨೫
೫೩	ಮಂಜುನಾಥ ದೇವ ನಾಯಿಕ	೨೫
೫೪	ಗೋವಿಂದ ರಾಮಚಂದ್ರ ಭೇಂಡೆ	೨೫
೫೫	ಹನುಮಯ್ಯ ರಾಮನಾಯಿಕ	೨೫
೫೬	ವಿನಾಯಕ ಜನಾರ್ದನ ಭಟ್ಟ	೨೫
೫೭	ಗಣಪತಿ ನಾಗಪ್ಪಾ ಶಾನಭಾಗ	೨೫೧
೫೮	ಬೀರಪ್ಪಾ ನಾರಾಯಣ ವೈದ್ಯ	೨೫೦
೫೯	ಶಿವಾನಂದ ಗಣೇಶ ಶೆಟ್ಟಿ	೨೫೦
೬೦	ಶಂಕರ ಭಿಕರಾವ ನಾಯಿಕ	೨೪೯
೬೧	ವಿಠ್ಠಲ ಅನಂತ ಧಾರೇಶ್ವರ	೨೪೮
೬೨	ಚಂದಾ ಕಲ್ಯಾಣಿ ಬಾಂದೋಡೆಕರ	೨೪೬
೬೩	ದುರ್ಗಾ ಗೋವಿಂದ ಭಟಕಳ	೨೪೬
೬೪	ದೇವಯ್ಯಾ ಕೃಷ್ಣ ಆಚಾರಿ	೨೪೪
೬೫	ಬಸವಣ್ಣಿ ವೆಂಕು	೨೪೨
೬೬	ನಾಗಪ್ಪಾ ಸಂತಯ್ಯಾ ಚಿತ್ರಾಳ	೨೪೨
೬೭	ನಾರಾಯಣ ಗೋವಿಂದ ಅನಗಲ್ಲಿ	೨೪೨
೬೮	ದೇವೀದಾಸ ಅನಂತ ತೆಲಂಗ	೨೩೭
೬೯	ಅಲ್ಲಿಖಾನ ಅಬ್ದುಲ್‌ಖಾದರ	೨೩೪
೭೦	ರೋಹಿದಾಸ ದೇವು ಬಾಂಡೆಕರ	೨೩೧

೭೧	ನಾಗಪ್ಪಾ ರಾಮ ಪಟಗಾರ	೨೨೯
೭೨	ಲಕ್ಷ್ಮಣ ಸುಬ್ರಾಯ ಸೇಟ	೨೨೮
೭೩	ಬಾಬು ಜ್ಯಾನಕಿ ಬಾಡಕರ	೨೨೫
೭೪	ರಾಮಚಂದ್ರ ಹನುಮಂತ ಕಾಮತ	೨೨೦
೭೫	ಶಂಕರ ದೇವೀ	೨೧೯
೭೬	ವೆಂಕಟರಮಣ ತಿಮ್ಮಪ್ಪಾ ಹೆಗಡೆ	೨೧೯
೭೭	ಸಂಗಯ್ಯಾ ಗುರುಪಾದಯ್ಯಾ	೨೧೮

ಅಗ್ರಿಕಲ್ಚರಲ್ ಬಾಯಸ್‌ಕೋರ್ಸ

೧	ಮಹಾದೇವ ನಾರಾಯಣ ಭಂಡಾರಿ	೨೬೭
೧	ಪುರುಷೋತ್ತಮ ಶಂಕರ ನಾಯಿಕ	೨೬೭

ಉರ್ದು

೧	ಅಬ್ದುಲ್‌ಖಾದರ ಅಲಿ ಮುಲ್ಲಾ	೨೩೭+(೩೮ ಕನ್ನಡ)

೧೯೩೬ನೆಯ ಇಸ್ವಿಯ ಎಪ್ರಿಲ್ ತಿಂಗಳಿನಲ್ಲಿ ಆದ ಹೆಣ್ಣುಮಕ್ಕಳ ಟ್ರೇ. ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮವು

ಮೇ ಜೂನ ಸಂಯುಕ್ತ ಸಂಚಿಕೆಯಿಂದ ಮುಂದೆ ಸಾಗಿದ್ದು:—

ನಂ	ಹೆಸರು	ಗುಣಗಳು
	೨ನೆಯ ವರ್ಷದ ವರ್ಗ	
	ಬಾಸೆಲ್‌ಮಿಶನ್ ಧಾರವಾಡ	
೧	ಸಾವಿತ್ರಿ ಆಚಾರಿಯಪ್ಪ ಬನ್ನಾ	೧೦೧೩

ಅ. ನಂ.	ಹೆಸರು	ಗುಣಗಳು
	೧ನೆ ವರ್ಷದ ವರ್ಗ (ಸೀನಿಯರ ಕ್ಲಾಸ)	
	ಬಾ. ಮಿ. ಧಾರವಾಡ	
೨	ಲೀಲಾವತಿ ರಾಜೀವಪ್ಪ ಲದ್ವಾ	೮೩೨
೩	ಹವಾಲಾ ಅಬೇಲಪ್ಪ ಚಂದಾನವರ	೭೨೧
	ಡಿಸ್ಟ್ರಿಕ್ಟ ಚರ್ಚ ಬೋರ್ಡ ಧಾರವಾಡ	
೪	ಗೌರವ್ವ ಚನ್ನಪ್ಪ ಲಗಳಿ	೭೭೫
	ರೋಮನ್ ಕಥೋಲಿಕ್ ಮಿಶನ್ ಗುಳೇದಗುಡ್ಡ	
೫	ಅಂತೋನವ್ವ ಚಿನ್ನಪ್ಪ ಝುಳಿಕಿ	೮೬೯
೬	ಅನ್ನವ್ವಾ ದಾನಿಯೇಲಪ್ಪ ಝುಳಿಕಿ	೮೪೨

ಪತ್ರವ್ಯವಹಾರಗಳು

(೧) ಜಮಖಂಡಿ ಸಂಸ್ಥಾನದ **ಬಿದ್ರಿ** ಕನ್ನಡ ಶಾಲೆಯ ಹೆಡ್‌ಮಾಸ್ತರರು ಬರೆದು ಕಳಿಸಿದ್ದೇನೆಂದರೆ:— "ತಾ॥ ೯-೭-೩೬ನೆಯ ದಿವಸ ಈ ಊರ ಶಾಲಾ ಪಂಚರೂ ಸದ್ಗೃಹಸ್ಥರೂ ನಮ್ಮ ಶಾಲೆಗೆ ದಯಮಾಡಿಸಿದ್ದರು. ಆಗ ರಾ॥ ರಾ॥ ವೆಂಕಟೆಪ್ಪ ಕೋನಪ್ಪನವರ ಎಂಬವರು ಬಡಹುಡುಗರಿಗಾಗಿ **೨ರೂ. ಬೆಲೆ** ಬಾಳುವ ಪುಸ್ತಕಗಳನ್ನು ಕೊಟ್ಟರು. ಮತ್ತು ೧ ತಿಂಗಳೊಳಗಾಗಿ **ಚಲೋ** ಅಕ್ಷರ ಬರೆದು ತೋರಿಸಿದವರಿಗೆ ೩ ರೂಪಾಯಿಗಳನ್ನೂ, **ಪದ್ಧತಿಗೆ ಸರಿಯಾಗಿ** ಸೂರ್ಯ ನಮಸ್ಕಾರ ಹಾಕಿತೋರಿಸಿದವರಿಗೆ ೩ ರೂಪಾಯಿಗಳನ್ನೂ ಕೊಡುವೆನೆಂದು ವಚನ ಕೊಟ್ಟರು."

(೨) ಬೆಳಗಾವ ಜಿಲ್ಲೆಯ ಗೋಕಾಕ ತಾಲೂಕಿನ **ಅಂಕಲಗಿ** ಶಾಲೆಯ ಹೆಡ್ ಮಾಸ್ತರರು ಬರೆದು ಕಳಿಸಿದ್ದೇನೆಂದರೆ:—" ತಾ॥ ೨೧-೬-೧೯೩೫ನೇ ದಿವಸ ಈ

ಊರ ಸದ್ಗೃಹಸ್ಥರೂ ಶಾಲಾಪಂಚರೂ ಶಾಲೆಗೆ ದಯಮಾಡಿಸಿದ್ದರು. ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಇಮ್ಮಡಿ ಬೆಳೆದದ್ದರಿಂದ ಹುಡುಗರಿಗೆ ಕೂಡ್ರಲಿಕ್ಕೆ ಸ್ಥಳದ ತೊಂದರೆಯಾದದ್ದನ್ನು ತಿಳಿದು ನಮ್ಮ ಬಿನ್ನಹದ ಮೇರೆಗೆ ಮೆಸರ್ಸ ಕಾಗತಿಕರ ಹರದಿ ಮತ್ತು ಕಂಪನಿಯವರು ೪೦೦ ರೂ. ವೆಚ್ಚಮಾಡಿ ಒಂದು ವರ್ಗಕ್ಕೆ ಸಾಲು ವಷ್ಟು ಕೆಂಪು ಹಂಚಿನ ಒಂದು ಕಟ್ಟಡವನ್ನು ಕಟ್ಟಿಸಿಕೊಟ್ಟರು. ಶಿಕ್ಷಣಪ್ರೇಮಿ ಗಳಾದ ಸದ್ಗೃಹಸ್ಥರಿಗೆ ಭೂಷಣಾಸ್ಪದವಾದ ಈ ಸಂಗತಿಯನ್ನು ತಿಳಿಸಲಿಕ್ಕೆ ಆನಂದವಾಗುವದು ''

(೩) **ಬೆಳಗಾವ ಜಿಲ್ಹೆಯೊಳಗಿನ ಗಳತಗಿ** (ತಾ. ಚಿಕ್ಕೋಡಿ) ಶಾಲೆಯ ಹೆಡ್‌ಮಾಸ್ತರರಾದ ಶ್ರೀ. ಬುರ್ಗೆ ಇವರು " ತಾ. ೨೩-೭-೧೯೩೬ನೇ ದಿವಸ ತಮ್ಮ ಶಾಲೆಯಲ್ಲಿ ಶ್ರೀ ಸರಸ್ವತೀ ಪೂಜಾ ಸಮಾರಂಭವು ಒಳ್ಳೇ ವಿಜೃಂಭಣೆಯಿಂದ ಸಾಗಿತೆಂದೂ ಸ್ಕೂಲಪಂಚರೂ ಊರ ಸಹಕಾರೀ ಸಂಘದ ಸಭಾಸದರೂ ಚೇಅರಮ ನ್ನರೂ ಹಾಜರಿದ್ದರಿಂದೂ ಸಹಕಾರೀ ಸಂಘದ ಚೇಅರಮನ್ನರಾದ ಶ್ರೀ. ಅಣ್ಣಾರಾವ ಭೀಮಪ್ಪ ಚೌಲಗೆ ಇವರು ಶಾಲೆಯ ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿಯೊಂದು ಇಯತ್ತೆಯಲ್ಲಿ ೧ನೇ ನಂಬರ ಪಡೆದು ಪಾಸಾದ ವಿದ್ಯಾರ್ಥಿಗೆ ೧ ರೂ. ಯಂತೆ ೭ ರೂ. ಸ್ವಂತ ಇನಾಮು ಕೊಟ್ಟದ್ದಲ್ಲದೆ ಪ್ರತಿವರ್ಷ ಇದರಂತೆ ಕೊಡಲು ಆಶ್ವಾ ಸನ ಕೊಟ್ಟರಿಂದೂ ಊರ ಸಹಕಾರೀ ಸಂಘವವರು ಶಾಲೆಯ ಉಪಕರಣಗಳನ್ನು ಕೊಳ್ಳುವದಕ್ಕಾಗಿ ೨೫ ರೂ. ಸಹಾಯದ್ರವ್ಯವನ್ನು ಕೊಟ್ಟರಿಂದೂ'' ತಿಳಿಸಿರುವರು.

—— o —— o ——

ಪ್ರಕಟನೆಗಳು

ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳ ಉಪಯೋಗಕ್ಕಾಗಿ ಉರ್ದು ಬುಕ್‌ಕಮಿಟಿ ಮುಂಬಯಿ ಇವರು ತಾ. ೧೪ನೇ ಮಾರ್ಚ ೧೯೩೩ನೆಯ ದಿವಸ ಮಂಜೂರ ಮಾಡಿದ ಪುಸ್ತಕಗಳ ಯಾದಿಯು.

T=ಟೆಕ್ಸ್ಟ, L=ಲಾಯಬ್ರರಿ, P=ಪ್ರಾಯಿಝ್, ಪ್ರಾ= ಪ್ರಾಥಮಿಕ, ಮಾ=ಮಾಧ್ಯಮಿಕ

ಸಂ.		ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ
೧–೨	ಬಾಲಕರ ಡ್ರಾಯಿಂಗ ತರಗತಿಗಳು ೧ ಮತ್ತು ೨	ಸರದಾರ ಹರ್ಮೂರಸಿಂಗ ಖಾಲ್ಸಾ	ಲಕ್ಷ್ಮೀನಾರಾಯಣ ಅಗಾರವಾಲ ಆಗ್ರಾ	೦–೪–೦ ಪ್ರತಿಯೊಂದಕ್ಕೆ	ಪ್ರಾ.ಶಾಗಳ ಶಿಕ್ಷಕರ L ಬುಕ್ಕಾಗಿ
೩	ವಿಸೂಲೆ ಲುಗತ್	......	ಆ. ಇಂ. ಎಜ್ಯುಕೇಶನಲ್ ಲಿಟರರಿ ಬುಕ್ ಸೊಸೈಟಿ ಲಾಹೋರ	೧–೫–೦	ಪ್ರಾ.ಶಾ.ಗಳ. ಮಾ.ಶಾ.ಗಳ ಹಾಗೂ ಟ್ರೇ.ಸಂ.ಗಳ L ಬುಕ್ಕಾಗಿ
೪	ಅನೀಸುಲ್ ಕವಾಯಿದ್ ಭಾಗ ೧ ೧ನೇ ಆ. ೧೯೩೫	ಅಸದ್ ಅನ್ಸಾರಿ ನಸೀರಾಬಾದ ಭಡಗೋಳ	ಆಜ್ಮಲ್ ಪ್ರೆಸ್ ಬಾಂಬೆ	೦–೨–೬	ಪ್ರಾ.ಶಾ.ಗಳ T ಬುಕ್ಕಾಗಿ ಮಾತ್ರ
೫	ಕುವ್ವತುಲ್ ಕುರ್ರಾನ	ವಾಹಿದಾ ಖಾನಮ್ ಲೇಡೀ ಪ್ರಿ॥ ಕುರಾಣೀ ಕಾಲೇಜ ಬೆಂಗಳೂರ	ಕೌಮಿ ಪ್ರೆಸ್ ಬೆಂಗಳೂರ ಕ್ಯಾಂಪ	೦–೬–೦	ಪ್ರಾ.ಶಾ.ಗಳ ಶಿಕ್ಷಕರಹಾಗು ವಿ.ಗಳ L ಬುಕ್ಕಾಗಿ ಮಾತ್ರ
೬	ಅಸಸುಲ್ ಕುರ್ರಾನ್	ಸದರ	ಸದರ	೦–೧೦–೦	ಸದರ

೬–೧೦	ಉರ್ದುಕಾ ಕಾಯಿದಾ ನಂ. ೧–೨–೩ ಮತ್ತು ೪	......	[illegible] ಕೇಶನ ಲಿಟರರಿ ಸೊಸೈಟಿ ಲಾಹೋರ	i ೦–೬–೦ ii ೦–೨–೦ iii ೦–೧–೬ iv ೦–೧–೬	ಪ್ರಾ. ಶಾ. T ಬುಕ್ಕಾಗಿ ಮಾತ್ರ
೧೧-೧೨	ಹಿಂದುಸ್ಥಾನದ ಇತಿಹಾಸ (ಹಿಸ್ಟ್ರೀ ಆಫ್ ಇಂಡಿಯಾ) ಭಾಗ ೧ ಹಾಗು ೨	ಪ್ರೊ. ಮಹಮ್ಮದ ಶಫಿ ಇಸ್ಲಾಮಿಯಾ ಕಾಲೇಜ ಪೇಶಾವರ	ಕೌಮಿ ಕುತುಬಖಾನಾ ರೇಲ್ವೇರೋಡ ಲಾಹೋರ	i ೦–೯–೩ ii ೦–೮–೦	ಪ್ರಾ. ಶಾ. ಗಳ L ಬುಕ್ಕಾಗಿ
೧೩-೧೬	ಲಡಕಿಯೊಂಕೆ ಲಿಯೆನಿಯಾ ಹಿಸಾಬ ೪ ಭಾಗಗಳು	ಮಹಮ್ಮದ ನಾಶಿರ ಹುಮಾಯೂನ ಬಿ. ಎ.	ಸದರ	i ೦–೫–೧೧ ii ೦–೭–೯ iii ೦–೭–೯ iv ೦–೭–೦	ಪ್ರಾಯ್ಮರಿ ಗರ್ಲ ಶಾಲೆಗಳ T ಬುಕ್ಕಾಗಿ
೧೭–೨೦	ಅರಿಥ್‌ಮೆಟಿಕ್‌ಕೋರ್ಸ ಭಾ. ೧,೨,೩ ಹಾಗು ೪	ಸೈಯಾದ ಮಾಮತಾರ್ಝು ನಬಿ ಕರಾಚಿ	ಅಬ್ಬೆಸಿ ಲಿಥೊ ಪ್ರಿ. ಕರಾಚಿ	i ೦–೫–೦ ii ೦–೬–೦ iii ೦–೭–೦ iv ೦–೮–೦	ಪ್ರಾ. ಶಾ. ಗಳ T ಬುಕ್ಕಾಗಿ ಮಾತ್ರ
೨೧	ಉರ್ದು ಇನ್‌ಶಾ ಅಥವಾ ಲೆಟರ್‌ರಾಯಿಟಿಂಗ್ (ಪತ್ರಬರಹ)	ಸದರ	ಸದರ	೦–೩–೩	ಪ್ರಾ. ಶಾ. ವಿ ಗಳ L ಬುಕ್ಕಾಗಿ

ನಂ.		ಗ್ರಂಥಕರ್ತನ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ
೨೨	ಪ್ರಾಯ್ಮರಿ ಅಟ್ಲಾಸ್	ಸೈಯದ ಮಮುತಾರ್ಝು ನಬಿ ಕರಾಚಿ	ಅಬ್ಬೆಸಿ ಲಿಥೊ ಪ್ರೆ॥ ಕರಾಚಿ	೦-೩-೦	ಪ್ರಾ. ಶಾ. ಗಳ ಉಪಯೋಗಕ್ಕಾಗಿ
೨೩	ಜಾಗ್ರಾಫಿಯಾ ಆಫ್ ಕರಾಚಿ ತಾಲೂಕ	ಸದರ	ಸದರ	೦-೨-೬	ಪ್ರಾ. ಶಾ.ಗಳ ಶಿ. ರ L ಬುಕ್ಕಾಗಿ
೨೪	ಅಟ್ಲಾಸ್ ಜಾಗ್ರಾಫಿಯಾ ಆಫ್ ಕರಾಚಿ ಡಿಸ್ಟ್ರಿಕ್ಟ	ಸದರ	ಸದರ	೦-೨-೦	ಸದರ
೨೫	ಕಮ್ಯೂನಿಝುಮ್ ಆ್ಯಂಡ ಇಸ್ಲಾಮ ಉರ್ದು ಎಡಿಸನ್	......	ಖಾನ ಬಹಾದ್ದೂರ ಹಾಜಿಮಹಮ್ಮದಯುಸೂಫ ಅಹಮ್ಮದ ಪೈ ದಿಲ್ಲಿ	......	ಪ್ರಾ. ಶಾ. ಹಾಗು ಮಾ. ಶಾ. ಗಳ ಟ್ರೇ. ಸ.ಗಳ ಶಿಕ್ಷಕರ L ಬುಕ್ಕಾಗಿ

ಮುಂಬೈ ೨೪-೬-೩೬

ಎನ್. ಜಿ. ಗಾಡಗೀಳ,
ಸೆ. ಉ. ಸ್ಕೂ. ಕಮಿಟಿ ಮುಂಬೈ

Reg. No. B. 3691

ವಾಗ್ವಿಲಾಸ ಬುಕ್‌ಡೀಪೋ ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕಮಿಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ಬೆಲೆ ರೂ ಆ ಪೈ
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦– ೮–೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳಿಪೇಟೆಕೃತ)	೦– ೬–೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦– ೪–೦
ಹಿಂದುಸ್ಥಾನದ ಇತಿಹಾಸ (ಬಸವನಾಳಕೃತ)	೦– ೮–೦
ಲಘುವ್ಯಾಕರಣ (ವೈ. ಕಟ್ಟೀಕೃತ)	೦– ೦–೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦– ೩–೦
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦–೧೨–೦
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ. ಗೆ	೦– ೨–೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦– ೪–
,, ,, ೩ನೇ ,,	೦– ೫–
,, , ೪ನೇ ,,	೦– ೮–
ಅಂಕಗಣಿತ (ಗಾಂವಕರಕೃತ) ೩ನೇ ,,	೦– ೫–
ಧಾರವಾಡ ಜಿಲ್ಹಾ ವರ್ಣನೆ (ಅಣ್ಣೀಗೇರಿ ಕೃತ) ೩ನೇ ಇ. ಗೆ	೦– ೪–
ವಿಜಾಪೂರ ,, ,, (,,) ೩ನೇ	೦– ೪–
ಧಾರವಾಡ ಜಿಲ್ಹಾ ,, (ಕುರಡೀಕೃತ)	೦– ೫–
ಹಿಂದುಸ್ಥಾನ ಭೂಗೋಲು (ಮುಗದಾಲಕೃತ)	೦– ೮–
ನುಡಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦–೧೨–
ಭೂಗೋಲವಿದ್ಯೆ ೩ನೇ ಭಾಗ (ವೈ. ಕಟ್ಟೀಕೃತ)	೦– ೫–
,, ವಿಜ್ಞಾನ ಸಚಿತ್ರ (ನಾಡಿಗೇರಕೃತ)	೦–೧೨–
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦– ೨–
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦–೧೦–
ಸರಸ್ವತೀ ವಿಜಯ (ಬೂದೀಹಾಳಕೃತ)	೦– ೪–

ಪತ್ತೆ:—ವಿ. ಆರ್. ಶಿವನಾಗಪ್ಪ

ಬುಕ್‌ಸೇಲರ ಹುಬ್ಬಳ್ಳಿ

ಸಪ್ಟಂಬರ-೧೯೩೬ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ನಂ	ವಿಷಯ	ಪುಟ.
೧	ಮುಂಬಯಿ ಇಲಾಖೆಯಲ್ಲಿ ವಿದ್ಯಾಪ್ರಸಾರವು	೧
೨	ನಮ್ಮ ದೇಶದ ಶಿಕ್ಷಣದ ಇತಿಹಾಸವೂ ಶಿಕ್ಷಣ ವಿಷಯಕ ಆಧುನಿಕ ಸುಧಾರಣೆಗಳೂ	೬
೩	ಆಯುರ್ವೇದದ ಮಹತ್ವವೂ ಇತಿಹಾಸವೂ	೧೩
೪	ಶಿಶುಶಾಲೆಗಳು	೨೦
೫	ಲೋಕವಾರ್ತೆ	೨೬
೬	೧೯೩೬ನೆ ಇಸವಿ ಎಪ್ರಿಲ್ ತಿಂಗಳಲ್ಲಾದ ಗಂಡುಮಕ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮ	೨೮
೭	ಪ್ರಕಟನೆಗಳು	೩೦

Printed by K. B, Bhise at the Karnatak printing Works, Dharwar
and Published by D. V. Kale, B. A., Head Master,
Training School, Dharwar, at his Office.

ಮಾರಾಟಕ್ಕೆ ಸಿದ್ಧವಿದೆ

ಗಣಿತ ಶಿಕ್ಷಕ

ಬ. ದು. ಹಿರೇಮಠ ಕೃತ

೩ನೆಯ ಆವೃತ್ತಿ

ಶಿಕ್ಷಕ ಬಾಂಧವರೇ, ಈ ಪುಸ್ತಕವು ಕನ್ನಡ ೫—೬—೭ ನೆಯ ಇಯತ್ತೆಗ ಮತ್ತು ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಮತ್ತು ಮಾಧ್ಯಮಿಕ ಶಾಲೆಗ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಅಭ್ಯಾಸಕ್ರಮಕ್ಕನುಸರಿಸಿ ರಚಿ ಸಲ್ಪಟ್ಟಿದೆ. ಇದರ ಮಹತ್ವವನ್ನು ವರ್ಣಿಸಲವಶ್ಯವಿಲ್ಲ. ಕರ್ನಾಟಕದ ಎಲ್ಲ ಜ ರಿಂದಲೂ ಆದರವನ್ನು ಹೊಂದಿರುವದು. ಆದುದರಿಂದಲೇ ಸ್ವಲ್ಪದಿವಸಗಳಲ್ಲಿಯೇ ಇದು **ಮೂರನೆಯ ಆವೃತ್ತಿ**ಯನ್ನು ಪಡೆದಿರುವದು. ಒಂದು ಪ್ರತಿಯನ್ನಾದರೂ ತರಿಸಿ ನೋಡಿದರೆ ಅದರ ಯೋಗ್ಯತೆಯು ತಮಗೂ ತಿಳಿಯುವದು.

ವ್ಯಾಪಾರಸ್ಥರಿಗೂ ಶಿಕ್ಷಕರಿಗೂ ಯೋಗ್ಯ ಸವಲತು ದೊರೆಯುವದು. ಪುಸ್ತಕ ಗಳು ಏ. ಆರ್. ಶಿವನಾಗಪ್ಪ ಹುಬ್ಬಳ್ಳಿ ಇವರಲ್ಲಿಯೂ ಎಲ್ಲ ಊರುಗಳ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ಬಸಪ್ರಭಯ್ಯಾ ದುಂಡಯ್ಯಾ ಹಿರೇಮಠ,
ಕನ್ನಡ ಶಾಲಾಮಾಸ್ತರ ವಿಜಾಪುರ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ಸಂಪುಟ ೭೫	ಸೆಪ್ಟಂಬರ ೧೯೩೬	ವರ್ಷ ೮ ಸಂ. ೬

ಮುಂಬಯಿ ಇಲಾಖೆಯಲ್ಲಿ ವಿದ್ಯಾಪ್ರಸಾರವು.

೧೯೩೪-೧೯೩೫

೧೯೩೪-೩೫ನೆಯ ವರ್ಷದಲ್ಲಿ ನಮ್ಮ ಇಲಾಖೆಯಲ್ಲಿ ವಿದ್ಯಾಪ್ರಸಾರವು ಯಾವ ಸ್ಥಿತಿಯಲ್ಲಿದ್ದಿತೆಂಬದನ್ನು ತೋರಿಸುವ ಮೆ॥ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ನರವರ ವರದಿಯು ಮೊನ್ನೆ ಮೊನ್ನೆ ಪ್ರಕಟವಾಗಿರುವದು. ಅದರೊಳಗಿನ ಕೆಲವು ಮಹತ್ವದ ಸಂಗತಿಗಳನ್ನು ನಮ್ಮ ಶಿಕ್ಷಕರು ತಿಳಿದಿರುವದು ಒಳ್ಳೆಯದೆಂಬ ವಿಚಾರದಿಂದ ಈ ಚಿಕ್ಕ ಲೇಖನವು ಬರೆಯಲ್ಪಟ್ಟಿರುವದು.

ಈ ವರ್ಷದ ಅಂತ್ಯಕ್ಕೆ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಕೂಡಿ ೧೩ ೮೧ ೪೯೭ ವಿದ್ಯಾರ್ಥಿಗಳು ಓದುತ್ತಿದ್ದರು. ಮತ್ತು ೪ ೧೦ ೮೬ ೩೫೪ ರೂ.ಗಳು ವೆಚ್ಚವಾದವು. ಈ ಒಟ್ಟು ಸಂಖ್ಯೆಯಲ್ಲಿ ೧೨ ೦೬ ೮೮೨ ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಗಳಲ್ಲಿರುವರು. ಮತ್ತು ಪ್ರಾಥಮಿಕ ಶಿಕ್ಷಣಕ್ಕಾಗಿ ೧ ೯೯ ೩೨ ೫೭೩ ರೂ. ಗಳು ವೆಚ್ಚವಾದವು. ಅಂದರೆ ಒಟ್ಟು ವೆಚ್ಚದಲ್ಲಿ ಸುಮಾರು ಅರ್ಧದಷ್ಟು ಹಣವು ಪ್ರಾಥಮಿಕ ಶಿಕ್ಷಣಕ್ಕಾಗಿಯೇ ವಿನಿಯೋಗಿಸಲ್ಪಟ್ಟದೆಯೆಂದಹಾಗಾಯಿತು.

ಮಾರಾಟಕ್ಕೆ ಸಿದ್ಧವಿದೆ

ಗಣಿತ ಶಿಕ್ಷಕ

ಬ. ದು. ಹಿರೇಮಠ ಕೃತ

೩ನೆಯ ಆವೃತ್ತಿ

ಶಿಕ್ಷಕ ಬಾಂಧವರೇ, ಈ ಪುಸ್ತಕವು ಕನ್ನಡ ೫–೬–೭ ನೆಯ ಇಯತ್ತೆ ಮತ್ತು ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ಮತ್ತು ಮಾಧ್ಯಮಿಕ ಶಾಲೆಗ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಅಭ್ಯಾಸಕ್ರಮಕ್ಕನುಸರಿಸಿ ರ ಸಲ್ಪಟ್ಟಿದೆ. ಇದರ ಮಹತ್ವವನ್ನು ವರ್ಣಿಸಲವಶ್ಯವಿಲ್ಲ. ಕರ್ನಾಟಕದ ಎಲ್ಲ ಜ ರಿಂಪಲೂ ಆದರವನ್ನು ಹೊಂದಿರುವದು. ಆದುದರಿಂದಲೇ ಸ್ವಲ್ಪದಿವಸಗಳಲ್ಲಿಯೆ ಇದು **ಮೂರನೆಯ ಆವೃತ್ತಿ**ಯನ್ನು ಪಡೆದಿರುವದು. ಒಂದು ಪ್ರತಿಯನ್ನಾದ ತರಿಸಿ ನೋಡಿದರೆ ಅದರ ಯೋಗ್ಯತೆಯು ತಮಗೂ ತಿಳಿಯುವದು.

ವ್ಯಾಪಾರಸ್ಥರಿಗೂ ಶಿಕ್ಷರಿಗೂ ಯೋಗ್ಯ ಸವಲತು ದೊರೆಯುವದು. ಪುಸ್ತ ಗಳು ಏ. ಆರ್. ಶಿವನಾಗಪ್ಪ ಹುಬ್ಬಳ್ಳಿ ಇವರಲ್ಲಿಯೂ ಎಲ್ಲ ಊರುಗಳ ಪುಸ್ತ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ಬಸಪ್ರಭಯ್ಯಾ ದುಂಡಯ್ಯಾ ಹಿರೇಮಠ,
ಕನ್ನಡ ಶಾಲಾಮಾಸ್ತರ ವಿಜಾಪೂರ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:— ದತ್ತಾತ್ರೇಯ ವಿಶ್ವನಾಥರಾವ ಕಾಳೆ, ಬಿ. ಎ.

ಸಂಪುಟ ೭೫	ಸಪ್ಟಂಬರ ೧೯೩೬	ವರ್ಷ ೮ ಸಂ. ೬

ಮುಂಬಯಿ ಇಲಾಖೆಯಲ್ಲಿ ವಿದ್ಯಾಪ್ರಸಾರವು.

೧೯೩೪-೧೯೩೫

೧೯೩೪-೩೫ನೆಯ ವರ್ಷದಲ್ಲಿ ನಮ್ಮ ಇಲಾಖೆಯಲ್ಲಿ ವಿದ್ಯಾಪ್ರಸಾರವು ಯಾವ ಸ್ಥಿತಿಯಲ್ಲಿದ್ದಿತೆಂಬದನ್ನು ತೋರಿಸುವ ಮೆ॥ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ನರವರ ವರದಿಯು ಮೊನ್ನೆ ಮೊನ್ನೆ ಪ್ರಕಟವಾಗಿರುವದು. ಅದರೊಳಗಿನ ಕೆಲವು ಮಹತ್ವದ ಸಂಗತಿಗಳನ್ನು ನಮ್ಮ ಶಿಕ್ಷಕರು ತಿಳಿದಿರುವದು ಒಳ್ಳೆಯದೆಂಬ ವಿಚಾರದಿಂದ ಈ ಚಿಕ್ಕ ಲೇಖನವು ಬರೆಯಲ್ಪಟ್ಟಿರುವದು.

ಈ ವರ್ಷದ ಅಂತ್ಯಕ್ಕೆ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಕೂಡಿ ೧೩ ೮೧ ೪೯೭ ವಿದ್ಯಾರ್ಥಿಗಳು ಓದುತ್ತಿದ್ದರು. ಮತ್ತು ೪ ೧೦ ೮೬ ೩೫೪ ರೂ.ಗಳು ವೆಚ್ಚವಾದವು. ಈ ಒಟ್ಟು ಸಂಖ್ಯೆಯಲ್ಲಿ ೧೨ ೦೬ ೮೮೨ ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಗಳಲ್ಲಿರುವರು. ಮತ್ತು ಪ್ರಾಥಮಿಕ ಶಿಕ್ಷಣಕ್ಕಾಗಿ ೧ ೯೯ ೩೨ ೫೭೩ ರೂ. ಗಳು ವೆಚ್ಚವಾದವು. ಅಂದರೆ ಒಟ್ಟು ವೆಚ್ಚದಲ್ಲಿ ಸುಮಾರು ಅರ್ಧದಷ್ಟು ಹಣವು ಪ್ರಾಥಮಿಕ ಶಿಕ್ಷಣಕ್ಕಾಗಿಯೇ ವಿನಿಯೋಗಿಸಲ್ಪಟ್ಟಿದೆಯೆಂದಹಾಗಾಯಿತು.

ಈ ವರ್ಷದಲ್ಲಿ ನಡೆದ ಮಹತ್ವದ ಕಾರ್ಯಗಳಲ್ಲಿ ಕೆಲವನ್ನು ಕೆಳಗೆ ಕಾಣಿಸಿದೆ.

೧. ಡೆಕ್ಕನ್ ಕಾಲೇಜವು ನಿಲ್ಲಿಸಲ್ಪಟ್ಟಿತು.

೨. ಧಾರವಾಡದ ಕರ್ನಾಟಕ ಕಾಲೇಜಕ್ಕೆ ಹೊಂದಿ ಬಿ. ಎಸ್‌ಸಿ. ವರ್ಗವು ಪ್ರಾರಂಭಿಸಲ್ಪಟ್ಟಿತು.

೩. ಕೊಲ್ಹಾಪುರದಲ್ಲಿ ಶ್ರೀ. ಮಹಾರಾಣಿ ತಾರಾಬಾಯಿ ಟೀಚರ್ಸ ಟ್ರೇನಿಂಗ ಕಾಲೇಜವೆಂಬ ಮಾಧ್ಯಮಿಕ ಶಿಕ್ಷಕರ ಟ್ರೇನಿಂಗ ಕಾಲೇಜವು ಪ್ರಾರಂಭಿಸಲ್ಪಟ್ಟಿತು. [ಈ ವರೆಗೆ ನಮ್ಮ ಇಲಾಖೆಯಲ್ಲಿ ಮುಂಬಯಿಯಲ್ಲಿ ಒಂದೇ ಒಂದು ಇಂಥ ಟ್ರೇನಿಂಗಕಾಲೇಜವಿದ್ದಿತು.]

೪. ೧೯೩೫ನೆಯ ಇಸ್ವಿಯ ಜೂನ ತಿಂಗಳಿನಿಂದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜಗಳಲ್ಲಿ ೩ನೆಯ ವರ್ಷದ ವರ್ಗಗಳು ಪ್ರಾರಂಭಿಸಲ್ಪಟ್ಟವು.

೫. ಮುಂಬಯಿಯ ವಿಶ್ವವಿದ್ಯಾಲಯದಲ್ಲಿ ಕೆಮಿಕಲ್ ಟೆಕ್ನಾಲೋಜಿಯ ವಿಭಾಗವನ್ನು ಪ್ರಾರಂಭಿಸಿತು. ಈ ವಿಭಾಗದಲ್ಲಿ ರಸಾಯನಶಾಸ್ತ್ರ ಹಾಗು ಪದಾರ್ಥವಿಜ್ಞಾನ ಶಾಸ್ತ್ರಗಳನ್ನು ಓದಿದ ಪದವೀಧರರಿಗೆ ಔದ್ಯೋಗಿಕ ಶಿಕ್ಷಣದ ಮಾರ್ಗದಲ್ಲಿ ಪರಿಶ್ರಮಮಾಡಿ ಹೆಚ್ಚಿನ ಜ್ಞಾನವನ್ನು ಪಡೆಯಲು ಅನುಕೂಲವಿರುವದು. ಸದ್ಯಕ್ಕೆ ಟೆಕ್ಸ್ಟಾಯಿಲ್ ಕೆಮಿಸ್ಟ್ರಿ ಮತ್ತು ಕೆಮಿಕಲ್ ಎಂಜಿನಿಯರಿಂಗ್ ಎಂಬ ಎರಡು ಭಾಗಗಳು ಪ್ರಾರಂಭಿಸಲ್ಪಟ್ಟಿವೆ.

ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಹೇಳಿರುವ ಕೆಳಗಿನ ಸಂಗತಿಗಳು ವಿಚಾರಾರ್ಹವಾಗಿವೆ:—

"೧. **ಪ್ರಸಾರ**— ಪ್ರಾಥಮಿಕ ಶಿಕ್ಷಣದ ಪ್ರಸಾರವು ಮಂದಗತಿಯಿಂದಲೇ ಆದರೂ ಸ್ಥಿರತೆಯಿಂದ ಮುಂದೆ ಸಾಗಿರುವದು. ನಮ್ಮ ಇಲಾಖೆಯಲ್ಲಿ ಹಳ್ಳಿಗಳೂ ಪಟ್ಟಣಗಳೂ ಸೇರಿ ೨೬ ೮೮೯ ಇರುವವು. ಅವುಗಳಲ್ಲಿ ೧೬ ೨೦೧ ಹಳ್ಳಿಗಳಿಗೆ ಇನ್ನೂ ಶಾಲೆಯಿಲ್ಲ. ಇವುಗಳಲ್ಲಿ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಹಳ್ಳಿಗಳು ೨೫೪ ಇರುವವು. ೫೦೦ ರಿಂದ ಸಾವಿರದ ವರೆಗೆ ಜನಸಂಖ್ಯೆಯಿರುವವು ೧೬೨೪; ೪೦೦ ರಿಂದ ೫೦೦ ರ ವರೆಗೆ ಜನಸಂಖ್ಯೆಯಿರುವವು ೨೬೬೮. ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಎಲ್ಲ ಊರುಗಳಲ್ಲಿ ಒಂದು ಪ್ರಾಥಮಿಕ ಶಾಲೆಯಿರು

ವದು ತೀರ ಆವಶ್ಯಕವಾದ ಮಾತೆಂಬದನ್ನು ಸ್ಥಾನಿಕ ಅಧಿಕಾರಿ ಸಂಸ್ಥೆ (Local Authority) ಗಳು ವಿಚಾರಮಾಡಬೇಕು. ಮಿಕ್ಕ ಸಣ್ಣ ಹಳ್ಳಿಗಳಲ್ಲಿ ಸ್ಥಾನಿಕ ಸಂಸ್ಥೆಗಳಿಂದ ಸಹಾಯಹೊಂದುವ ಗಾಮಠೀ ಶಾಲೆಗಳನ್ನು ಸ್ಥಾಪಿಸುವ ಕಾರ್ಯವನ್ನು ಗ್ರಾಮಸುಧಾರಣೆಯ ಕಮೀಟಿಯವರು ಕೈಕೊಂಡರೆ ಒಳ್ಳೆಯದಾಗುವದು. ಸಾಕಷ್ಟು ವಿದ್ಯಾರ್ಥಿಗಳಿಲ್ಲದಿರುವ ಸಣ್ಣಹಳ್ಳಿಯ ಶಾಲೆಗಳನ್ನು ನಿಲ್ಲಿಸಿ ಇಂಥ ದೊಡ್ಡ (೧೦೦೦ಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ) ಊರುಗಳಲ್ಲಿ ಶಾಲೆಗಳನ್ನು ಪ್ರಾರಂಭಿಸುವ ಕಾರ್ಯವನ್ನು ಬೋರ್ಡಿನವರು ಕೈಕೊಂಡಿದ್ದರೆ ಒಳ್ಳೆಯದಾಗುತ್ತಿತ್ತು.

೨. **ಕಟ್ಟಡಗಳು**— ಪ್ರಾಥಮಿಕ ಶಾಲೆಗಳ ಕಟ್ಟಡಗಳ ಸ್ಥಿತಿಯು ಸಮಾಧಾನಕರವಿಲ್ಲ. ಜಿಲ್ಹಾಲೋಕಲ್‌ಬೋರ್ಡುಗಳಿಗೆ ಒಪ್ಪಿದ ಒಟ್ಟು ೧೦ ೨೪೧ ಸಾಲೆಗಳಲ್ಲಿ ನೂರಕ್ಕೆ ೨೭ ರಷ್ಟು ಅಂದರೆ ೨ ೮೫೮ ಸಾಲೆಗಳಿಗೆ ಮಾತ್ರ ಸ್ವತಂತ್ರ ಕಟ್ಟಡವಿರುವದು. ೭ ೬೯೨ ಸಾಲೆಗಳಿಗೆ ಅಂದರೆ ನೂರಕ್ಕೆ ೭೫.೮ದಷ್ಟು ಶಾಲೆಗಳು ಬಾಡಿಗೆಯಿಲ್ಲದ ಗುಡಿ ಚಾವಡಿ ಧರ್ಮಶಾಲೆಗಳಲ್ಲಿ ಇಲ್ಲವೆ ಖಾಸಗಿ ಮನೆಗಳಲ್ಲಿ ನಡೆಯುವವು. ಈ ಕಟ್ಟಡಗಳು ಶಾಲೆಯ ಕೆಲಸಕ್ಕೆ ತೀರ ನಿರುಪಯೋಗಿಯಾದವೆಂಬದನ್ನು ಹೇಳುವ ಕಾರಣವಿಲ್ಲ.

೩. **ಶಿಕ್ಷಕರು**— ನಮ್ಮ ಇಲಾಖೆಯಲ್ಲಿ ಈ ವರ್ಷದ ಕೊನೆಗೆ ಶಿಕ್ಷಕರೂ ಶಿಕ್ಷಿಕೆಯರೂ ಕೂಡಿ ೩೮ ೩೭೨ ಜನರಿದ್ದು ಅವರಲ್ಲಿ ೧೮ ೭೨೦ ಎಂದರೆ ನೂರಕ್ಕೆ ೪೮.೮ ರಷ್ಟು ಮಾತ್ರ ಜನರು ಟ್ರೇಂಡರಿರುವರು. ೧೯೨೨ ರಲ್ಲಿ ಈ ಸಂಖ್ಯೆಯು ಅತಿಶಯ ಹೆಚ್ಚಾಗಿ ಶಿಕ್ಷಕರ ಪಗಾರಕ್ಕಾಗಿಯೇ ಹೆಚ್ಚು ಹಣವನ್ನು ವೆಚ್ಚ ಮಾಡುವ ಪ್ರಸಂಗವೊದಗಿ ವಿದ್ಯಾಪ್ರಸಾರವು ಕುಂಠಿತವಾಗುವ ಲಕ್ಷಣಗಳು ತೋರಿಬಂದವು. ಅಂದಿನಿಂದ ಟ್ರೇಂಡ್ ಶಿಕ್ಷಕರ ಸಂಖ್ಯೆಯನ್ನು ವಿಶೇಷವಾಗಿ ೨, ೩ ನೆಯ ವರ್ಷಗಳ ಟ್ರೇಂಡರ ಸಂಖ್ಯೆಯನ್ನು ತಗ್ಗಿಸುವ ಉದ್ದೇಶದಿಂದ ಅನೇಕ ಟ್ರೇನಿಂಗ್ ಸಂಸ್ಥೆಗಳನ್ನು ನಿಲ್ಲಿಸಿ ಮುಖ್ಯ ಟ್ರೇನಿಂಗ್ ಕಾಲೇಜಗಳಲ್ಲಿಯ ಮೇಲಿನ ವರ್ಗಗಳನ್ನು ಕಡಿಮೆ ಮಾಡಬೇಕಾಯಿತು. ಆದರೆ ಹೀಗೆ ಟ್ರೇಂಡ್ ಶಿಕ್ಷಕರ ಸಂಖ್ಯೆಯು ಕಡಿಮೆಯಾಗಲು ಶಿಕ್ಷಣದ ಯೋಗ್ಯತೆಯೂ ಕಡಿಮೆಯಾಗುತ್ತಬಂದಿತೆಂದು ಹೇಳಬೇಕಾಗುವದು. ಶಿಕ್ಷಣ ಶಾಸ್ತ್ರದ ಅಭ್ಯಾಸವಿಲ್ಲದೆ ಕಲಿಸುವ ಕೆಲಸಕ್ಕೆ ತೊಡಗಿದ ಶಿಕ್ಷಕನಿಗೆ ೩೦–೪೦ ವಿದ್ಯಾರ್ಥಿಗಳಿರುವ ನಾಲ್ಕೈದು ವರ್ಗಗಳ

ಅಭ್ಯಾಸವನ್ನು ಸರಿಯಾಗಿ ಸಾಗಿಸುವ ಸಂದರ್ಭ ಬಿದ್ದಾಗ ಅದು ಅವನಿಗೆ ಅಸಾಧ್ಯವೆನಿಸಿದರೆ ಆಶ್ಚರ್ಯವೇಕಾಗಬೇಕು ? ಪ್ರಾಥಮಿಕ ಶಿಕ್ಷಣದಲ್ಲಾಗುವ ಅಪವ್ಯಯಕ್ಕೆ ಇಂಥ ಅಂಟ್ರೇಂಡ್ ಶಿಕ್ಷಕರೇ ಬಹ್ವಂಶದಿಂದ ಕಾರಣರೆಂದು ಅನುಭವದಿಂದ ತಿಳಿದುಬಂದಿರುವದು. ಇದೂ ಅಲ್ಲದೆ ಹೊಸದಾಗಿ ನಿಯಮಿಸಿಕೊಳ್ಳುವ ಶಿಕ್ಷಕರ ಯೋಗ್ಯತೆಯನ್ನು ನೋಡಿದರೆ ಅವರಿಗೆ ಟ್ರೇನಿಂಗ್‌ಕಾಲೇಜದ ೨ ವರ್ಷಗಳ ಅಭ್ಯಾಸವು ಕೂಡ ಸಾಲದೆಂದು ತೋರುವದು. ಟ್ರೇನಿಂಗ್ ಕಾಲೇಜದ ಮೊದಲನೆಯ ವರ್ಷದ ಅಭ್ಯಾಸದಲ್ಲಿ ಅವರಿಗೆ ತಾವು ಮುಂದೆ ಕಲಿಸಬೇಕಾಗುವ ವಿಷಯಗಳ ಪೂರ್ವಸಿದ್ಧತೆಗಾಗಿಯೂ ಅವುಗಳ ಹೊಂದಿಕೆಗಾಗಿಯೂ ಕಾಲವೆಲ್ಲ ಕಳೆದು ಹೋಗುವದರಿಂದ ಆಯಾ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವ ಕ್ರಮವೇ ಮೊದಲಾದವುಗಳನ್ನು ಅನುಭವದಿಂದ ತಿಳಿದುಕೊಳ್ಳಲಿಕ್ಕೆ, ಅದರಲ್ಲಿಯೂ ಬಾಲಕರ ವರ್ಗವನ್ನೂ ಒಂದಕ್ಕಿಂತ ಹೆಚ್ಚು ವರ್ಗಗಳನ್ನೂ ಕಲಿಸುವದರ ಪ್ರತ್ಯಕ್ಷ ಅನುಭವವನ್ನು ಪಡೆಯಲಿಕ್ಕೆ, ಆಸ್ಪದವುಳಿಯುವದಿಲ್ಲ. ಆದುದರಿಂದ ಹೆಚ್ಚಿನ ತರಗತಿಯ ಶಿಕ್ಷಣ ಪಡೆದ ಶಿಕ್ಷಕರನ್ನು ದೊರಕಿಸಿಕೊಳ್ಳುವದು ಶಿಕ್ಷಣ ಸುಧಾರಣೆಯ ಕಾರ್ಯಕ್ರಮದಲ್ಲಿ ಮೊತ್ತ ಮೊದಲನೆಯ ಕೆಲಸವೆನಿಸಿತು. ಹೀಗಿರುವದರಿಂದ ಪ್ರಾಥಮಿಕ ಶಾಲೆಗಳಲ್ಲಿ ದೊರೆಯುವ ಶಿಕ್ಷಣದ ಯೋಗ್ಯತೆಯನ್ನು ಹೆಚ್ಚಿಸುವದಕ್ಕಾಗಿ ಸರಕಾರದವರು ಪ್ರಾಥಮಿಕ ಶಿಕ್ಷಣದ ವೆಚ್ಚವನ್ನು ಹೆಚ್ಚಿಸದೆ ಟ್ರೇಂಡ್ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸುವದು ಸಾಧ್ಯವೋ ಹೇಗೆಂಬ ವಿಚಾರವನ್ನು ಈ ವರ್ಷ ಪರೀಕ್ಷಿಸಿ ನೋಡಿದರು; ಪ್ರತಿವರ್ಷ ೨೪೦ ಜನ ಶಿಕ್ಷಕರನ್ನೂ ೧೨೦ ಜನ ಶಿಕ್ಷಕಿಯರನ್ನೂ ಹೆಚ್ಚಿಗೆ ತಯಾರಿಸುವ ಯೋಜನೆಯನ್ನು ಕೈಕೊಂಡು ಟ್ರೇನಿಂಗ ಕಾಲೇಜಗಳಲ್ಲಿ ಮೇಲಿನ ವರ್ಗಗಳನ್ನು ಪುನಃ ಪ್ರಾರಂಭಿಸಿದ್ದಾಯಿತು. ಹೀಗೆ ಹೊಸದಾಗಿ ಹೊರಡುವ ಶಿಕ್ಷಕರ ಪಗಾರದ ಸ್ಕೇಲಿನ ವಿಚಾರವು ಸದ್ಯಕ್ಕೆ ಸರಕಾರದ ಮುಂದಿರುವದು. ಈ ರೀತಿ ಟ್ರೇನಿಂಗ್ ಕಾಲೇಜಗಳನ್ನು ಬೆಳಿಸಿದ್ದರಿಂದ ಸರಕಾರಕ್ಕೆ ಪ್ರತಿವರ್ಷ ಸರಾಸರಿ ೫೨,೫೦೦ ರೂ.ಗಳನ್ನು ಹೆಚ್ಚಿಗೆ ವೆಚ್ಚ ಮಾಡಬೇಕಾಗುವದು. ಟ್ರೇಂಡ್ ಶಿಕ್ಷಕರ ಸಂಖ್ಯೆಯ ಪ್ರಮಾಣವನ್ನು ೧೦೦ ಕ್ಕೆ ೮೦ ರ ವರೆಗೆ (೧೦೦ ಕ್ಕೆ ೫೦ ರಷ್ಟು ೧ ನೆಯ ವರ್ಷದವರು, ೨೦ ರಷ್ಟು ೨ನೆಯ ವರ್ಷದವರು, ೧೦ ರಷ್ಟು ೩ ನೆಯ ವರ್ಷದವರು) ಏರಿಸಬೇಕೆಂಬ ತತ್ವವನ್ನು ಸರಕಾರದವರು ವಿಚಾರ ಮಾಡತೊಡಗಿದ್ದಾರೆ. ಹಣದ ಅನುಕೂಲತೆಯಾದೊಡನೆಯೇ, ಹೊಸದಾಗಿ

ಸ್ವೀಕರಿಸಿಕೊಳ್ಳುವ ಶಿಕ್ಷಕರ ಪಗಾರದ ಸ್ಕೇಲಿನ ವಿಷಯವು ಯಾವದಾದರೊಂದು ನಿಶ್ಚಿತವಾದ ನಿರ್ಣಯಕ್ಕೆ ಮುಟ್ಟಿದ ಬಳಿಕ, ಈ ವಿಚಾರವನ್ನು ಆಚರಣೆಯಲ್ಲಿ ತರಬೇಕೆಂಬದು ಸರಕಾರದ ಸದ್ಯದ ಧೋರಣೆಯಾಗಿರುವದು.

೪. **ಅಭ್ಯಾಸಕ್ರಮ:—** ಪ್ರಾಥಮಿಕ ಶಾಲೆಗಳ ಸದ್ಯದ ಅಭ್ಯಾಸ ಪತ್ರಿಕೆಯು (**curriculum**) ಯೋಗ್ಯವಾದದ್ದಿಲ್ಲವೆಂದು ಈಚೆಗೆ ಅನೇಕರು ಅನೇಕ ರೀತಿಯಾಗಿ ಟೀಕೆ ಮಾಡುತ್ತಿದ್ದಾರೆ. ಆದ್ದರಿಂದ ಈ ಅಭ್ಯಾಸಪತ್ರಿಕೆಯಲ್ಲಿ ಯೋಗ್ಯ ಬದಲಾವಣೆ ಮಾಡುವ ವಿಚಾರವು ಸದ್ಯಕ್ಕೆ ಸರಕಾರದ ಮುಂದಿರುವದು. ಕೀಳು ತರಗತಿಯ ಶಿಕ್ಷಣವನ್ನು ಪ್ರತಿಬಂಧಿಸುವದಕ್ಕಾಗಲಿ, ಶಿಕ್ಷಕರ ಅಜ್ಞಾನ ವನ್ನು ದೂರಮಾಡುವದಕ್ಕಾಗಲಿ, ಅಭ್ಯಾಸಪತ್ರಿಕೆಯ ಬದಲಾವಣೆಯು ಕಾರಣ ವಾಗಲಾರದೆಂಬದು ಸಹಜವೇ ಸರಿ. ಸದ್ಯದ ಅಭ್ಯಾಸಪತ್ರಿಕೆಯೂ ಕೂಡ ಅದು ಈಗಿದ್ದ ಸ್ಥಿತಿಯಲ್ಲಿಯೇ ಇದ್ದರೂ ಯೋಗ್ಯ ಶಿಕ್ಷಕನ ಕೈಯಲ್ಲಿ ಒಳ್ಳೆಯ ಪರಿಣಾಮಕಾರಿಯಾಗಲು ಸಾಧ್ಯವಿದೆ. ಅಭ್ಯಾಸಪತ್ರಿಕೆಯು ಹೇಗೇ ಇದ್ದರೂ ಶಾಲೆಗಳಲ್ಲಿಯ ಶಿಕ್ಷಣದ ಸುಸ್ಥಿತಿಯು ಪರಿಣಾಮಕಾರಿಯಾದ ಶಿಕ್ಷಣವನ್ನೂ ಅದು ಟ್ರೇಂಡರಾದ ಶಿಕ್ಷಕರ ಕೈಯಲ್ಲಿರುವಂತೆ ಮಾಡುವದಕ್ಕಾಗಿ ಹೆಚ್ಚು ಜನ ಟ್ರೇಂಡ್ ಶಿಕ್ಷಕರನ್ನು ನಿಯಮಿಸಿಕೊಳ್ಳುವದನ್ನೂ ಅವಲಂಬಿಸಿರುವದು.

ಪ್ರಕೃತಿವಿಮರ್ಶೆಯು ಪ್ರಾಥಮಿಕ ಶಾಲೆಗಳ ಅಭ್ಯಾಸಪತ್ರಿಕೆಯೊಳಗಿನ ಒಂದು ವಿಷಯ; ಹಾಗು ಎಷ್ಟೋ ಶಾಲೆಗಳಲ್ಲಿ ತೋಟಗಳೂ ಇರುವವು. ಆದರೆ ಈ ತೋಟಗಳ ಉಪಯೋಗವು ಪ್ರಕೃತಿವಿಮರ್ಶೆಯ ಪಾಠಗಳಿಗಿಂತಲೂ ಶಾಲೆಯ ಶೃಂಗಾರದಂತೆ ಉಪಯೋಗವಾಗುವದೇ ಹೆಚ್ಚಿನ ಮಾತೆಂದು ತಿಳಿಯಲ್ಪಡುವದ ರಿಂದ ಈ ವಿಷಯದ ಶಿಕ್ಷಣವು ಸಮಾಧಾನಕರವಾಗಿ ನಡೆದಿಲ್ಲ. ಪ್ರಾಥಮಿಕ ಶಾಲೆಗಳಲ್ಲಿ ಈ ವಿಷಯವನ್ನು ಕಲಿಸುತ್ತಾರೆಂದು ತಿಳಿದುಕೊಳ್ಳುವದೇ ಹೆಚ್ಚು. ಒಂದುವೇಳೆ ಕಲಿಸುತ್ತಾರೆಂದು ಕಲ್ಪಿಸಿಕೊಂಡರೂ ಅದರಷ್ಟು ಕೆಟ್ಟರೀತಿಯಿಂದ ಕಲಿಸಲ್ಪಡುವ ವಿಷಯವು ಬೇರೊಂದಿಲ್ಲ."

ನಮ್ಮ ದೇಶದ ಶಿಕ್ಷಣದ ಇತಿಹಾಸವೂ ಶಿಕ್ಷಣ ವಿಷಯಕ ಆಧುನಿಕ ಸುಧಾರಣೆಗಳೂ

೧. ನಮ್ಮ ದೇಶದ ಶಿಕ್ಷಣದ ಇತಿಹಾಸ:— ನಮ್ಮ ದೇಶದಲ್ಲಿ ಶಿಕ್ಷಣವು ಸಾರ್ವತ್ರಿಕವಾಗುತ್ತ ಸಾಗಿದುದು ಬ್ರಿಟಿಷರ ಆಳಿಕೆಯಲ್ಲಿಯೇ ಸರಿ. ಅದಕ್ಕೂ ಮೊದಲು ಸಾರ್ವತ್ರಿಕ ಶಿಕ್ಷಣದ ವಿಚಾರವೇ ಇರಲಿಲ್ಲವೆಂದು ಹೇಳುವದು ಸರ್ವಸಮ್ಮತವೆನಿಸದೆ ಇದ್ದರೂ ಈಗ ನಾವು ಯಾವ ಅರ್ಥದಲ್ಲಿ ಈ ಪದವನ್ನು ಪ್ರಯೋಗಿಸುತ್ತಿರುವೆವೋ ಆ ಅರ್ಥದಲ್ಲಿಯಂತೂ ಶಿಕ್ಷಣವು ನಡೆಯುತ್ತಿರಲಿಲ್ಲವೆಂಬದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಕಂಪನಿಯ ಸರಕಾರದ ಆಡಳಿತೆಯು ಪ್ರಾರಂಭವಾಗುವದಕ್ಕಿಂತ ಮೊದಲು ಹಲವು ಮಿಶನ್ ಸಂಸ್ಥೆಗಳು ನಮ್ಮ ದೇಶದಲ್ಲಿ ಶಿಕ್ಷಣ ಕಾರ್ಯವನ್ನು ಪ್ರಾರಂಭಿಸಿದ್ದವು. ಕಂಪನಿಯ ಸರಕಾರವು ಪ್ರಾರಂಭವಾದ ಸ್ವಲ್ಪಕಾಲದಲ್ಲಿಯೇ ಇಂಗ್ಲಿಷ ಭಾಷೆಯು ಮತ್ತು ಮುಂದೆ ಕೆಲವು ವರ್ಷಗಳ ತರುವಾಯ ಸಂಸ್ಕೃತ ಭಾಷೆಯ ಅಭ್ಯಾಸವು ಪ್ರಾಮುಖ್ಯವೆನಿಸಿಕೊಂಡ ಶಿಕ್ಷಣ ಸಂಸ್ಥೆಗಳು ನಮ್ಮ ದೇಶದಲ್ಲಿ ಪ್ರಾರಂಭವಾದವು. ಸನ್ ೧೮೩೭ ರಲ್ಲಿ ಗ. ಜ. ಲಾರ್ಡ ಆಕ್‌ಲಂಡ್ ಸಾಹೇಬರ ಅಪ್ಪಣೆಯ ಮೇರೆಗೆ ಹಿಂದುಸ್ಥಾನದ ಕೋರ್ಟುಕಚೇರಿಗಳಲ್ಲಿ ಪರ್ಶಿಯನ್ ಭಾಷೆಯ ಬದಲು ಆಯಾ ಪ್ರಾಂತದ ಜನರ ದೇಶಭಾಷೆಯೇ ಉಪಯೋಗಿಸಲ್ಪಡಬೇಕೆಂದು ಗೊತ್ತಾದಂದಿನಿಂದ ದೇಶಭಾಷೆಗಳ ಅಭ್ಯಾಸವು ಪ್ರಾರಂಭಿಸಲ್ಪಟ್ಟಿತು. ಸರಕಾರದ ಬೇರೆ ಬೇರೆ ಉದ್ಯೋಗಗಳಿಗೆ ಯೋಗ್ಯರಾದ ಜನರನ್ನು ದೊರಕಿಸುವದೊಂದು ಆಗಿನ ಕಾಲದ ಶಿಕ್ಷಣದ ಪ್ರಾಮುಖ್ಯವಾದ ಉದ್ದೇಶವಾಗಿತ್ತು. ಆದರೂ ೧೮೫೪ರ ವರೆಗೂ ಶಿಕ್ಷಣ ವ್ಯವಸ್ಥೆಯು ಅಷ್ಟು ವ್ಯಾಪಕವಾಗಿರಲಿಲ್ಲ. ಅಲ್ಲಿಯವರೆಗೂ ಶಿಕ್ಷಣ ಕ್ರಮದಲ್ಲಿ ಧರ್ಮ ಪ್ರಸಾರದ ಒಳಗುಟ್ಟೊಂದು ಇದ್ದೇ ಇದ್ದಿತು. ೧೮೫೫ ರಲ್ಲಿ ಹಿಂದುಸ್ಥಾನದೊಳಗಿನ ಎಲ್ಲ ಇಲಾಖೆಗಳಲ್ಲಿ ಸರಕಾರದ ಶಿಕ್ಷಣಖಾತೆಯು ಪ್ರಾರಂಭಿಸಲ್ಪಟ್ಟಿತು. ಕೆಲಕಾಲದ ತರುವಾಯ ಜನತೆಯ ಶಿಕ್ಷಣದ ಹೊಣೆಯು ಲೋಕಲ್‌ಬೋರ್ಡು ಹಾಗೂ ಮ್ಯುನಿಸಿಪಾಲಿಟಿಗಳಿಗೂ (ಅಂಶತಃ) ಒಪ್ಪಿಸಲ್ಪಟ್ಟಿತು. ಈಚೆಗೆ ಪ್ರಾಥಮಿಕ ಶಿಕ್ಷಣದ ಜವಾಬದಾರಿಯು ಜನತೆಯ ಪ್ರತಿನಿಧಿಯೆನಿಸುವ ಈ ಸಂಸ್ಥೆಗಳಿಗೇ ಒಪ್ಪಿಸಲ್ಪಟ್ಟಿರುವದು.

ಮೇಲೆ ಹೇಳಿದಂತೆ ನಮ್ಮ ದೇಶದಲ್ಲಿ ಸರಕಾರದಿಂದ ವಿದ್ಯಾಖಾತೆಯು ಪ್ರಾರಂಭಿಸಲ್ಪಟ್ಟ ತರುವಾಯ ಯೋಗ್ಯರಾದ ಶಿಕ್ಷಕರನ್ನು ತಯಾರಿಸುವ ಕಾರ್ಯವೂ ಪ್ರಾರಂಭಿಸಲ್ಪಟ್ಟಿತು. ದೇಶದಲ್ಲಿ ಸಾರ್ವತ್ರಿಕ ಶಿಕ್ಷಣವು ಪ್ರಾರಂಭವಾದೊಡನೆ ಆ ಮಾನದಿಂದ ಶಿಕ್ಷಕರು ಬೇಕಾದರು. ಹಾಗೆಯೆ ಶಾಲೆಯ ಕಟ್ಟಡಗಳು ಕಟ್ಟಿಸಲ್ಪಟ್ಟವು. ಶಾಲೆಯ ಕೋಣೆಯು ಪ್ರಕೃತಿ ಸಹಜವಾದ ಶಿಕ್ಷಣವನ್ನು ಕೊಡಲು ತುಂಬ ಪ್ರತಿಕೂಲವಾದ ಪರಿಸ್ಥಿತಿಯದಾಗುವದರಿಂದ ಆ ಅರಿವು ಉಳಿದು, ಇದ್ದದ್ದನ್ನೇ ತಮಗೆ ಅನುಕೂಲಪಡಿಸಿಕೊಳ್ಳುವ ಕುಶಲತೆಯು ಶಿಕ್ಷಕರಲ್ಲಿ ಆವಶ್ಯಕವೆನಿಸಿತು. ಆದುದರಿಂದ ಶಿಕ್ಷಕರಿಗೆ ತಾವು ಕಲಿಸಬೇಕಾದ ವಿಷಯಗಳ ಜ್ಞಾನದೊಂದಿಗೆ ಅದನ್ನು ಚಿಕ್ಕಬಾಲಕರಿಗೆ ಹೇಗೆ ಕಲಿಸಬೇಕೆಂಬ ವಿಚಾರವೂ ಕಲಿಸಲ್ಪಡಬೇಕಾದದ್ದು ಆವಶ್ಯಕವಾದ ಮಾತೆನಿಸಿತು. ಶಿಕ್ಷಕರಿಗೆ ಆ ಕಲೆಯ ಅಭ್ಯಾಸವು ಆವಶ್ಯಕವಾಯಿತು. ಆದುದರಿಂದ ನಮ್ಮ ದೇಶದಲ್ಲಿ ಇಂತಹ ಶಿಕ್ಷಣ ಸಂಸ್ಥೆಗಳು (ಟ್ರೇನಿಂಗ್ ಸ್ಕೂಲುಗಳು) ಪ್ರಾರಂಭಿಸಲ್ಪಟ್ಟವು.

ನಮ್ಮ ದೇಶದ ಶಿಕ್ಷಣದ ಈ ಇತಿಹಾಸವನ್ನು ನೋಡಿದರೆ ನಮ್ಮ ದೇಶದಲ್ಲಿ ಸಾರ್ವತ್ರಿಕ ಶಿಕ್ಷಣದ ವಿಷಯಗಳು (ಅಭ್ಯಾಸಪತ್ರಿಕೆ), ಅವುಗಳನ್ನು ಹೇಗೆ ಕಲಿಸಬೇಕು (ಶಿಕ್ಷಣ ಪದ್ಧತಿ), ಮುಂತಾದವುಗಳ ಜ್ಞಾನವು ನಮ್ಮ ದೇಶಕ್ಕೆ ಬಂದ ಪರದೇಶದ ವಿದ್ಯಾಧಿಕಾರಿಗಳ ಮುಖಾಂತರ ಬಂದಿತೆಂದು ತಿಳಿಯುವುದು; ಎಂದರೆ ಶಿಕ್ಷಣ ವಿಷಯಕ ವಿಚಾರಗಳು ನಮ್ಮ ದೇಶದಲ್ಲಿ ಮೇಲಿನಿಂದ ಕೆಳಗೆ ಸಾಗಿ ಬಂದವು. ಕೆಳಗಿನಿಂದ ಮೇಲೆ ಏರಿ ಹೋಗಲಿಲ್ಲ. ಆದರೆ ಇಂಗ್ಲಂಡ ಅಮೇರಿಕಾ ಮೊದಲಾದ ದೇಶಗಳಲ್ಲಿ ಬಾಲಕರಿಗೆ ಯಾವ ವಿಷಯಗಳನ್ನು ಕಲಿಸಬೇಕೆಂಬ ವಿಷಯದಲ್ಲಿಯೂ ಶಿಕ್ಷಣದ ಬೇರೆ ಬೇರೆ ಪದ್ಧತಿಗಳ ವಿಷಯವಾಗಿಯೂ ಜನತೆಯೂ ಸುಶಿಕ್ಷಿತರಾದ ಮಹಾಪುರುಷರೂ ವಿಚಾರ ಮಾಡುವರು. ಅವರು ಈ ವಿಷಯದಲ್ಲಿ ಕಾಲಕಾಲಕ್ಕೆ ಪ್ರಯೋಗ–ಅನುಭವಗಳ ಮೂಲಕ ಅನೇಕ ಸಂಗತಿಗಳನ್ನು ಕಂಡುಹಿಡಿದು ವಿದ್ಯಾಧಿಕಾರಿಗಳ ಹಾಗೂ ಜನತೆಯ ಮುಂದೆ ಇಡುವರು. ಜನತೆಯೇ ಸರಕಾರವೆನಿಸುತ್ತಿರುವ ಆ ದೇಶಗಳಲ್ಲಿ ಇಂಥ ವಿಚಾರಗಳಿಗೆ ಬೇಗನೆ ಪುರಸ್ಕಾರವೂ ದೊರೆಯುವುದು. ಆದ್ದರಿಂದ ಶಿಕ್ಷಣಪದ್ಧತಿಯ ವಿಚಾರದಲ್ಲಿ ಆ ದೇಶಗಳಲ್ಲಿ ಕಾಲಕಾಲಕ್ಕೆ ಅನೇಕಾನೇಕ ಬದಲಾವಣೆಗಳಾಗುತ್ತ ಬಂದವು.

ನಮ್ಮ ದೇಶದ ಶಿಕ್ಷಣದ ಇತಿಹಾಸದಲ್ಲಿ ಒಂದು ಮಾತು ಸಮಾಧಾನಕರವಾದದ್ದಿರುವುದು. ಅದಾವುದೆಂದರೆ ಸಾರ್ವತ್ರಿಕ ಶಿಕ್ಷಣವು, ಕ್ರಮವಾಗಿ ಖಾಸಗಿ ಸಂಸ್ಥೆಗಳಿಂದ ಸರಕಾರ ಹಾಗು ಲೋಕನಿಯುಕ್ತ ಸಂಸ್ಥೆಗಳು, (ಲೋಕಲ್ ಬೋರ್ಡ್ಸ ಮ್ಯುನಿಸಿಪಾಲಿಟಿಗಳು) ಇವುಗಳ ವಶಕ್ಕೆ ಬಂದುದು. ಆದರೆ ಅಂದಿನಿಂದ ಇಂದಿನವರೆಗೂ ಶಿಕ್ಷಣದ ಗುರಿಯೇನೆಂಬದು ಜನರಿಗೆ ನಿರ್ದಿಷ್ಟವಾಗಿಲ್ಲವೆನ್ನಬೇಕಾಗುವದು. ಇದೊಂದು ದೊಡ್ಡ ದೋಷವು. ಸರಕಾರದವರೂ ದೇಶದ ಮುಂದಾಳುಗಳೂ ಶಿಕ್ಷಣದ ಉಚ್ಚತರದ ಗುರಿಯನ್ನು ಕಂಡುಕೊಂಡಿದ್ದರೂ ಸಾಮಾನ್ಯ ಜನರು ಶಿಕ್ಷಣದ ಶ್ರೇಷ್ಠವಾದ ಧ್ಯೇಯವನ್ನು ಇನ್ನೂ ಕಂಡುಕೊಂಡಿಲ್ಲ. ನಿಮ್ಮ ಮಗನನ್ನು ಸಾಲೆಗೆ ಏಕೆ ಕಳುಹಿಸುತ್ತೀರೆಂದು ಕೇಳಿದರೆ “ ಸರಕಾರದ ನೌಕರಿಯನ್ನು ದೊರಕಿಸಲಿಕ್ಕೆ” ಎಂದು ಹೇಳುವ ಹಳ್ಳಿವಾಡದ ಸದ್ಗೃಹಸ್ಥನಂತೆಯೇ ಅಶಿಕ್ಷಿತನಾದ ಒಕ್ಕಲಿಗನನ್ನು ನಿನ್ನ ಮಗನನ್ನು ಸಾಲೆಗೆ ಯಾಕೆ ಕಳುಹಿಸುವದಿಲ್ಲವೆಂದು ಕೇಳಿದರೆ ನಮಗೇನು ಸರಕಾರದ ನೌಕರಿ ಮಾಡಬೇಕಾಗಿರುವದೇ ? ಎಂದು ಕೇಳುವನು. ಶಿಕ್ಷಣವು ನಮ್ಮ ದೇಶದಲ್ಲಿ ಇನ್ನೂ ಸಾರ್ವತ್ರಿಕವಾಗಿ ಪ್ರಚಾರಕ್ಕೆ ಬಂದು ಜನರು ಅದರ ಧ್ಯೇಯವನ್ನು ಕಂಡುಕೊಂಡಿಲ್ಲವೆಂಬದೇ ಮುಖ್ಯ ತಾತ್ಪರ್ಯವು.

೨. ಶಿಕ್ಷಣ ವಿಷಯಕ ಆಧುನಿಕ ಸುಧಾರಣೆ:— ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಏನು ಕಲಿಸಬೇಕೆಂಬದು, ಏಕೆ ಕಲಿಸಬೇಕೆಂಬದನ್ನು ಅವಲಂಬಿಸಿರುವದು. ಕಾರ್ಕೂನನಾಗುವವನಿಗೆ ಕಲಿಸಬೇಕಾದ ವಿಷಯವೇ ಬೇರೆ, ಕಲಾಕುಶಲನಾಗತಕ್ಕವನಿಗೆ ಕಲಿಸತಕ್ಕ ವಿಷಯವೇ ಬೇರೆ. ಏನು ಕಲಿಸಬೇಕೆಂಬದು ಗೊತ್ತಾದಬಳಿಕ ಹೇಗೆ ಕಲಿಸಬೇಕೆಂಬ ಪ್ರಶ್ನೆಯು ಹುಟ್ಟುವುದು. ಇದರಂತೆಯೇ ಯಾರು ಕಲಿಸಬೇಕು, ಯಾರಿಗೆ ಕಲಿಸಬೇಕು ಎಂಬ ಪ್ರಶ್ನೆಗಳೂ ಶಿಕ್ಷಣ ಕಾರ್ಯದಲ್ಲಿ ಉದ್ಭವಿಸುವ ಮುಖ್ಯ ಪ್ರಶ್ನೆಗಳೇ. ಸಾರಾಂಶ– ಶಿಕ್ಷಣ ಕ್ರಮದಲ್ಲಿ ಏನು ಕಲಿಸಬೇಕು (ವಿಷಯ), ಹೇಗೆ ಕಲಿಸಬೇಕು (ಪದ್ಧತಿ), ಯಾರು ಕಲಿಸಬೇಕು (ಶಿಕ್ಷಕರು), ಯಾರಿಗೆ ಕಲಿಸಬೇಕು (ವಿದ್ಯಾರ್ಥಿಗಳು) ಎಂಬ ನಾಲ್ಕು ಮಾತುಗಳ ಸಮಾವೇಶವಾಗುವದು. ‘‘ ಶಿಕ್ಷಕರು ’’ ಈ ಮಾತಿಗೆ ಸಂಬಂಧಿಸಿ ಶಿಕ್ಷಕರ ಯೋಗ್ಯತೆ, ಶಾಲೆಯ ಕಟ್ಟಡಗಳು, ಇತರ ವ್ಯವಸ್ಥೆ, ಅಭ್ಯಾಸಕ್ಕೆ ಬೇಕಾಗುವ ಉಪಕರಣಗಳು, ಪುಸ್ತಕಗಳು ಮುಂತಾದವುಗಳನ್ನು ಸೇರಿಸಿಕೊಳ್ಳಬಹುದು. ಶಿಕ್ಷಣದಲ್ಲಿ ಸಮಾವೇಶವಾಗುವ ಏನು ಕಲಿಸಬೇಕು, ಹೇಗೆ

ಕಲಿಸಬೇಕು, ಯಾರಿಗೆ ಕಲಿಸಬೇಕು, ಯಾರು ಕಲಿಸಬೇಕು" ಎಂಬೀ ನಾಲ್ಕು ಮಾತುಗಳಲ್ಲಿ ಆರಂಭದಲ್ಲಿ ಏನು ಕಲಿಸಬೇಕು ಎಂಬದಕ್ಕೇ ಎಂದರೆ ಕಲಿಸಬೇಕಾದ ವಿಷಯುಗಳಿಗೇ ಪ್ರಾಧಾನ್ಯವಿದ್ದಿತು. ಕಲಿಸಬೇಕಾದ ವಿಷಯುಗಳಲ್ಲಿ ವಿದ್ಯಾರ್ಥಿಗೆ ಸಾಕಷ್ಟು ಪ್ರಾವೀಣ್ಯವು ಯಾವ ಮಾರ್ಗದಿಂದ ದೊರೆತರೂ ಅಡ್ಡಿಯಿಲ್ಲ ಎಂಬದು ಆ ಕಾಲದ ಶಿಕ್ಷಕನ ತಿಳುವಳಿಕೆಯಾಗಿತ್ತು. ಆದರೆ ಕೆಲಕಾಲದ ತರುವಾಯ ತಜ್ಞರಾದ ಶೋಧಕರು ಈ ಮಾತನ್ನು ಅಲ್ಲಗಳೆದರು. ಅವರು ವಿಷಯಕ್ಕಾಗಿ ವಿದ್ಯಾರ್ಥಿಯಲ್ಲ, ವಿದ್ಯಾರ್ಥಿಗಾಗಿ ವಿಷಯುಗಳು; ಆದ್ದರಿಂದ ವಿದ್ಯಾರ್ಥಿಗೇ ಪ್ರಾಧಾನ್ಯವಿರಬೇಕಲ್ಲದೆ ವಿಷಯುಗಳಿಗೆ ಎಷ್ಟುಮಟ್ಟಿಗೂ ಪ್ರಾಮುಖ್ಯವಿರಕೂಡದು ಎಂದು ಪ್ರತಿಪಾದಿಸಿದರು. ಕೆಲವು ವರ್ಷಗಳ ವರೆಗೆ ಈ ವಿಚಾರದಂತೆಯೇ ಶಿಕ್ಷಣವು ಸಾಗಿತು. ಆಗ ವಿದ್ಯಾರ್ಥಿಗಳ ಶರೀರ, ಮನಸ್ಸು ನೀತಿ ಇವಕ್ಕೆ ಅತಿಶಯ ಮಹತ್ವವುಂಟಾಯಿತು. ಈ ಕಾರಣದಿಂದಲೇ ಇಪ್ಪತ್ತನೆಯ ಶತಮಾನದ ಆರಂಭವು ಬಾಲಕರ ಯುಗವೆಂದು ಕರೆಯಲ್ಪಡುವದು.

ಶಿಕ್ಷಣ ಶಾಸ್ತ್ರಜ್ಞರಲ್ಲಿ ಪ್ರಮುಖರಾದ ಆ ಕಾಲದ ಮಹನೀಯರ ಅಭಿಪ್ರಾಯುಗಳು ಈ ರೀತಿಯಾಗಿವೆ. —

"ವಿದ್ಯಾರ್ಥಿಗಳು ಸ್ವತಂತ್ರರಾಗಿರಲಿ. ಅವರು ಸೃಷ್ಟಿಯ ನಿಯಮಗಳನ್ನು ಅನುಸರಿಸಿ ಕಲಿಯಲಿ. ಸೃಷ್ಟಿಯೇ ಅವರ ಗುರುವಾಗಲಿ. ಶಿಕ್ಷಕನು ಅವರಿಗೆ ಮಾರ್ಗದರ್ಶಿಯಾಗಿದ್ದರೆ ಸಾಕು." —ರೂಸೋ.

"ಹುಡುಗರಿಗೆ ತಕ್ಕ ಸಾಹಿತ್ಯಗಳನ್ನು ಒದಗಿಸಿಕೊಡಿರಿ. ಅವುಗಳ ಸಹಾಯದಿಂದ ಬಾಲಕರು ಪ್ರಯೋಗಮಾಡಿ, ನಿರೀಕ್ಷಿಸಿ ನೋಡಿ ತಮ್ಮ ಜ್ಞಾನವನ್ನು ಸಂಪಾದಿಸಿಕೊಳ್ಳಲಿ. ಶಿಕ್ಷಕನು ಬಾಲಕರ ಹಿತಚಿಂತಕರ ಇಲ್ಲವೆ ತಾಯಿತಂದೆಗಳ ಸ್ಥಾನದಲ್ಲಿರಲಿ" —ಡಾ. ಮಾಂಟೆಸೋರಿ.

"ವಿದ್ಯಾರ್ಥಿಗಳು ಸ್ವತಂತ್ರರಾಗಿರಲಿ. ಅವರು ತಮ್ಮ ಮನಸ್ಸಿಗೆ ಬಂದ ವಿಷಯುಗಳನ್ನು ತಮಗೆ ತೋರಿದ ಮಾರ್ಗದಲ್ಲಿ ಕಲಿಯಲಿ.

—ಮಿಸ್ ಫಾರ್ಕಹಸ್ಟ್ರ್. (ಡಾಲ್ಟನ್ ಪ್ಲ್ಯಾನ್.)

ಈ ಅಭಿಪ್ರಾಯುಗಳಿಂದ ಫಲಿತವಾಗುವ ಸಂಗತಿಯು ಇಷ್ಟೇ— ನಾವು ಕಲಿಸುವ ವಿಷಯುಗಳಿಗಿಂತಲೂ ವಿದ್ಯಾರ್ಥಿಗಳಿಗೇ ಹೆಚ್ಚು ಮಹತ್ವ ಕೊಡಬೇಕು.

ವಿದ್ಯಾರ್ಥಿಗಳ ಮಾನಸಿಕ ಶಾರೀರಿಕ, ನೈತಿಕ, ವಿಕಾಸವೇ ನಮ್ಮ ಧ್ಯೇಯ ವಾಗಿರಬೇಕಲ್ಲದೆ ಅವರಿಗೆ ಯಾವ ವಿಷಯವು ಎಷ್ಟು ಬಂತೆಂಬದನ್ನು ನೋಡುವ ದರಲ್ಲಿಯೇ ಶಿಕ್ಷಕರ ಹಾಗು ಬಾಲಕರ ಶಕ್ತಿಯು ವ್ಯಯವಾಗಕೂಡದು.

ಇತ್ತೀಚೆಗೆ ಈ ವಿಚಾರದಲ್ಲಿಯೂ ಕ್ರಾಂತಿಯಾಗಿದೆ. ತೀರ ಆಧುನಿಕ ಶಿಕ್ಷಣ ಶಾಸ್ತ್ರಜ್ಞರು ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೂ ವಿಷಯಗಳಿಗೂ ಸಮವಾಗಿ ಪ್ರಾಧಾನ್ಯವನ್ನು ಕೊಡಬೇಕೆಂದು ಹೇಳುತ್ತಿದ್ದಾರೆ. ಎಂದರೆ ಶಿಕ್ಷಣದಲ್ಲಿ ಕೇವಲ ವಿದ್ಯಾರ್ಥಿಗಳನ್ನೇ ಗಮನಿಸಿದರೆ ತೀರದು, ವಿಷಯಗಳನ್ನೂ ಗಮನಿಸಬೇಕು ಎಂದು ಅವರ ಅಭಿಪ್ರಾಯವು.

ಯಾರಿಗೆ ಕಲಿಸಬೇಕು (ವಿದ್ಯಾರ್ಥಿಗಳು), ಏನು ಕಲಿಸಬೇಕು (ವಿಷಯ) ಈ ವಿಚಾರಗಳನ್ನು ಸಂಕ್ಷೇಪವಾಗಿ ತಿಳಿಸಿದ ಬಳಿಕ ನಾವು ಈಗ ಹೇಗೆ ಕಲಿಸ ಬೇಕು (ಪದ್ಧತಿ) ಎಂಬ ಮಾತನ್ನು ಕುರಿತು ಒಂದೆರಡು ವಿಚಾರಗಳನ್ನು ಹೇಳುವೆವು ಹೊಸಪದ್ಧತಿ, ಹಳೆಯ ಪದ್ಧತಿ ಎಂಬ ವಿಚಾರಗಳು ಶಿಕ್ಷಣ ವ್ಯವಸಾಯಿಗ ಕಾರ್ಯಕ್ಷೇತ್ರದಲ್ಲಿ ಆಗಾಗ ಕೇಳಿಬರುವ ವಿಚಾರಣೀಯವಾದ ಮಾತುಗಳು ಹೊಸದೆಂದರೆ ಹೊನ್ನೆಂದಾಗಲಿ ಹಳೆಯದೆಂದರೆ ಹರಳೆಂದಾಗಲಿ ಯಾರೂ ಭಾವಿಸು ಕಾರಣವಿಲ್ಲ. ಹೊಸದು, ಹಳೆಯದರಿಂದ ತೀರ ಭಿನ್ನವಾಗುವ ಸಂಭವವು ತುಂ ಕಡಿಮೆ. ಹಳೆಯದೇ ರೂಪಾಂತರವಾಗಿ ಹೊಸದೆನ್ನಿಸಿಕೊಳ್ಳುವ ಸಂಭವವೆ ಪ್ರಪಂಚದಲ್ಲಿ ಹೆಚ್ಚು. ಯಾವ ಸಂಗತಿಗಳ ಕಡೆಗೆ ಬಹು ಜನರ ಲಕ್ಷ್ಯ ಹೋಗುತ್ತಿರುವುದೋ, ಹೋಗುವುದು ಆವಶ್ಯಕವಾಗುವುದ್ಧೋ, ಆ ಸಂಗ ಗಳಲ್ಲಿ ಹೊಸ ಹೊಸ ಅಭಿಪ್ರಾಯಗಳು ಹುಟ್ಟುತ್ತಹೋಗುವುದು ಪ್ರಪಂಚ ಒಂದು ಗುಟ್ಟು. ಮಾದರಿಗಾಗಿ ನಮ್ಮ ಧರ್ಮಗ್ರಂಥಗಳ ವಿಚಾರವನ್ನು ತೆಗೆದ ಕೊಳ್ಳೋಣ. ಬ್ರಹ್ಮಸೂತ್ರ, ಉಪನಿಷತ್ತುಗಳು, ಗೀತೆ ಎಂಬ ನಮ್ಮ ಪ್ರಸ್ಥಾ ತ್ರಯಿಯ ಮೇಲೆ ಎಷ್ಟು ಜನ ಆಚಾರ್ಯರು ತಮ್ಮ ಟೀಕೆ ವ್ಯಾಖ್ಯಾನ ವಿವರ ಗಳನ್ನು ಬರೆದರು? ಗೀತೆಯ ಭಾಷಾಂತರ ವಿವರಣೆಗಳು ಇಂದಿಗೂ ಹುಟ್ಟುತ್ತಿ ಇವೆಯಲ್ಲ? ಇದರ ರಹಸ್ಯವೇನು? ಇವರೆಲ್ಲರ ವ್ಯಾಖ್ಯಾನ ವಿವರಣೆಗಳು ಭಿ ಭಿನ್ನವಾಗಿದ್ದರೂ 'ಅವೆಲ್ಲ ಮಾನವನ ಮೋಕ್ಷಕ್ಕಾಗಿ ಎಂದರೆ ಆತನ ಅಂತಿ ಕಲ್ಯಾಣಕ್ಕಾಗಿ' ಎಂಬ ಒಂದು ಮಾತನ್ನೇ ಅವರೆಲ್ಲರೂ ಸಿದ್ಧಮಾಡಿಲ್ಲವೇ ಜನತೆಯ ಸಾಮಾನ್ಯ ಹಿತಕ್ಕೆ ಸಂಬಂಧಿಸುವ ಎಲ್ಲ ವಿಷಯಗಳಲ್ಲಿಯೂ ಇದ

ಮಾತು ಕಂಡುಬರುವದು. ಇಷ್ಟರಿಂದಲೇ ಹೊಸವೆಂಬುವವೆಲ್ಲ ಹಳೆಯದರ ಸಂಪರ್ಕವಿಲ್ಲದ ನೂತನ ಸಂಗತಿಗಳೆಂದು ಯಾರೂ ಭಾವಿಸಕೂಡದು. ಬಹು ಜನರು ಬಹುಮುಖದಿಂದ ವಿಚಾರಮಾಡತೊಡಗಿದಾಗಲೇ ಯಾವದೊಂದು ವಿಷಯಕ್ಕೆ ಏಕರೂಪತೆಯಾಗಲಿ ಸಾಮ್ಯವಾಗಲಿ ಉಂಟಾಗುವದು. ಜಗತ್ತಿನ ಭಿನ್ನ ಭಿನ್ನ ಧರ್ಮಗಳ ತತ್ವಗಳು ಬಾಹ್ಯದಲ್ಲಿ ಒಂದರಿಂದೊಂದು ಭಿನ್ನವಾಗಿರುವಂತೆ ತೋರಿದರೂ ಆಂತರ್ಯದಲ್ಲಿ ಅವೆಲ್ಲ ಪ್ರಪಂಚದ ಮಾನವ ಪ್ರಾಣಿಯ ಹಿತ ಸಾಧನೆಯೆಂಬ ಮಾತಿಗಾಗಿಯೇ ಹುಟ್ಟಿರುವವಲ್ಲವೇ ? ಅದರಂತೆ ಶಿಕ್ಷಣದ ಎಲ್ಲ ಕವಲುಗಳೂ ಕೂಡ (೧) ಬಾಲಕರ ಜ್ಞಾನವು ಸ್ಪಷ್ಟವಾಗಿರಲಿ. (೨) ಬಾಲಕರು ಸುಲಭವಾಗಿ ಜ್ಞಾನವನ್ನು ಸಂಪಾದಿಸಲಿ. (೩) ಬಾಲಕರ ಜ್ಞಾನವು ಸ್ಥಿರವಾಗಿ ಉಳಿಯಲಿ. (೪) ಬಾಲಕರ ಜ್ಞಾನವು ಅವರ ಬಾಳುವೆಯನ್ನು ಸುಖಮಯವಾಗಿ ಮಾಡಲಿ, ಎಂಬ ಮುಖ್ಯೋದ್ದೇಶಗಳನ್ನು ಇಟ್ಟುಕೊಂಡು ಇವುಗಳ ಸಾಧನೆಗಾಗಿಯೇ ಹೊರಟಿರುವವು.

ಶಿಕ್ಷಣ ಪ್ರಪಂಚದಲ್ಲಿ ಈಚೆಗೆ ಉಂಟಾಗಿರುವ ಕ್ರಾಂತಿಕಾರಕ ವಿಚಾರಗಳಲ್ಲಿ ಪರೀಕ್ಷೆಯ ಸಮಸ್ಯೆಯು ಒಂದು ಮಹತ್ವದ ಮಾತಾಗಿದೆ. ಶಿಕ್ಷಣ ಪ್ರಪಂಚದಲ್ಲಿ ಮುಂದುವರಿದ ದೇಶಗಳಲ್ಲಿ ಈಗ ಪರೀಕ್ಷೆಗಳಿಗೆ ಅಷ್ಟು ಮಹತ್ವವುಳ್ಳಿಲ್ಲ. ಶಿಕ್ಷಕರಿಗೆ ತಮ್ಮ ಕಾರ್ಯದ ಫಲದ ನಿರೀಕ್ಷಣೆಗೆ ತುಂಬ ಸ್ವಾತಂತ್ರ್ಯವಿರಬೇಕೆಂಬುದೇ ಇದರ ಗುಟ್ಟು. ಹೊಟ್ಟೆಯ ಪಾಡಿಗಾಗಿ ಶಿಕ್ಷಕರ ವ್ಯವಸಾಯವನ್ನು ಒಪ್ಪಿಕೊಂಡು ಕೂಲಿಯ ಆಳುಗಳ ಪ್ರತಿನಿಧಿಗಳಾಗಿ ಬಂದವರ ಮಾತೇ ಬೇರೆ. ಶಿಕ್ಷಣಕಾರ್ಯವು ಅತಿ ಪವಿತ್ರವಾದ ಮಾನವಜನ್ಮದ ಸಾರ್ಥಕತೆಯ ದಾರಿಯೆಂಬ ವಿಚಾರವುಳ್ಳ ಶಿಕ್ಷಕರ ಮಾತೇ ಬೇರೆ. ಶಿಕ್ಷಕನಾದವನು ತನ್ನ ಕಾರ್ಯದ ಪರಿಣಾಮವನ್ನು ತನ್ನಲ್ಲಿ ಕಲಿತುಹೋದ ವಿದ್ಯಾರ್ಥಿಗಳು ದೊಡ್ಡವರಾಗಿ ಪ್ರಪಂಚವನ್ನು ಸಾಗಿಸತೊಡಗಿದಾಗ ಯಾವ ಮೆಟ್ಟಿಲು ಮುಟ್ಟಿರುವದೆಂಬದನ್ನು ನೋಡಿ ನಿರ್ಣಯಿಸಿಕೊಳ್ಳಬೇಕೆಂದೂ ಅದಕ್ಕೂ ಮೊದಲೇ ತನ್ನ ಕಾರ್ಯದ ಯೋಗ್ಯತೆಯ ನಿರ್ಣಯವನ್ನು ಮಿಕ್ಕ ಯಾವ ಉಪಾಯಗಳಿಂದಲೂ ಮಾಡಿಕೊಳ್ಳಲು ಸಾಧ್ಯವೇ ಇಲ್ಲವೆಂದೂ ಇಗ್ಲಂಡ ಮುಂತಾದ ದೇಶಗಳ ಉಚ್ಚ ಪ್ರಗತಿಯ ಶಿಕ್ಷಕರು ಪ್ರತಿಪಾದಿಸುವರು. ಸಾರ್ವಜನಿಕ ಹಣದ ವ್ಯಯದಿಂದ ನಡೆಯುತ್ತಿರುವ ವಿದ್ಯಾಲಯಗಳಲ್ಲಿ ಶಿಕ್ಷಕರ ಕಾರ್ಯದ ಬೆಲೆಯನ್ನು ನಿರ್ಣಯಿಸುವ

ದಕ್ಕಾಗಿ ಪರೀಕ್ಷೆಗಳು ಆವಶ್ಯಕವೆನಿಸಬಹುದು. ವಿದ್ಯಾರ್ಥಿಗಳ ಬೇರೆ ಬೇ
ತರಗತಿಗಳನ್ನು ಗೊತ್ತುಪಡಿಸುವದಕ್ಕಾಗಿಯೂ ಪರೀಕ್ಷೆಯು ಉಪಯೋಗವಾ
ಬಹುದು. ಆದರೆ ಇವೆರಡೂ ಶಿಕ್ಷಣದ ಕೊನೆಯ ಮೆಟ್ಟಲುಗಳಲ್ಲವೆಂಬದ
ಸಹಜವೇ ಸರಿ. ಸುಧಾರಿಸಿದ ದೇಶಗಳಲ್ಲಿ ಈಚೆಗೆ ವಿದ್ಯಾರ್ಥಿಗಳ ಯೋಗ್ಯತೆಯನ್ನು
ಗೊತ್ತುಮಾಡುವ ಪರೀಕ್ಷೆಯು ಸರ್ವಾಧಿಕಾರವನ್ನು ಕೆಲಮಟ್ಟಿಗೆ ಶಿಕ್ಷಕರಿಗೇ
ಒಪ್ಪಿಸಿಕೊಟ್ಟು ಶಿಕ್ಷಕರ ಕಾರ್ಯಕಲಾಪಗಳಿಗೆ ಯೋಗ್ಯ ದಿಶೆಯನ್ನು ತೋರಿ
ಕ್ರಮಪಡಿಸುವದೊಂದೇ ಉದ್ದೇಶದಿಂದ "ಇನ್‌ಸ್ಪೆಕ್ಶನ್" ಎಂಬ ಇನ್ನೊಂದು
ಯೋಜನೆಯನ್ನು ಆಯಾ ಸಂಸ್ಥೆಗಳ ಮೇಲ್ವಿಚಾರಕರು ಮಾಡುವ ಪರಿಪಾ
ಠವುಂಟಾಗಿರುವದು. ಆ ದೇಶಗಳಲ್ಲಿ ನಮ್ಮಲ್ಲಿ ಹಿಂದಕ್ಕೆ ಇದ್ದಂತೆ ಸರಕಾರದವರು
ಗೊತ್ತುಪಡಿಸಿಕೊಟ್ಟ ನಿರ್ಣಯಿಸಿದ ಅಭ್ಯಾಸಕ್ರಮ, ನಿರ್ದಿಷ್ಟವಾದ ಪುಸ್ತಕಗಳು
ಮೀರಲಾಗದ ಪರೀಕ್ಷಾಕ್ರಮ, ಇವು ಇರದೆ ಈ ಎಲ್ಲ ಮಾತುಗಳಲ್ಲಿ ಶಿಕ್ಷಕ
ವರ್ಗಕ್ಕೆ ಸ್ವಾತಂತ್ರ್ಯವಿದೆಯೆಂದರೆ ಯಾರೂ ಆಶ್ಚರ್ಯಪಡುವ ಕಾರಣವಿಲ್ಲ.
ನಮ್ಮ ದೇಶದ ಪರೀಕ್ಷೆಗಳಲ್ಲಿ ಹಲವು, ಕೆಲವೊಂದು ವರ್ಗದ ನೌಕರರನ್ನು ಆರಿಸಿ
ಕೊಳ್ಳುವದಕ್ಕಾಗಿ ಗೊತ್ತುಪಡಿಸಿದ ಅಭ್ಯಾಸಕ್ರಮವು ಪೂರ್ಣವಾಗಿದೆಯೋ
ಇಲ್ಲವೋ ಎಂಬುದನ್ನು ನೋಡುವ ಉದ್ದೇಶವುಳ್ಳವಾಗಿವೆಯೆಂದು ಜನರ ಭಾವನೆ
ಯಾಗಿರುವದು. ಕೆಲವೊಂದು ಸಾಮಾನ್ಯ ಸಂಸ್ಕೃತಿಯನ್ನು ಗುರಿಯಾಗಿಟ್ಟು
ಕೊಂಡು ಗೊತ್ತುಪಡಿಸಿದ ಅಭ್ಯಾಸಕ್ರಮದ ಹಾಡೂ ಕೂಡ ಇದೇ ಪಲ್ಲವಿ
ಯಲ್ಲಿಯೇ ಕೊನೆ ಮುಟ್ಟುವದು. ಇದು ನಮ್ಮ ಜನತೆಯ ದೋಷ. ಇದೆಲ್ಲ
ಬದಲಾಗಲು ಇನ್ನೂ ಕಾಲವೂ ಬೇಕು; ಆ ದಿಶೆಯಲ್ಲಿ ಪ್ರಯತ್ನವೂ ಬೇಕು.
ಶಿಕ್ಷಕವರ್ಗವು ಈ ಮಾತುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಕೆಲಸ ಮಾಡಿದರೆ
ಅಷ್ಟರಿಂದಲೇ ಎಷ್ಟೋ ಪ್ರಯೋಜನವಾಗಬಹುದು.

ಆಯುರ್ವೇದದ ಮಹತ್ವವೂ ಇತಿಹಾಸವೂ

ಲೇಖಕ:— ಮಾ. ಶ್ರಿ. ಕುಲಕರ್ಣಿ, ೩ನೆಯ ವರ್ಷ ಟ್ರೇ. ಕಾ. ಧಾರವಾಡ.

ವಾಚಕ ಮಹಾಶಯರೇ, ಈಗಿನ ವಾತಾವರಣದಲ್ಲಿ ಅಸ್ಫುಟ ಸ್ಥಿತಿಯಲ್ಲಿದ್ದ ಮಹತ್ತರವಾದ ಆಯುರ್ವೇದದ ಶೋಚನೀಯ ಸ್ಥಿತಿಯಬಗ್ಗೆ ಪ್ರತಿಯೊಬ್ಬ ಭಾರತೀಯನೂ ಕಳವಳಗೊಳ್ಳುವಂತಿದೆ. ಮೊದಲಿದ್ದ ಅದರ ಘನತೆಯನ್ನು ಎಷ್ಟೊಂದು ವರ್ಣಿಸಿದರೂ ಸ್ವಲ್ಪವೇ ಸರಿ. ಗೃಹವೈದ್ಯಕವು ಲುಪ್ತವಾಗಿದೆ. ಪ್ರಸಿದ್ಧ ವೈದ್ಯವಿದ್ವಾಂಸರ ಸಂಖ್ಯೆಯು ವಿರಲವಾಗಿದೆ. ಆದರೂ ಇತ್ತೀಚೆಗೆ ಭರತಖಂಡದಲ್ಲಿ ಆಯುರ್ವೇದದ ಬಗ್ಗೆ ಚಟುವಟಿಕೆಗಳು ತಲೆಯೆತ್ತಹತ್ತಿವೆ. ಪ್ರಾಥಮಿಕ ಶಿಕ್ಷಕರಲ್ಲಿ ಬಹು ಜನರ ಜೀವನ ಕ್ರಮವು ಹಳ್ಳಿಯಲ್ಲಿಯೇ ನಡೆಯ ಬೇಕಾಗಿರುವದರಿಂದ ಅವರು ಅಲ್ಲಿ ತಮ್ಮ ಹಾಗೂ ಹಳ್ಳಿಗರ ಆರೋಗ್ಯಸ್ವಾಸ್ಥ್ಯ ಗಳನ್ನು ಕಾಯ್ದುಕೊಳ್ಳಲಿಕ್ಕೆ ಅಸಮರ್ಥರಾಗುವರು. ರೋಗಚಿಕಿತ್ಸಾ ವಿಜ್ಞಾನಿ ಗಳ ನೆರವು ಸಿಗುವದು ದುರ್ಲಭ; ಹೀಗಾಗಿ ಅನಿವಾರ್ಯ ತಾಪವನ್ನು ಸಹಿಸ ಬೇಕಾಗುವದು. ಆದ್ದರಿಂದ ಶಿಕ್ಷಕರು ಶಕ್ಯವಿದ್ದ ಮಟ್ಟಿಗೆ ಬಲ್ಲವರಲ್ಲಿ ಆಯುರ್ವೇದ ವನ್ನು ಸಾಂಗೋಪಾಂಗವಾಗಿ ಅಭ್ಯಾಸಮಾಡುವದು ಒಳ್ಳೆಯದು. ಇದರಿಂದ ಅವರು ತಮ್ಮ ಮತ್ತು ತಮ್ಮವರ ಆರೋಗ್ಯಭಾಗ್ಯವನ್ನು ಕಾಯ್ದುಕೊಳ್ಳಲಿಕ್ಕೆ ಸಮರ್ಥರಾಗುವರಲ್ಲದೆ, ಲೋಕಪ್ರಿಯರೂ ಆಗುವದರಲ್ಲಿ ಸಂದೇಹವಿಲ್ಲ. ದೈಹಿಕ ಸಂಕಷ್ಟಗಳ ಪರಿಮಾರ್ಜನೆಯನ್ನೂ ದೀರ್ಘಾಯುಷ್ಯವನ್ನುಂಟುಮಾಡುವ ಗುಟ್ಟನ್ನೂ ಹೇಳುವದೇ ಆಯುರ್ವೇದದ ಗುರಿ. ಇಂಥ ಅನುಪಮೇಯ ಶಾಸ್ತ್ರದ ಮಹಿಮೆ ಐತಿಹ್ಯಗಳ ಪರಿಚಯವೂ ಆದರವೂ ನಮ್ಮ ಶಿಕ್ಷಕವರ್ಗದಲ್ಲಿ ಉಂಟಾಗ ಬೇಕೆಂಬುದೇ ಈ ಲೇಖನದ ಉದ್ದೇಶವು.

"ಆಯುರಸ್ಮಿನ್ ವಿದ್ಯತೇ ಅನೇನ ವಾ ಆಯುರ್ವಿಂದತೀತ್ಯಾಯುರ್ವೇದಃ" (ಸುಶ್ರುತ ೧ ನೇ ಅಧ್ಯಾಯ ೨೮ ನೇ ಸೂತ್ರ) ಅಂದರೆ ಯಾವ ಶಾಸ್ತ್ರದಲ್ಲಿ ನಮ್ಮ ಆಯುಷ್ಯವು ಇರುವದೋ ಅದು ಆಯುರ್ವೇದವು. "ಆಯುಃ" ಅಂದರೆ, ಬದು ಕುವಿಕೆ, ಜೀವಿತ, ಎಂಬರ್ಥ. ಜೀವಿತದ ಸುಖದುಃಖಗಳನ್ನೂ ಹಿತಾಹಿತಗಳನ್ನೂ ಕಾಲಪರಿಮಿತಿಯನ್ನೂ ವೃದ್ಧಿಕ್ಷಯಗಳಿಗೆ ಹೇತುಗಳಾದ ದ್ರವ್ಯಗಳ ಗುಣಕ್ರಿಯೆ ಗಳನ್ನೂ ತಿಳಿಸುವಂಥದು ಆಯುರ್ವೇದವು. ಪೃಥ್ವ್ಯಪ್ತೇಜೋವಾಯ್ವಾಕಾಶ

ಗಳೆಂಬ ಪಂಚಮಹಾಭೂತಾತ್ಮಕ ಈ ಜಡದೇಹಕ್ಕೂ ಅಂತಸ್ಥ ಜೀವಕ್ಕೂ ಇರುವ ಸಂಬಂಧವನ್ನು ತಿಳಿಸುವದು ಆಯುರ್ವೇದವೆಂದು ಶಾರ್ಙ್ಗಧರ ಸಂಹಿ ಯಲ್ಲಿ ಹೇಳಿದೆ. ಇದರಂತೆ ಭಾವಪ್ರಕಾಶವೆಂಬ ಆಯುರ್ವೇದ ಗ್ರಂಥದಲ್ಲಿ 'ಆಯುರ್ಹಿತಾಹಿತಂ ವ್ಯಾಧೇರ್ನಿದಾನಂ ಶಮನಂ ತಥಾ । ವಿದ್ಯತೇ ಯತ್ರ ವಿದ್ವದ್ಭಿಃ ಆಯುರ್ವೇದಃ ಸ ಉಚ್ಯತೇ ॥" ಎಂದು ವ್ಯಾಖ್ಯೆಯಿದೆ. ಅಂದ ಯಾವ ವೇದದಲ್ಲಿ ಆಯುಷ್ಯಕ್ಕೆ ಹಿತ ಹಾಗೂ ಅಹಿತಕಾರಕಗಳಾದ ಪದಾರ್ಥಗ ಜ್ಞಾನವೂ, ವ್ಯಾಧಿಗಳ ಉತ್ಪತ್ತಿ ಕಾರಣ ಮೊದಲಾದವುಗಳ ನಿದಾನವೂ, ಆ ರೋಗಗಳ ಶಮನವೂ ಹೇಳಿರುವದೋ ಅದು ಪಂಡಿತರಿಂದ ಆಯುರ್ವೇದವೆಂದು ಎಣಿಸಲ್ಪಡುತ್ತದೆ. ವಾಗ್ಭಟಾಚಾರ್ಯರ ಅಷ್ಟಾಂಗ ಹೃದಯದಲ್ಲಿಯೂ ಹೀಗೆಯೇ ಹೇಳಿದೆ. ಸಾಮಾನ್ಯವಾಗಿ ಆಯುರ್ವೇದವೆಂದರೆ, ವೈದ್ಯಶಾಸ್ತ್ರ ವೆಂದೂ, ಆಯುಷ್ಯವನ್ನು ತಿಳಿಯುವದು ಎಂದೂ ಅರ್ಥವಾಗುವದು. ಆಯುಷ್ಯ ವನ್ನು ತಿಳಿಯುವದು ಸುಲಭಸಾಧ್ಯವಲ್ಲ. ಆದರೆ ಆಯುರ್ವೇದವು ಇದನ್ನು ಕಂಡು ಹಿಡಿದಿದೆಯೆಂದಮೇಲೆ ಇಂಥ ಅಮೋಘವಾದ ಈಶ್ವರಪ್ರಣೀತ ಆಯುರ್ವೇದದ ಮಹಿಮೆಯನ್ನು ಎಷ್ಟು ಬಣ್ಣಿಸಿದರೂ ತೀರದು.

ಮೊದಲು ಪರಮಾತ್ಮನು ಅಥರ್ವದೊಳಗಿಂದ ವಿಶಿಷ್ಟ ಆಯುರ್ವೇದವನ್ನು ವಿಂಗಡಿಸಿ ಜಗದುದ್ಧಾರಕ್ಕಾಗಿ ಅದನ್ನು ಸಾವಿರ ಅಧ್ಯಾಯಗಳಾಗಿ ಒಂದುಲಕ್ಷ ಶ್ಲೋಕಗಳುಳ್ಳ ಮಹಾಗ್ರಂಥವನ್ನು ರಚಿಸಿ ಅದಕ್ಕೆ ಆಯುರ್ವೇದ ಸಂಹಿತೆಯೆಂದು ಹೆಸರಿಟ್ಟು ಅದನ್ನು ಬ್ರಹ್ಮನಿಗೆ ಉಪದೇಶಮಾಡಿದನೆಂದು ಗೂಢತಂತ್ರಬೋಧಕ ವಾದ ಶಬ್ದಕಲ್ಪದ್ರುಮವೆಂಬ ಮಹಾಗ್ರಂಥದಿಂದ ಕಂಡುಬರುತ್ತಿದೆ. ಭಾರತೀಯ ರಾದ ನಾವೆಲ್ಲರೂ ಭಾವನಾವಾದಿಗಳಾದ್ದರಿಂದ ಭಾವನಾತ್ಮಕವಾದ ಈ ವಿಷಯ ವನ್ನು ಒಪ್ಪತಕ್ಕದ್ದು ಸಯುಕ್ತವೆಂಬುದು, ಆಯುರ್ವೇದ ಮಹಾಗ್ರಂಥಗಳನ್ನು ಪರಿಶೀಲಿಸಿದ ಪಂಡಿತರಿಗೆ ಸಹಜವಾಗಿ ಹೊಳೆಯುವದು. ಚರಕ, ಸುಶ್ರುತ ಮುಂತಾದ ಪ್ರಾಚೀನ ವೈದ್ಯಗ್ರಂಥಗಳಲ್ಲಿಯೂ ಆಯುರ್ವೇದವು ಅಥರ್ವವೇದದ ಉಪಾಂಗವಾಗಿದೆ ಎಂದು ಹೇಳಲ್ಪಟ್ಟಿದೆ. ಅಥರ್ವದಲ್ಲಿ ಜನರ ಇಷ್ಟಪ್ರಾಪ್ತಿಕರ ವಾದ ಸ್ವಸ್ತ್ಯಯನ, ಬಲಿ, ಮಂಗಲಹೋಮ, ನಿಯಮ, ಪ್ರಾಯಶ್ಚಿತ್ತ, ಉಪ ವಾಸ, ಮಂತ್ರ ಮುಂತಾದವುಗಳೊಂದಿಗೆ ಆಯುರ್ವೃದ್ಧಿಕರವಾದ ಸುಸಂಘಟಿತ ಆಯುರ್ವೇದವೂ ಉಪದೇಶಿಸಲ್ಪಟ್ಟದೆ. ಜನ್ಮವು ಅನಾದಿಯಾದದ್ದು. ಅದ್ದರಿಂದ

ಅದಕ್ಕನುಬಂಧುಗಳಾದ ಸುಖದುಃಖ, ಹಿತಾಹಿತ, ಇವುಗಳ ಕಾರಣ, ದುಃಖಾ ಹಿತಗಳನಿವಾರಣ, ಮತ್ತೂ ಅವುಗಳ ಜ್ಞಾನಸಂಗ್ರಹವಾದ ಆಯುರ್ವೇದ ಇವೂ ಸಹ ಅನಾದಿಯಾದಂಥವು. ಆಯುರ್ವೇದವಿಲ್ಲದ ಕಾಲವಿಲ್ಲ. ಆದರೆ ಕಾಲ ಪರಿಣಾಮದಿಂದ ಲೋಕದಲ್ಲಿ ಆಯುರ್ವೇದ ಜ್ಞಾನವು ಕೆಲವುಕಾಲ ಮಲಿನ ವಾಗಿಯೂ ಕೆಲವುಕಾಲ ಪುನಃ ಉದ್ಧರಿಸಲ್ಪಟ್ಟದ್ದೂ ಸರ್ವಶ್ರುತವಿದೆ. ಬ್ರಹ್ಮನು ಪರಮಾತ್ಮನಿಂದ ಅನುಜ್ಞೆಹೊಂದಿ ಈಶ್ವರಪ್ರಣೀತ ಆಯುರ್ವೇದಮಹಾಸಂಹಿತೆ ಯನ್ನು ಅಲ್ಪಾಯುಷಿಗಳೂ ಅಲ್ಪಶಕ್ತಿಗಳೂ ಮಲಿನ ಬುದ್ಧಿಶಾಲಿಗಳೂ ಆದ ಮನುಷ್ಯರಿಂದ ಅಭ್ಯಾಸಿಸುವದು ಸುಲಭಸಾಧ್ಯವಾಗಲಿಕ್ಕಿಲ್ಲೆಂದು ಊಹಿಸಿ ಅದರಲ್ಲಿ ಶಲ್ಯ, ಶಾಲಾಕ್ಯ, ಕಾಯಚಿಕಿತ್ಸೆ, ಭೂತವಿದ್ಯೆ, ಕೌಮಾರ ಭೃತ್ಯ, ಅಗದ ತಂತ್ರ, ರಾಸಾಯನಿಕ ತಂತ್ರ, ವಾಜೀಕರಣತಂತ್ರ ಎಂಬ ಅಷ್ಟಾಂಗಗಳನ್ನಾಗಿ ವಿಭಾಗಿಸಿ ಮಹಾ ಕುಶಲನೂ ಬಲ್ಲಿದನೂ ನವಪ್ರಾಚೇತಸ (ಮಾನಸಪುತ್ರ) ರಲ್ಲಿ ಒಬ್ಬನೂ ಆದ ದಕ್ಷಪ್ರಜಾಪತಿಗೆ ಉಪದೇಶಮಾಡಿದನು. ಇದೇ ವಿಷಯವನ್ನೇ ಅಷ್ಟಾಂಗ ಹೃದಯದಲ್ಲಿ "ಬ್ರಹ್ಮಾ ಸ್ಮೃತ್ವಾಯುಷೋ ವೇದಂ। ಪ್ರಜಾಪತಿ ಮಜಿಗ್ರಹತ್॥ ಸೋಽಶ್ವಿನೌ ತೌ ಸಹಸ್ರಾಕ್ಷಂ। ಸೋಽತ್ರಿಪುತ್ರಾದಿಕಾನ್ ಮುನೀನ್। ತೇಽಗ್ನಿವೇಶಾದಿಕಾನ್ ಸರ್ವೇ। ಪೃಥಕ್ ತಂತ್ರಾಣಿ ತೇನಿರೇ॥" ಹೀಗೆ ಹೇಳಿದೆ. ಅಂದರೆ, ಪರಮಾತ್ಮನಿಂದ ಬ್ರಹ್ಮನೂ, ಬ್ರಹ್ಮನಿಂದ ದಕ್ಷಪ್ರಜಾ ಪತಿಯೂ, ದಕ್ಷನಿಂದ ಅಶ್ವಿನೀದೇವತೆಗಳೂ, ಅಶ್ವಿನೀದೇವತೆಗಳಿಂದ ಇಂದ್ರನೂ, ಇಂದ್ರನಿಂದ ಲೋಕಹಿತೈಷಿಗಳಾದ ಭಾರದ್ವಾಜ, ಆತ್ರೇಯ ಋಷಿಗಳೂ ಆಯು ರ್ವೇದವನ್ನು ಕಲಿತರೆಂದು ತಿಳಿದುಬರುವದು. ಭಾರತೀಯರ ಆಯುರ್ವೇದದಲ್ಲಿ ಮುಖ್ಯವಾಗಿ ಕಾಯಚಿಕಿತ್ಸೆ (ಔಷಧಪ್ರಯೋಗ) ಶಲ್ಯಚಿಕಿತ್ಸೆ (ಶಸ್ತ್ರಪ್ರಯೋಗ) ಎಂಬ ಎರಡು ಶಾಖೆಗಳು. ಭಾರದ್ವಾಜ, ಆತ್ರೇಯಾದಿ ಮುನಿಗಳು ತಮ್ಮ ಶಿಷ್ಯರಾದ ಅಗ್ನಿವೇಶ, ಭೇಡ, ಜತೂಕರ್ಣ, ಹಾರೀತ, ಪರಾಶರ, ಕ್ಷೀರಪಾಣಿ ಮೊದಲಾದವರಿಗೆ ಕಾಯಚಿಕಿತ್ಸಾಪ್ರಧಾನವಾದ ಆಯುರ್ವೇದವನ್ನು ಉಪದೇಶಿಸಿ ದನು. ಅವರೆಲ್ಲರೂ ತಮ್ಮ ತಮ್ಮ ಹೆಸರಿನಿಂದ ಆಯುರ್ವೇದದ ದೊಡ್ಡ ದೊಡ್ಡ ಗ್ರಂಥಗಳನ್ನು ಬರೆದರು. ಅವುಗಳಲ್ಲಿ ಅಗ್ನಿವೇಶಸಂಹಿತೆಗೆ ಹೆಚ್ಚು ಪ್ರಾಧಾನ್ಯ ವುಂಟಾಯಿತು. ಮುಂದೆ ಕೆಲವು ಕಾಲದಮೇಲೆ ಅಗ್ನಿವೇಶ ಸಂಹಿತೆಯು ಖಿಲವಾಗ ಹತ್ತಿದಮೇಲೆ ಆದಿಶೇಷನು ಚರಕಾಚಾರ್ಯರೆಂಬ ಹೆಸರಿನಿಂದ ಭೂಮಿಯಲ್ಲಿ ಉದಯಿಸಿ ಚರಕಸಂಹಿತೆ ಎಂಬ ಮಹಾಗ್ರಂಥವನ್ನು ಬರೆದು ಲೋಕೋಪಕಾರ

ಮಾಡಿದನೆಂಬ ಬಗ್ಗೆ ಚರಕಸಂಹಿತೆಯಲ್ಲಿ ಹೇಳಿದೆ. ಮತ್ತು ಚರಕ ಸಂಹಿತೆಯು ಎಷ್ಟೋ ಅಧ್ಯಾಯಗಳ ಆದಿಯಲ್ಲಿ "ಇತಿಹಸ್ಮಾಹ ಭಗವಾನಾತ್ರೇಯಃ" ಎಂತಲೂ ಎಷ್ಟೋ ಅಧ್ಯಾಯಗಳ ಕೊನೆಯಲ್ಲಿ "ಅಗ್ನಿವೇಶ ಕೃತೇತಂತ್ರೇ ಚರಕ ಪ್ರತಿಸಂಸ್ಕೃತೇ" ಎಂತಲೂ ಅಂದಿರುವದರಿಂದ ಅಗ್ನಿವೇಶ ಸಂಹಿತೆಯ ಪುನರುದ್ಧಾರವೇ ಚರಕಸಂಹಿತೆಯೆಂಬುದು ನಿರ್ವಿವಾದವು. ಚರಕಸಂಹಿತೆಯು ಇಂದಿಗೂ ಪ್ರಸಿದ್ಧವಿದ್ದು ಆಯುರ್ವೇದಮಹಾಗ್ರಂಥಗಳಲ್ಲಿ ಒಂದೆಂದು ಎಣಿಸಲ್ಪಟ್ಟಿದೆ.

ಚರಕಾಚಾರ್ಯರ ತರುವಾಯ ಎಷ್ಟೋ ಕಾಲದ ಮೇಲೆ ಶ್ರೀ ಧನ್ವಂತರಿಯು ಇಂದ್ರನಿಂದ ವೈದ್ಯೋಪದೇಶವನ್ನು ಹೊಂದಿ ಕಾಶಿಯಲ್ಲಿ ಹುಟ್ಟಿ ದಿವೋದಾಸಧನ್ವಂತರಿಯೆಂಬ ಹೆಸರಿನಿಂದ ಪ್ರಸಿದ್ಧನಾಗಿ ವಿಶ್ವಾಮಿತ್ರನ ಮಗನಾದ ಸುಶ್ರುತನಿಗೂ ಅವನ ಮಿತ್ರರಾದ ಔಷಧೇನವ, ಪೌಷ್ಕಲಾವತ, ಔರಭ್ರ ಮೊದಲಾದವರಿಗೂ ಶಲ್ಯಚಿಕಿತ್ಸಾಪ್ರಧಾನ ಆಯುರ್ವೇದವನ್ನು ಉಪದೇಶಮಾಡಿದನೆಂದು ಸುಶ್ರುತ ಸಂಹಿತೆಯಲ್ಲಿ ಹೇಳಿದೆ. ಆ ಧನ್ವಂತರಿಯ ಶಿಷ್ಯರು ಸುಶ್ರುತ ತಂತ್ರ, ಔಷಧೇನವ ತಂತ್ರ, ಔರಭ್ರತಂತ್ರ, ಮುಂತಾಗಿ ಶಲ್ಯ ಚಿಕಿತ್ಸಾಪ್ರಧಾನವಾದ ಆಯುರ್ವೇದ ಗ್ರಂಥಗಳನ್ನು ಬರೆದರು. ಅವುಗಳಲ್ಲಿ ವೃದ್ಧಸುಶ್ರುತ (ಸುಶ್ರುತ ತಂತ್ರ) ವು ಪ್ರಸಿದ್ಧವಿದೆ.

ಕ್ರಿಸ್ತಶಕದ ಪೂರ್ವದಲ್ಲಿ ೨೦೦ ವರ್ಷಗಳ ಮೊದಲು ನಮ್ಮ ಭರತಖಂಡದಲ್ಲಿ ಉದಯಹೊಂದಿದ ಪ್ರಸಿದ್ಧ ವೈದ್ಯರಾದ ವಾಗ್ಭಟಾಚಾರ್ಯರು ತಮ್ಮ ಅಷ್ಟಾಂಗ ಹೃದಯದಲ್ಲಿ ಚರಕ, ಸುಶ್ರುತ ಸಂಹಿತೆಗಳನ್ನು ವಿಶೇಷವಾಗಿ ವರ್ಣಿಸಿ, ಸಾಧಾರಣವಾಗಿ ಅಲ್ಲಲ್ಲಿ, ಭೇಡ, ಹಾರೀತ, ಪರಾಶರ ಸಂಹಿತೆಗಳೊಳಗಿನ ಭಾಗಗಳನ್ನೂ ಸಹ ಎತ್ತಿ ಬರೆದಿದ್ದಾರೆ. ಅಷ್ಟಾಂಗ ಹೃದಯವೂ ಈಗ ಬಳಿಕೆಯಲ್ಲಿ ಮೇಲ್ತರದ ಗ್ರಂಥವೆಂದು ಎಣಿಸಲ್ಪಟ್ಟಿದೆ. "ಅತ್ರಿಃಕೃತಯುಗೇ ವೈದ್ಯೋ । ದ್ವಾಪರೇ ಸುಶ್ರುತೋ ಮತಃ । ಕಲೌ ವಾಗ್ಭಟ ನಾಮಾಚ ಗರಿಮಾತ್ರ ಪ್ರದೃಶ್ಯತೇ" ಎಂದಿರುವದರಿಂದ ಚರಕ, ಸುಶ್ರುತಾಚಾರ್ಯರ ಕಾಲನಿರ್ಣಯವು ಕ್ರಿಸ್ತಶಕದ ಪೂರ್ವದಲ್ಲಿ ಇಂತಿಷ್ಟು ವರ್ಷಗಳ ಮೊದಲು ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಅವರು ಬರೆದ ಮಹಾಗ್ರಂಥಗಳೇ ಇಂದಿನ ಹೊತ್ತಿಗೆ ವಿಶ್ವ ವೈದ್ಯಕದ ಆಧಾರಸ್ತಂಭಗಳಾಗಿವೆ.

ಆಯುರ್ವೇದದಲ್ಲಿ ಶಸ್ತ್ರಚಿಕಿತ್ಸೆಯೇ (ಸರ್ಜರೀ ವಿದ್ಯೆಯೇ) ಇಲ್ಲವೆಂದೂ ಪಾಶ್ಚಾತ್ಯ ಪಂಡಿತರೇ ಅದನ್ನು ಕಂಡುಹಿಡಿದರೆಂದೂ ಕೆಲವರು ವಾದಿಸುವರು. ಆದರೆ ಇವರು ಹಿಂದಿನ ಆಯುರ್ವೇದ ಗ್ರಂಥಗಳನ್ನು ಅಂತಃಕರಣಪೂರ್ವಕವಾಗಿ ಪರಾಮರ್ಶಿಸಿ ನೋಡಿದ್ದರೆ ಹೀಗೆ ವಾದಿಸುತ್ತಿರಲಿಲ್ಲವೆಂದು ಅನಿಸುವದು ಸಹಜವು. ರಾಮಾಯಣದ ಯುದ್ಧಕಾಂಡದಂಥ ಪ್ರಸಂಗದಲ್ಲಿಯೂ ಅದಕ್ಕೂ ಪೂರ್ವದಲ್ಲಿ 'ವಿಶ್ಪಲಾ' ಸ್ತ್ರೀಯ ಚರಿತ್ರೆಯಲ್ಲಿಯೂ ಪ್ರಾಚೀನ ಕಾಲದ ಭರತಖಂಡದ ಅದ್ವಿತೀಯ ಶಲ್ಯಚಿಕಿತ್ಸೆ (ಸರ್ಜರಿ) ಯು ಎಷ್ಟು ಮುಂದುವರಿದಿತ್ತೆಂಬುದು ತಿಳಿಯುವದು ಇಂದಿಗೆ ೨೫೦೦ ವರ್ಷಗಳ ಹಿಂದೆ ನಮ್ಮ ದೇಶದಲ್ಲಿದ್ದ ಶಲ್ಯಚಿಕಿತ್ಸೆಯು 'ಮಹಾವರ್ಗ' ವೆಂಬ ಬೌದ್ಧ ಗ್ರಂಥದ ೮-೯ ನೇ ಸರ್ಗಗಳಲ್ಲಿ ಶ್ರೇಣಿಕಬಿಂಬಸಾರನ ಆಶ್ರಯದಲ್ಲಿದ್ದ ಕುಮಾರ ಭೃತ್ಯನನ್ನು ವರ್ಣಿಸುವಾಗ ವಿಶದವಾಗಿದೆ. ಕ್ರಿಸ್ತೀಶಕದ ೪ ನೇ ಶತಮಾನದ ಸುಮಾರಕ್ಕೆ ಆಳುತ್ತಿದ್ದ ಚಂದ್ರಗುಪ್ತನ ಮಂತ್ರಿಯಾಗಿದ್ದ ಚಾಣಕ್ಯನು ತನ್ನ ಕೌಟಿಲೀಯ ಗ್ರಂಥದಲ್ಲಿ ಆಗಿನ ಕಾಲದ ಶಲ್ಯಚಿಕಿತ್ಸೆಯನ್ನೂ, ಹೆಣಗಳನ್ನು ಕೊಯ್ದು ಪರೀಕ್ಷಿಸುವ ವಿಧಾನಗಳನ್ನೂ ವಿದ್ಯಾರ್ಥಿಗಳಿಗೆ ಕೊಡುವ ಶಲ್ಯತಂತ್ರದ ಶಿಕ್ಷಣ ಪದ್ಧತಿಗಳನ್ನೂ ವಿಶದವಾಗಿ ವರ್ಣಿಸಿದ್ದಾನೆ. ಬೌದ್ಧಯುಗದಲ್ಲಿ ಆಯುರ್ವೇದವು ಒಳ್ಳೇ ಘನತೆಗೇರಿತ್ತು. ವಾಗ್ಭಟಾಚಾರ್ಯರು ಅಷ್ಟಾಂಗಹೃದಯ, ಸಿದ್ಧಿಸಾರ ಎಂಬ ಗ್ರಂಥಗಳನ್ನು ಬರೆದರು. ಇವರ ಅಷ್ಟಾಂಗಹೃದಯಕ್ಕೆ ಅರುಣದತ್ತನೆಂಬವನು "ಸರ್ವಾಂಗ ಸುಂದರ" ಎಂಬ ವ್ಯಾಖ್ಯಾನವನ್ನು ಬರೆದನು. ಮುಂದೆ ವಾಗ್ಭಟಾಚಾರ್ಯರ ವಂಶಸ್ಥರು 'ಚಿಕಿತ್ಸಾಕಾರಿಕಾ' ಎಂಬ ಗ್ರಂಥವನ್ನು ಬರೆದರು. ಕ್ರಿಸ್ತಶಕದ ೩ ನೇ ಶತಮಾನದಲ್ಲಿ ಸಿದ್ಧನಾಗಾರ್ಜುನರು ಖಿಲವಾಗಿದ್ದ ಸುಶ್ರುತ ಸಂಹಿತೆಯ ತಿದ್ದುಪಡಿಯನ್ನು ಮಾಡಿದರು. ಮುಂದೆ ವರರುಚಿಯು ಯೋಗಶತಕವನ್ನು ಬರೆದನು. ೪ ನೇ ಶತಮಾನದಲ್ಲಿ ಜೀವಕನು ಸಿದ್ಧನಾಗಾರ್ಜುನರ ಚರಿತ್ರೆಯನ್ನೂ ಇನ್ನೂ ಎಷ್ಟೋ ಆಯುರ್ವೇದ ಗ್ರಂಥಗಳನ್ನೂ ಬರೆದನು. ಮುಂದೆ ಗ್ರೀಕರೂ, ಸಿಥಿಯನ್ನರೂ ಹಿಂದುಸ್ತಾನಕ್ಕೆ ಬಂದ ಬಳಿಕ ನಮ್ಮ ಆಯುರ್ವೇದ ಗ್ರಂಥಗಳನ್ನು ತಮ್ಮ ಭಾಷೆಯಲ್ಲಿ ಭಾಷಾಂತರಿಸಿಕೊಂಡು ತಮ್ಮ ದೇಶಕ್ಕೆ ಒಯ್ದರು. ಮುಂದೆ ಮುಸಲ್ಮಾನರ ಆಳಿಕೆಯಲ್ಲಿ ಆಯುರ್ವೇದವು ಮುಗ್ಗಿತು. ಮಹತ್ವದ ಎಷ್ಟೋ ಗ್ರಂಥಗಳು ಸರಕೀಯರಿಂದ ನಿಷ್ಕಾರಣವಾಗಿ ಸುಡಲ್ಪಟ್ಟವು. ೧೬ ನೇ ಶತಮಾನದಲ್ಲಿ ಇಂಗ್ಲಿಷರು ನಮ್ಮ ದೇಶಕ್ಕೆ ಬಂದ ತರುವಾಯ ನಮ್ಮ ಆಯುರ್ವೇದದ

ಗ್ರಂಥಗಳಿಗೆ ಒಂದು ಪ್ರಕಾರದ ರಕ್ಷಣೆಯುಂಟಾಯಿತು. ಮುದ್ರಣ ಯಂತ್ರವು ಬಳಿಕೆಯಲ್ಲಿ ಬಂದ ಬಳಿಕ ತಾಡ ಓಲೆಯ ಗ್ರಂಥಗಳು ಮುದ್ರಿತವಾದವು. ನಮ್ಮ ಶಾಸ್ತ್ರದ ಗುಟ್ಟನ್ನರಿತ ಪಾಶ್ಚಾತ್ಯ ಪಂಡಿತರು ಚರಕ ಸುಶ್ರುತಗಳನ್ನು ಭಾಷಾಂತರ ಮಾಡಿಕೊಂಡರು. ಇದಕ್ಕೆ ೧೬ ನೇ ಶತಮಾನದಲ್ಲಿ ರಾಜಾ ಚಾರ್ಲಸನ ಆಳಿಕೆಯಲ್ಲಿದ್ದ ಡಾ. ಹಾರ್ವೆಯೆಂಬವರು ರುಧಿರಾಭಿಸರಣದ ಶೋಧಮಾಡಿದ್ದೇ ಸಾಕ್ಷಿ. ರುಧಿರಾಭಿಸರಣದ ಸಂಪೂರ್ಣ ವಿವರಣೆಯು ನಮ್ಮ ಚರಕಸಂಹಿತೆಯ ೩೦ ನೇ ಅಧ್ಯಾಯದಲ್ಲಿದೆ. ಅರಬೀ ಗ್ರಂಥಗಳಲ್ಲಿ ಅಶ್ವಿನೀಕುಮಾರ ಚರಕ ಸುಶ್ರುತಗಳನ್ನು ವಿಶೇಷವಾಗಿ ವರ್ಣಿಸಿದ್ದಾರೆ. ರೋಮನ್ನರು ಲ್ಯಾಟಿನ್ ಭಾಷೆಯಲ್ಲಿ (ಗ್ರಂಥಗಳಲ್ಲಿ) ಚರಕಾಚಾರ್ಯರನ್ನೂ ಅವರ ಅತ್ಯಗಾಧ ಜ್ಞಾನವನ್ನೂ ವಿಶೇಷವಾಗಿ ವರ್ಣಿಸಿದ್ದಾರೆ. ಇದರ ಮೇಲಿಂದ ಇಡಿ ಯುರೋಪಖಂಡದ ಜನರು ನಮ್ಮ ಪ್ರಾಚೀನ ಹಿಂದುಸ್ತಾನದ ಆಯುರ್ವೇದ ಕಲೆಯನ್ನು ತಮ್ಮಲ್ಲಿಗೆ ಒಯ್ದಿದ್ದಾರೆಂಬದು ನಿರ್ವಿವಾದವು.

ಡಾ. ಚಾರ್ಲಸ, ಡಾ. ವ್ಹಾಯಿಜ್, ಸರ್ ಲಾರೆನ್ಸ್, ಸರ್ ಜಂಕಿನ್ಸ್ ಮುಂತಾದ ಪಾಶ್ಚಾತ್ಯ ಡಾಕ್ಟರರೂ ಗ್ರಂಥಕಾರರೂ ಮೊದಲಾದವರು "ಪ್ರಾಚೀನ ಭರತಖಂಡದಲ್ಲಿ ಆಯುರ್ವೇದವು ಅತ್ಯುಚ್ಚ ಸ್ಥಿತಿಯಲ್ಲಿದ್ದು, ಅದರ ಎಲುವು, ಶಸ್ತ್ರಕ್ರಿಯೆ, ಪ್ರಸೂತಿಪರಿಜ್ಞಾನ, (ನರ್ಸರೀವಿದ್ಯೆ) ಇತ್ಯಾದಿ ಮಾರ್ಮಿಕ ವಿಷಯಗಳು ಬಹಳ ಶ್ಲಾಘನೀಯವಾಗಿ ವರ್ಣಿತವಾಗಿವೆ; ಮತ್ತು ಪಾಶ್ಚಾತ್ಯ ವೈದ್ಯಕಕ್ಕೆ ಆಯುರ್ವೇದವೇ ಮೂಲಾಧಾರವಾಗಿದೆ, ಎಂದು ನಿರ್ವಿವಾದವಾಗಿ ಒಪ್ಪಿಕೊಂಡಿದ್ದಾರೆ. ಈಗಿನ ಡಾಕ್ಟರರ ಸ್ಟೆಥಾಸ್‌ಕೋಪ್ ಇಲ್ಲವೆ ದಿ ಹೆಲ್ಥಿ ವ್ಹ್ಯಾಶುವಿಲರ್ ಮರ್ಮರ (ಕಿವಿಯಲ್ಲಿಟ್ಟು ಪರೀಕ್ಷಿಸುವ ರಬ್ಬರ ಕೊಳವೆಯುಳ್ಳ) ಯಂತ್ರದ ಶೋಧವು ಅವರದಲ್ಲ. ಅದರ ಶೋಧವು ನಮ್ಮ ಪ್ರಾಚೀನ ಆಚಾರ್ಯರಿಂದಲೇ ಉದ್ಘೋಷಿತವಾಗಿದೆ. ನಮ್ಮ ಆಯುರ್ವೇದ ಗ್ರಂಥಗಳಲ್ಲಿ ಅದಕ್ಕೆ "ಆರುಗ್ಣ ಫುಪ್ಫುಸ ಮರ್ಮರ" ಎಂದು ಹೆಸರು. ಇಂದಿಗೆ ಪಾಶ್ಚಾತ್ಯ ವೈದ್ಯಕದಲ್ಲಿ (೧) ಅಲೋಪ್ಯಾಥಿ (೨) ಹೋಮಿಯೋಪ್ಯಾಥಿ (೩) ಇಲೆಕ್ಟ್ರೋಪ್ಯಾಥಿ (೪) ಕ್ರೋಮೋಪ್ಯಾಥಿ (೫) ಹಾಯಡ್ರೋಪ್ಯಾಥಿ (೬) ಕ್ಲೇಓಪ್ಯಾಥಿ (೭) ಬಾಯೋಕೆಮಿಕ್ ಮುಂತಾಗಿ ೧೫ ಪದ್ಧತಿಗಳು ನಡೆಯುತ್ತಿದ್ದು ಅವೆಲ್ಲವುಗಳಿಗೂ ನಮ್ಮ ಆಯುರ್ವೇದವೇ ಮೂಲಭೂತವಾಗಿದೆಯೆಂಬುದನ್ನು ಒತ್ತಿ ಹೇಳಬಹುದು

ಆಯುರ್ವೇದದಲ್ಲಿಯ ರೋಗದ ೬ ಉಪಶಯಗಳಲ್ಲಿ (೧) ಹೇತುವಿಪರಿತ (೨) ವ್ಯಾಧಿ ವಿಪರಿತ, (೩) ಹೇತುವ್ಯಾಧಿ ವಿಪರಿತ ಈ ಮೂರು ಉಪಶಯಗಳು ಅಲೋಪ್ಯಾಥಿ ಯಲ್ಲಿ ಅಡಕವಾಗಿವೆ. ಇದರಂತೆ ಹೋಮಿಯೋಪ್ಯಾಥಿಯಲ್ಲಿ (೪) ಹೇತುವಿಪ ರ್‍ಯಸ್ತಾರ್ಥಿಕಾರಿ (೫) ವ್ಯಾಧಿವಿಪರ್ಯಾಸ್ತಾರ್ಥಕಾರಿ (೬) ಹೇತುವ್ಯಾಧಿ ವಿಪರೀ ತಾರ್ಥಕಾರಿ ಈ ಮೂರು ಉಪಶಯಗಳು ಅಡಕವಾಗಿವೆ. ಇಲೆಕ್ಟ್ರೋಪ್ಯಾಥಿಯು ರೂಢಿಯಂತೂ ನಮ್ಮಲ್ಲಿ ಪ್ರಾಚೀನಕಾಲದಿಂದಲೂ ಇಂದಿನತನಕ ಸಜೀವ ಸ್ಥಿತಿ ಯಲ್ಲಿದೆ ಮುಟ್ಟುದೋಷವಾದ ಹುಡುಗರಿಗೆ ಗಜಗದಲ್ಲಿ ಪಾರಜ ತುಂಬಿ ತಾಮ್ರದ ಬಿಲ್ಲೆಗಳಿಂದ ಮುಚ್ಚಿ ಪಂಚರಂಗಿದಾರದಿಂದ ಅದನ್ನು ಹುಡುಗರ ಕೊರ ಳಲ್ಲಿ ಕಟ್ಟುವದೇ ಇದಕ್ಕೆ ಬಲವಾದ ಸಾಕ್ಷಿ. ಮೃತ್ತಿಕಾಲೇಪನದ ಪದ್ಧತಿಯು ನಮ್ಮ ಧರ್ಮಶಾಸ್ತ್ರದಲ್ಲಿ ಇಂದಿಗೂ ಅದೆ. ಅದರಂತೆ ಹೈಡ್ರೋಪ್ಯಾಥಿಯು ಅಂದರೆ ಜಲಚಿಕಿತ್ಸಾಪದ್ಧತಿಯು ಪ್ರಾಚೀನಕಾಲದಿಂದಲೂ ನಮ್ಮ ಶಾಸ್ತ್ರಗಳಲ್ಲಿದೆ. ಕಾರ್ತಿಕ, ಮಾಘಸ್ನಾನಗಳೂ (ನದೀ ಮೊದಲಾದ ತೀರ್ಥಗಳಲ್ಲಿ) ಉಷಃಪಾನವೂ ಇದಕ್ಕೆ ಸಾಕ್ಷಿ. ಜಲಚಿಕಿತ್ಸಾಪದ್ಧತಿಯ ಬಗ್ಗೆ ಟೋಡರಾನಂದಕೃತ ಬಾಷ್ಪ ಚಂದ್ರಿಕಾ, ಉದಕಮಂಜರಿ, ಧಾರಾಕಲ್ಪ ಮುಂತಾದ ಗ್ರಂಥಗಳು ಪ್ರಾಚೀನ ಕಾಲದಲ್ಲಿಯೇ ಪ್ರಸಿದ್ಧವಾಗಿವೆ. ಹೀಗೆ ಒಂದಲ್ಲ ಎರಡಲ್ಲ ೧೫ ಪ್ಯಾಥಿಗಳ ಬಗ್ಗೆಯೂ ನಮ್ಮ ಆಯುರ್ವೇದದ ಮೂಲಭೂತ ತತ್ವವನ್ನು ತೋರಿಸಲು ಸಾಧ್ಯ ಎದೆ. ಆದರೆ ವಿಸ್ತಾರಭಯದಿಂದ ಅವನ್ನೆಲ್ಲ ಇಲ್ಲಿ ಹೇಳಲು ಸಾಧ್ಯವಿಲ್ಲ.

೧೯ನೇ ಶತಮಾನದ ಕೊನೆಯವರೆಗೆ ನಮ್ಮ ಆಯುರ್ವೇದವು ಒಳ್ಳೇ ಬೆಳವಣಿಗೆಯಲ್ಲಿತ್ತು. ಇತ್ತೀಚಿಗೆ ಸ್ವಲ್ಪಮಟ್ಟಿಗೆ ಹ್ರಾಸಕಾಲವುಂಟಾಗಿ ಗೃಹ ವೈದ್ಯಕವು ಮುಳುಗಿತು. ಪ್ರಸಿದ್ದ ವೈದ್ಯಮನೆತನಗಳು ವಿರಲವಾದವು. ಅತ್ಯಂತ ಗುಣಕಾರಿಗಳಾದ ಅಸಂಖ್ಯ ಮೂಲಿಕೆಗಳು ನಮ್ಮಲ್ಲಿ ಬೆಳೆಯುತ್ತಿದ್ದರೂ ಅವುಗಳ ಉಪಯೋಗವು ನಮಗೆ ತಿಳಿಯದಾಯಿತು. ಆದರೆ ಈಗ ಹತ್ತಿಪ್ಪತ್ತು ವರ್ಷಗಳಿಂದ ಪುನಃ ಜನರಲ್ಲಿ ಆಯುರ್ವೇದದ ಬಗ್ಗೆ ಜಾಗ್ರತೆಯುಂಟಾಗಿ ಅಲ್ಲಲ್ಲಿ ಆಯುರ್ವೇದ ಪ್ರಾಂತೀಯ ಪರಿಷತ್ತುಗಳೂ, ಅಖಿಲಭಾರತೀಯ ಆಯುರ್ವೇದ ಪರಿಷತ್ತುಗಳೂ ಔಷಧ, ವನಸ್ಪತಿಗಳ ಪ್ರದರ್ಶನಗಳೂ ಆಯುರ್ವೇದ ಶಾಲೆ ಕಾಲೇಜುಗಳೂ ಅಲೀಗಢ, ಕಾಶಿಯಂಥ ಆಯುರ್ವೇದ ಕೇಂದ್ರಗಳೂ ಉಂಟಾಗಿ ಆಯುರ್ವೇದಕ್ಕೆ ನವಚೇತನೆಯುಂಟಾಗಿದೆ. ಇದರ ಲಾಭವನ್ನು ನನ್ನ ವ್ಯವಸಾಯಬಂಧುಗಳಾದ

ಪ್ರಾಥಮಿಕ ಶಿಕ್ಷಕರು ಅತ್ಯವಶ್ಯವಾಗಿ ಮಾಡಿಕೊಳ್ಳಬೇಕೆಂದು ಹೃತ್ಪೂರ್ವ ವಾಗಿ ಬೇಡಿಕೊಂಡು ಈ ಲೇಖವನ್ನು ಮುಗಿಸುವೆನು. ಆಯುರ್ವೇದ ಜ್ಞಾ ವನ್ನು ಮಾಡಿಕೊಳ್ಳುವುದಕ್ಕೆ ಯಾವ ಯಾವ ಗ್ರಂಥಗಳನ್ನು ಓದಬೇಕು, ವೈ ನೆನಿಸಿಕೊಳ್ಳುವವನಿಗೆ ಅವಶ್ಯವಾಗಿ ಬೇಕಾಗುವ ರೋಗನಿದಾನ, ಔಷಧ ಸಿ ಕ್ರಮ, ಚಿಕಿತ್ಸಾಕ್ರಮ, ಪ್ರಸಿದ್ಧ ಔಷಧಗಳ ಜ್ಞಾನ ಮುಂತಾದುವನ್ನು ಹೇ ಸಂಪಾದಿಸಬೇಕು ಮುಂತಾದ ವಿಷಯಗಳನ್ನು ಕುರಿತು ಮುಂದಿನ ಲೇಖದ ಚರ್ಚಿಸುವ ವಿಚಾರವುಂಟು.

ಶಿಶು ಶಾಲೆಗಳು

(ಕಳೆದ ಸಂಚಿಕೆಯಿಂದ ಮುಂದೆಸಾಗಿದ್ದು)

ಶಿಶುಶಾಲೆಗಳಲ್ಲಿಯ ಬಾಲಕರಿಗೆ ಎಂದರೆ ೨ತ್ರಿ ಯಿಂದ ೫ ವರ್ಷಗಳ ವರೆಗಿ ವಯಸ್ಸಿನ ಬಾಲಕರಿಗೆ ಓದು ಬರೆಹ ಗಣಿತ ಈ ವಿಷಯುಗಳನ್ನು ಕಲಿಸುವ ಆವಶ್ಯ ಕತೆಯಿಲ್ಲ. ಆರುವರ್ಷಗಳು ತುಂಬುವದಕ್ಕಿಂತ ಮೊದಲು ಬಾಲಕರು ಒಂದು ಸ್ಥಳದಲ್ಲಿ ಕುಳಿತು ಓದಲು ಬಯುಸಲಾರರು. ಹಾಗೆ ಮಾಡಿಸಿದರೆ ಅದು ಅವರಿಗೆ ಅಪಾಯಕರವಾಗಬಹುದು. ಪ್ರತ್ಯಕ್ಷ ವಸ್ತುಗಳನ್ನು ನೋಡುವದು ಆ ಸಂಬಂ ಧದ ಮಾತುಕತೆಗಳ ಮೂಲಕ ತಮ್ಮ ಶಬ್ದಜ್ಞಾನವನ್ನು ಹೆಚ್ಚಿಸಿಕೊಳ್ಳುವದು ಇವಿಷ್ಟೇ ಆ ಬಾಲಕರ ಕೆಲಸವಾಗಿರಬೇಕು. ಅಕ್ಷರಗಳ ಗುರುತುಗಳಿಂದ ಓದಿ ದ್ದನ್ನು ತಿಳಿದುಕೊಳ್ಳುವದು ಬೇರೆ; ವಸ್ತುಗಳನ್ನೇ ನೋಡಿ ಆ ಸಂಬಂಧದ ಮಾತು ಕತೆಗಳಿಂದ ಅವನ್ನು ತಿಳಿದುಕೊಳ್ಳುವದು ಬೇರೆ. ಓದುಬರೆಹಗಳನ್ನು ಕಲಿಯುವ ದನ್ನು ತಡಮಾಡಿ ಪ್ರಾರಂಭಿಸಿದಷ್ಟು ಒಳ್ಳೆಯದು. ಇದರಿಂದ ಬಾಲಕರು ಈ ವಿಷಯುಗಳಿಗಾಗಿ ದಣಿದು ಬೇಸರಿಯುವ ಕಷ್ಟಕರವಾದ ಕಾಲವನ್ನು ಉಳಿಸಿ ದಂತಾಗುವದು. ಮತ್ತು ಈ ರೀತಿಯಾಗಿ ಉಳಿಸಿಕೊಂಡ ಶಕ್ತಿಯನ್ನು ಇದಕ್ಕೂ ಹೆಚ್ಚಿನ ಮಹತ್ವದ ಕಾರ್ಯಗಳಿಗಾಗಿ ಉಪಯೋಗಿಸಿಕೊಳ್ಳಲು ಬರುವದು. ಬಾಲಕರ ಮುಂದೆ ಕುಳಿತು ಒಂದು ಕಥೆಯನ್ನು ಇಲ್ಲವೆ ಒಂದು ಕವಿತೆಯನ್ನು ಓದಿ ತೋರಿಸಿದರೆ ಅವರು ಅವನ್ನು ಓದದೆಯೇ ಓದಿದಷ್ಟು ಜ್ಞಾನವನ್ನು ಸಂಪಾದಿ ಸಲು ಅನುಕೂಲವಾಗಬಹುದು.

ಬಾಲಕರು ಬಗೆಬಗೆಯ ಆಟಗಳ ಮೂಲಕವಾಗಿಯೇ ಬೇರೆ ಬೇರೆ ಮಾತುಗಳ ಅನುಭವಗಳನ್ನು ಪಡೆಯಬೇಕು; ಅದಕ್ಕಾಗಿ ಶಿಶುಶಾಲೆಗಳಲ್ಲಿ ಬಾಲಕರ ಆಟಕ್ಕೆ ಬೇಕಾಗುವ ಉಪಕರಣಗಳನ್ನೆಲ್ಲ ಸಂಗ್ರಹಿಸಿಟ್ಟು ನಾನಾತರಹದ ಆಟಗಳನ್ನು ಆಡ ಲಿಕ್ಕೆ ಅವರಿಗೆ ತುಂಬ ಅವಕಾಶವನ್ನು ಕಲ್ಪಿಸಿಕೊಡತಕ್ಕದ್ದು.

ಸಾಮಾನ್ಯವಾಗಿ ಒಳ್ಳೆಯ ನಡತೆಯನ್ನೂ ಒಳ್ಳೆಯ ಶೀಲ ಸ್ವಭಾವಗಳನ್ನೂ ಬಾಲಕರಲ್ಲಿ ಉಂಟುಮಾಡುವದೇ ಶಿಕ್ಷಣದ ಗುರಿಯೆಂಬ ಮಾತನ್ನು ಎಲ್ಲರೂ ಒಪ್ಪಿ ಕೊಳ್ಳುವರು. ಈ ಮಾತನ್ನು ಪ್ರಯೋಜನಕಾರಿಯಾಗಿಯೂ ವ್ಯವಹಾರೋಪ ಯೋಗಿಯಾಗಿಯೂ ಮಾಡಬೇಕಾದರೆ, ಪ್ರತಿಶಿಕ್ಷಕರೂ ಈ ಧ್ಯೇಯಸಾಧನೆಯನ್ನೇ ಗುರಿಯಾಗಿಟ್ಟುಕೊಂಡು ತಮ್ಮ ಒಂದೊಂದು ಕೆಲಸವನ್ನೂ ಇಂಥ ಯಾವ ದೊಂದು ವಿಶೇಷತರದ ದೃಷ್ಟಿಯಿಂದಲೇ ಮಾಡಬೇಕೆಂಬದನ್ನು ಮೊದಲೇ ಗೊತ್ತು ಮಾಡಿಕೊಂಡಿರಬೇಕು. ಬಾಲಕರನ್ನು ಸ್ವತಂತ್ರವಾಗಿ ಕೆಲಸಮಾಡಲಿಕ್ಕೆ ಬಿಟ್ಟು ಬಿಟ್ಟು ಅವರ ಕಾರ್ಯಕಲಾಪ (ಆಟಪಾಟಗಳು) ಗಳನ್ನು ನಿರೀಕ್ಷಿಸುತ್ತಿದ್ದರೆ ಅವರಿಗೆ ಎಲ್ಲಿ ಎಷ್ಟುಮಟ್ಟಿಗೆ ಸಹಾಯಮಾಡಬೇಕಾಗುವದೆಂಬದು ತಾನೇ ತಿಳಿದು ಬರುವದು. ಮಗುವಿಗೆ ತಾನು ಏನು ಮಾಡಬೇಕೆಂಬದಾಗಲಿ ಏನು ಮಾಡಬಾರ ದೆಂಬದಾಗಲಿ ತಾನಾಗಿಯೇ ಅನುಭವದಿಂದ ತಿಳಿದುಬರಬೇಕು. ಅದಕ್ಕೆ ಶಿಕ್ಷಕರ ಅಪ್ಪಣೆಯಾಗಲಿ ಉಪದೇಶವಾಗಲಿ ಬೇಕೇಬೇಕೆಂಬ ಹಾಗಿಲ್ಲ; ಬಗೆಬಗೆಯ ಪದಾರ್ಥಗಳಿಂದಲೂ ನಾನಾತರದ ಜನರಿಂದಲೂ ಕೂಡಿರುವ ಈ ಗೊಂದಲದ ಹೊಸ ಪ್ರಪಂಚದಲ್ಲಿ ತಾನು ಏನು ಮಾಡಬೇಕು ಹೇಗೆ ನಡೆಯಬೇಕು ಎಂಬದರ ಅನುಭವವು ಮಗುವಿಗೆ ತಾನಾಗಿಯೇ ಉಂಟಾಗಬೇಕು. ಮತ್ತು ಈ ಅನುಭವವು ಎಷ್ಟು ಪ್ರತ್ಯಕ್ಷವಾಗಿ ಸ್ವಪ್ರಯತ್ನದಿಂದ ದೊರಕಿಸಿದ್ದಿರುವದೋ ಅಷ್ಟು ಅದು ಸ್ಥಿರವಾಗಿ ಉಳಿದು, ಮುಂದಿನ ಜೀವನಕ್ರಮಕ್ಕಾಗಿ ತಯಾರಿಸಿಕೊಂಡ ಸ್ಥಿರವಾದ ಅಸ್ತಿವಾರವಾಗುವದು. ತಳಸೋಸಿ ಕಟ್ಟಿದ ಸ್ಥಿರವಾದ ನೆಲಗಟ್ಟಿನ ಮೇಲೆ ನಿಂತಿರುವ ಕಟ್ಟಡವು ಚಿರಕಾಲ ಬಾಳುವದು ಸಹಜವೇ ಸರಿ.

ಬಾಲಕರು ತಾವು ಮಾಡುತ್ತಿರುವ ಕಾರ್ಯಕಲಾಪಗಳ ಪರಿಣಾಮವೇನೆಂಬ ಅರಿವು ಇಲ್ಲದೆಯೇ ಅನೇಕ ಕೆಲಸಗಳನ್ನು ಮಾಡಲು ತುಂಬಾ ಉತ್ಸಾಹವನ್ನೂ ಆನಂದವನ್ನೂ ತೋರಿಸುತ್ತಿರುವರು. ಯಾವದೋ ಒಂದು ಅಜ್ಞಾತವಾದ ಪ್ರೇರಣೆಯು ಅವರನ್ನು ಆ ಕೆಲಸಗಳಲ್ಲಿ ತೊಡಗಿಸುವದು. ಹೀಗಿರುವದರಿಂದ

ತಾವು ಮಾಡುತ್ತಿರುವ ಕಾರ್ಯಕಲಾಪಗಳಿಂದ ತಮ್ಮ ಮುಂದಿನ ಜೀವನಕ್ಕೆ ಯಾವ ಬಗೆಯ ಅಸ್ತಿವಾರವನ್ನು ಹಾಕುತ್ತಿರುವೆಂಬ ಕಲ್ಪನೆಯು ಆಗ ಅವರಿಗೆ ಆಗುತ್ತಿರುವದಿಲ್ಲ. ಬಾಲಕರಿಗೆ ತಾವು ಈಗ ಏನುಮಾಡುತ್ತೇವೆಂಬ ವಿಚಾರವಷ್ಟೇ ಇರುತ್ತಿದ್ದು ಅವರು ಅಷ್ಟರಿಂದಲೇ ಸಮಾಧಾನಹೊಂದುವರು; ಅಲ್ಲದೆ ಮುಂದೆ ಇದರಿಂದ ಏನು ಪರಿಣಾಮವಾಗುವದೆಂಬದರ ಕಲ್ಪನೆಯು ಅವರಿಗೆ ಇರಲಾರದು. ಸದ್ಯಕ್ಕೆ ಆಗುತ್ತಿರುವ ಆನಂದಕ್ಕಾಗಿಯೇ ಅಲ್ಲದೆ ಬೇರೆ ಯಾವ ಧ್ಯೇಯಕ್ಕಾಗಿಯೂ ಅವರು ಕೆಲಸ ಮಾಡಲಾರರು. ಇಂತಹ ಸದ್ಯದ ಆನಂದವಿಲ್ಲದಿದ್ದ ಕೆಲಸಗಳಲ್ಲಿ ಅವರಿಗೆ ಉತ್ಸಾಹವು ಹುಟ್ಟದು; ಅವರ ಮನಸ್ಸು ಅದರಲ್ಲಿ ಏಕಾಗ್ರತೆಯಿಂದ ತೊಡಗುವ ಸಂಭವವೂ ಇಲ್ಲ. ಈ ವಯೋಮಾನದ ಎಲ್ಲ ಬಗೆಯ ಕಾರ್ಯಕಲಾಪಗಳಲ್ಲಿ ಬಾಲಕರು ಪ್ರತ್ಯಕ್ಷ ಸಂಗತಿಗಳನ್ನಷ್ಟೇ ಗ್ರಹಿಸಲು ಶಕ್ತರಾಗುವರಲ್ಲದೆ ತಮ್ಮ ಆಯುಷ್ಯದ ಮಿಕ್ಕ ಯಾವ ಕಾಲಾವಧಿಯ ವಿಷಯದಲ್ಲಿಯೂ ಅವರು ವಿಚಾರಮಾಡಲಾರರು; ಮತ್ತು ಅವರ ಜ್ಞಾನಸಂಪಾದನೆಯ ವಿಷಯದಲ್ಲಿಯೂ ಇದೇ ಮಾತು ಅನ್ವಯಿಸುವದು. ತಮ್ಮ ಮಾತೃಭಾಷೆ, ತನಗೂ ಮಿಕ್ಕವರಿಗೂ ಇರುವ ಸಂಬಂಧ, ತಮ್ಮ ಸುತ್ತಲಿನ ಹೊರಗಿನ ಪ್ರಪಂಚ, ತಮ್ಮ ಶರೀರ, ತಮ್ಮ ಶಕ್ತಿ, ಈ ವಿಷಯಗಳಿಗೆ ಸಂಬಂಧಿಸಿದ ಅನೇಕ ಸಂಗತಿಗಳ ಜ್ಞಾನವನ್ನು ಬಾಲಕರು ಈ ಕಾಲವಧಿಯಲ್ಲಿ, ಅದರ ಅರಿವೇ ಇಲ್ಲದೆ, ಬಹು ಸುಲಭವಾಗಿ, ಆಟನೋಟಗಳ ಆನಂದದಲ್ಲಿದ್ದುಕೊಂಡೇ, ದೊರಕಿಸಿಕೊಂಡುಬಿಡುವರು. ಬಾಲಕರು ತಾವು ಮಾಡುವ ಕೆಲಸಗಳಲ್ಲಿ ತಪ್ಪುಗಳನ್ನೂ ಮಾಡಬಹುದು; ಮಾಡಬಾರದ ಕೆಲಸಗಳನ್ನೂ ಮಾಡಬಹುದು. ಆದರೆ ಇದರಿಂದ ಅವರು ಅಪರಾಧಿಗಳೆಂದಾಗಲಿ ಶಿಕ್ಷೆಗೆ ಅರ್ಹರೆಂದಾಗಲಿ ಭಾವಿಸಲಾಗದು. ಮಗುವು ತನ್ನ ಗೆಳೆಯರನ್ನು ಇಲ್ಲವೆ ಬೇರೆಯವರನ್ನು ಒಮ್ಮೊಮ್ಮೆ ಒದೆಯಬಹುದು; ಇಲ್ಲವೆ ಕಡಿಯಬಹುದು; ಇಲ್ಲವೆ ಹಾಲಿನ ಪಾತ್ರೆಯನ್ನು ಉರುಳಿಸಿ ಬಿಡಬಹುದು. ಇಷ್ಟರಿಂದಲೇ ಅದು ತಪ್ಪುಮಾಡಿತೆಂದು ಭಾವಿಸಿ ಅದನ್ನು ಸಮಾಜದಿಂದ ಹೊರದೂಡಲು ಬರಲಾರದು. ಮಕ್ಕಳು ಆಟಕ್ಕಾಗಿ ಮಾಡಿಟ್ಟ ಕಟ್ಟಿಗೆಯ ಕುದುರೆಯ ಮೇಲೆ ಕುಳಿತು ಜೋಲಿಹೊಡೆಯುವಾಗ ಉರುಳಿಬಿದ್ದರೆ ಅದು ಅಪರಾಧವಲ್ಲ; ಅಜ್ಞಾನವೂ ಅಲ್ಲ. ಮುಂದೆ ನಿಜವಾದ ಕುದುರೆಯ ಮೇಲೆ ಕೂಡ್ರುವಾಗ ಅವಶ್ಯವಿದ್ದ ಜೋಲಿಹಿಡಿಯುವ ಶಕ್ತಿಯನ್ನು ತನ್ನ ಶರೀರದ ಸ್ನಾಯುಗಳಲ್ಲಿ ತಂದುಕೊಳ್ಳುವ ಆರಂಭದ ಪಾಠವನ್ನು ತಾನು ಈಗ ಕಲಿಯುತ್ತಿರುವೆನೆಂಬ ಭಾವನೆಯು

ಆ ಮಗುವಿಗೆ ಎಂದೂ ಇರುವ ಸಂಭವವಿಲ್ಲ. ಆದ್ದರಿಂದ ಈ ಮಾತು ಎಷ್ಟು ಮಹತ್ವದ್ದಲ್ಲವೆಂದು ತಿಳಿಯಬೇಕಾಗುವದು. ಬಾಲಕರು ಆಡುವ ಆಟಗಳೆಲ್ಲಾ ಮುಂದೆ ಅವರು ತಮ್ಮ ಆಯುಷ್ಯದಲ್ಲಿ ಮಾಡಬೇಕಾದ ಕಾರ್ಯಗಳ ಪೂರ್ವ ರಂಗದ ಆನಂದಕರವಾದ ಅಭಿನಯಗಳೆಂದು ಹೇಳಬಹುದು. ಮಗುವು ತಾನು ಪರರಿಂದ ದೊರಕಿಸಿದ ಜ್ಞಾನವನ್ನು ಎಂದರೆ ತಾನು ಕಂಡು ಕೇಳಿದ ಸಂಗತಿಯನ್ನು ಪುನರಾಚರಣೆಯಿಂದ ಇಲ್ಲವೆ ಪುನರುಚ್ಚಾರಣೆಯಿಂದ ಪ್ರಕಟಿಸಲಿಕ್ಕೆ ನಾವು ಅದನ್ನು ಬಲಾತ್ಕರಿಸಬಹುದು; ಆ ಮೂಲಕ ಅದು ತನ್ನ ಜ್ಞಾನವನ್ನು ಬೆಳಿಸಿಕೊಳ್ಳುವಂತೆ ಮಾಡಬಹುದು. ಅನೇಕವೇಳೆ ಅದಕ್ಕೆ ಆ ಮಾತಿನ ಆವಶ್ಯಕತೆ ಯಿರಲಿಕ್ಕಿಲ್ಲ. ಆದರೆ ಇಷ್ಟರಿಂದಲೇ ನಾವು ಆ ವಿಷಯದಲ್ಲಿ ಆ ಮಗುವಿಗೆ ಶಿಕ್ಷಣ ಕೊಡುತ್ತೇವೆಂದು ಭಾವಿಸುವದು ಸರಿಯಾಗಲಾರದು. ಬಾಲಕರು ಚಿಕ್ಕವರಿರುವ ರೆಂಬದೊಂದೇ ಕಾರಣದಿಂದ ಆಟಗಳನ್ನು ಆಡುತ್ತಿರುವದಿಲ್ಲ. ಅವರು ತಾರುಣ್ಯ ದಲ್ಲಿಯೂ ಅವೇ ಆಟಗಳನ್ನು ಆಡಬಹುದು. ಬಾಲಕರಿಗೆ ಬಾಲ್ಯದಲ್ಲಿಯೂ ಕಾಲು ಗಳಿರುವವು; ದೊಡ್ಡವರಾದಮೇಲೆಯೂ ಅವರಿಗೆ ಅವೇ ಕಾಲುಗಳಿರುವವು. ಆದರೆ ಅವರ ಬಾಲ್ಯದ ನಡಿಗೆಯ ಧ್ಯೇಯವೇ ಬೇರೆ; ಮುಂದಿನ ಆಯುಷ್ಯದಲ್ಲಿಯ ನಡಿಗೆಯ ಗುರಿಯೇ ಬೇರೆ. ಮೊದಮೊದಲು ಬಾಲಕರ ಆಟಗಳಿಗೆ ನಿಶ್ಚಿತವಾದ ಯಾವ ಗುರಿಯೂ ಇರಲಾರದು. ಅವುಗಳಲ್ಲಿ ಕ್ರಮವಾಗಲಿ ವ್ಯವಸ್ಥೆಯಾಗಲಿ ಇರಲಾರದು. ಅವುಗಳಲ್ಲಿ ಓಡುವದು, ಒದರಾಡುವದು, ಪದಾರ್ಥಗಳನ್ನು ಆಚೆ ಈಚೆ ಒಗೆದಾಡುವದು, ಜಗಳಾಡುವದು, ಅಳುವದು, ಇವೇ ಕಂಡುಬರುವವು. ಪರಸ್ಪರ ಸಹಕಾರಿತೆಯಿಂದ ಕೆಲಸಮಾಡುವ ಇಚ್ಛೆಯಾಗಲಿ, ಯಾವದಾದರೊಂದು ಕೆಲಸ ವನ್ನು ಲಕ್ಷ್ಯಗೊಟ್ಟು ಮಾಡುವ ಶಕ್ತಿಯಾಗಲಿ ಆ ಆಟಗಳಲ್ಲಿ ಕಂಡುಬರಲಾರದು. ಆದರೆ ಬರಬರುತ್ತ ಆ ಆಟಗಳು ಕೆಲವೊಂದು ಧ್ಯೇಯದಿಂದಲೇ ಹುಟ್ಟಿಬೆಳೆದು ಈ ಮಾತುಗಳಿಗೆ ಹೆಚ್ಚು ಮಹತ್ವವನ್ನುಂಟುಮಾಡಬೇಕಾಗುವದು. ಕ್ರಮವಾಗಿ ಮಕ್ಕಳು ಯಾವದೊಂದು ವಸ್ತುವಿನ ಇಲ್ಲವೆ ಸಂಗತಿಯು ಕಡೆಗೆ ಲಕ್ಷ್ಯಗೊಡಲು ಸಮರ್ಥರಾಗುವರು. ಮತ್ತು ಅವಕ್ಕೆ ಸಂಬಂಧಿಸಿದ ಆಟಗಳಲ್ಲಿ ತಮ್ಮ ಈ ಲಕ್ಷ್ಯ ಶಕ್ತಿಯನ್ನು ಉಪಯೋಗಿಸಿಕೊಳ್ಳತೊಡಗುವರು. ಬಾಲಕರು ತಮ್ಮ ಆಟದ ಕ್ರಮವನ್ನು ತಾವೇ ಗೊತ್ತುಮಾಡಿಕೊಳ್ಳಬೇಕು. ತಾವೇ ತಮ್ಮ ಆಟದ ವಿಷಯ ವನ್ನು ಆರಿಸಿಕೊಳ್ಳಬೇಕು. ಯಾಕೆಂದರೆ ಇಂತಹ ಅಂತಃಸ್ಫೂರ್ತಿಯಿಂದ ಹುಟ್ಟಿದ ಅಭಿರುಚಿಯ ಮೇಲಿಂದಲೇ ನಾವು ಆ ಮಕ್ಕಳಿಗೆ ಸಹಜವಾಗಿ ಯಾವ ಸಂಗತಿಗಳು

ಬೇಕೆಂಬದನ್ನಾಗಲಿ ಅವರಿಗೆ ಯಾವ ಮಾತುಗಳು ರುಚಿಸುವವೆಂಬದನ್ನಾಗಲಿ ಕಂಡುಕೊಳ್ಳಬಹುದು.

ಮನೆಯಮುಂದೆ ಚಿಕ್ಕದೊಂದು ತೋಟವಿರುವ ಒಂದು ಸಣ್ಣ ಮನೆಯಲ್ಲಿ ವಾಸಿಸುವ ಒಂದು ಕುಟುಂಬದಲ್ಲಿ ಐದು ಇಲ್ಲವೆ ಆರುವರ್ಷ ವಯಸ್ಸಿನ ಒಂದು ಮಗುವಿದೆಯೆಂದು ತಿಳಿಯೋಣ. ಅದು ತನ್ನ ಆ ಪರಿಸ್ಥಿತಿಯಲ್ಲಿ ಏನೇನು ಮಾಡಬಹುದೆಂಬದನ್ನು ಕ್ರಮವಾಗಿ ನೋಡೋಣ.

ಆ ಮಗುವಿನ ಮನೆಯಲ್ಲಿ ಮನೆತನಕ್ಕೆ ಬೇಕಾದ ಅನೇಕ ಒಡವೆಗಳಿರುವವು ಮತ್ತು ಅಲ್ಲಿ ಅನೇಕ ಕೆಲಸಗಳು ನಡೆಯುತ್ತಿರುವವು. ಆದರೂ ಆ ಮಗುವು ಅವನ್ನೆಲ್ಲ ಬಿಟ್ಟು ತನ್ನ ಆಟಿಗೆಯ ಒಡವೆಗಳನ್ನೂ ಚಿತ್ರದ ಪುಸ್ತಕಗಳನ್ನೂ ತನಗೆ ಬೇಕಾಗಿರುವ ಇನ್ನೂ ಅನೇಕ ಸಾಮಾನುಗಳನ್ನೂ ಸಂಗ್ರಹಿಸಿ ಇಟ್ಟುಕೊಂಡಿರುವದು. ಅದು ಸಾಲೆಗೆ ಹೋಗದೆ ಮನೆಯಲ್ಲಿಯೇ ಇರುತ್ತಿದ್ದರೆ ಆ ದಿನ ತಾನು ಏನೇನು ಮಾಡಬೇಕೆಂಬದನ್ನು ತಾನೇ ಗೊತ್ತುಮಾಡಿಕೊಳ್ಳುವದು. ಕೆಲವು ಹೊತ್ತು ಒಂಟಿಗನಾಗಿ ಇರಬಹುದು; ತುಸವೇಳೆ ಮಿಕ್ಕ ಬಾಲಕರೊಡನೆ ಕೂಡಿರಬಹುದು; ಸ್ವಲ್ಪವೇಳೆ ತಂದೆತಾಯಿಗಳೊಡನೆ ಇರಬಹುದು. ಅದು ಆಗ ಏನೇನು ಮಾಡಬಹುದು? ನೋಡೋಣ.

ಆ ಮಗುವು ತನ್ನ ಮನೆಯೊಳಗಿನ ತಾನು ಉಪಯೋಗಿಸುತ್ತಿರುವ ಒಡವೆಗಳ—ಅದರಲ್ಲಿಯೂ ಆಟದ ಒಡವೆಗಳ—ವಿಷಯದಲ್ಲಿ ಹೆಚ್ಚು ಪ್ರೀತಿಯನ್ನು ತೋರಿಸುವದು. ಅದು ಆ ಒಡವೆಗಳನ್ನು ತೆಗೆದುಕೊಂಡು ಆಡುವದು. ಕಲ್ಲುಮಣ್ಣುಗಳಿಂದ ಮನೆ ಕಟ್ಟುವದು. ಉಗಿಬಂಡಿ ಮೋಟಾರುಗಳನ್ನು ನಡಿಸುವದು. ಅದು ಚಿತ್ರಗಳನ್ನು ಜೋಡಿಸಿ ಆಡಬಹುದು; ತಂದೆಯ ತೋಟದ ಕೆಲಸಕ್ಕೆ ಇಲ್ಲವೆ ತಾಯಿಯ ಅಡುಗೆಯ ಕೆಲಸಕ್ಕೆ ಬೇಕಾಗುವ ಉಪಕರಣಗಳನ್ನು ಉಪಯೋಗಿಸಿ ಕೆಲಸಮಾಡಬಹುದು; ತೋಟದ ಕೆಲಸಗಳಲ್ಲಿ ಬೆಳೆಯುವ ಗಿಡಬಳ್ಳಿಗಳಲ್ಲಿಯೂ ಓಡಾಡುವ ಹುಳಹುಪ್ಪಡಿಗಳಲ್ಲಿಯೂ ಮನೆಯೊಳಗಿನ ನಾಯಿ ಬೆಕ್ಕು ಪೊಲ ಮುಂತಾದ ಪ್ರಾಣಿಗಳಲ್ಲಿಯೂ ಆಸ್ಥೆಯನ್ನು ತೋರಿಸಬಹುದು; ಗುದ್ದಲಿ ಸಲಿಕೆಗಳನ್ನು ತೆಗೆದುಕೊಂಡು ಅಗೆಯಬಹುದು; ಗಿಡಗಳಿಗೆ ನೀರು ಹನಿಸಬಹುದು; ಪ್ರಾಣಿಗಳಿಗೆ ಆಹಾರ ಕೊಡಬಹುದು; ಆದರೆ ಈ ಯಾವ ಕೆಲಸಗಳಲ್ಲಿಯೂ ಆ ಮಗುವು ಯಾವದೊಂದು ನಿರ್ಬಂಧಕ್ಕೊಳಗಾಗಿ ಇಲ್ಲವೆ ಯಾವ

ನೊಂದು ಜವಾಬದಾರಿಯನ್ನು ಹೊತ್ತು ಕೆಲಸಮಾಡಲಾರದು. ಈ ಎಲ್ಲ ಕೆಲಸಗಳಲ್ಲಿ ಅದರ ಮನಸ್ಸಿನ ಅಭಿರುಚಿಯು ಇಲ್ಲವೆ ಪ್ರೀತಿಯು ಕ್ಷಣಿಕವಾಗಿದ್ದು ಅದು ಇನ್ನೂ ಹುಟ್ಟಿ ಹುಟ್ಟದಂತಿರುವದು.

ಆ ಮಗುವಿಗೆ ತಾನು ಧ್ವನಿಮಾಡುವದರಲ್ಲಿಯೂ ಅನ್ಯರು ಮಾಡುತ್ತಿರುವ ಧ್ವನಿಯಲ್ಲಿಯೂ ಅಭಿರುಚಿಯಿರುವದು. ಅದಕ್ಕೆ ಗಾಯನದಲ್ಲಿ ಪ್ರೀತಿಯು ಹುಟ್ಟಿದೊಡನೆ ಅನ್ಯರು ಹಾಡುವ ಹಾಡುಗಳನ್ನು ಹೆಚ್ಚು ಕಾಲದ ವರೆಗೆ ಲಕ್ಷ್ಯಗೊಟ್ಟು ಕೇಳತೊಡಗುವದು. ಮತ್ತು ತಾನೂ ಅವರೊಡನೆ ಧ್ವನಿಗೂಡಿ ಹಾಡಬಹುದು. ಮೊತ್ತಮೊದಲು ಆ ಗಾಯನದೊಳಗಿನ ತಾಳತಾನಗಳ ಮಟ್ಟುಗಳಿಗೇ ಅದು ಹೆಚ್ಚು ಲಕ್ಷ್ಯಗೊಡುವದು. ಆದ್ದರಿಂದ ಕವಿತೆಯೊಳಗಿನ ತಿರುತಿರುಗಿ ಬರುವ ಸ್ವರಸಂಯೋಗದಿಂದ ಹುಟ್ಟುವ ಗಾಯನದ ತಾಳತಾನಗಳ ಕಡೆಗೂ ಶಬ್ದಗಳ ಉಚ್ಚಾರಣೆಯ ಕೋಮಲವಾದ ದನಿಯ ಕಡೆಗೂ ಮಗುವಿನ ಲಕ್ಷ್ಯವು ಮೊದಲು ಹೋಗುವದು. ಆ ಕವಿತೆಯ ಅರ್ಥಭಾವ — ಶಬ್ದಚಮತ್ಕೃತಿ ಮುಂತಾದ ಯಾವ ಮಾತುಗಳೂ ಅದರ ಲಕ್ಷ್ಯಕ್ಕೆ ಬರಲಾರದು.

ಮೂಡುವ ರವಿ ತಂಪಾಗಿಹನು ||
ಮೂಡುವ ರವಿ ಕೆಂಪಾಗಿಹನು || ೧ ||
ಮುಳುಗುವ ರವಿ ತಂಪಾಗುವನು ||
ಮುಳುಗುವ ರವಿ ಕೆಂಪಾಗುವನು || ೨ ||

ಎಂದು ಆ ಮಗುವಿನ ಮುಂದೆ ಹಾಡಿದರೆ ಅದು ಈ ಕವಿತೆಯೊಳಗಿನ ಪುನಃ ಪುನಃ ಬರುವ ಶಬ್ದಗಳ ಇಂಪು, ಸುಲಭವಾದ ತಾಳ ತಾನಗಳ ಸೊಂಪು ಇವನ್ನಷ್ಟೇ ಗ್ರಹಿಸಬಹುದಲ್ಲದೆ ಆ ಕವಿತೆಯ ಅರ್ಥಭಾವಗಳ ಕಡೆಗೆ ಅದು ಎಷ್ಟೂ ಲಕ್ಷ್ಯಗೊಡಲಾರದು.

[ಮುಂದೆ ಸಾಗುವದು]

ಶೋಕವಾರ್ತೆ

ಕೈ. ವಾ. ಹಳಕಟ್ಟಿ ಗುರುಬಸಪ್ಪನವರು

ಜನ್ಮ. ಕ್ರಿ. ಶ. ೧೮೫೪]　　　　[ನಿಧನ. ಕ್ರಿ. ಶ ೧೯೩೬

ಕನ್ನಡ ತಾಯಿಯ ಸತ್ಪುತ್ರರಾಗಿ ಜನಿಸಿ ಕನ್ನಡಿಗರಿಗೆ ಚಿರಪರಿಚಿತರಾಗಿ ಬೆಳೆದು ಕರ್ನಾಟಕಕ್ಕೆ ಅಲಂಕಾರಸ್ವರೂಪರಾಗಿ ಚಿರಕಾಲ ಬಾಳಿದ ಹಳಕಟ್ಟಿ ಗುರುಬಸಪ್ಪನವರು ೮೨ ವರ್ಷ ವಯಸ್ಸಿನವರಾಗಿ ಇದೇ ಆಗಸ್ಟ ತಿಂಗಳ ೨೭ನೆಯ ತಾರೀಖಿನ ದಿವಸ ಬೆಳಗಾವಿಯಲ್ಲಿ ಪರಂಧಾಮಕ್ಕೆ ತೆರಳಿದರೆಂದು ಬರೆಯಲು ಬಹು ವಿಷಾದವೆನಿಸುತ್ತದೆ. ಇವರು ಹುಟ್ಟುಗನ್ನಡಿಗರು. ಧಾರವಾಡ ಪುರವಾಸಿಗಳು. ವೀರಶೈವ ಪಂಗಡಕ್ಕೆ ಸೇರಿದವರು. ಇವರು ಚಿಕ್ಕಂದಿನಲ್ಲಿ ಚೆನ್ನಾಗಿ ವಿದ್ಯಾಭ್ಯಾಸಮಾಡಿ ಮುಂದೆ ಕನ್ನಡ ಟ್ರೇನಿಂಗ ಕಾಲೇಜಿನ ೨ನೆಯ ವರ್ಷದ ಸರ್ಟಫಿಕೇಟ ಪಡೆದು ಅಣ್ಣೀಗೇರಿ, ಧಾರವಾಡ ಟ್ರೇ. ಕಾ. ದ ಪ್ರಾಕ್ಟಿಸಿಂಗ ಸ್ಕೂಲು ಮುಂತಾದ ಶಾಲೆಗಳಲ್ಲಿ ಕೆಲಕಾಲ ಶಿಕ್ಷಕರಾಗಿ ಕೆಲಸಮಾಡಿದರು. ಈ ಮೊದಲೇ ಇಂಗ್ಲಿಷ ಅಭ್ಯಾಸಮಾಡಿ ಆ ಕಾಲದಲ್ಲಿ ಸರಕಾರಿ ನೌಕರಿಗೆ ಮಹತ್ವದ ಪರೀಕ್ಷೆಯೆನಿಸಿಕೊಳ್ಳುತ್ತಿದ್ದ ಪಬ್ಲಿಕ್ ಸರ್ವಿಸ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಮೆಟ್ರಿಕ್ಯುಲೇಶನ್ ಪರೀಕ್ಷೆಯ ವರೆಗೆ ಅಭ್ಯಾಸಮಾಡಿದರು. ಹೀಗೆ ಕನ್ನಡ ಇಂಗ್ಲಿಷ ಉಭಯ ಭಾಷೆಗಳ ಅಭ್ಯಾಸಮಾಡಿದುದರಿಂದ ಶಾಲಾಖಾತೆಯಲ್ಲಿ ತುಂಬ ಮಾನ್ಯತೆಯನ್ನು ಪಡೆದು ಕೆಲಸಮಾಡಿದರು. ಟ್ರೇ. ಕಾಲೇಜು ಹಾಗು ಡೆ. ಎ. ಇ. ರವರ ಕಚೇರಿ, ಇನಸ್ಪೆಕ್ಟರ ಸಾ॥ ರವರ ಕಚೇರಿ, ಇತ್ಯಾದಿ ಸ್ಥಳಗಳಲ್ಲಿ ಮೇಲ್ತರಗತಿಯ ಕಾರ್ಕೂನರಾಗಿ ಕೆಲಸಮಾಡಿದರು, ವಿದ್ಯಾಖಾತೆಯ ಮೇಲೆಯೇ ಇವರ ಅಭಿರುಚಿಯಿದ್ದುದರಿಂದ ರೆವ್ಹಿನ್ಯೂ ಖಾತೆಯಲ್ಲಿ ಆಗಿನ ವರಿಷ್ಠರಿಂದ ಕರೆಬಂದರೂ ಒಪ್ಪಿಕೊಳ್ಳಲಿಲ್ಲ. ದಿ. ಬ. ಶಾಂತವೀರಪ್ಪನವರೂ ಇವರೂ ಸಮಕಾಲೀನರು. ಇವರು ೩೭–೩೮ ವರ್ಷ ಸರಕಾರಿ ನೌಕರಿಯನ್ನು ಸಮಾಧಾನಕರವಾಗಿ ಮಾಡಿ ೧೯೧೨ ನೆಯ ಇಸವಿಯ ಸುಮಾರಕ್ಕೆ ವಿಶ್ರಾಂತಿವೇತನವನ್ನು ಹೊಂದಿದರು. ಸರಕಾರದ ನೌಕರಿಯಲ್ಲಿ ಸೇರಿದರೂ ಹಣಕಾಸುಗಳ ತೊಂದರೆ ಇಲ್ಲದೆ ಸುಖಜೀವಿಗಳಾದವರಿಗೆ ಸಾರ್ವಜನಿಕ ಹಿತದ ಕಾರ್ಯಗಳ ಕಡೆಗೆ ಲಕ್ಷ್ಯ ಹೋಗುವದು ತೀರ ಕಡಿಮೆ. ಆದರೆ ಶ್ರೀ. ಗುರುಬಸಪ್ಪನವರು ಈ ತರದ

ಸಾಮಾನ್ಯ ವರ್ಗಕ್ಕೆ ಸೇರಿದ ವ್ಯಕ್ತಿಯಾಗಿರಲಿಲ್ಲ. ಜನ್ಮದಾತೆಯಾದ ಕನ್ನಡ ಮಾತೆಯ ಸೇವೆಯು ತಮ್ಮ ಜನ್ಮಸಾರ್ಥಕತೆಯ ಕರ್ತವ್ಯವೆಂದು ತಿಳಿದು ದರಂತೆ ಆಮರಣ ಆಚರಿಸಿದರು. ತಮ್ಮ ಆಯುಷ್ಯದ ಕೊನೆಯಭಾಗದಲ್ಲಿ 'ದೇವರ ದಾಸಿಮಯ್ಯನ ಚರಿತ್ರೆ'ಯೆಂಬ ಗ್ರಂಥವನ್ನು ಮುಗಿಸುವ ಭರದಲ್ಲಿ ಮನಸ್ಸು ತೊಡಗಿರುವಾಗಲೆ ತಮ್ಮ ಪ್ರಪಂಚಯಾತ್ರೆಯನ್ನು ಮುಗಿಸಿದ ಪುಣ್ಯಾತ್ಮರಿವರು. ಮರಣದ ದಿವಸ ಕೂಡ ತಮ್ಮ ಮಹತ್ವದ ಕೃತ್ಯಗಳಲ್ಲಿ ಒಂದೆಂದು ಭಾವಿಸಿದ ಈ ಗ್ರಂಥದ ಬರೆಹವನ್ನು ಸಾಗಿಸಲು ಮರೆಯಲಿಲ್ಲವಂತೆ! ಇವರು ಕನ್ನಡ ವಾಙ್ಮಯಕ್ಕೆ ಮಾಡಿದ ಉಪಕಾರವು ಅಳತೆಮಾಡಿ ಹೇಳಲು ಸಾಧ್ಯವಿಲ್ಲ. ಇಂಗ್ಲಂಡದ ಇತಿಹಾಸ, ಏಕನಾಥ ಸಾಧುಗಳ ಚರಿತ್ರೆ, ಯುಕ್ಲಿಡನ ಆರು ಪುಸ್ತಕಗಳು, ಡ್ಯೂಕ್ ಆಫ್ ವೆಲಿಂಗ್ಟನ್, ಗ್ಲ್ಯಾಡಸ್ಟನ್, ಟಾಲಿಸ್‌ಮನ್, ನೆಪೋಲಿಯನ್ ಬೋನಾಪಾರ್ಟ, ಶಿಕಂದರ ಬಾದಶಹ ಈ ಮಹಾಪುರುಷರ ಚರಿತ್ರೆಗಳು, ಫ್ರಾನ್ಸದ ರಾಜ್ಯಕ್ರಾಂತಿ, ಇವೇ ಮೊದಲಾದ ಗ್ರಂಥಗಳನ್ನು ಬರೆದು ಪ್ರಕಟಿಸಿ ಕನ್ನಡಿಗರ ಮೇಲೆ ಮಹೋಪಕಾರ ಮಾಡಿದ ಈ ಮಹನೀಯರನ್ನು ಕನ್ನಡಿಗರು ಎಂದೂ ಮರೆಯಲಾರರು. ಅವರು ಗ್ರಂಥಗಳನ್ನು ಬರೆದು ಪ್ರಕಟಿಸಿದ ಕಾಲಪರಿಸ್ಥಿತಿಯನ್ನು ನಾವು ನೋಡಲು ಆಲೋಚಿಸಬೇಕು. ಆ ಕಾಲವು ಕನ್ನಡಕ್ಕೆ ಪ್ರಾಶಸ್ತ್ಯವಿಲ್ಲದ ಕಾಲವು. ಕನ್ನಡಿಗರಲ್ಲಿ ಹೊಸ ಚೈತನ್ಯವು ತಲೆದೋರದಿದ್ದ ಕಾಲವದು. ಅಂಥ ಕಾಲದಲ್ಲಿ ಕನ್ನಡ ಗ್ರಂಥಗಳನ್ನು ಮುದ್ರಿಸಿ ಪ್ರಕಟಿಸುವ ಮಾತು ಹಾಗಿರಲಿ, ಕನ್ನಡದಲ್ಲಿ ಬರೆಯುವದೇ ಸಾಹಸದಮಾತೆಂದು ತಿಳಿಯಲ್ಪಡುತ್ತಿತ್ತು. ಇದರಿಂದ ಅವರಲ್ಲಿ ಕನ್ನಡ ವಾಙ್ಮಯ ಪ್ರೇಮವೂ ಅದರ ಬೆಳೆವಣಿಗೆಯನ್ನು ಮಾಡಬೇಕೆಂಬ ಹಂಬಲವೂ ಎಷ್ಟು ಉತ್ಕಟವಾಗಿದ್ದವೆಂಬದು ವ್ಯಕ್ತವಾಗುವದು. ತಮ್ಮ ಮಾತೃಭಾಷೆಯು ಹಾಗು ತಾವು ಹುಟ್ಟಿದ ಕನ್ನಡ ನಾಡಿನ ಅಭಿಮಾನವು ಗುರುಬಸಪ್ಪನವರ ಹುಟ್ಟುಗುಣವಾಗಿದ್ದಂತೆಯೇ ತಮ್ಮ ಸಮಾಜದ ಪ್ರೀತಿಯೂ ಅವರ ಹೃದಯದೊಡನೆಯೇ ಮೈಗೊಂಡ ಭಾವನೆಯಾಗಿದ್ದಿತು. ವೀರಶೈವ ಮಹಾಸಭೆ, ಶಿವಯೋಗಮಂದಿರ ಎಂಬ ಎರಡು ಅತಿ ಮಹತ್ವದ ಸಂಸ್ಥೆಗಳ ಉತ್ಪತ್ತಿಗೆ ಇವರು ಮೂಲ ಕಾರಣರೆಂದು ಹೇಳಿದರೆ ಗುರುಬಸಪ್ಪನವರು ವೀರಶೈವ ಸಮಾಜಕ್ಕೆ ಮಾಡಿದ ಉಪಕಾರವು ಎಷ್ಟೆಂಬ ಕಲ್ಪನೆಯಾಗಬಹುದು.

ಇವರಿಗೆ ಮೂವರು ಗಂಡುಮಕ್ಕಳೂ, ಕೆಲಜನ ಹೆಣ್ಣುಮಕ್ಕಳೂ ಇರುವರು. ಅನೇಕ ಗ್ರಂಥಗಳನ್ನು ರಚಿಸಿ ವೀರಶೈವ ಸಮಾಜದಲ್ಲಿಯೂ ನವಕರ್ನಾಟಕ

ವರ್ತಮಾನ ಪತ್ರದ ಸಂಪಾದಕರಾಗಿ ಅಖಿಲ ಕರ್ನಾಟಕದಲ್ಲಿ ಸುಪ್ರಸಿದ್ಧರಾ ರಾವಸಾಹೇಬ ಪಿ. ಜಿ. ಹಳಕಟ್ಟಿ ಬಿ. ಎ., ಎಲ್‌ಎಲ್. ಬಿ. ಅವರು ಇವರ ಜ್ಯೇಷ ಪುತ್ರರು. ಇವರ ದ್ವಿತೀಯ ಪುತ್ರರಾದ ಬಿ. ಜಿ. ಹಳಕಟ್ಟಿ ಇವರು ದ. ಭಾಗ ಎ. ಇ. ಸಾ॥ ರವರ ಕಚೇರಿಯಲ್ಲಿ ಕಾರಕೂನರಾಗಿರುವರು. ಹಿಂದಕ್ಕೆ ೭, ೮ ವರ್ಷ ಇವರು ಕ. ಎ. ವ. ಸಂಘದ ಕಚೇರಿಯಲ್ಲಿ ಸನ್ಮಾನಿತ ಕಾರ್ಯದರ್ಶಿಗಳಾಗಿದ್ದರು ಅನೇಕ ಕನ್ನಡ ಲೇಖಗಳನ್ನು ವಾಗ್ಭೂಷಣ, ಕನ್ನಡ ಶಿಕ್ಷಕ ಮುಂತಾ ಪತ್ರಿಕೆಗಳಲ್ಲಿ ಆಗಾಗ ಪ್ರಸಿದ್ಧಿಸಿದ್ದಾರೆ. ಇನ್ನೊಬ್ಬರು ಬೆಳಗಾವಿಯ ಲೋಕಲ್ ಬೋರ್ಡಕಚೇರಿಯಲ್ಲಿ ಕಾರಕೂನರಾಗಿರುವರು.

ಈ ಮೇರೆಗೆ ತಾವು ಹುಟ್ಟಿದ ನಾಡಿಗೂ ಸಮಾಜಕ್ಕೂ ಅಲಂಕಾರಸ್ವರೂ ರೆನಿಸಿಕೊಂಡ ಕೈ. ವಾ. ಗುರುಬಸಪ್ಪನವರ ವಿಯೋಗದಿಂದ ಅವರ ಕುಟುಂ ಕ್ಕಾದ ದುಃಖದಲ್ಲಿ ಸಮಭಾಗಿಗಳಾದ ನಾವು ಅವರ ಆತ್ಮಕ್ಕೆ ಅಕ್ಷಯ ಶಾಂ ಯನ್ನು ದಯಪಾಲಿಸಲೆಂದು ಪರಮೇಶ್ವರನನ್ನು ಪ್ರಾರ್ಥಿಸುವೆವು.

೧೯೩೬ ನೆಯ ಇಸವಿಯ ಎಪ್ರಿಲ ತಿಂಗಳಲ್ಲಾದ ಗಂಡು ಮಕ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮ.

ವಿಜಾಪುರ ಸೆಂಟರ

ಕನ್ನಡ

ನಂ.	ಹೆಸರು	ಗು
೧.	ಬಸಲಿಂಗಪ್ಪ ಶಿವಲಿಂಗಪ್ಪ ಮುಂಚ್ಖಂಡಿ	೩೮
೨	ದೊಡ್ಡಪ್ಪ ನಾಗಪ್ಪ ಮಾದನಶೆಟ್ಟಿ	೩೭
೩	ಮಹಾದೇವಯ್ಯ ರಾಚಯ್ಯ ಗುರುಮಠ	೩೭
೪	ಯಮನಪ್ಪ ಬಸಪ್ಪ ಕೋಟರಗಸ್ತಿ	೩೭
೫	ಚನ್ನಬಸವಯ್ಯ ರುದ್ರಪ್ಪ ಹಳ್ಳಿ	೩೬
೬	ಬಾಳಪ್ಪ ಚಂದ್ರಾಮಪ್ಪ ಪೂಜಾರ	೩೬
೭	ವಸಂತಮಾಧವ ಶಂಕರ ಕುಲಕರ್ಣಿ	೩೬
೮	ವಿರುಪಾಕ್ಷಿ ಮಹಾಂತಗೌಡ ಪಾಟೀಲ	೩೫
೯	ಈರಯ್ಯ ಚನಮಲ್ಲಯ್ಯ ಮಠ	೩೫

೧೦	ಮಲಿಕಾರ್ಜುನ ಬಸಲಿಂಗಪ್ಪ ಭುರ್ಕುಳಿ	೩೪೯
೧೧	ತಮ್ಮಣ್ಣಪ್ಪ ಪದಮಣ್ಣಪ್ಪ ಟಾಂಗಾ	೩೪೮
೧೧	ರಾಮಸಿಂಗ ವಿಠ್ಠಲಸಿಂಗ ಗುಂಡಾಬವಾಡಿ	೩೪೮
೧೧	ರಾಮಣ್ಣಾ ಟೋಪಣ್ಣಾ ಕಾಖಂಡಿಕಿ	೩೪೮
೧೪	ರಾಜೇಸಾ ಅಮೀನಸಾ ಕೊರಬು	೩೪೭
೧೫	ಮೂಕಪ್ಪ ಸಂಗಪ್ಪ ವೀರಾಪುರ	೩೪೧
೧೬	ಕೃಷ್ಣಾಜಿ ವಾಮನ ಕುಲಕರ್ಣಿ	೩೩೯
೧೭	ಬಸಪ್ಪ ವೀರಬಸಪ್ಪ ಕದಂಪುರ	೩೩೫
೧೭	ಬಸವಂತ ಶಿವಪ್ಪ ಬಾಳುಗಿರ್	೩೩೫
೧೯	ಲೋಕಯ್ಯ ಬಸವಯ್ಯ ಚೌಕಿಮಠ	೩೩೩
೨೦	ದತ್ತಾಜಿ ರಂಗೋ ಕುಲಕರ್ಣಿ	೩೩೧
೨೧	ಗಿರಿಯನಗೌಡ ಯಂಕನಗೌಡ ಪಾಟೀಲ.	೩೨೯
೨೨	ತಮ್ಮಣ್ಣಾ ಸಾಬಂಣ ಜೇವಾಪುರ	೩೨೮
೨೩	ಸಂಗಪ್ಪ ಶಿವಪ್ಪ ಕಲ್ಲೂರ	೩೨೭
೨೩	ಶಿವರುದ್ರಪ್ಪ ಸಿದಮಲ್ಲಪ್ಪ ಒಂಟಮುರಿ	೩೨೭
೨೫	ಭೀಮನಗೌಡ ರಂಗನಗೌಡ ಪಾಟೀಲ	೩೨೬
೨೬	ಲಕ್ಷ್ಮಣ ಕಾಶೀರಾಮ ಹಂಬರ	೩೨೩
೨೬	ಮಹಬುಸಾ ರಾಜೇಸಾ ಪಿಂಜಾರ	೩೨೩
೨೬	ಶಂಭು ನಾಗೇಶ ರುದಿಗಿ	೩೨೩
೨೯	ಗುರುಬಸಪ್ಪ ಹೊಳಿಬಸಪ್ಪ ಅಂಗಡಿ	೩೨೨
೩೦	ಮಲ್ಲಯ್ಯ ಸಿದ್ಧಲಿಂಗಯ್ಯ ಮಠ	೩೧೯
೩೦	ಸಿದ್ಧನಗೌಡ ದಾದನಗೌಡ ಪಾಟೀಲ	೩೧೯
೩೨	ಬಸಲಿಂಗಪ್ಪ ಪರಪ್ಪ ಕೊಟ್ರಣ್ಣವರ	೩೧೮
೩೨	ವೆಂಕಟೇಶ ಕೃಷ್ಣ ಕುಲಕರ್ಣಿ	೩೧೮
೩೪	ರಾಜೇಸಾಬ ಯಮನಸಾಬ ಜಾಲಿಹಾಳ	೩೧೭
೩೪	ಶಿವಸಂಗಪ್ಪ ದೊಡ್ಡಬಸಪ್ಪ ಜಿಗಳೂರ	೩೧೭
೩೬	ರಂಗನಗೌಡ ಭರಮನಗೌಡ ಪಾಟೀಲ	೩೧೫

(ಮುಂದೆ ಸಾಗುವದು)

ಪ್ರಕಟನೆಗಳು

ಕನ್ನಡ ಬುಕ್ ಕಮಿಟಿ ಧಾರವಾಡ ಇವರು ಮಂಜೂರ ಮಾಡಿದ ಪುಸ್ತಕಗಳ ಯಾದಿಯು

ಪ್ರಾಥಮಿಕ ಶಾಲೆ = ಪ್ರಾ. ಶಾ. ವಿದ್ಯಾರ್ಥಿ = ವಿ. ಲಾಯಬ್ರರಿ = L

ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ	ಮಂಜೂರಿ ಸಂ.
೧	ಬಾಲಗೀತೆ ೧೯೩೫	ವಿ. ಪಿ. ಜಿ. ಕುಲಕರ್ಣಿ ಕ. ಸ್ಕೂ. ಮಾ. ಬೆಳಗಾವ	ಡಿ. ಜಿ. ಜೋಶಿ ರಾಮಲಿಂಗ ಖಿಂಡಿ ಬೆಳಗಾವ	೦-೧-೦	ಪ್ರಾ. ಶಾ. ಗಳ ವಿ. L ಬುಕ್ಕಾಗಿ	ಮೆ. ಇ. ಸಾ. ರ 47/P. 3186 / 6/7/36
೨	ಐತಿಹಾಸಿಕ ಕಥಾವಳಿ ೧೯೩೫	ದಿ. ಮ್ಯಾನೇಜರ ಬಾ. ವಿ ಬುಕ್‌ಡಿಪೋ ಮಂಗಳೂರ ಬ್ರಾಂಚ ಹುಬ್ಬಳ್ಳಿ	ಗ್ರಂಥಕರ್ತರು	೦-೬-೦	ಸದರ	ಸದರ 3188 / ಸದರ
೩	ಗುಬ್ಬಿ ಪಾಯಸ ೧೯೩೫	ಸದರ	ಸದರ	೦-೦-೬	ಸದರ	ಸದರ 3190 / ಸದರ
೪	ಮರಿಯಾನೆ ೧೯೩೬	ಪ್ರೊ. ಪಿ. ಟಿ. ಆಯ್ ಬುಕ್‌ಡಿಪೋ ಬೆಂಗಳೂರ	ಗ್ರಂಥಕರ್ತರು	೦-೧-೨	ಸದರ	ಸದರ 3192 / ಸದರ
೫	ಗುಲ್ವಾರಿ ಕಥೆಗಳು ೧೯೩೫	ಸದರ	ಸದರ	೦-೩-೦	ಸದರ	ಸದರ 3194 / ಸದರ

೬	ಗುಜ್ಜರಿ ಗಂಗು ಗ್ರಹಿಕ	ಪ್ರೊ. ಪಿ. ಟಿ. ಆಯ್ ಬುಕ್‌ಡಿಪೋ ಬೆಂಗಳೂರ	ಗ್ರಂಥಕರ್ತರು	೦—೧—೦	ಪ್ರಾ. ಶಾ. ವಿ॥ ಗಳ L ಬುಕ್ಕಾಗಿ	ಮೆ. ಇ. ಸಾ. ನಂ 3196 / 6/7/36
೭	ಗುಂಡು ಜಿಲೇಬಿ ಗ್ರಹಿಕ	ಸದರ	ಸದರ	೦—೧—೦	ಸದರ	3198 / ಸದರ
೮	ಭೂಮಿ ಬಿದ್ದು ಹೋಯಿತೇ ಗ್ರಹಿಕ	ಸದರ	ಸದರ	೦—೪—೦	ಸದರ	3200 / ಸದರ
೯	ಪಾಪೋಸಿನ ಫಜೀತಿ ಗ್ರಹಿಕ	ಮ್ಯಾನೇಜರ ಬಾ. ವಿ. ಬುಕ್‌ಡಿಪೋ ಮಂಗಳೂರ ಬ್ರ್ಯಾಂಚು ಹುಬ್ಬಳ್ಳಿ	ಗ್ರಂಥಕರ್ತರು	೦—೦—೬	ಸದರ	3202 / ಸದರ
೧೦	ಗಡ್ಡದ ಅಜ್ಜಯ್ಯ	ಸದರ	ಸದರ	೦—೧—೬	ಸದರ	3204 / ಸದರ
೧೧	ದ್ರೌಪದಿ ಚರಿತ್ರೆ ಗ್ರಹಿಕ	ವಿ. ಶಿವಲಿಂಗಪ್ಪ ಗೌಡರ ಧಾರವಾಡ	ಗ್ರಂಥಕರ್ತರು	೦—೧—೬	ಸದರ	ಮೆ. ಇ. ಸಾ. ನಂ 47/P. 3206 / 6/7/36

ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ	ಮಂಜೂರ ನಂ.
೧೨	ದುರ್ಯೋಧನ ಚರಿತ್ರೆ ೧೯೩೫	ಎಂ. ಶಿವಲಿಂಗಪ್ಪ ಗೌಡರ ಧಾರವಾಡ	ಗ್ರಂಥಕರ್ತರು	೦-೧-೬	ಪ್ರಾ. ಶಾ. ವಿ॥ ಗಳ L ಬುಕ್ಕಾಗಿ	ಮೆ. ಇ. ಸಾ. ಸಂ 47/P. 3208 / 6/7/36
೧೩	ವಿದುರ ಚರಿತ್ರೆ ೧೯೩೫	ಸದರ	ಸದರ	೦-೧-೬	ಸದರ	ಸದರ 3210 / ಸದರ
೧೪	ಶ್ರೀಕೃಷ್ಣ ಚರಿತ್ರೆ ೧೯೩೬	ಸದರ	ಸದರ	೦-೧-೬	ಸದರ	ಸದರ 3212 / 6/7/36

ತಾ. ೬-೮-೧೯೩೬

ಸೈಯದ ನೂರುಲ್ಲಾ
ಎ. ಇ. ದ. ಭಾಗ

ಪತ್ರಗಳ ಸಾರಾಂಶ

ಶಾಳಾ ಸದಲಗಾ, ತಾಲೂಕ ಚಿಕ್ಕೋಡಿ, ಜಿಲ್ಹಾ ಬೆಳಗಾಂವ, ಇಲ್ಲಿಯ ಕನ್ನಡ ಗಂ। ಮು। ಶಾಲೆಯ ಹೆಡ್‌ಮಾಸ್ತರರು ತಿಳಿಸುವದೇನಂದರೆ—"ಈ ಶಾಲೆಯ ಬಡ ವಿದ್ಯಾರ್ಥಿಗಳ ಪಾಲಕರಿಗೆ (ವಿಶೇಷವಾಗಿ ಅಸ್ಪೃಶ್ಯರಿಗೆ) ಅನುಕೂಲಮಾಡಿ ಕೊಡುವದಕ್ಕಾಗಿ, ಇಲ್ಲಿದ್ದ ಪೂರ್ವಭಾಗ ಸೊಸೈಟಿಯವರು ೩೦ ರೂ. ಪಶ್ಚಿಮಭಾಗ ಸೊಸೈಟಿಯವರು ೨೦–೧೧–೦ ಒಟ್ಟಿಗೆ ೫೦–೧೧–೦ ಖರ್ಚುಮಾಡಿ ಪುಸ್ತಕ ಪಾಟಿಗಳನ್ನು ವಿದ್ಯಾರ್ಥಿಗಳಿಗೆ ಕೊಟ್ಟರು. ಈ ಸ್ತುತ್ಯ ಕಾರ್ಯದಲ್ಲಿ ಸೊಸೈಟಿ ಚೇರಮನ್ನರಾದ ಶ್ರೀ. ಆದಪ್ಪ ಬದ್ನಿಕಾಯಿ, ಸೆಕ್ರೆಟರಿ ಶ್ರೀ. ಸಾನೋಬಾ ಕಮಲಾಕರ, ಪ್ರಮುಖರೂ ಪೋಲೀಸ ಪಾಟೀಲರೂ ಆದ ಶ್ರೀ. ಬಾಳಾಸಾಹೇಬ ಪಾಟೀಲ ಇವರು ಮಾಡಿದ ಸಹಾಯವು ಅತಿಶಯವಾಗಿದೆ.

ಊರ ಜನರಿಗೆ ವಿದ್ಯೆಯ ವಿಷಯದಲ್ಲಿ ಸದಭಿಪ್ರಾಯವನ್ನುಂಟು ಮಾಡುವ ಉದ್ದೇಶದಿಂದ ೨೩–೭–೧೯೩೬ ನೆಯ ಇಸ್ವಿ ದಿವಸ 'ಲಕ್ಷ್ಮಿ ಹಾಗು ಸರಸ್ವತಿ ಇವರಲ್ಲಿ ಯಾರು ಶ್ರೇಷ್ಠರು' ಎಂಬ ವಿಷಯದ ಬಗ್ಗೆ ಸರಸ್ವತಿ ಪೂಜಾದ ನಿಮಿತ್ತದಿಂದ ವಿದ್ಯಾರ್ಥಿಗಳ ಕಡೆಯಿಂದ ನಾಟಕಮಾಡಿಸಿ ತೋರಿಸಿದೆವು. ಆಗ ಶ್ರೀ. ಗಂಗಾಧರ ಮಲ್ಲಪ್ಪ ಹಾಲಪ್ಪನವರ, ಎಂಬವರು ೧೦ ರೂ. ಬೆಲೆ ಬಾಳುವ ಪದಕಗಳನ್ನು ತಯಾರಿಸಿ ವಿದ್ಯಾರ್ಥಿಗಳಿಗೆ ಕೊಡುವೆವೆಂದು ವಾಗ್ದಾನ ಮಾಡಿದ್ದಾರೆ. ಇದು ಸ್ತುತ್ಯವು. ಈ ನಾಟಕದಿಂದ ಊರವರಿಗೆ ಉತ್ತೇಜನ ದೊರೆತು ಶಾಲೆಯ ವಿದ್ಯಾರ್ಥಿಗಳು ನಿಯಮದಿಂದ ಶಾಲೆಗೆ ಬರುವದಕ್ಕೂ ಹಾಜರಿ ಸಂಖ್ಯೆಯು ಹೆಚ್ಚುವದಕ್ಕೂ ಸಹಾಯವಾಯಿತು."

Reg. No. B. 369

ವಾಗ್ವಿಲಾಸ ಬುಕ್‌ಡೀಪೋ ಹುಬ್ಬಳ್ಳಿ ಇವರಲ್ಲಿ ದೊರೆಯತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕಮಿಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ಬೆಲೆ ರು. ಆ. ಪೈ
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦– ೮–೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳೆಪೇಟಕೃತ)	೦– ೮–೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦– ೪–೦
ಹಿಂದುಸ್ಥಾನದ ಇತಿಹಾಸ (ಬಸವನಾಳಕೃತ)	೧– ೮–೦
ಲಘುವ್ಯಾಕರಣ (ವೈ. ಕಟ್ಟೀಕೃತ)	೦– ೨–೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦– ೩–೦
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦–೧೨–೦
ಚಿತ್ರಮಯ ಕೋಷ್ಟಕ (ಉಗ್ರಕೃತ) ೩ನೇ ಇ. ಗೆ	೦– ೨–೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦– ೪–೦
,, ,, ೩ನೇ ,,	೦– ೫–೦
,, ,, ೪ನೇ ,,	೦– ೮–೦
ಅಂಕಗಣಿತ (ಗಾಂವಕರಕೃತ) ೩ನೇ ,,	೦– ೫–೦
ಧಾರವಾಡ ಜಿಲ್ಹಾ ವರ್ಣನೆ (ಅಣ್ಣೀಗೇರಿ ಕೃತ) ೩ನೇ ಇ. ಗೆ	೦– ೪–೬
ವಿಜಾಪೂರ ,, ,, (,,) ೩ನೇ ,,	೦– ೪–೬
ಧಾರವಾಡ ಜಿಲ್ಹಾ ,, (ಕುರಡೀಕೃತ)	೦– ೫–೦
ಹಿಂದುಸ್ಥಾನ ಭೂಗೋಲು (ಮುಗದಾಲಕೃತ)	೦– ೮–೦
ನುಡಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦–೧೦–೦
ಭೂಗೋಲವಿದ್ಯೆ ೩ನೇ ಭಾಗ (ವೈ. ಕಟ್ಟೀಕೃತ)	೦– ೫–೦
,, ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦–೧೩–೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦– ೨–೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦–೧೦–೦
ಭೂಮಿತಿ (ಚಂದಾವರಕರ ಕೃತ)	೦– ೭–೦
ಸರಸ್ವತೀ ವಿಜಯ (ಬೂದೀಹಾಳಕೃತ)	೦– ೪–೦

ಪತ್ತೆ:—ಪಿ. ಆರ್. ಶಿವನಾಗಪ್ಪ,
ಬುಕ್‌ಸೇಲರ ಹುಬ್ಬಳ್ಳಿ.

ಸೆಪ್ಟೆಂಬರ-೧೯೩೬

Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರೇಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ನಂ.	ವಿಷಯ.	ಪುಟ.
೧.	೩೫ನೆಯ ಕರ್ನಾಟಕ ಸ್ಕೌಟ ಟ್ರೇನಿಂಗ ಕ್ಯಾಂಪ	೧
೨.	ಒಬ್ಬನೇ ಶಿಕ್ಷಕನಿರುವ ಶಾಲೆ	೫
೩.	ಪ್ರಾಥಮಿಕ ಶಿಕ್ಷಕರೂ ಆಯುರ್ವೇದವೂ	೯
೪.	ಶಿಶುಶಾಲೆಗಳು	೧೭
೫.	೧೯೩೬ನೆಯ ಇಸ್ವಿಯ ಗಂಡುಮಕ್ಕಳ ಪ್ರ. ಶಾ. ಪರೀಕ್ಷೆಯ ಪರಿಣಾಮ	೨೨
೬.	ಪ್ರಕಟನೆಗಳು	೨೬

Printed by K. R. Bhise at the Karnatak Printing Works, Dharwar
and Published by D. V. Kale, B. A., Head Master.
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕಮಿಶನ್ ಪರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ಬೆಲೆ ರೂ. ಆ. ಪೈ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦-೮-೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳಿಪೇಟಕೃತ)	೦-೬-
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦-೪-
ಹಿಂದುಸ್ಥಾನದ ಇತಿಹಾಸ (ಬಸಪನಾಳಕೃತ)	೦-೮-
ಲಘುವ್ಯಾಕರಣ (ವೈ. ಕಟ್ಟೀಕೃತ)	೦-೬-
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦-೩-
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦-೧೨-
ಚಿತ್ರಮಯ ಕೋಷ್ಟಕ (ಉಗ್ರಕೃತ) ೬ನೇ ಇ. ಗೆ	೦-೨-
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦-೪-
,, ,, ೩ನೇ ,,	೦-೫-
,, , ೪ನೇ ,,	೦-೮-
ಅಂಕಗಣಿತ (ಗಾಂವಕರಕೃತ) ೩ನೇ ,,	೦-೫-
ಧಾರವಾಡ ಜಿಲ್ಹಾ ವರ್ಣನೆ (ಅಣ್ಣೀಗೇರಿ ಕೃತ) ೩ನೇ ಇ. ಗೆ	೦-೪-೬
ವಿಜಾಪೂರ ,, ,, (,,) ೩ನೇ ,,	೦-೪-೬
ಧಾರವಾಡ ಜಿಲ್ಹಾ ,, (ಕುರಡೀಕೃತ)	೦-೫-೦
ಹಿಂದುಸ್ಥಾನ ಭೂಗೋಲು (ಮುಗದಾಲಕೃತ)	೦-೮-೦
ನುಡಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦-೧೦-೦
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	೦-೭-೦
ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦-೧೨-೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦-೨-೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦-೧೦-೦
ಭೂಮಿತಿ (ಚಂದಾವರಕರ ಕೃತ)	೦-೬-೦
ಸರಸ್ವತೀ ವಿಜಯ (ಬೂದೀಹಾಳಕೃತ)	೦-೪-೦

ಪತ್ತೆ:— ವಿ. ಆರ್. ಶಿವನಾಗಪ್ಪ,
ಬುಕ್‌ಸೇಲರ ಹುಬ್ಬಳ್ಳಿ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರೇಯ ವಿಶ್ವನಾಥರಾವ ಕಾಳೆ, ಬಿ. ಎ.

ಸಂಪುಟ ೭೫	ಅಕ್ಟೋಬರ ೧೯೩೬	ವರ್ಷ ೮ ಸಂ. ೭

೩೫ನೆಯ ಕರ್ನಾಟಕ ಸ್ಕೌಟ ಟ್ರೇನಿಂಗ ಕ್ಯಾಂಪು

ಧಾರವಾಡ ಟ್ರೇನಿಂಗ್ ಸ್ಕೂಲಿನಲ್ಲಿ ತಾ॥ ೪-೯-೧೯೩೬ ರಿಂದ ತಾ॥ ೧೨-೯-೧೯೩೬ರ ವರೆಗೆ ಪ್ರತಿವರ್ಷದಂತೆ ಸ್ಕೌಟ ಟ್ರೇನಿಂಗ್ ಕ್ಯಾಂಪು ಪ್ರೊವಿನ್ಶಿಅಲ್ ಸೆಕ್ರೆಟರಿಗಳಾದ ಶ್ರೀ. ಬಿ. ಟಿ. ಚಾರ ಇವರ ಆಡಳಿತೆಯ ಕೆಳಗೆ ನೆರವೇರಿಸಲ್ಪಟ್ಟಿತು. ಟ್ರೇನಿಂಗ್ ಸ್ಕೂಲಿನ ಎಲ್ಲ ವಿದ್ಯಾರ್ಥಿಗಳೂ ಹೊರಗಿನಿಂದ (ಹುಬ್ಬಳ್ಳಿ ಮುಂತಾದ ಕಡೆಗಳಿಂದ) ಬಂದ ಶಿಕ್ಷಕರೂ ಕೂಡಿ ಒಟ್ಟಿಗೆ ೧೨೧ ಜನರು ಈ ಕ್ಯಾಂಪಿನಲ್ಲಿ ಶಿಕ್ಷಣ ಹೊಂದಿದರು. ತಾರೀಖು ೧೨-೯-೧೯೩೬ನೆಯ ದಿನ ಧಾರವಾಡದ ಕಲೆಕ್ಟರರಾಗಿರುವ ಮೆ. ಡಿಲನ್ ಸಾಹೇಬರ ಅಧ್ಯಕ್ಷತೆಯ ಕೆಳಗೆ ನೆರೆದ ಸಭೆಯಲ್ಲಿ ಇವರೆಲ್ಲರಿಗೆ ಸ್ಕೌಟ ದೀಕ್ಷೆಯು ಕೊಡಲ್ಪಟ್ಟಿತು. ಇವರಲ್ಲಿ ಹಿಂದೆ ಟ್ರೇನಿಂಗ್ ಹೊಂದಿದ್ದವರು ತಮ್ಮ ಕರ್ತವ್ಯಜಾಗ್ರತೆಯನ್ನು ವ್ಯಕ್ತಪಡಿಸುವ ಉದ್ದೇಶದಿಂದ ಸ್ಕೌಟ ಪ್ರತಿಜ್ಞೆಯ ಪುನರುಚ್ಚಾರಣೆ ಮಾಡಿದರು. ಹಾಗು ಟ್ರೇನಿಂಗ್ ಸ್ಕೂಲಿನ ಹೆಡ್‌ಮಾಸ್ತರರಾದ ಶ್ರೀ. ಡಿ. ವ್ಹಿ. ಕಾಳೆಯವರು ಇದೇ ಸಮಯಕ್ಕೆ ಸ್ಕೌಟದೀಕ್ಷೆಯನ್ನು ಕೈಕೊಂಡು ಸ್ಕೌಟ ಚಳವಳಿಯ ಮಹತ್ವವನ್ನೂ, ವಿಷಯದಲ್ಲಿ ತಮಗಿರುವ ಪ್ರೀತಿಯನ್ನೂ ಉತ್ಸಾಹವನ್ನೂ ವ್ಯಕ್ತಗೊಳಿಸಿದರು.

ಆಮೇಲೆ ಶ್ರೀ. ಚಾರರವರು ಸ್ಕೌಟ ಚಳವಳಿಗೆ ಸಂಬಂಧಿಸಿದ ನಾಲ್ಕು ಉಪದೇಶಪರ
ವಾಕ್ಯಗಳನ್ನು ತುಂಬ ಉತ್ಸಾಹಜನಕವಾದ ಧ್ವನಿಯಿಂದ ಕೇಳುವವರ ಮನ
ಸ್ಸನ್ನಾಕರ್ಷಿಸುವ ಶೈಲಿಯಲ್ಲಿ ಮಾತಾಡಿದರು. ಧಾರವಾಡ ಜಿಲ್ಹೆಯ ಸ್ಕೌಟ
ಅಸೋಶಿಏಶನ್ನದ ಅಧ್ಯಕ್ಷರಾಗಿರುವ ಶ್ರೀ. ರಾಮಸ್ವಾಮಿಯವರು ಇದೇ ವಿಷಯ
ವನ್ನು ಮುಂದೆ ಸಾಗಿಸಿ ಧಾರವಾಡ ಜಿಲ್ಹೆಯಲ್ಲಿಯ ಸ್ಕೌಟ ಚಳವಳಿಯ ಹಿಂದಿನ
ಇತಿಹಾಸ, ಇಂದಿನ ಕಾರ್ಯಕಲಾಪ ಇವುಗಳನ್ನು ವರ್ಣಿಸಿ ಮಾತಾಡಿದ್ದಲ್ಲದೆ
ಧಾರವಾಡದಲ್ಲಿ ಹೆಡ್‌ಕ್ವಾರ್ಟರ (ಕೇಂದ್ರಸ್ಥಾನ) ದ ಕಾರ್ಯಗಳನ್ನು ನೆರವೇರಿ
ಸುವ ಕಚೇರಿಗಾಗಿ ಒಂದು ಸ್ಕೌಟ ಗುಡಿಸಲವನ್ನು ಕಟ್ಟಿಸುವ ವಿಚಾರವು ನಡೆ
ದಿದೆಯೆಂದೂ ಅದಕ್ಕಾಗಿ ಧಾರವಾಡ ಜಿಲ್ಹೆಯ ಪ್ರಮುಖರೂ ಹಿತೈಷಿಗಳೂ ಸ್ಕೌಟ
ಅಭಿಮಾನಿಗಳೂ ಆದ ಮಹಾ ಜನರು ಉದಾರಹೃದಯರಾಗಿ ಮುಕ್ತಹಸ್ತ
ದೊಡನೆ ನೆರವಾಗಿ ಕಾರ್ಯ ಪೂರ್ತಿಗೊಳಿಸಿಕೊಡಬೇಕೆಂದೂ ಕೇಳಿಕೊಂಡರು. ಆ
ಮೇಲೆ ಗದಗಿನ ಮುನಿಸಿಪಲ್ ಹೈಸ್ಕೂಲಿನ ಹೆಡ್‌ಮಾಸ್ತರರಾದ ಶ್ರೀ. ವಾಳವೇ
ಕರರವರಿಗೂ ತಾಲೀಮ ಮಾಸ್ತರರಾದ ಶ್ರೀ. ಸೂರಣಗಿಯವರಿಗೂ ಸವದತ್ತಿ
ಯಲ್ಲಿ ಕನ್ನಡ ಶಾಲೆಯ ಶಿಕ್ಷಕರಾಗಿರುವ ಶ್ರೀ. ಜಾಧವ ಇವರಿಗೂ ಹಿಂದುಸ್ಥಾನದ
ಚೀಫ ಸ್ಕೌಟರಾಗಿರುವ ವ್ಹಾಯಸರಾಯ ಸಾಹೇಬರಿಂದ ಬಂದಿರುವ ಪದಕ
ಹಾಗು ಸರ್ಟಿಫಿಕೇಟುಗಳನ್ನು ಕೊಡಲಾಯಿತು. ಶ್ರೀ. ವಾಳವೇಕರರು ಗದಗ
ಮ್ಯುನಿಸಿಪಲ್ ಹಾಯಸ್ಕೂಲಿನಲ್ಲಿ, ಹೆಡ್‌ಮಾಸ್ತರರ ಬಹು ಜವಾಬದಾರಿಯ
ಬಹುಮುಖದ ಕಾರ್ಯವನ್ನು ನೆರವೇರಿಸಿಕೊಂಡು ಸ್ಕೌಟ ಚಳವಳಿಯಲ್ಲಿ ಬಹು
ಕಾಲದಿಂದಲೂ ಆಸ್ಥೆಯುಳ್ಳವರಾಗಿ ಬಹು ಪ್ರಯೋಜನಕಾರಿಯಾಗುವಂತೆಯೂ
ಪರಿಶ್ರಮ ಮಾಡಿ ಅದರ ಉತ್ಕರ್ಷಕ್ಕೆ ನೆರವಾದರೆಂಬ ಕಾರಣದಿಂದ ಅವರಿಗೆ ಬಹು
ಮಾನಸೂಚಕವಾದ ಪದಕವು ಕೊಡಲ್ಪಟ್ಟಿತು. ಇದೇ ಮೇರೆಗೆ ಶ್ರೀ. ಸೂರಣಗಿ
ಯವರೂ ಕೂಡ ಸ್ಕೌಟ ಚಳವಳಿಯಲ್ಲಿ ಅವಿಶ್ರಾಂತಶ್ರಮ ಮಾಡಿ ಜನತೆಯಲ್ಲಿ
ಆ ವಿಷಯಕ್ಕೆ ತುಂಬ ಸದಭಿಪ್ರಾಯವನ್ನುಂಟುಮಾಡಿದ ಪರಿಶ್ರಮದ ಕುರು
ಹೆಂದು ಅವರಿಗೊಂದು ಪ್ರಶಸ್ತಿಪತ್ರವು ಕೊಡಲ್ಪಟ್ಟಿತು. ಮತ್ತು ಮೂರನೆ
ಯವರಾದ ಶ್ರೀ. ಜಾಧವ ಇವರು ಸವದತ್ತಿಯ ಕನ್ನಡ ಶಾಲೆಯಲ್ಲಿ ಶಿಕ್ಷಕ
ರಾಗಿದ್ದು ಕಳೆದ ವರ್ಷ ಟ್ರೇನಿಂಗ್ ಸ್ಕೂಲಿನಲ್ಲಿ ೩ನೆಯ ವರ್ಷದ ವಿದ್ಯಾರ್ಥಿಯಾಗಿ
ದ್ದಾಗ ಸ್ಕೌಟ ದೀಕ್ಷೆಯನ್ನು ಹೊಂದಿದ್ದರು. ಅವರು ಯಲ್ಲಮ್ಮನ ಜಾತ್ರೆಗಾಗಿ
ಬಂದಿದ್ದ ಒಬ್ಬ ಪರಸ್ಥಳದ ಹೆಣ್ಣು ಮಗಳು ಆಕಸ್ಮಾತ್ ಭಾವಿಯಲ್ಲಿ ಬಿದ್ದು

ಮರಣೋನ್ಮುಖಳಾಗಿರುವಾಗ ಭಾವಿಯಲ್ಲಿ ಧುಮ್ಮಿಕ್ಕಿ ಅವಳನ್ನು ಮೇಲೆ ತೆಗೆದು ಪ್ರಥಮಚಿಕಿತ್ಸೆಯ ಉಪಚಾರಗಳನ್ನು ಮಾಡಿ ಅವಳ ಜೀವವನ್ನು ಉಳಿಸಿದರು. ಈ ಶ್ರೇಯಸ್ಸಿಗಾಗಿ ನಮ್ಮ ದೇಶದ ಚೀಫ ಸ್ಕೌಟರಾದ ವ್ಹಾಯಿಸರಾಯ ಸಾಹೇಬರವರಿಂದ ಒಂದು ಪ್ರಾಶಸ್ತ್ಯಪತ್ರವು ಬಂದಿತ್ತು. ಅದನ್ನು ಮೆ॥ ಕಲೆಕ್ಟರ ಸಾಹೇಬರವರು ಶ್ರೀ. ಜಾಧವ ಇವರಿಗೆ ಕೊಟ್ಟರು. ಇದರಿಂದ ಸ್ಕೌಟ ಚಳವಳಿಯ ಮಹತ್ವವೂ, ಅದರಿಂದಾಗುವ ಲೋಕೋಪಕಾರದ ಮಹತ್ಕಾರ್ಯಗಳೂ ಅದರಲ್ಲಿ ಮನಃಪೂರ್ವಕವಾಗಿ ಪರಿಶ್ರಮ ವಹಿಸಿ ಕೆಲಸಮಾಡುವವರಿಗೆ ದೊರೆಯುವ ಮಾನಮರ್ಯಾದೆ ಗೌರವಗಳೂ ನೆರೆದ ಸಭಿಕರಿಗೆ ಮನವರಿಕೆಯಾದುವಲ್ಲದೆ ಅಂದು ಸ್ಕೌಟ್ ದೀಕ್ಷೆಯನ್ನು ಹೊಂದಿದವರಲ್ಲಿ ತಮ್ಮ ಮುಂದಿನ ಕಾರ್ಯದಲ್ಲಿ ಆಸ್ಥೆಯನ್ನೂ ಉತ್ಸಾಹವನ್ನೂ ಹುಟ್ಟಿಸಲು ಕಾರಣವಾಯಿತು.

ಇಷ್ಟಾದ ಬಳಿಕ ಸ್ಕೌಟ ಕ್ಯಾಂಪಿಗೆ ಸೇರಿದ ಶಿಕ್ಷಕ ವರ್ಗದ ಪರವಾಗಿ ಶ್ರೀ. ಮಾ. ತ್ರಿ. ಕುಲಕರ್ಣಿ (ಟ್ರೇನಿಂಗ್ ಸ್ಕೂಲಿನ ೩ನೆಯ ವರ್ಷದ ವಿದ್ಯಾರ್ಥಿ) ಇವರು ಕ್ಯಾಂಪಿನ ಚಾಲಕರ ಹಾಗು ಅದರ ಪ್ರೇರಕರ ಆಭಾರ ಮನ್ನಿಸಿದ್ದಲ್ಲದೆ ಸ್ಕೌಟ ಚಳವಳಿಯ ಕಾರ್ಯಕಲಾಪಗಳೂ ಅದರ ಧ್ಯೇಯಗಳೂ ಮನುಷ್ಯನಲ್ಲಿ ಮನುಷ್ಯತ್ವವನ್ನು ತಂದುಕೊಡುವಂಥ ಉದಾತ್ತ ತತ್ವಗಳಿಂದೊಡಗೂಡಿದ್ದು ಅವು ಸದಾಸಿದ್ಧವಾಗಿರು " Be prepared" ಎಂಬ (motto) ಧ್ಯೇಯವನ್ನಿಟ್ಟುಕೊಂಡು ಜನತಾಜನಾರ್ದನನ ಸೇವೆಗಾಗಿ ಕೈಕಟ್ಟಿ ನಿಂತಿರುವ ಮಹಾ ಪಥಕದ ಉತ್ಪತ್ತಿಗೆ ಕಾರಣವಾಗಿದೆ ಎಂದು ಮುಂತಾಗಿ ಬಹು ಶ್ಲಾಘ್ಯವಾಗಿ ಮಾತಾಡಿದರು.

ತರುವಾಯ ಧಾರವಾಡದ ಖಾನಸಾಹೇಬ ಕರಾಕಾ ಇವರೂ, ಹುಬ್ಬಳ್ಳಿಯ ಸ್ಕೂಲಬೋರ್ಡಿನ ಚೇಅರಮನ್ನರಾದ ಘೂಡುವಾಲೆಯವರೂ, ಬೆಳಗಾಂವ ಜಿಲ್ಹೆಯ ಎಡ್ಮಿನಿಸ್ಟ್ರೇಟಿವ್ಹ ಆಫಿಸರರಾದ ಶ್ರೀ. ರಾಮಚಂದ್ರನ್ನರು, ಗದಗಿನ ಸದ್ಗೃಹಸ್ಥರಾದ ಶ್ರೀ. ಹುಯಿಲಗೋಳ ನಾರಾಯಣರಾಯರು, ಮುಂತಾದವರೂ ಆಯಾ ಸ್ಥಾನಿಕ ಸ್ಕೌಟ ಚಳವಳಿಯ ಉತ್ಕರ್ಷವನ್ನೂ, ಆ ವಿಷಯದಲ್ಲಿ ತಮಗಿರುವ ಆಸ್ಥೆಯನ್ನೂ ವಿವರಿಸಿ ಮಾತಾಡಿದರು. ಹುಬ್ಬಳ್ಳಿಯ ಸ್ಕೌಟ ಅಭಿಮಾನಿಗಳಾದ ಶ್ರೀ. ಸೈಯದ ಇವರು ಉರ್ದುವಿನಲ್ಲಿ ಈ ವಿಷಯವನ್ನು ಕುರಿತು ಕೆಲವು ಮಾತುಗಳನ್ನು ಆಡಿದರು.

ಆ ಬಳಿಕ ಅಧ್ಯಕ್ಷರಾಗಿದ್ದ ಮೆ॥ ಡಿಲನ್ ಸಾಹೇಬರವರು ಸ್ಕೌಟ ಚಳವಳಿಗೆ ಉತ್ತೇಜನಪರವಾದ ನಾಲ್ಕು ಮಾತುಗಳನ್ನಾಡಿದರು. ತರುವಾಯ ಟ್ರೇನಿಂಗ ಸ್ಕೂಲಿನ ಹೆಡ್‌ಮಾಸ್ತರರಾದ ಶ್ರೀ. ಕಾಳೆಯವರು ಅಧ್ಯಕ್ಷರಿಗೆ ಹೂಮಾಲೆಯನ್ನ ರ್ಪಿಸಿ ಅಧ್ಯಕ್ಷರ ಸಭಿಕರ ಮತ್ತು ಕ್ಯಾಂಪಿನ ಚಾಲಕರ ಆಭಾರಮನ್ನಿಸಿದರು. ತರು ವಾಯ ರಾಷ್ಟ್ರಗೀತೆಯೊಡನೆ ಸಭಾಸಮಾಪ್ತಿಯಾಯಿತು.

ಇಂದಿನ ಸ್ಕೌಟ ಕ್ಯಾಂಪಿನ ಚಾಲಕರೂ, ಕರ್ನಾಟಕದಲ್ಲಿ ಸ್ಕೌಟ ಚಳವಳಿಯ ಪ್ರಸಾರಕ್ಕೆ ಮೂಲ ಕಾರಣರೂ, ನಮ್ಮ ಇಲಾಖೆಯ ಪ್ರಾವ್ಹಿನ್ಸಿಅಲ ಸೆಕ್ರೆಟರಿಯವರೂ ಆದ, ಶ್ರೀ. ಬಿ. ಟಿ. ಚಾರರವರು ತಮ್ಮ ಭಾಷಣದಲ್ಲಿ ಹೇಳಿದ ಕೆಲವು ಮಾತುಗಳು ವಿಶೇಷ ಮಹತ್ವದವಾಗಿರುವದರಿಂದ ಅವುಗಳಲ್ಲಿ ಮುಖ್ಯ ವಾದ ಕೆಲವನ್ನು ಮಾತ್ರ ಇಲ್ಲಿ ಹೇಳುವೆವು—

(೧) ಸ್ಕೌಟನು ಮಾಡುವ ಪ್ರತಿಜ್ಞೆಗೆ ಸಭಿಕರ, ಅಧಿಕಾರಿಗಳ, ಇಲ್ಲವೆ ಇನ್ನಾರ ಸಾಕ್ಷಿಯೂ ಬೇಕಾಗಿರುವುದಿಲ್ಲ. ಅದಕ್ಕೆ ಆತನ ಆತ್ಮವೇ ಸಾಕ್ಷಿ; ಆತನ ಆತ್ಮಗೌರವವೇ ಸಾಕ್ಷಿ; ಆತನ ಆತ್ಮಾಭಿಮಾನವೇ ಸಾಕ್ಷಿ.

(೨) ದೇಶವಾತ್ಸಲ್ಯವೇ ಸ್ಕೌಟನ ಮೈಯುಂಡ ಗುಣ; ಎಂದರೆ ಸ್ಕೌಟನು ದೇಶವಾತ್ಸಲ್ಯವೇ ಸ್ಕೌಟನ ರೂಪದಿಂದ ಪ್ರಕಟವಾದಂತಿರುವನು.

(೩) ದೇಶದ ಅನಂತ ಸೇವೆಗೆ ಸ್ಕೌಟಚಳವಳಿಯಲ್ಲಿ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಆಸ್ಪದವಿರುವದು.

(೪) ಇಂದು ಸ್ಕೌಟ ದೀಕ್ಷೆಯನ್ನು ಕೈಕೊಂಡವರಲ್ಲಿ ಬಹುಜನರು ಶಿಕ್ಷಕರು. ಈ ೧೨೨ ಜನರು ತುಸ ದಿನಗಳಲ್ಲಿಯೇ ೧೨೨ ಹಳ್ಳಿ ಗಳಿಗೆ ಹೋಗುವರು. ಇವರು ಮನಮುಟ್ಟಿ ದುಡಿದರೆ ಆ ೧೨೨ ಹಳ್ಳಿಗಳ ಉದ್ಧಾರವಾಗುವದು. ಸರಕಾರದವರೂ ಜನತೆಯ ಮುಂದಾಳುಗಳೂ ಏಕವಾಕ್ಯತೆಯಿಂದ ಪ್ರಶಂಸೆಮಾಡುತ್ತಿರುವ ಗ್ರಾಮೋದ್ಧಾರದ ಕಾರ್ಯಕ್ಕೆ ಈ ಸ್ಕೌಟರಿಂದ ಇನ್ನಿಲ್ಲದಷ್ಟು ಸಹಾಯವಾಗಲು ಅನುವಿದೆ.

(೫) ಈ ಶಿಕ್ಷಕರ ಕಾರ್ಯವು ಸುಸೂತ್ರವಾಗಿ ಸಾಗಿ ಅದರಿಂದ ಆಗ ಬೇಕಾದ ಪ್ರಯೋಜನವು ಆಗಬೇಕಾದರೆ ಜನರು ಅವರೊಡನೆ ಸಹಕಾರಿತೆಯಿಂದಲೂ, ಸಹಾನುಭೂತಿಯಿಂದಲೂ, ಏಕವಾಕ್ಯತೆ ಯಿಂದಲೂ, ನಡೆದುಕೊಳ್ಳಬೇಕಾಗುವದು. ಹಳ್ಳಿಯ ವಾಸದಲ್ಲಿಯ ಬಲು ತೊಡಕಿನ ಜೀವನಕ್ರಮದ ಮೂಲಕವಾಗಿ ಶಿಕ್ಷಕರ ಕೆಲಸವು ಅಷ್ಟು ಸುಲಭವಾದದ್ದಲ್ಲವೆಂಬದನ್ನು ನಾನು ಬಲ್ಲೆನು. ಹಳ್ಳಿಯ ಸುಧಾರಣೆಯಲ್ಲಿ ಅಭಿಲಾಷೆಯುಳ್ಳ ಮಹಾ ಜನರು ಈ ಶಿಕ್ಷಕರಿಗೆ ನೆರವಾದರೆ ಹಲವರು ಇದಕ್ಕೆ ಬೇಕಾಗುವ ಹಣವನ್ನು ಕೂಡಿಸಿಕೊಡಬಹುದು; ಕೆಲವರು ತಮ್ಮ ಸ್ಥಾನಮಾನಗಳ ಗೌರವ ದಿಂದ ನೆರವಾಗಬಹುದು; ಸಾಧ್ಯವಿದ್ದ ಮಿಕ್ಕ ಕೆಲವರು ಜನರಲ್ಲಿ ಈ ವಿಷಯದಲ್ಲಿ ಪ್ರೀತಿಯನ್ನು ಹುಟ್ಟಿಸಿ ಪ್ರೋತ್ಸಾಹಿಸಬಹುದು. ಶಿಕ್ಷಕರು ಈಸ್ಕೌಟ ಚಳವಳಿಯಲ್ಲಿ ಯಶಸ್ವಿಗಳಾಗಬಹುದು. ೧೭೧ ಜನ ಶಿಕ್ಷಕರು ತೀರ ಕಡಿಮೆಯೆಂದರೆ (೧೭೧×೨೦) ೩೪೨೦ ಜನ ಸ್ಕೌಟರನ್ನು ತಯಾರಿಸಬಹುದು. ಇಷ್ಟು ಜನರು ಸಿದ್ಧರಾಗುವ ದೆಂದರೆ ನಮ್ಮ ಕರ್ನಾಟಕಕ್ಕೆ ಒಂದು ಅಸಾಮಾನ್ಯ ಲಾಭವೆಂದು ಯಾರಾದರೂ ಹೇಳಬಹುದು. ಸ್ಕೌಟ ಚಳವಳಿಯಲ್ಲಿ ಅಡಕವಾಗಿ ರುವ ಅನೇಕಾನೇಕ ಗೌರವದ ಗುಣಗಳ ಹಾಗು ಕಾರ್ಯಕಲಾಪಗಳ ಮೂಲಕವಾಗಿಯೇ ಅದು ದಿನದಿನಕ್ಕೆ ಹೆಚ್ಚು ಹೆಚ್ಚು ಜನಪ್ರಿಯ ವಾಗುತ್ತ ನಡೆದಿದೆ. ಇತ್ಯಾದಿ.

ಒಬ್ಬನೇ ಶಿಕ್ಷಕನಿರುವ ಶಾಲೆ

ಲೇಖಕ:— ಕೃ. ನಾ. ಕೋಟೇಶ್ವರ, ಕಾರಡಿಗಿ.

ನಮ್ಮ ದೇಶವು ಹಳ್ಳಿಗಳ ದೇಶವು; ಸಣ್ಣ ಸಣ್ಣ ಹಳ್ಳಿಗಳೇ ವಿಶೇಷ. ಇಂಥ ಹಳ್ಳಿಗಳಲ್ಲಿಯೇ ಒಬ್ಬ ಶಿಕ್ಷಕನಿರುವ ಶಾಲೆಗಳಿವೆ. ಇವುಗಳ ಏಳುಬೀಳುಗಳೂ ವಿಶೇಷ; ಅಲ್ಲಿ ಅನುಭವಿಕರೂ ಬುದ್ಧಿವಂತರೂ ಆದ ಶಿಕ್ಷಕರಿರುವುದೂ ಕಡಿಮೆ;

ಸ್ಥಾನಿಕ ಪರಿಸ್ಥಿತಿಯೂ ಶಿಕ್ಷಣ ಕೆಲಸಕ್ಕೆ ಅಷ್ಟೊಂದು ಅನುಕೂಲವಾದದ್ದಿರುವದಿಲ್ಲ. ಇಂಥ ಶಾಲೆಗಳ ವ್ಯವಸ್ಥೆಯನ್ನೂ ಶಿಕ್ಷಣವನ್ನೂ ಸಮಾಧಾನಕ್ಕರವಾಗಿಯೂ, ಉತ್ತರೋತ್ತರ ಉನ್ನತಿಯಾಗುವಂತೆಯೂ ಹೇಗೆ ಸಾಗಿಸಿಕೊಂಡು ಹೋಗಬೇಕು? ಎಂಬದು ದೊಡ್ಡದೊಂದು ಸಮಸ್ಯೆ.

ಈ ಸಮಸ್ಯೆಯನ್ನು ಬಿಡಿಸಲಿಕ್ಕೆ ಈ ವರೆಗೆ ವಿಶೇಷ ಪ್ರಯತ್ನಗಳು ನಡೆದಂತೆ ತೋರುವದಿಲ್ಲ. ಟ್ರೇನಿಂಗ್ ಸಂಸ್ಥೆಗಳಲ್ಲಿಯೂ ಸಮ್ಮೇಲನಗಳಲ್ಲಿಯೂ ಒಂದು ಅವಧಿಯಲ್ಲಿ ಒಂದೇಕ್ಲಾಸಿಗೆ ಶಿಕ್ಷಣಕೊಡುವ ಮಾದರಿಗಳನ್ನು ತೋರಿಸುವದೇ ವಿಶೇಷ; ಇಂಥ ತೊಡಕುಳ್ಳ ವಿಷಯುಗಳ ವಿಚಾರವಾಗುವುದು ಕಡಿಮೆ. ಅನೇಕ ದೊಡ್ಡದೊಡ್ಡ ಶಿಕ್ಷಣದ ತತ್ವಗಳಿಗನುಸರಿಸಿ, ಉಪಕರಣಗಳ ಸುರಿಮಳೆ ಮಾಡಿಕೊಂಡು, ಒಂದೇ ವರ್ಗಕ್ಕೆ ಹೇಗೆ ಶಿಕ್ಷಣಕೊಡಬೇಕೆಂಬ ಮಾದರಿಗಳೇ ತೋರಿಸಲ್ಪಡುತ್ತವೆ; ಒಬ್ಬನೇ ಶಿಕ್ಷಕನು ಏಕಕಾಲಕ್ಕೆ ೪-೫ ವರ್ಗಗಳ ಶಿಕ್ಷಣಕಾರ್ಯವನ್ನು ಹೇಗೆ ಸಾಗಿಸಬೇಕೆಂಬ ವಿಷಯವೇ ವಿಚಾರಕ್ಕೆ ಬರುವದಿಲ್ಲ. ಇದು ಒಬ್ಬೊಂಟಿಗನಾದ ಶಿಕ್ಷಕನ ದುರ್ದೈವವೇಸರಿ.

ಇಂಥ ಶಾಲೆಗಳಲ್ಲಿ ಸಾಮಾನ್ಯವಾಗಿ ಇನ್‌ಫಂಟಿನಿಂದ ೪ನೇ ಕ್ಲಾಸಿನವರೆಗೆ ಒಟ್ಟಿಗೆ ಐದು ಕ್ಲಾಸುಗಳಿರುತ್ತವೆ. ಇನ್‌ಫಂಟಿನಲ್ಲಿ ವಿದ್ಯಾರ್ಥಿಗಳ ಸಂಸ್ಕೃತಿ ಪರಿಸ್ಥಿತಿಗಳಿಗನುಸರಿಸಿ ಮತ್ತೆ ಕೆಲವು ಪೋಟಕ್ಲಾಸುಗಳಾಗುತ್ತವೆ. ಮತ್ತು ಈ ಕ್ಲಾಸಿನ ವಿದ್ಯಾರ್ಥಿಗಳು ಯಾವಾಗಲೂ ಶಿಕ್ಷಕನ ಸಹಾಯವಿಲ್ಲದೆ ಸ್ವತಂತ್ರವಾಗಿ ಏನನ್ನೂ ಮಾಡಲಾರರು. ಕೆಲವು ಹುಡುಗರನ್ನಂತೂ ಶಾಲೆಯ ಸಂಸ್ಕಾರವುಳ್ಳವರನ್ನಾಗಿ ಮಾಡಿಕೊಳ್ಳಲಿಕ್ಕೇ ಶಿಕ್ಷಕನ ಜಾಣ್ಮೆಯೂ ಕಾಲವೂ ವ್ಯಯವಾಗುತ್ತವೆಂಬದು ಅನುಭವಿಕರಾದ ಶಿಕ್ಷಕರಿಗೆ ಗೊತ್ತಿರಬಹುದು. ಮೊದಲನೇ ಇಯತ್ತೆಯ ಸ್ಥಿತಿಯಾದರೂ ಕೆಲಮಟ್ಟಿಗೆ ಇನ್‌ಫಂಟಿನಂತೆಯೇ ಇದೆ. ಅಂದರೆ ಈ ಪ್ರತಿಯೊಂದು ವರ್ಗಕ್ಕೆ ಒಬ್ಬೊಬ್ಬ ಶಿಕ್ಷಕನಿದ್ದಹೊರತು, ಕೆಲಸವು ಪರಿಣಾಮಕಾರಿಯಾಗಿ ಸಾಗಲಾರದು. ಆದರೆ ಒಬ್ಬನೇ ಶಿಕ್ಷಕನು ಇವೆರಡು ವರ್ಗಗಳಿಗೆ ಕಲಿಸುವದಲ್ಲದೆ, ಇನ್ನುಳಿದ ಮೂರೂಕ್ಲಾಸುಗಳ ಶಿಕ್ಷಣವನ್ನೂ ಸಾಗಿಸಬೇಕಾಗಿದೆ.

ಈಬಗೆಯ ಶಾಲೆಗಳ ಒಂದೊಪ್ಪೊತ್ತಿನ ಅಭ್ಯಾಸಕ್ರಮದ ಬಗ್ಗೆ ವಿಚಾರಿಸುವಾ. ಈಗಿನ ವೇಳಾಪತ್ರಕದಂತೆ ಮೂರುತಾಸುಗಳಲ್ಲಿ ಎಲ್ಲ ಕೆಲಸಗಳನ್ನು

ಪೂರೈಸಬೇಕಾಗಿದೆ. ಆರೋಗ್ಯಪರೀಕ್ಷೆ, ವಿಶ್ರಾಂತಿ, ಶಾರೀರಿಕಶಿಕ್ಷಣ ಇತ್ಯಾದಿಗಳ ಬಗ್ಗೆ ಅರ್ಧತಾಸು ಹೋಯಿತು. ಇನ್ನುಳಿದ ೨॥ ತಾಸುಗಳಲ್ಲಿ ಐದು ಕ್ಲಾಸುಗಳ ೨೦ ವಿಷಯಗಳು ಸಾಗಬೇಕಾಗಿವೆ. ಅಂದರೆ ೭॥ ಮಿನಿಟುಗಳಿಗೆ ಒಂದು ವಿಷಯವನ್ನು ಮುಗಿಸಬೇಕಾಯಿತು. ಒಂದು ವಿಷಯವನ್ನು ಸಾಗಿಸುವುವೆಂದರೆ, ಮಾಧ್ಯಮಿಕ ಶಾಲೆಗಳಂತೆ ಬರೀ ವ್ಯಾಖ್ಯಾನಗಳನ್ನು ಕೊಡುವುದಲ್ಲ. ಚಿಕ್ಕ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ತಿಳಿಸುವದು; ಅವರೊಡನೆ ಆಟವಾಡುವುದು; ಅವರಲ್ಲಿರುವ ಕುಂದು ಕೊರತೆಗಳನ್ನು ತಿದ್ದುವದು; ನಾನಾಬಗೆಯ ಪ್ರಶ್ನೋತ್ತರಗಳಿಂದ, ಉಪಕರಣಗಳ ಸಹಾಯದಿಂದ, ಮನನಮಾಡಿಸುವದು. ಮಂದಬುದ್ಧಿಯ ವಿದ್ಯಾರ್ಥಿಗಳ ಪ್ರಮಾಣವು ಹೆಚ್ಚಿದ್ದರಂತೂ ತೀರಿಯೇ ಹೋಯಿತು, ಅವರಿಗಾಗಿಯೇ ಕೆಲವು ಸ್ವತಂತ್ರ ವೇಳೆಯನ್ನು ಕಾದಿಡಬೇಕಾಗುವದು. ಹೀಗೆ ವೇಳೆಯನ್ನು ವಿಭಾಗಿಸದೆ, ಒಂದೇಕಾಲಕ್ಕೆ ಐದೂ ಕ್ಲಾಸುಗಳ ಶಿಕ್ಷಣವನ್ನು ಸಾಗಿಸುವದಂತೂ ಅಷ್ಟಾವಧಾನಿಯಾದ ಶಿಕ್ಷಕನಿಗಾದರೂ ಅಶಕ್ಯವೇ ಸರಿ.

೪೦ ಹುಡುಗರುಳ್ಳ ಒಂದೇ ಕ್ಲಾಸಿನ ಶಿಕ್ಷಣಕ್ಕೂ, ಐದು ಕ್ಲಾಸುಗಳನ್ನೊಳಗೊಂಡ ೪೦ ಹುಡುಗರ ಶಿಕ್ಷಣಕ್ಕೂ ಬಹಳೇ ಅಭ್ಯಂತರವಿದೆ. ಒಂದೇ ಕ್ಲಾಸುಳ್ಳ ಶಿಕ್ಷಕನ ಕೆಲಸವು ಗದ್ದಲವಿಲ್ಲದೆ ನಡೆಯುವದು; ವೇಳೆಯೂ ಸಾಕಷ್ಟು ದೊರೆಯುವದು; ಒಬ್ಬ ದಡ್ಡ ಹುಡುಗನ ತಿದ್ದುವಿಕೆಯು ಇಡೀ ಕ್ಲಾಸಿನ ಮಂದಬುದ್ಧಿಯ ಹುಡುಗರಿಗೂ ಸಂಬಂಧಿಸುವದು. ಆದರೆ ಐದು ಕ್ಲಾಸುಗಳುಳ್ಳ ಶಿಕ್ಷಕನ ಕೆಲಸವು ಶಾಂತರೀತಿಯಿಂದ ನಡೆಯಲಾರದು; ಒಂದು ವರ್ಗದಕಡೆಗೆ ಶಿಕ್ಷಕನ ಲಕ್ಷ್ಯವಿದ್ದರೆ, ಇನ್ನೊಂದು ವರ್ಗದವರು ಗಲಾಟೆ ಮಾಡುವರು; ಇಲ್ಲವೆ ಸಂಶಯಗಳಬಗ್ಗೆ ಕೇಳುವರು; ಮಾಡಿದ ಕೆಲಸಗಳನ್ನು ತೋರಿಸುವರು. ವೇಳೆಯಂತೂ ತೀರ ಸ್ವಲ್ಪವಿರುವದು ಹೀಗಾಗಿ ಶಿಕ್ಷಕನು ಅನೇಕ ತೊಂದರೆಗಳಿಗೆ ಗುರಿಯಾಗುವನು.

ಶಿಕ್ಷಣವನ್ನಷ್ಟೇ ಪೂರೈಸಿಕೊಂಡರೆ ಶಿಕ್ಷಕನ ಕೆಲಸವಾಗಲಿಲ್ಲ. ಶಾಲೆಯ ಸ್ವಚ್ಛತೆ, ರಿಕಾರ್ಡ, ಉಪಕರಣ, ಫೀ, ಹುಡುಗರನ್ನು ಕರೆಯಿಸುವದು, ಪಾಲಕರಿಗೆ ತಿಳಿಸಿ ಹೇಳುವದು ಮೊದಲಾದ ನಿತ್ಯಕರ್ಮಗಳ ಕಡೆಗಂತೂ, ಶಿಕ್ಷಕನು ಹೆಚ್ಚು ಲಕ್ಷ್ಯವನ್ನು ಪೂರೈಸಬೇಕಾಗುವದು. ಇವಲ್ಲದೆ ಮಾಸಿಕ, ವಾರ್ಷಿಕ ಕರ್ಮಗಳೂ ಅನೇಕ ಇರುತ್ತವೆ. ಶಿಕ್ಷಕನು ೧-೨ ದಿವಸ ಕಿರಕುಳ ರಜೆಯಮೇಲೆ ಹೋಗ

ಬೇಕಾದರೆ, ರಜೆಯ ಫಾರ್ಮಿಗೆ ಪಂಚರ ಸಹಿ ಮಾಡುಸುವದಕ್ಕೇ ಎಷ್ಟೋ ಶ್ರಮಬಡಬೇಕಾಗುವದು; ಪಂಚರು ಕೆಲಸ ಸಾಗಿಸುವದಂತೂ ದೂರೇ ಉಳಿಯಿತು; ಶಿಕ್ಷಕನು ಬರುವವರೆಗೆ ಶಾಲೆಗೆ ಸೂಟಿಯೇ. ಕೆಲವೆಡೆಗಳಲ್ಲಂತೂ ಇಂಥ ಅನೇಕ ತೊಂದರೆಗಳಿಂದೊಡಗೂಡಿದ ಶಿಕ್ಷಕನಿಗೆ ಮತ್ತೊಂದು ಪೋಟಶಾಲೆಯ ಜವಾಬದಾರಿ ಇರುತ್ತದೆ.

ಈ ತೊಡಕನ್ನು ಹೇಗೆ ಬಿಡಿಸಬೇಕು? ಕ್ಲಾಸುಗಳನ್ನು ಕಡಿಮೆ ಮಾಡಬೇಕೇ? ಹುಡುಗರನ್ನು ಕಡಿಮೆಮಾಡಬೇಕೇ? ಇಲ್ಲವೆ ಶಿಕ್ಷಕನು ಪ್ರತಿದಿವಸ ೮-೧೦ ತಾಸು ದುಡಿದು ಕೆಲಸವನ್ನು ಪೂರೈಸಿಕೊಳ್ಳಬೇಕೇ? ಈ ಪ್ರಶ್ನೆಗಳಿಗೆ ಉತ್ತರಕೊಡುವದೇ ಕಠಿಣವಿದೆ. ಒಬ್ಬ ಶಿಕ್ಷಕನ ಶಾಲೆಯಲ್ಲಿ ಸಾಮಾನ್ಯವಾಗಿ ಬಿನ್ ಮತ್ತು ೧ನೇ ಇಯತ್ತೆಗಳ ಹುಡುಗರೇ ವಿಶೇಷ, ೨,೩,೪ನೆಯ ಇಯತ್ತೆಗಳಲ್ಲಿ ಕಡಿಮೆ; ಬಹಳವೆಂದರೆ ೧೦-೧೨ ರ ವರೆಗೆ ಇರುವರು. ಆದ್ದರಿಂದ ಬಿನ್ ಮತ್ತು ೧ನೇ ಇಯತ್ತೆಗಳಿಗೆ ಸಾಕಷ್ಟು ಹುಡುಗರನ್ನು ಭರ್ತಿಮಾಡಿಕೊಂಡು, ಉಳಿದ ಕ್ಲಾಸುಗಳನ್ನು ಕಡಿಮೆಮಾಡುವುದು ವಿಹಿತವು; ಕೇವಲ ಸಣ್ಣ ಹುಡುಗರ ಸಲುವಾಗಿ ಮಾತ್ರ ಇಂಥ ಶಾಲೆಗಳಿರತಕ್ಕದ್ದು. ಸಮೀಪದಲ್ಲಿರುವ ಕೆಲವು ಹಳ್ಳಿಗಳಿಗೊಂದು ಮಧ್ಯವರ್ತಿಯಾದ ಶಾಲೆಯನ್ನು ಅನುಕೂಲವಾದ ಸ್ಥಳದಲ್ಲಿ ಸ್ಥಾಪಿಸಿ ೨ರಿಂದ ಮುಂದಿನ ಇಯತ್ತೆಗಳ ಅಭ್ಯಾಸವು ನಡೆಯುವಂತೆ ವ್ಯವಸ್ಥೆಮಾಡಬಹುದು. ಮದ್ರಾಸ ಪ್ರಾಂತದ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯು ಕೆಲಮಟ್ಟಿಗೆ ಈ ರೀತಿಯನ್ನು ಹೋಲುವದು.

ಏನೂ ಕುಂದುಕೊರತೆಗಳಿಲ್ಲದ ಎಲ್ಲರೀತಿಯಿಂದಲೂ ಅತ್ಯುತ್ತಮವಾದ ಒಬ್ಬ ಶಿಕ್ಷಕನ ಶಾಲೆ ದೊರೆಯುವದು ತೀರ ಅಪರೂಪ; ದೊರೆತರೂ ಅದು ಆ ಶಿಕ್ಷಕನ ಅವಿಶ್ರಾಂತ ಶ್ರಮದ ಫಲವೆಂದು ತಿಳಿಯಬಹುದು. ಅನುಭವಿಕರೂ ಬುದ್ಧಿವಂತರೂ ಆದ ಶಿಕ್ಷಣಜ್ಞರೂ ಶಿಕ್ಷಣಾಧಿಕಾರಿಗಳೂ ಈ ತೊಡಕಿನ ಬಗ್ಗೆ ಚನ್ನಾಗಿ ವಿಚಾರಮಾಡಿ, ಈಗಿದ್ದ ಕ್ರಮವನ್ನು ಬದಲುಮಾಡಿ ಹೊಸದೊಂದು ವ್ಯವಸ್ಥೆಯನ್ನುಗೊತ್ತುಪಡಿಸುವದುತ್ತಮ. ಟ್ರೇನಿಂಗಸಂಸ್ಥೆ ಸಮ್ಮೇಲನಗಳಲ್ಲಿ ಈ ಸಮಸ್ಯೆಯಬಗ್ಗೆ ಚನ್ನಾಗಿ ವಿಚಾರವಾಗಬೇಕು. ಈಗ ಬಳಕೆಯಲ್ಲಿರುವ ವೇಳಾಪತ್ರಕದಂತೆ ಪೂರ್ಣ ಒಂದು ವಾರದ ಅಭ್ಯಾಸವನ್ನು ಐದೂ ಕ್ಲಾಸುಗಳಿಗೆ ಒಬ್ಬನೇ ಶಿಕ್ಷಕನು ಹೇಗೆ ಕಲಿಸಬೇಕೆಂಬ ಬಗ್ಗೆ ಮಾದರಿ ಪಾಠಗಳನ್ನು ಕಲಿಸಿ ತೋರಿಸ

ಬೇಕು. ಮತ್ತು ಇಂಥ ವೇಳಾಪತ್ರಿಕೆಗಳನ್ನು ಪ್ರಸಿದ್ಧಿಸಬೇಕು. ಒಟ್ಟಿನಮೇಲೆ ಈ ಸಮಸ್ಯೆಯ ಬಗ್ಗೆ ಚನ್ನಾಗಿ ವಿಚಾರವಾಗಿ ಒಬ್ಬೊಂಟಿಗನಾದ ಶಿಕ್ಷಕನ ತೊಂದರೆಗಳು ದೂರಾಗಬೇಕೆಂಬದೇ ಈ ಲೇಖದ ಉದ್ದೇಶವಾಗಿದೆ.

ಪ್ರಾಥಮಿಕ ಶಿಕ್ಷಕರೂ ಆಯುರ್ವೇದವೂ.

ಲೇಖಕ:— ಮಾ. ತ್ರಿ. ಕುಲಕರ್ಣಿ, ೩ ನೆಯ ವರ್ಷ, ಟ್ರೇ. ಕಾ. ಧಾರವಾಡ.

ಪ್ರಿಯ ವಾಚಕಾಭಿಜ್ಞರೇ, ಕಳೆದ ಸಂಚಿಕೆಯಲ್ಲಿ ಪ್ರಕಟವಾದ "ಆಯುರ್ವೇದದ ಮಹತ್ವವೂ ಇತಿಹಾಸವೂ" ಎಂಬ ವಿಷಯವನ್ನು ಓದಿ ತಮ್ಮಲ್ಲಿ ಆ ವಿಷಯವಾಗಿ ಆಸ್ಥೆಯೂ ಅಭಿಮಾನವೂ ಅಂಕುರಿಸಿರಬಹುದು. ಅಹುದು, ಇದು ಸಹಜ. ಯಾಕಂದರೆ ಸೃಷ್ಟಿಯಲ್ಲಿ ಆತ್ಮೀಯಭಾವನೆಯು ಅಭಿಮಾನಾಸ್ಪದ ವೆಂಬುದು ಸರ್ವ ಶ್ರುತವು. ಗಲಿತಸ್ಥಿತಿಯಲ್ಲಿಯೇ ಇರವೊಲ್ಲದೇಕೆ, ನಮ್ಮದಾದ ಆಯುರ್ವೇದದ ಮಹಿಮೆ ಐತಿಹ್ಯ ಇವುಗಳ ಅವಲೋಕನೆಯಿಂದ ನಮ್ಮಲ್ಲಿ ಆ ವಿಷಯವಾಗಿ ಪ್ರೇಮವು ತಾನಾಗಿಯೇ ಪ್ರಕಟವಾಗುವದು ಆಶ್ಚರ್ಯವಲ್ಲ. ನಮ್ಮ ಪ್ರಾಥಮಿಕ ಶಿಕ್ಷಕರಲ್ಲಿ ಆಯುರ್ವೇದದ ಬಗ್ಗೆ ಆದರವನ್ನೂ ಅಭಿಮಾನವನ್ನೂ ಹುಟ್ಟಿಸಿ, ಶಕ್ಯವಿದ್ದಮಟ್ಟಿಗೆ ಅವರನ್ನು ಆಯುರ್ವೇದದ ಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರೇರಿಸಿ, ಅವರು ಆದರಿಂದ ತಮ್ಮ ಹಾಗೂ ಸಮಾಜದ ಆರೋಗ್ಯಭಾಗ್ಯವನ್ನು ಕಾಯ್ದುಕೊಳ್ಳಲಿಕ್ಕೆ ನೆರವಾಗಿ ಜನಪ್ರಿಯ ಶಿಕ್ಷಕರಾಗುವಂತೆ ಪ್ರಯತ್ನಿಸುವದೇ ಕಳೆದ ಸಂಚಿಕೆಯಲ್ಲಿನ ಹಾಗೂ ಪ್ರಸ್ತುತ ಸಂಚಿಕೆಯಲ್ಲಿನ ನನ್ನ ಲೇಖನದ ಉದ್ದೇಶವಿದೆ.

ಆಯುಷ್ಯ, ಆತ್ಮ, ಶರೀರ, ಈ ವಿಷಯವಾಗಿ ಹಿಂದಿನ ಲೇಖದಲ್ಲಿ ಸಂಕ್ಷೇಪವಾಗಿ ವಿವರಿಸಿದ್ದಾಗಿದೆ. ಮನುಷ್ಯನು ದೀರ್ಘಾಯುಷಿಯಾಗಿರಬೇಕಾದರೆ, ಶರೀರವು ಸಂಪೂರ್ಣವಾಗಿ ರೋಗರಹಿತವಾಗಿರಬೇಕೆಂಬದನ್ನು ಎಲ್ಲರೂ ಒಪ್ಪತಕ್ಕದ್ದು. ಹಾಗೆ ಶರೀರವು ರೋಗರಹಿತವಾಗಿರಬೇಕಾದರೆ ದೇಹದಲ್ಲಿನ ಕಫ,

ಪಿತ್ತ, ವಾತಗಳು ಸಮಸ್ಥಿತಿಯಲ್ಲಿರಬೇಕೆಂದು ಆಯುರ್ವೇದ ಶಾಸ್ತ್ರವು ಹೇಳುತ್ತದೆ. ಆಯುರ್ವೇದದಲ್ಲಿ ಕಫ-ಪಿತ್ತ-ವಾತಗಳಿಗೆ ಧಾತುಗಳೆಂದೂ, ದೋಷಗಳೆಂದೂ, ಮಲಗಳೆಂದೂ ಹೆಸರಿಟ್ಟಿರುವದು. ಕೇವಲ "ತ್ರಿಧಾತು ಮೀಮಾಂಸೆ" ಈ ವಿಷಯವಾಗಿಯೇ ಆಯುರ್ವೇದದಲ್ಲಿ ಅನೇಕ ಮಹತ್ವದ ಗ್ರಂಥಗಳು ಬರೆಯಲ್ಪಟ್ಟಿವೆ. ಈ ದೋಷಗಳಲ್ಲಿ (ಧಾತು) ವಿಷಮತೆಯು ಉಂಟಾದರೆ ಎಂದರೆ ಆ ಮೂರರಲ್ಲಿರಬೇಕಾದ ಪ್ರಮಾಣವು ತಪ್ಪಿದರೆ) ರೋಗೋತ್ಪತ್ತಿಯಾಗುವದೆಂದು ಆಯುರ್ವೇದಕಾರರ ಮತ. ಅಣುಜಂತುಗಳಿಂದ ರೋಗೋತ್ಪತ್ತಿಯಾಗುವದೆಂದು ಪಾಶ್ಚಾತ್ಯ ವೈದ್ಯಶಾಸ್ತ್ರಜ್ಞರ ಮತ. ಆಯುರ್ವೇದದಲ್ಲಿ ರೋಗದ ಮೂಲ ಕಾರಣವನ್ನು ಕಂಡುಹಿಡಿದು ತ್ರಿದೋಷಗಳಲ್ಲಿ ಯಾವ ದೋಷವು ಕುಪಿತವಾಗಿದೆ, ಯಾವದು ನ್ಯೂನವಾಗಿದೆ, ಮುಂತಾಗಿ ಕೂಲಂಕಷವಿಚಾರದಿಂದ ರೋಗದ ಕಾರಣವನ್ನು ಕಂಡುಹಿಡಿದು ಸುಗಮವಾದ ಚಿಕಿತ್ಸೆಯಿಂದ ರೋಗ ನಿವಾರಣವನ್ನು ಮಾಡುವರು. ಆದರೆ ಅಲೋಪ್ಯಾಥಿಯವರು (ಡಾಕ್ಟರರು) ಹೀಗೆ ಹೀಗೆ ಮೂಲ ಕಾರಣವನ್ನು ಹುಡುಕದೆ ಕೇವಲ ರೋಗಿಯು ರೋಗವಾವುದೆಂಬುದನ್ನು ಮಾತ್ರ ವಿಚಾರಿಸಿಕೊಂಡು ಇಲ್ಲವೆ ಶರೀರದಲ್ಲಿ ಕಾಣುತ್ತಿರುವ ಪರಿಣಾಮಗಳನ್ನು ನೋಡಿ ಅದಕ್ಕನುಸರಿಸಿ ಮೇಲೆ ಕಂಡಷ್ಟಕ್ಕೆ ಚಿಕಿತ್ಸೆಮಾಡುವರು. ಇದರಿಂದ ಸಮೂಲ ರೋಗನಿವಾರಣೆಯಾಗುವದಿಲ್ಲೆಂಬದನ್ನು ಬೇರೆ ಒಡೆದು ಹೇಳಬೇಕಾಗಿಲ್ಲ. ಇದು ಏನೇ ಇರವೊಲ್ಲದೇಕೆ. ವೈದ್ಯಕೀಯ ಜ್ಞಾನವನ್ನು ಅಭ್ಯಾಸಿಸಬೇಕೆಂಬ ಅಭಿರುಚಿಯುಳ್ಳ ನನ್ನ ಶಿಕ್ಷಕ ಬಂಧುಗಳು ಶರೀರದಲ್ಲಿ ತ್ರಿದೋಷಗಳು (ತ್ರಿಧಾತುಗಳು) ಇರುತ್ತವೆಂಬದನ್ನೂ ಅವುಗಳ ಸ್ವರೂಪವೇನೆಂಬದನ್ನೂ, ಅವುಗಳ ವಿಕೃತಿಯೇ ರೋಗಕ್ಕೆ ಕಾರಣವೆಂಬದನ್ನೂ, ತಿಳಿದುಕೊಳ್ಳುವದು ಅವಶ್ಯ. ಆಯುರ್ವೇದದಲ್ಲಿ ರಸ, ರಕ್ತ, ಮಾಂಸ, ಮೇದ, ಅಸ್ಥಿ, ಮಜ್ಜಾ, ಶುಕ್ರ, ಎಂಬ ಏಳಕ್ಕಾದರೂ "ಧಾತು" ಗಳೆಂದು ಹೇಳುವರು. ಆದರೆ ಕಫ, ಪಿತ್ತ, ವಾತಗಳೇ ಮುಖ್ಯ ಧಾತುಗಳೆಂದು, ಇಲ್ಲವೆ ತ್ರಿಧಾತುಗಳೆಂದು ವ್ಯವಹರಿಸಲ್ಪಡುತ್ತವೆ. ಈ ತ್ರಿಧಾತುಗಳ ವಿಷಯವಾಗಿ ವಾಗ್ಭಟ, ಸುಶ್ರುತ, ಚರಕಾದಿ ಋಷಿಗಳ ಆಯುರ್ವೇದ ಗ್ರಂಥಗಳಲ್ಲಿ ವಿಶೇಷವಾಗಿ ವರ್ಣನೆಯುಂಟು. ಅವರು ಶರೀರದ ವಿಷಯವಾಗಿ "ದೋಷ (ಧಾತು) (ಮಲ) ಮೂಲಂ ಹಿ ಶರೀರಂ" ಎಂದರೆ ಶರೀರವೆಂದರೆ ತ್ರಿದೋಷಯುಕ್ತವಾದದ್ದು ಎಂದು ಹೇಳಿರುವರು.

ಬಂಧುಗಳೇ, ನಮ್ಮ ಪ್ರಾಥಮಿಕ ಶಿಕ್ಷಕರಿಗೆ ವೈದ್ಯಕಿಯು ಮುಖ್ಯೋದ್ಯೋಗವಲ್ಲ; ಉಪ-ಉದ್ಯೋಗ (ಉಪಧಂದೆ) ಎಂಬದು ಸಹಜವು. ನಾವು ಕೈಕೊಂಡ ಪವಿತ್ರ ಶಿಕ್ಷಣಕಾರ್ಯವು ಮೊದಲನೆಯದು. ಆದರೆ ಇದರೊಂದಿಗೆ ಲೋಕಸೇವೆ ಮಾಡಬೇಕೆಂಬ ಸದುದ್ದೇಶದ ಹುರುಪಿನ ಶಿಕ್ಷಕರಿಗೆ ಇಂತಹ ಇನ್ನೆಷ್ಟೋ ಪರಸಹಾಯಕ ಕಾರ್ಯಗಳಿರಬಹುದು. ಆದರೂ ಬಹುಜನ ಪ್ರಾಥಮಿಕ ಶಿಕ್ಷಕರ ವಸತಿಯು ಹಳ್ಳಿಯಲ್ಲಿಯೇ ಇರುವದು. ಬಹುತರವಾಗಿ ಹಳ್ಳಿಯ ಜನರಿಗೆ ತಕ್ಕ ವೇಳೆಗೆ ವೈದ್ಯಕೀಯ ಸಹಾಯವು ಸಿಗದೆ ವಿಪತ್ತಿಗೊಳಗಾಗುವರೆಂಬದನ್ನು ನಾವು ಕಂಡು ಕನಿಕರಬಡುತ್ತೇವೆ. ಇಂಥ ಪ್ರಸಂಗದಲ್ಲಿ ಶಿಕ್ಷಕರಿಗೆ ತಕ್ಕಮಟ್ಟಿಗಾದರೂ ಆಯುರ್ವೇದದ ಜ್ಞಾನವಿದ್ದರೆ ಅವರಿಂದ ಸಮಾಜಕ್ಕೆ ತುಸುಮಟ್ಟಿಗಾದರೂ ಸಹಾಯವಾದೀತೆಂದು ನಾನು ಭಾವಿಸುತ್ತೇನೆ. ಹಿಂದಿನ ಲೇಖದಲ್ಲಿ ಹೇಳಿದ, ಪ್ರಸ್ತುತ ಲೇಖದಲ್ಲಿ ಹೇಳುತ್ತಿರುವ ವಿಷಯವು ಕೇವಲ ಆಯುರ್ವೇದವನ್ನು ಅರಿಯದವರಿಗಷ್ಟೇ ಅಲ್ಲದೆ ಬಲ್ಲವರಿಗಾಗಿ ಅಲ್ಲ. ವೈದ್ಯಕೀಯ ಜ್ಞಾನವನ್ನು ಹೊಂದಬೇಕೆಂಬ ಅಭಿಲಾಷೆಯುಳ್ಳ ಶಿಕ್ಷಕ ಬಂಧುಗಳಿಗೆ ದಾರಿಯನ್ನು ತೋರಿಸುವದೇ ಇದರ ಉದ್ದೇಶವು. ಅಂಥವರು ಮೊದಲು ಕೆಲವು ದಿವಸ ಕೇವಲ ಹಲಕೆಲವು ರೋಗಿಗಳ ನಿರೀಕ್ಷಣೆ ಮಾಡುತ್ತಿರಬೇಕು. ಅವರು ಅನುಭವಿಸುತ್ತಿರುವ ತೊಂದರೆ, ರೋಗದ ಬಾಹ್ಯಲಕ್ಷಣ, ಅವರ ಉಪಚಾರ, ಅವರ ಪಥ್ಯಪಾನ ಮುಂತಾದವುಗಳ ಕಡೆಗೆ ಲಕ್ಷ್ಯಗೊಡುತ್ತಿರಬೇಕು. ಎಲ್ಲೆಲ್ಲಿ ಎಂಥ ರೋಗಿಗಳಿದ್ದಾರೆಂಬದನ್ನು ಮನಃಪೂರ್ವಕವಾಗಿ ಹುಡುಕಿ ಅವರೊಡನೆ ಸಾಮಾನದಿಂದ ಮಾತಾಡಿ ಅವರ ತೊಂದರೆಗಳನ್ನೂ, ತಮಗೆ ಕಂಡ ಲಕ್ಷಣಗಳನ್ನೂ ಸಂಗ್ರಹಿಸುವ ಬುದ್ಧಿಯಿರಬೇಕು. ಹೀಗೆ ಕೆಲವು ದಿವಸಗಳ ಅನುಭವದಿಂದ ಸರ್ವಸಾಧಾರಣ ಯಾವ ಯಾವ ರೋಗಗಳು ಯಾವ ಯಾವ ಹೊರಲಕ್ಷಣಗಳುಳ್ಳವೆಂಬದು ತಿಳಿಯಹತ್ತುವದು. ಆ ಬಳಿಕ ಆಯುರ್ವೇದವನ್ನು ಬಲ್ಲ ತಜ್ಞ ಗುರುಗಳಲ್ಲಿ ತಮ್ಮ ಬಿಡುವಿನ ದಿವಸಗಳನ್ನು ಕಳೆಯಬೇಕು. ಅವರಲ್ಲಿ ಶಕ್ಯವಿದ್ದಮಟ್ಟಿಗೆ ಆಯುರ್ವೇದವನ್ನು ಸಾಂಗೋಪಾಂಗವಾಗಿ ಕಲಿಯಲಿಕ್ಕೆ ಪ್ರಯತ್ನಪಡಬೇಕು. ಆಯುರ್ವೇದವು ಜೀವತತ್ವಕ್ಕೆ ಸಂಬಂಧಿಸಿದ ಶಾಸ್ತ್ರವಾದ್ದರಿಂದ ಗುರುಮುಖದಿಂದ ಕಲಿಯಬೇಕೇ ಹೊರತು ಸ್ವತಃ ಕಲಿಯುವೆನೆಂಬ ಹೆಮ್ಮೆಯುವನಿಗೆ ಅದರ ರಹಸ್ಯವು ಎಂದೂ ತಿಳಿಯಲಾರದು. ಆದ್ದರಿಂದ ಗುರುಸೇವೆಯನ್ನು ಮಾಡಿ ಈ ವಿಷಯವನ್ನು ಸಂಪಾದಿಸುವದು ಅಗತ್ಯವಾದದ್ದು. ಹಿಂದಿನ ಕಾಲನಲ್ಲಿ ಅತ್ರೇಯ,

ಭಾರದ್ವಾಜ, ಅಗ್ನಿವೇಶ, ದಿವೋದಾಸ, ಧನ್ವಂತರಿ, ಸುಶ್ರುತ, ಚರಕ ಮೊದಲಾದ ಮಹಾ ಮಹಾ ಗುರುಗಳು ಆಯುರ್ವೇದವನ್ನು ಬೋಧಿಸುವದರಲ್ಲಿಯೇ ತಮ್ಮ ದೇಹವನ್ನು ಸವಿಸಿದರು. ಈಗಿನ ಕಾಲದ ಗುರುಗಳಲ್ಲಾದರೂ ಅವರ ಸ್ಮರಣೆ ಯುಳ್ಳವರು ಆಯುರ್ವೇದವನ್ನು ತಿಳಿದ ಮಟ್ಟಿಗೆ ಪ್ರತಿಫಲಾಪೇಕ್ಷೆಯಿಲ್ಲದೆ ಹೇಳ ಬಹುದೆಂದು ನಾನು ಭಾವಿಸುತ್ತೇನೆ. ಸುದೈವದಿಂದ ಆಯುರ್ವೇದವನ್ನು ಶಾಸ್ತ್ರೀಯ ದೃಷ್ಟಿಯಿಂದ ಅಭ್ಯಾಸ ಮಾಡಿದ ವೈದ್ಯ ಪಂಡಿತರು ವಿರಲವಾಗಿಯೇ ಆಗಲೊಲ್ಲರೇಕೆ ಬೇರೆ ಬೇರೆ ಪ್ರಾಂತಗಳಲ್ಲಿ ಇದ್ದೇ ಇರುವರು. ಅಂಥವರ ಸಹ ವನ್ನು ನಮ್ಮ ಶಿಕ್ಷಕ ಬಂಧುಗಳು ತಮ್ಮ ಬಿಡುವಿನ ವೇಳೆಯಲ್ಲಿ ಸಾಧಿಸಿಕೊಂಡು ವಿಷಯ ಗ್ರಹಣ ಮಾಡಬೇಕೆಂದು ಅಪೇಕ್ಷಿಸುತ್ತೇನೆ.

ಆಯುರ್ವೇದ ಗ್ರಂಥಗಳು ಮೂಲತಃ ಸಂಸ್ಕೃತ ಭಾಷೆಯಲ್ಲಿಯೇ ವಿಪುಲ ವಾಗಿವೆ. ಮರಾಠಿ, ಹಿಂದೀ ಭಾಷೆಗಳಲ್ಲಿಯೂ ಸಾಕಷ್ಟಿವೆ. ಆದರೆ ಕನ್ನಡ ದಲ್ಲಿ ಮಾತ್ರ ಸಶಾಸ್ತ್ರೀಯ ಆಯುರ್ವೇದ ಗ್ರಂಥಗಳು ಅತಿ ವಿರಲವೆಂಬದನ್ನು ದುಃಖದಿಂದ ಹೇಳಬೇಕಾಗಿದೆ. ಗುಜರಾಥಿ, ಆಂಧ್ರ, ತಮಿಳು ಭಾಷೆಗಳಲ್ಲಿಯೂ ಇರಬಹುದು. ಆದರೆ ಲೇಖಕನಿಗೆ ಆ ಭಾಷೆಗಳಲ್ಲಿಯ ಗ್ರಂಥಗಳನ್ನೋದುವ ಯೋಗವೊದಗಿಲ್ಲ. ಶಿಕ್ಷಕರು ಯಾವ ಭಾಷೆಯನ್ನು ಬಲ್ಲರೋ ಆ ಭಾಷೆಯ ಗ್ರಂಥಗಳನ್ನು ಸಂಗ್ರಹಿಸಬೇಕು. ಗ್ರಂಥಗಳನ್ನು ಸಂಗ್ರಹಿಸುವಾಗಾದರೂ ಕ್ರಮ ವರಿತು ಶಕ್ಯವಿದ್ದ ಮಟ್ಟಿಗೆ ಸಂಗ್ರಹಿಸಬೇಕು. ಆ ವಿಷಯವನ್ನೇ ಕೆಳಗೆ ತಿಳಿದ ಮಟ್ಟಿಗೆ ವಿವರಿಸುವೆನು.

ಮೊದಲು ರೋಗವೆಂದರೇನು? ರೋಗದ ಹುಟ್ಟುವಿಕೆಯು ಹೇಗಾಗುವದು? ಎಂಬದನ್ನು ತಿಳಕೊಳ್ಳಲಿಕ್ಕೆ ಯೋಗರತ್ನಾಕರ, ಭೈಷಜ್ಯರತ್ನಾವಳಿ, ವೈದ್ಯತ್ರ್ಯಂಬ ಕೀಯ ಆಯುರ್ವೇದಸಾರ ಮುಂತಾದ ಗ್ರಂಥಗಳನ್ನು ಸಂಗ್ರಹಿಸಿ ಓದಿ ಸಂಶಯ ಬಂದ ಭಾಗಗಳನ್ನು ಗುರುಗಳಿಂದ ತಿಳಿದುಕೊಳ್ಳುತ್ತ ವ್ಯವಹಾರದಲ್ಲಿ ಓದಿದ್ದರ ಅನುಭವಗಳನ್ನು ನಿರೀಕ್ಷಿಸುತ್ತಿರಬೇಕು. ರೋಗದ ಉತ್ಪತ್ತಿಯು ತಿಳಿದ ತರು ವಾಯ ಆ ತರಹದ ರೋಗಬಂದ ಮನುಷ್ಯನಲ್ಲಿ ಯಾವ ಲಕ್ಷಣಗಳುಕಾಣುವವು? ರೋಗಿಯನ್ನು ಎಷ್ಟು ವಿಧದಿಂದ ಪರೀಕ್ಷಿಸಬೇಕು? ಮುಂತಾಗಿ ವಿಚಾರವು ಹುಟ್ಟುವದು ಸಹಜವಾದದ್ದು. ನಾಡೀ, ಮೂತ್ರ, ಮಲ, ಜಿಹ್ವೆ, ಶಬ್ದ, ಸ್ಪರ್ಶ, ನೇತ್ರ, ಆಕೃತಿ ಹೀಗೆ ಎಂಟು ವಿಧದಿಂದ ಪರೀಕ್ಷಿಸಬೇಕೆಂದು ವೃದ್ಧ ವೈದ್ಯಾಧಾರ

ವೆ. ಆದ್ದರಿಂದ ಮೊದಲು ಗುರುಮುಖದಿಂದ ನಾಡೀ ಜ್ಞಾನದ ಬಗ್ಗೆ ಹೆಚ್ಚಾಗಿ ಅಭ್ಯಾಸ ಮಾಡಬೇಕು ಅದು ಲಗು ಅವಗಾಹನೆಗೆ ಬರತಕ್ಕ ವಿಷಯವಲ್ಲ; ಬಹು ಗಹನವೂ ಮಹತ್ವದ್ದೂ ಆಗಿದೆ. ವೀಣೆಯ ತಂತಿಗಳಿಂದ ಹೇಗೆ ಸಮಸ್ತ ರಾಗ ಗಳನ್ನು ತಿಳಿಯಲಿಕ್ಕೆ ಬರುವದೋ, ಎಂದರೆ ವೀಣೆಯ ತಂತಿಗಳು ಸಮಸ್ತ ರಾಗಗ ಳನ್ನು ಹೇಗೆ ಪ್ರಕಾಶಗೊಳಿಸುವವೋ ಹಾಗೆ ಹಸ್ತದಲ್ಲಿ (ಮಣಿ ಬಂಧದಲ್ಲಿ) ಇದ್ದ ನಾಡಿಗಳು ಸಮಸ್ತರೋಗಗಳನ್ನು ಪ್ರಕಾಶಗೊಳಿಸುವವೆಂದು ಯೋಗರತ್ನಾಕರ ದಲ್ಲಿಯೂ ಕಣಾದನ ನಾಡೀ ಜ್ಞಾನಪ್ರಕಾಶದಲ್ಲಿಯೂ ಚನ್ನಾಗಿ ವರ್ಣಿಸಿದೆ. ಆದ್ದ ರಿಂದ ನಾಡೀ ಜ್ಞಾನವಿಷಯವಾಗಿ ಯೋಗರತ್ನಾಕರ, ಕಣಾದನ ನಾಡೀವಿಜ್ಞಾನ ಪ್ರಕಾಶ, ಶಾರ್ಙ್ಗಧರ ಸಂಹಿತೆಯಲ್ಲಿಯ ನಾಡೀ ಜ್ಞಾನಭಾಗ, ಭಾವ ಪ್ರಕಾಶ ದಲ್ಲಿಯ ನಾಡೀ ಜ್ಞಾನ ಭಾಗ ಇವುಗಳನ್ನು ಅತ್ಯವಶ್ಯವಾಗಿ ಓದುತ್ತಲೂ ಆದ ರಂತೆ ಅನೇಕ ರೋಗಿಗಳ ನಾಡಿಗಳನ್ನು ಪರೀಕ್ಷಿಸುತ್ತಲೂ ಸಂಶಯಗಳನ್ನು ಗುರು ಗಳಿಂದ ನಿವಾರಿಸಿಕೊಳ್ಳುತ್ತಲೂ ಸಾಗತಕ್ಕದ್ದು. ಬಳಿಕ ಇನ್ನುಳಿದ ೭ ವಿಧಗಳ ಬಗ್ಗೆ ಮಾಧವನಿದಾನ ಎಂಬ ಗ್ರಂಥವನ್ನು ಓದುವದು ಅತ್ಯವಶ್ಯವಾದದ್ದು. ಸಿದ್ಧಿಸಾರ, ಭಾವಚಿಂತಾರತ್ನ, ಯೋಗಚಿಂತಾಮಣಿ, ಅಷ್ಟಾಂಗ ಹೃದಯಗಳು ಈ ವಿಷಯ ವನ್ನು ಹೇಳುತ್ತಿದ್ದರೂ ಮಾಧವನಿದಾನದಿಂದ ಸುಲಭವಾಗಿಯೂ ಸಮಂಜಸ ವಾಗಿಯೂ ತಿಳಿಯಬರುವದರಿಂದ ಮೊದಲು ಈ ಗ್ರಂಥವನ್ನು ಆಮೂಲಾಗ್ರವಾಗಿ ಮನನ ಮಾಡಿಕೊಂಡು ತರುವಾಯ ಬೇಕಾದರೆ ಉಳಿದ ಗ್ರಂಥಗಳನ್ನು ಓದಲಿಕ್ಕೆ ಅಡ್ಡಿಯಿಲ್ಲ.

ರೋಗಗಳು, ರೋಗದ ಲಕ್ಷಣಗಳು ಇವುಗಳ ಬಗ್ಗೆ ತಕ್ಕಷ್ಟು ತಿಳುವಳಿಕೆ ಯಾದ ಬಳಿಕ ಔಷಧಗಳ ಜ್ಞಾನ ಮಾಡಿಕೊಳ್ಳಬೇಕು. ಔಷಧಗಳಲ್ಲಿ ಸೇಂದ್ರಿಯ ನಿರಿಂದ್ರಿಯಗಳೆಂದು ಎರಡು ವಿಧವು. ಸೇಂದ್ರಿಯ ಔಷಧಗಳು ವನಸ್ಪತಿ, ಪ್ರಾಣಿ ಗಳ ವಿಷ್ಟೆ, ಕೂದಲು ಮುಂತಾದುವು. ನಿರಿಂದ್ರಿಯಗಳೆಂದರೆ ಧಾತುಗಳು, ಉಪ ಧಾತುಗಳು, ವಿಷಗಳು, ಉಪವಿಷಗಳು; ರತ್ನಗಳು, ಉಪರತ್ನಗಳು ಮುಂತಾದುವು. ಮೊದಲು ವನಸ್ಪತಿಗಳ ಬಗ್ಗೆ ಜ್ಞಾನಮಾಡಿಕೊಳ್ಳುವದರ ಸಲುವಾಗಿ "ವನೌಷಧಿ ಗುಣಾದರ್ಶ" ವೆಂಬ ಗ್ರಂಥದ ಒಂಭತ್ತು ಭಾಗಗಳನ್ನೂ, ಸಚಿತ್ರ ಮೂಲಿಕಾ ಗ್ರಂಥವನ್ನೂ, ಮದನಪಾಲ ನಿಘಂಟನ್ನೂ, ಬೃಹನ್ನಿಘಂಟನ್ನೂ ಸಂಗ್ರಹಿಸಿ ಓದ ಬೇಕು. ಸೃಷ್ಟಿಯಲ್ಲಿ ಪ್ರತ್ಯಕ್ಷ ವನಸ್ಪತಿಗಳನ್ನು ನಿರೀಕ್ಷಿಸಿ ಅವುಗಳ ಭೇದಾ

ಭೇದಗಳನ್ನೂ ಗುಣಾವಗುಣಗಳನ್ನೂ ಪ್ರಯೋಜನವನ್ನೂ ಅರಿತುಕೊಳ್ಳಬೇಕು. ಹುಳ ಹತ್ತಿದ ಸುಟ್ಟ, ಕೊಳೆತ ವನಸ್ಪತಿಗಳನ್ನು ಎಂದೂ ಔಷಧಗಳಲ್ಲಿ ಉಪಯೋಗಿಸಬಾರದು. ಬಹಳ ದಿವಸದ ಹಳೆಯ (ಒಣಗಿ ಮುಗ್ಗುಮುಗ್ಗಾದ) ವನಸ್ಪತಿಗಳನ್ನೂ ಉಪಯೋಗಿಸಕೂಡದೆಂಬ ಬಗ್ಗೆ ನೆನಪಿಡತಕ್ಕದ್ದು. ನಿರಿಂದ್ರಿಯ ಔಷಧಗಳ ಬಗ್ಗೆ ಅನೇಕ ಗ್ರಂಥಗಳಿರುವವು. ಅವುಗಳಲ್ಲಿ ಶಕ್ಯವಿದ್ದ ಮಟ್ಟಿಗೆ ಮೊದಲು ಶಾರ್ಙ್ಗಧರ ಸಂಹಿತೆ, ಭಾವಪ್ರಕಾಶ, ಯೋಗರತ್ನಾಕರ, ರಸರತ್ನಾಕರ, ರಸಚಂಡಾಂಶು, ರಸರತ್ನಸಮುಚ್ಚಯ, ಸಿದ್ಧಿಸಾರ, ಔಷಧಗುಣ ಧರ್ಮಕ್ರಿಯಾ ಶಾಸ್ತ್ರ, ಭೈಷಜ್ಯರತ್ನಾವಳಿ, ರಸಾಯನ ಸಾರಸಂಗ್ರಹ, ವೃದ್ಧವೈದ್ಯ, ಮೊದಲಾದ ಮಹತ್ವದ ಗ್ರಂಥಗಳನ್ನು ಸಂಗ್ರಹಿಸಿ ಗುರುಮುಖದಿಂದ ಸರ್ವ ವಿಷಯಗಳನ್ನು ಮನದಟ್ಟು ಮಾಡಿಕೊಳ್ಳತಕ್ಕದ್ದು. ಸ್ವರಸ, ಕಲ್ಕ, ಹಿಮ, ಫಾಂಟ, ಕ್ವಾಥ, ಚೂರ್ಣ, ಭಸ್ಮ, ರಸಾಯನ, ಕುಪೀಸ್ಥರಸಾಯನ, ಮಾತ್ರೆ, ಗುಟಿಕಾ, ವಟಿಕಾ, ಆಸವ, ಅರಿಷ್ಟ, ಅಂಜನ, ಘೃತ, ತೈಲ, ಅವಲೇಹ, ಪಾಕ, ವಡಿ, ಸತ್ವ, ಕ್ಷಾರ ಮೊದಲಾದ ಸಮಸ್ತ ಔಷಧಗಳ ಪರಿಚಯವನ್ನೂ ಸಿದ್ಧಪಡಿಸುವ ಕೃತಿಗಳನ್ನೂ ಪ್ರತ್ಯಕ್ಷ ಮಾಡಿಕೊಳ್ಳುವದಕ್ಕೆ ವೈದ್ಯರಾಗಬೇಕೆನ್ನುವವರು ಎಂದೂ ಅಲಕ್ಷಿಸಕೂಡದು. ಔಷಧೀ ಕರಣ ವಿದ್ಯೆಗಾಗಿ ಗುರುಗಳ ಎದುರಿನಲ್ಲಿ ಹಲವು ಸಾರೆ ಪ್ರಯೋಗಗಳನ್ನು ಮಾಡಿ ಮನಗಂಡಿರಬೇಕು. ಅಂದರೆ ಅದರಲ್ಲಿ ತಕ್ಕ ಮಟ್ಟಿಗಾದರೂ ಜ್ಞಾನವು ಬರುವದು. ಇನ್ನೂ ಹೆಚ್ಚಿಗೆ ಜ್ಞಾನಮಾಡಿಕೊಳ್ಳಬೇಕೆಂಬ ಅಭಿಲಾಷೆಯೂ ಅನುಕೂಲತೆಯೂ ಇದ್ದರೆ, ವಾಗ್ಭಟ, ಸುಶ್ರುತ, ಚರಕ ಸಂಹಿತೆ, ಆಯುರ್ವೈದ್ಯಕಲಾನಿಧಿ, ಭಿಷಗ್ಭುವನ, ಬಾಲರೋಗಚಿಕಿತ್ಸಾಸಾರ, ಸ್ತ್ರೀರೋಗ ಚಿಕಿತ್ಸಾಸಾರ, ಗರ್ಭಿಣೀ ಶಿಶುಸಂಗೋಪನ ಮುಂತಾದ ಗ್ರಂಥಗಳನ್ನು ಸಂಗ್ರಹಿಸಿ ಅಭ್ಯಾಸಮಾಡಬೇಕು.

ಆಯುರ್ವೇದ ಅಭ್ಯಾಸ ಮಾಡುವವರು ಅಭ್ಯಾಸ ಮಾಡುತ್ತಿರುವಾಗಲೇ ತಾವು ವೈದ್ಯರಾದೆವೆಂಬ ಹೆಮ್ಮೆಯಿಂದ ಒಮ್ಮೆಲೇ ಔಷಧ ಕೊಟ್ಟು ಪ್ರಯೋಗ ಮಾಡಿ ನೋಡಬಾರದು. ಸಂಪೂರ್ಣ ಕಲಿಯುವವರೆಗೆ ಕೇವಲ ನಿರೀಕ್ಷಣೆಯಲ್ಲಿರಬೇಕು. ಕಲಿಯುವದಾದ ಬಳಿಕ ಗುರುಗಳ ಆಜ್ಞೆಯನ್ನು ಪಡೆದು ಸ್ವತಂತ್ರವಾಗಿ ಔಷಧಯೋಜನೆ ನಡೆಯಿಸಲಿಕ್ಕೆ ಅಡ್ಡಿಯಿಲ್ಲ. ಚೆನ್ನಾಗಿ ಜ್ಞಾನವನ್ನು ಮಾತ್ರ ಪಡೆದಿರಬೇಕು. ಕೇಳಿದ ಮಂತ್ರ ಬರದೆ ಹಾವಿನ ಗುದ್ದಿನಲ್ಲಿ ಕೈ ಇಟ್ಟ

ಹಾಗಾಗಬಾರದು. ಸಂಪೂರ್ಣ ಜ್ಞಾನ ಸಂಪಾದಿಸಿದ ಹೊರತು ಹೆಚ್ಚಿನ ಉದ್ಯೋಗಕ್ಕೆ ಕೈಹಚ್ಚಬಾರದು. ಕೇವಲ ಪ್ರಥಮ ಚಿಕಿತ್ಸಕರಂತೆ ಚಿಕಿತ್ಸೆಮಾಡಲಿಕ್ಕೆ ಅಡ್ಡಿಯಿಲ್ಲ. ಆರಂಭದಲ್ಲಿ ನಾನು ಎಲ್ಲಾ ಬಲ್ಲೆನೆಂಬ ಹೆಮ್ಮೆಯಿಂದ ಘನವಾದ ರೋಗಗಳ ಬಗ್ಗೆ ಚಿಕಿತ್ಸೆ ನಡೆಯಿಸಿದರೆ ಅನರ್ಥವಾಗುವ ಸಂಭವವುಂಟು. ಆದ್ದರಿಂದ ಅಂಥ ಪ್ರಸಂಗದಲ್ಲಿ ಆ ತರಹದ ರೋಗಿಗಳನ್ನು ತಜ್ಞ ವೈದ್ಯರಲ್ಲಿ ಕಳಿಸಲಿಕ್ಕೆ ಪ್ರಯತ್ನಪಡಬೇಕು. ಆದರೂ ಈ ಉದ್ಯೋಗವನ್ನು ಕೈಕೊಂಡ ಪ್ರಾಥಮಿಕ ಶಿಕ್ಷಕರು ಮೊದಮೊದಲು ತಾವು ಪ್ರಥಮ ಚಿಕಿತ್ಸಕರೆಂಬುದನ್ನು ಮರೆಯಕೂಡದು. ವೈದ್ಯಕೀಯ ವ್ಯವಸಾಯವು ಶಿಕ್ಷಕರಿಗೆ ಉಪಉದ್ಯೋಗವಾಗಿದ್ದು ತಮ್ಮ ಮುಖ್ಯ ಕರ್ತವ್ಯದ ಕಡೆಗೆ ಎಂದೂ ಅಲಕ್ಷಿಸಕೂಡದು. ದ್ರವ್ಯದಾಸೆಗೆ ಈ ಕರ್ತವ್ಯವನ್ನು ಕೈಕೊಂಡಿರಬಾರದು. ಕೇವಲ ಪರಸಹಾಯವೆಂಬರ್ಥದಲ್ಲಿ ಈ ಉದ್ಯೋಗವನ್ನು ಕೈಕೊಂಡರೆ ಅವನು ಪೂಜ್ಯನಾಗುವನು. ಅವನಿಗೆ ಹತ್ತುವ ಔಷಧ ಖರ್ಚ ಮುಂತಾಗಿ ಜನರು ಅತ್ಯಾದರದಿಂದ ಕೊಟ್ಟೇ ಕೊಡುವರು. ಹೆಚ್ಚಿನ ಆಸೆಗೆ ಬಿದ್ದರೆ ಈ ಉದ್ಯೋಗದಲ್ಲಿ ಯಶಸ್ಸು ಸಿಗಲಾರದು.

ಆಯುರ್ವೇದ ಚಿಕಿತ್ಸೆಯ ಕ್ರಮದಲ್ಲಿ ಸಂಪೂರ್ಣ ಜಾಗರೂಕರಾಗಿರಬೇಕು. ಕ್ರಮವರಿತು ಶಾಸ್ತ್ರದಂತೆ ಚಿಕಿತ್ಸೆ ನಡೆಯಿಸಬೇಕು. ವಿಚಾರಪೂರ್ವಕವಾಗಿ ಶಾಸ್ತ್ರದಲ್ಲಿ ಹೇಳಿದಂತೆ ರೋಗವಿಮರ್ಶೆ ಮಾಡಬೇಕು. ಗ್ರಾಂಥಿಕ ಸನ್ನಿಪಾತ,(ಪ್ಲೇಗು), ವಿಷಮಜ್ವರ, ತ್ರಯುಲ್ಬಣ ಸನ್ನಿಪಾತ, ಪಾಂಡು, ರಾಜಯಕ್ಷ್ಮ (ಕ್ಷಯ), ಅತಿಸಾರ, ಸಂಗ್ರಹಣಿಗಳಂಥ ದುರ್ಧರ ರೋಗಗಳಲ್ಲಿ ಪೂರ್ಣ ಅನುಭವವಿಲ್ಲದೆ ಕೈಹಾಕಕೂಡದು. ಔಷಧಗಳ ಮರ್ಮವನ್ನೂ ಅವುಗಳ ಹೆಚ್ಚು ಕಡಿಮೆಗಳ ಗುಣ ಪ್ರಭಾವಗಳನ್ನೂ ಚನ್ನಾಗಿ ಅರಿತಿರಬೇಕು. ಔಷಧವಾದರೂ ಶುದ್ಧವಾದದ್ದೂ, ಹೊಂದುವಂಥದ್ದೂ, ತಕ್ಕ ಪ್ರಮಾಣದ್ದೂ, ತಕ್ಕವೇಳೆಗೆ ಕೊಡುವಂಥದೂ ಇರಬೇಕು. ಕಚ್ಚಾ ರಸಾಯನಾದಿ (ಪಾರದ ಮಿಶ್ರಔಷಧ) ಗಳನ್ನು ಎಂದೂ ಉಪಯೋಗಿಸಕೂಡದು. ಅವುಗಳಿಂದ ಅನರ್ಥಗಳುಂಟಾಗುವವೆಂಬುದನ್ನು ಲಕ್ಷ್ಯದಲ್ಲಿಡಬೇಕು. ಹಸಿಬಿಸಿ ವೈದ್ಯರು ಪೂರ್ಣ ವಿಚಾರಮಾಡದೆ ಕಚ್ಚಾ ರಸಾಯನಾದಿಗಳನ್ನು ಕೊಟ್ಟು ರೋಗಿಯನ್ನು ಅನರ್ಥಕ್ಕೆ ಗುರಿಮಾಡಿದ ಎಷ್ಟೋ ಉದಾಹರಣೆಗಳಿವೆ. ಇಂಥ ಮಹನೀಯರಿಂದಲೇ ಆಯುರ್ವೇದದ ಮತ್ತು ಆಯುರ್ವೇದಪಂಡಿತರ ಹೆಸರು ಕೆಟ್ಟುಹೋಗುವ ಸಂಭವವಿದೆ. ಈ ವಿಷಯದಲ್ಲಿ ತುಂಬ ಜಾಗರೂಕರಾಗಿರತಕ್ಕದ್ದು.

ಪ್ರತಿಯೊಂದು ಔಷಧವನ್ನು ತಾನೇ ಸಿದ್ಧಪಡಿಸುವ ಕ್ರಮವನ್ನು ಕಲಿತ್ತಿರಬೇಕೆಂಬುದೇನೋ ನಿಜ; ಆದರೆ ಪ್ರಯೋಗಶಾಲೆಗಳಿಲ್ಲದೆ ನಮ್ಮಿಂದ ಮಾತ್ರೆ ಕುಪೀಸ್ಥ ರಸಾಯನಗಳಂಥ ಮಹತ್ವದ ಔಷಧಗಳನ್ನು ಇಲ್ಲಿ ಮಾಡಿಕೊಳ್ಳಲಿಕ್ಕೆ ಆಗಲಾರದು, ಇಂಥ ಪ್ರಸಂಗದಲ್ಲಿ ಕೆಳಗೆ ಹೇಳಿದ ಹಿಂದುಸ್ತಾನದಲ್ಲಿ ಪ್ರಸಿದ್ಧಿ ಹೊಂದಿದ ಆಯುರ್ವೇದ ಸಿದ್ಧೌಷಧಿಗಳ ಕಾರಖಾನೆಗಳಿಂದ ಔಷಧಗಳನ್ನು ತರಿಸಿಕೊಳ್ಳಬಹುದು. ಅವು:- ಪನವೇಲದ ಧೂತಪಾಪೇಶ್ವರ ಫಾರ್ಮಸಿ, ಝೂಂಡೂ ಫಾರ್ಮಸಿ, ಊಂಝಾ ಫಾರ್ಮಸಿ, ಬಡೋದಾ ಕೆಮಿಕಲ್ ವರ್ಕ್ಸ, ಗೊಂಡಾಲಾ, ಕಲಕತ್ತಾ ಬೋಸಕಂಪನಿ, ಡಾ। ಗಣನಾಥಸೇನ ಕಲ್ಪತರು ಪ್ಯಾಲೇಸ ಕಲಕತ್ತಾ, ಜಾಮನಗರ, ಅಹಮ್ಮದನಗರ ಆಯುರ್ವೇದ ಫಾರ್ಮಸಿ, ದಕ್ಷಿಣದಲ್ಲಿ ಇನ್ನೆಷ್ಟೋ ಕಂಪನಿಗಳಿವೆ. ಇಂಥ ಕಂಪನಿಗಳ ಶುದ್ಧೌಷಧಗಳನ್ನು ಉಪಯೋಗಿಸಿದರೆ ಯಾವ ತೊಂದರೆಗಳೂ ಬರಲಾರವು. ನಾವು ಕೈಯಿಂದ ಮಾಡಿಕೊಳ್ಳುವದಾದರೆ ಶುದ್ಧ ವನಸ್ಪತಿಗಳು ಸಿಗುವದಿಲ್ಲ. ಧಾತೂಪಧಾತು ವಿಷೋಪವಿಷಗಳ ಜಾರಣ ಮಾರಣ ಕ್ರಿಯೆಗಳು ಬಹುತರವಾಗಿ ಸಾಧಿಸುವದು ಕಠಿಣ. ಆದ್ದರಿಂದ ಕಚ್ಚಾ ಔಷಧಿಗಳನ್ನು ಉಪಯೋಗಿಸಿ ರೋಗಿಗಳನ್ನು ದುಃಖಕ್ಕೀಡುಮಾಡಿ ಹೆಸರು ಕೆಡಿಸಿಕೊಳ್ಳುವಂಥ ಕೆಲಸಕ್ಕೆ ಕೈಹಾಕಬಾರದೆಂದು ನನ್ನ ಮತ.

ವೈದ್ಯನಾಗಬೇಕೆನ್ನುವವನಲ್ಲಿರಬೇಕಾದ ಕೆಲವು ಗುಣಗಳ ಬಗ್ಗೆ ಇಲ್ಲಿ ಸ್ವಲ್ಪ ವಿವೇಚಿಸುವದು ಸಯುಕ್ತಿಕವೆಂದು ತೋರುತ್ತದೆ. ವೈದ್ಯನಲ್ಲಿ ಸದ್ಧರ್ಮಬುದ್ಧಿಯೂ ಸದಾಚಾರವೂ ಭೂತದಯೆವೂ ನೆಲೆಗೊಂಡಿರಬೇಕು. ಚಟುವಟಿಕೆ; ಸೂಕ್ಷ್ಮನಿರೀಕ್ಷಣೆ, ಪರೇಂಗಿತ ಜ್ಞಾನಗಳಿರಬೇಕು. ಜನರನ್ನು ಹಚ್ಚಿಕೊಳ್ಳುವ ಸ್ವಭಾವವಿರಬೇಕು. ಹೊರಕೈಯಿಂದ ಹೊಡೆಯುವ ಗುಣವಿರಬಾರದು. ಅಲ್ಪ ಸಂತೋಷಿಯಾಗಿರಬೇಕು. ರೋಗಿಯು ತನ್ನ ಮನೆಯವನೇ ಎಂಬ ಭಾವನೆಯಿಂದ ಚಿಕಿತ್ಸೆ ಮಾಡುತ್ತಿರಬೇಕು. ಧೈರ್ಯವಿರಬೇಕು. ಉತ್ಸಾಹವೂ ಆಸ್ಥೆಯೂ ಯಾವಾಗಲೂ ಅವನಲ್ಲಿ ಎಡಗೈ ಬಲಗೈಯಂತೆ ಸಿದ್ಧವಾಗಿರಬೇಕು. ರೋಗಿಯ ಕೂಡ ಯಾವಾಗಲೂ ಪ್ರೀತಿಯಿಂದಲೂ ಅವನಿಗೆ ಧೈರ್ಯ ಬರುವಂತೆಯೂ ಮಾತಾಡಬೇಕು. ರೋಗಿಯ ಎದುರಿನಲ್ಲಿ ಎರಡನೆಯವರಕೂಡ ರೋಗಿಗೆ ಸಂಶಯಬರುವಂತೆ ಗುಜು ಗುಜು ಮಾತಾಡಕೂಡದು. ರೋಗಿಯ ಮರಣವನ್ನು ಅವನಿಗೆ ಎಂದೂ ತಿಳಿಸಕೂಡದು. ಅಂತೂ ವೈದ್ಯಕೀಯ ವ್ಯವಹಾರ ಜ್ಞಾನದ ಎಷ್ಟು ಗುಣಗಳನ್ನು ಸಂಪಾದಿಸಬೇಕೋ ಅವೆಲ್ಲವನ್ನೂ ಪಡೆದಿರಬೇಕು.

ಮೇಲೆ ವಿವರಿಸಿದ ರೀತಿಯಿಂದ ತಕ್ಕಮಟ್ಟಿಗೆ ಆಯುರ್ವೇದವನ್ನು ಅಭ್ಯಾಸಿಸಬೇಕೆಂಬ ಆತುರವುಳ್ಳ ನನ್ನ ಶಿಕ್ಷಕ ಬಂಧುಗಳಿಗೆ ತಿಳಿದಮಟ್ಟಿಗೆ ವಿವೇಚಿಸಿರುವೆನು. ಇಷ್ಟರಿಂದಲೇ ಸಂಪೂರ್ಣ ಆಯುರ್ವೇದ ಮಾರ್ಗವನ್ನು ತಿಳಿಸಿದಂತಾಯಿತೆಂದು ದಯಮಾಡಿ ಯಾರೂ ಭಾವಿಸಕೂಡದು. ಆಯುರ್ವೇದದ ಬಗ್ಗೆ ಆಸ್ಥೆಯುಳ್ಳ ಶಿಕ್ಷಕರು ಈ ಕ್ರಮವನ್ನು ಹಿಡಿದು ಸಾಗಿದರೆ ಮಾರ್ಗವು ಸುಗಮವಾದೀತೆಂದು ನಾನು ಭಾವಿಸುತ್ತೇನೆ.

ಶ್ರೀಧನ್ವಂತರಿ ಪಾದಾರ್ಪಣಮಸ್ತು

ಶಿಶು ಶಾಲೆಗಳು

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು).

ಚಿಕ್ಕಮಕ್ಕಳಿಗೆ ಕೆಲಸ ಮಾಡುವದರಲ್ಲಿ ಆಸ್ಥೆ ಬಹಳ. ಆದ್ದರಿಂದ ಆ ಮಗುವು ಸಮಯ ದೊರೆದಾಗಲೆಲ್ಲ ನೀರಾಟವಾಡಲು ಬಯಸುವದು; ಕಾಗದದ ದೋಣಿಗಳನ್ನು ಮಾಡಿ ತೇಲಿಬಿಡುವದು; ಗುಳ್ಳೆಗಳನ್ನು ಊದಿ ಹಾರಿಸುವದು; ಬಟ್ಟೆಗಳನ್ನು ತೊಯಿಸುವದು; ಅಕ್ಕಿ ಬೇಳೆ ಮೊದಲಾದ ಸಾಮಗ್ರಿಗಳನ್ನು ಒಂದ ರೊಡನೊಂದು ಕೂಡಿಸುವದು.

ಚಿಕ್ಕಮಗುವು ಬೇರೆಯವರು ಮಾಡುತ್ತಿರುವ ಬೇರೆ ಬೇರೆ ಕೆಲಸಗಳನ್ನು ನೋಡಿ ಆನಂದಪಡುವದು. ಪರರು ಮಾಡುವ ಕೆಲಸಗಳ ಕ್ರಮವನ್ನೂ ತಾನು ಮಾಡುತ್ತಿರುವ ಕೆಲಸಗಳ ರೀತಿಯನ್ನೂ ಹೋಲಿಸಿ ನೋಡುವದು. ಒಳ್ಳೆಯ ಕೆಲಸಗಳಿಗಿಂತಲೂ ಕೆಟ್ಟ ಕೆಲಸಗಳಲ್ಲಿಯೇ ಅದಕ್ಕೆ ಅಭಿರುಚಿ ಹೆಚ್ಚು. ಅದು ಮನೆಯೊಳಗಿನ ಪದಾರ್ಥಗಳನ್ನು ಅಸ್ತವ್ಯಸ್ತವಾಗಿ ಹರಡುವದರಲ್ಲಿ ಪ್ರೀತಿಯನ್ನು ತೋರಿಸುವಷ್ಟು ಕ್ರಮವಾಗಿ ಜೋಡಿಸಿಡುವದರಲ್ಲಿ ಆಸ್ಥೆಯನ್ನು ತೋರಿಸಲಾರದು. ಒಬ್ಬ ಹುಡುಗನು ಶಿಕ್ಷಿಕೆಯ ಕೆಲಸ ಮಾಡುತ್ತಿರುವ ತನ್ನ ಅತ್ತೆಯನ್ನು ಕುರಿತು— "ನನಗೆ ನಿಮ್ಮ ಹುಡುಗರು ಮಾಡುತ್ತಿರುವ ಕೆಟ್ಟ ಕೆಲಸಗಳನ್ನೆಲ್ಲ ಹೇಳು" ಎಂದ ನಂತೆ. ಇದು ಮಕ್ಕಳ ಸ್ವಭಾವದ ಒಂದು ಗುರುತು. ಮತ್ತು ಈ ಪ್ರವೃತ್ತಿಯು

ಎಲ್ಲ ಮಕ್ಕಳಲ್ಲಿಯೂ ಸಾಮಾನ್ಯವಾಗಿ ಇದ್ದೇ ಇರುವದು; ದುಷ್ಟತನದ ಸಂಪರ್ಕವಿಲ್ಲದ ಕೇವಲ ಒಳ್ಳೆಯತನದಿಂದ ನಾವು ತೀರ ಸ್ವಲ್ಪ ಸಂಗತಿಗಳನ್ನು ಕಲಿಯುವೆವು.

ಕಥಾತ್ಮಕವಾದ ಮಾತುಕತೆಗಳಲ್ಲಿಯ ನಿಶ್ಚಿತವಾದ ಪದಪ್ರಯೋಗಗಳಲ್ಲಿ ಮಗುವಿಗೆ ಪ್ರೀತಿ ಬಹಳ. ಮತ್ತು ತನಗೆ ಗೊತ್ತಾಗಿರುವ ಯಾವದಾದರೊಂದು ಗದ್ಯದಲ್ಲಿ ಇಲ್ಲವೆ ಪದ್ಯದಲ್ಲಿ ಬರುವ ಶಬ್ದಯೋಜನೆಯನ್ನು ಬದಲಿಸಿದರೆ ಅದಕ್ಕೆ ಸಮಾಧಾನವಾಗದು. ಮಗುವಿಗೆ ಮಾತುಕತೆಗಳಲ್ಲಿ (ಶಬ್ದಗಳನ್ನೂ ವಾಕ್ಯಖಂಡಗಳನ್ನೂ ಆಡಿತೋರಿಸುವದರಲ್ಲಿ) ಅತಿಶಯ ಆಸ್ಥೆಯಿರುವದು.

ಆ ಮಗುವಿಗೆ ಪರರು ಮಾಡುವ ಕೆಲಸಗಳನ್ನು ಅವರಂತೆಯೇ ಅನುಕರಣ ಮಾಡುವದರಲ್ಲಿ ಪ್ರೀತಿಬಹಳ. ಹಾಗೆ ಮಾಡುವದರಿಂದ ಅದಕ್ಕೆ ಆ ಕೆಲಸಗಳ ಸಂಪೂರ್ಣ ಅನುಭವವುಂಟಾಗುವದು. ಹಾಗೆ ಅನುಕರಣ ಮಾಡಬೇಕಾದರೆ ಮಗುವು ಆ ಕಾರ್ಯವನ್ನು ಮೊದಲು ಲಕ್ಷ್ಯಪೂರ್ವಕವಾಗಿ ನಿರೀಕ್ಷಣೆ ಮಾಡಿರಬೇಕಾಗುವದು; ಮತ್ತು ಹಾಗೆ ಅನುಕರಣ ಮಾಡಲು ತುಂಬ ಬುದ್ಧಿವಂತಿಕೆಯೂ ಬೇರೆ ಬೇರೆ ಕಲ್ಪನೆಗಳೂ ಬೇಕಾಗುವವು.

ಇಷ್ಟೇ ಅಲ್ಲದೆ, ಆ ಮಗುವು ಹೆಚ್ಚು ವಯಸ್ಸಾದಾಗ ತಿಳಿದುಕೊಳ್ಳುವಂಥ ಹಾಗು ತೀರ ಮಸಕು ಮಸಕಾದ ಕಲ್ಪನೆ ಬರುವಂತೆ ತಿಳಿದುಕೊಳ್ಳುವಂಥ ಇನ್ನೂ ಅನೇಕ ಸಂಗತಿಗಳಿರುವವು. ತಾನು ಇರುವ ಸ್ಥಳದಲ್ಲಿ (ತನ್ನ ಮನೆಯಲ್ಲಿಯೇ) ಹಿಂದೆ ಅನೇಕರು ಇದ್ದರೆಂಬ ಕಲ್ಪನೆಯು ಅದಕ್ಕೆ ತುಂಬ ಬಿಗಿಯಾಗುವದು; ಅಂದರೆ ಆ ಮಾತನ್ನು ಅದು ಸ್ಪಷ್ಟವಾಗಿ ತಿಳಿದುಕೊಳ್ಳಲಾರದು. ಆದರೆ ತನ್ನ ಸುತ್ತಲಿನ ಜನರು ಇರುವಂತೆಯೇ ಬೇರೆ ಸ್ಥಳಗಳಲ್ಲಿಯೂ ಜನರು ವಾಸಿಸುವರೆಂಬ ಕಲ್ಪನೆಯು ಅದಕ್ಕೆ ಅಷ್ಟು ಅಸ್ಪಷ್ಟವಾಗಲಾರದು. ಭೂತ ಪಿಶಾಚಿಗಳ ಇಲ್ಲವೆ ದೇವತೆಗಳಿಗೆ ಸಂಬಂಧಿಸಿದ ಕಾಲ್ಪನಿಕ ಕಥೆಗಳನ್ನು ಅದು ನಿಜವೆಂದು ನಂಬಬಹುದು. ಒಂದು ದೃಷ್ಟಿಯಿಂದ ತನ್ನ ಮನಸ್ಸಿನೊಳಗಿನ ವಿಚಾರಗಳಿಗೆ ಸರಿ ಹೊಂದುವಂಥ ಆ ಕಥೆಗಳೊಳಗಿನ ವಿಚಾರಗಳನ್ನು ಅದು ನಿಜವೆಂದೇ ಭಾವಿಸುವದು; ಮತ್ತೊಂದು ದೃಷ್ಟಿಯಿಂದ ಆ ಕತೆಗಳಲ್ಲಿ ಹೇಳುವಂಥ ಕಾರ್ಯಗಳು ವ್ಯವಹಾರದಲ್ಲಿ ನಡೆದಿದ್ದು ಅವನ್ನು ನೋಡಿದ್ದರೆ ಅಂಥ ಕಾರ್ಯಗಳನ್ನು ಕುರಿತು ಹೇಳುವ ಮಾತುಗಳನ್ನು ಅದು ನಿಜವೆಂದು ನಂಬಬಹುದು. ರಾಕ್ಷಸರು ಅಥವಾ ಮನುಷ್ಯರು ಮುಂತಾದ

ರ ವಿಷಯದಲ್ಲಿಯೂ ಜನರು ಹಡಗಗಳಲ್ಲಿ ಕುಳಿತು ದೂರದೇಶಕ್ಕೆ ಹೋಗುವ ಂಬದನ್ನೂ ಆ ಹಡಗಗಳಲ್ಲಿಯೇ ಅವರು ತಿರುಗಿಬರುವರೆಂಬದನ್ನೂ ಆ ಮಗುವು ಸ್ಥೆಯಿಂದ ಕೇಳಿಕೊಳ್ಳುವದು.

ದೊಡ್ಡ ಬನಗಳಿಗೂ ಅರಣ್ಯಗಳಿಗೂ ಸಂಬಂಧಿಸಿದ ಕಾಲ್ಪನಿಕ ಹಾಗು ಶ್ಚರ್ಯಕರವಾದ ಸಂಗತಿಗಳಲ್ಲಿ ಅದಕ್ಕೆ ಅಭಿರುಚಿಯಿರುವದು. ತನ್ನ ಕಣ್ಣೆದುರಿಗಿ ರುವ ಪ್ರಾಣಿಗಳಲ್ಲದೆ ಜಗತ್ತಿನಲ್ಲಿ ಇನ್ನು ಅನೇಕ ಜನರೂ ಪ್ರಾಣಿಗಳೂ ಇರುವ ರೆಂಬ ಮಾತಿನಲ್ಲಿ ಅದಕ್ಕೆ ತೀರ ಅಸ್ಪಷ್ಟವಾದ ತಿಳುವಳಿಕೆಯಿರುವದು. ಹುಟ್ಟು ಸಾವುಗಳಿಗೆ ಸಂಬಂಧಿಸಿದ ಮಾತುಗಳಲ್ಲಿ ಅದು ಹೆಚ್ಚು ಆಸ್ಥೆಯನ್ನು ತೋರಿಸುವದು. ಮತ್ತು ಅದು ಅನೇಕಸಾರೆ ಈ ಸಂಗತಿಗಳನ್ನು ಕಣ್ಣಾರೆ ಕಂಡೂ ಕಾಣುವದಿಲ್ಲವೆ? ಳಿಮಳಿಗಳು, ಗುಡುಗು ಮಿಂಚುಗಳು, ಕಾಮನಬಿಲ್ಲಿನ ಬಣ್ಣಗಳು, ಸಮುದ್ರದ ಂಕಿತ ತುಫಾನುಗಳು ಮುಂತಾದ ಸೃಷ್ಟಿಚಮತ್ಕಾರಗಳಬಗ್ಗೆ ಕಾರಣವೇನಾದರೂ ಇರಲೇಬೇಕೆಂಬ ಭಾವನೆಯು ಆ ಮಗುವಿನಲ್ಲಿ ಹುಟ್ಟಿರುವದು. ಆರಂಭದ ಸ್ಥಿತಿಯಲ್ಲಿ ಕೇವಲ ಕಾಲ್ಪನಿಕ ಜಗತ್ತಿನಲ್ಲಿಯೇ ಅದು ಸಮಾಧಾನ ಪಡೆಯುವದು. ಬರಬರುತ್ತ ಅದಕ್ಕೆ ನಿಜವಾದ ಜಗತ್ತಿನ ಕಲ್ಪನೆಯುಂಟಾಗತೊಡಗುವದು; ಮತ್ತು ಕೆಲಕಾಲದ ವರೆಗೆ ಆ ಮಗುವಿನಲ್ಲಿ ಇವೆರಡೂ ಭಾವನೆಗಳು ಸಮಸಮವಾಗಿ ಸಾಗಿ ಬರುವವು.

ಮಗುವಿಗೆ ಆಟದಲ್ಲಿ ಅತಿಶಯ ಆಸ್ಥೆಯಿರುವದು. ಆ ಆಟವು ಶಾರೀರಕ ಶ್ರಮಕ್ಕೆ ಸಂಬಂಧಿಸಿದ್ದಾದರೂ ಇರಬಹುದು; ಇಲ್ಲವೆ, ಬೌದ್ಧಿಕ ಜಾಣತನಕ್ಕೆ ಸಂಬಂಧಿಸಿದ್ದಾದರೂ ಇರಬಹುದು; ಅಥವಾ ಅದು ಪರರ ಅನುಕರಣವಾದರೂ ಇರಬಹುದು. ಈ ಸಮಯಕ್ಕೇ ವಿಶೇಷವಾಗಿ ಆ ಮಗುವಿಗೆ ಪರರೊಡನೆ ಕೂಡಿ ನಡೆಯುವ ಪ್ರಸಂಗವು ಒದಗುವದು. ಮತ್ತು ಆ ಬಳಕೆಯ ಮೂಲಕವಾಗಿ ಅದಕ್ಕೆ ಸಾಮೂಹಿಕ ಜೀವನಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳ ಅನುಭವ ವುಂಟಾಗುವದು.

ಇವು ಸಾಮಾನ್ಯ ತರಗತಿಯ ಬಾಲಕರು ತಮ್ಮ ಜೀವನ ಕ್ರಮದಲ್ಲಿ ತೋರಿ ಸುತ್ತಿರುವ ಸರ್ವಸಾಮಾನ್ಯ ಗುಣಧರ್ಮಗಳು; ಮತ್ತು ಈ ಸಂಗತಿಗಳ ನಿರೀಕ್ಷಣೆ ಯಿಂದಲೇ ನಾವು ಬಾಲಕರಿಗೆ (ಶಿಶು ಶಾಲೆಗಳಲ್ಲಿ) ನಮ್ಮ ಶಾಲೆಗಳಲ್ಲಿ ಯಾವ ತರದ ಪರಿಸ್ಥಿತಿಯನ್ನುಂಟು ಮಾಡಿಕೊಡಬೇಕೆಂಬ ವಿಚಾರವನ್ನು ಕಂಡುಕೊಳ್ಳ ಬೇಕಾಗುವದು ಹಾಗು ನಾವು ಬಾಲಕರಲ್ಲಿ ಸಾಮಾನ್ಯವಾಗಿ ಶಾಲೆಗಳ ಅಭ್ಯಾಸ

ಕ್ರಮವೆಂದು ಹೇಳುತ್ತಿರುವ (ನಾವು ಯಾವತರದ ಜೀವನಕ್ರಮದ ಅಸ್ತಿವಾರವನ್ನು ಹಾಕಬೇಕೆಂದು ಬಯಸುವೆವೋ ಆ ಜೀವನಕ್ರಮಕ್ಕೆ ತಳಹದಿಯಾಗುವಂಥ) ವಿಷಯಗಳನ್ನೂ ಅವುಗಳ ಕ್ರಮ ಯೋಜನೆಗಳನ್ನೂ ಇದರಿಂದಲೇ ಗೊತ್ತುಮಾಡಿಕೊಳ್ಳಬೇಕಾಗುವದು.

ಸಂಪೂರ್ಣ ಸ್ವಾತಂತ್ರ್ಯಕ್ಕೆ ಆಸ್ಪದವಿರುವ ಪರಿಸ್ಥಿತಿಯಲ್ಲಿಯೇ ಮಗುವು ತಕ್ಕ ಅನುಭವವನ್ನು ಪಡೆಯುವದು. ಮತ್ತು ಆ ಅನುಭವದ ಮೂಲಕವಾಗಿಯೇ ಅದರ ಶೀಲ ಸ್ವಭಾವಗಳು ರೂಪುಗೊಳ್ಳುವವು; ಆ ಅನುಭವದ ಆಧಾರದಿಂದಲೇ ಅದರಲ್ಲಿ ಕಾರ್ಯ ಸ್ಫೂರ್ತಿಯುಂಟಾಗುವದು; ಮತ್ತು ಆ ಅನುಭವದ ಬಲದಿಂದಲೇ ಅದರ ನಡತೆಯಲ್ಲಿ ಸಂಯಮನ ಶಕ್ತಿಯುಂಟಾಗುವದು.

ಚಿಕ್ಕಮಗುವು ತನಗೆ ಅಜ್ಞಾತವಾದ ದೇಶದಲ್ಲಿ ಪರಕೀಯನಾದ ಪ್ರವಾಸಿಯಂತೆ ಅವಿಶ್ರಾಂತ ಶ್ರಮಮಾಡಲು ಹೊರಟಂತಿರುವದು. ತನ್ನ ಮನಸ್ಸನ್ನು ಆಕರ್ಷಿಸುವಂಥ ಅನೇಕ ನೂತನ ಸಂಗತಿಗಳನ್ನು ಕುರಿತು ತನಗೆ ಸಮಾಧಾನಕರವಾದ ಉತ್ತರವು ದೊರೆಯುವವರೆಗೂ ಅದು ವಿಚಾರಮಾಡುತ್ತಿರುವದು. ಈ ಮಗುವಿನ ಮನಸ್ಸಿನಲ್ಲಿ ಅನೇಕ ಭಾವನೆಗಳು ಸ್ವಾಭಾವಿಕವಾಗಿ ಸ್ಫುರಣ ಹೊಂದಿ ಬಹು ಪ್ರಬಲವಾಗಿ ಕಾಣಿಸಿಕೊಳ್ಳುವವು. ಆಗ ಆ ಮಗುವು ಒಮ್ಮೊಮ್ಮೆ ಶೀಘ್ರಕೋಪಿಯಾಗಿಯೂ ಉಗ್ರ ಸ್ವಭಾವವುಳ್ಳದ್ದಾಗಿಯೂ ತೋರುವದು. ಮತ್ತು ತೀಕ್ಷ್ಣವಾದ ತನ್ನ ಮನೋವಿಕಾರಗಳಿಗೆ ಒಳಗಾಗುವ ಆ ಮಗುವಿಗೆ ತಾಳ್ಮೆಯಾಗಲಿ ಸಮಾಧಾನವಾಗಲಿ ಎಷ್ಟುಮಾತ್ರವೂ ಇರಲಾರದು. ತನಗೆ ತೋಚಿದ್ದನ್ನು ಆಗಿಂದಾಗಲೇ ಮಾಡಿಬಿಡುವದು. ಹಿಂದೆ ಎಂದೂ ನೋಡದೆ ಇದ್ದ ಚಮತ್ಕಾರಿಕವಾದ ಪರದೇಶದಲ್ಲಿ ಪ್ರವಾಸ ಮಾಡುತ್ತಿರುವ ಪ್ರವಾಸಿಯಂತೆ ಆ ಮಗುವು ತುಂಬ ಉತ್ಸಾಹವುಳ್ಳದ್ದೂ ಚಟುವಟಿಕೆಯುಳ್ಳದ್ದೂ ಆಗಿರುವದು. ಮತ್ತು ಕೆಲಕಾಲ ವಿಶ್ರಾಂತಿಯನ್ನು ಹೊಂದಿ ಹೊಸ ಉತ್ಸಾಹದಿಂದ ಕೆಲಸಮಾಡಲು ಬಂದಿರುವ ಶೋಧಕನಂತೆ ಅದು ತುಂಬ ಚಟುವಟಿಕೆಯುಳ್ಳದ್ದಾಗಿರುವದು. ಚಿಕ್ಕಮಗುವು ಹೊಸ ಹೊಸ ಸಂಗತಿಗಳನ್ನು ನೋಡಿ ಅದನ್ನು ತಿಳಿದುಕೊಳ್ಳಲು ಆತುರಗೊಂಡ ಮನಸ್ಸಿನಲ್ಲಿ ಹುಟ್ಟುವ ಲವಲವಿಕೆಯಿಂದ 'ಇದರ ಅರ್ಥವೇನು ? ಹೀಗೆಂದರೇನು ಇದು ಹೀಗೆ ಯಾಕಿರುವದು ?' ಇವೇ ಮೊದಲಾದ ಹಲವು ಪ್ರಶ್ನೆಗಳನ್ನು ಕೇಳತೊಡಗುವದು. ಪ್ರೀತಿ ಅಪ್ರೀತಿಗಳಿಗೂ ಚಮತ್ಕಾರಿಕ ಸಂಗತಿಗಳಿಗೂ ಸಂಬಂಧಿ

ಸಿದ ಇದರ ಮನೋವಿಕಾರಗಳು ಬಹು ತೀಕ್ಷ್ಣವಾಗಿರುವವು. ಈ ಮನೋವಿಕಾರಗಳಿಗೆ ಒಳಗಾಗುವದರಿಂದ ಮಗುವಿನ ಶೀಲ ಸ್ವಭಾವಗಳಿಗೆ ಬರಬರುತ್ತ ಒಂದು ವಿಧದ ನಿಶ್ಚಿತ ಸ್ವರೂಪವು ಬರಹತ್ತುವದು.

ಚಿಕ್ಕ ಬಾಲಕರಿಗೆ ಮೊದಲು ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು ಆಮೇಲೆ ಏನಾದರೂ ಕಲಿಸುವದಾದರೆ ಕಲಿಸಬೇಕು. ಯಾಕೆಂದರೆ ಮನಸ್ಸಿನ ಸ್ಫೂರ್ತಿ, ಪ್ರಯೋಗ, ಅನುಭವ ಇವುಗಳ ತರುವಾಯ ಉಂಟಾಗುವ ಜ್ಞಾನವು ಲಾಭದಾಯಕವೂ ಸಕಾರಣವಾದದ್ದೂ ಎಂದು ತಿಳಿಯಲ್ಪಡುವದು. ಮಗುವಿನ ಮನಸ್ಸಿನಲ್ಲಿ ಯಾವದೊಂದು ವಿಷಯಕ್ಕೆ ಲಾಲಸೆಯುಂಟಾದ ಕೂಡಲೆ ಅದು ಆ ಮಾತಿಗೆ ಸಂಬಂಧಿಸಿದ ಪ್ರಯೋಗವನ್ನು ಮಾಡತೊಡಗುವದು. ಆ ಪ್ರಯೋಗದಿಂದ ಅದಕ್ಕೆ ಅನುಭವವುಂಟಾಗುವದು. ಅನುಭವದಿಂದ ಆ ಮಗುವಿನ ಮನಸ್ಸಿನ ಬಯಕೆಯು ಪೂರ್ಣವಾಗದೆ ಇದ್ದರೆ, ಆಗ ಅದಕ್ಕೆ ಪರರ ಸಹಾಯವು ಬೇಕೆನ್ನಿಸುವದು. ಹೀಗೆ ಮಗುವು ಸಹಾಯವನ್ನು ಕೋರಿದಾಗ ಅದಕ್ಕೆ ಹೇಳಬೇಕಾದ ಸಂಗತಿಯನ್ನು ಹೇಳಿಕೊಟ್ಟರೆ ಆ ಜ್ಞಾನವು ಅತಿಶಯ ಮಹತ್ವದ್ದೆನಿಸುವದು. ಮಗುವಿಗೆ ಬೌದ್ಧಿಕ ವಿಷಯಗಳಲ್ಲಿ ಸ್ವಾತಂತ್ರ್ಯವಿರಬೇಕು; ಅದರ ಮನೋವಿಕಾರಗಳಿಗೂ ಸ್ವಾತಂತ್ರ್ಯವಿರಬೇಕು; ನೈತಿಕ ವಿಷಯಗಳಲ್ಲಿಯೂ ಸ್ವಾತಂತ್ರ್ಯವು ಬೇಕು. ವಿರಾಮವಿರದಂತೆ ರಚಿಸಿಕೊಂಡಿರುವ ವೇಳಾಪತ್ರಿಕೆಯಂತೆ ಕೆಲಸ ನಡೆಯುವ ಸಾಲೆಗಳಲ್ಲಿ ಬಾಲಕರು ಕೇಳುತ್ತಿರುವ ಅನೇಕಾನೇಕ ವಿಧದ ಪ್ರಶ್ನೆಗಳಿಗೆ ಇಲ್ಲವೆ ಅವರು ಸ್ವಾತಂತ್ರ್ಯದಿಂದ ಆಡುತ್ತಿರುವ ಮಾತುಗಳಿಗೆ ಅಡಿಗಡಿಗೆ ಪ್ರತಿಬಂಧವಾಗುತ್ತಿರುವದು. ಆದರಿಂದ ಅವರ ಮನಸ್ಸು ನೋಯುವದು. ಶಿಕ್ಷಕರು "ನಾನು ಈಗ ಈ ಮಾತನ್ನು ಕೇಳಿಲ್ಲ; ಈ ಮಾತಿಗೆ ಇದು ಸಮಯವಲ್ಲ; ಈ ವಿಚಾರಕ್ಕೆ ಇದು ಸಂದರ್ಭವಲ್ಲ." ಎಂದು ಮುಂತಾಗಿ ತಡೆಗಟ್ಟಿ ಸುಡಿದು ಬಾಲಕರ ಮನೋವೃತ್ತಿಯ ಸ್ಫುರಣವನ್ನು ತಗ್ಗಿಸುತ್ತಿರುವರು. ಅಲ್ಲಿಯ ಉಪಕರಣಗಳು ನಿಯಮಿತವಾಗಿರುವವು. ಅವುಗಳ ಉಪಯೋಗವೂ ಕೂಡ ನಿಶ್ಚಿತವಾಗಿರುವದು. ಮನೆಯಲ್ಲಿಯ ಇಲ್ಲವೆ ಓಣಿಯಲ್ಲಿಯ ಜೀವನಕ್ರಮವು ಆ ಸಾಲೆಯ ಕಾರ್ಯಕ್ರಮದಲ್ಲಿ ಕಂಡುಬರಲಾರದು. ಆ ಸಾಲೆಯಲ್ಲಿ ತೋಟವಿರುವದಿಲ್ಲ; ಅಲ್ಲಿ ಚಿತ್ರದ ಪುಸ್ತಕಗಳಿರುವದಿಲ್ಲ; ಶಿಕ್ಷಕರು ಹಲವು ಸಾರೆ ಬಾಲಕರ ಪ್ರಶ್ನೆಗಳಿಗೆ ಉತ್ತರವನ್ನೇ ಕೊಡುವದಿಲ್ಲ. ಒಮ್ಮೊಮ್ಮೆ ಪೂರ್ಣ ವಿಚಾರಮಾಡದೆ ಉತ್ತರ

ಕೊಡುವರು. ಆ ಶಾಲೆಯು ಕೋಣೆಯು ಡೆಸ್ಕು–ಬಾಕುಗಳಿಂದ ತುಂಬಿರುವದ ಅಲ್ಲಿ ಹುಡುಗರು ಕೂತುಕೊಂಡಿರುವ ವೇಳೆಯೇ ಹೆಚ್ಚು. ಅಲ್ಲಿ ಬಾಲಕ ಕೆಲಸ ಮಾಡುವದಕ್ಕಿಂತ ಶಿಕ್ಷಕರು ಕಲಿಸುತ್ತಿರುವದೇ ಬಹಳ. ಇಂಥಲ್ಲಿ ಬಾ ರಿಗೆ ಬೌದ್ಧಿಕ ಸ್ವಾತಂತ್ರ್ಯವೆಲ್ಲಿದೆ?

೧೯೩೬ ನೆಯ ಇಸವಿಯ ಎಪ್ರಿಲ ತಿಂಗಳಲ್ಲಾದ ಗಂಡ ಮಕ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮ.

(ಕಳೆದ ಸಂಚಿಕೆಯಿಂದ ಮುಂದೆ ಸಾಗುವದು)

ವಿಜಾಪುರ ಸೆಂಟರ.

ಕನ್ನಡ

ನಂ.	ಹೆಸರು	ಗು
೩೭	ಗುಂಡೋ ರಾಮಚಂದ್ರ ಜೋಶಿ	೩೧
೩೮	ಶಿವರುದ್ರಪ್ಪ ಪಾಂಡಪ್ಪ ಪಜ್ಜರಮಟ್ಟಿ	೩೧
೩೯	ತಾತ್ಯಾ ರಾಮಚಂದ್ರ ಸವಾಯಿ	೩೧
೪೦	ದುಂಡಪ್ಪ ಕಲ್ಲಪ್ಪ ಸಿಂಪಿ	೩೦
೪೧	ಶಿವಪ್ಪ ಚನಬಸಪ್ಪ ಮುಂತ್ರಿಗಿ	೩೦
೪೨	ರತ್ನಚಂದ ಆಸಾಲಾಜಿ ಮಾರವಾಡಿ	೩೦
೪೨	ಸಿದಗೊಂಡಪ್ಪ ದುಂಡಪ್ಪ ಸಾರವಾಡ	೩೦
೪೨	ತಿರಕಪ್ಪ ರಾಮಪ್ಪ ಮೋಟಿ	೩೦
೪೫	ಗುರುಪಾದಪ್ಪ ಶಿವಪ್ಪ ಕರಿಶಂಕರಿ	೩೦
೪೫	ನಾಗೇಂದ್ರ ಮಾಲೋಜಿ ಕಾಪತ್ಕಾರ	೩೦
೪೭	ರಾಮಚಂದ್ರ ಆನಂದರಾವ ಜೇವೂರಕರ	೩೦
೪೭	ರಾಮಚಂದ್ರ ಅಣ್ಣಾಸಾ ಕಲಬುರ್ಗಿ	೩೦

೪೯	ಸಿದ್ದಯ್ಯಾ ಶಿವಯ್ಯಾ ಪೂಜಾರಸ್ಥಾವರಮಠ	೩೦೨
೫೦	ನಂದಪ್ಪ ವಿರುಪಾಕ್ಷಪ್ಪಾ ಬೈಲವಾಡ	೩೦೧
೫೦	ಕಂತೆಯ್ಯಾ ಬಸಯ್ಯಾ ಮಠ	೩೦೧
೫೦	ಮಲಿಯಪ್ಪ ಯಮನಪ್ಪ ಕೊರವರ	೩೦೧
೫೦	ರಂಗೋ ಶ್ರೀನಿವಾಸರಾವ ಕುಲಕರ್ಣಿ	೩೦೧
೫೪	ಚನ್ನಪ್ಪಗೌಡ ಕಲ್ಲನಗೌಡಾ ಪಾಟೀಲ	೩೦೦
೫೪	ನಾರಾಯಣ ವೆಂಕಟೇಶ ದೇಶಪಾಂಡೆ	೩೦೦
೫೪	ವೆಂಕಟೇಶ ರಾಘವೇಂದ್ರ ಮೊಕಾದಂಪಾಟೀಲ	೩೦೦
೫೭	ದಾಮೋದರ ಕೃಷ್ಣಾಚಾರ್ಯ ಕುಸನೂರ	೨೯೯
೫೭	ಷಡಕ್ಷರಿ ಶಾಂತವೀರಯ್ಯಾ ಹಿರೇಮಠ	೨೯೯
೫೯	ಲಕ್ಷ್ಮಣ ಸಣ್ಣಹುಚ್ಚಪ್ಪಾ ಕಡ್ಲಿಮಟ್ಟಿ	೨೯೮
೬೦	ನಾಗುಂಡ ವೀರಭದ್ರಪ್ಪ ತಾಳೀಕೋಟಿ	೨೯೭
೬೦	ವಿರುಪಾಕ್ಷಗೌಡಾ ಗಿರಿಯಪ್ಪಗೌಡಾ ಪಾಟೀಲ	೨೯೭
೬೨	ಬಸಪ್ಪ ಸಿದಲಿಂಗಪ್ಪ ಬೆಳವಲ	೨೯೬
೬೩	ಭೀಮಪ್ಪ ಅಡಿವೆಪ್ಪ ಸೂಳೀಭಾವಿ	೨೯೫
೬೩	ಮುಂಡಪ್ಪಾ ಆನಂದಪ್ಪ ಕನ್ನೂರ	೨೯೫
೬೩	ಸಂಗನಗೌಡಾ ಅಯ್ಯನಗೌಡಾ ಗೌಡರ	೨೯೫
೬೬	ಸಿದ್ದನಗೌಡಾ ಬಸನಗೌಡಾ ಮರಿಗೌಡರ	೨೯೪
೬೭	ಬಸಪ್ಪ ವೆಂಕಪ್ಪ ಗಿರಿತಿಮ್ಮನವರ	೨೯೩
೬೭	ಭೀಮಪ್ಪ ಬಾಳಪ್ಪ ಆಲಬಲ	೨೯೩
೬೭	ರಾಮಚಂದ್ರ ವೆಂಕಪ್ಪ ಪವಾರ	೨೯೩
೭೦	ದತ್ತಾತ್ರೇಯ ಮಾರ್ತಂಡ ಕುಲಕರ್ಣಿ	೨೯೨
೭೦	ಬಸವಣ್ಣೆಪ್ಪಾ ಶಾಂತವೀರಪ್ಪ ಬಾಳೀಕಾಯಿ	೨೯೨
೭೦	ಗುಂಡಪ್ಪ ಭರಮಣ್ಣಾ ಪಾಕಿ	೨೯೨
೭೩	ದತ್ತಾತ್ರೇಯ ವೆಂಕಟರಾವ ಮೊಖಾಸಿ	೨೯೧
೭೩	ಗೌಡಪ್ಪ ಕಳಗೊಂಡಪ್ಪ ಅಂತರಗೊಂಡ	೨೯೧
೭೩	ರಾಮಭಟ್ಟ ವೆಂಕಣಭಟ್ಟ ಜೋಶಿ	೨೯೧
೭೬	ಗೋವಿಂದ ರಾಮಚಂದ್ರ ಕುಲಕರ್ಣಿ	೨೯೦

೭೭	ಭೀಮಾಜಿ ಬಿಂದುರಾವ ಕುಲಕರ್ಣಿ	೩೮೭
೭೭	ಚನಬಸಯ್ಯಾ ಬಸಯ್ಯಾ ಸಾವಳಗಿಮಠ	೩೮೭
೭೭	ಮಲಕಪ್ಪ ಶಿವಗೌಡ ರುದ್ರಗೌಡರ	೩೮೭
೭೭	ನಾರಾಯಣ ಯೋಗಪ್ಪ ಜೋಸಿ	೩೮೭
೭೭	ಶಿವಶಂಕರೆಪ್ಪ ಮಡಿವಾಳಪ್ಪ ಪಾಟೀಲ	೩೮೭
೮೨	ಹಣಮಂತಗೌಡ ಮಲಕಪ್ಪ ಬಿರಾದರ	೩೮೬
೮೨	ರಂಗಾಚಾರ್ಯ ಗುಂಡಾಚಾರ್ಯ ಯಜುರ್ವೇದಿ	೩೮೬
೮೨	ವೆಂಕಟೇಶ ಗುರುನಾಥ ಜೇರೆ	೩೮೬
೮೨	ವಿಷ್ಣು ಚಿದಂಬರ ನಾನಾವತಿ	೩೮೬
೮೬	ಮಹದೇವಪ್ಪ ಚೆನ್ನಪ್ಪ ಸರಶೆಟ್ಟಿ	೩೮೫
೮೬	ಸಿದರಾಮ ಈರಪ್ಪ ಅಳಗೊಂಡ	೩೮೫
೮೮	ಅಡವಯ್ಯಾ ಬಸಯ್ಯಾ ಹಿರೇಮಠ	೩೮೪
೮೮	ಉಡಪಿ ಮಧ್ವರಾವ ತೊರ್ವಿ ಕುಲಕರ್ಣಿ	೩೮೪
೮೮	ವಾಸುದೇವ ನರಸಿಂಹ ಸಂತರ	೩೮೪
೮೮	ವೀರಭದ್ರಪ್ಪ ಬಸಪ್ಪ ಗೊರ್ಜಿನಾಳ	೩೮೪
೯೨	ಬಾಳಕೃಷ್ಣ ವೆಂಕಟೇಶ ಗೋತೆ	೩೮೩
೯೨	ಗುಂಡೋ ಅಣ್ಣಾಜಿ ಕುಲಕರ್ಣಿ	೩೮೩
೯೨	ಮಲಕಿಂಡರಾಮ ರಾಮಚಂದ್ರಪ್ಪ ಗೌಡರ	೩೮೩
೯೨	ಪಾಂಡು ಹನಮಪ್ಪ ಖಜ್ಜಿಡೋಣಿ	೩೮೩
೯೨	ತಿಮ್ಮನಗೌಡ ಬಾಳನಗೌಡ ಸೂಳೀಭಾವಿ	೩೮೩
೯೨	ತುಳಜಾರಾಮ ಬಾಳಪ್ಪ ಆರೇರ	೩೮೩
೯೮	ಝುಟಿಂಗ ತುಕಾರಾಮ ಘೋರ	೩೮೨
೯೮	ಮಹಿಪತಿ ಕೃಷ್ಣಾಚಾರ್ಯ ಮಣ್ಣೂರ	೩೮೨
೧೦೦	ದುಂಡಪ್ಪ ಶಿದ್ಲಿಂಗಪ್ಪ ಬೆಳವಲ	೩೮೧
೧೦೦	ಮಲ್ಲಪ್ಪ ದೇವಪ್ಪ ಹಡಪದ	೩೮೧
೧೦೦	ಮುತ್ತಪ್ಪ ಕಲ್ಲಪ್ಪ ಪಟೇದ	೩೮೧
೧೦೩	ಗುಂಡು ರಾಮಚಂದ್ರ ಜೋಸಿ	೩೮೦
೧೦೩	ಗುರುನಾಥ ರಂಗೋ ಜೋಸಿ	೩೮೦
೧೦೩	ಹಣಮಂತ ವೆಂಕಟೇಶ ಕಾತರಕಿ	೩೮೦

೧೦೩	ಕೃಷ್ಣ ವೆಂಕಾಜಿ ಜೋಸಿ	೨೮೦
೧೦೩	ನರಸಿಂಹ ಗೋವಿಂದಾಚಾರ್ಯ ಸಂಗಮ	೨೮೦
೧೦೮	ಕಂಟೆಪ್ಪ ರಾಮತಪ್ಪ ದಿಕ್ಸಂಗಿ	೨೭೯
೧೦೮	ಗಿರಿಯಪ್ಪ ಬಸಪ್ಪ ಮಳ್ಳಿ	೨೭೯
೧೦೮	ಸಿಂಗಪ್ಪ ಹನುಮಪ್ಪ ಮಾಲ್ಯಾನ	೨೭೯
೧೦೮	ಮರೆಪ್ಪ ಬಸಪ್ಪ ಕುಚಬಾಳ	೨೭೯
೧೦೮	ರಾಮಚಂದ್ರ ಬಂಡೋ ಕುಲಕರ್ಣಿ	೨೭೯
೧೦೮	ಸೋಮನಗೌಡ ಚನ್ನನಗೌಡ ಗೌಡರ	೨೭೯
೧೧೪	ಅನಂತ ಕೃಷ್ಣಾಚಾರ್ಯ ಶಹಾಪೂರ	೨೭೮
೧೧೪	ರಾಮಣ್ಣಾ ಅಂತೆಪ್ಪ ತೇರದಾಳ	೨೭೮
೧೧೪	ಶ್ರೀನಿವಾಸ ಹಣಮಂತ ಕುಲಕರ್ಣಿ	೨೭೮
೧೧೭	ಜಯರಾವ ರಾಘವೇಂದ್ರ ನಾಡಗೌಡ	೨೭೭
೧೧೭	ಶಂಕರಪ್ಪ ಬಸವಂತರಾವ ಪಾಟೀಲ	೨೭೭
೧೧೯	ಕಾಳಪ್ಪ ಸಂಗಪ್ಪ ಬಿರಾದರ	೨೭೬
೧೧೯	ವಸಂತ ರಂಗಾಚಾರ್ಯ ಕಡಗದಕೈ	೨೭೬
೧೨೧	ಹನಮಪ್ಪ ಸಂಜೀವಪ್ಪ ಬಂಡಿವಡ್ಡರ	೨೭೫
೧೨೧	ಇಮಾಮಸಾ ಇಸ್ಮಾಯಿಲ್‌ಸಾ ಮೊಗಲಾಯಿ	೨೭೫
೧೨೧	ಕೃಷ್ಣಾಜಿ ಭೀಮಾಜಿ ಹುನಗುಂದ	೨೭೫
೧೨೧	ಮಹಾಂತಪ್ಪ ಮಲಕಾಜಪ್ಪ ಹಾವರಗಿ	೨೭೫
೧೨೧	ಸಿದ್ಧಗೌಡ ಚನಮಲ್ಲಪ್ಪ ಚಾಂದಕವಟೆ	೨೭೫
೧೨೬	ಬಸವಣ್ಣೆಪ್ಪ ಚನಮಲ್ಲಪ್ಪ ಕುರ್ಲೆ	೨೭೪
೧೨೬	ಲಕ್ಷ್ಮೆಪ್ಪ ಭೀಮಪ್ಪ ತುಂಗಲ	೨೭೪
೧೨೬	ರಂಗಪ್ಪಯ್ಯಾ ಚನ್ನಪ್ಪಯ್ಯಾ ಕುಮಸಿ	೨೭೪
೧೨೬	ಸಿಂಗಪ್ಪ ಮುಕ್ಕಣಪ್ಪ ಕೋರಿ	೨೭೪
೧೩೦	ರಾಮಚಂದ್ರ ಸಿಂಗಪ್ಪ ಚೊಳಚಗುಡ್ಡ	೨೭೩
೧೩೦	ವಸಂತ ಬಾಳಾಚಾರ್ಯ ಪುರೋಹಿತ	೨೭೩
೧೩೨	ಇಬ್ರಾಹೀಮ ಹುಶೇನಸಾ ಖಲೀಫ	೨೭೨

(ಮುಂದೆ ಸಾಗುವದು.)

ಪ್ರಕಟನೆಗಳು

ಕನ್ನಡ ಬುಕ್ ಕಮೀಟಿ ಧಾರವಾಡ ಇವರು ಮಂಜೂರ ಮಾಡಿದ ಪುಸ್ತಕಗಳ ಯಾದಿಯು

ವಿ=ವಿದ್ಯಾರ್ಥಿಗಳು, ಶಿ=ಶಿಕ್ಷಕರು, L=ಲಾಯಬ್ರರಿ, ಬುಕ್ಕು. T=ಟೆಕ್ಸ್ಟ ಬುಕ್ಕು.

ಅ. ನಂ.	ಪುಸ್ತಕದ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರ.	ಮೆ. ಡಾ. ಸಾ ನಂ.	ಮೆ ಇ. ಸಾ. ನಂ
೧	ಹೊಸ ಮಾದರಿಯ ಅಂಕಗಣಿತ ಭಾ. ೧. ೧೯೩೫	ಎಂ. ಸಿ. ಎಸ್. ಕುಲಕರ್ಣಿ ೧೪೭೭ ದೇಶಪಾಂಡೆ ಗಲ್ಲಿ ಬೆಳಗಾವ	ಸಿ. ಎಸ್. ಕುಲಕರ್ಣಿ ಹಿರೇಬಾಗೇವಾಡಿ	೦–೫–೦	ಮಾ. ಶಾ. ಗಳ ಶಿ. ರ L ಬು. ಪ್ರಾ. ಶಾ. ಗಳ ಶಿ. ರ L ಬುಕ್ಕಾಗಿ	s-86-c-660-c / 8–8–36	47 P3669 / 29–8–36
೨	ಸೀತಾದೇವಿ (೨ನೆ. ಆ) ೧೯೩೫	ಮ್ಯಾನೇಜರ ಭಾರತಿ ಪಬ್ಲಿಶಿಂಗ ಹೌಸ ಬೆಂಗಳೂರ ಸಿಟಿ	ಭಾರತಿ ಪಬ್ಲಿಶಿಂಗ ಹೌಸ ಅವೆನ್ಯೂ ರೋಡ ಬೆಂಗಳೂರ ಸಿಟಿ	೦–೬–೦	ಮಾ. ಶಾ. ಗಳ ವಿ. ಗಳ L ಬುಕ್ಕಾಗಿ. ಪ್ರಾ. ಶಾ. ಹಾಗು ಟ್ರೇ. ಸಂ. ಗಳ ವಿ. ಗಳ L ಬುಕ್ಕಾಗಿ	s-86 c-657-c / ಸದರ	,, 3667 / ಸದರ
೩	ಉದಯರಾಗ ೧ನೆ. ಆ. ೧೯೩೪	ಎಂ. ಆರ್. ಪಿ. ಬೆಳಗಾವಕರ	ಗ್ರಂ. ಕರ್ತರು ಜಯ ಕರ್ನಾಟಕ ಆಫೀಸ ಧಾರವಾಡ	೦–೧೨–೦	ಮಾ. ಶಾ. ಗಳ ವಿ. ಗಳ ಹಾಗು ಶಿ. ರ L ಬುಕ್ಕಾಗಿ ಪ್ರಾ. ಶಾ. ಹಾಗು ಟ್ರೇ. ಸಂ. ಗಳ ವಿ. ಗಳ ಹಾಗು ಶಿ. ರ L ಬುಕ್ಕು	s-86-c-667-c / 18–8–36	,, 4031 / 14–9–36

೪ ಮಲ್ಲಿಗೆ ದಂಡೆ ೧ನೆ ಆ. ೧೯೩೫	ಎಂ. ಆರ್. ಪಿ. ಜೀಗಾಪಕರ	ಎಂ. ಆರ್. ಪಿ. ಜೀಗಾಪಕರ ಜಯಕರ್ನಾಟಕ ಆಫೀಸ ಧಾರವಾಡ	೦-೧೨-೦	ಮಾ. ಶಾ. ಗಳ ವಿ. ಗಳ ಹಾಗು ಶಿ. ರ L ಬುಕ್ಕಾಗಿ ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ಶಿ. ರ ಹಾಗು ವಿ. ಗಳ L ಬು.	s-86-c-666-c / 18-8-36	,, 4035 / 14-9-36
೫ ದರಿದ್ರ ನಾರಾಯಣ ೧೯೩೩	ಸದರ	ಸದರ	೦-೧೦-೦	ಮಾ. ಶಾ. ಗಳ ವಿ. ಗಳ ಹಾಗು ಶಿ. ರ L ಬುಕ್ಕಾಗಿ ವ್ಹ. ಟ್ರೇ. ಸಂ. ಗಳ ವಿ. ಗಳ. ಹಾಗು ಶಿ. ರ. L. ಬು.	s-86-c-668-c / ಸದರ	,, 4037 / ಸದರ
೬ ಅಪೇನ ಇರಲಿ ೧೯೩೩	ಸದರ	ಸದರ	೦-೮-೦	ಮಾ. ಶಾ. ಗಳ ವಿ. ಗಳ L ಬುಕ್ಕಾಗಿ, ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ವಿ. ಗಳ L ಬುಕ್ಕಾಗಿ.	s-86-c-672 c / ಸದರ	,, 4039 / ಸದರ
೭ ಪರಿಣೀತೆ ೧ನೇ ಆ. ೧೯೩೬	ಸದರ	ಸದರ	೦-೧೦-೦	ಸದರ	ಸದರ 671 / ಸದರ	,, 4041
೮ ತರಂಗಿಣಿ ೧ನೆ. ಆ ೧೯೩೪	ಸದರ	ಸದರ	೦-೬-೦	ಸದರ	ಸದರ 673 / ಸದರ	,, 4043

ಅ. ನಂ.	ಪುಸ್ತಕದ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರ.	ಮು ಡಾ ಸಾ ನಂ	ಮೊ.ಇ ಸಾ.ನಂ.
೯	ನಾಟ್ಯಾಂಕ ೧ನೇ ಇಳ	ಆರ್. ಪಿ. ಬೆಳಗಾವಕರ	ಆರ್. ಪಿ. ಬೆಳಗಾವಕರ ಜಯಕರ್ನಾಟಕ ಆಫೀಸ ಧಾರವಾಡ	೦-೧೦-೦	ಮಾ. ಶಾ. ಗಳ ಪಿ. ಗಳ ಹಾಗು ಶಿ. ರ L ಬುಕ್ಕಾಗಿ ಪ್ರಾ. ಶಾ. ಗಳ ಹಾಗು ಟ್ರೇ. ಸಂ ಗಳ ಪಿ. ಗಳ ಹಾಗು ಶಿ. ರ L ಬುಕ್ಕಾಗಿ	s 86-c-675-c / 18-8-36	47 p 4045 / 14-9-36
೧೦	ಬಂಗಾರದ ಡಾಬು ೧ನೆ ಆ. ೧ನೇ ಇಳ	ಸದರ	ಸದರ	೦-೧೦-೦	ಮಾ. ಶಾ. ಗಳ ಪಿ. ಗಳ ಹಾಗು ಶಿ ರ L ಬುಕ್ಕಾಗಿ ಪ್ರಾ. ಶಾ. ಗಳ ಪಿ. ಗಳ ಹಾಗು ಶಿ. ರ L ಬುಕ್ಕಾಗಿ	ಸದರ 674 / ಸದರ	,, 4047 / ಸದರ
೧೧	ರಾಜವಲ್ಲಭ ೧ನೆ ಆ. ೧ನೇ ಇಳ	ಸದರ	ಸದರ	೦-೧೦-೦	ಮಾ. ಶಾ. ಗಳ ಪಿ. ಗಳ L ಬುಕ್ಕಾಗಿ ಪ್ರಾ.ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ಪಿ.ಗಳ L ಬುಕ್ಕಾಗಿ	ಸದರ 670 / ಸದರ	,, 4049 / ಸದರ
೧೨	ಜೀವನ ಸಂಗೀತ ೧ನೇ ಇಳ	ಸದರ	ಸದರ	೦-೧೦-೦	ವ್ಹ. ಟ್ರೇ. ಸಂ. ಗಳ ಶಿ. ರ L ಬುಕ್ಕಾಗಿ ಮಾಧ್ಯಮಿಕ ಶಾಲೆಗಳ ಶಿ.ರ L ಬುಕ್ಕಾಗಿ	ಸದರ 669 / ಸದರ	,, 4051 / ಸದರ

೩	ಯದು ಮಹಾರಾಜ ೨ನೆ ಆ. ೧೯೩೫	ವಾಸುದೇವಾ ಚಾರ್ಯ ಕೆರೂರ	ಸ್ವಾಮಿಆರ್.ಕೆರೂರ ವಾಸುದೇವ ಪುಸ್ತ ಕಾಲಯು ಬಾಗಲ ಕೋಟ	೧– ೪–೦	ಮಾ. ಶಾ. ಗಳ ವಿ. ಗಳ ಹಾಗು ಶಿ. ರ. L ಬುಕ್ಕಾಗಿ ಪ್ರಾ. ಶಾ. ಗಳ ವಿ. ಗಳ ಹಾಗು ಶಿ. ರ L ಬುಕ್ಕಾಗಿ	s-S6-c-683-c 18–8–26	47P4053 14–9–36
೪	ಕರ್ನಾಟಕದ ವೀರಕ್ಷತ್ರಿಯರು ೧ನೆ ಆ. ೧೯೩೬	ಎಸ್. ಬಿ. ಜೋಸಿ ಸಾಧನಕೆರೆ ಧಾರವಾಡ	ಡಿ. ಬಿ. ಕುಲಕರ್ಣಿ ಮೋಹನ ಗ್ರಂಥ ಭಾಂಡಾರ ಧಾರವಾಡ	೧– ೦–೦	ಮಾ. ಶಾ. ಗಳ ಶಿ. ರ L ಬುಕ್ಕಾಗಿ ವ್ಹ. ಟ್ರೇ. ಸಂ. ಗಳ ಶಿ. ರ L ಬುಕ್ಕಾಗಿ	ಸದರ 682 ಸದರ	,, 4055 ಸದರ
೫	ಆಶೋಕ ಮೌರ್ಯ ೧೯೩೬	ಮು. ನಿಟ್ಟೂರ ಶ್ರೀನಿವಾಸರಾವ	ಪ್ರೊ॥ ಸತ್ಯಶೋಧನ ಪಬ್ಲಿಶಿಂಗ ಹೌಸ ಬೆಂಗಳೂರ ಸಿಟಿ	೦-೧೦ ೦	ಮಾ ಶಾ. ಗಳ ವಿ. ಗಳ L ಬುಕ್ಕಾಗಿ ಪ್ರಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ವಿ. ಗಳ L ಬುಕ್ಕಾಗಿ	ಸದರ 678 ಸದರ	,, 4057 ಸದರ
೬	ಶ್ರೀಮತ್ಸಂಗ್ರಹ ರಾಮಾಯಣ (ಸುಂದರಕಾಂಡ ವು ೧ನೆ ಆ. ೧೯೩೫)	ಮು. ಆನಂದತೀರ್ಥಾ ಚಾರ್ಯ ।।। ಕ್ರೊಸ ರೋಡ ಬಸವನಗುಡಿ ಬೆಂಗಳೂರು	ಗ್ರಂಥಕರ್ತರು	೦– ೮–೦	ಮಾ. ಶಾ. ಗಳ ಶಿ. ರ L ಬುಕ್ಕಾಗಿ	ಸದರ 663 15–8–36	,, 4059 ಸದರ

ಅ. ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ	ಯಾತಕ್ಕೋಸ್ಕರ ಮಂಜೂರ	ಪಿ.ಡಾ.ಸಾ.ನ..ಮ.	ಇ.ಸಾ ರನಂ
೧೭	ಕುಶಲವ ೨ನೆ ಆ. ೧೯೩೬	ಸೆಕ್ರೆಟರಿ ಕಿರಿಯರ ಪ್ರಪಂಚ ಉಡುಪಿ	ಕಿರಿಯರ ಪ್ರಪಂಚ ಉಡುಪಿ	೦– ೪–೦	ಮಾ. ಶಾ. ಗಳ ವಿ. ಗಳ L ಬುಕ್ಕಾಗಿ ಪ್ರಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ವಿ.ಗಳ L ಬುಕ್ಕಾಗಿ	s-86-c-686-c / 14-8-36	47 P4061 / 14-9-36
೧೮	ವಾಕ್ಯಚಿಂತಾಮಣಿ ೧೯೩೩	ಮ್ಯಾನೇಜರ ಭಾರತಿ ಪಬ್ಲಿಶಿಂಗಹೌಸ ಅವೆನ್ಯೂ ರೋಡ ಬೆಂಗಳೂರ ಶಿಟಿ	ಭಾರತಿ ಪಬ್ಲಿಶಿಂಗ ಹೌಸ ಬೆಂಗಳೂರ	೦– ೮–೦	ಮಾ. ಶಾ. ಗಳ ಶಿ. ರ L ಬುಕ್ಕಾಗಿ ಪ್ರಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ಶಿ. ರ L ಬುಕ್ಕಾಗಿ	ಸದರ 656 / 18-8-36	,, 4063 / ಸದರ
೧೯	ಸತ್ಕಾಲಕ್ಷೇಪ ವಿಧಾಯಿನಿ ೨ನೆ ಆ. ೧೯೩೬	ಬಿ. ಗೋಪಾಲಯ್ಯ, ರಿ। ಸಬ್ ಅಸಿ। ಕಾನ್ಸರ್ವೇಟರ ಕೃಷ್ಣಮೂರ್ತಿ ಪುರಂ ಮೈಸೂರು	ಗ್ರಂ. ಕ.	೦– ೪–೦	ಮಾ. ಶಾ. ಗಳ ವಿ. ಗಳ L ಬುಕ್ಕಾಗಿ ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ವಿ. ಗಳ L ಬುಕ್ಕಾಗಿ	ಸದರ 684 / ಸದರ	,, 4065 / ಸದರ
೨೦	ಮುಗುಳು ೫ನೆ ಆ. ೧೯೩೬	ಸೆಕ್ರೆಟರಿ ಕಿರಿಯರ ಪ್ರಪಂಚ ಉಡುಪಿ	ಪಿ. ಎ. ಪೈ. ಬ್ರದರ್ಸ ಉಡುಪಿ	೦– ೨–೬	ಮಾ. ಶಾ. ಗಳ ವಿ. ಗಳ L ಬುಕ್ಕಾಗಿ ಪ್ರಾ. ಶಾ. ಗಳ ವಿ. ಗಳ L ಬುಕ್ಕಾಗಿ	ಸದರ 687 / 15-8-36	,, 4067 / 15-9-39

೨೧	ನಮ್ಮ ಖಾಸ ಬಂಗ್ಲೆಯ ಸ್ನೇಹಿತರು ೧ನೇ ಇಷ	ಪ್ರೊ. ಪಿ ಟಿ. ಆಯ್ ಬುಕ್ ಡಿಪ್ಪೋ ಬೆಂಗಳೂರ ಸಿಟಿ	ಗ್ರ. ಕ.	೦-೧೦-೦	ಮಾ. ಶಾ. ಗಳ ವಿ. ಗಳ L ಬುಕ್ಕಾಗಿ ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ವಿ. ಗಳ L ಬುಕ್ಕಾಗಿ	ಸದರ 688 / ಸದರ	4069 / ಸದರ
೨೨	ಶ್ರೀರಾಮಚಂದ್ರ ೧ನೇ ಇಷ	ಮೆ. ಸಿಟ್ಟೂರ ಶ್ರೀನಿವಾಸರಾವ	ಸತ್ಯಶೋಧನ ಪಬ್ಲಿಶಿಂಗ ಹೌಸ ಬೆಂಗಳೂರ ಸಿಟಿ	೦- ೮-೦	ಮಾ. ಶಾ. ಗಳ T ಬುಕ್ಕಾಗಿ ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ವಿ. ಗಳ L ಬುಕ್ಕಾಗಿ	ಸದರ 677 / 18-8-36	4071 / 15-9-36
೨೩	ಮಾಲಿಕೆ ೧ನೇ ಇಷ	ಪ್ರೊ॥ ಪಿ, ಟಿ, ಆಯ್, ಬುಕ್ ಡಿಪ್ಪೋ ಬೆಂಗಳೂರ ಸಿಟಿ	ಗ್ರಂ. ಕ.	೦- ೪-೦	ಮಾ. ಶಾ. ಗಳ ವಿ. ಗಳ ಹಾಗು ಶಿ. ರ L ಬುಕ್ಕಾಗಿ ಪ್ರಾ. ಶಾ. ಗಳ ವಿ. ಗಳ ಹಾಗು ಶಿ. ರ L ಬುಕ್ಕಾಗಿ	ಸದರ 689 / 15-8-36	4073 / 15-9-36
೨೪	ನಟರಾಜ ಭಕ್ತಾನಂದ ಹೊಲೆಯ	ಮ. ಸಿಟ್ಟೂರ ಶ್ರೀನಿವಾಸರಾವ	ಸತ್ಯಶೋಧನ ಪಬ್ಲಿಶಿಂಗ ಹೌಸ ಬೆಂಗಳೂರ ಸಿಟಿ	೦- ೩ ೦	ಮಾ. ಶಾ. ಗಳ ವಿ. ಗಳ L ಬುಕ್ಕಾಗಿ ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ವಿ. ಗಳ L ಬುಕ್ಕಾಗಿ	ಸದರ 680 / 18-8-36	4075 / 15-9-36

ಅನು ಕ್ರ ಮಾಂಕ	ಪುಸ್ತಕದ ಹೆಸರು.	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ.	ಯಾತಕ್ಕೋಸ್ಕರ ಮಂಜೂರ	ಮೆ ಶಾ. ಸಾ ನಂ.	ಮೆ.ಇ.ಸಾ.ನಂ.
೨೫	ಮಹಾರಾಷ್ಟ್ರದ ಮೂಲ ೧೯೩೬	ಮ. ಎಸ್. ಬಿ. ಜೋಸಿ ಸಾಧನಕೆರೆ ಧಾರವಾಡ.	ಸಿ. ವ್ಹಿ. ಜುಳಕಿ ಸಾಧನಕೆರೆ ಧಾರವಾಡ.	೦- ೮-೦	ಮಾ. ಶಾ. ಗಳ ಶಿ. ರ L ಬುಕ್ಕಾಗಿ ಪ್ರಾ. ಶಾ. ಗಳ ಟ್ರೇ. ಸಂ. ಗಳ ಶಿ. ರ L ಬುಕ್ಕಾಗಿ	s-86-c-681-c / 18-8-36	4077 / ಸದರ
೨೬	ಸಾಣ್ಣುಡಿ ೧೯೩೬	ಮ. ಪಿ. ಜಿ. ಕುಲ ಕರ್ಣಿ ಕ.ಶಾ. ಮಾ. ಬೆಳಗಾವ.	ಡಿ. ಜಿ. ಜೋಸಿ ರಾಮಲಿಂಗಖಿಂಡಿ ಬೆಳಗಾವ	೦- ೫-೦	ಮಾ. ಶಾ. ಗಳ ವಿ. ಗಳ L ಬುಕ್ಕಾಗಿ ಪ್ರಾ. ಶಾ. ಗಳ ವಿ. ಗಳ L ಬುಕ್ಕಾಗಿ	ಸದರ 676 / ಸದರ	4079 / ಸದರ
೨೭	ಪಾಂಡವರ ಕಥೆ ಭಾಗ ೨ ೧ನೆ ಆ. ೧೯೩೪	ಮ. ಆರ್. ಕೆ. ಸುಬ್ಬ ರಾಯಪ್ಪ ಹೆ. ಮಾ. ಗ. ಮಿಡಲ್‌ಸ್ಕೂಲ ಮೈಸೂರ	ಗ್ರಂ. ಕ.	೧- ೦-೦	ಮಾ. ಶಾ. ಗಳಿಗೆ ಹಾಗು ಟ್ರೆ. ಸಂ. ಗೆ T ಬುಕ್ಕಾಗಿ	s-86-c 661-c / 15-8-36	4232 / ಸದರ
೨೮	ಕನ್ನಡ ವ್ಯಾಕರಣ ಮತ್ತು ಲೇಖನ ತಿದ್ದಿ ಬೆಳೆಸಿದ ೩ನೆ ಆ. ೧೯೩೬	ಮ. ಎಸ್. ವ್ಹಿ. ಕಾಮತ ಬಿ. ಎ. (ಆನರ್ಸ್) ಶಿರಸಿ.	ಗ್ರಂ. ಕ.	೦- ೪-೦	ಪ್ರಾ. ಶಾ.ಗಳಿಗೂ ಮಾ. ಶಾ. ಗಳಿಗೂ T ಬುಕ್ಕಾಗಿ	ಸದರ 664 / ಸದರ	4234 / ಸದರ

೨೯	ಮಹಾರಾಷ್ಟ್ರದ ಇಂಗ್ಲಿಷರ ಆಳಿಕೆ ೩ನೆ ಆ. ೧೯೩೪	ಮ. ಎಸ್. ಪಿ. ಬೋಧಕ	ಆರ್. ಆರ್. ಕಮ ಶಾಪುರ ಗದಗ	೦-೧೦ ೦	ಪ್ರಾ. ಶಾ. ಗಳ ಹಾಗು ಮಾ. ಶಾ. ಗಳ ಮತ್ತು ಟ್ರೇ.ಸಂ.ಗಳ T ಬುಕ್ಕಾಗಿ	ಸದರ 608 / 14-8-36
೩೦	ಹಿಂದುಸ್ತಾನದಲ್ಲಿಯ ಮುಸಲ್ಮಾನರ ಆಳಿಕೆ ೩ನೆ ಆ. ೧೯೩೬	ಸದರ	ಸದರ	೦- ೮-೦	ಪ್ರಾ. ಶಾ. ಗಳ T ಬುಕ್ಕಾಗಿ	ಸದರ 659 / ಸದರ
೩೧	ಪೈಗಂಬರ ಮಹಮ್ಮದನು ೨ನೇ ಆ. ೧೯೩೩	ಮ. ನಿಟ್ಟೂರ ಶ್ರೀನಿವಾಸರಾಯರು	ಸತ್ಯಶೋಧನ ಪಬ್ಲಿಶಿಂಗ ಹೌಸ ಬೆಂಗಳೂರು.	೧- ೦ ೦ ೧- ೮-೦ ಕ್ಯಾಲಿಕೊ ಪ್ರತಿ	ಮಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ T ಬುಕ್ಕಾಗಿ	ಸದರ 679 / 18 8-36
೩೨	ರೇಖಾಗಣಿತ ೧ನೆ ಆ. ೧೯೩೬	ಮ. ಕೆ. ಮಂಜಯ್ಯ ಟೀಚರ ಗ. ಹೈ. ಹಾಸನ	ಗ್ರ. ಕ.	೨- ೦ ೦	ಮಾ. ಶಾ ಗಳ T ಬುಕ್ಕಾಗಿ	ಸದರ 662 / 14-8-36

ಸೈಯ್ಯದ ನೂರುಲ್ಲಾ
ಎ. ಇ. ದ ಭಾಗ.

Reg. No. B. 3691

 Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರೇಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ನಂ.	ವಿಷಯ.	ಪುಟ.
೧.	ಶಿಕ್ಷಣದಲ್ಲಿ ಅವಧಾನದ ಮಹತ್ವವು	೧
೨.	ಕೈಬರಹವನ್ನು ತಿದ್ದುವ ಬಗೆ	೯
೩.	ಶಿಶುಶಾಲೆಗಳು	೧೭
೪.	ಕವಿತೆ	೨೩
೫	ಪ್ರಕಟನೆಗಳು	೩೧
೬.	ಪತ್ರಗಳ ಸಾರಾಂಶ	...

Printed by K. R. Bhise at the Karnatak Printing Works, Dharwar
and Published by D. V. Kale, B. A., Head Master,
Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ. ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ಬೆಲೆ ರೂ. ಆ. ಪೈ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦-೮-೦
ಮುಸಲ್ಮಾನರ ಆಳಿಕೆ ೫ನೇ ಇ. ಯ ಸಲುವಾಗಿ (ಹಳಿಪೇಟಿಕೃತ)	೦-೯-೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦-೪-೦
ಹಿಂದುಸ್ಥಾನದ ಇತಿಹಾಸ (ಬಸವನಾಳಕೃತ)	೧-೮-೦
ಲಘುವ್ಯಾಕರಣ (ವೈ. ಕಟ್ಟೀಕೃತ)	೦-೨-೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦-೩-೬
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦-೧೨-೦
ಚಿತ್ರಮಯ ಕೋಷ್ಟಕ (ಉಗ್ರಕೃತ) ೩ನೇ ಇ. ಗೆ	೦-೨-೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦-೪-೦
,, ೩ನೇ ,,	೦-೫-೦
,, ೪ನೇ ,,	೦-೮-೦
ಅಂಕಗಣಿತ (ಗಾಂವಕರಕೃತ) ೩ನೇ ,,	೦-೫-೦
ಧಾರವಾಡ ಜಿಲ್ಹಾ ವರ್ಣನೆ (ಅಣ್ಣೀಗೇರಿ ಕೃತ) ೩ನೇ ಇ. ಗೆ	೦-೪-೬
ವಿಜಾಪೂರ ,, ,, (,,) ೩ನೇ ,,	೦-೪-೬
ಧಾರವಾಡ ಜಿಲ್ಹಾ ,, (ಕುರಡೀಕೃತ)	೦-೫-೦
ಹಿಂದುಸ್ಥಾನ ಭೂಗೋಲು (ಮುಗದಾಲಕೃತ)	೦-೮-೦
ನುಡಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦-೧೦-೦
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	೦-೫-೦
,, ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦-೧೨-೦
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦-೨-೦
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦-೧೦-೦
ಭೂಮಿತಿ (ಚಂದಾವರಕರ ಕೃತ)	೦-೭-೦
ಸರಸ್ವತೀ ವಿಜಯ (ಬೂದೀಹಾಳಕೃತ)	೦-೪-೦

ಪತ್ತೆ:— ಐ. ಆರ್. ಶಿವನಾಗಪ್ಪಾ,
ಬುಕ್‌ಸೇಲರ ಹುಬ್ಬಳ್ಳಿ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೫ | ನವಂಬರ ೧೯೩೬ | ವರ್ಷ ೮ ಸಂ. ೮

ಶಿಕ್ಷಣದಲ್ಲಿ ಅವಧಾನದ ಮಹತ್ವವು

೧. **ಮನಸ್ಸಿನ ಏಕಾಗ್ರತೆಯೇ ಅವಧಾನವು.** ಸೂರ್ಯಪ್ರಕಾಶದಲ್ಲಿ ಉಷ್ಣತೆಯಿರುವದು; ಆದರೆ ಅದು ಪದಾರ್ಥಗಳನ್ನು ಸುಡುತ್ತಿರುವದಿಲ್ಲ. ಅದೇ ಪ್ರಕಾಶವನ್ನು 'ಲೆನ್ಸ್' ಎಂಬ ಕನ್ನಡಿಯನ್ನು ಪ್ರಯೋಗಿಸಿ ಏಕಕೇಂದ್ರವಾಗುವಂತೆ ಮಾಡಿದರೆ ಅಲ್ಲಿ ಪ್ರತ್ಯಕ್ಷ ಬೆಂಕಿಯುಂಟಾಗುವದು. ಇದೇರೀತಿಯಾಗಿ ನಮ್ಮ ಇಂದ್ರಿಯಗಳಿಂದಾಗುವ ಜ್ಞಾನವನ್ನು ಕೇಂದ್ರೀಕರಿಸಿಕೊಂಡರೆ ಮಾತ್ರ ನಮಗೆ ಆ ವಿಷಯದ ಸರಿಯಾದ ಜ್ಞಾನವಾಗುವದು. ನಾವು ಸಂತೆಗೆ ಹೋದಾಗ ಅಲ್ಲಿ ನಡೆದಿರುವ ಜನರ ಗದ್ದಲವೊಂದೇ ಸಾಮಾನ್ಯವಾಗಿ ನಮ್ಮ ಲಕ್ಷ್ಯಕ್ಕೆ ಬರುವದಲ್ಲದೆ ಅಲ್ಲಿ ನೆರೆದಿರುವ ಜನರು ಏನೇನು ಮಾತಾಡುತ್ತಿರುವರೆಂಬದನ್ನು ನಾವು ಕೇಳಿದರೂ ಕೇಳದಂತಿರುವೆವು; ಎಂದರೆ ನಮಗೆ ಅದರ ಜ್ಞಾನವಾಗಿದ್ದರೂ ಅದನ್ನು ಗ್ರಹಿಸಿಕೊಂಡಿರುವದಿಲ್ಲ. ಅಕಸ್ಮಾತ್ ನಮ್ಮ ಹಿಂದೆ ಬಂದು ಮೋಟಾರು ಒದರಿದರೆ ನಾವು ಎಚ್ಚತ್ತವರಂತಾಗಿ ಆಚೆ ಈಚೆ ಸರಿಯುವೆವು. ಇದೇ ಮೇರೆಗೆ ಅಲ್ಲಿ ಕಾಣುವ ಅಸಂಖ್ಯ ವಸ್ತುಗಳನ್ನು ನಾವು ನೋಡಿ

ದರೂ ನೋಡದಂತಿರುತ್ತೇವೆ. ಮನಸ್ಸಿನ ಚಂಚಲತೆಯನ್ನು ತಡೆದು, ಯಾವದೊಂದು ವಸ್ತುವಿನ ಕಡೆಗೆ ಅದನ್ನು ಏಕಾಗ್ರಗೊಳಿಸಿದಾಗ ಮಾತ್ರ ನಮಗೆ ಆ ವಸ್ತುವಿನ ಸ್ಪಷ್ಟವಾದ ಜ್ಞಾನವಾಗುವದು. ಶುಕ್ಲ ಬಿದಿಗೆಯ ದಿನ ಚಂದ್ರಬಿಂಬವನ್ನು ನೋಡಬೇಕಾದರೆ ಅದು ನಮಗೆ ಸುಲಭವಾಗಿ ಕಾಣಿಸುತ್ತಿರುವದಿಲ್ಲ. ಅದನ್ನು ನೋಡಿದ್ದ ನಮ್ಮ ಸ್ನೇಹಿತನೊಬ್ಬನು ಆ ಚಂದ್ರನ ಕಲೆಯಿರುವ ಸ್ಥಾನಕ್ಕೆ ಬೆರಳು ತೋರಿಸಿ 'ಅದೋ ಅಲ್ಲಿದೆ. ಸರಿಯಾಗಿ ನಿಟ್ಟಿಸಿ ನೋಡು' ಎಂದು ಹೇಳಿದಾಗ ನಾವು ಕಣ್ಣಿಟ್ಟು ನೋಡಿ 'ಹೌದು, ಹೌದು, ಇಲ್ಲಿದೆ' ಎಂದು ಹೇಳುವೆವು. ದೂರದಲ್ಲಿ ಹಾಡುವವರ ಗಾಯನದ ದನಿಯನ್ನು ಕೇಳಬೇಕಾದರೆ ಕಿವಿಗೊಟ್ಟು ಆಲಿಸಿ-ಕೇಳಬೇಕಾಗುವದು. ವಾಸನೆಯೊಳಗಿನ ಸೂಕ್ಷ್ಮ ಭೇದಗಳನ್ನು ಗುರುತಿಸಬೇಕಾದರೆ ಪುನಃ ಪುನಃ ಮೂಸಿ ನೋಡಿ ಕ್ಷಣಕಾಲ ಹೆಚ್ಚಿಗೆ ವಿಚಾರಮಾಡಬೇಕಾಗುತ್ತದೆ. ಹೀಗೆ, ಇಂದ್ರಿಯಜನ್ಯವಾದ ಜ್ಞಾನವನ್ನು ಸರಿಯಾಗಿ ಗ್ರಹಿಸಬೇಕಾದರೆ ನಾವು ನಮ್ಮ ಮನಸ್ಸನ್ನು ಏಕಾಗ್ರಗೊಳಿಸಬೇಕಾಗುವದು; ಎಂದರೆ ಆ ಜ್ಞಾನವನ್ನು ಏಕಕೇಂದ್ರವಾಗುವಂತೆ ಮಾಡಬೇಕಾಗುವದು. ಇದಕ್ಕೇ ಅವಧಾನವೆಂದು ಹೆಸರು. ಅವಧಾನವು ಮನಸ್ಸಿನ ಒಂದು ವ್ಯಾಪಾರವೆಂದು ಕೆಲವರೂ ಮನಸ್ಸಿನ ಶಕ್ತಿಯೆಂದು ಕೆಲವರೂ ಹೇಳುತ್ತಿರುವರು. ಅವಧಾನವು ಜ್ಞಾನಕ್ಕೆ ದೀಪದಂತಿರುವದು. ಇರುಳಿನಲ್ಲಿ ದೀಪದ ಸಹಾಯವಿಲ್ಲದೆ ವಸ್ತುಗಳನ್ನು ನೋಡುವದು ಹೇಗೆ ಸಾಧ್ಯವಿಲ್ಲವೋ ಹಾಗೆ ಅವಧಾನವಿಲ್ಲದೆ ನಮಗೆ ವಸ್ತುವಿನ ಸರಿಯಾದ ಜ್ಞಾನವಾಗಲಾರದು.

ಇನ್ನು, ಮನಸ್ಸಿನ ಏಕಾಗ್ರತೆಗೆ ಒಂದು ಕಾರಣವು ಬೇಕಷ್ಟೇ? ಸಂತೆಯ ಗದ್ದಲದಲ್ಲಿ ನಮಗೆ ಬೇಕಾದವನೊಬ್ಬನು ಏನಾದರೂ ಮಾತಾಡಿದರೆ ಅದನ್ನು ನಾವು ಕೇಳಿಕೊಳ್ಳುವೆವು; ಎಂದರೆ ಆತನ ಮಾತುಗಳಿಗೆ ನಾವು ಲಕ್ಷ್ಯಕೊಡುವೆವು. ಮತ್ತು ಮೇಲೆ ಹೇಳಿದಂತೆ ನಮ್ಮ ಹಿಂದೆಯೇ ಮೋಟಾರು ದನಿ ಮಾಡಿದಾಗ ಅದು ನಮಗೆ ಅಪಾಯಮಾಡಬಹುದೆಂಬ ಹೆದರಿಕೆಯಿಂದ ಅತ್ತ ಕಡೆಗೆ ನಮ್ಮ ಲಕ್ಷ್ಯವು ಹೋಗುವದು. ಅರ್ಥಾತ್ ನಮಗೆ ಸಂಬಂಧಿಸಿದ, ನಮಗೆ ಬೇಕಾಗಿರುವ, ಸಂಗತಿಗಳಿಗಷ್ಟೇ ನಾವು ಲಕ್ಷ್ಯ ಕೊಡುವೆವು. ಮಿಕ್ಕವುಗಳನ್ನು ದುರ್ಲಕ್ಷಿಸುವೆವು. ಎಂದರೆ ಅವಧಾನಕ್ಕೆ ನಮ್ಮ ಹಿತಾಹಿತ ಸಂಬಂಧವು, ಅಭಿರುಚಿಯು, ಮೂಲಕಾರಣವೆಂದ ಹಾಗಾಯಿತು.

೨. ಇನ್ನು **ಶಿಕ್ಷಣಕ್ಕೂ ಅವಧಾನಕ್ಕೂ ಸಂಬಂಧವೇ**ನೆಂಬದನ್ನು ನೋಡೋಣ. 'ಮನುಷ್ಯಪ್ರಾಣಿಯು ಸದಾ ವಿದ್ಯಾರ್ಥಿಯಾಗಿರುವನು' ಎಂದು ಹೇಳುವದುಂಟು. ವ್ಯವಹಾರದಲ್ಲಿ ಏನಾದರೊಂದು ಬಗೆಯಿಂದ ಮೋಸ ಮಾಡಿದವನನ್ನು ಕುರಿತು "ನನಗೊಂದು ಒಳ್ಳೆಯ ಪಾಠ ಕಲಿಸಿದೆಯಪ್ಪಾ" ಎಂದು ಹೇಳುವದನ್ನು ನಮ್ಮಲ್ಲಿ ಬಹುಜನರು ಕೇಳಿರಬಹುದು. ಜ್ಞಾನಾರ್ಜನೆಯೇ ಶಿಕ್ಷಣದ ಒಂದು ಪ್ರಧಾನ ಗುರಿ. ಮನುಷ್ಯನ ಜ್ಞಾನಲಾಲಸೆಯು ಆಮರಣಾಂತವಾಗಿ ಇದ್ದೇ ಇರುವದು. ಮತ್ತು ಪ್ರಪಂಚದಲ್ಲಿ ಅವನು ಕ್ಷಣಕ್ಷಣಕ್ಕೆ ಬೇಡೆಂದರೂ, ತಿಳಿದೋ ತಿಳಿಯದೆಯೋ, ಜ್ಞಾನಸಂಪಾದನೆ ಮಾಡುತ್ತನಾಗಿರುವನು. ಪಾಠಶಾಲೆಯಲ್ಲಿ ಕಲಿಯುವ ಪಾಠಗಳಿಗೂ ಮೇಲೆ ಹೇಳಿದಂತೆ ಪ್ರಪಂಚದೊಳಗೆ ಕಲಿಯುವ ಪಾಠಗಳಿಗೂ ತುಲನೆ ಮಾಡಿ ನೋಡಿದರೆ ಅವುಗಳ ವಿಷಯವು ಭಿನ್ನವಾಗಿದ್ದರೂ ಜ್ಞಾನಾರ್ಜನೆಯೆಂಬ ಸಾಮಾನ್ಯ ಧ್ಯೇಯವು ಇವೆರಡರಲ್ಲಿಯೂ ಒಂದೇ ಆಗಿರುವದರಿಂದ ಮಾನವಪ್ರಾಣಿಯು ಸದಾ ವಿದ್ಯಾರ್ಥಿಯೆಂಬ ಮಾತು ವಾಡಿಕೆಯಲ್ಲಿ ಬರಲು ಕಾರಣವಾಯಿತು. ಮೇಲೆ ಮೊದಲನೆಯ ಪ್ರಕರಣದಲ್ಲಿ ವಿವರಿಸಿದ ಸಂಗತಿಗಳಿಂದ ಜ್ಞಾನಕ್ಕೆ ಅವಧಾನವೇ ಮೂಲಕಾರಣವೆಂದು ಸಿದ್ಧವಾಗಿರುವದರಿಂದ ಶಿಕ್ಷಣಕ್ಕೂ ಅವಧಾನಕ್ಕೂ ಇರುವ ನಿಕಟಸಂಬಂಧವು, ಕಾರ್ಯಕಾರಣ ಭಾವವು ತಾನಾಗಿಯೇ ಸಿದ್ಧವಾಗುವದು. ತಾತ್ಪರ್ಯವೇನೆಂದರೆ ಅಭಿರುಚಿಯಿಲ್ಲದೆ ಅವಧಾನವಿಲ್ಲ, ಅವಧಾನವಿಲ್ಲದೆ ಜ್ಞಾನ (ಶಿಕ್ಷಣ) ವಿಲ್ಲ.

೩. ಮನುಷ್ಯನ ಮನಸ್ಸಿನಲ್ಲಿ ಅವಧಾನವೆಂಬ ವ್ಯಾಪಾರವು ಹೇಗೆ ನಡೆಯುವದೆಂಬದನ್ನು ಪರ್ಯಾಲೋಚಿಸಿ ನೋಡಿದರೆ ಅದರ ಬಗ್ಗೆ ವಿಶೇಷ ರೀತಿಯಿಂದ ವಿಚಾರ ಮಾಡಲು ಅನುಕೂಲವಾಗುವದು. ಮನಸ್ಸನ್ನು ಏಕಾಗ್ರಗೊಳಿಸುವದು ಸುಲಭವಲ್ಲ. ಒಂದು ವೇಳೆ ಪ್ರಯತ್ನ ಮಾಡಿ ಏಕಾಗ್ರಗೊಳಿಸಿದರೂ ಅದನ್ನು ಹೆಚ್ಚು ಕಾಲದವರೆಗೆ ಕಾಯ್ದುಕೊಳ್ಳುವದಂತೂ ಬಹು ಕಷ್ಟಸಾಧ್ಯವಾಗುವದು. ಪ್ರಪಂಚದಲ್ಲಿ ಮನಸ್ಸನ್ನು ಆಕರ್ಷಿಸುವ ಸಂಗತಿಗಳು ಅಗಣಿತವಾಗಿವೆ. ಮನಸ್ಸು ಜಾಗ್ರುತವಾಗಿರುವಾಗ ಅದನ್ನು ಆಕರ್ಷಿಸುವ ಅಸಂಖ್ಯ ವ್ಯಾಪಾರಗಳು ಅದರ ಮುಂದೆ ಕ್ಷಣಕ್ಷಣಕ್ಕೆ ಭಿನ್ನಭಿನ್ನ ರೂಪದಿಂದ ಹಾಯ್ದುಹೋಗುತ್ತಿರುವವು. ಈ ಅಸಂಖ್ಯ ಸಂಗತಿಗಳಲ್ಲಿ ಯಾವದಕ್ಕೆ ಮಹತ್ವ

ದರೂ ನೋಡದಂತಿರುತ್ತೇವೆ. ಮನಸ್ಸಿನ ಚಂಚಲತೆಯನ್ನು ತಡೆದು, ಯಾವದೊಂದ ವಸ್ತುವಿನ ಕಡೆಗೆ ಅದನ್ನು ಏಕಾಗ್ರಗೊಳಿಸಿದಾಗ ಮಾತ್ರ ನಮಗೆ ಆ ವಸ್ತುವಿನ ಸ್ಪಷ್ಟವಾದ ಜ್ಞಾನವಾಗುವದು. ಶುಕ್ಲ ಬಿದಿಗೆಯ ದಿನ ಚಂದ್ರಬಿಂಬವನ್ನು ನೋಡಬೇಕಾದರೆ ಅದು ನಮಗೆ ಸುಲಭವಾಗಿ ಕಾಣಿಸುತ್ತಿರುವದಿಲ್ಲ. ಅದನ್ನು ನೋಡಿದ್ದ ನಮ್ಮ ಸ್ನೇಹಿತನೊಬ್ಬನು ಆ ಚಂದ್ರನ ಕಲೆಯಿರುವ ಸ್ಥಾನಕ್ಕೆ ಬೆರಳು ತೋರಿಸಿ 'ಅದೋ ಅಲ್ಲಿದೆ. ಸರಿಯಾಗಿ ನಿಟ್ಟಿಸಿ ನೋಡು' ಎಂದು ಹೇಳಿದಾಗ ನಾವು ಕಣ್ಣಿಟ್ಟು ನೋಡಿ 'ಹೌದು, ಹೌದು, ಇಲ್ಲಿದೆ' ಎಂದು ಹೇಳುವೆವು. ದೂರದಲ್ಲಿ ಹಾಡುವವರ ಗಾಯನದ ದನಿಯನ್ನು ಕೇಳಬೇಕಾದರೆ ಕಿವಿಗೊಟ್ಟು ಆಲೈಸಿ ಕೇಳಬೇಕಾಗುವದು. ವಾಸನೆಯೊಳಗಿನ ಸೂಕ್ಷ್ಮ ಭೇದಗಳನ್ನು ಗುರುತಿಸಬೇಕಾದರೆ ಪುನಃ ಪುನಃ ಮೂಸಿ ನೋಡಿ ಕ್ಷಣಕಾಲ ಹೆಚ್ಚಿಗೆ ವಿಚಾರಮಾಡಬೇಕಾಗುತ್ತದೆ. ಹೀಗೆ, ಇಂದ್ರಿಯಜನ್ಯವಾದ ಜ್ಞಾನವನ್ನು ಸರಿಯಾಗಿ ಗ್ರಹಿಸಬೇಕಾದರೆ ನಾವು ನಮ್ಮ ಮನಸ್ಸನ್ನು ಏಕಾಗ್ರಗೊಳಿಸಬೇಕಾಗುವದು; ಎಂದರೆ ಆ ಜ್ಞಾನವನ್ನು ಏಕಕೇಂದ್ರವಾಗುವಂತೆ ಮಾಡಬೇಕಾಗುವದು. ಇದಕ್ಕೇ ಅವಧಾನವೆಂದು ಹೆಸರು. ಅವಧಾನವು ಮನಸ್ಸಿನ ಒಂದು ವ್ಯಾಪಾರವೆಂದು ಕೆಲವರೂ ಮನಸ್ಸಿನ ಶಕ್ತಿಯೆಂದು ಕೆಲವರೂ ಹೇಳುತ್ತಿರುವರು. ಅವಧಾನವು ಜ್ಞಾನಕ್ಕೆ ದೀಪದಂತಿರುವದು. ಇರುಳಿನಲ್ಲಿ ದೀಪದ ಸಹಾಯವಿಲ್ಲದೆ ವಸ್ತುಗಳನ್ನು ನೋಡುವದು ಹೇಗೆ ಸಾಧ್ಯವಿಲ್ಲವೋ ಹಾಗೆ ಅವಧಾನವಿಲ್ಲದೆ ನಮಗೆ ವಸ್ತುವಿನ ಸರಿಯಾದ ಜ್ಞಾನವಾಗಲಾರದು.

ಇನ್ನು, ಮನಸ್ಸಿನ ಏಕಾಗ್ರತೆಗೆ ಒಂದು ಕಾರಣವು ಬೇಕಷ್ಟೇ? ಸಂತೆಯ ಗದ್ದಲದಲ್ಲಿ ನಮಗೆ ಬೇಕಾದವನೊಬ್ಬನು ಏನಾದರೂ ಮಾತಾಡಿದರೆ ಅದನ್ನು ನಾವು ಕೇಳಿಕೊಳ್ಳುವೆವು; ಎಂದರೆ ಆತನ ಮಾತುಗಳಿಗೆ ನಾವು ಲಕ್ಷ್ಯಕೊಡುವೆವು. ಮತ್ತು ಮೇಲೆ ಹೇಳಿದಂತೆ ನಮ್ಮ ಹಿಂದೆಯೇ ಮೋಟಾರು ದನಿ ಮಾಡಿದಾಗ ಅದು ನಮಗೆ ಅಪಾಯಮಾಡಬಹುದೆಂಬ ಹೆದರಿಕೆಯಿಂದ ಅತ್ತ ಕಡೆಗೆ ನಮ್ಮ ಲಕ್ಷ್ಯವು ಹೋಗುವದು. ಅರ್ಥಾತ್ ನಮಗೆ ಸಂಬಂಧಿಸಿದ, ನಮಗೆ ಬೇಕಾಗಿರುವ, ಸಂಗತಿಗಳಿಗಷ್ಟೇ ನಾವು ಲಕ್ಷ್ಯ ಕೊಡುವೆವು. ಮಿಕ್ಕವುಗಳನ್ನು ದುರ್ಲಕ್ಷಿಸುವೆವು. ಎಂದರೆ ಅವಧಾನಕ್ಕೆ ನಮ್ಮ ಹಿತಾಹಿತ ಸಂಬಂಧವು, ಅಥವಾ ರುಚಿಯು, ಮೂಲಕಾರಣವೆಂದ ಹಾಗಾಯಿತು.

೨. ಇನ್ನು **ಶಿಕ್ಷಣಕ್ಕೂ ಅವಧಾನಕ್ಕೂ ಸಂಬಂಧವೇ**ನೆಂಬದನ್ನು ನೋಡೋಣ. 'ಮನುಷ್ಯಪ್ರಾಣಿಯು ಸದಾ ವಿದ್ಯಾರ್ಥಿಯಾಗಿರುವನು' ಎಂದು ಹೇಳುವದುಂಟು. ವ್ಯವಹಾರದಲ್ಲಿ ಏನಾದರೊಂದು ಬಗೆಯಿಂದ ಮೋಸ ಮಾಡಿದವನನ್ನು ಕುರಿತು '' ನನಗೊಂದು ಒಳ್ಳೆಯ ಪಾಠ ಕಲಿಸಿದೆಯಪ್ಪಾ '' ಎಂದು ಹೇಳುವದನ್ನು ನಮ್ಮಲ್ಲಿ ಬಹುಜನರು ಕೇಳಿರಬಹುದು. ಜ್ಞಾನಾರ್ಜನೆಯೇ ಶಿಕ್ಷಣದ ಒಂದು ಪ್ರಧಾನ ಗುರಿ. ಮನುಷ್ಯನ ಜ್ಞಾನಲಾಲಸೆಯು ಆಮರಣಾಂತವಾಗಿ ಇದ್ದೇ ಇರುವದು. ಮತ್ತು ಪ್ರಪಂಚದಲ್ಲಿ ಅವನು ಕ್ಷಣ ಕ್ಷಣಕ್ಕೆ ಬೇಡೆಂದರೂ, ತಿಳಿದೋ ತಿಳಿಯದೆಯೋ, ಜ್ಞಾನಸಂಪಾದನೆ ಮಾಡುತ್ತ ಸಾಗಿರುವನು. ಪಾಠಶಾಲೆಯಲ್ಲಿ ಕಲಿಯುವ ಪಾಠಗಳಿಗೂ ಮೇಲೆ ಹೇಳಿದಂತೆ ಪ್ರಪಂಚದೊಳಗೆ ಕಲಿಯುವ ಪಾಠಗಳಿಗೂ ತುಲನೆ ಮಾಡಿ ನೋಡಿದರೆ ಅವುಗಳ ವಿಷಯವು ಭಿನ್ನವಾಗಿದ್ದರೂ ಜ್ಞಾನಾರ್ಜನೆಯೆಂಬ ಸಾಮಾನ್ಯ ಧ್ಯೇಯವು ಇವೆರಡರಲ್ಲಿಯೂ ಒಂದೇ ಆಗಿರುವದರಿಂದ ಮಾನವಪ್ರಾಣಿಯು ಸದಾ ವಿದ್ಯಾರ್ಥಿಯೆಂಬ ಮಾತು ವಾಡಿಕೆಯಲ್ಲಿ ಬರಲು ಕಾರಣವಾಯಿತು. ಮೇಲೆ ಮೊದಲನೆಯ ಪ್ರಕರಣದಲ್ಲಿ ವಿವರಿಸಿದ ಸಂಗತಿಗಳಿಂದ ಜ್ಞಾನಕ್ಕೆ ಅವಧಾನವೇ ಮೂಲಕಾರಣವೆಂದು ಸಿದ್ಧವಾಗಿರುವದರಿಂದ ಶಿಕ್ಷಣಕ್ಕೂ ಅವಧಾನಕ್ಕೂ ಇರುವ ನಿಕಟಸಂಬಂಧವು, ಕಾರ್ಯಕಾರಣ ಭಾವವು ತಾನಾಗಿಯೇ ಸಿದ್ಧವಾಗುವದು. ತಾತ್ಪರ್ಯವೇನೆಂದರೆ ಅಭಿರುಚಿಯಿಲ್ಲದೆ ಅವಧಾನವಿಲ್ಲ, ಅವಧಾನವಿಲ್ಲದೆ ಜ್ಞಾನ (ಶಿಕ್ಷಣ) ವಿಲ್ಲ.

೩. ಮನುಷ್ಯನ ಮನಸ್ಸಿನಲ್ಲಿ ಅವಧಾನವೆಂಬ ವ್ಯಾಪಾರವು ಹೇಗೆ ನಡೆಯುವದೆಂಬದನ್ನು ಪರ್ಯಾಲೋಚಿಸಿ ನೋಡಿದರೆ ಅದರ ಬಗ್ಗೆ ವಿಶೇಷ ರೀತಿಯಿಂದ ವಿಚಾರ ಮಾಡಲು ಅನುಕೂಲವಾಗುವದು. ಮನಸ್ಸನ್ನು ಏಕಾಗ್ರಗೊಳಿಸುವದು ಸುಲಭವಲ್ಲ. ಒಂದು ವೇಳೆ ಪ್ರಯತ್ನ ಮಾಡಿ ಏಕಾಗ್ರಗೊಳಿಸಿದರೂ ಅದನ್ನು ಹೆಚ್ಚು ಕಾಲದವರೆಗೆ ಕಾಯ್ದುಕೊಳ್ಳುವದಂತೂ ಬಹು ಕಷ್ಟಸಾಧ್ಯವಾಗುವದು. ಪ್ರಪಂಚದಲ್ಲಿ ಮನಸ್ಸನ್ನು ಆಕರ್ಷಿಸುವ ಸಂಗತಿಗಳು ಅಗಣಿತವಾಗಿವೆ. ಮನಸ್ಸು ಜಾಗ್ರತವಾಗಿರುವಾಗ ಅದನ್ನು ಆಕರ್ಷಿಸುವ ಅಸಂಖ್ಯ ವ್ಯಾಪಾರಗಳು ಅದರ ಮುಂದೆ ಕ್ಷಣಕ್ಷಣಕ್ಕೆ ಭಿನ್ನಭಿನ್ನ ರೂಪದಿಂದ ಹಾಯ್ದುಹೋಗುತ್ತಿರುವವು. ಈ ಅಸಂಖ್ಯ ಸಂಗತಿಗಳಲ್ಲಿ ಯಾವದಕ್ಕೆ ಮಹತ್ವ

ಕೊಡಬೇಕು? ಎಂದರೆ ಯಾವ ಮಾತಿಗೆ ಲಕ್ಷ್ಯಕೊಡಬೇಕು, ಯಾವದನ್ನು ಲಕ್ಷಿಸಲಾಗದು, ಎಂಬದನ್ನು ನಿರ್ಣಯಿಸುವದು ಅಸಾಧ್ಯವಾಗುವದು. ಒಮ್ಮೊಮ್ಮೆ ಅದು ನಮ್ಮ ಶಕ್ತಿಯನ್ನು ಮೀರಿ ಹೋಗಿಬಿಡುವದು. ಮನೆಯಲ್ಲಿ ಮಾಡಿದ ಕಜ್ಜಬಿನ ಎಣಿಕೆಯನ್ನೇ ಗುಣಿಸುತ್ತಿರುವ ಬಾಲಕನು ಪಾಠಶಾಲೆಯಲ್ಲಿ ಶಿಕ್ಷಕನು ೩+೪=? ಎಂದು ಕೇಳಿದಾಗ 'ಏಳು ಕಡಬರಿ' ಎಂದು ಉತ್ತರಕೊಟ್ಟರೆ ಶಿಕ್ಷಕನು ನಗಬೇಕೋ ಸಿಟ್ಟಿಗೇಳಬೇಕೋ? ಪಾಠಶಾಲೆಯೊಳಗಿನ ಬಾಲಕರು ಶಿಕ್ಷಕನು ಕಲಿಸುವ ಪಾಠದ ಕಡೆಗೆ ಲಕ್ಷ್ಯಕೊಡಬೇಕಾದರೆ- ಎಂದರೆ- ಅವರು ತಮ್ಮ ಮನಸ್ಸನ್ನು ಏಕಾಗ್ರತೆಯಿಂದ ಪಾಠದಲ್ಲಿ ತೊಡಗಿಸಬೇಕಾದರೆ, ಶಾಸ್ತ್ರೀಯವಾಗಿ ಹೇಳಬೇಕಾದರೆ ಆ ಪಾಠದಲ್ಲಿ ಬಾಲಕರ ಮನಸ್ಸು ಅವಧಾನಹೊಂದಬೇಕಾದರೆ, ಅವರು ಎರಡು ಬಗೆಯ ಕಾರ್ಯಗಳನ್ನು ಮಾಡಬೇಕಾಗುವದು. ತಮ್ಮ ಮನಸ್ಸನ್ನು ಆಕರ್ಷಿಸುವ ಬಾಹ್ಯ ವ್ಯಾಪಾರಗಳನ್ನು ದುರ್ಲಕ್ಷಿಸಿ, ಆ ಮಾರ್ಗದಲ್ಲಿ ಹರಿದಾಡುವ ಮನಸ್ಸನ್ನು ತಡೆದು, ಶಿಕ್ಷಕನು ಹೇಳುವ ವಿಷಯವು ತಮಗೆ ಆವಶ್ಯಕವೆಂಬ ಭಾವನೆಯನ್ನು ತಂದುಕೊಂಡು, ಇಲ್ಲವೆ ಶಿಕ್ಷಕನು ತಮ್ಮ ಮನಸ್ಸನ್ನು ತನ್ನ ಕಡೆಗೆ ಎಳೆದುಕೊಳ್ಳಲು ಮಾಡುತ್ತಿರುವ ಉಪಾಯಗಳಿಗೆ ಅಧೀನರಾಗಿ, ಆ ಮಾರ್ಗದಲ್ಲಿ ಏಕಾಗ್ರತೆಯನ್ನು ಪಡೆಯಬೇಕಾಗುವದು. ಎಂದರೆ ಅಭಿರುಚಿಯಲ್ಲಿ ತಾರತಮ್ಯವನ್ನು ತಿಳಿದುಕೊಂಡು, ಕಡಿಮೆ ತರಗತಿಯ ಅಭಿರುಚಿಗೆ ಒಳಪಟ್ಟು ಆಟನೋಟಗಳ ಕಡೆಗೆ ಚಂಚಲವಾಗಿ ಹರಿಯುತ್ತಿರುವ ಮನಸ್ಸಿನ ಕಿರಣಗಳನ್ನು ತಡೆದು, ಶಿಕ್ಷಕನು ಹೇಳುವ ಪಾಠದಲ್ಲಿರುವ ಹೆಚ್ಚಿನ ತರಗತಿಯ ಅಭಿರುಚಿಯನ್ನು ತಿಳಿದುಕೊಂಡು, ಮನಸ್ಸನ್ನು ಅದರಲ್ಲಿ ಅವಧಾನಗೊಳಿಸಬೇಕಾಗುವದು. ಇದರಿಂದ ಅವಧಾನವುಂಟಾಗುವಾಗ ಮನಸ್ಸಿನಲ್ಲಿ ಒಂದು ಬಗೆಯ ತುಮುಲವೇ ನಡೆಯುವದೆಂದಹಾಗಾಯಿತು. ಅವಧಾನವು ನಡೆಯುವಾಗ ಮನಸ್ಸಿನಲ್ಲಿ ನಡೆಯುವ ಕಾರ್ಯಗಳನ್ನು ಈ ರೀತಿ ವರ್ಗೀಕರಿಸಬಹುದು.

(೧) ಮನಸ್ಸು ಚಂಚಲವಾಗಿ ಹರಿಯುತ್ತಿರುವ ತನ್ನ ಕಿರಣಗಳನ್ನು ಏಕಕೇಂದ್ರವಾಗುವಂತೆ ಮಾಡಿ ತಾನು ಲಕ್ಷಿಸಬೇಕಾದ ವಸ್ತುವಿನ (ತನಗೆ ಅಭಿರುಚಿಯಿರುವ ವಿಷಯದ) ಮೇಲೆ ಒಟ್ಟುಗೂಡಿಸುವದು.

(೨) ಹಾಗೆ ಒಮ್ಮೆ ಏಕಾಗ್ರವಾದ ಮನಸ್ಸನ್ನು ಪುನಃ ಚಂಚಲವಾಗದಂತೆ ನಿರೋಧಿಸಿ ಸ್ಥಿರೀಕರಿಸುವದು.

(೩) ಇಂತಹ ಏಕಾಗ್ರತೆಯು ಹೆಚ್ಚುಕಾಲದವರೆಗೆ ಉಳಿಯುವಂತೆ ಮಾಡುವದು.

ಈ ಕ್ರಮವನ್ನು ನೋಡಿದರೆ ನಾವು ಅವಧಾನಕ್ಕಾಗಿ ಆರಿಸಿಕೊಂಡ ವಸ್ತುವಿನ ಕಡೆಗೇ ಸಂಪೂರ್ಣ ಲಕ್ಷ್ಯವನ್ನಿಟ್ಟು ಮಿಕ್ಕ ಪದಾರ್ಥಗಳನ್ನೆಲ್ಲ ಮರೆತುಬಿಡಬೇಕೆಂದು ಹೇಳಿದ ಹಾಗಾಯಿತು. ಉದಾಹರಣೆಗಾಗಿ ಮತ್ತೆ ಹಿಂದೆ ಹೋಗೋಣ. ಸಂತೆಯ ಗದ್ದಲದಲ್ಲಿ ನಿಂತಾಗ ನಾವು ಬಹುಜನರ ಮಾತುಗಳನ್ನೆಲ್ಲ ದುರ್ಲಕ್ಷಿಸಿ ನಮ್ಮನ್ನೇ ಕುರಿತು ಮಾತಾಡುತ್ತಿರುವ ವ್ಯಕ್ತಿಯ ದನಿಯಲ್ಲಿಯೇ ನಮ್ಮ ಮನಸ್ಸನ್ನು ಏಕಾಗ್ರತೆಯಿಂದ ತೊಡಗಿಸಿದಾಗಲೇ ಅವನು ಹೇಳುತ್ತಿರುವ ಮಾತು ನಮಗೆ ಅರ್ಥವಾಗುವದು.

(೪) ಅವಧಾನಕ್ಕೆ ಆಂತರಿಕ ಇಲ್ಲವೆ ಬಾಹ್ಯ ಉತ್ತೇಜಕವು, ಆ ಉತ್ತೇಜಕದ ಮೂಲಕ ಉಂಟಾಗುವ ಮನಸ್ಸಿನ ಅಭಿರುಚಿಯು, ಕಾರಣವೆಂದು ಹೇಳಿದ ಮೇಲೆ ಆ ಉತ್ತೇಜಕದ ತತ್ವಗಳು ಯಾವವೆಂಬದನ್ನು ಪರ್ಯಾಲೋಚಿಸಲು ಹೊರಡೋಣ.

ಅವಧಾನಕ್ಕೆ ಕಾರಣವಾದ ಸಂಗತಿಗಳನ್ನು ಈಬಗೆಯಾಗಿ ವರ್ಗೀಕರಿಸಬಹುದು.

(೧) ಪದಾರ್ಥಗಳ ರುಚಿ, ವಾಸನೆ, ಶೀತೋಷ್ಣಗಳು ಮುಂತಾದವು ಅತಿ ಹೆಚ್ಚಾಗಿರೋಣ, ಇಲ್ಲವೆ ತೀರ ಕಡಿಮೆಯಾಗಿರೋಣ. ವಿಶಾಲವಾದ ಪರ್ವತಾವಳಿ, ವರ್ತಮಾನಪತ್ರಗಳಲ್ಲಿಯ ದೊಡ್ಡ ದೊಡ್ಡ ಅಕ್ಷರಗಳು, ತಿಳಿಮೋಡಗಳು ಹೇಲಾಡುತ್ತಿರುವದು ಬದಲಾಗಿ ಒಮ್ಮೆಲೆ ಮೋಡವು ಕವಿದು ಬಂದ ಆಕಾಶ, ಇವು ಒಮ್ಮೆಲೆ ನಮ್ಮ ಲಕ್ಷ್ಯವನ್ನು ತಮ್ಮ ಕಡೆಗೆ ಎಳೆದುಕೊಳ್ಳುವವು.

(೨) ಇದ್ದ ಸ್ಥಿತಿಯಲ್ಲಿ ಆಕಸ್ಮಾತ್ ಬದಲಾಗೋಣ ಅಥವಾ ಅದರಲ್ಲಿ ನಾವೀನ್ಯವು ತೋರಿಬರೋಣ, ಇದರಿಂದಲೂ ನಮ್ಮ ಲಕ್ಷ್ಯವು ಆ ಕಡೆಗೆ ಹೋಗುವದು. ಉಗಿಬಂಡಿಯ ಸ್ಟೇಶನ್ನಿನ ಪೋರ್ಟರನ ಕೈಯಲ್ಲಿಯ ದೀಪದ ಬಣ್ಣವು ಹಸುರು ಇಲ್ಲವೆ ಕೆಂಪು ಪ್ರಕಾಶವನ್ನು ತೋರಿಸಹತ್ತಿದಾಗ ಮಾತ್ರ ನಮ್ಮ ಲಕ್ಷ್ಯವು ಆ ಕಡೆಗೆ ಹೋಗುವದು.

(೩) ಚಲನೆಯು ಲಕ್ಷ್ಯವನ್ನು ಎಳೆಯುವದು. ನಮ್ಮ ಮೈಮೇಲಿನ ಅಂಗಿಯು ಇಲ್ಲವೆ ಉಟ್ಟ ಧೋತರವು ಸದಾ ನಮ್ಮ ಶರೀರಕ್ಕೆ ಹತ್ತಿಕೊಂಡಿದ್ದರೂ ಅವು ನಮ್ಮ ಮನಸ್ಸನ್ನು ತಮ್ಮ ಕಡೆಗೆ ಎಳೆಯಲಾರವು. ಆದರೆ ಶರೀರದ ಯಾವ ದೊಂದು ಭಾಗದಲ್ಲಿ ಒಂದು ಚಿಕ್ಕ ಇರುವೆಯು ಹರಿದಾಡತೊಡಗಿದ ಕೂಡಲೆ ನಮ್ಮ ಲಕ್ಷ್ಯವು ಆ ಕಡೆಗೆ ಹೋಗುವದು. ಶಿಕ್ಷಕನ ಪ್ರಶ್ನೆಗೆ ಉತ್ತರ ಹೇಳಲು ಆತುರನಾದ ಬಾಲಕನು ತನ್ನ ಕೈಕಾಲುಗಳನ್ನು ಕುಣಿಸುತ್ತ ತನ್ನ ಆತುರತೆ ಯನ್ನು ವ್ಯಕ್ತಪಡಿಸುವನಷ್ಟೇ? ಚಲನೆಯು ಲಕ್ಷ್ಯವನ್ನು ಆಕರ್ಷಿಸುವದೆಂಬ ಭಾವನೆಯೇ ಇದಕ್ಕೆ ಕಾರಣವು.

(೪) ವಿಶಾಲವಾದ ಆಕಾಶಕ್ಕಿಂತಲೂ ಅದರಲ್ಲಿ ಹಾರಾಡುವ ಚಿಕ್ಕ ಪಕ್ಷಿಯ ಕಡೆಗೆ ಲಕ್ಷ್ಯವು ಮೊದಲು ಹೋಗುವದು. ಆಕಾಶದ ವ್ಯಾಪಕತೆಯು ಅನಿಶ್ಚಿತವಾಗಿದ್ದು ಪಕ್ಷಿಯ ಆಕಾರವು ನಿಶ್ಚಿತವಾಗಿರುವದೇ ಇದಕ್ಕೆ ಕಾರಣವು.

(೫) ಕಡಲೆ ಚುರಮುರಿಗಳನ್ನು ಕಿಸೆಯಲ್ಲಿಟ್ಟು ತಿನ್ನುತ್ತಿರುವ ಬಾಲಕನ ಇಲ್ಲವೆ ಹಲ್ಲುಶೂಲೆಯಿಂದ ತೊಂದರೆಪಡುತ್ತಿರುವ ಬಾಲಕನ ಲಕ್ಷ್ಯವು (ಅವ ಧಾನವು) ಶಾಲೆಯಲ್ಲಿ ನಡೆಯುವ ಪಾಠದ ಕಡೆಗೆ ಹೋಗಲಾರದು. ಎಂದ ಕಡಲೆ ಚುರಮುರಿಗಳ ರುಚಿಯು ಅಥವಾ ಹಲ್ಲುಬೇನೆಯ ನೋವು ಅವನ ಲಕ್ಷ್ಯ ವನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವವೆಂದ ಹಾಗಾಯಿತು.

(೬) ಅವಧಾನಕ್ಕೆ ಸಂಬಂಧಿಸಿದ ಈ ನಿಯಮಗಳು ಸರ್ವತ್ರ ಅಬಾಧಿತ ವಾದವೆಂದು ಮಾತ್ರ ತಿಳಿಯಲಾಗದು. ವರ್ಗದಲ್ಲಿ ಕುಳಿತ ಶಿಕ್ಷಕನ ಪಾಠವು ನೀರಸವಾಗಿ ಸಾಗಿದ್ದರೆ ಬಾಲಕರಿಗೆ ಸಾಲೆಯ ಗಂಟೆಯ ದನಿಯು ತಟ್ಟನೆ ಕೇಳಿ ಬರುವದು. ಅದೇ ಶಿಕ್ಷಕನೂ ವಿದ್ಯಾರ್ಥಿಗಳೂ ಪಾಠದಲ್ಲಿ ತನ್ಮಯರಾಗಿ ಕುಳಿ ತಿದ್ದರೆ ಅದು ಕೇಳಿಸುವದೇ ಇಲ್ಲ. ಮಿಕ್ಕ ವರ್ಗಗಳ ವಿದ್ಯಾರ್ಥಿಗಳು ವರ್ಗವನ್ನು ಬದಲಾಯಿಸುವಾಗ ಉಂಟಾಗುವ ಗದ್ದಲವನ್ನು ನೋಡಿ ಇಲ್ಲವೆ ಯಾರಾದರೂ ಅವರನ್ನು ಎಚ್ಚರಿಸಿದಾಗ ಪಾಠದ ವೇಳೆಯು ಮುಗಿದಿರುವದೆಂಬುದನ್ನು ಅವರು ತಿಳಿದುಕೊಳ್ಳುವರು. ಈ ಉದಾಹರಣೆಯಿಂದ ತಿಳಿಯುವದೇನಂದರೆ, ಲಕ್ಷ್ಯವನ್ನು ಆಕರ್ಷಿಸುವ ಉತ್ತೇಜಕದ ಪ್ರಾಬಲ್ಯವಷ್ಟೇ ಅಲ್ಲದೆ ಇನ್ನೂ ಅನೇಕ ಕಾರಣಗಳ ಮೂಲಕ ಚಿತ್ತದ ಏಕಾಗ್ರತೆಯು ಎಂದರೆ ಅವಧಾನವು ಉಂಟಾಗುತ್ತಿರು

ವದು. ವಿಷಯಗಳ ಅಭಿರುಚಿಯ ಮೂಲಕ ಅವಧಾನವುಂಟಾಗುವದೆಂಬದು ಒಂದು ಸಾಮಾನ್ಯ ನಿಯಮ. ಆಕಸ್ಮಿಕ ಬದಲಾವಣೆ, ನಾವೀನ್ಯ, ಚಲನೆ, ನಿಶ್ಚಿತ ಸ್ವರೂಪ, ಸುಖದುಃಖಗಳ ಭಾವನೆ ಮುಂತಾದವುಗಳ ಮೂಲಕ ನಮಗೆ ಆಯಾ ವಿಷಯಗಳಲ್ಲಿ ಅಭಿರುಚಿಯುಂಟಾಗುವದೂ, ತನ್ಮೂಲಕ ಅವು ನಮ್ಮ ಲಕ್ಷ್ಯ ವನ್ನು ಆಕರ್ಷಿಸಿಕೊಳ್ಳುವದೂ ಸಾಮಾನ್ಯ ನಿಯಮಗಳು. ಈ ಸಾಮಾನ್ಯ ನಿಯಮಗಳಿಗೆ ಅಪವಾದಗಳೂ ಇರುವವು.

ಈ ಮೇಲೆ ಹೇಳಿದ ಕಾರಣಗಳ ಮೂಲಕ ನಮ್ಮ ಲಕ್ಷ್ಯವು ಆಯಾ ವಸ್ತುಗಳ ಕಡೆಗೆ ಹೋಗುವದೆಂಬದೇನೋ ಸಹಜ. ಆದರೆ ಆ ಲಕ್ಷ್ಯವು ಅಲ್ಲಿ ಹೆಚ್ಚು ಕಾಲದವರೆಗೆ ಸ್ಥಿರವಾಗಿ ಉಳಿಯಲಾರದು. ನಮ್ಮಲ್ಲಿ ಹುಟ್ಟಿದ ಅಭಿರುಚಿಯು ನಿಂತೊಡನೆಯೇ ಅದಕ್ಕೆ ಸಂಬಂಧಿಸಿದ ಏಕಲಕ್ಷ್ಯವೂ ನಿಂತುಹೋಗುವದು. ಉತ್ತೇಜಕಗಳು ನಮ್ಮ ಮನಸ್ಸನ್ನು ತಮ್ಮ ಕಡೆಗೆ ಹೆಚ್ಚು ಕಾಲದವರೆಗೆ ಆಕರ್ಷಿ ಸುವದಕ್ಕೆ ನಮ್ಮ ಮನಸ್ಸಿನ ಅಭಿರುಚಿಯೊಂದೇ ಕಾರಣವಾಗಿರದೆ ನಮ್ಮಲ್ಲಿ ಆಶ್ಚರ್ಯವನ್ನು ಇಲ್ಲವೆ ಭಯವನ್ನು ಒಮ್ಮೊಮ್ಮೆ ಇವೆರಡನ್ನೂ ಹುಟ್ಟಿಸುವದರ ಮೂಲಕವಾಗಿಯೂ ನಮ್ಮ ಚಿತ್ತವನ್ನು ತಮ್ಮ ಕಡೆಗೆ ಎಳೆದುಕೊಳ್ಳುವವು. ಕೋಲ್ಮಿಂಚಿನ ಬೆಳಕು, ಸಿಡಿಲಿನ ಖಡಖಡಿಲೆಂಬ ದನಿ ಇವು ನಮ್ಮ ಲಕ್ಷ್ಯವನ್ನು ಯಾಕೆ ಸೆಳೆದುಕೊಳ್ಳುವವು ? ಹಗ್ಗವನ್ನು ತುಳಿದು ಹಾವೆಂದು ಭಾವಿಸಿಕೊಂಡ ವನು ಏಕೆ ಸಿಡಿದುಬೀಳುವನು ? ಓಡುತ್ತಿರುವ ಉಗಿಬಂಡಿಯ ಸಾಲನ್ನು ನೋಡುತ್ತ ನಿಲ್ಲಲು ಕಾರಣವೇನು ? ಆಕಾಶದಲ್ಲಿ ವಿಮಾನದ ದನಿಯಾಗುವದನ್ನು ಕೇಳಿದೊಡನೆ ಮನೆಯೊಳಗಿನ ಜನರೆಲ್ಲರು ಅಂಗಳಕ್ಕೆ ಏಕೆ ಓಡಿಬರುವರು ? ಮೊಹರಮ್ಮದ ಹುಲಿಯ ಇಲ್ಲವೆ ಓಣಿಯೊಳಗಿನ ಹುಚ್ಚನ ಬೆನ್ನು ಹತ್ತಿ ಹುಡುಗರು ಏಕೆ ಗುಂಪುಗೂಡುವರು ? ಎಂದಮೇಲೆ ಯಾವದೊಂದು ವಿಷಯದಲ್ಲಿ ಮನಸ್ಸನ್ನು ಹೆಚ್ಚು ಕಾಲದವರೆಗೆ ತೊಡಗಿಸಿಕೊಳ್ಳಲು ಯಾವ ಸಂಗತಿಗಳು ಕಾರಣವೆಂದ ಹಾಗಾಯಿತು ?

ಸಾಹಚರ್ಯವು ಅವಧಾನಕ್ಕೆ ಕಾರಣವಾಗುವದು. ನಮಗೆ ಗೊತ್ತಿದ್ದ ಯಾವದಾದರೊಂದು ಸಂಗತಿಗೆ ಹೋಲಿಕೆಯುಳ್ಳ ಇನ್ನೊಂದು ಸಂಗತಿಯನ್ನು ನೋಡಿದ ಕೂಡಲೆ ಅದರ ಕಡೆಗೆ ನಮ್ಮ ಲಕ್ಷ್ಯವು ಹೋಗುವದು. ಕೇವಲ

ಹೊಸ ಸಂಗತಿಗಳಿಗೇ ಆಗಲಿ, ಅಥವಾ ತೀರ ಹಳೆಯ ಸಂಗತಿಗಳಿಗೇ ಆಗಲಿ ನಾವು ಅಷ್ಟು ಲಕ್ಷ್ಯ ಕೊಡಲಾರೆವು. ಹಳೆಯವು ನಮಗೆ ಅತಿಪರಿಚಯದವೆನಿಸುವದರಿಂದ ನಾವು ಅವನ್ನು ದುರ್ಲಕ್ಷಿಸುವೆವು; ಮನೆಯ ಮುಂದೆ ಹಾದುಹೋಗುವ ದನದ ಹಿಂಡನ್ನು ನಾವು ಲಕ್ಷ್ಯವಿಟ್ಟು ನೋಡುತ್ತಿರುವದಿಲ್ಲಷ್ಟೆ. ಕೇವಲ ಹೊಸ ಸಂಗತಿಗಳ ಕಡೆಗೆ, ಅವನ್ನು ನಾವು ಸುಲಭವಾಗಿ ತಿಳಿದುಕೊಳ್ಳಲಾರೆವೆಂಬ ಕಾರಣದಿಂದ, ನಮ್ಮ ಲಕ್ಷ್ಯವು ಹೋಗಲಾರದು. ಕಡ್ಡಿಯ ಪೆಟ್ಟಿಗೆಯೊಳಗಿನ ಕಡ್ಡಿಯನ್ನು ಕೊರೆದರೆ ಬೆಂಕಿ ಹೊತ್ತಿ ಉರಿಯುವುದಕ್ಕೆ ಕಾರಣವೇನೆಂಬ ವಿಷಯವನ್ನು ಕುರಿತು ಎಷ್ಟು ಜನರು ವಿಚಾರ ಮಾಡುವರು ? ಅವರಲ್ಲಿ ಎಷ್ಟು ಜನರ ಲಕ್ಷ್ಯವು ಆ ವಿಷಯದಲ್ಲಿ ತೊಡಗಿರುವದು ? ಆದರೆ ತೀರ ಹೊಸದೂ ಅಲ್ಲದ ತೀರ ಹಳೆಯದೂ ಅಲ್ಲದ ಹಳೆಯದಕ್ಕೆ ಸಂಬಂಧಿಸಿದ ಹೊಸ ಜ್ಞಾನದ ಕಡೆಗೆ ನಮ್ಮ ಲಕ್ಷ್ಯವು ಸ್ವಾಭಾವಿಕವಾಗಿ ಹೋಗಬಹುದು. ದಶಕಪದ್ಧತಿಯನ್ನು ಕಲಿತಿರುವ ಹುಡುಗರಿಗೆ ಅದೇ ಕ್ರಮದಿಂದ ಮುಂದೆ ಸಾಗಿ ದಶಾಂಶಪದ್ಧತಿಯನ್ನು ಕಲಿಸುವದಕ್ಕೆ ಪ್ರಾರಂಭಿಸಿದರೆ ಅವರ ಲಕ್ಷ್ಯವು ವಿಷಯದ ಕಡೆಗೆ ಸ್ವಾಭಾವಿಕವಾಗಿ ಹೋಗುವದು. ದಶಕ ಪದ್ಧತಿಯ ಕಲ್ಪನೆಯಿಲ್ಲದ ಹುಡುಗರಿಗೆ ದಶಾಂಶ ಪದ್ಧತಿಯನ್ನು ಎಷ್ಟೇ ಸುಲಭವಾದ ಉದಾಹರಣೆಗಳನ್ನು ತೆಗೆದುಕೊಂಡು ವಿವರಿಸಿದರೂ ಅದು ಅವರ ಲಕ್ಷ್ಯವನ್ನು ಎಳೆದುಕೊಳ್ಳಲಾರದು.

ಇನ್ನೂ ಒಂದು ಸುಲಭವಾದ ಉದಾಹರಣೆಯಿಂದ ಈ ಮಾತನ್ನು ವಿವರಿಸೋಣ. ಚಿಕ್ಕ ಕೂಸು ಅಳಹತ್ತಿದಾಗ ಅದಕ್ಕೆ ಅಪರಿಚಿತಳಾದ ದಾಯಿಯು ಎತ್ತಿಕೊಂಡು ಎಷ್ಟು ಆಡಿಸಿದರೂ ಅಳುವದನ್ನು ಬಿಡದು. ಅದೇ ಮಗುವು ತನ್ನ ತಾಯಿಯ ದನಿಯನ್ನು ಕೇಳಿದೊಡನೆ ಅಳುವದನ್ನು ನಿಲ್ಲಿಸಿ ಅವಳ ಮೋರೆಯ ಕಡೆಗೆ ನೋಡಹತ್ತುವದು. ಯಾಕೆ ? ಆ ಮಗುವಿಗೆ ತಾಯಿಯ ಪರಿಚಯವಿರುವದು. ಅವಳು ತನಗೆ ಮೊಲೆಕುಡಿಸುವಳೆಂಬ ವಿಚಾರವು ಆ ಮಗುವಿನ ಮನಸ್ಸಿನಲ್ಲಿ ಸಾಹಚರ್ಯದಿಂದ ಹುಟ್ಟಿ ಆ ಸುಖದ ಕಲ್ಪನೆಯಿಂದ ಅದು ಸುಮ್ಮನಾಗುವದು.

ಜಿಜ್ಞಾಸೆಯು ಅವಧಾನಕ್ಕೆ ಒಂದು ಮಹತ್ವದ ಕಾರಣವಾಗುವದು. ಶಾಸ್ತ್ರಶೋಧಕನು ಯಾವದೊಂದು ಗೂಢಸಂಗತಿಯನ್ನು ಕುರಿತು ಪ್ರಯೋಗ

ಮಾಡುತ್ತಿರುವಾಗ, ತರ್ಕವಿತರ್ಕ ಮಾಡುತ್ತಿರುವಾಗ, ತನ್ನನ್ನು ತಾನೇ ಮರೆತಿರುವಷ್ಟು ಆ ವಿಷಯದಲ್ಲಿ ತನ್ಮಯನಾಗಿರುವನು. ಎಂದರೆ ಅವನು ಆ ವಿಷಯದಲ್ಲಿ ಅಷ್ಟು ಲಕ್ಷ್ಯವನ್ನು ತೊಡಗಿಸಿರುವನು ಅಂದರೆ ಅವಧಾನಹೊಂದಿರುವನು. ಇದರಂತೆ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಲ್ಲಿ ಆಯಾ ವಿಷಯಗಳಲ್ಲಿ ತಕ್ಕಷ್ಟು ಜಿಜ್ಞಾಸೆಯನ್ನು ಹುಟ್ಟಿಸದಿದ್ದರೆ ಅವರ ಲಕ್ಷ್ಯವು ಆ ವಿಷಯಗಳ ಕಡೆಗೆ ಹೋಗಲಾರದೆಂಬದು ಸಹಜವೇ ಸರಿ.

ಸ್ವಾಭಾವಿಕವಾದ ಮನಸ್ಸಿನ ಪ್ರವೃತ್ತಿಯೂ ಅವಧಾನಕ್ಕೆ ಕಾರಣವಾಗುವದುಂಟು. ಗಾಯನದಲ್ಲಿ ಪ್ರವೃತ್ತಿಯುಳ್ಳವನು ಯಾರಾದರೂ ಹಾಡುವದನ್ನು ಕೇಳಿದೊಡನೆ ಆ ಕಡೆಗೆ ಅವನ ಲಕ್ಷ್ಯವು ಬೇಡೆಂದರೂ ಹೋಗಿಬಿಡುವದು. ನಮ್ಮ ಪ್ರೀತಿಯವರ ನಿರೀಕ್ಷಣೆಯಲ್ಲಿ ಕುಳಿತಿದ್ದಾಗ ಯಾರಾದರೂ ನಡೆದುಬಂದ ಕಾಲಿನ ಧ್ವನಿಯಾದರೂ ಸಾಕು, ನಮ್ಮ ಲಕ್ಷ್ಯವು ಆಕಡೆಗೆ ಹೋಗಿಬಿಡುವದು.

ಒಟ್ಟಿಗೆ ಸಾಹಚರ್ಯ, ಜಿಜ್ಞಾಸೆ, ಸ್ವಾಭಾವಿಕವಾದ ಮನಸ್ಸಿನ ಪ್ರವೃತ್ತಿ ಇವು ಅವಧಾನದ ಸ್ಥಿರತೆಗೆ ಸಹಾಯಮಾಡುವವೆಂದು ಹೇಳಿದಂತಾಯಿತು.

(ಮುಂದೆ ಸಾಗುವದು.)

---

* ಕೈಬರಹವನ್ನು ತಿದ್ದುವ ಬಗೆ

ಲೇಖಕ.— ಶ್ರೀ. ಲಕ್ಷ್ಮಣ ವಿಶ್ವನಾಥ ಘಾಟಕ, ಕೋಟುಮಚಗಿ

ಶಿಕ್ಷಣದಲ್ಲಿ ಓದು, ಬರಹ ಇವೆರಡು ಅತಿಮಹತ್ವದ ವಿಷಯಗಳಾಗಿವೆ. ಮನುಷ್ಯನು ಸಾಕ್ಷರಿಯೆನಿಸಬೇಕಾದರೆ ಅವನಿಗೆ ಓದು-ಬರಹ ಇವೆರಡೂ ಅವಶ್ಯವಾಗಿ ಬರಲೇಬೇಕು. ಓದು-ಬರಹಗಳೇ ಶಿಕ್ಷಣದ ನಿಜವಾದ ತಳಹದಿಗಳಾಗಿವೆ. ಮನಸ್ಸಿನಲ್ಲಿ ತಲೆದೋರಿದ ವಿಚಾರಗಳನ್ನು ನಾವು ಮಾತನಾಡುವ ಭಾಷೆಗನುಸರಿಸಿ ನಮ್ಮ ಪೂರ್ವಜರು ಗೊತ್ತುಮಾಡಿದ ಗುರುತುಗಳಿಂದ ಬರೆದು ತೋರಿಸುವದೇ ಬರಹವು. ಬೇರೆ ಬೇರೆ ಜನಾಂಗದವರ ಬರಹಗಳು ಬೇರೆ ಬೇರೆ

---

* ಸನ್ ೧೯೩೬ನೆಯ ಅಕ್ಟೋಬರ ತಿಂಗಳ ೧೨-೧೩ ಈ ತಾರೀಖುಗಳಲ್ಲಿ ಗದಗ ನಗರದಲ್ಲಿ ನಡೆದ ಗದಗ ತಾಲೂಕ ಶಿಕ್ಷಣಸಮ್ಮೇಲನದಲ್ಲಿ ಮಾಡಿದ ಭಾಷಣವು.

ಇರುತ್ತವೆ. ನಮ್ಮ ಕನ್ನಡ ಬರಹವು ದ್ರಾವಿಡವರ್ಗಕ್ಕೆ ಸೇರಿದೆ. ಅಶೋಕ ಸಾರ್ವಭೌಮನಿಂದ ಪ್ರಚಲಿತವಾಗಿರುವ ಹಾಗು ನಮ್ಮದೇಶದ ಎಲ್ಲ ಆಧುನಿಕ ಲಿಪಿಗಳ ಉಗಮಸ್ಥಾನವಾದ 'ಬ್ರಾಹ್ಮೀ'ಲಿಪಿಯಿಂದಲೇ ಕನ್ನಡ ವರ್ಣಮಾಲೆಯು ಜನಿಸಿದೆ. ಕನ್ನಡ ಲಿಪಿಯು ವರ್ತುಳ, ಅರ್ಧ ವರ್ತುಳ ಮುಂತಾದ ದುಂಡಗಿನ ಆಕೃತಿಗಳ ಯೋಜನೆಯಿಂದಲೇ ಉಂಟಾಗಿರುವದರಿಂದ ಇದರ ಬರಹವು ಕಣ್ಣಿಗೆ ಹೆಚ್ಚು ಮನೋಹರವಾಗಿ ತೋರುವದು; ದುಂಡಗೆ ಬರೆಯುವದೇ ಕನ್ನಡ ಲಿಪಿಯ ವೈಶಿಷ್ಟ್ಯವಾಗಿದೆ.

ಬರಹವು ಒಂದುಬಗೆಯ ಚಿತ್ರಕಲೆಯೇ ಆಗಿದೆ. ಈ ಕಲೆಯ ಶಿಕ್ಷಣವು ಶಾಲೆಯಲ್ಲಿಯೇ ಮೊದಲು ಆರಂಭವಾಗುವದು. ವಿದ್ಯಾರ್ಥಿ ದಶೆಯಲ್ಲಿ ಬರೆಬರೆದು ರೂಢಿಗೆ ಬಂದ ಕ್ರಮವೇ ದೊಡ್ಡವರಾದಮೇಲೆ ಬರೆಯುವ ಅವರ ವ್ಯಾವಹಾರಿಕ ಲೇಖನದಲ್ಲಿಯೂ ಕಂಗೊಳಿಸುವದು. ಅರೆ-ಅಕ್ಷರ ಬರೆಯುವದು, ಅಕ್ಷರಗಳನ್ನು ಅಂದಗೆಡಿಸಿ ಅಂಕಡೊಂಕಾಗಿ ಬರೆಯುವದು, ಓದುಗರಿಗೆ ತಿಳಿಯದಂತೆ ಅಕ್ಷರ ಗಳನ್ನು ಮನಬಂದಂತೆ ಗೀಚುವದು, ಇವೇ ಕೈಬರಹದಲ್ಲಿಯ ಮುಖ್ಯ ತ್ರಿದೋಷ ಗಳಾಗಿವೆ. ಈ ತ್ರಿದೋಷಕ್ಕೆ ಬರೆಹಗಾರರ ಅವಸರ, ತಾಳ್ಮೆಯಿಲ್ಲದಿರೋಣ, ಕೈಯೊಳಗಿನ ಸ್ನಾಯುಗಳ ದೋಷ ಇವು ಮೂಲ ಕಾರಣಗಳು. ಆ ಮೇಲೆ ಇದೇ ರೂಢಿಯಾಗಿ ಅವರಿಗೆ ಬಳ್ಳೆಯ ಅಕ್ಷರವನ್ನು ಬರೆಯುವದು ಅಸಾಧ್ಯವಾಗಿ ಹೋಗು ವದು. ಅಕ್ಷರದ ಮಟ್ಟ (ವಳಣ) ದಿಂದ ಬರೆಹಗಾರನ ಮನಸ್ಸಿನ ಒಲವು, ಗುಣ ಸ್ವಭಾವ ಇವು ಗೊತ್ತಾಗುವವೆಂದು ಶಾಸ್ತ್ರಜ್ಞರು ಹೇಳುತ್ತಿರುವರು. ಇನ್ನು ಅಶುದ್ಧತೆ ಎಂಬದೊಂದು ದೋಷವದೆ. ಆ ವಿಚಾರವು ಭಾಷೆಗೆ ಸಂಬಂಧಿಸಿರುವ ಮೂಲಕ ಅದನ್ನು ಇಲ್ಲಿ ವಿವರಿಸುವ ಕಾರಣವಿಲ್ಲ. ಒಟ್ಟಿಗೆ ಮೇಲಿನ ತ್ರಿದೋಷಗ ಳಾಗದಂತೆ ದುಂಡಗೆ ಬರೆಯಲಿಕ್ಕೆ ಕಲಿಸುವದೇ ನಮ್ಮ ಕೈ-ಬರಹದ ಶಿಕ್ಷಣದ ಮುಖ್ಯ ಗುರಿಯಾಗಿದೆ. ಈ ಗುರಿಯನ್ನನುಸರಿಸಿಯೇ ಪ್ರಾಥಮಿಕ ಶಾಲೆಗಳಲ್ಲಿಯ ಬಾಲಕರ ವರ್ಗದಿಂದಾರಂಭಿಸಿ ಏಳನೆಯ ಇಯತ್ತೆ ಸಹಿತವಾಗಿ ಎಲ್ಲ ವರ್ಗಗಳ ದೊಡ್ಡ ಹಾಗು ಸಣ್ಣ ಹೀಗೆ ಎರಡೂ ಬಗೆಯ ಅಕ್ಷರಗಳನ್ನು ತಿದ್ದುವ ಬಗೆಯನ್ನು ಶೈಕ್ಷಣಿಕ ದೃಷ್ಟಿಯಿಂದ ಕೇವಲ ವ್ಯಾವಹಾರಿಕವಾಗಿ ಇಲ್ಲಿ ವಿವೇಚಿಸಿದೆ.

ಬಾಲಕರ ವರ್ಗ:— ಈ ವರ್ಗದಲ್ಲಿಯ ಹುಡುಗರು ಹೊಸದಾಗಿ ಶಾಲೆಗೆ ಬಂದವರಿದ್ದು, ಅವರ ಬರಹವೆಲ್ಲ ಮುಖ್ಯತಃ ಪಾಟಿಯ ಮೇಲೆಯೇ ಇರುವದು.

ಈ ವರ್ಗಕ್ಕೆ ಸಣ್ಣ ಅಕ್ಷರಗಳನ್ನು ಬರೆಯಿಸದೆ ಕ. ಹ. ಯ ಮೇಲೆ ಆದಷ್ಟು ದೊಡ್ಡ
ಕ್ಷರಗಳನ್ನೇ ಬರೆಯಿಸಬೇಕು. ದೊಡ್ಡ ಅಕ್ಷರಗಳ ಬರಹದಿಂದ ರಟ್ಟೆಗೂ ಸಣ್ಣ
ಕ್ಷರಗಳ ಬರಹದಿಂದ ಬೆರಳುಗಳಿಗೂ ವ್ಯಾಯಾಮವಾಗುವದು. ಬೆರಳುಗಳಿ
ಂತಲೂ ಮೊದಲು ರಟ್ಟೆಯನ್ನು ತಿದ್ದುವದೇ ಯೋಗ್ಯವು. ಅದಕ್ಕಾಗಿ ಚಿಕ್ಕಮಕ್ಕಳ
ಕ್ಷರಗಳು ಆದಷ್ಟು ದೊಡ್ಡವಿರಬೇಕು. ಈ ವರ್ಗದಲ್ಲಿ ಬಾಲಕರ ದೃಷ್ಟಿಗೆ
ಳುವಂತೆ ಶಾಲೆಯ ಕೋಣೆಯಲ್ಲಿ ದುಂಡಗೆ ಬರೆದ ಮೂಲಾಕ್ಷರ-ಗುಣಿತಾಕ್ಷ
ಗಳ ದೊಡ್ಡ ದೊಡ್ಡ ಪಟಗಳನ್ನು ತೂಗಹಾಕಿರಬೇಕು. ಅಂದರೆ ಅವುಗಳನ್ನು
ನೋಡಿ ನೋಡಿ ಅವುಗಳ ಚಿತ್ರವು ಬಾಲಕರ ಕಣ್ಣಿನಲ್ಲಿ ಚನ್ನಾಗಿ ಮೂಡಿ, ಅದ
ಂದ ಅವರ ಬರಹವು ಬಹುಮಟ್ಟಿಗೆ ಸುಧಾರಿಸುವದು. ಈ ವರ್ಗದಲ್ಲಿ ಕರಿಹಲಿಗೆ,
ಪಾಟಿ ಇವುಗಳ ಮೇಲೆ ಜೋಡು ರೂಲುಗಳನ್ನು ಹಾಕಿ, ಅವುಗಳಲ್ಲಿಯೇ ಹುಡುಗ
ಂದ ದುಂಡಗೆ ಅಕ್ಷರ-ಬಳ್ಳಿ-ಶಬ್ದಗಳನ್ನು ಬರೆಯಿಸಬೇಕು. ಹೀಗೆ ಜೋಡು
ರೂಲುಗಳಲ್ಲಿ ಬರೆಯಿಸುವಾಗ ಅಕ್ಷರಗಳ ಮೇಲ್ಭಾಗವು ಮೇಲಿನ ರೂಲಿಗೂ,
ಳಭಾಗವು ಕೆಳಗಿನ ರೂಲಿಗೂ ಹತ್ತಬೇಕೆಂಬದನ್ನು ಶಿಕ್ಷಕರು ಅವರಿಗೆ ತಿಳಿಸಿ
ಡಬೇಕು. ಬಾಲಕರು ಪಾಟಿಯಮೇಲೆ ಬರೆಯುವಾಗ ಆದಷ್ಟು ದೊಡ್ಡ
ನ್ಸಿಲು ಅವರ ಕೈಯಲ್ಲಿರಬೇಕು. ಸಣ್ಣ ಪೆನ್ಸಿಲಿನಿಂದ ಬರೆಯುವದರಿಂದ ಅವರ
ಳಿಯ ಬೊಟ್ಟುಗಳಿಗೆ ಬಹಳ ನೋವು ಆಗುವದು. ಅಂಕೆಗಳನ್ನು ಚನ್ನಾಗಿ
ರೆಯುವ ಕ್ರಮವನ್ನಾದರೂ ಇದೇ ವರ್ಗದಲ್ಲಿಯೇ ಕಲಿಸಬೇಕು. ಒಟ್ಟಿಗೆ
ನೋಡು ರೂಲುಗಳಲ್ಲಿ ದುಂಡಗೆ ಬರೆಯುವ ಮೆಟ್ಟನ್ನು ಈ ಬಾಲಕರ ವರ್ಗ
ಲ್ಲಿಯೇ ಆರಂಭಿಸಬೇಕು. ಮೊದಮೊದಲು ಖಡುವಿನಂಥ ಮೆತ್ತಗಿನ ಪದಾರ್ಥ
ಂದ ಬರೆಯುವ ರೂಢಿ ಮಾಡಿಸುವದು ಒಳ್ಳೆಯದು. ಅದಕ್ಕೂ ಮೊದಲು ನೆಲದ
ಲೆ ಉಸುಕು ಹರವಿ ಕೈ ಬೆರಳಿನಿಂದ ಇಲ್ಲವೆ ಬಿದರಿನ ಕಡ್ಡಿಯಿಂದ ಅಕ್ಷರ
ನ್ನು ಬರೆಯಿಸಿದರೆ ಅಕ್ಷರಾವಯವಗಳ ಜೋಡಣೆ, ಅವುಗಳ ಸ್ವತಂತ್ರಆಕಾರ,
ಅವಯವಗಳ ಸಂಯೋಗದಿಂದ ಹುಟ್ಟುವ ಸಾಮಾನ್ಯ ಆಕಾರ ಇವು ಬಾಲಕರ
ನಸ್ಸಿನಲ್ಲಿ ಮೂಡಲು ಅನುಕೂಲವಾಗುವದು. ಆದರೆ ಈ ಸಮಯದಲ್ಲಿ ಈ
ಾವ ಶಾಸ್ತ್ರೀಯ ವಿಚಾರದಲ್ಲಿಯೂ ಬಾಲಕನ ಮನಸ್ಸನ್ನು ದಣಿಸಲಾಗದೆಂಬ
ನ್ನು ಕೇವಲ ಕೈಯೊಳಗಿನ ಸ್ನಾಯುಗಳು, ಕಣ್ಣು ಇವುಗಳಿಗೆ ಯೋಗ್ಯ ಶಿಕ್ಷಣವು
ರೆದು ಅವು ತಾವಾಗಿಯೇ ಈ ಮಾರ್ಗದಲ್ಲಿ ಕೆಲಸಮಾಡಲು ಶಕ್ತಿಯನ್ನು
ಡೆಯಬೇಕೆಂದೂ ಇಲ್ಲಿ ಹೇಳದಿರಲಾರೆವು.

ಒಂದನೆಯ ಇಯತ್ತೆ :— ಈ ವರ್ಗದ ಹುಡುಗರ ಕೋಣೆಯಲ್ಲಿ ದ್ವಿತ್ವಾಕ್ಷರ ಒತ್ತಕ್ಷರಗಳ ಶಬ್ದಗಳುಳ್ಳ ದೊಡ್ಡ ದೊಡ್ಡ ಪಟಗಳಿರಬೇಕು. ಬಾಲಕರ ವರ್ಗದಂತೆ ಈ ವರ್ಗದಲ್ಲಿಯೂ ಕರಿಹಲಿಗೆ-ಪಾಟಿಗಳಲ್ಲಿ ಜೋಡು ರೂಲುಗಳ ನಡುವೆಯೇ ಶಬ್ದಗಳನ್ನು ಬರೆಯಿಸಬೇಕು. ಅಕ್ಷರಗಳ ಒತ್ತುಗಳನ್ನು ಬರೆಯುವ ಕ್ರಮವನ್ನು ಶಿಕ್ಷಕನು ಹುಡುಗರಿಗೆ ಚನ್ನಾಗಿ ತಿಳಿಸಿಕೊಡಬೇಕು. ಓದಿದ ಪಾಠಗಳಲ್ಲಿಯ ಎರಡು ಮೂರು ಸಾಲುಗಳನ್ನು ಪಾಟಿಯಮೇಲೆ ಜೋಡು ರೂಲುಗಳಲ್ಲಿ ದಿನಾಲು ತಪ್ಪದೆ ಹುಡುಗರಿಂದ ಬರೆಯಿಸುತ್ತಿರಬೇಕು. ಅಂಕೆಗಳ ಬರಹದ ಕಡೆಗೆಯೂ ಲಕ್ಷ್ಯವಿರಬೇಕು. ಬಾಲಕರ ವರ್ಗದಂತೆ ಈ ವರ್ಗದಲ್ಲಿಯೂ ದೊಡ್ಡ ಅಕ್ಷರಗಳ ಬರಹವೇ ಹೆಚ್ಚಾಗಿ ಇರಬೇಕು.

ಎರಡನೆಯ ಇಯತ್ತೆ:— ಈ ವರ್ಗದಲ್ಲಿ ‘ಕಾಪಿ’ ಬರಹವು ಹೊಸದಾಗಿ ಆರಂಭವಾಗುವದು. ಆದುದರಿಂದ ಶಿಕ್ಷಕನು ಮೊದಲು ಹುಡುಗರಿಗೆ ಲೆಕ್ಕಣಿಕೆ ಹಿಡಿಯುವ ಕ್ರಮವನ್ನು ಕಲಿಸಿ, ದಿನಾಲು ಮಾದರಿಯ ಬರಹದ ಮೂಲಾಕ್ಷರಯುಕ್ತವಾಕ್ಯಗಳ ಕಿತ್ತೆಗಳನ್ನು ತೀಡಿಸಿ, ಅಂದವಾಗಿ ಬರೆದ ಮಾದರಿಯ ಕಾಪಿಯ ಪಟವನ್ನು ಎದುರಿಗಿರಿಸಿ, ಅದನ್ನು ನೋಡಿ ಒಂದು ಇಂಚಿನ ಅಂತರದ ಜೋಡು ರೂಲುಗಳಲ್ಲಿ ಅವರಿಂದ ದೊಡ್ಡ ಅಕ್ಷರಗಳ ಕಾಪಿ ಬರೆಯಿಸಬೇಕು. ಸಣ್ಣ ಅಕ್ಷರಗಳ ರೂಢಿಯ ದೆಸೆಯಿಂದ ಅದನ್ನೂ ಒಂದು ಸಾಲು ಗಲಗಿನಿಂದ (ಟಾಕಿನಿಂದ) ಕೆಳಗೆ ಬರೆಯಿಸಬೇಕು. ಅಂಕೆಗಳನ್ನು ಸಹ ಅಕ್ಷರಗಳೊಡನೆಯೇ ಬರೆಯಿಸಬೇಕು. ಇಡಿಯ ವರ್ಷದ ಕಾಪಿಯ ಬರಹದ ವಾಕ್ಯಗಳಲ್ಲಿ ಎಲ್ಲ ಅಕ್ಷರ ಗುಂಪು ಮುಗಿಯಬೇಕು. ಹುಡುಗರ ಕಡೆಯಿಂದ ಕಾಪಿಯ ರೂಲುಗಳನ್ನು ಪೆನ್ಸಿಲಿನಿಂದ ಹೊಡೆಯಿಸುವದಕ್ಕಿಂತ ದಾರದ ರಟ್ಟಿನಿಂದ ಹೊಡೆಯಿಸುವದು ಹೆಚ್ಚು ಚಂದವೂ ಸುಲಭವೂ ಆಗಿದೆ. ಅದರಂತೆಯೇ ಶಿಕ್ಷಕನು ವೇಳೆ ಕಳೆದು ಹುಡುಗರಿಗೆ ಲೆಕ್ಕಣಿಕೆ ಕೆತ್ತಿಕೊಡುವದಕ್ಕಿಂತಲೂ ಪೇಟೆಯಲ್ಲಿ ಸಿಗುವ ಆಯಾ ಇಯತ್ತೆಯ ನಿಬ್ಬುಗಳಿಂದಲೇ ಕಾಪಿ ಬರೆಯಿಸುವದು ಹೆಚ್ಚು ಸುಲಭವಾಗಿದೆ. ಆದರೆ ನಿಬ್ಬಿನಿಂದ ಬರೆಯುವದು ಲೆಕ್ಕಣಿಕೆಯಿಂದ ಬರೆಯುವಷ್ಟು ಸುಲಭವಾಗದು. ಇನ್ನು ಹುಡುಗರು ಮಸಿಯಿಂದ ಬರೆಯುವಾಗ ಕೈ ಹಾಗು ಅಂಗಿಯ ತೋಳು ಬಡಿದು ಬರಹ ಕೆಡಬಾರದೆಂದು ಯಾವಾಗಲೂ ಬರೆಯುವಾಗ ಮಸಿಯ ದೌತಿಯನ್ನು ಬಲಕ್ಕೆ ಇಟ್ಟುಕೊಳ್ಳಬೇಕೆಂಬದನ್ನು ಇದೇ ವರ್ಗದಲ್ಲಿಯೇ ಅವರಿಗೆ ತಿಳಿಸಿ

ಹೇಳಬೇಕು. ಧಾರವಾಡ ಟ್ರೇನಿಂಗ ಕಾಲೇಜದ ಸೇವಾನಿವೃತ್ತ ಪ್ರಿನ್ಸಿಪಾಲರಾದ ಶ್ರೀಯುತ ರಾಮರಾವ ಕುಲಕರ್ಣಿ ಎಲ್. ಸಿ. ಇ. ಇವರು ಬರಹದ ವಿಷಯವನ್ನು ಹೆಚ್ಚು ಅಭ್ಯಾಸಿಸಿ ಸಿದ್ಧಗೊಳಿಸಿದ ಎರಡನೆಯ ಇಯತ್ತೆಯಿಂದ ಐದನೆಯ ಇಯತ್ತೆಯ ವರೆಗಿನ ಲೇಖನ ಪುಸ್ತಕಗಳು ಆಯಾ ಇಯತ್ತೆಗಳ ಕಾಪಿಯ ಬರಹಕ್ಕೆ ಉಪಯೋಗಿಸಲಿಕ್ಕೆ ಯೋಗ್ಯವಾಗಿವೆ. ಬರಹದ ಶಾಸ್ತ್ರೀಯ ಸ್ವರೂಪವು ಇವುಗಳಲ್ಲಡಕವಾಗಿದೆ.

ನಿಬಂಧ ಶಿಕ್ಷಣವು ಮೊದಲು ಬಾಲಕರ ವರ್ಗದಲ್ಲಿಯೇ ಆರಂಭವಾಗುವದು; ಒಂದನೆಯ ಇಯತ್ತೆಯಲ್ಲಿಯೂ ಇರುವದು. ಆದರೆ ಅವು ಕಥೆಯ ಇಲ್ಲವೆ ಸಂಭಾಷಣೆಯ ರೂಪದ ಬಾಯಿ ನಿಬಂಧಗಳು. ಮುಂದೆ ಈ ವಿಷಯವು ಲುಪ್ತವಾಗಿ ಐದನೆಯ ಇಯತ್ತೆಯಲ್ಲಿ ಒಮ್ಮಿಂದೊಮ್ಮೆ ತಲೆ ಎತ್ತುವದು. ಶಿಕ್ಷಣದ ದೃಷ್ಟಿಯಿಂದ ಇದು ತೀರ ಅಯೋಗ್ಯವು. ಅದಕ್ಕಾಗಿ ಒಂದನೆಯ ಇಯತ್ತೆಗೂ ಐದನೆಯ ಇಯತ್ತೆಗೂ ನಡುವೆ ಕಡಿದುಹೋದ ಈ ನಿಬಂಧ ವಿಷಯದ ಕೊಂಡಿಗಳನ್ನು ಜೋಡಿಸಿ, ಅದನ್ನು ಸರಿಪಡಿಸುವದಕ್ಕಾಗಿ ಎರಡನೆಯ, ಮೂರನೆಯ, ನಾಲ್ಕನೆಯ ಇಯತ್ತೆಗಳಿಗೆ ಅವರ ಯೋಗ್ಯತೆಯಂತೆ ಸುಲಭವಾದ ಸಣ್ಣ ಸಣ್ಣ ನಿಬಂಧಗಳನ್ನು ಬರೆಯಿಸುವದು ಶೈಕ್ಷಣಿಕ ದೃಷ್ಟಿಯಿಂದ ಅತ್ಯಂತ ಯೋಗ್ಯವಾಗಿದೆ. ಈ ಕ್ರಮದಂತೆ ಎರಡನೆಯ ಇಯತ್ತೆಗೆ ಅವರ ನಿತ್ಯ ಪರಿಚಯದ ಎತ್ತು, ಎಮ್ಮೆ, ನಾಯಿ ಇಂಥ ಪ್ರಾಣಿಗಳ ವರ್ಣನೆಯನ್ನು ಜೋಡು ರೂಲಿನ ಎಕ್ಸರ್ಸೈಜ ಬುಕ್ಕುಗಳಲ್ಲಿ ಅವರ ವಿಚಾರದಂತೆ ಅವರ ಮಾತಿನಲ್ಲಿಯೇ ಭಾಷಾ ದೋಷದ ಕಡೆಗೂ ಲಕ್ಷ್ಯಗೊಟ್ಟು ಎಂಟು ಹತ್ತು ಸಾಲುಗಳನ್ನು ಬರಹದ ಸುಧಾರಣೆಗಾಗಿ ಪೆನ್ಸಿಲಿನಿಂದ ಬರೆಯಿಸಬೇಕು. ಹೀಗೆ ಬರೆಯುವಾಗ ಹುಡುಗರು ತಪ್ಪಿದಲ್ಲಿ ಉಗುಳು ಹಚ್ಚಿ ತಿಕ್ಕದೆ ಇಲ್ಲವೆ ರಬ್ಬರಿನಿಂದ ಒರಿಸದೆ ಕಾಟುಹೊಡೆಯುವ ಕ್ರಮವನ್ನು ರೂಢಿ ಮಾಡಬೇಕು. ಮಸಿ ಅದ್ದಿ ಬರೆಯುವ ಟಾಕಿನ ಬರಹಕ್ಕಿಂತಲೂ ಪೆನ್ಸಿಲಿನ ಬರಹವು ಸುಲಭವಿರುವದಲ್ಲದೆ ಅದರಿಂದ ಅಕ್ಷರಗಳು ಬೇಗ ಸುಧಾರಿಸುವವು. ಸೀಸಕಡ್ಡಿಯು ಕಾಗದದ ಮೇಲೆ ಸುಲಭವಾಗಿ ಸರಿದಾಡುವದೇ ಇದಕ್ಕೆ ಕಾರಣವು.

ಶಾಲೆಯಲ್ಲಿ ಹುಡುಗರು ಓದಿದ ಗದ್ಯ-ಪದ್ಯಗಳಲ್ಲಿ ಅವುಗಳ ವಿಚಾರಗಳನ್ನೂ ಸಾರಾಂಶವನ್ನೂ ಪ್ರಕೃತಿವಿಮರ್ಶೆ-ಭೂಗೋಲಗಳ ಟಿಪ್ಪಣೆಯನ್ನೂ ಬರೆಯಿಸುವದೊಂದು ಕ್ರಮವಿದೆ. ಇದು ಯೋಗ್ಯವಿದ್ದು ಇದರಿಂದ ಬಹಳಮಟ್ಟಿಗೆ ಸಣ್ಣ

ಅಕ್ಷರಗಳ ಸುಧಾರಣೆಯಾಗುವದು. ಎರಡನೆಯ ಇಯತ್ತೆಯಲ್ಲಿ ಇಂಥ ಬರಹವನ್ನು ಜೋಡು ರೂಲಿನ ಎಕ್ಸರ್ಸೈಜ ಬುಕ್ಕುಗಳಲ್ಲಿ ಬರೆಯಿಸಬೇಕು.

ಪಾಟಿಯ ಮೇಲಿನ ಶುದ್ಧ ಲೇಖನವನ್ನಾದರೂ ಎರಡನೆಯ ಇಯತ್ತೆಗೆ ಜೋಡು ರೂಲಿನಲ್ಲಿಯೇ ಬರೆಯಿಸಬೇಕು. ಇದರಂತೆ ಗಣಿತದ ಉದಾಹರಣೆಗಳನ್ನು ಬಿಡಿಸುವಾಗ ಚಂದವಾಗಿಯೂ, ಅಚ್ಚುಕಟ್ಟಾಗಿಯೂ ಅವರಿಗೆ ಅಂಕೆಗಳನ್ನು ಬರೆಯುವ ಕ್ರಮವನ್ನು ಕಲಿಸಬೇಕು. ಅಂದರೆ ಅವರ ಅಂಕೆಗಳ ಬರೆಹವೂ ಸುಧಾರಿಸುವದು.

ಈ ಪ್ರಕಾರ ಎರಡನೆಯ ಇಯತ್ತೆಯಲ್ಲಿಯೇ ದೊಡ್ಡ ಹಾಗು ಸಣ್ಣ ಎರಡೂ ಬಗೆಯ ಅಕ್ಷರಗಳನ್ನು ತಿದ್ದಲಿಕ್ಕೆ ಪ್ರಾರಂಭಿಸಬೇಕು.

ಮೂರನೆಯ ಇಯತ್ತೆ : ಎರಡನೆಯ ಇಯತ್ತೆಯಲ್ಲಿ ಹೇಳಿದ ಕ್ರಮದಂತೆ ಈ ವರ್ಗದಲ್ಲಿಯೂ ಕಾಪಿ, ಪೇನ್ಸಿಲಿನಿಂದ ಬರೆಯುವ ನಿಬಂಧ, ಓದಿದ ಗದ್ಯ-ಪದ್ಯಗಳ ಅರ್ಥವಿವರಣೆ, ಪ್ರಕೃತಿವಿಮರ್ಶೆ—ಭೂಗೋಲಗಳ ಟಿಪ್ಪಣೆ, ಶುದ್ಧಲೇಖನ, ಇವುಗಳನ್ನು ಜೋಡು ರೂಲುಗಳಲ್ಲಿಯೇ ಬರೆಯಿಸಬೇಕು. ಕಾಪಿಯ ಬರಹದ ಅಕ್ಷರಗಳ ಪ್ರಮಾಣವು ಮಾತ್ರ ಎರಡನೆಯ ಇಯತ್ತೆಗಿಂತಲೂ ಕಡಿಮೆ ಅಂದರೆ ⅛ ಇಂಚು ಇರಬೇಕು. ಕಾಪಿಯಲ್ಲಿ ಅಕ್ಷರ ಗುಂಪುಗಳ ಬದಲು ಬೇರೆ ಬೇರೆ ವಾಕ್ಯಗಳನ್ನು ಬರೆಯಿಸಬೇಕು. ಗಣಿತದ ಉದಾಹರಣೆಗಳನ್ನು ಬರೆಸುಕೊಳ್ಳುವಾಗಲೂ ಬಿಡಿಸುವಾಗಲೂ ಅಚ್ಚುಕಟ್ಟುತನ, ಅಂದವಾದ ಬರಹ ಇವು ಕಂಗೊಳಿಸಬೇಕು.

ನಾಲ್ಕನೆಯ ಇಯತ್ತೆ : ಈ ವರ್ಗದಲ್ಲಿ ಜೋಡು ರೂಲಿನೊಳಗೆ, ಒಂಟಿ ರೂಲಿನ ಮೇಲೆ, ಒಂಟಿ ರೂಲಿನ ಕೆಳಗೆ, ರೂಲು ಇಲ್ಲದೆಯೆ ಕೊನೆಯಲ್ಲಿ ಸಣ್ಣ ಅಕ್ಷರ, ಹೀಗೆ ಐಯ್ದು ಸಾಲು ಕಾಪಿಯನ್ನು ವಾಕ್ಯ—ಅಂಕೆಗಳೊಡನೆ ಬರೆಯಿಸಬೇಕು. ಅಕ್ಷರಗಳ ಪ್ರಮಾಣವು ಮೂರನೆಯ ಇಯತ್ತೆಗಿಂತಲೂ ಕಡಿಮೆ ಅಂದರೆ 1/12 ಇಂಚು ಇರಬೇಕು. ಈ ವರ್ಗದಲ್ಲಿ ಸಣ್ಣ ಸಣ್ಣ ನಿಬಂಧಗಳನ್ನು ಮಸಿಯಿಂದ ಜೋಡು ರೂಲಿನ ಎಕ್ಸರ್ಸೈಜ ಬುಕ್ಕುಗಳಲ್ಲಿ ಬರೆಯಿಸಬೇಕು. ವಾಕ್ಯ ಮುಗಿದಲ್ಲಿ ತಪ್ಪದೆ ಪೂರ್ಣವಿರಾಮ ಚಿಹ್ನವನ್ನು ಕೊಡುವ ಬಗ್ಗೆ ಶಿಕ್ಷಕನು ಈ ವರ್ಗದಲ್ಲಿಯೇ ತಿಳಿಸಿಕೊಡಬೇಕು. ಓದಿದ ಗದ್ಯ-ಪದ್ಯಗಳ ಅರ್ಥವಿವರಣೆ, ಸಾರಾಂಶ,

ಪ್ರಕೃತಿವಿಮರ್ಶೆಯ ಮಾಹಿತಿ ಭೂಗೋಲದ ಟಿಪ್ಪಣಿ ಜಮಾಖರ್ಚು ಇವುಗಳನ್ನು ಒಂಟಿ ರೂಲಿನ ಎಕ್ಸರ್ಸೈಜ ಬುಕ್ಕುಗಳಲ್ಲಿ ಬರೆಯಿಸಬೇಕು. ವ್ಯಾವಹಾರಿಕ ಬರಹದ ಸಣ್ಣ ಅಕ್ಷರಗಳ ರೂಢಿಯು ದೆಸೆಯಿಂದ ಈ ವರ್ಗದಲ್ಲಿ ಒಂಟಿ ರೂಲಿನ ಮೇಲೆ ಪತ್ರಗಳನ್ನು ಬರೆಯಿಸುವದನ್ನಾರಂಭಿಸಬೇಕು. ಹಿಂದಿನ ಇಯತ್ತೆಯಂತೆಯೇ ಪಾಟಿಯ ಮೇಲಿನ ಲೆಕ್ಕ ಬರೆದುಕೊಳ್ಳುವ ಹಾಗು ಬಿಡಿಸುವ ಬರಹದ ಕಡೆಗೆ ಈ ವರ್ಗದಲ್ಲಿಯೂ ಶಿಕ್ಷಕನು ಲಕ್ಷ್ಯ ಕೊಡಬೇಕು. ವಾರಪರೀಕ್ಷೆಯ ಗಣಿತದ ಉದಾಹರಣೆಗಳನ್ನು ಕಾಗದದಲ್ಲಿ ಬಿಡಿಸಲಿಕ್ಕೆ ಹಚ್ಚಬೇಕು. ಪಾಟಿಯ ಮೇಲಿನ ಶುದ್ಧ ಲೇಖನವನ್ನು ಹಿಂದಿನ ಇಯತ್ತೆಗಳಂತೆ ಜೋಡು ರೂಲಿನಲ್ಲಿಯೇ ಬರೆಯಿಸಬೇಕು.

ವ್ಯಾವಹಾರಿಕ ಸಣ್ಣ ಅಕ್ಷರಗಳ ಬರಹದ ತಿದ್ದುಪಡಿಯು ನಾಲ್ಕನೆಯ ಇಯತ್ತೆಯಲ್ಲಿಯೇ ಪ್ರಾರಂಭವಾಗುವದು.

ಐದನೆಯ ಇಯತ್ತೆ : ಈ ವರ್ಗದ ಕಾಪಿಯ ಬರಹವು ನಾಲ್ಕನೆಯ ಇಯತ್ತೆಯಂತೆಯೇ ಇರುವದು. ಆದರೆ ಅಕ್ಷರಗಳ ಪ್ರಮಾಣವು ಮಾತ್ರ ಕಡಿಮೆ ಅಂದರೆ ⅛ ಇಂಚು ಇರಬೇಕು. ಕಥೆ, ನಿಬಂಧ, ಖಾಸಗಿ ಪತ್ರಗಳನ್ನು ಜೋಡು ರೂಲಿನ ಎಕ್ಸರ್ಸೈಜ ಬುಕ್ಕುಗಳಲ್ಲಿ ಬರೆಯಿಸಬೇಕು. ಪೂರ್ಣವಿರಾಮ ಚಿಹ್ನವನ್ನು ಉಪಯೋಗಿಸಬೇಕು. ಗಣಿತ, ನಿಬಂಧ, ಇತಿಹಾಸ, ಭೂಗೋಲ ಇವುಗಳ ಪರೀಕ್ಷೆಯ ಪ್ರಶ್ನೆಗಳ ಉತ್ತರಗಳನ್ನು ಕಾಗದದಲ್ಲಿಯೇ ಬರೆಯಿಸಲಿಕ್ಕೆ ಹಚ್ಚಬೇಕು. ಇಂಥ ಬರಹದಲ್ಲಿ ಸಾಲು ಸರಳವಾಗುವದಕ್ಕಾಗಿ ಬರೆಯುವ ಕಾಗದದ ಕೆಳಗೆ ರೂಲಪೇಪರವನ್ನಿಟ್ಟುಕೊಳ್ಳಲಿಕ್ಕೆ ಹುಡುಗರಿಗೆ ತಿಳಿಸಬೇಕು. ನಾಲ್ಕನೆಯ ಇಯತ್ತೆಯ ಕ್ರಮದಂತೆಯೇ ಪ್ರಕೃತಿವಿಮರ್ಶೆ ಭೂಗೋಲಗಳ ಟಿಪ್ಪಣಿ, ಓದಿದ ಗದ್ಯಪದ್ಯಗಳ ಅರ್ಥವಿವರಣೆ ಇವುಗಳನ್ನು ಒಂಟಿರೂಲಿನ ಎಕ್ಸರ್ಸೈಜ ಬುಕ್ಕುಗಳಲ್ಲಿ ಬರೆಯಿಸಬೇಕು. ಶುದ್ಧ ಲೇಖನವನ್ನು ಹಿಂದಿನ ಇಯತ್ತೆಯಂತೆ ಜೋಡು ರೂಲಿನಲ್ಲಿ ಬರೆಯಿಸಬೇಕು. ಪಾಟಿಯ ಮೇಲಿನ ಲೆಕ್ಕಗಳನ್ನು ಬರೆಯುವ ಹಾಗು ಬಿಡಿಸುವ ಕ್ರಮದ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಡಬೇಕು.

ಆರನೆಯ ಇಯತ್ತೆ : ಈ ವರ್ಗದ ಬರಹವೆಲ್ಲ ಕಾಗದದ ಮೇಲಿನದ್ದು ಅದು ಕೇವಲ ಸಣ್ಣ ಅಕ್ಷರಗಳದಿರುವದು. ಅದಕ್ಕಾಗಿ ಈ ಕ್ಲಾಸಿನಲ್ಲಿ

ರಿಪೋರ್ಟ ನಿಬಂಧಗಳನ್ನು ಒಂಟಿರೂಲಿನ ಎಕ್ಸರ್ಸೈಜ ಬುಕ್ಕುಗಳಲ್ಲಿ ಬರೆಯಿಸ ಬೇಕು. ಶಿಕ್ಷಕನು ಇಂಥ ಬರಹದಲ್ಲಿ ಭಾಷೆಯ ಶುದ್ಧತೆಯ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಡಬೇಕು. ಶಬ್ದಗಳನ್ನು ವಿಂಗಡಿಸುವ ಹಾಗು ವಿರಾಮಚಿಹ್ನ ಗಳನ್ನು ಕೊಡುವ ಕ್ರಮವನ್ನು ಚನ್ನಾಗಿ ತಿಳಿಸಿಕೊಡಬೇಕು. ಓದಿದ ಗದ್ಯಪದ್ಯ ಗಳ ಅರ್ಥವಿವರಣೆ, ಸಾರಾಂಶ, ಭೂಗೋಲದ ಟಿಪ್ಪಣಿಗಳನ್ನು ಐದನೆಯ ಇಯ ತ್ತೆಯ ಕ್ರಮದಂತೆ ಒಂಟಿರೂಲಿನ ಎಕ್ಸರ್ಸೈಜ ಬುಕ್ಕುಗಳಲ್ಲಿ ಬರೆಯಿಸಬೇಕು. ಕೀರ್ದಿ-ಖತಾವಣಿಗಳ ಪುಸ್ತಕಗಳನ್ನು ಕಟ್ಟಿಸಿ, ಅವುಗಳಲ್ಲಿ ದೇಶೀಯ ಪದ್ಧತಿಯ ಜಮಾಖರ್ಚು ಬರೆಯಿಸಬೇಕು. ಗಣಿತದ ಉದಾಹರಣಗಳನ್ನು ಬರೆದುಕೊಳ್ಳುವ ಹಾಗು ಬಿಡಿಸುವ ಕ್ರಮದ ಕಡೆಗೆ ಹಿಂದಿನ ಇಯತ್ತೆಯಂತೆಯೇ ಲಕ್ಷ್ಯಕೊಡ ಬೇಕು. ಭಾಷಾವಿಷಯವೊಂದನ್ನು ಬಿಟ್ಟು ಉಳಿದ ಎಲ್ಲ ವಿಷಯಗಳ ವಾರ ಪರೀಕ್ಷೆಯ ಪ್ರಶ್ನಗಳ ಉತ್ತರಗಳನ್ನು ಕಾಗದದಲ್ಲಿಯೇ ಬರೆಯಿಸುವ ರೂಢಿ ಮಾಡಬೇಕು.

ಏಳನೆಯ ಇಯತ್ತೆ: ಈ ವರ್ಗದಲ್ಲಿ ರಿಪೋರ್ಟು ನಿಬಂಧ, ಜಮಾ ಖರ್ಚು, ಭೂಗೋಲದ ಟಿಪ್ಪಣಿ, ಓದಿದ ಗದ್ಯಪದ್ಯಗಳ ಅರ್ಥವಿವರಣೆ, ಸಾರಾಂಶ ಇವುಗಳನ್ನು ಆರನೆಯ ಇಯತ್ತೆಯಲ್ಲಿ ಹೇಳಿದ ಕ್ರಮದಂತೆಯೇ ಬರೆಯಿಸಬೇಕು. ಶಬ್ದಗಳನ್ನು ವಿಂಗಡಿಸುವ ಹಾಗು ಎಲ್ಲ ಬಗೆಯ ವಿರಾಮಚಿಹ್ನಗಳನ್ನುಪಯೋಗಿ ಸುವ ಪದ್ಧತಿಯು ವಿದ್ಯಾರ್ಥಿಗಳ ಪ್ರತಿಯೊಂದು ಬರಹದಲ್ಲಿಯೂ ಕಂಡುಬರು ವಂತೆ ಶಿಕ್ಷಕನು ಪ್ರಯತ್ನಿಸಬೇಕು. ಈ ವರ್ಗದಲ್ಲಿ ಎಲ್ಲ ವಿಷಯಗಳ ವಾರ ಪರೀಕ್ಷೆಯ ಪ್ರಶ್ನಗಳ ಉತ್ತರಗಳನ್ನು ವಿದ್ಯಾರ್ಥಿಗಳಿಂದ ಕಾಗದದಲ್ಲಿಯೇ ಬರೆ ಯಿಸುವ ಹೆಚ್ಚು ರೂಢಿ ಮಾಡಬೇಕು.

ಒಟ್ಟಿನಮೇಲೆ ಹೇಳತಕ್ಕದ್ದೇನಂದರೆ, ಜೋಡು ರೂಲುಗಳಲ್ಲಿ ದುಂಡಗೆ ಬರೆಯುವ ದೊಡ್ಡ ಅಕ್ಷರಗಳ ಬರಹದ ಮೆಟ್ಟನ್ನು ನಾವು ಮೊದಲು ಬಾಲಕರ ವರ್ಗದಲ್ಲಿಯೇ ಹಾಕತಕ್ಕದ್ದು. ಜೋಡು ರೂಲುಗಳಲ್ಲಿ ಬರೆಯುವ ಸಣ್ಣ ಅಕ್ಷರ ಹಾಗು ಕಾಪಿಯ ಬರಹದ ದೊಡ್ಡ ಅಕ್ಷರ ಇವುಗಳ ಮೆಟ್ಟನ್ನು ಎರಡನೆಯ ಇಯತ್ತೆಯಲ್ಲಿಯೇ ಕೂಡಿಸತಕ್ಕದ್ದು. ಒಂಟಿರೂಲಿನ ಮೇಲೆ ಬರೆಯುವ ವ್ಯಾವ ಹಾರಿಕ ಸಣ್ಣ ಅಕ್ಷರಗಳ ಮೆಟ್ಟನ್ನು ನಾಲ್ಕನೆಯ ಇಯತ್ತೆಯಲ್ಲಿಯೇ ಆರಂಭಿಸ ತಕ್ಕದ್ದು. ಬರಹದ ಈ ಮೂರು ಮೆಟ್ಟುಗಳು ಗಟ್ಟಿಮುಟ್ಟಿಯಾದವೆಂದರೆ ವಿದ್ಯಾರ್ಥಿ

ಗಳು ಪ್ರಾಥಮಿಕ ಶಿಕ್ಷಣವನ್ನು ಮುಗಿಸುವಷ್ಟರಲ್ಲಿಯೇ ಅವರ ಬರಹವು ದುಂಡಗೂ, ಕ್ರಮಬದ್ಧವೂ, ಪರಿಪೂರ್ಣವೂ, ಸುಂದರವೂ, ಶುದ್ಧವೂ ಆಗುವ ದೆಂಬುವದರಲ್ಲಿ ಯಾವ ಸಂದೇಹವೂ ಇಲ್ಲ.

ಶಿಕ್ಷಕನ ಮಾದರಿಯ ಬರಹ, ಬಾಲಕರ ಬರಹದ ಕ್ರಮದ ವಿಷಯದಲ್ಲಿ ಆತನ ಅವಿಚಲವಾದ ಎಚ್ಚರ, ಕೆಟ್ಟ ಅಕ್ಷರವನ್ನು ಎಂದೂ ಮನ್ನಿಸಲಿಕ್ಕಿಲ್ಲೆಂಬ ಆತನ ದೃಢ ನಿಶ್ಚಯ, ಒಳ್ಳೆಯ ಅಕ್ಷರವನ್ನು ಬರೆಯುವ ಹತೋಟಿಯನ್ನು ಹುಡುಗರ ಮನಸ್ಸಿನಲ್ಲಿ ತುಂಬುವದು ಅದನ್ನು ಆಚರಣೆಯಲ್ಲಿ ತಂದೇಬಿಡುವೆನೆಂದು ಬಾಲಕರಲ್ಲಿ ದೃಢಸಂಕಲ್ಪವನ್ನುಂಟುಮಾಡುವದು ಇವು ಒಳ್ಳೆಯ ಬರಹಕ್ಕೆ ಕಾರಣವಾಗುವವು. ಬಾಲಕರಲ್ಲಿ ಸಾಕಾದಷ್ಟು ತಾಳ್ಮೆ, ನಿರೀಕ್ಷಣಶಕ್ತಿ ಇವು ನೆಲೆಗೊಂಡು ಅವರ ಕೈಯಲ್ಲಿಯ ಸ್ನಾಯುಗಳಲ್ಲಿ ಆ ತರದ ಶಕ್ತಿಯುಂಟಾದಾಗಲೇ ಒಳ್ಳೆಯ ಬರಹವು ಸಾಧ್ಯವಾಗುವದೆಂಬದನ್ನು ಶಿಕ್ಷಕ ವರ್ಗವು ಮರೆಯಲಾಗದು.

ಶಿಶು ಶಾಲೆಗಳು.

[ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು]

ಎಲ್ಲಿ ರಾಗದ್ವೇಷಾದಿ ಮನೋವಿಕಾರಗಳನ್ನು ಅಡಿಗಡಿಗೆ ಪ್ರತಿಬಂಧಿಸುವರೋ ಎಲ್ಲಿ ಒಡೆದುಕಾಣುವ ಬಣ್ಣದ ವಿಷಯದಲ್ಲಿರುವ ಅಭಿರುಚಿ, ಕೋಪಗೊಂಡು ಮಾಡುವಂಥ ಕೆಲಸಗಳು, ಬಡಿದಾಡುವದು, ಚೀರಾಡುವದು, ಮುಂತಾದ ಮನೋವ್ಯಾಪಾರಗಳನ್ನು ತಡೆದುನಿಲ್ಲಿಸುವರೋ ಎಲ್ಲಿ ಅಂಜಿಕೆಯನ್ನು ಹೇಡಿತನವೆಂದು ನಿಂದಿಸುವರೋ ಎಲ್ಲಿ ಪ್ರೀತಿ ಅಪ್ರೀತಿ ಮುಂತಾದ ಮನೋವಿಕಾರಗಳನ್ನು ಅಸಭ್ಯತನವೆಂದು ತಡೆಗಟ್ಟುವರೋ, ಅಂಥಲ್ಲಿ ಬಾಲಕರ ಮನೋವಿಕಾರಗಳಿಗೆ ಸ್ವಲ್ಪವೂ ಸ್ವಾತಂತ್ರ್ಯವುಳಿಯಲಾರದಷ್ಟೇ? ಮುಂದಿನ ಆಯುಷ್ಯದಲ್ಲಿ ಸಂಭವಿಸಬಹುದಾದ ಈ ಮನೋವಿಕಾರಗಳ ವಿಷಯದಲ್ಲಿ ಚಿಕ್ಕಮಕ್ಕಳಿಗೆ ಬಾಲ್ಯದಲ್ಲಿಯೇ ಸಾಕಾದಷ್ಟು ಸ್ವಂತ ಅನುಭವವಿರಬೇಕೆಂಬದು ನಿರ್ವಿವಾದವಾಗಿದೆ.

ಹೀಗೆಯೇ ನಡೆಯಬೇಕೆಂದು ವಿಧಿನಿಷೇಧಗಳನ್ನು ಕಲ್ಪಿಸಿ ಇಂಥ ಮನೋವಿಕಾರಗಳನ್ನು ತಡೆಗಟ್ಟಿ ಅವನ್ನು ಪುನಃ ತಲೆಯೆತ್ತದಂತೆ ಮಾಡುವದಕ್ಕೆ ಇದು ಸಮಯವಲ್ಲ. ಆದರೆ ಅದರಿಂದಾಗುವ ಪರಿಣಾಮಗಳನ್ನು ಕುರಿತು ತಿಳಿಸಿ ಹೇಳಿ ಯೋಗ್ಯ ಮಾರ್ಗವನ್ನು ತೋರಿಸುವದಿಷ್ಟೇ ಈಗ ಮಾಡಬೇಕಾದ ಕೆಲಸವು. ಹಾಗಿಲ್ಲದಿದ್ದರೆ ಆ ಬಾಲಕರಲ್ಲಿ ಸ್ವಯಂಪ್ರೇರಣೆಯಾಗಲಿ ಆತ್ಮಸ್ಫೂರ್ತಿಯಾಗಲಿ ಉಂಟಾಗಲಾರದು, ಇಷ್ಟೇ ಅಲ್ಲ, ಅವರು ತಮ್ಮ ಹಿರಿಯರ ನಿರ್ಜೀವ ಹಾಗು ನಿಸ್ತೇಜ ಪ್ರತಿರೂಪದಂತಾಗಿ ಬಿಡುವರು.

ಎಲ್ಲಿ ಸ್ವಾತಂತ್ರ್ಯತೆಯಿಂದ ನಡೆದು ತನ್ನ ಮನಸ್ಸಿಗೆ ತೋರಿದ್ದೇ ಸರಿಯೆಂದು ಆಚರಿಸಿಬಿಡಲು ಅವಕಾಶವೇ ಇರುವದಿಲ್ಲವೋ, ಎಲ್ಲಿ ತಪ್ಪು ಮಾಡಲಿಕ್ಕಾಗಲಿ ತನಗೆ ತಿಳಿದಂತೆ ಕೆಲಸ ಮಾಡಲಿಕ್ಕಾಗಲಿ ಸಂದರ್ಭವೇ ಒದಗುವದಿಲ್ಲವೋ, ಎಲ್ಲಿ ಎಲ್ಲವೂ ಶಿಕ್ಷಕನ ಅಪ್ಪಣೆಯಂತೆಯೇ ನಡೆಯಬೇಕಲ್ಲದೆ ಸ್ವಯಂಪ್ರೇರಿತವಾದ ಆತ್ಮಸಂಯಮನಕ್ಕೆ ಅನುಕೂಲವೇ ಇಲ್ಲವೋ ಅಂಥಲ್ಲಿ ನೈತಿಕ ಸ್ವಾತಂತ್ರ್ಯವು ಇಲ್ಲವೆಂದೇ ಹೇಳಬೇಕಾಗುವದು. ಸರಿಯಾದ ಮಾರ್ಗದಿಂದ ನಡೆಯುವ ಶುದ್ಧವಾದ ಆಚರಣೆಯವರಿಗೆ ಶಾಲೆಯು ಬೇಕಾಗಿಲ್ಲ; ಆದರೆ ಯಾರ ವಿಷಯದಲ್ಲಿ ಅವರು ಕೆಟ್ಟ ಸಂಸರ್ಗವುಳ್ಳವರಾಗಿ ತಪ್ಪು ದಾರಿಯಿಂದ ಸಾಗಬಹುದೆಂಬ ಸಂಶಯವಿರುವದೋ ಅಂಥವರಿಗೇ ಶಾಲೆಯೂ ಶಿಕ್ಷಣವೂ ಬೇಕಾಗುವವು. ಮಕ್ಕಳು ಅನುಭವದಿಂದಲೇ ಆತ್ಮಸಂಯಮನವನ್ನು ಕಲಿತುಕೊಳ್ಳಬೇಕಲ್ಲದೆ ಕೇವಲ ಪರರ ಅಪ್ಪಣೆಯಂತೆ ನಡೆಯುವದರಿಂದಾಗಲಿ ಅನ್ಯರ ಅಂಧ ಅನುಕರಣೆಯಿಂದಾಗಲಿ ಈ ಸಂಯಮನ ಶಕ್ತಿಯು ಅವರಲ್ಲಿ ಬರಲಾರದು. ಬಾಲಕರು ಅನೇಕ ತರದ ಚಟಗಳನ್ನು ಮಾಡಿ ಅನುಭವ ಪಡೆದು ಕೊನೆಗೆ ಆತ್ಮಸಂಯಮನವನ್ನು ತಂದುಕೊಳ್ಳಬೇಕಾಗುವದು. ಇಂಥ ಆತ್ಮಸಂಯಮನವೇ ನಿಜವಾದ ಸಂಯಮನವೆನಿಸುವದು. ಬಾಲಕರು ತಮ್ಮ ಇಚ್ಛೆ ಬಯಕೆ ಮುಂತಾದ ಮನೋವಿಕಾರಗಳನ್ನು ತಡೆದುಕೊಳ್ಳುವ, ಹಾಗು ಶಾರೀರಿಕ ಚಟುವಟಿಕೆಗಳನ್ನು ಅಂಕಿತದಲ್ಲಿಟ್ಟುಕೊಳ್ಳುವ ಅಭ್ಯಾಸವುಳ್ಳವರಾಗಬೇಕು. ಪರರನ್ನು ಅನುಕರಣೆಮಾಡುವದು, ಒಳಿತುಹೀನಗಳನ್ನು ತಿಳಿದು ಒಳ್ಳೆಯದನ್ನೇ ಸ್ವೀಕರಿಸುವದು ಇವೆಲ್ಲಕ್ಕೂ ಹೆಚ್ಚಿನದೆಂದರೆ ತನ್ನ ಮನಸ್ಸಿಗೆ ಒಡದ ಯಾವದಾದರೊಂದು ಕಾರ್ಯವನ್ನು ಆಚರಣೆಯಲ್ಲಿ ತರುವದು ಇಲ್ಲವೆ ಮನಸ್ಸಿನ ಉತ್ತೇಜನವನ್ನು ತಡೆದುಕೊಂಡು ಅದನ್ನು ನಿರ್ಬಂಧಿಸುವದು

ಇವೇ ಮೊದಲಾದ ಒಳ್ಳೆಯ ಅಭ್ಯಾಸ (ಚಟ ಅಥವಾ ರೂಢಿ) ಗಳು ಬಾಲಕರಲ್ಲಿ ಈ ವಯಸ್ಸಿನಲ್ಲಿಯೇ ಉಂಟಾಗಬೇಕಾಗುವದು. ಯಾವ ಮಗುವಿನ ಬಾಲ್ಯದಲ್ಲಿಯ ಎಲ್ಲ ಕಾರ್ಯಕಲಾಪಗಳು ಅವರ ಹಿರಿಯರ ಇಚ್ಛೆಯಂತೆಯೇ ನಡೆಯಬೇಕಾಗಿರುವದೋ, ಯಾವ ಮಗುವಿಗೆ ಹಿರಿಯರು ಹೇಳಿದಂತೆ ನಡೆಯುವ ಕೇವಲ ಅಂಧ ವಿಧೇಯತೆಯೊಂದೇ ರೂಢಿಯಾಗಿರುವದೋ, ಆ ಮಗುವಿನ ಮನಸ್ಸಿನಲ್ಲಿಯ "ಆತ್ಮವಿಶ್ವಾಸ' ವೆಂಬ ಅತಿ ಮಹತ್ವದ ಭಾವನೆಯ ಮೊಳಕೆಯು ಕಮರಿ ಹೋಗಿ, ಅದು ತೀರ ದುರ್ಬಲ ಮನಸ್ಸಿನ ಪ್ರಾಣಿಯಾಗಿ ಪರಿಣಮಿಸುವದರಲ್ಲಿ ಸಂದೇಹವಿಲ್ಲ. ಆ ಮಗುವಿಗೆ ತನ್ನ ಮುಂದಿನ ಜೀವನಕ್ರಮದಲ್ಲಿ ಮಾಡಬೇಕಾದ ಕಾರ್ಯಗಳ ಅನುಭವವೇ ಇರಲಾರದು; ಆ ಅನುಭವವನ್ನು ಪಡೆಯಲಿಕ್ಕೆ ಅದಕ್ಕೆ ಅನ್ಯ ಮಾರ್ಗಗಳೂ ಉಳಿಯಲಾರವು. ಮುಂದಿನ ಆಯುಷ್ಯದಲ್ಲಿ ಕೈಕೊಳ್ಳಬೇಕಾಗಿರುವ ಎಲ್ಲ ಕಾರ್ಯಗಳ ರಂಗತಾಲೀಮನ್ನು ಮಾಡಿಸುವ ರಂಗಸ್ಥಳದಂತಿರುವ ಶಾಲೆಯಲ್ಲಿ ಮಗುವು ಈ ಎಲ್ಲ ವಿಚಾರಗಳನ್ನು ಯಾರಿಗೂ ವಿಶೇಷ ಅಪಾಯವುಂಟಾಗದಂತೆ ಆಚರಿಸಿ (ನಟಿಸಿ) ನೋಡಿ ತಕ್ಕ ಅನುಭವವನ್ನು ಪಡೆಯಲು ಆಸ್ಪದವಿರುವದು. ಅಲ್ಲಿ ಆ ಮಗುವು ತಾನು ಮಾಡುತ್ತಿರುವ ಕಾರ್ಯಗಳ ಪರಿಣಾಮದಿಂದ ಆಯಾ ಕಾರ್ಯಗಳ ಒಳ್ಳೆಯ ಇಲ್ಲವೆ ಕೆಟ್ಟ ಪರಿಣಾಮವನ್ನು ಅನುಭವಿಸಿ, ತಕ್ಕ ಅನುಭವವನ್ನು ಪಡೆಯುವದು; ಮತ್ತು ಯಾವದನ್ನು ಮಾಡಬಹುದು ಯಾವದನ್ನು ಮಾಡಬಾರದು ಎಂಬದರ ನಿರ್ಣಯವನ್ನು ಕಂಡುಕೊಳ್ಳುವದು; ಅದರಂತೆಯೇ ಎಲ್ಲಿ ಮನಸ್ಸನ್ನು ಬಿಗಿಹಿಡಿಯುವದು ಅವಶ್ಯ, ಎಲ್ಲಿ ಅದನ್ನು ಬಿಗಿಹಿಡಿಯದಿದ್ದರೂ ನಡೆಯಬಹುದು ಎಂಬದನ್ನು ಆ ಮಗುವು ಸ್ವಂತ ಅನುಭವದಿಂದ ನಿರ್ಣಯಿಸಿಕೊಳ್ಳುವದು. ತಾನು ತಪ್ಪುಮಾಡಿದ ಪ್ರತಿಯೊಂದು ಸಂದರ್ಭದಲ್ಲಿಯೂ ಅದರಿಂದಾಗುವ ದುಷ್ಪರಿಣಾಮವನ್ನು ಕಂಡುಕೊಂಡು ಅಂಥ ತಪ್ಪುಮಾಡಕೂಡದೆಂಬ ಮನೋವೃತ್ತಿಯು ಅದರಲ್ಲಿ ತಾನಾಗಿ ಉಂಟಾಗುವದು. ಹಾಗೆ ಅದಕ್ಕೆ ತಪ್ಪು ಮಾಡಲು ಅವಕಾಶವೇ ಇಲ್ಲದಿದ್ದರೆ, ಇಲ್ಲವೆ ತಪ್ಪು ಮಾಡಬಹುದಾದ ಸಂದರ್ಭಗಳಲ್ಲೆಲ್ಲ ಶಿಕ್ಷಕರೋ ಹಿರಿಯರೋ ಅದನ್ನು ನೋಡುತ್ತಲೇ ಇದ್ದು ಎಚ್ಚರಿಸಿ ತಪ್ಪು ಮಾಡದಂತೆ ನಿರ್ಬಂಧಿಸುತ್ತಲೇ ಇದ್ದುಬಿಟ್ಟರೆ, ತಪ್ಪುಮಾಡುವದರಿಂದಾಗುವ ದುಷ್ಪರಿಣಾಮದ ಅನುಭವವು ಅದಕ್ಕೆ ಎಂದೂ ಬರಲಾರದಷ್ಟೇ! ಆಗ ಅದಕ್ಕೆ ಯಾವದನ್ನು ಮಾಡಬೇಕು ಯಾವದನ್ನು ಮಾಡಬಾರದು ಎಂಬದನ್ನು ಸ್ವಬುದ್ಧಿಯಿಂದ ನಿರ್ಣಯಿಸಿಕೊಳ್ಳಲಿಕ್ಕೆ ಸಾಧ್ಯವೇ ಇಲ್ಲದಂತಾಗುವದು; ಏಕೆಂದರೆ ಅದಕ್ಕೆ ಆ

ಮಾತಿನ ಅನುಭವವೇ ಬಂದಿರುವದಿಲ್ಲ. ದೀಪದ ಕಾಜನ್ನು ಹಿಡಿದು ಕೈಗೆ ಬಿಸಿ ಹಚ್ಚಿಕೊಂಡ ಮಗುವು ಅದನ್ನು ತಿರುತಿರುಗಿ ಹಿಡಿಯಲು ಪ್ರಯತ್ನಿಸಲಾರದು. ಅದೇ ದೀಪದ ಕಡೆಗೆ ಕೈಮಾಡುವ ಮಗುವನ್ನು ತಾಯಿತಂದೆಗಳು ಅಡಿಗಡಿಗೆ ಬೆದರಿಸುತ್ತಿದ್ದು ಅದಕ್ಕೆ ಸ್ವಂತ ಅನುಭವ ಪಡೆಯುವ ಸಂದರ್ಭವನ್ನು ಕಳೆದು ಬಿಟ್ಟರೆ ದೀಪವನ್ನು ಹಿಡಿಯಬಾರದೆಂಬ ಅನುಭವಸಿದ್ಧವಾದ ಮಾತು ಅದಕ್ಕೆ ಎಂದೂ ಗೊತ್ತಾಗಲಾರದು. ಬಾಲಕರ ಈ ವಯಸ್ಸಿನಲ್ಲಿ, ಅನುಭವದಿಂದಲೇ ಜ್ಞಾನವನ್ನು ಪಡೆಯಬೇಕಾದ ಬಾಲ್ಯದ ಕಾಲದಲ್ಲಿ, ಈ ರೀತಿಯಾಗಿ ಅವರಿಗೆ ಬೌದ್ಧಿಕ ಶಾರೀರಿಕ ಹಾಗು ನೈತಿಕ ಸ್ವಾತಂತ್ರ್ಯಗಳನ್ನು ಕೊಟ್ಟು ತಕ್ಕ ಅನುಭವವನ್ನು ತಂದುಕೊಟ್ಟು ಆತ್ಮಸಂಯಮನ, ಯೋಗ್ಯಾಯೋಗ್ಯ ವಿಚಾರ ಮಾಡಿ ಕಾರ್ಯಮಾಡುವ ಪ್ರವೃತ್ತಿ, ಒಳ್ಳೆಯ ಚಟ (ಅಭ್ಯಾಸ ರೂಢಿ) ಗಳು, ಇವು ಅವರಲ್ಲಿ ಅನುಭವಜನ್ಯವಾಗಿ ಉಂಟಾಗುವಂತೆ ಮಾಡಬೇಕಾಗುವದು.

ಬಾಲಕರು ಪ್ರಪಂಚದ ಅನುಭವಗಳನ್ನು ಆಟಗಳ ಮೂಲಕವಾಗಿಯೇ ಪಡೆಯುವಂತೆ ಮಾಡುವದು ಉತ್ತಮವಾದ ಮಾರ್ಗವಾಗಿದೆ. ಆದರೆ ಎಲ್ಲಿ ಶಿಕ್ಷಕರು ಬಾಲಕರ ಆಟದ ಗೆಳೆಯರಂತೆ ಅವರಲ್ಲಿ ಕೂಡಿ ನಡೆದು ಯೋಗ್ಯ ಅನುಭವವನ್ನು ತಂದುಕೊಡಲು ಸಾಧ್ಯವಿರುವದಿಲ್ಲವೋ ಅಂಥಲ್ಲಿ ಅವರು ತಾಯಿಯ ಸ್ಥಾನವನ್ನು ಆಕ್ರಮಿಸಿ ಅವರಿಗೆ ಕೆಲಕೆಲವು ನಿಶ್ಚಿತವಾದ ಸಂಗತಿಗಳ ಅನುಭವವನ್ನು ತಂದುಕೊಡಬೇಕಾಗುವದು. ಬಾಲಕರ ಇಚ್ಛಾನುವರ್ತಿಯಾಗಿಯೇ ನಡೆದು, ಅವರು ಆಡುವ ಆಟಗಳಿಂದಲೇ ಅನೇಕ ಸಂಗತಿಗಳನ್ನು ಅವರ ಅನುಭವಕ್ಕೆ ತಂದುಕೊಟ್ಟು, ಅವರಿಗೆ ಯೋಗ್ಯ ಶಿಕ್ಷಣಕೊಡುವದು ಬಹುಮಟ್ಟಿಗೆ ಸುಲಭಸಾಧ್ಯವಿದ್ದರೂ ಎಲ್ಲವನ್ನೂ ಸಂಪೂರ್ಣವಾಗಿ ಇದೇ ದಾರಿಯಿಂದಲೇ ಸಾಧಿಸುವದು ಸಾಧ್ಯವಲ್ಲ. ಒಂದು ಬಡ ಕುಟುಂಬದ ಮಗುವು ಶಾಲೆಗೆ ಬರುವದೆಂದು ತಿಳಿಯೋಣ. ಅದಕ್ಕೆ ಮನೆಯಲ್ಲಿ ಸ್ವೇಚ್ಛೆಯಿಂದ ಬೇಕಾದಷ್ಟು ಮಾತಾಡುವ ರೂಢಿಯಿರುವದಿಲ್ಲವಾದ್ದರಿಂದ ಅದು ಶಿಕ್ಷಕರ ಮಾತುಗಳನ್ನಷ್ಟೇ ಅನುಕರಣೆಯಿಂದ ಕಲಿತುಕೊಂಡಿರುವದು. ಆದ್ದರಿಂದ ಅದರ ಈ ವಿಷಯದ ಜ್ಞಾನವು ಇನ್ನೂ ಅಪೂರ್ಣವಾಗಿರುವದು. ಆದ್ದರಿಂದ ಆ ಮಗುವಿಗೆ ಮಾತಾಡುವ ರೂಢಿಯನ್ನು ಹೆಚ್ಚಾಗಿ ಮಾಡಿಸಬೇಕಾಗುವದು. ಕಾರಣ ಅದಕ್ಕಾಗಿ ಹೆಚ್ಚಿಗೆ ಮಾತಾಡುವ ಸಂದರ್ಭವಿರುವಂಥ ಆಟಗಳನ್ನು ಹುಡುಕಿಕೊಂಡು ತನ್ಮೂಲಕ ಅದರ ವಾಗಿಂದ್ರಿಯ (ಮಾತಾಡುವದಕ್ಕೆ ಸಾಧನವಾದ ಗಂಟಲು ನಾಲಿಗೆ ಮುಂತಾದ ಇಂದ್ರಿಯ)ಗಳಿಗೆ ಹೆಚ್ಚಿಗೆ ಶಿಕ್ಷಣ ಕೊಡಬೇಕಾಗು

ವದು. ಹಾಗು ಮೈಚಳಿಬಿಟ್ಟು ಮಾತಾಡುವ ಪ್ರವೃತ್ತಿಯನ್ನೂ ಅದರಲ್ಲಿ ಹುಟ್ಟಿಸಬೇಕಾಗುವದು. ಒಮ್ಮೊಮ್ಮೆ ಇಂಥ ಆಟಗಳು ಸ್ವಾಭಾವಿಕವಾಗಿರದ್ದರಿಂದ ಅವನ್ನು ಆಡುವದಕ್ಕೆ ಬಾಲಕರು ಸ್ವಯಂಸ್ಫೂರ್ತಿಯಿಂದ ಮುಂದೆಬರುವ ಸಂಭವವಿರದು; ಆಗ ಇಂಥ ಆಟಗಳು ಕೃತ್ರಿಮವೆನಿಸುವವು. ಇವನ್ನು ಶಿಕ್ಷಕರೇ ಕಲ್ಪಿಸಿ ಬಾಲಕರ ಮುಂದೆ ಇಡಬೇಕಾಗುವದು. ಯಾವ ಕಾರ್ಯಗಳಿಂದ ವಾಗಿಂದ್ರಿಯಗಳಿಗೆ ಶಿಕ್ಷಣ ದೊರೆಯಬಹುದೆಂಬದನ್ನೂ ಯಾವದರಿಂದ ಬಾಲಕರಲ್ಲಿ ಮಾತಾಡುವ ಸ್ಫೂರ್ತಿಯುಂಟಾಗಬಹುದೆಂಬದನ್ನೂ ಮೊದಲು ಶಿಕ್ಷಕರು ಕಂಡುಕೊಳ್ಳಬೇಕು. ಆಮೇಲೆ ಅವನ್ನು ಯೋಗ್ಯ ಆಟಗಳಲ್ಲಿ ಸೇರ್ಪಡೆಮಾಡಿಕೊಳ್ಳಬೇಕು. ಉದಾ:— ಬಾಲಕರು ಎರಡನೆಯವರು ಒದರಾಡುವದನ್ನೂ ಚೀರಾಡುವದನ್ನೂ ಅನುಕರಣೆ ಮಾಡಲು ಬಯಸುತ್ತಿರುವರು. ಅವರ ಈ ಮನಃಪ್ರವೃತ್ತಿಯನ್ನು ಅವಲಂಬಿಸಿ ಕೊಂಡು, ಇಬ್ಬರು ಹುಡುಗರನ್ನು ಆರಿಸಿ, ಅವರು ಉಗಿಬಂಡಿಯು ಸ್ಟೇಶನ್ನದಲ್ಲಿ ನಿಂತಿರುವರೆಂದು ಕಲ್ಪನೆಮಾಡಿಕೊಟ್ಟು, ಒಬ್ಬನು ಉಗಿಬಂಡಿಯು ಬರುವಾಗ ಆಗುವ ಸಪ್ಪಳವನ್ನೂ ಅದರ ಸೀಟಿಯನ್ನೂ ಮತ್ತೊಬ್ಬನು 'ಧಾ-ರ-ವಾ-ಡ' ಎಂದು ಮುಂತಾಗಿ ರಾತ್ರಿಯ ವೇಳೆಯಲ್ಲಿ ಗಾಡಿಯು ಬಂದಕೂಡಲೆ ಪೋರ್ಟರನು ಒದರುವದನ್ನೂ ಅನುಕರಣೆಮಾಡಲಿಕ್ಕೆ ಹಚ್ಚಬಹುದು. ಇದೇ ರೀತಿಯಾಗಿ ಅಲ್ಲಿಯ ಚಿಕ್ಕ ವ್ಯಾಪಾರಿಯು— 'ಪಾನ- ಬೀಡಿ-ಸಿಗರೇಟ' ಎಂದೂ ಉಪಹಾರದ ಡಬ್ಬಿಯಿಂದಿಳಿದು ಬಂದ ಹುಡುಗನು 'ಗರಂ—ಚಹಾ-ಕಾಫೀ' ಎಂದು ಕೂಗುವದನ್ನೂ ಅನುಕರಣೆ ಮಾಡಲು ಪ್ರೇರಿಸಬಹುದು. ಹೀಗೆಯೇ ಓಣಿಯಲ್ಲಿ ಕಾಯಿಪಲ್ಲೆ ಮಾರುವವರು ಕೂಗುವದನ್ನೂ "ಬಿಸಿಬಿಸಿ ಚುರಮುರಿ ಹುರಕಡಲಿ" ಎಂದು ಒದರುವದನ್ನೂ ಮೋಟಾರಿನ ಸಪ್ಪಳವನ್ನೂ ಮೋಟಾರಿನ ಹಾರ್ನಿನ ಇಲ್ಲವೆ ಚರ್ಚಿನ ಗಂಟೆಯ ಸಪ್ಪಳವನ್ನೂ ಅನುಕರಣೆಮಾಡುವ ಆಟವನ್ನು ಆಡಿಸಬಹುದು. ಹಳ್ಳಿಯ ಹುಡುಗರು ರೈತರು ಹೊಲದಲ್ಲಿ ಕೆಲಸಮಾಡುವಾಗ ಇಲ್ಲವೆ ದನ ಕಾಯುವ ಹುಡುಗರು ದನಗಳನ್ನು ಮೇಯಿಸುವಾಗ ಹಾಡುವ ಹಾಡನ್ನೂ ಪಶುಪಕ್ಷಿಗಳ ಕೂಗುಗಳನ್ನೂ ಅನುಕರಣೆಮಾಡಬಹುದು. ಹೀಗೆ ಅನುಕರಣೆ ಮಾಡುವಾಗ ಅವನ್ನು ಕೇಳುವವರು ಬೇರೆ ಬೇರೆ ಕೂಗನ್ನು ಗುರ್ತಿಸುವಷ್ಟು ಸ್ಪಷ್ಟವಾಗಿ ಅನುಕರಣೆಮಾಡುವದು ಅವಶ್ಯವೆಂಬದನ್ನು ಮರೆಯಲಾಗದು. "ಶಿಕ್ಷಕನು ನಾನು ನಮ್ಮ ಹುಡುಗನಿಗೆ ಕೆಲವು ಆಟಿಗೆಯ ಸಾಮಾನುಗಳನ್ನು ಕೊಟ್ಟು ಅವನ್ನು 'ಮಾರಿಕೊಂಡು ಬಾ' ಎಂದು ಕಳುಹಿಸಿದೆನು. ಅವನು ಓಣಿಯೊಳಗೆ "ಪೀ" ಎಂದು ಸೀಟಿಯನ್ನು ಊದುತ್ತ ಹೊರಟನು. ಎಂದು ಆರಂಭಿಸಿ— 'ಪೀ' ಎಂಬ ಸೀಟಿಯ ಒದರುವಿಕೆಯನ್ನು ಅನುಕರಣಮಾಡಲು ಹುಡುಗರನ್ನು

ಮಾತಿನ ಅನುಭವವೇ ಬಂದಿರುವದಿಲ್ಲ. ದೀಪದ ಕಾಜನ್ನು ಹಿಡಿದು ಕೈಗೆ ಬಿಸಿ ಹಚ್ಚಿಕೊಂಡ ಮಗುವು ಅದನ್ನು ತಿರುತಿರುಗಿ ಹಿಡಿಯಲು ಪ್ರಯತ್ನಿಸಲಾರದು. ಅದೇ ದೀಪದ ಕಡೆಗೆ ಕೈಮಾಡುವ ಮಗುವನ್ನು ತಾಯಿತಂದೆಗಳು ಆಗಿಗ ಬೆದರಿಸುತ್ತಿದ್ದು ಅದಕ್ಕೆ ಸ್ವಂತ ಅನುಭವ ಪಡೆಯುವ ಸಂದರ್ಭವನ್ನು ಕಳೆದು ಬಿಟ್ಟರೆ ದೀಪವನ್ನು ಹಿಡಿಯಬಾರದೆಂಬ ಅನುಭವಸಿದ್ಧವಾದ ಮಾತು ಅದಕ್ಕೆ ಎಂದೂ ಗೊತ್ತಾಗಲಾರದು. ಬಾಲಕರ ಈ ವಯಸ್ಸಿನಲ್ಲಿ, ಅನುಭವದಿಂದಲೇ ಜ್ಞಾನವನ್ನು ಪಡೆಯಬೇಕಾದ ಬಾಲ್ಯದ ಕಾಲದಲ್ಲಿ, ಈ ರೀತಿಯಾಗಿ ಅವರ ಬೌದ್ಧಿಕ ಶಾರೀರಿಕ ಹಾಗು ನೈತಿಕ ಸ್ವಾತಂತ್ರ್ಯಗಳನ್ನು ಕೊಟ್ಟು ತಕ್ಕ ಅನುಭವ ವನ್ನು ತಂದುಕೊಟ್ಟು ಆತ್ಮಸಂಯಮನ, ಯೋಗ್ಯಾಯೋಗ್ಯ ವಿಚಾರ ಮಾಡಿ ಕಾರ್ಯಮಾಡುವ ಪ್ರವೃತ್ತಿ, ಒಳ್ಳೆಯ ಚಟ (ಅಭ್ಯಾಸ ರೂಢಿ) ಗಳು. ಇವು ಅವ ರಲ್ಲಿ ಅನುಭವಜನ್ಯವಾಗಿ ಉಂಟಾಗುವಂತೆ ಮಾಡಬೇಕಾಗುವದು.

ಬಾಲಕರು ಪ್ರಪಂಚದ ಅನುಭವಗಳನ್ನು ಆಟಗಳ ಮೂಲಕವಾಗಿಯೇ ಪಡೆಯುವಂತೆ ಮಾಡುವದು ಉತ್ತಮವಾದ ಮಾರ್ಗವಾಗಿದೆ. ಆದರೆ ಎಲ್ಲಿ ಶಿಕ್ಷಕರು ಬಾಲಕರ ಆಟದ ಗೆಳೆಯರಂತೆ ಅವರಲ್ಲಿ ಕೂಡಿ ನಡೆದು ಯೋಗ್ಯ ಅನುಭವವನ್ನು ತಂದುಕೊಡಲು ಸಾಧ್ಯವಿರುವದಿಲ್ಲವೋ ಅಂಥಲ್ಲಿ ಅವರ ತಾಯಿಯ ಸ್ಥಾನವನ್ನು ಆಕ್ರಮಿಸಿ ಅವರಿಗೆ ಕೆಲಕೆಲವು ನಿಶ್ಚಿತವಾದ ಸಂಗತಿಗ ಅನುಭವವನ್ನು ತಂದುಕೊಡಬೇಕಾಗುವದು. ಬಾಲಕರ ಇಚ್ಛಾನುವರ್ತಿ ಯಾಗಿಯೇ ನಡೆದು, ಅವರು ಆಡುವ ಆಟಗಳಿಂದಲೇ ಅನೇಕ ಸಂಗತಿಗಳನ್ನು ಅವರ ಅನುಭವಕ್ಕೆ ತಂದುಕೊಟ್ಟು, ಅವರಿಗೆ ಯೋಗ್ಯ ಶಿಕ್ಷಣಕೊಡುವದು ಬಹು ಮಟ್ಟಿಗೆ ಸುಲಭಸಾಧ್ಯವಿದ್ದರೂ ಎಲ್ಲವನ್ನೂ ಸಂಪೂರ್ಣವಾಗಿ ಇದೇ ಪ ಯಿಂದಲೇ ಸಾಧಿಸುವದು ಸಾಧ್ಯವಲ್ಲ. ಒಂದು ಬಡ ಕುಟುಂಬದ ಮಗುವ ಸಾಲೆಗೆ ಬರುವದೆಂದು ತಿಳಿಯೋಣ. ಅದಕ್ಕೆ ಮನೆಯಲ್ಲಿ ಸ್ವೇಚ್ಛೆಯಿಂ ಬೇಕಾದಷ್ಟು ಮಾತಾಡುವ ರೂಢಿಯಿರುವದಿಲ್ಲವಾದ್ದರಿಂದ ಅದು ಶಿಕ್ಷಕರ ಮಾತ ಗಳನ್ನಷ್ಟೇ ಅನುಕರಣೆಯಿಂದ ಕಲಿತುಕೊಂಡಿರುವದು. ಆದ್ದರಿಂದ ಅದರ ವಿಷಯದ ಜ್ಞಾನವು ಇನ್ನೂ ಅಪೂರ್ಣವಾಗಿರುವದು. ಆದ್ದರಿಂದ ಆ ಮಗುವಿ ಮಾತಾಡುವ ರೂಢಿಯನ್ನು ಹೆಚ್ಚಾಗಿ ಮಾಡಿಸಬೇಕಾಗುವದು. ಕಾರ ಅದಕ್ಕಾಗಿ ಹೆಚ್ಚಿಗೆ ಮಾತಾಡುವ ಸಂದರ್ಭವಿರುವಂಥ ಆಟಗಳನ್ನು ಹುಡು ಕೊಂಡು ತನ್ಮೂಲಕ ಅದರ ವಾಗಿಂದ್ರಿಯ (ಮಾತಾಡುವದಕ್ಕೆ ಸಾಧನವಾ ಗಂಟಲು ನಾಲಿಗೆ ಮುಂತಾದ ಇಂದ್ರಿಯ)ಗಳಿಗೆ ಹೆಚ್ಚಿಗೆ ಶಿಕ್ಷಣ ಕೊಡಬೇಕಾ

ವದು, ಹಾಗು ಮೈಚಳಿಬಿಟ್ಟು ಮಾತಾಡುವ ಪ್ರವೃತ್ತಿಯನ್ನೂ ಅದರಲ್ಲಿ ಹುಟ್ಟಿಸಬೇಕಾಗುವದು. ಒಮ್ಮೊಮ್ಮೆ ಇಂಥ ಆಟಗಳು ಸ್ವಾಭಾವಿಕವಾಗಿರದ್ದರಿಂದ ಅವನ್ನು ಆಡುವದಕ್ಕೆ ಬಾಲಕರು ಸ್ವಯಂಸ್ಫೂರ್ತಿಯಿಂದ ಮುಂದೆಬರುವ ಸಂಭವವಿರದು; ಆಗ ಇಂಥ ಆಟಗಳು ಕೃತ್ರಿಮವೆನಿಸುವವು. ಇವನ್ನು ಶಿಕ್ಷಕರೇ ಕಲ್ಪಿಸಿ ಬಾಲಕರ ಮುಂದೆ ಇಡಬೇಕಾಗುವದು. ಯಾವ ಕಾರ್ಯಗಳಿಂದ ವಾಗಿಂದ್ರಿಯಗಳಿಗೆ ಶಿಕ್ಷಣ ದೊರೆಯಬಹುದೆಂಬದನ್ನೂ ಯಾವದರಿಂದ ಬಾಲಕರಲ್ಲಿ ಮಾತಾಡುವ ಸ್ಫೂರ್ತಿಯುಂಟಾಗಬಹುದೆಂಬದನ್ನೂ ಮೊದಲು ಶಿಕ್ಷಕರು ಕಂಡುಕೊಳ್ಳಬೇಕು. ಆಮೇಲೆ ಅವನ್ನು ಯೋಗ್ಯ ಆಟಗಳಲ್ಲಿ ಸೇರ್ಪಡಿಸಿಮಾಡಿಕೊಳ್ಳಬೇಕು. ಉದಾ:—ಬಾಲಕರು ಎರಡನೆಯವರು ಒದರಾಡುವದನ್ನೂ ಚೀರಾಡುವದನ್ನೂ ಅನುಕರಣೆ ಮಾಡಲು ಬಯಸುತ್ತಿರುವರು. ಅವರ ಈ ಮನಃಪ್ರವೃತ್ತಿಯನ್ನು ಅವಲಂಬಿಸಿಕೊಂಡು, ಇಬ್ಬರು ಹುಡುಗರನ್ನು ಆರಿಸಿ, ಅವರು ಉಗಿಬಂಡಿಯ ಸ್ಟೇಶನ್ನದಲ್ಲಿ ನಿಂತಿರುವರೆಂದು ಕಲ್ಪನೆಮಾಡಿಕೊಟ್ಟು, ಒಬ್ಬನು ಉಗಿಬಂಡಿಯು ಬರುವಾಗ ಆಗುವ ಸಪ್ಪಳವನ್ನೂ ಅದರ ಸೀಟಿಯನ್ನೂ ಮತ್ತೊಬ್ಬನು 'ಧಾ-ರ-ವಾ-ಡ' ಎಂದು ಮುಂತಾಗಿ ರಾತ್ರಿಯ ವೇಳೆಯಲ್ಲಿ ಗಾಡಿಯು ಬಂದಕೂಡಲೆ ಪೋರ್ಟರನು ಒದರುವದನ್ನೂ ಅನುಕರಣೆಮಾಡಲಿಕ್ಕೆ ಹಚ್ಚಬಹುದು. ಇದೇ ರೀತಿಯಾಗಿ ಅಲ್ಲಿಯ ಚಿಕ್ಕ ವ್ಯಾಪಾರಿಯು— 'ಪಾನ - ಬೀಡಿ - ಸಿಗರೇಟ' ಎಂದೂ ಉಪಹಾರದ ಡಬ್ಬಿಯಿಂದಿಳಿದು ಬಂದ ಹುಡುಗನು 'ಗರಂ–ಚಹಾ–ಕಾಫೀ' ಎಂದು ಕೂಗುವದನ್ನೂ ಅನುಕರಣೆ ಮಾಡಲು ಪ್ರೇರಿಸಬಹುದು. ಹೀಗೆಯೇ ಓಣಿಯಲ್ಲಿ ಕಾಯಿಪಲ್ಲೆ ಮಾರುವವರು ಕೂಗುವದನ್ನೂ "ಬಿಸಿಬಿಸಿ ಚುರಮುರಿ ಹುರಕಡಲಿ" ಎಂದು ಒದರುವದನ್ನೂ ಮೋಟಾರಿನ ಸಪ್ಪಳವನ್ನೂ ಮೋಟಾರಿನ ಹಾರ್ನಿನ ಇಲ್ಲವೆ ಚರ್ಚಿನ ಗಂಟೆಯ ಸಪ್ಪಳವನ್ನೂ ಅನುಕರಣೆಮಾಡುವ ಆಟವನ್ನು ಆಡಿಸಬಹುದು. ಹಳ್ಳಿಯ ಹುಡುಗರು ರೈತರು ಹೊಲದಲ್ಲಿ ಕೆಲಸಮಾಡುವಾಗ ಇಲ್ಲವೆ ದನಕಾಯುವ ಹುಡುಗರು ದನಗಳನ್ನು ಮೇಯಿಸುವಾಗ ಹಾಡುವ ಹಾಡನ್ನೂ ಪಶುಪಕ್ಷಿಗಳ ಕೂಗುಗಳನ್ನೂ ಅನುಕರಣೆಮಾಡಬಹುದು. ಹೀಗೆ ಅನುಕರಣೆ ಮಾಡುವಾಗ ಅವನ್ನು ಕೇಳುವವರು ಬೇರೆ ಬೇರೆ ಕೂಗನ್ನು ಗುರ್ತಿಸುವಷ್ಟು ಸ್ಪಷ್ಟವಾಗಿ ಅನುಕರಣೆಮಾಡುವದು ಅವಶ್ಯವೆಂಬದನ್ನು ಮರೆಯಲಾಗದು. "ಶಿಕ್ಷಕನು ನಾನು ನಮ್ಮ ಹುಡುಗನಿಗೆ ಕೆಲವು ಆಟಿಗೆಯ ಸಾಮಾನುಗಳನ್ನು ಕೊಟ್ಟು ಅವನ್ನು 'ಮಾರಿಕೊಂಡು ಬಾ' ಎಂದು ಕಳುಹಿಸಿದೆನು. ಅವನು ಓಣಿಯೊಳಗೆ "ಪೀ" ಎಂದು ಸೀಟಿಯನ್ನು ಊದುತ್ತ ಹೊರಟನು. ಎಂದು ಆರಂಭಿಸಿ—'ಪೀ' ಎಂಬ ಸೀಟಿಯ ಒದರುವಿಕೆಯನ್ನು ಅನುಕರಣಮಾಡಲು ಹುಡುಗರನ್ನು

ಪ್ರೇರಿಸಿದರೆ ಅವರು ಆನಂದದಿಂದ "ಪೀ" ಎಂದು ಒದರಿ ಅನುಕರಣೆಮಾಡುವರು. ಆಮೇಲೆ ಅಲ್ಲೊಂದು ಮೋಟರು "ಗುರ್ರ್-ಗುರ್ರ"-ಎಂದು ಸಪ್ಪಳ ಮಾಡುತ್ತ ಬಂದಿತು. (ಹುಡುಗರು ಸ್ಟೇರಿಂಗ ಹಿಡಿದು ಕೂತ ಡ್ರಾಯಿವರನಂತೆ ಕೈಕಾಲುಗಳನ್ನು ಅನುಕರಣಮಾಡಿ ಬಾಯಿಯಲ್ಲಿ 'ಗುರ್ರ'- ಎಂದೂ ಆಮೇಲೆ "ಭೊಂವ್ ಭೊಂವ್"ಎಂದೂ ಸಪ್ಪಳದ ಅನುಕರಣೆಮಾಡಲಿ) ಇದೇ ರೀತಿ ಕಥೆ, ಆಟ, ಮಾತು, ಅನುಕರಣ, ಇವನ್ನೆಲ್ಲ ಮಿಶ್ರಮಾಡಿ ಹುಡುಗರನ್ನು ಆಯಾ ಕೆಲಸಗಳಲ್ಲಿ ಪ್ರತ್ಯಕ್ಷವಾಗಿ ತೊಡಗಿಸಿ ಅವರ ಮಾತಾಡುವ ಇಂದ್ರಿಯಗಳಿಗೆ ಶಿಕ್ಷಣ ಕೊಟ್ಟು ಅವರಲ್ಲಿ ಮಾತಾಡುವ ಪ್ರವೃತ್ತಿಯನ್ನುಂಟುಮಾಡಿ, ಅವರ ಶಬ್ದಭಾಂಡಾರವನ್ನು ಬೆಳೆಸಿ, ಪ್ರಪಂಚದೊಳಗಿನ ಭಿನ್ನ ಭಿನ್ನ ವಸ್ತುಗಳ ಸಂಬಂಧದ ಅನುಭವವನ್ನು ಅವರಿಗೆ ತಂದುಕೊಡಬೇಕಾಗುವದು. ಬಾಲಕರ ಶಬ್ದಭಾಂಡಾರವನ್ನು ಬೆಳೆಸುವದಕ್ಕಾಗಿ ಇಂಥ ಆಟಗಳನ್ನು ಉಪಯೋಗಿಸಿಕೊಳ್ಳಬಹುದು. ಹಾಗು ಕಥೆಗಳನ್ನೂ ಅವುಗಳಲ್ಲಿಯ ಪಾತ್ರಗಳ ಅಭಿನಯಗಳನ್ನೂ ಸಹಾಯಕವಾಗಿಟ್ಟುಕೊಳ್ಳಬಹುದು. ಇಂಥ ಎಲ್ಲ ಆಟಗಳಲ್ಲಿ ಅಲ್ಪಸ್ವಲ್ಪ ಕೃತ್ರಿಮತೆಯು ತೋರಿಬರಬಹುದಾದರೂ ಬಾಲಕರು ಅವನ್ನು ತುಂಬ ಸ್ವಾತಂತ್ರ್ಯದಿಂದಲೂ ಕೇವಲ ಆಟವೆಂಬ ಭಾವನೆಯನ್ನೇ ಮುಂದಿಟ್ಟುಕೊಂಡೂ ಆಡುವಂತೆ ಮಾಡಬೇಕು. ಚಿಕ್ಕ ಬಾಲಕರ ಶಬ್ದಭಾಂಡಾರವು ತೀರ ಮಿತವಾಗಿರುವದರಿಂದಲೂ ಅವರಿಗೆ ಮಿಕ್ಕವರೊಡನೆ ಮನಸ್ಸು ಬಿಚ್ಚಿ ಮಾತಾಡುವ ಪರಿಪಾಠವು ತೀರ ಕಡಿಮೆಯಿರುವದರಿಂದಲೂ ಶಿಶುಶಾಲೆಗಳಲ್ಲಿ ಈ ಮಾತು ತುಂಬ ಮಹತ್ವದ್ದಾಗಿರುವದು. ಆದರಾತಿಥ್ಯ, ಸಭ್ಯತನದ ನಡೆವಳಿಕೆ, ಊಟದ ವೇಳೆಯಲ್ಲಿ ಉಪಚರಿಸುವದು, ಆಯಾ ಜನರ ಯೋಗ್ಯತೆಗೆ ಅನುಗುಣವಾಗಿ ನಡೆದುಕೊಳ್ಳುವದು, ಉಡುಗೆತೊಡುಗೆಗಳನ್ನು ಧರಿಸುವದು ತೆಗೆದಿಡುವದು, ಕೈಕಾಲುಮೋರೆಗಳನ್ನು ತೊಳೆದುಕೊಳ್ಳುವದು, ಹಲ್ಲುಗಳನ್ನು ಉಜ್ಜಿಕೊಳ್ಳುವದು ಇವೇ ಮುಂತಾದ ನಿತ್ಯದ ಜೀವನಕ್ರಮದ ಅನೇಕ ಕಾರ್ಯಗಳನ್ನು ಅವರಿಗೆ ಕಲಿಸಬೇಕಾಗುವದು. ಆದರೆ ಅವನ್ನು ಪ್ರತ್ಯಕ್ಷವಾಗಿ ಆಯಾ ಸಂದರ್ಭವು ಒದಗಿದಾಗಲೇ ಎಂದರೆ ಅವನ್ನು ಬಾಲಕರು ತಾವಾಗಿಯೇ ಮಾಡಿಕೊಳ್ಳಲು ಇಚ್ಛಿಸಿ ಕಾರ್ಯವನ್ನು ಆರಂಭಿಸುವಂತೆ ಮಾಡಿ, ಅದು ಅವರಿಗೆ ಸಾಧ್ಯವಾಗದಿರುವ ಸಂದರ್ಭವು ಬರಲು ಶಿಕ್ಷಕರು ನೆರವಾಗಿ ಯೋಗ್ಯಮಾರ್ಗವನ್ನು ತೋರಿಸಿಕೊಡುತ್ತ ಸಾಗಬೇಕು. ಆಟಗಳಲ್ಲಿ ಪ್ರಪಂಚದ ಅನುಭವಕ್ಕೆ ಸಂಬಂಧಿಸಿದ ಮಾತುಗಳ ಜ್ಞಾನವನ್ನು ಮಾಡಿಕೊಡಲು ತಕ್ಕ ಸಮಯವು ಬಂದೇಬರುವದು. ಆದರೆ ಅವನ್ನು ಪುನಃಪುನಃ ಮಾಡಿಸುವದಕ್ಕೂ ಆ ರೂಢಿಯನ್ನು ಅವರಲ್ಲಿ ಹುಟ್ಟಿಸಿ ದೃಢಪಡಿಸುವದಕ್ಕೂ ಸಂದರ್ಭವನ್ನು ಶಿಕ್ಷಕನು ಕೃತ್ರಿಮವಾಗಿ ಉಂಟು

ಮಾಡಿಕೊಳ್ಳಬೇಕಾಗಬಹುದು. ಒಟ್ಟಿನಮೇಲೆ– ಬಾಲಕರಿಗೆ ಆಟಗಳನ್ನು ಕಲ್ಪಿಸಿ ಕೊಟ್ಟು ಅವರಿಗೆ ಸಾಕಷ್ಟು ರೂಢಿಯನ್ನು ಮಾಡಿಸಿ ಅವರಲ್ಲಿ ಒಳ್ಳೆಯ ಚಟಗಳನ್ನು ಹುಟ್ಟಿಸಿ ತಕ್ಕ ಶಿಕ್ಷಣಕೊಡಲು ಅನುಕೂಲವಾದ ಪರಿಸ್ಥಿತಿಯನ್ನು ಉಂಟುಮಾಡಿ ಕೊಳ್ಳುವದೇ ಶಿಶುಶಾಲೆಗಳ ಶಿಕ್ಷಕರ ಮುಖ್ಯವಾದ ಕರ್ತವ್ಯವಾಗಿರುವದು ಎಂದು ಹೇಳಬಹುದು. **(ಮುಂದೆ ಸಾಗುವದು)**

ಕ ವಿ ತೆ

ಲೇಖಕ : — ಜಿ. ಎಮ್. ಸಾತೇನಹಳ್ಳಿ, ಅಸಿ, ಮಾ. ಪ್ರ್ಯಾ. ಸ್ಕೂ. ಧಾರವಾಡ.

ಯಾವ ವಿಷಯದಲ್ಲಿಯೇ ಆಗಲಿ, ವಿಚಾರಮಾಡುತ್ತ ಕುಳಿತರೆ ಹಾಗು ಅದಕ್ಕೆ ತಕ್ಕಂತೆ ಕೆಲಸಮಾಡಿ ಅದೇ ವಿಷಯದಲ್ಲಿ ಅನುಭವ ಪಡೆಯುತ್ತ ಮುಂದೆ ಸಾಗಿದರೆ ಅದರಲ್ಲಿ ಏನಾದರೂ ಸುಧಾರಣೆಮಾಡುವದು ಅವಶ್ಯವೆಂದು ತೋರಲಾರಂಭಿಸುವದು. ಮೊದಲು ತಾನು 'ಒಳ್ಳೆಯದು ಒಳ್ಳೆಯದು' ಎಂದೆನ್ನುವ ಸಂಗತಿಯು ಕೂಡ ಸುಧಾರಣೆಗೆ ತಕ್ಕುದೆನಿಸುವದು; ಅಂದಮೇಲೆ ಶಿಕ್ಷಣದಂಥ ಮಹತ್ವದ ಬಹುಮುಖದ ಕಾರ್ಯಕ್ಷೇತ್ರದಲ್ಲಿ ಅನೇಕ ರೀತಿಯಿಂದ ವಿದ್ವಜ್ಜನರು ಯತ್ನಿಸುತ್ತ ನಡೆದಿರುವಾಗ 'ಇಂದಿನ ಸುಧಾರಣೆಯು ನಾಳೆಗೆ ಹಳೆಯದು' ಎಂದೆನ್ನುವ ದಿವಸಗಳು ಬಂದರೆ ಆಶ್ಚರ್ಯವೇನು ?

ನಮ್ಮ ಪ್ರಾ. ಶಾ. ಗಳ ಕ್ರಮಿಕ ಪುಸ್ತಕಗಳಲ್ಲಿ ಆಯಾ ಇಯತ್ತೆಗಳಿಗನು ಸರಿಸಿ ಕವಿತಾಪಾಠಗಳು ಇರುವವು. ಒಂದು ಪಾಠದಲ್ಲಿ ಒಂದೇ ವಿಷಯದ ಮೇಲೆ ಬಣ್ಣಿಸಲ್ಪಟ್ಟ ಪದ್ಯಗಳ ಗುಂಪುಗಳು ಇರುವದು. ಅವುಗಳಲ್ಲಿ ಒಂದೊಂದು ವೇಳೆಗೆ ಒಂದೊಂದರಂತೆ ನಮ್ಮ ಶಿಕ್ಷಕರು ನಮಗೆ ಕಲಿಸುತ್ತ ಬಂದಿದ್ದರು. ಬಳಿಕ ಆಯಾ ಕಾಲಕ್ಕೆ ರೂಢವಾದ ಪದ್ಧತಿಯಿಂದ ಹಾಗೆಯೇ ನಾವಾದರೂ ಕಲಿಸುತ್ತ ಸಾಗಿದ್ದೆವು; ಆದರೆ ಇತ್ತಲಾಗಿ ಕಲಿಸುವ ನೂತನ ಪದ್ಧತಿಗಳು ಬಳಕೆಯಲ್ಲಿ ಬರತೊಡಗಿರುವವು. ಆದರಂತೆ ಟ್ರೇ. ಸಂಸ್ಥೆಗಳಲ್ಲಿ ಕಲಿಸುವ ಪದ್ಧತಿಗಳ ಪ್ರಯೋಗಗಳೂ ನಡೆದಿರುವವು. ಹೊಸ ಪದ್ಧತಿಯನ್ನು ಅನುಸರಿಸಿ ರೂಢ ಪದ್ಧತಿಯನ್ನು ಬಿಡುವದು ಒಮ್ಮೆಲೆ ಸ್ವಲ್ಪ ತೊಂದರೆಯೆನಿಸುವದು ಸಹಜವು. ಹಾಗೆಯೇ ಹೊಸ ಪದ್ಧತಿಯಿಂದ ಶಿಕ್ಷಣದ ಪರಿಣಾಮವು ಪೂರ್ಣ ಪರಿಣಾಮ

...ಮ. ಹಾಗು ಮೈಚಳಿಬಿಟ್ಟು ಮಾತಾಡುವ ಪ್ರವೃತ್ತಿಯನ್ನೂ ಅದರಲ್ಲಿ ಹುಟ್ಟಿಸಬೇಕಾಗುವದು. ಒಮ್ಮೊಮ್ಮೆ ಇಂಥ ಆಟಗಳು ಸ್ವಾಭಾವಿಕವಾಗಿರದ್ದರಿಂದ ಅವನ್ನು ಆಡುವದಕ್ಕೆ ಬಾಲಕರು ಸ್ವಯಂಸ್ಫೂರ್ತಿಯಿಂದ ಮುಂದೆಬರುವ ಸಂಭವವಿರದು; ಆಗ ಇಂಥ ಆಟಗಳು ಕೃತ್ರಿಮವೆನಿಸುವವು. ಇವನ್ನು ಶಿಕ್ಷಕರೇ ಕಲ್ಪಿಸಿ ಬಾಲಕರ ಮುಂದೆ ಇಡಬೇಕಾಗುವದು. ಯಾವ ಕಾರ್ಯಗಳಿಂದ ವಾಗಿಂದ್ರಿಯಗಳಿಗೆ ಶಿಕ್ಷಣ ದೊರೆಯಬಹುದೆಂಬದನ್ನೂ ಯಾವದರಿಂದ ಬಾಲಕರಲ್ಲಿ ಮಾತಾಡುವ ಸ್ಫೂರ್ತಿಯುಂಟಾಗಬಹುದೆಂಬದನ್ನೂ ಮೊದಲು ಶಿಕ್ಷಕರು ಕಂಡುಕೊಳ್ಳಬೇಕು. ಆಮೇಲೆ ಅವನ್ನು ಯೋಗ್ಯ ಆಟಗಳಲ್ಲಿ ಸೇರ್ಪಡೆಮಾಡಿಕೊಳ್ಳಬೇಕು. ಉದಾ:— ಬಾಲಕರು ಎರಡನೆಯವರು ಒದರಾಡುವದನ್ನೂ ಚೀರಾಡುವದನ್ನೂ ಅನುಕರಣೆ ಮಾಡಲು ಬಯಸುತ್ತಿರುವರು. ಅವರ ಈ ಮನಃಪ್ರವೃತ್ತಿಯನ್ನು ಅವಲಂಬಿಸಿಕೊಂಡು, ಇಬ್ಬರು ಹುಡುಗರನ್ನು ಆರಿಸಿ, ಅವರು ಉಗಿಬಂಡಿಯು ಸ್ಟೇಶನ್ನದಲ್ಲಿ ನಿಂತಿರುವರೆಂದು ಕಲ್ಪನೆಮಾಡಿಕೊಟ್ಟು, ಒಬ್ಬನು ಉಗಿಬಂಡಿಯು ಬರುವಾಗ ಆಗುವ ಸಪ್ಪಳವನ್ನೂ ಅದರ ಸೀಟಿಯನ್ನೂ ಮತ್ತೊಬ್ಬನು 'ಧಾ-ರ-ವಾ-ಡ' ಎಂದು ಮುಂತಾಗಿ ರಾತ್ರಿಯ ವೇಳೆಯಲ್ಲಿ ಗಾಡಿಯು ಬಂದಕೂಡಲೆ ಪೋರ್ಟರನು ಒದರುವದನ್ನೂ ಅನುಕರಣೆಮಾಡಲಿಕ್ಕೆ ಹಚ್ಚಬಹುದು. ಇದೇ ರೀತಿಯಾಗಿ ಅಲ್ಲಿಯ ಚಿಕ್ಕ ವ್ಯಾಪಾರಿಯು— 'ಪಾನ - ಬೀಡಿ - ಸಿಗರೇಟ' ಎಂದೂ ಉಪಹಾರದ ಪಟ್ಟಿಯಿಂದಿಳಿದು ಬಂದ ಹುಡುಗನು 'ಗರಂ—ಚಹಾ - ಕಾಫೀ' ಎಂದು ಕೂಗುವದನ್ನೂ ಅನುಕರಣೆ ಮಾಡಲು ಪ್ರೇರಿಸಬಹುದು. ಹೀಗೆಯೇ ಓಣಿಯಲ್ಲಿ ಕಾಯಿಪಲ್ಲೆ ಮಾರುವವಳು ಕೂಗುವದನ್ನೂ "ಬಿಸಿಬಿಸಿ ಚುರಮುರಿ ಪುರಕಡಲಿ" ಎಂದು ಒದರುವದನ್ನೂ ಮೋಟಾರಿನ ಸಪ್ಪಳವನ್ನೂ ಮೋಟಾರಿನ ಹಾರ್ನಿನ ಇಲ್ಲವೆ ಚರ್ಚಿನ ಗಂಟೆಯ ಸಪ್ಪಳವನ್ನೂ ಅನುಕರಣೆಮಾಡುವ ಆಟವನ್ನು ಆಡಿಸಬಹುದು. ಹಳ್ಳಿಯ ಹುಡುಗರು ರೈತರು ಹೊಲದಲ್ಲಿ ಕೆಲಸಮಾಡುವಾಗ ಇಲ್ಲವೆ ದನ ಕಾಯುವ ಹುಡುಗರು ದನಗಳನ್ನು ಮೇಯಿಸುವಾಗ ಹಾಡುವ ಹಾಡನ್ನೂ ಪಶುಪಕ್ಷಿಗಳ ಕೂಗುಗಳನ್ನೂ ಅನುಕರಣೆಮಾಡಬಹುದು. ಹೀಗೆ ಅನುಕರಣೆ ಮಾಡುವಾಗ ಅವನ್ನು ಕೇಳುವವರು ಬೇರೆ ಬೇರೆ ಕೂಗನ್ನು ಗುರ್ತಿಸುವಷ್ಟು ಸ್ಪಷ್ಟವಾಗಿ ಅನುಕರಣೆಮಾಡುವದು ಅವಶ್ಯವೆಂಬದನ್ನು ಮರೆಯಲಾಗದು. "ಶಿಕ್ಷಕನು ನಾನು ನನ್ನ ಹುಡುಗನಿಗೆ ಕೆಲವು ಆಟಿಗೆಯ ಸಾಮಾನುಗಳನ್ನು ಕೊಟ್ಟು ಅವನ್ನು 'ಮಾರಿಕೊಂಡು ಬಾ' ಎಂದು ಕಳುಹಿಸಿದೆನು. ಅವನು ಓಣಿಯೊಳಗೆ "ಪೀ" ಎಂದು ಸೀಟಿಯನ್ನು ಊದುತ್ತ ಹೊರಟನು. ಎಂದು ಆರಂಭಿಸಿ— 'ಪೀ' ಎಂಬ ಸೀಟಿಯ ಒದರುವಿಕೆಯನ್ನು ಅನುಕರಣಮಾಡಲು ಹುಡುಗರನ್ನು

ಪ್ರೇರಿಸಿದರೆ ಅವರು ಆನಂದದಿಂದ "ಪೀ" ಎಂದು ಒದರಿ ಅನುಕರಣೆಮಾಡುವರು. ಆಮೇಲೆ ಆಲ್ಲೊಂದು ಮೋಟರು "ಗುರ್‍ರ್‍-ಗುರ್‍ರ್‍"-ಎಂದು ಸಪ್ಪಳ ಮಾಡುತ್ತ ಬಂದಿತು. (ಹುಡುಗರು ಸ್ಟೇರಿಂಗ ಹಿಡಿದು ಕೂತ ಡ್ರಾಯಿವರನಂತೆ ಕೈಕಾಲು ಗಳನ್ನು ಅನುಕರಣಮಾಡಿ ಬಾಯಿಯಲ್ಲಿ 'ಗುರ್‍ರ್‍'- ಎಂದೂ ಆಮೇಲೆ "ಭೊಂವ್ ಭೊಂವ್"ಎಂದೂ ಸಪ್ಪಳದ ಅನುಕರಣೆಮಾಡಲಿ) ಇದೇ ರೀತಿ ಕಥೆ, ಆಟ, ಮಾತು, ಅನುಕರಣ, ಇವನ್ನೆಲ್ಲ ಮಿಶ್ರಮಾಡಿ ಹುಡುಗರನ್ನು ಆಯಾ ಕೆಲಸಗಳಲ್ಲಿ ಪ್ರತ್ಯಕ್ಷ ವಾಗಿ ತೊಡಗಿಸಿ ಅವರ ಮಾತಾಡುವ ಇಂದ್ರಿಯಗಳಿಗೆ ಶಿಕ್ಷಣ ಕೊಟ್ಟು ಅವರಲ್ಲಿ ಮಾತಾಡುವ ಪ್ರವೃತ್ತಿಯನ್ನುಂಟುಮಾಡಿ, ಅವರ ಶಬ್ದಭಾಂಡಾರವನ್ನು ಬೆಳಿಸಿ, ಪ್ರಪಂಚದೊಳಗಿನ ಭಿನ್ನ ಭಿನ್ನ ವಸ್ತುಗಳ ಸಂಬಂಧದ ಅನುಭವವನ್ನು ಅವರಿಗೆ ತಂದುಕೊಡಬೇಕಾಗುವದು. ಬಾಲಕರ ಶಬ್ದಭಾಂಡಾರವನ್ನು ಬೆಳಿಸುವದಕ್ಕಾಗಿ ಇಂಥ ಆಟಗಳನ್ನು ಉಪಯೋಗಿಸಿಕೊಳ್ಳಬಹುದು. ಹಾಗು ಕಥೆಗಳನ್ನೂ ಅವುಗಳ ಲ್ಲಿಯ ಪಾತ್ರಗಳ ಅಭಿನಯಗಳನ್ನೂ ಸಹಾಯಕವಾಗಿಟ್ಟುಕೊಳ್ಳಬಹುದು. ಇಂಥ ಎಲ್ಲ ಆಟಗಳಲ್ಲಿ ಅಲ್ಪಸ್ವಲ್ಪ ಕೃತ್ರಿಮತೆಯು ತೋರಿಬರಬಹುದಾದರೂ ಬಾಲಕರು ಅವನ್ನು ತುಂಬ ಸ್ವಾತಂತ್ರ್ಯದಿಂದಲೂ ಕೇವಲ ಆಟವೆಂಬ ಭಾವನೆಯನ್ನೇ ಮುಂದಿಟ್ಟುಕೊಂಡೂ ಆಡುವಂತೆ ಮಾಡಬೇಕು. ಚಿಕ್ಕ ಬಾಲಕರ ಶಬ್ದ ಭಾಂಡಾರವು ತೀರ ಮಿತವಾಗಿರುವದರಿಂದಲೂ ಅವರಿಗೆ ಮಿಕ್ಕವರೊಡನೆ ಮನಸ್ಸು ಬಿಚ್ಚಿ ಮಾತಾಡುವ ಪರಿಪಾಠವು ತೀರ ಕಡಿಮೆಯಿರುವದರಿಂದಲೂ ಶಿಶುಶಾಲೆಗಳಲ್ಲಿ ಈ ಮಾತು ತುಂಬ ಮಹತ್ವದ್ದಾಗಿರುವದು. ಆದರಾತಿಥ್ಯ, ಸಭ್ಯ ತನದ ನಡೆವಳಿಕೆ, ಊಟದ ವೇಳೆಯಲ್ಲಿ ಉಪಚರಿಸುವದು, ಆಯಾ ಜನರ ಯೋಗ್ಯತೆಗೆ ಅನುಗುಣವಾಗಿ ನಡೆದುಕೊಳ್ಳುವದು, ಉಡುಗೆತೊಡುಗೆಗಳನ್ನು ಧರಿಸುವದು ತೆಗೆ ದಿಡುವದು, ಕೈಕಾಲುಮೋರೆಗಳನ್ನು ತೊಳೆದುಕೊಳ್ಳುವದು, ಹಲ್ಲುಗಳನ್ನು ಉಜ್ಜಿ ಕೊಳ್ಳುವದು ಇವೇ ಮುಂತಾದ ನಿತ್ಯದ ಜೀವನಕ್ರಮದ ಅನೇಕ ಕಾರ್ಯಗಳನ್ನು ಅವರಿಗೆ ಕಲಿಸಬೇಕಾಗುವದು. ಆದರೆ ಅವನ್ನು ಪ್ರತ್ಯಕ್ಷವಾಗಿ ಆಯಾ ಸಂದ ರ್ಭವು ಇರುವಾಗಲೇ ಎಂದರೆ ಅವನ್ನು ಬಾಲಕರು ತಾವಾಗಿಯೇ ಮಾಡಿಕೊಳ್ಳಲು ಇಚ್ಛಿಸಿ ಕಾರ್ಯವನ್ನು ಆರಂಭಿಸುವಂತೆ ಮಾಡಿ, ಅದು ಅವರಿಗೆ ಸಾಧ್ಯವಾಗದಿರುವ ಸಂದರ್ಭವು ಬರಲು ಶಿಕ್ಷಕರು ನೆರವಾಗಿ ಯೋಗ್ಯಮಾರ್ಗವನ್ನು ತೋರಿಸಿ ಕೊಡುತ್ತ ಸಾಗಬೇಕು. ಆಟಗಳಲ್ಲಿ ಪ್ರಪಂಚದ ಅನುಭವಕ್ಕೆ ಸಂಬಂಧಿಸಿದ ಮಾತುಗಳ ಜ್ಞಾನವನ್ನು ಮಾಡಿಕೊಡಲು ತಕ್ಕ ಸಮಯವು ಬಂದೇಬರುವದು. ಆದರೆ ಅವನ್ನು ಪುನಃಪುನಃ ಮಾಡಿಸುವದಕ್ಕೂ ಆ ರೂಢಿಯನ್ನು ಅವರಲ್ಲಿ ಹುಟ್ಟಿಸಿ ದೃಢಪಡಿಸುವದಕ್ಕೂ ಸಂದರ್ಭವನ್ನು ಶಿಕ್ಷಕನು ಕೃತ್ರಿಮವಾಗಿ ಉಂಟು

ಮಾಡಿಕೊಳ್ಳಬೇಕಾಗಬಹುದು. ಒಟ್ಟಿನಮೇಲೆ- ಬಾಲಕರಿಗೆ ಆಟಗಳನ್ನು ಕಲ್ಪಿಸಿ ಕೊಟ್ಟು ಅವರಿಗೆ ಸಾಕಷ್ಟು ರೂಢಿಯನ್ನು ಮಾಡಿಸಿ ಅವರಲ್ಲಿ ಒಳ್ಳೆಯ ಚಟಗಳನ್ನು ಹುಟ್ಟಿಸಿ ತಕ್ಕ ಶಿಕ್ಷಣಕೊಡಲು ಅನುಕೂಲವಾದ ಪರಿಸ್ಥಿತಿಯನ್ನು ಉಂಟುಮಾಡಿ ಕೊಳ್ಳುವದೇ ಶಿಶುಶಾಲೆಗಳ ಶಿಕ್ಷಕರ ಮುಖ್ಯವಾದ ಕರ್ತವ್ಯವಾಗಿರುವದು ಎಂದು ಹೇಳಬಹುದು. (ಮುಂದೆ ಸಾಗುವದು)

ಕ ವಿ ತೆ

ಲೇಖಕ: — ಜಿ. ಎಮ್. ಸಾತೇನಹಳ್ಳಿ, ಅಸಿ, ಮಾ. ಪ್ರ್ಯಾ. ಸ್ಕೂ. ಧಾರವಾಡ.

ಯಾವ ವಿಷಯದಲ್ಲಿಯೇ ಆಗಲಿ, ವಿಚಾರಮಾಡುತ್ತ ಕುಳಿತರೆ ಹಾಗು ಅದಕ್ಕೆ ತಕ್ಕಂತೆ ಕೆಲಸಮಾಡಿ ಅದೇ ವಿಷಯದಲ್ಲಿ ಅನುಭವ ಪಡೆಯುತ್ತ ಮುಂದೆ ಸಾಗಿದರೆ ಅದರಲ್ಲಿ ಏನಾದರೂ ಸುಧಾರಣೆಮಾಡುವದು ಅವಶ್ಯವೆಂದು ತೋರಲಾರಂಭಿಸುವದು. ಮೊದಲು ತಾನು 'ಒಳ್ಳೆಯದು ಒಳ್ಳೆಯದು' ಎಂದೆನ್ನುವ ಸಂಗತಿಯು ಕೂಡ ಸುಧಾರಣೆಗೆ ತಕ್ಕುದೆನಿಸುವದು; ಅಂದಮೇಲೆ ಶಿಕ್ಷಣದಂಥ ಮಹತ್ವದ ಬಹುಮುಖದ ಕಾರ್ಯಕ್ಷೇತ್ರದಲ್ಲಿ ಅನೇಕ ರೀತಿಯಿಂದ ವಿದ್ವಜ್ಜನರು ಯುಕ್ತಿಸುತ್ತ ನಡೆದಿರುವಾಗ 'ಇಂದಿನ ಸುಧಾರಣೆಯು ನಾಳೆಗೆ ಹಳೆಯದು' ಎಂದೆನ್ನುವ ದಿವಸಗಳು ಬಂದರೆ ಆಶ್ಚರ್ಯವೇನು?

ನಮ್ಮ ಪ್ರಾ. ಶಾ. ಗಳ ಕ್ರಮಿಕ ಪುಸ್ತಕಗಳಲ್ಲಿ ಆಯಾ ಇಯತ್ತೆಗಳಿಗನುಸರಿಸಿ ಕವಿತಾಪಾಠಗಳು ಇರುವವು. ಒಂದು ಪಾಠದಲ್ಲಿ ಒಂದೇ ವಿಷಯದ ಮೇಲೆ ಬಣ್ಣಿಸಲ್ಪಟ್ಟ ಪದ್ಯಗಳ ಗುಂಪುಗಳು ಇರುವದು. ಅವುಗಳಲ್ಲಿ ಒಂದೊಂದು ವೇಳೆಗೆ ಒಂದೊಂದರಂತೆ ನಮ್ಮ ಶಿಕ್ಷಕರು ನಮಗೆ ಕಲಿಸುತ್ತ ಬಂದಿದ್ದರು. ಬಳಿಕ ಆಯಾ ಕಾಲಕ್ಕೆ ರೂಢವಾದ ಪದ್ಧತಿಯಿಂದ ಹಾಗೆಯೇ ನಾವಾದರೂ ಕಲಿಸುತ್ತ ಸಾಗಿದ್ದೆವು; ಆದರೆ ಇತ್ತಲಾಗಿ ಕಲಿಸುವ ನೂತನ ಪದ್ಧತಿಗಳು ಬಳಕೆಯಲ್ಲಿ ಬರತೊಡಗಿರುವವು. ಅದರಂತೆ ಟ್ರೇ. ಸಂಸ್ಥೆಗಳಲ್ಲಿ ಕಲಿಸುವ ಪದ್ಧತಿಗಳ ಪ್ರಯೋಗಗಳೂ ನಡೆದಿರುವವು. ಹೊಸ ಪದ್ಧತಿಯನ್ನು ಅನುಸರಿಸಿ ರೂಢ ಪದ್ಧತಿಯನ್ನು ಬಿಡುವದು ಒಮ್ಮೆಲೆ ಸ್ವಲ್ಪ ತೊಂದರೆಯೆನಿಸುವದು ಸಹಜವು. ಹಾಗೆಯೇ ಹೊಸ ಪದ್ಧತಿಯಿಂದ ಶಿಕ್ಷಣದ ಪರಿಣಾಮವು ಪೂರ್ಣ ಪರಿಣಾಮ

ಕಾರಿಯಾಗುವದೋ ಇಲ್ಲವೋ ನೋಡಬೇಕೆಂಬ ವಿಚಾರವೂ ಬರುವದು. ಅದರಂತೆಯೇ ನೂತನ ಪದ್ಧತಿಯಲ್ಲಿಯೇ ನುರಿಯುತ್ತಿದ್ದ ಹೊಸ ಶಿಕ್ಷಕರಿಗೆ ಹಳೆಯ ಪದ್ಧತಿಯು ಹ್ಯಾಗೆ ಇದ್ದಿತು? ಎಂಬದನ್ನು ಪೂರಾ ತಿಳಿದುಕೊಳ್ಳುವ ಅಪೇಕ್ಷೆಯು ಹುಟ್ಟುವದು ಅರಿದಾದದ್ದಲ್ಲ. ಇವೆರಡೂ ಪದ್ಧತಿಗಳಿಂದ ಕಲಿಸಿದವನಿಗೆ ರೂಢಿಯಿಂದ ಹೊಸಪದ್ಧತಿಯು ಮನೋರಂಜಕವಾಗಿಯೂ ಪರಿಣಾಮಕಾರಿಯಾಗಿಯೂ ಹಗುರಾಗಿ ಸಾಗುವದೂ ಆಗಿರುವವೆಂದು ಅನುಭವದಿಂದ ಕಂಡುಬಂದಿರುವದು. ಮೊದಲು ಹಳೆಯ ಪದ್ಧತಿಯ ವಿಷಯವಾಗಿ ಕೆಳಗೆ ಸ್ವಲ್ಪ ವಿಚಾರಿಸಿದೆ.

ಹಳೆಯ ಪದ್ಧತಿ

ಮೊದಲು ಪದ್ಯಪಾಠಗಳನ್ನು ಕಲಿಸುವ ಉದ್ದೇಶವೇ ಬೇರೆಯಾಗಿದ್ದಿತು. ವಿಷಯಜ್ಞಾನ, ಭಾಷಾಜ್ಞಾನಗಳನ್ನು ಮಾಡಿಕೊಡುವದನ್ನೇ ಅದರ ಗುರಿಯಾಗಿಟ್ಟುಕೊಂಡಿದ್ದರು. ಈ ಉದ್ದೇಶಕ್ಕನುಸರಿಸಿ ಪದಚ್ಛೇದ ಶಬ್ದಾರ್ಥ, ಅನ್ವಯಾರ್ಥ, ಭಾವಾರ್ಥ, ವ್ಯಾಕರಣವಿಚಾರ ಇತ್ಯಾದಿಗಳನ್ನು ಕ್ರಮವಾಗಿ ಪದ್ಯಗಳ ಮೂಲಕವಾಗಿ ಕಲಿಸುತ್ತ ಸಾಗುತ್ತಿದ್ದರು. ಪದ್ಧತಿಯಲ್ಲಿಯೂ ಟಿಪ್ಪಣಿಯಲ್ಲಿಯೂ ಇದಕ್ಕನುಸರಿಸಿ ಭಾಗಗಳನ್ನು ಮಾಡಿಕೊಳ್ಳುತ್ತಿದ್ದರು. ಅವುಗಳಲ್ಲಿ ಕೆಲವು ಭಾಗಗಳು ಹೊಸಪದ್ಧತಿಯನ್ನು ಹೋಲುವಂತೆಯೂ ಅವೆ.

ಆಗಿನ ಟಿಪ್ಪಣಿಯ ವಿಭಾಗಗಳು— ೧ ಧಾಟಿಯಿಂದ ಕವಿತೆ ಅನ್ನುವದು, ಅನಿಸುವದು. ೨ ಶಬ್ದವಿಚಾರ ಶಬ್ದಾರ್ಥ ವಿಚಾರ. ೩ ಕ್ರಿಯಾಪದವನ್ನು ಹಿಡಿದು ಕರ್ತೃಕರ್ಮ ಮು. ಗಳೊಂದಿಗೆ ಅನ್ವಯಹಚ್ಚುವದು. ೪ ಅನ್ವಯಕ್ಕೆ ಸರಿಯಾಗಿ ಅರ್ಥ. ೫ ಭಾವಾರ್ಥ. ೬ ವ್ಯಾಕರಣವಿಶೇಷ, ಛಂದಸ್ಸು, ಅಲಂಕಾರ ಇತ್ಯಾದಿ. ಈ ಟಿಪ್ಪಣಿಯು ಕೆಳಗಿನ ಇಯತ್ತೆಗಳಿಗೂ ಮೇಲಿನ ಇಯತ್ತೆಗಳಿಗೂ ಸಾರ್ವತ್ರಿಕವಾಗಲಾರದು. ನಮ್ಮ ಇಯತ್ತೆಗಳಲ್ಲಿ ಕೆಳಗಿನ ಹಾಗು ಮೇಲಿನ ಇಯತ್ತೆಗಳು ಎಂಬದಾಗಿ ಸ್ವಾಭಾವಿಕ ವಿಭಾಗಗಳು ಇರುವವು. ೪ನೆಯ ಇಯತ್ತೆಯು ಮಧ್ಯವರ್ತಿ ಯಾಗಿರುವದು. ಯಾವದೇ ವಿಷಯನ್ನು ಕಲಿಸುವಾಗಲೂ ಟಿಪ್ಪಣಿ ತೆಗೆಯುವಾಗಲೂ ಈ ವಿಚಾರವನ್ನು ಕುರಿತು ಈಗಲೂ ಲಕ್ಷ್ಯಗೊಡಬೇಕಾಗಿರುವದು.

ತೀರ ಕೆಳಗಿನ ಇ. ಗಳಲ್ಲಿ ಪದ್ಯಗಳು ಬಹುತರ ವಾಕ್ಯರೂಪದಲ್ಲಿಯೇ ಇರುತ್ತವೆ. ಆಗ ಪದ್ಯಗಳನ್ನು ಧಾಟಿಯಿಂದ ಅಂದು ತೋರಿಸಿ ಅನ್ನಿಸಿ ಭಾವಾರ್ಥ ಕೇಳಿದರೆ ಸಾಕು; ಅವರು ತಾವು ಮಾತನಾಡುವ ಭಾಷೆಯಲ್ಲಿ ಆ ಕವಿತೆಯ ಭಾವಾರ್ಥ ಹೇಳಿದರೆ ಸಾಕು. ಪದ್ಯಪಾಠವು ಮುಗಿಯುತ್ತಿದೆ. ಕೆಳಗಿನ

ಇಯತ್ತೆಯು ಈ ಪದ್ಧತಿಯು ಹೊಸ ಪದ್ಧತಿಗೆ ಹೋಲುತ್ತದೆ. ಬರಬರುತ್ತ ಮೇಲಿನ ಇ. ಗಳಲ್ಲಿ ವ್ಯಾವಹಾರಿಕ ಭಾಷೆಗಿಂತ ಕಠಿಣವಾದ ಶಬ್ದಗಳು ಪದ್ಯಗಳಲ್ಲಿ ಬರಲಾರಂಭಿಸುತ್ತವೆ. ಆದುದರಿಂದ ಹಳೆಯ ಪದ್ಧತಿಯಲ್ಲಿ ಶಬ್ದಾರ್ಥ ವಿಚಾರ ವೆಂಬುದನ್ನು ಎರಡನೆಯ ಭಾಗವನ್ನಾಗಿ ಮಾಡಿಕೊಂಡರು. ಬಳಿಕ ಕ್ರಿಯಾಪದ ದಿಂದ ಆರಂಭಿಸಿ ಕವಿತೆಯಲ್ಲಿ ಹಿಂದುಮುಂದೆ ಇದ್ದ ಕರ್ತೃ, ಕರ್ಮ, ಕ್ರಿ. ವಿ. ಇತ್ಯಾದಿಗಳನ್ನು ಗದ್ಯಕ್ಕೆ ಅನುರೂಪವಾಗುವಂತೆ ಹೊಂದಿಸಿ ಅನ್ವಯದೇ ಅನ್ವಯವು. ಭಾಷಾಪಾಠ ಕಲಿಸುವದೇ ಉದ್ದೇಶವಿದ್ದುದರಿಂದ ಅದು ಕಂಠಗತ ವಾಗುವಂತೆ ರೂಢಿಮಾಡಿಸುತ್ತಿದ್ದರು. ಸಂಧಿಜ್ಞಾನವಾದಬಳಿಕ ಒಮ್ಮೆ ಬಿಡಿ ಸುವದು ಮತ್ತೊಮ್ಮೆ ಕೂಡಿಸುವದು ಮುಂತಾದ ಪದಜ್ಞಾನಕ್ಕೆ ಅನುಕೂಲ ವಾದ ಸಂಗತಿಗಳನ್ನೂ ಕರ್ತೃ ಕರ್ಮ ವಿಚಾರಗಳನ್ನೂ ಆಗಲೆ ದೃಢಪಡಿಸಿಕೊಂಡು ಬಿಟ್ಟರೆ ಅನ್ವಯಕ್ಕೆ ಸುಲಭವಾಗುತ್ತಿತ್ತು. ವ್ಯಾಕರಣ ವಿಚಾರವು ಕೊನೆಗೆ ಇದ್ದರೂ ಅನ್ವಯಜ್ಞಾನಕ್ಕೆ ಅವಶ್ಯಕಂಡರೆ ಆಗಲೂ ವ್ಯಾಕರಣ ವಿಚಾರವು ಬರಬೇಕಾಗುತ್ತಿತ್ತು; ಹೆಚ್ಚು ವಿಚಾರವನ್ನು ಕಟ್ಟಕಡೆಗೆ ಇಡುತ್ತಿದ್ದರು. ಬಳಿಕ ಭಾವಾರ್ಥ ಹೇಳಿಸಿಕೊಳ್ಳುವಾಗ ಕವಿತೆಯಲ್ಲಿ ಬಣ್ಣಿಸಲ್ಪಟ್ಟ ಕಥೆ ಇಲ್ಲವೆ ಚರಿತ್ರ ಅಥವಾ ವರ್ಣನೆ ಇವುಗಳಿಗೆ ಸಂಬಂಧಿಸಿದ ವಿಷಯಜ್ಞಾನ ಮಾಡಿಕೊಡಬೇಕಾಗು ತ್ತಿದ್ದಿತು. ಕಟ್ಟಕಡೆಗೆ ಮೇಲಿನ ಇಯತ್ತೆಗಳಲ್ಲಿ ಸಮಾಸಜ್ಞಾನ, ಛಂದಸ್ಸಿನ ವಿಚಾರ, ಸ್ವಲ್ಪ ಅಲಂಕಾರವಿಚಾರ ಮುಖ್ಯವಾಗಿ ಚಲೋ ಗದ್ಯಶೈಲಿಗೆ ತಕ್ಕಂತೆ ಪದ್ಯಗಳ ಭಾಷಾಂತರ ಇವನ್ನೆಲ್ಲ ಲಕ್ಷಕೊಟ್ಟು ಮಾಡಿಸುತ್ತಿದ್ದರು. ಹಾಗು ರೆಯಿಸುತ್ತಿದ್ದರು.

ಒಟ್ಟಾರೆ, ಕವಿತಾಶಿಕ್ಷಣವು ಭಾಷಾಪಾಠದ ಮುಖ್ಯ ಸ್ಥಾನವಾಗಿದ್ದಿತು. ದಲ್ಲದೆ ವಿಷಯಜ್ಞಾನ, ನೀತಿಜ್ಞಾನಗಳಿಗೂ ಆಶ್ರಯ ಸ್ಥಾನವಾಗಿತ್ತು. ಇಷ್ಟೆಲ್ಲ ದ್ಧತಿಗೆ ಸರಿಯಾಗಿ ಪೂರಾ ಕಲಿಸಲು ಟ್ರೇಂಡ ಶಿಕ್ಷಕರು ಮಾತ್ರ ತಕ್ಕವ ಾಗಿರುತ್ತಿದ್ದರು; ಹಳ್ಳಿಗಳಲ್ಲಿ ಒಬ್ಬೊಬ್ಬ ಶಿಕ್ಷಕರಿಗೆ ೪, ೫ ರ ವರೆಗೂ ಇಯತ್ತೆ ಸಂಖ್ಯೆಗಳು ಬರುತ್ತವೆ. ಸಾಧಾರಣ ಪ್ರತಿಯ ದೊಡ್ಡ ಊರುಗಳಲ್ಲಿಯೂ ಎರಡು ಇಯತ್ತೆಗಳನ್ನು ಒಬ್ಬರೇ ಕಲಿಸಬೇಕಾಗುವದು. ಇಂಥ ಶಾಲೆಗಳ ಖ್ಯೆಯೇ ಬಹಳ. ಆದುದರಿಂದ ಬಹುತರ ಶಾಲೆಗಳಲ್ಲಿ ಎಲ್ಲ ವಿವರಣೆಯು ಯುಕ್ತವಾಗಿ ಒತ್ತಟ್ಟಿಗೇ ದೊರೆಯುತ್ತಿದ್ದ ಛಾಪೀ ಅರ್ಥಗಳ ದ್ವಾರದಿಂದಲೇ ದ್ಯಪಾಠಗಳ ಶಿಕ್ಷಣವು ಸಾಗತೊಡಗಿತು; ಅರ್ಥಾತ್ ಕಂಠಪಾಠಕ್ಕೇ ಪ್ರಾಧಾ ವು ದೊರೆಯಿತು.

ಹೊಸಪದ್ಧತಿ

ಮಾಧ್ಯಮಿಕ ಶಾಲೆಗಳಲ್ಲಿ ಅನೇಕ ಅನುಕೂಲತೆಗಳ ಮೂಲಕ ಪದ್ಯಪಾಠಗಳ ಶಿಕ್ಷಣವು ಹೊಸಪದ್ಧತಿಯಂತೆಯೇ ಸಾಗತೊಡಗಿದೆ. ಅನೇಕ ತೊಂದರೆಗಳ ಮೂಲಕ ಪ್ರಾ. ಶಾ. ಗಳಲ್ಲಿ ಈಗ ಈ ಪದ್ಧತಿಯು ಆರಂಭವಾಗುತ್ತಲಿದೆ. ಮೊದಲಿನ ಕಂಠಪಾಠ ಪದ್ಧತಿಯು ತೀರ ಅನುಚಿತವೆಂದು ಶಿಕ್ಷಣಜ್ಞರು ಹೇಳುತ್ತಿರುವರು. ಹೀಗಿರುವಾಗ ಕವಿತಾಪಾಠಗಳನ್ನು ಕೇವಲ ಕಂಠಪಾಠವಾಗಿ ಸಾಗಿಸುವದು ತೀರ ಅಯೋಗ್ಯವಾಗಿರುವದು. ವಿದ್ಯಾರ್ಥಿಗಳ ಮನಸ್ಸು ಪರಿಪಕ್ವದಶೆಯನ್ನು ಹೊಂದದೆ ಇರುವಾಗ ಕಠಿಣ ವಿಷಯಗಳನ್ನು ಕಂಠಪಾಠರೀತಿಯಿಂದ ಕಲಿಸುವದು ಒಳ್ಳೆಯದಲ್ಲ. ಮಕ್ಕಳ ಮಾನಸಿಕಶಕ್ತಿಯನ್ನು ವಿಚಾರಮಾಡದೆ ಶಿಕ್ಷಕರ ಯೋಗ್ಯತೆ, ವಿಷಯದ ಇಯತ್ತಾಕ್ರಮ ಇವುಗಳ ಕಡೆಗೇ ಲಕ್ಷ್ಯಗೊಟ್ಟು ಕೆಲಸ ಸಾಗಿಸುವದು ಅಪಾಯಕಾರಕವು.

ಹೊಸಪದ್ಧತಿಯಲ್ಲಿ ಕವಿತಾಶಿಕ್ಷಣದಿಂದ ಹುಡುಗರ ಮನೋಭಾವನೆಗಳು ಜಾಗ್ರತೆಹೊಂದಬೇಕೆಂಬ ತತ್ವವನ್ನು ಮುಂದಿಟ್ಟುಕೊಂಡಿರುವರು. ಮೊದಲಿನಂತೆ ಇತಿಹಾಸ, ಭೂಗೋಲ, ಗಣಿತ, ಮುಂತಾದವುಗಳಂತೆ ಕವಿತಾಶಿಕ್ಷಣದಲ್ಲಿಯೂ ವಿದ್ಯಾರ್ಥಿಗಳ ಬುದ್ಧಿಯನ್ನೂ ನೀತಿಯನ್ನೂ ವಿಷಯ ಜ್ಞಾನವನ್ನೂ ಬೆಳೆಯಿಸಬಹುದೆಂಬಷ್ಟೇ ತತ್ವವನ್ನು ಈಗ ಇಟ್ಟುಕೊಂಡಿರುವದಿಲ್ಲ. ವಿದ್ಯಾರ್ಥಿಗಳ ಭಾವನೆಗಳನ್ನು ಜಾಗ್ರತೆಗೊಳಿಸಿ ಅವನ್ನು ಬೆಳೆಯಿಸಬೇಕೆಂದು ಶಾಲೆಗಳಲ್ಲಿ ಕವಿತಾಪಾಠಗಳ ಯೋಜನೆ ಇರುವದು. ಆದುದರಿಂದ ಈಗ ಕವಿತೆಯು ಕೇವಲ ಭಾಷಾಪಾಠವಾಗಿರುವದಿಲ್ಲ. ಒಂದು ಸಾರೆ ಕವಿತಾಪಾಠವು ಸಾಗಿದಬಳಿಕ ಆವರ್ತನೆಯ ಪಾಠದ ಕಾಲದಲ್ಲಿ ಬೇಕಾದರೆ ಭಾಷಾಪಾಠದಂತೆ ಹೆಚ್ಚು ಸಂಗತಿಗಳ ಜ್ಞಾನಮಾಡಿಕೊಡಬಹುದು.

ಕವಿತೆಯು ಚಿತ್ರಕಲೆಯಂತೆ ಒಂದು ಕಲೆಯಾಗಿರುವದು. ಕವಿತೆಯನ್ನು ಇಂಪಾಗಿ ಅನ್ನುವದರಿಂದ ಹುಡುಗರ ಮನೋರಂಜನೆಯಾಗಿ ಅಸ್ಥಿ-ವಿಕ ಗ್ರುತಿಗಳು ನೆಲಿಸಿ ಅವರಲ್ಲಿದ್ದ ಮನೋಭಾವನೆಗಳು ಜಾಗ್ರತಿಹೊಂದಿ ಹೊರಬೀಳಲು ಹಾತೊರೆಯಬೇಕು. ಅವರು ಕವಿತೆಯನ್ನು ಕೇಳಿ ತಾವು ಹಾಗೆಯೇ ಅಂದು ಕಾವ್ಯಸ್ವಾರಸ್ಯದಿಂದ ಆನಂದಹೊಂದಬೇಕು. ಅದರ ಭಾವ ಗೊತ್ತಾಗಿ ಕಾವ್ಯ

ಚಮತ್ಕೃತಿ ತಿಳಿದು ಸಂತೋಷಬಟ್ಟು ಮತ್ತೆ ಮತ್ತೆ ಅನ್ನಲು ವಿದ್ಯಾರ್ಥಿಗಳು ಉತ್ಸುಕರಾಗಬೇಕು. ಹೀಗೆ ಅವರ ಮನಸ್ಸು ಕವಿತೆಯಲ್ಲಿ ತಲ್ಲೀನವಾಗಿ ಆನಂದಪಡು ವದನ್ನು ನೋಡಿ ನಲಿಯುವದೇ ನಿಜವಾದ ಕವಿತಾಶಿಕ್ಷಣದ ಫಲವಾಗಿರುವದು. ಇದೇ ಕವಿತಾಶಿಕ್ಷಣದ ಅಂತಿಮ ಉದ್ದೇಶವಾಗಿರುವದು. ವ್ಯಾಕರಣ, ಛಂದಸ್ಸು, ಅಲಂಕಾರ, ಗದ್ಯಶೈಲಿ ಇವು ಪ್ರತ್ಯೇಕವಾದ ಪಾಠಗಳಾಗಿಯೇ ಇರುವವು. ಈಗ ಕವಿತೆಗಳನ್ನು ಉದಾಹರಣವಾಗಿಟ್ಟುಕೊಂಡು ಬೇಕಾದಷ್ಟು ಭಾಷಾಜ್ಞಾನವನ್ನು ಮಾಡಿಕೊಡಬಹುದು. ಭಾಷೆ ಕಲಿಸಬಾರದೆಂದು ನಮ್ಮ ಉದ್ದೇಶವಿಲ್ಲ. ಕವಿತಾ ಶಿಕ್ಷಣದ ನಿಜವಾದ ಗುರಿಯನ್ನು ಹೇಳುವದೇ ನಮ್ಮ ಇಂಗಿತವಾಗಿರುವದು. ಈಗ ಕವಿತಾಶಿಕ್ಷಣದ ಉದ್ದೇಶವನ್ನು ಹೇಳಿದಂತಾಯಿತು. ಮುಂಚೆ ಕವಿತಾ ಶಿಕ್ಷಣವು ಭಾಷಾಪಾಠವೆಂಬ ಉದ್ದೇಶವನ್ನಿಟ್ಟುಕೊಂಡಾಗ ಯಾವದೊಂದು ಕವಿತೆಯನ್ನು ಕಲಿಸಿಬಿಡುತ್ತಿದ್ದರು. ಈಗ ಹಾಗೆ ಕಲಿಸಕೂಡದು. ಈಗ ಹೇಳತಕ್ಕ ಒಂದು ಮಾತು ಪೂರ್ಣವಾಗುವಂಥ ಒಂದೇ ಪದ್ಯವಿರಲಿ, ಅಥವಾ ಎರಡೇ ಇರಲಿ, ಹೆಚ್ಚೇ ಇರಲಿ ಅವೆಲ್ಲವನ್ನು ಒಮ್ಮೆಲಿ ಕಲಿಸತಕ್ಕದ್ದಿರುವದು, ಉದಾಹರಣಾರ್ಥವಾಗಿ ಸೀತೆಯ ಶೋಕ, ಸಮುದ್ರವರ್ಣನೆ, ಕರ್ಣನ ತ್ಯಾಗ, ಹನುಮಂತನು ಸೀತೆಗೆ ಉಂಗರ ತಂದು ಕೊಟ್ಟದ್ದು ಇತ್ಯಾದಿ. ಹೀಗೆ ಅನೇಕ ಪದ್ಯಗಳನ್ನು ಕಲಿಸುವ ದಿದ್ದಾಗ ಹುಡುಗರು ತೊಂದರೆಯಲ್ಲಿ ಬೀಳುವಂತೆ ಕಠಿಣ ಶಬ್ದಗಳು ಬಹಳವಿರ ಬಾರದು. ಬರಿಯ ಭಾವನೆಗಳಿಂದ ಪೂರಿತವಾದ ಅವರ ಯೋಗ್ಯತೆಗೆ ಜಡವೆನಿಸದ ಶಬ್ದಗಳಿಂದ ಕೂಡಿದ ಪದಗಳೇ ಇರಬೇಕು. ಇಂಥ ಕವಿತೆಗಳನ್ನು ಆರಿಸಿ ಕೆಲ ಪಾಠಗಳನ್ನು ಸಂಗ್ರಹಮಾಡಿರಬೇಕು. ಕ್ರ. ಪು. ಗಳಲ್ಲಿ ಈ ಬಗೆಯ ಕವಿತಾ ಪಾಠಗಳು ಕೆಲವು ದೊರೆಯಬಹುದು. ಕೆಲ ಪಾಠಗಳು ಹೊಸಪದ್ಧತಿಗೆ ತೊಡ ಕಾಗುವಂತೆಯೂ ಇರಬಹುದು. ಆದುದರಿಂದ ಜಡವಾದ ಪಾಠಗಳನ್ನು ಮುಂದೆ ಕಲಿಸಬೇಕೆಂದು ಬಿಟ್ಟು ಪ್ರಾಚೀನ ಕವಿತಾಮಾಲಿಕೆಗಳಿಂದಲೂ ಆಧುನಿಕ ಕವಿತೆ ಗಳಿಂದಲೂ ತಕ್ಕವಾದವನ್ನು ಆರಿಸಿಟ್ಟುಕೊಳ್ಳಬೇಕು. ಯಾಕಂದರೆ ಕ್ಲ್ಪಪ್ತಕಾಲ ದಲ್ಲಿ ಅವೆಲ್ಲವುಗಳನ್ನು ಮುಗಿಸತಕ್ಕದ್ದಿರುವದು. ಆದುದರಿಂದ ಮುಂದೆ ಮಾದರಿ ಗಾಗಿ ಟಿಪ್ಪಣಿ ತೆಗೆದು ತೋರಿಸಿದ ಪಾಠದಲ್ಲಿದ್ದ ಎಲ್ಲ ಕವಿತೆಗಳನ್ನು ಒಮ್ಮೆಲೆ ಕಲಿಸುವ ಹವ್ಯಾಸಕ್ಕೆ ಹೋಗದೆ ಒಂದು ಮಾತಿನ ವಿಷಯವಾದ ಎರಡೇ ಕವಿತೆ ಗಳನ್ನು ತೆಗೆದುಕೊಂಡಿದೆ.

ಶಿಕ್ಷಕನು ಮೇಲೆ ವಿವರಿಸಿದಂತೆ ಕವಿತಾಪಾಠಗಳನ್ನು ಗೊತ್ತುಮಾಡಿಟ್ಟುಕೊಂಡಿರಬೇಕು. ಕೆಲವರಿಗೆ ಬೇಕಾದ ಕವಿತೆಗಳು ಮತ್ತೊಬ್ಬರಿಗೆ ಬೇಕಾಗಿಲಿಕ್ಕಿಲ್ಲ. ಯಾವ ಕವಿತೆಗಳಿಂದ ತನ್ನಲ್ಲಿ ಮನೋಭಾವನೆಗಳು ಜಾಗ್ರುತಿ ಹೊಂದಿರುವವೋ ಅವೇ ಕವಿತೆಗಳನ್ನು ಶಿಕ್ಷಕನು ತನ್ನ ಹುಡುಗರಿಗೆ ಕಲಿಸಬೇಕು. ಹೀಗಾದರೆ ಶಿಕ್ಷಕನ ಉದ್ದೇಶವು ಈಡೇರುವ ಸಂಭವವಿರುತ್ತದೆ

ಕವಿತೆ ಕಲಿಸುವಾಗ ಉಪೋದ್ಘಾತಕ್ಕೆ ಹೆಚ್ಚಾಗಿ ಶ್ರಮಪಡುವ ಕಾರಣವಿಲ್ಲ. ಆ ಕವಿತೆಯಲ್ಲಿ ಕಥೆಯಾಗಲಿ ವರ್ಣನೆಯಾಗಲಿ ಇದ್ದರೆ ಆ ವಿಷಯವಾಗಿ ತಕ್ಕಷ್ಟು ಸಂಕ್ಷಿಪ್ತವಾಗಿ ಹೇಳಿದರೆ ಸಾಕು. ಮುಂದೆ ತೋರಿಸಿದ ಟಿಪ್ಪಣಿಯಲ್ಲಿ "ಲವನು ರಾಮಚಂದ್ರನ ಯಜ್ಞಾಶ್ವವನ್ನು ಬಂಧಿಸಿದ್ದು" ಎಂಬ ಪಾಠದಲ್ಲಿ ಕಥೆಯ ಸಂಬಂಧವಾಗಿ ಗೊತ್ತಿದ್ದ ಭಾಗವನ್ನು ಕೇಳಿಕೊಂಡು ಆರಂಭಿಸಿದೆ.

ಬಳಿಕ ಶಿಕ್ಷಕನು ಆ ಕವಿತೆಗಳನ್ನು ಸರಸವಾಗಿ ಒಂದೆರಡು ಸಾರೆ ಅಂದು ತೋರಿಸಬೇಕು. ಇದೇ ಮೊದಲನೆಭಾಗ. ಸ್ವಾಭಾವಿಕವಾಗಿ ಹುಡುಗರಲ್ಲಿ ಗ್ರಹಣಶಕ್ತಿಯು ಇದ್ದೇ ಇರುತ್ತದೆ. ಎಲ್ಲಿಯಾದರೂ ಸ್ವಲ್ಪ ತೊಡಕಿದ್ದರೆ ಚೆನ್ನಾಗಿ ತಿಳಿಯುವದಕ್ಕಾಗಿ ಹಾವಭಾವಸಹಿತವಾಗಿ ಕಠಿಣವಿದ್ದಲ್ಲಿ ಮತ್ತೆ ಒಂದೆರಡು ಸಾರೆ ಅನ್ನಬೇಕು. ಇದಕ್ಕೇ ಭಾವಬೋಧಕ ಕವಿತಾವಾಚನವೆನ್ನುವರು. ಇದೇ ಎರಡನೆಯ ಭಾಗವಾಗಿರುವದು. ಆಗ ವಿಚಾರಮಾಡುವದಕ್ಕೆ ಸ್ವಲ್ಪ ಅವಧಿಯನ್ನು ಕೊಟ್ಟು ಎಲ್ಲಿಯಾದರೂ ತೊಂದರೆ ಇದ್ದರೆ ಪ್ರತಿ ಶಬ್ದಗಳಿಂದ ಮತ್ತೊಮ್ಮೆ ಧಾಟಿಯೊಂದಿಗೆ ಅಂದು ತೋರಿಸಬೇಕು. ಇಲ್ಲದೆ ಇದ್ದ ಪ್ರಶ್ನೆಗಳನ್ನು ಮಾಡುತ್ತ ಕುಳಿತರೆ ಶಬ್ದಾರ್ಥ ಹೇಳುತ್ತ ಸಾಗಿದರೆ ಕವಿತಾಸ್ವಾರಸ್ಯಸಂಬಂಧವು ಕಡಿದಂತಾಗುವುದು. ಹಾವಭಾವದಿಂದಲೇ ಕಠಿಣ ಶಬ್ದಗಳುಳ್ಳ ಕವಿತಾಖಂಡಗಳ ಭಾವ ತಿಳಿಯಬೇಕು. ಒಂದೆರಡು ಕಠಿಣ ಶಬ್ದಗಳಿದ್ದರೆ ಆಗಲೆ ಕರಿಯ ಹಲಿಗೆಯಮೇಲೆ ಬರೆಯಬಹುದು. ಆಗ ಮುಖ್ಯ ಭಾವವನ್ನು ಕೇಳಿಕೊಳ್ಳಬೇಕು. ಟಿಪ್ಪಣಿಗಾಗಿ ಮಾದರಿ ತೋರಿಸಿದ ಪಾಠದಲ್ಲಿ ಯಜ್ಞದ ಕುದುರೆಯ ಶಿರೋಭಾಗದಲ್ಲಿದ್ದ ಬಂಗಾರದ ಪಟ್ಟಿಯಲ್ಲಿ ಏನು ಬರೆದದೆ? ಎಂಬದರ ವಿಷಯವಾಗಿ ಆಕಾಂಕ್ಷೆ ಹುಟ್ಟಿ ಅದೇ ವಿಷಯವನ್ನೇ ಕುರಿತು ಮುಂದಿನ ಕವಿತೆಯಲ್ಲಿ ಉಲ್ಲೇಖಿಸಿದೆ ಎಂದು ಹೇ ಮುಂದಿನ ಕವಿತೆಯನ್ನು ಅನ್ನಬೇಕು.

ಮುಖ್ಯಭಾವವು ಗೊತ್ತಾದಬಳಿಕ ಅದನ್ನು ಪುಷ್ಟೀಕರಿಸುವಂಥ ಮಾತುಗಳು ಯಾವವು ? ಎಂಬದಾಗಿ ಅವರನ್ನು ಕೇಳುತ್ತ ಕವಿಯ ವಾಕ್ಯಗಳಿಂದಲೇ ಉತ್ತರ ತೆಗೆದುಕೊಳ್ಳುತ್ತ ಅವುಗಳ ಭಾವವನ್ನು ಕೇಳಿಕೊಳ್ಳುತ್ತ ಸಾಗಬೇಕು. ಇದು ಟಿಪ್ಪಣಿಯಲ್ಲಿ ಇನೆಯ ಭಾಗವಾಗಿದೆ. ಆಗ ಯಾವದೊಂದು ಕಠಿಣ ಶಬ್ದದ ಅರ್ಥವು ಹುಡುಗರಿಗೆ ಗೊತ್ತಾಗದಿದ್ದರೆ ಕರಿಹಲಿಗೆಯ ಮೇಲೆ ನೊದಲು ತಾನು ಬರೆದದ್ದನ್ನು ನೋಡಿಕೊಂಡು ಹೇಳಲಿಕ್ಕೆ ತಿಳಿಸಬೇಕು. ಏನಾದರೂ ಚಮತ್ಕಾರ ಏದ್ದರೆ ಅಂದರೆ ಭಾವಗರ್ಭಿತವಿದ್ದಲ್ಲಿ ಹೆಚ್ಚಿಗೆ ತಿಳಿಸಲಿಕ್ಕೆ ಆಸ್ಪದವಿದ್ದರೆ ಅದನ್ನು ಕವಿಯ ವಾಕ್ಯವನ್ನೇ ಅಂದು ಕೇಳಿಕೊಳ್ಳಬೇಕು. ತಿಳಿಯದಿದ್ದರೆ ಹೇಳಿದರೂ ಅಡ್ಡಿಯಿಲ್ಲ. ಬಳಿಕ ಎಲ್ಲಾ ಅರ್ಥವೂ ಸ್ವಾರಸ್ಯವೂ ತಿಳಿದದ್ದನ್ನು ನೋಡಿಕೊಂಡು ಈಗ ಇನ್ನೊಮ್ಮೆ ಅನ್ನೋಣವೆಂದು ಸಾಮೂಹಿಕ ಕವಿತಾವಾಚನ ಮಾಡಬೇಕು.

ಕವಿತಾಪಾಠ ಮುಗಿಸುವಾಗ ಪದ್ಯಗಳ ಚಂದವು ಹುಡುಗರ ಲಕ್ಷ್ಯದಲ್ಲಿ ಬುಡಬಗ್ಗೆ ಮನಗಾಣಬೇಕು. ಕವಿತಾಶ್ರವಣದಿಂದ ಮತ್ತು ವಾಚನದಿಂದ ಅವರು ಆನಂದಪಟ್ಟದ್ದನ್ನು ಕಣ್ಮುಟ್ಟನೋಡಬೇಕು. ಕವಿತೆಯ ಭಾವದಲ್ಲಿಯೂ ಅದರ ಸೌಂದರ್ಯದಲ್ಲಿಯೂ ಅವರು ತಲ್ಲೀನರಾಗಿ ಸಂತೋಷಪಟ್ಟು ಮತ್ತೆ ಮತ್ತೆ ಅನ್ನಲು ಅವರು ಉತ್ಸುಕರಾದದ್ದನ್ನು ಕಾಣಬೇಕು. ಮತ್ತೆ ಇಂಥ ಕೆಲವು ಪದ್ಯ ಗಳನ್ನು ತಮ್ಮ ಕೈಯಲ್ಲಿ ಕೊಡಲು ಹವಣಿಸುವಂತೆ ಅವರ ಇಚ್ಛೆಯಾದದ್ದನ್ನೂ ಹಾತೊರೆಯುವದನ್ನೂ ಅರಿತುಕೊಳ್ಳಬೇಕು. ಕವಿತೆ ಕಲಿಸುವಾಗ ಪಾತ್ರಗಳ ಭಾವವನ್ನು ಅವರೇ ಅನುಭವಿಸುವಂತೆ ಆಗಬೇಕು. ಸೃಷ್ಟಿಸೌಂದರ್ಯದ ವರ್ಣನೆಯಿದ್ದರೆ ಅಲ್ಲಿ ಹೋಗಿ ನಿಂತು ನೋಡುವಂತೆ ಅವರಿಗೆ ಅನಿಸಬೇಕು. ಕವಿಯ ಭಾವ ತಿಳಿದು ಸೌಂದರ್ಯದಲ್ಲಿ ಮುಳುಗಿ ಕವಿತಾ ರಸಾಸ್ವಾದನಮಾಡಿ ಮತ್ತೆ ಮತ್ತೆ ಅಂದು ಅವರು ಆನಂದಪಟ್ಟರೆ ಕವಿತಾಶಿಕ್ಷಣದ ಉದ್ದೇಶವು ಈಡೇರಿ ದಂತಾಯಿತು. ದಿಗ್ದರ್ಶನಾರ್ಥವಾಗಿ ಶಿಕ್ಷಕರಿಗೋಸ್ಕರ ಕೆಳಗೆ ಒಂದು ಕವಿತಾ ಪಾಠದ ಟಿಪ್ಪಣಿ ಕೊಟ್ಟಿದೆ.

(ಮುಂದೆ ಸಾಗುವದು.)

ಪ್ರಕಟಣೆ

ಕನ್ನಡ ಬುಕ್ ಕಮಿಟಿ ಧಾರವಾಡ ಇವರು ಮಂಜೂರ ಮಾಡಿದ ಪುಸ್ತಕಗಳ ಯಾದಿಯು
(ಕಳೆದ ತಿಂಗಳಿನಿಂದ ಮುಂದುವರಿದುದು)

ನಂ	ಪುಸ್ತಕಗಳ ಹೆಸರು	ಗ್ರಂಥಕರ್ತನ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ	ಮಂಜೂರ ನಂಬರ ತಾರೀಖು	
೩೩	ಭೂಲೋಕ ಭಾಗ ೧ ೧೯೩೬	ಮ್ಯಾನೇಜರ ಮ್ಯಾಕ್ಮಿಲನ್ ಆ್ಯಂಡ ಕಂ. ಮುಂಬೈ	ಗ್ರಂ. ಕ.	೦-೮-೦	ಪ್ರಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ಶಿ. ರ I, ಬು. ಮಾ.ಶಾ. ಗಳ ಶಿ. ರ L ಹಾಗು T ಬು. ಹಾಗು ಟ್ರೇ. ಸಂ. ಗಳ T ಬುಕ್ಕಾಗಿ	ಡಾ. ಸಾ॥ ರ ನ. s-86-c-665 / 21-8-36	ಇ. ಸಾ॥ ರ ಸಂ. 4283 / 28-9
೩೪	ಭೂಲೋಕ ಭಾಗ ೨ ೧೯೩೬	ಸದರ	ಸದರ	೦-೯-೦	ಸದರ	ಸದರ	4281 / ಸದರ
೩೫	ಭೂಲೋಕ ಭಾಗ ೩ ೧೯೩೬	ಸದರ	ಸದರ	೦-೧೦-೦	ಸದರ	ಸದರ	4279 / ಸದರ
೩೬	ಸೃಷ್ಟವಸ್ತು ಪರಿಚಯ ಭಾಗ ೨ ೧೯೩೫	ಮಿ. ಡಿ. ವ್ಹಿ. ಶೇಂಡೆ ಕ. ಕಾ. ಧಾರವಾಡ	ಆರ್. ಜಿ. ಹುಕ್ಕೇರಿ ಸ್ಟೂ. ಓ. ಬು. ಡಿ. ಧಾರವಾಡ	೦-೧೦-೦	ಪ್ರಾ. ಶಾ. ಗಳ ಹಾಗು ಮಾ. ಶಾ. ಗಳ ಮತ್ತು ವ್ಹ. ಟ್ರೇ. ಸ. ಗಳ T ಬುಕ್ಕು	ಸದರ 685-c / 18-8-36ಹಾಗು 1-10-36	4473 / 7-10-36

ಸೈಯದ ನೂರುಲ್ಲಾ
ಎ. ಇ. ದ. ಭಾ.

ಮುಂಬಯಿ ಇಲಾಖೆಯೊಳಗಿನ ಉರ್ದು ಶಾಲೆಗಳಿಗಾಗಿ ಮುಂಬಯಿ ಉರ್ದು ಬುಕ್ ಕಮೀಟಿಯುವರು

೨೭-೬-೧೯೩೬ ನೆ ದಿವಸ ಮಂಜೂರ ಮಾಡಿದ ಪುಸ್ತಕಗಳ ಯಾದಿಯು

ಪ್ರಾ. ಶಾ=ಪ್ರಾಥಮಿಕ ಶಾಲೆ ವಿ=ವಿದ್ಯಾರ್ಥಿಗಳು ಶಿ=ಶಿಕ್ಷಕರು L=ಲಾಯಬ್ರರಿ T= ಟೆಕ್ಸ್ಟ ಟ್ರೇ. ಸಂ=ಟ್ರೇನಿಂಗ ಸಂಸ್ಥೆ

ನಂಬರು	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರ
೧-೨-೩	ಉರ್ದುಕಿ ಪಹಿಲಿ ಕಿತಾಬ ಗಂಡುಮಕ್ಕಳ ದೆಶೆಯಿಂದ	ಶಮಸುಲ್ ಉಲ್ಮಾ ಸೈಯದ ಮಮತಾಝು ಅಲಿ ಲಾಹೋರ	ಪಂಜಾಬ ಸೆಂಟ್ರಲ್ ಪಬ್ಲಿಶಿಂಗ, ಹೌಸ, ಲಾಹೋರ	೦-೭-೦	ಪ್ರಾ. ಶಾ. ವಿ. ಗಳ L ಬುಕ್ಕಾಗಿ
	ಉರ್ದುಕಿ ದುಸರಿ ಕಿತಾಬ ಸದರ	ಸದರ	ಸದರ	೦-೮-೦	ಸದರ
	ಉರ್ದುಕಿ ತಿಸರಿ ಕಿತಾಬ ಸದರ	ಸದರ	ಸದರ	೦-೯-೦	ಸದರ
೪-೧೦	ಉರ್ದುಕಿ ಪಹಿಲಿ ಕಿತಾಬ ಹೆ. ಮಕ್ಕಳಿಗಾಗಿ	ಸದರ	ಸದರ	೦-೭-೦	ಪ್ರಾ. ಶಾ. ಗಳ ಹೆ. ಮಕ್ಕಳ ಶಾ. ಗಳಿಗೆ T ಬುಕ್ಕಾಗಿ
	ಉರ್ದುಕಿ ದುಸರಿ ಕಿತಾಬ ಸದರ	ಸದರ	ಸದರ	೦-೮-೦	ಸದರ
	ಉರ್ದುಕಿ ತಿಸರಿ ಕಿತಾಬ ಸದರ	ಸದರ	ಸದರ	೦-೮-೬	ಸದರ

	ಉರ್ದೂಏ ಮೊಅಲ್ಲಾ ಭಾ. ೧	ಸದರ	ಸದರ	೦-೮-೯	ಪ್ರಾ.ಶಾ. ಹೆ.ಮ. ಶಾ. ಗಳ T ಬು.
	ಸದರ ಭಾಗ ೨	ಸದರ	ಸದರ	೦-೧೦-೦	ಸದರ ಹಾಗು ಮಾ. ಶಾ. ಗಳ T ಬುಕ್ಕಾಗಿ
	ಸದರ ಭಾಗ ೩	ಸದರ	ಸದರ	೦-೧೧-೩	ಪ್ರಾ.ಶಾ.ವಿ. L ಬು. ಹಾಗು ಸದರ
	ಸದರ ಭಾಗ ೪	ಸದರ	ಸದರ	೦-೧೧--೬	ಸದರ
೧೧	ತಾರೀಖೆ ಇಸ್ಲಾಮ್ ೧ನೆ ಆ. ೧೯೩೬	ಮುನ್ಸಿ ಮಹಮ್ಮದ ಅಬ್ದುರ್ರಹಿಮಾನ ಬಾಂಬೆ	ಖಿಲಾಫತ ಪ್ರೆಸ್ ಮುಂಬಯಿ	೦-೨-೦	ಪ್ರಾ. ಶಾ. ಗಳ ವಿ. ಗಳ L ಬುಕ್ಕಾಗಿ
೧೨	ತಾರೀಖೆ ಇಸ್ಲಾಮಕಾ ಇಬ್‌ತಿದಾಯಿದೌರ	ಒರ್ಕತುಲ್ಲಾ ಫಾರೋಖಿ	ಇಸ್ಲಾಮಿಯಾ ಬುಕ್‌ಡಿಪೊ ೮-೯ ಭೆಂಡಿ ಬಝಾರ ಬಾಂಬೆ	೦-೪-೦	ಪ್ರಾ. ಶಾ. ಹಾಗು ಮಾ. ಶಾ. ವಿ. ಗಳ L ಬುಕ್ಕಾಗಿ ಹಾಗು ಮದ್ರೇಸಾ.ಗಳ (ಸಿಂಧ ಪ್ರಾಂತದ ಉ. ಶಾ.) T ಬು.
೧೩	ಎಕ್ಸಪರಮೆಂಟಲ್ ಫಿಜಿಕ್ಸ ೧ನೆ ಆ. ೧೯೩೬	ಮೌಲ್ವಿಮಹಮ್ಮದ ಅಹಮ್ಮದಉಸ್ಮಾನಿ ಎಮ್. ಎಸ್. ಸಿ.	ದಿ. ಡೆ. ಮುತ್ಯುಸ್ಸೇಶ ಸನಿ ಮಾರ್ಟ ಹೈದರಾಬಾದ ಡೆಕ್ಕನ್	೨-೦-೦	ಮಾ. ಶಾ. ಹಾಗು ಟ್ರೇ. ಸಂ, ಗಳ ಶಿ. ರ. L ಬುಕ್ಕಾಗಿ
೧೪	ಅಸಾಸ್ ಜಮಾಖರ್ಚು ಭಾ. ೨ ೧ನೆ ಆ. ೧೯೩೬	ಮಿರಝಾನಿಯಾಜ ಬೇಗ	ಇಲ್ಮಿಯಾ ಬುಕ್‌ಡಿಪೊ ಮಹಮ್ಮದಅಲಿ ರೋಡ ಮುಂಬೈ	೦-೧೦-೦	ಪ್ರಾ. ಶಾ. ಹಾಗು ಟ್ರೇ. ಸಂ. ಗಳ T ಬುಕ್ಕಾಗಿ
೧೫	ಪ್ಯಾರೆ ಬಚ್ಚೋಂಕೆ ಪ್ಯಾರೆ ಕಾಯಿದಾ ಭಾ. ೧ ಆ. ೩ ೧೯೩೫	ಅಬ್ದುಲ್ ಖಾದರ ಅಬ್ದುಲ್ ಗನಿ ಪೂನಾ	ಮುಫೈದ. ಎ. ಆಮ್ ಪ್ರೆಸ್ ಲಾಹೋರ	೦-೧-೬	ಪ್ರಾ. ಶಾ, ಗಳ T ಬುಕ್ಕಾಗಿ

ಎನ್ ಜಿ ಗಾಡಗೀಳ

ಪತ್ರಗಳ ಸಾರಾಂಶ

---

೧ **ಧಾರವಾಡ ಜಿ. ಕರ್ಜಗಿ ತಾಲೂಕ ಹಾಲಗಿ** ಶಾಲೆಯ ಹೆ. ಮಾ. ಸ. ಜ. ಹಿರೇಮತ ಇವರು ತಿಳಿಸುವದೇನೆಂದರೆ “ ತಾ. ೧೯-೯-೩೬ ನೆಯ ದಿವಸ ನಮ್ಮ ಶಾಲೆಯಲ್ಲಿ ವಿಘ್ನೇಶ್ವರನ ಪೂಜೆಯು ನೆರವೇರಿಸಲ್ಪಟ್ಟಿತು. ಆಗ್ಗೆ ಶಾಲೆಯ ಪಂಚರೂ ಸಭ್ಯಗೃಹಸ್ಥರೂ ಆಗಮಿಸಿದ್ದರು. ಸಮಾರಂಭಕಾಲಕ್ಕೆ ವಿದ್ಯಾರ್ಥಿಗಳು ಬೇರೆ ಬೇರೆ ವಿಷಯಗಳಮೇಲೆ ಭಾಷಣ ಮಾಡಿದರು. ಬಾಲಕಿಯರು ಸ್ವರಮೇಳನದಿಂದ ಹಾಡಿ ತೋರಿಸಿದರು. ಆಗ ಸಭಿಕರು ಆನಂದಿತರಾಗಿ ಹುಡುಗರ ಉಪಾಹಾರಕ್ಕಾಗಿ ೨ ರೂ. ಕೊಟ್ಟರು. ಶಾಲೆಯಲ್ಲಿ ೮೦ ವಿದ್ಯಾರ್ಥಿಗಳಿದ್ದ ಮೂಲಕ ಒಬ್ಬರೇ ಮಾಸ್ತರರಿಂದ ಕೆಲಸವಾಗುವದಿಲ್ಲವೆಂದು ಮತ್ತೊಬ್ಬ ಬದ್ಲಿ ಮಾಸ್ತರರ ೬ ತಿಂಗಳ ಪಗಾರಕ್ಕಾಗಿ ವರ್ಗಣಿ ಕೂಡಿಸಿರುವರು. ” ಸ್ತುತ್ಯವು.

೨ **ಧಾರವಾಡ ಜಿ. ಕೋಡ ತಾಲೂಕ ಕಾಗಿನೆಲ್ಲಿ** ಉರ್ದು ಶಾಲೆಯ ಹೆ. ಮಾ. ರು ತಿಳಿಸುವದೇನಂದರೆ “ ತಾ. ೧-೧೦-೩೬ ನೆ ದಿವಸ ಈ ಊರ ಕೋಆಪರೇಟಿವ್ಹ ಸೊಸೈಟಿಯ ಚೇರಮನ್ನರಾದ ಗುರಪ್ಪನವರು ಸೊಸಾಯಿಟಿಯ ಅಧಿಕಾರಸ್ಥರ ಅಪ್ಪಣೆ ಪಡೆದು ತಮ್ಮ ಸೊಸೈಟಿಯಲ್ಲಿ ಧರ್ಮಾರ್ಥವಾಗಿ ತೆಗೆದಿಟ್ಟ ೧೨ ರೂ. ೮ ಆ. ಗಳಲ್ಲಿ ೫ ರೂ. ೮ ಆ. ಗಳ ಪಾಟಿಪುಸ್ತಕಗಳನ್ನು ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕೊಡಿಸಿದರು. ಮಿಕ್ಕ ೭ ರೂ. ಗಳನ್ನು ಬಡ ವಿದ್ಯಾರ್ಥಿಗಳ ಫೀ ತುಂಬಲಿಕ್ಕೆ ತೆಗೆದಿಟ್ಟಿರುವರು. ” ಸ್ತುತ್ಯವು.

೩ **ಶಾಳಾ ಅಸನೋಟಿ ಜಿ. ಕಾರವಾರ** ಈ ಶಾಲೆಯ ಹೆಡ್‌ಮಾಸ್ತರರು ತಿಳಿಸುವದೇನೆಂದರೆ— “ ತಾ. ೨೭-೧೦-೩೬ ನೆ ದಿವಸ ನಮ್ಮ ಊರ ಪೋಲೀಸಪಾಟೀಲ ಪುರುಷೋತ್ತಮ ಬಾಳಕೃಷ್ಣ ಸಾಳುಂಖೆ ಇವರು ತಮ್ಮ ಬಂಧು ಕೈ. ವಾ. ಶಂಕರನ ಸ್ಮಾರಕದ ದೆಶೆಯಿಂದ ತಂದೆಯವರಿಂದ ನಡೆದು ಬಂದ ಪದ್ಧತಿಯಂತೆ ಶಾಲೆಯ ವಿದ್ಯಾರ್ಥಿಗಳಿಗೆ ಭೋಜನಮಾಡಿಸಿದ್ದಲ್ಲದೆ ಬಡ ವಿದ್ಯಾರ್ಥಿಗಳಿಗೆ ಪಾಟಿಪುಸ್ತಕಗಳನ್ನು ಕೊಟ್ಟು ಮಿಠಾಯಿ ಹಂಚಿದರು. ” ಇದು ಅವರಿಗೆ ಭೂಷಣಾಸ್ಪದವು.

Reg. No. B. 3691

ಜಾಹೀರಾತು

ತ್ವರೆಮಾಡಿರಿ ! ಬೆಲೆ ಕಡಿಮೆ !! (ಐದೇ ಆಣೆಗಳು)

ಹೊಸಮಾದರಿಯ

ಅಂಕಗಣಿತ

(೧ನೆಯ ಭಾಗ)

ಲೇಖಕರು : ಜಿ. ಶ್ರೀ. ಕುಲಕರ್ಣಿ

ಕನ್ನಡ ಗಂಡುಮಕ್ಕಳ ೫ನೆಯ ಇಯತ್ತೆ, ಹೆಣ್ಣುಮಕ್ಕಳ ಪ್ರ. ಧಾ. ಪರೀಕ್ಷೆ, ಮಾಧ್ಯಮಿಕ (ಇಂಗ್ಲಿಷ) ಶಾಲೆಗಳ ೧ನೆಯ ೨ನೆಯ ೩ನೆಯ ಇಯತ್ತೆಗಳು, ಹಾಗು ಸ್ಕಾಲರಶಿಪ್ ಪರೀಕ್ಷೆಗಳು ಇವೆಲ್ಲವುಗಳ ವಿದ್ಯಾರ್ಥಿಗಳಿಗೆ ಬಹಳೇ ಉಪಯುಕ್ತವಾದ ಪುಸ್ತಕವಿದು. ಪ್ರತ್ಯಕ್ಷ ಕೆಲಸ ಮಾಡಿ ಅನುಭವ ಪಡೆದು ತಯಾರಿಸಿದ್ದರಿಂದ ಇದರ ಉಪಯುಕ್ತತೆಯ ಬಗ್ಗೆ ವಿಶೇಷ ಬರೆಯುವದು ಇಲ್ಲ. ತರಿಸಿಕೊಂಡು ಅನುಭವಪಡೆಯಬೇಕು. ಇದು ದೊರೆಯುವ ಸ್ಥಳ— ಎಲ್ಲ ಪ್ರಸಿದ್ಧ ಬುಕ್‌ಡಿಪೋಗಳಲ್ಲಿ ದೊರೆಯುವದು.

ಜಿ. ಶ್ರೀ. ಕುಲಕರ್ಣಿ,

ಟೀಚರ ಕೆ. ಇ. ಬೋರ್ಡ್ಸ್, ಎ. ವ್ಹಿ. ಸ್ಕೂಲು,

ಮಾಳಮಡ್ಡಿ ಧಾರವಾಡ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರೇಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ನಂ.	ವಿಷಯ	ಪುಟ.
೧.	ಶಿಕ್ಷಣದಲ್ಲಿ ಅವಧಾನದ ಮಹತ್ವವು	೧
೨.	ಜಂಜೀರೆಯ ಇತಿಹಾಸವು	೧೧
೩.	ಕವಿತಾಪಾಠದ ಟಿಪ್ಪಣಿ	೧೫
೪.	೧೯೩೬ನೆಯ ಇಸವಿಯ ಎಪ್ರಿಲ ತಿಂಗಳಿನಲ್ಲಾದ ವ್ಹ. ಫಾ. ಪರೀಕ್ಷೆಯ ಪರಿಣಾಮವು	೨೧
೫.	೧೯೩೭ನೆಯ ಇಸ್ವಿಯ ಸ್ಕಾಲರಶಿಪ್ ಪರೀಕ್ಷೆಗಳ ಪ್ರಕಟನೆ	೩೧
೬.	೧೯೩೬ನೆಯ ಇಸ್ವಿಯಲ್ಲಿ ಆದ ಹೆ. ಮಕ್ಕಳ ವ್ಹ. ಫಾ. ಪ. ಯ ಜಾಡಾರ್ನಾಯಿಸ್ ಪ್ರಾಯಿಝುದ ಪರಿಣಾಮವು	೩೨
೭.	ಪತ್ರಗಳ ಸಾರಾಂಶ	ಕವ್ಹರ ಪೇಜ ೨, ೩, ೪

Printed by K. R, Bhise at the Karnatak Printing Works, Dharwar
and Published by D. V. Kale, B. A., Head Master.
Training School Dharwar, at his Office.

Reg. No. B. 3691

ಜಾಹೀರಾತು

ತ್ವರೆಮಾಡಿರಿ ! ಬೆಲೆ ಕಡಿಮೆ !! (ಐದೇ ಆಣೆಗಳು)

ಹೊಸಮಾದರಿಯ

ಅಂಕಗಣಿತ

(೧ನೆಯ ಭಾಗ)

ಲೇಖಕರು : ಚಿ. ಶ್ರೀ. ಕುಲಕರ್ಣಿ

ಕನ್ನಡ ಗಂಡುಮಕ್ಕಳ ೪ನೆಯ ಇಯತ್ತೆ, ಹೆಣ್ಣುಮಕ್ಕಳ ಪ್ರ. ಶಾ. ಪರೀಕ್ಷೆ, ಮಾಧ್ಯಮಿಕ (ಇಂಗ್ಲಿಷ) ಶಾಲೆಗಳ ೧ನೆಯ ೨ನೆಯ ೩ನೆಯ ಇಯತ್ತೆಗಳು, ಹಾಗು ಸ್ಕಾಲರಶಿಪ್ ಪರೀಕ್ಷೆಗಳು ಇವೆಲ್ಲವುಗಳ ವಿದ್ಯಾರ್ಥಿಗಳಿಗೆ ಬಹಳೇ ಉಪಯುಕ್ತವಾದ ಪುಸ್ತಕವಿದು. ಪ್ರತ್ಯಕ್ಷ ಕೆಲಸ ಮಾಡಿ ಅನುಭವ ಪಡೆದು ತಯಾರಿಸಿದ್ದರಿಂದ ಇದರ ಉಪಯುಕ್ತತೆಯ ಬಗ್ಗೆ ವಿಶೇಷ ಬರೆಯುವಂತೆ ಇಲ್ಲ. ತರಿಸಿಕೊಂಡು ಅನುಭವಪಡೆಯಬೇಕು. ಇದು ದೊರೆಯುವ ಸ್ಥಳ— ಎಲ್ಲ ಪ್ರಸಿದ್ಧ ಬುಕ್‌ಡಿಪೋಗಳಲ್ಲಿ ದೊರೆಯುವದು.

ಚಿ. ಶ್ರೀ. ಕುಲಕರ್ಣಿ,
ಟೀಚರ ಕೆ. ಇ. ಬೋರ್ಡ್ಸ್, ಎ. ವ್ಹಿ. ಸ್ಕೂಲು,
ಮಾಳಮಡ್ಡಿ ಧಾರವಾಡ

Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು

ದತ್ತಾತ್ರೇಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ನಂ.	ವಿಷಯ	ಪುಟ.
೧.	ಶಿಕ್ಷಣದಲ್ಲಿ ಅವಧಾನದ ಮಹತ್ವವು	೧
೨.	ಜಂಜೀರೆಯ ಇತಿಹಾಸವು	೧೧
೩.	ಕವಿತಾಪಾಠದ ಟಿಪ್ಪಣಿ	೧೫
೪.	೧೯೩೬ನೆಯ ಇಸವಿಯ ಎಪ್ರಿಲ ತಿಂಗಳಿನಲ್ಲಾದ ವ್ಹ. ಫಾ. ಪರೀಕ್ಷೆಯ ಪರಿಣಾಮವು	೨೧
೫.	೧೯೩೭ನೆಯ ಇಸ್ವಿಯ ಸ್ಕಾಲರಶಿಪ್ ಪರೀಕ್ಷೆಗಳ ಪ್ರಕಟನೆ	೩೧
೬.	೧೯೩೬ನೆಯ ಇಸ್ವಿಯಲ್ಲಿ ಆದ ಹೆ. ಮಕ್ಕಳ ವ್ಹ. ಫಾ. ಪ. ಯ ಜಾಡಾರ್ಣಾಯಿನ್ ಪ್ರಾಯಿರ್ಝುದ ಪರಿಣಾಮವು	೩೨
೭.	ಪತ್ರಗಳ ಸಾರಾಂಶ	ಕವ್ಹರ ಪೇಜ ೨, ೩, ೪

Printed by K. B, Bhise at the Karnatak Printing Works, Dharwar
and Published by D. V. Kale, B. A., Head Master.
Training School Dharwar, at his Office.

ಪತ್ರಗಳ ಸಾರಾಂಶ

ಸರ್ಕ್ಯುಲರ ನಂ. ೧

ಪ್ರಾಥಮಿಕ ಶಿಕ್ಷಣ ಸಪ್ತಾಹವು
(ಬಾಗಲಕೋಟೆ)

ಇದೇ ಬರುವ ಜನವರಿ ತಿಂಗಳ ಆರಂಭದಲ್ಲಿ ಬಾಗಲಕೋಟೆಯಲ್ಲಿ ಪ್ರಾಥಮಿಕ ಶಿಕ್ಷಣ ಸಪ್ತಾಹವನ್ನು ಜರುಗಿಸಬೇಕೆಂದು ಮಾಡಿರುವೆವು. ಆಧುನಿಕ ಶಿಕ್ಷಣಶಾಸ್ತ್ರದಲ್ಲಿ ವಿಶೇಷ ಬದಲಾವಣೆಗಳುಂಟಾಗಹತ್ತಿದ್ದರಿಂದ ಅವೆಲ್ಲವುಗಳ ಮಾಹಿತಿಯು ಶಿಕ್ಷಕ ಶಿಕ್ಷಕಿಯರಿಗೆ ಕೆಲಮಟ್ಟಿಗಾದರೂ ಕಾಲಕಾಲಕ್ಕೆ ಆಗುವದು ಉದ್ದೇಶವಾಗಿ ಈ ಕಾರ್ಯವನ್ನು ಕೈಕೊಂಡಿರುವೆವು. ಮತ್ತು ಈ ಸಮ್ಮೇಲನ ದಲ್ಲಿ ಧಾರವಾಡದಲ್ಲಿಯ ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ಕೆಲಸಮಾಡುವ ಒಳ್ಳೇ ಅನುಭವಿಕ ಶಿಕ್ಷಕ ಶಿಕ್ಷಕಿಯರು ಮಾದರಿಯ ಪಾಠಗಳನ್ನು ಕೊಡತಕ್ಕವರಿರುವರು. ಇವರ ಹೊರ್ತಾಗಿ ನಮ್ಮ ಜಿಲ್ಲೆಯೊಳಗಿನ ಅನುಭವಿಕ ಹಾಗೂ ಶಿಕ್ಷಣದಲ್ಲಿ ತಜ್ಞರಾದ ಶಿಕ್ಷಕ ಜನರು ಮುಂದೆ ಬಂದು ಪಾಠವನ್ನು ತೆಗೆದುಕೊಳ್ಳುತ್ತೇವೆಂದು ಮೊದಲೇ ನಮಗೆ ತಿಳಿಸಿದಲ್ಲಿ ಇವರ ಪಾಠಗಳನ್ನಾದರೂ ಕಾರ್ಯಕ್ರಮದಲ್ಲಿ ಸೇರಿಸುವ ಏರ್ಪಾಟನ್ನು ಮಾಡುವೆವು.

ಈ ಸಮ್ಮೇಲನದೊಂದಿಗೆ ನಾವು ಶಿಕ್ಷಣಕ್ಕೆ ಸಂಬಂಧಿಸಿದ ಉಪಕರಣಗಳ ಒಂದು ಪ್ರದರ್ಶನವನ್ನು ಏರ್ಪಡಿಸಬೇಕೆಂದು ಮಾಡಿರುವೆವು. ಅದಕ್ಕೆ ಯಾವತ್ತು ಶಾಲೆಯವರು ಉತ್ತಮವಾದ ಉಪಕರಣಗಳನ್ನು ತಯಾರಿಸಿ ಕಳುಹಿಸಿಕೊಟ್ಟಲ್ಲಿ ಪ್ರದರ್ಶನಕ್ಕೆ ಒಳ್ಳೇ ಭೂಷಣವಾಗುವದು. ಮೇಲ್ತರಗತಿಯನ್ನು ಹೊಂದಿದ ಉಪಕರಣಗಳಿಗೆ ಪ್ರಶಸ್ತಿಪತ್ರವನ್ನಾಗಲಿ ಬೇರೆ ಉಚಿತವನ್ನಾಗಲಿ ಕೊಡುವ ದರಲ್ಲಿ ಬರುವದು.

ಸಮ್ಮೇಲನವು ತೀರಿದ ತರುವಾಯ ಅವರವರ ಉಪಕರಣಗಳನ್ನು ತಿರುಗಿ ಕಳುಹಿಸಿಕೊಡುವದರಲ್ಲಿ ಬರುವದು.

ಸಮ್ಮೇಲನದ ಕಾಲವು ತೀರ ಸಮೀಪಿಸಿ ಮೂಲಕ ಯಾವತ್ತು ಶಿಕ್ಷಕರೂ ಸುಪರವಾಯಿಜರರೂ ಹೆಚ್ಚು ಚಟುವಟಿಕೆಯಿಂದ ಭಾಗವಹಿಸಿ ಈ ಈ ಕಾರ್ಯವನ್ನು ಯಶಸ್ವಿಯಾಗಿ ಜರಗುವಂತೆ ಮಾಡಬೇಕಾಗಿ ವಿನಂತಿ ಅದೆ.

ಪೂರ್ಣ ಕಾರ್ಯಕ್ರಮವನ್ನು ಹಿಂದಿನಿಂದ ತಿಳಿಸುವದರಲ್ಲಿ ಬರುವದು.

ಬಾಗಲಕೋಟ,

ತಾ|| ೧೫-೧೧-೩೬

ಎಸ್. ಬಿ. ಸಾಸನೂರ,
ಚೇಅರಮನ
ಸ್ಕೂ. ಬೋ. ಬಾಗಲಕೋಟೆ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು : ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೫ | **ದಿಶಂಬರ ೧೯೩೬** | ವರ್ಷ ೮ ಸಂ. ೯

ಶಿಕ್ಷಣದಲ್ಲಿ ಅವಧಾನದ ಮಹತ್ವವು

[ಮುಂದೆ ಸಾಗಿದ್ದು]

ಅವಧಾನದಲ್ಲಿ **ಐಚ್ಛಿಕ ಅವಧಾನ**ವೆಂದೂ ಅನೈಚ್ಛಿಕ ಅವಧಾನವೆಂದೂ ಎರಡು ವಿಧಗಳನ್ನು ಕಲ್ಪಿಸುವದುಂಟು.

ಐಚ್ಛಿಕ ಅವಧಾನಕ್ಕೆ ಯಾವದೊಂದು ವಿಷಯದಲ್ಲಿ ನಮಗಿರುವ ಆಸ್ಥೆ ಜಿಜ್ಞಾಸೆ ಇವು ಕಾರಣವಾಗುವವು. ಎಂದರೆ ನಮ್ಮ ಮನಸ್ಸಿನ ಪ್ರೇರಣೆಯಿಂದಲೇ ಐಚ್ಛಿಕ ಅವಧಾನವು ಹುಟ್ಟಿ ಆ ವಿಷಯದಲ್ಲಿ ನಮ್ಮ ಲಕ್ಷ್ಯವು ನೆಲೆಸಿ, ಹೆಚ್ಚು ಕಾಲದವರೆಗೆ ನಮ್ಮ ಮನಸ್ಸು ಅದರಲ್ಲಿ ತೊಡಗಿಕೊಳ್ಳುವದು. ಆದರೆ ಅನೈಚ್ಛಿಕ ಅವಧಾನಕ್ಕೆ ಬಾಹ್ಯ ಸೃಷ್ಟಿಯೊಳಗಿನ ಯಾವದಾದರೊಂದು ವಸ್ತುವು ಇಲ್ಲವೆ ಪ್ರೇರಣೆಯು ಕಾರಣವಾಗುವದು.

ಐಚ್ಛಿಕ ಅವಧಾನದಲ್ಲಿ ಮನಸ್ಸು ಉತ್ತೇಜಕವನ್ನು ತನ್ನ ಅಂಕಿತದಲ್ಲಿಟ್ಟು ಕೊಂಡಿರುವದು; ಆದರೆ ಅನೈಚ್ಛಿಕ ಅವಧಾನದಲ್ಲಿ ಮನಸ್ಸು ಉತ್ತೇಜಕಕ್ಕೆ ಅಧೀನವಾಗಿರುವದು.

ಐಚ್ಛಿಕ ಅವಧಾನಕ್ಕೆ ಮನಸ್ಸಿನ ಪ್ರೇರಣೆಯು ಕಾರಣವಾಗಿರುವದರಿಂದಲೂ ಬುದ್ಧಿಪೂರ್ವಕವಾಗಿ ನಾವು ನಮ್ಮ ಮನಸ್ಸನ್ನು ಆ ವಿಷಯದಲ್ಲಿ ತೊಡಗಿಸಿರುವದರಿಂದಲೂ ಅದು ಹೆಚ್ಚು ಕಾಲದವರೆಗೆ ನಿಲ್ಲಬಹುದು. ಆದರೆ ಅನೈಚ್ಛಿಕ ಅವಧಾನಕ್ಕೆ ಬಾಹ್ಯ ಉತ್ತೇಜಕವು ಕಾರಣವಾಗಿರುವದರಿಂದಲೂ ಆ ಬಾಹ್ಯ ಉತ್ತೇಜಕದ ಶಕ್ತಿಯು ಕೂಡಲೆ ಕಡಿಮೆಯಾಗುವದರಿಂದಲೂ ಅನೈಚ್ಛಿಕ ಅವಧಾನವು ಕ್ಷಣಿಕವೆನಿಸುವದು.

ಮನುಷ್ಯನ ಜ್ಞಾನಲಾಲಸೆಯೇ ಅವನ ಬೆಳೆವಣಿಗೆಗೆ ಕಾರಣವೆಂದೂ ಆ ಜ್ಞಾನಲಾಲಸೆಯ ಮೂಲಕವಾಗಿಯೇ ಅವನು ಸದಾ ವಿದ್ಯಾರ್ಥಿಯೆನ್ನಿಸಿಕೊಳ್ಳುವನೆಂದೂ ಹಿಂದೆ ಹೇಳಿದೆ. ಆ ಜ್ಞಾನಲಾಲಸೆಯ ಮೂಲಕವಾಗಿಯೇ ಮಾನವಕುಲದ ಸುಧಾರಣೆಯಾಗುತ್ತ ಬಂದು ಅವನು ಇಂದಿನ ಅವಸ್ಥೆಯನ್ನು ಪಡೆದಿರುವನು. ಆದುದರಿಂದ ಕ್ಷಣಿಕ ಮನೋವಿಕಾರಗಳ ತೃಪ್ತಿಯೊಂದರಿಂದಲೇ ಅವನ ಬಯಕೆಯು ಈಡೇರಲಾರದೆಂದೂ ಅವನ ಜೀವನಕ್ರಮದಲ್ಲಿ ಹೆಚ್ಚು ದೀರ್ಘಕಾಲದ ವರೆಗೆ ಬಾಳುವಂಥ ಬಯಕೆಯೂ ಅದರ ತೃಪ್ತಿಸಾಧನವೂ ಇರುವವೆಂದೂ ಹೇಳಿದಂತಾಯಿತು. ಈ ಸಂಗತಿಯನ್ನು ಅನುಲಕ್ಷಿಸಿ ನೋಡಿದರೆ ಮನುಷ್ಯನ ಮನಸ್ಸು ಕೇವಲ ಕ್ಷಣಿಕವಾದ ಬಾಹ್ಯ ಉತ್ತೇಜಕದಿಂದ ಹುಟ್ಟುವ ಅನೈಚ್ಛಿಕ ಅವಧಾನದಿಂದಲೇ ಕಾರ್ಯಪ್ರೇರಣೆಯನ್ನು ಹೊಂದುವದೆಂದು ಹೇಳುವದು ಸರಿಯೆನಿಸದು. ಐಚ್ಛಿಕ ಅವಧಾನವು ಮನಸ್ಸಿನಲ್ಲಿ ನಡೆದಿರುವಾಗ ಅದು ದಣಿದು ಬೇಸರಗೊಂಡರೂ ಯಾವದೊಂದು ವಿಷಯದ ವಿಚಾರವನ್ನು ಕೊನೆ ಮುಟ್ಟಿಸುವವರೆಗೂ ಅದನ್ನು ಸಾಗಿಸಬೇಕಾಗುವದು.

ಐಚ್ಛಿಕ ಅವಧಾನವು ಅನೈಚ್ಛಿಕ ಅವಧಾನದಿಂದ ಭಿನ್ನವೆಂದು ಹೇಳಲ್ಪಡುತ್ತಿದ್ದರೂ ಹಲವುಸಾರೆ ಮೊದಲನೆಯದಕ್ಕೆ ಎರಡನೆಯದು ಕಾರಣವೆನಿಸುವದುಂಟು. ಯಾವದಾದರೊಂದು ಉತ್ತೇಜಕದಿಂದ ಹುಟ್ಟಿದ ಅವಧಾನವನ್ನು ಮುಂದೆ ಸಾಗಿಸುವದಕ್ಕೆ ಮನಸ್ಸಿನ "ಇಚ್ಛೆ"ಯೆಂಬ ಪ್ರವೃತ್ತಿಯು ಕಾರಣವಾಗುವದು. ಆದುದರಿಂದ ಅವಧಾನಕ್ಕೆ ಇಚ್ಛೆಯು ಒಂದು ಸಹಾಯಕವೆಂದು ತಿಳಿಯಲ್ಪಡುವದು. ಈ ಕೆಳಗಿನ ಉದಾಹರಣೆಯಿಂದ ಈ ಮಾತು ಸ್ಪಷ್ಟವಾಗಬಹುದು. ಗಡಿಯಾಳಕ್ಕೆ ಕೀಲಿ ಕೊಟ್ಟು ಅದರ ಯಂತ್ರಗಳನ್ನೆಲ್ಲ ಸರಿಪಡಿಸಿ ಇಟ್ಟರೂ ಅದು ತಟ್ಟನೆ ನಡೆಯಲಿಕ್ಕೆ ಆರಂಭಿಸಲಾರದು. ಅದನ್ನು ಕೊಂಚ ಅಲು

ಗಾವಿಸಿ ಅದರ ಚಕ್ರದಲ್ಲಿ ಗತಿಯನ್ನು ಹುಟ್ಟಿಸಿದರೆ ಮಾತ್ರ ಅದು ನಡೆಯಹತ್ತುವದು. ಇದು ಎಲ್ಲರೂ ಬಲ್ಲ ಮಾತು. ಹಾಗೆಯೇ ಮನಸ್ಸು ಯಾವದಾದರೊಂದು ವಿಷಯದಲ್ಲಿ ತೊಡಗಿ, ವಿಚಾರ ಮಾಡಿ, ಅದರಲ್ಲಿ ಅವಧಾನಹೊಂದುವ ಸ್ಥಿತಿಯನ್ನೂ ಶಕ್ತಿಯನ್ನೂ ಪಡೆದಿದ್ದರೂ ಆ ತರಹದ ಐಚ್ಛಿಕ ಅವಧಾನವನ್ನು ಅದರಲ್ಲಿ ಹುಟ್ಟಿಸಲಿಕ್ಕೆ "ಇಚ್ಛೆ"ಯೆಂಬ ಇನ್ನೊಂದು ಪ್ರೇರಣೆಯು, ಗಡಿಯಾಳದ ಚಕ್ರವನ್ನು ನಡೆಯಿಸಲಿಕ್ಕೆ ಕಾರಣವಾಗುವ ಕೊಂಚ ಚಲನೆಯಂಥ ಶಕ್ತಿಯು, ಬೇಕೇಬೇಕಾಗುವದು.

ನಾಲ್ಕು ಜನರಲ್ಲಿ ಹೌದೆನ್ನಿಸಿಕೊಳ್ಳುವ ಇಚ್ಛೆ, ಕೀರ್ತಿಲಾಲಸೆ, ಇವೇ ಮುಂತಾದ ದೀರ್ಘ ಪರಿಣಾಮಕಾರಿಯಾದ ವಿಚಾರಗಳಿಂದ ಮನುಷ್ಯನ ಮನಸ್ಸು ಅವಿಶ್ರಾಂತವಾಗಿ ದುಡಿಯಲು ಎಂದರೆ ಆ ವಿಷಯದಲ್ಲಿ ನಿರಂತರ ಅವಧಾನ ಹೊಂದಲು ಸಮರ್ಥವಾಗುವದು.

ಐಚ್ಛಿಕ ಅನೈಚ್ಛಿಕ ಎಂಬ ಎರಡು ಮುಖ್ಯ ಭೇದಗಳಲ್ಲದೆ, ಅವಧಾನದಲ್ಲಿ ಚಟ ಅಥವಾ ಬಹು ಕಾಲದ ರೂಢಿಯ ಮೂಲಕವಾದ ಇನ್ನೊಂದು ಬಗೆಯ ಅವಧಾನವೂ ಇರುವದೆಂದು ಆಧುನಿಕ ಮಾನಸಶಾಸ್ತ್ರಜ್ಞರು ಪ್ರತಿಪಾದಿಸುತ್ತಿರುವರು. ಈ ಬಗೆಯ ಅವಧಾನದಲ್ಲಿ ಅನೈಚ್ಛಿಕ ಅವಧಾನದಂತೆ ಬಾಹ್ಯ ಉತ್ತೇಜಕವು ಕಾರಣವೆನಿಸುವದಿಲ್ಲ. ಇಲ್ಲವೆ ಐಚ್ಛಿಕ ಅವಧಾನದಂತೆ ಮನಸ್ಸಿಗೆ ದಣಿವೂ ಬೇಸರವೂ ತೋರಿಬರುವದಿಲ್ಲ. ಆತ್ಮಾನಂದ, ಆತ್ಮತೃಪ್ತಿ ಇವೇ ಈ ಬಗೆಯ ಅವಧಾನದ ಕಾರಣಗಳೆನಿಸುವವು. ಬಲು ಬಿಗಿಯಾದ ಬೀಜಗಣಿತದ ಯಾವದಾದರೊಂದು ಸಾರಣಿಯನ್ನು ಬಿಡಿಸುವದಕ್ಕಾಗಿ ತೊಡಗಿದ ಗಣಿತಜ್ಞನ ಮನಸ್ಸಿಗೆ ಆ ಸಾರಣಿಯನ್ನು ಸರಿಯಾಗಿ ಬಿಡಿಸುವದರಿಂದಾಗುವ ಅಮಿತ ಆನಂದವೇ ಆತನ ಅವಧಾನಕ್ಕೆ ಕಾರಣವಾಗುವದು. ಉಚ್ಚ ತರಗತಿಯ ಬುದ್ಧಿಶಕ್ತಿಯುಳ್ಳವರ ಮನಸ್ಸಿಗೇ ಈ ಮಾತು ಅನ್ವಯಿಸುವದು. ಈ ಬಗೆಯ ಅವಧಾನವು ಆ ತರಗತಿಯ ಜನರ ಹುಟ್ಟುಗುಣವೆನ್ನಿಸಿಕೊಳ್ಳುವದರಿಂದ ಅದು ಸ್ವಾಭಾವಿಕವಾದ ಅವಧಾನದಲ್ಲಿಯೇ ಪರ್ಯವಸಾನಹೊಂದುವದೆಂದೂ ಆದುದರಿಂದ ಈ ಮೂರನೆಯ ಪ್ರಕಾರವನ್ನು ಕಲ್ಪಿಸುವ ಕಾರಣವಿಲ್ಲವೆಂದೂ ಮತ್ತೆ ಕೆಲವರು ಮಾನಸಶಾಸ್ತ್ರಜ್ಞರು ಪ್ರತಿಪಾದಿಸುವರು.

ಮಾನಸಶಾಸ್ತ್ರಜ್ಞರು ಅವಧಾನಕ್ಕೆ ಸಂಬಂಧಿಸಿದ ಕೆಲವು ನಿಯಮಗಳನ್ನು ಹೇಳುವರು. ಅವುಗಳಲ್ಲಿ ಮುಖ್ಯವಾದವು ಯಾವವೆಂದರೆ:—

೧. ಸಾಮಾನ್ಯವಾಗಿ ನಮ್ಮ ಮನಸ್ಸು ಒಂದು ಕಾಲಕ್ಕೆ ಒಂದೇ ವಿಷಯದಲ್ಲಿ ತೊಡಗಿಕೊಳ್ಳಬಹುದು.

೨. ಅವಧಾನವು ಒಂದೇ ವಿಷಯದಲ್ಲಿ ಬಹುಕಾಲ ಸ್ಥಿರವಾಗಿ ನಿಲ್ಲಲಾರದು.

೩. ಒಂದು ಕಾಲಕ್ಕೆ ಒಂದೇ ವಿಷಯದಲ್ಲಿ ಮನಸ್ಸು ತೊಡಗಿಕೊಳ್ಳುವದೆಂಬದು ಸಾಮಾನ್ಯ ನಿಯಮವಾಗಿದ್ದರೂ ಒಂದೇ ವಿಷಯಕ್ಕೆ ಸಂಬಂಧಿಸಿದ ಉಪವಿಷಯಗಳ ಕಡೆಗೂ ಅದೇ ಕಾಲಕ್ಕೆ ಮನಸ್ಸು ಹೋಗಬಹುದು. ಗಣಿತ ವಿಷಯದಲ್ಲಿ ತಲ್ಲೀನನಾಗಿ ಅದನ್ನು ತನ್ನ ವರ್ಗಕ್ಕೆ ಕಲಿಸುತ್ತಿದ್ದ ಶಿಕ್ಷಕನ ಮನಸ್ಸು ಅದೇ ಕಾಲಕ್ಕೆ ವಿದ್ಯಾರ್ಥಿಗಳು ಮಾಡುತ್ತಿರುವ ತಪ್ಪುತಡೆಗಳ ಕಡೆಗೂ ಹರಿಯುತ್ತಿರುವದು. ವಿಷಯಾಂತರದ ಮಾತು ಈ ಪ್ರಸಂಗಕ್ಕೆ ಅನ್ವಯಿಸಲಾರದು.

೪. ಮನಸ್ಸಿನ ಅವಧಾನಶಕ್ತಿಯು ವಯೋಮಾನಕ್ಕನುಸರಿಸಿ ಹೆಚ್ಚುತ್ತ ಹೋಗುವದು. ೫ ವರುಷದ ಬಾಲಕನಿಗೆ ಒಂದೇ ಕಾಲಕ್ಕೆ ಎರಡಕ್ಕಿಂತ ಹೆಚ್ಚು ಕೆಲಸಗಳನ್ನು ಮಾಡಲಿಕ್ಕೆ ಕೊಟ್ಟರೆ ಅವನು ಅವುಗಳಲ್ಲಿ ಕೆಲವನ್ನು ಮರೆತುಬಿಡಬಹುದು.

೫. ಶಾರೀರಿಕ ತೊಂದರೆಗಳು ಅವಧಾನಕ್ಕೆ ಬಾಧಕವಾಗುವವು. ಕಣ್ಣುಗಳನ್ನು ಮಿಳಕಿಸದೆ ನೋಡಿ ಮಾಡಬೇಕಾಗಿರುವ ಕೆಲಸದಲ್ಲಿ ಅಡಿಗಡಿಗೆ ರೆಪ್ಪೆಯನ್ನು ಬಡಿದುಕೊಳ್ಳುವ ಮನುಷ್ಯನ ಶರೀರ ಧರ್ಮವು ತೊಂದರೆಯನ್ನುಂಟುಮಾಡುವದು. ಯೋಗಾಭ್ಯಾಸ ಮಾಡುವ ಮನುಷ್ಯನ ಮನಸ್ಸಿನ ಏಕಾಗ್ರತೆಗೆ ಶ್ವಾಸನಿರೋಧವು ಅವಶ್ಯಕವೆನಿಸುವದಷ್ಟೇ? ಆ ಸಮಯದಲ್ಲಿ ಈ ಶ್ವಾಸನಿರೋಧಕ ಶಕ್ತಿಯು ಆತನ ಮನಸ್ಸಿನ ಏಕಾಗ್ರತೆಗೆ ಸಹಾಯವನ್ನು ಮಾಡುವಂತೆಯೇ ಆ ಶಕ್ತಿಯ ಅಭಾವವು ಏಕಾಗ್ರತೆಗೆ ಬಾಧೆಯನ್ನು ಉಂಟುಮಾಡಬಹುದು.

೬. ಅವಧಾನಶಕ್ತಿಯನ್ನು ಅಭ್ಯಾಸದಿಂದ ಬೆಳೆಯಿಸಬಹುದು. ಏಕ ಕಾಲಕ್ಕೆ ಅನೇಕ ವಿಷಯಗಳ ಕಡೆಗೆ ಲಕ್ಷ್ಯಕೊಡುತ್ತಿರುವ ಅಷ್ಟಾವಧಾನಿ ಶತಾವಧಾನಿ ಮುಂತಾದ ಅಲೌಕಿಕ ವ್ಯಕ್ತಿಗಳನ್ನು ನಾವು ಅಪರೂಪವಾಗಿಯಾದರೂ ಕಂಡು ಕೇಳುತ್ತೇವಲ್ಲವೆ ?

ಅವಧಾನಕ್ಕೆ ಅನುಕೂಲವಾದ ಸಂಗತಿಗಳನ್ನು ಹೇಳಿದ ತರುವಾಯ ಅದಕ್ಕೆ ಪ್ರತಿಕೂಲವಾದ ಸಂಗತಿಗಳನ್ನೂ ವಿವೇಚಿಸಬೇಕಾದ ಸಂದರ್ಭವು ಬಂದೇ ಬರುವದು.

ಐಚ್ಛಿಕ ಅವಧಾನಕ್ಕೆ ಪ್ರತಿಬಂಧಕವಾದ ನೈಸರ್ಗಿಕ ಸಂಗತಿಗಳನ್ನು ಈ ರೀತಿ ವರ್ಗೀಕರಿಸಬಹುದು:—

೧. ಆಯಾ ವ್ಯಕ್ತಿಗಳ ಶಾರೀರಿಕ ಆರೋಗ್ಯ ಬುದ್ಧಿಶಕ್ತಿಗಳಿಗೆ ಸಂಬಂಧಿಸಿದವು.–ಬೇನೆಯಿಂದ ಬಳಲುವ ವಿದ್ಯಾರ್ಥಿಯು ಅಭ್ಯಾಸಕ್ಕೆ ಲಕ್ಷ್ಯ ಕೊಡಲಾರನು.

೨. ಮಾನಸಿಕ ಪ್ರವೃತ್ತಿಯು ವಿರೋಧವಾಗಿರುವಾಗ ಆ ವಿಷಯದ ಕಡೆಗೆ ಹೇಗೂ ನಮ್ಮ ಲಕ್ಷ್ಯವು ಹೋಗಲಾರದು.

೩. ಮನಸ್ಸಿನ ಉದ್ವೇಗವೂ ಚಂಚಲತೆಯೂ ಅವಧಾನಕ್ಕೆ ವಿರೋಧಿಯಾಗಿರುವವು.

೪. ದಣಿದ ಮನಸ್ಸು ಯಾವದೇ ವಿಷಯದಲ್ಲಿ ಏಕಾಗ್ರತೆಯನ್ನು ಹೊಂದಲಾರದು.

೫. ಮನೋರಾಜ್ಯದಲ್ಲಿ ಓಲಾಡುತ್ತಿರುವ ಪ್ರವೃತ್ತಿಯುಳ್ಳ ವ್ಯಕ್ತಿಯು ಯಾವದೊಂದು ವಿಷಯದಲ್ಲಿ ಸ್ಥಿರಚಿತ್ತವುಳ್ಳನಾಗಲಾರನು.

ಬಾಹ್ಯ ಉತ್ತೇಜಕವು ಕಾರಣವಾದ ಅನೈಚ್ಛಿಕ ಅವಧಾನಕ್ಕೆ ಪ್ರತಿಬಂಧಕವಾದ ಸಂಗತಿಗಳಲ್ಲಿ ಈ ಕೆಳಗೆ ಹೇಳಿದ ವಿಷಯಗಳ ಸಮಾವೇಶವಾಗುವದು:—

೧. ಅವಧಾನಕ್ಕೆ ಕಾರಣವಾಗುವ ವಿಷಯವು ತೀರ ಪರಿಚಿತವಾದದ್ದು ಇಲ್ಲವೆ ಅತಿಶಯ ಅಪರಿಚಿತವಾದದ್ದು ಇರುವದರಿಂದ ಆ ಕಡೆಗೆ ನಮ್ಮ ಲಕ್ಷ್ಯವು ಹೋಗಲಾರದು.

ಅದರಂತೆಯೇ ಆ ವಿಷಯವು ತೀರ ಸುಲಭವಾಗಿರುವದರಿಂದ ಅಥವಾ ಅತಿಶಯ ಕಠಿಣವೆನಿಸುವದರಿಂದಲೂ ಅದರಲ್ಲಿ ಮನಸ್ಸು ತೊಡಗದಂತಾಗುವದು.

೨. ಪರಿಸ್ಥಿತಿಯು ಪ್ರತಿಕೂಲವಾದರೆ ಅವಧಾನಕ್ಕೆ ಪ್ರತಿಬಂಧವಾಗುವದು. ಆ ಪ್ರತಿಬಂಧಕ ಪರಿಸ್ಥಿತಿಯು ಈ ಕೆಳಗೆ ಹೇಳಿದವುಗಳಲ್ಲಿ ಒಂದು ಇಲ್ಲವೆ ಅನೇಕಕಾರಣಗಳಿಂದ ಉಂಟಾಗಿರಬಹುದು.

(ಅ) ಸುತ್ತುಮುತ್ತಲು ಗದ್ದಲವಾಗೋಣ–ಸಾಲೆಯ ಮುಂದೆ ಸಿನೇಮಾದ ಬ್ಯಾಂಡು ಬಾರಿಸುವದು; ಸಂತೆಯು ಇಲ್ಲವೆ ಜಾತ್ರೆಯ ಗದ್ದಲ ಕೂಡುವದು.

(ಆ) ಸ್ವಚ್ಛ ಹವೆ ಬೆಳಕು ಇಲ್ಲದಿರೋಣ. ಮನಸ್ಸಿಗೆ ಆನಂದದಾಯಕವಾದ ಪ್ರಾಕೃತಿಕ ಸ್ಥಿತಿಯಿಲ್ಲದಿರೋಣ.

(ಇ) ಒಂದೇಸವನೆ ಹೆಚ್ಚು ಕಾಲದವರೆಗೆ ಕೆಲಸಮಾಡುತ್ತಿರೋಣ.

(ಈ) ಸಾಕಷ್ಟು ಇಲ್ಲವೆ ಕೆಲಸಕ್ಕೆಯೋಗ್ಯವಾದ ಉಪಕರಣಗಳಿಲ್ಲದಿರೋಣ. ಕೆಲಸಕ್ಕೆ ತಕ್ಕ ಸಹಾಯವೂ ಅನುಕೂಲತೆಯೂ ಇಲ್ಲದಿರೋಣ.

(ಉ) ಕೆಲಸದ ಮೇಲ್ವಿಚಾರಕನು ಇಲ್ಲವೆ ಮಾರ್ಗದರ್ಶಿಯು ಸಾಕಷ್ಟು ಸಹಾನುಭೂತಿಯನ್ನು ತೋರಿಸದೆ ಇರೋಣ; ಇಲ್ಲವೆ ತಕ್ಕ ಉತ್ತೇಜನ ಕೊಡದೆ ನಿರುತ್ಸಾಹವನ್ನು ಹುಟ್ಟಿಸುತ್ತಿರೋಣ.

(ಊ) ಒಂದೇ ಸ್ಥಿತಿಯಲ್ಲಿ ಹೆಚ್ಚು ಕಾಲದವರೆಗೆ ಬಿಟ್ಟುಬಿಡದೆ ಕುಳಿತು ಇಲ್ಲವೆ ನಿಂತು ಕೆಲಸಮಾಡುವದು.

(ಎ) ಯಾವದೊಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಕೆಲಸಮಾಡುವಾಗ ಇಲ್ಲವೆ ವಿಶಿಷ್ಟ ವಿಷಯವನ್ನು ಅಭ್ಯಾಸಮಾಡುತ್ತಿರುವಾಗ ತಕ್ಕ ಮಾರ್ಗದರ್ಶಿಯು ಇಲ್ಲದಂತಾಗುವದು.

ಇಲ್ಲಿಯವರೆಗೆ ವಿವರಿಸಿದ ಅವಧಾನಕ್ಕೆ ಅನುಕೂಲವಾದ ಹಾಗು ಪ್ರತಿಕೂಲವಾದ ಸಂಗತಿಗಳನ್ನು ಪರ್ಯಾಲೋಚಿಸುವದರಿಂದ ಅವಧಾನವನ್ನು ಹೇಗೆ

ಹುಟ್ಟಿಸಬಹುದೆಂಬ ವಿಚಾರವು ಸಹಜವಾಗಿ ಹೊಳೆಯುವಂತಿದೆ. ಅವಧಾನಕ್ಕೆ ಅನುಕೂಲವಾದ ಸಂಗತಿಗಳನ್ನೆಲ್ಲ ಒದಗಿಸಿಕೊಂಡಾಗ್ಯೂ ತಕ್ಕ ಅವಧಾನವು ಕಂಡುಬರದಿದ್ದರೆ ಅದರಲ್ಲಿ ಅವಧಾನಕ್ಕೆ ಪ್ರತಿಕೂಲವಾದ ಸಂಗತಿಗಳೇನಾದರೂ ಇರುವವೋ ಹೇಗೆಂಬದನ್ನು ನೋಡಿಕೊಂಡು ಅವನ್ನು ನಿವಾರಿಸುವ ದಾರಿಯನ್ನು ಹುಡುಕಿಕೊಳ್ಳಬೇಕಾಗುವದು.

ಶಿಕ್ಷಕನ ಕಾರ್ಯದಲ್ಲಿ ಅವಧಾನವು ಅತಿ ಮಹತ್ವದ ಸಾಧನವೆಂಬದನ್ನು ಹೇಳಿದ ತರುವಾಯ ಅದನ್ನು ಹೇಗೆ ಸಂಪಾದಿಸಬೇಕೆಂಬದನ್ನೂ ಪರ್ಯಾಲೋಚಿಸಬೇಕಾಗುವದು. ಶಿಕ್ಷಣ ಪ್ರಪಂಚದಲ್ಲಿ ಬಹುಕಾಲದವರೆಗೆ ‘ ಶಿಕ್ಷಣಕಾರ್ಯವು ಸುಸೂತ್ರವಾಗಿ ಸಾಗುವದಕ್ಕೆ ಅವಧಾನವು ಅವಶ್ಯ’ವೆಂಬ ವಿಚಾರವೇ ಹುಟ್ಟಿರಲಿಲ್ಲ. ಶಿಕ್ಷಣಕ್ಕೆ ಅವಧಾನವು ಅವಶ್ಯವೆಂಬ ವಿಚಾರವು ಹುಟ್ಟಿದ ತರುವಾಯವೂ ಕೂಡ ವಿದ್ಯಾರ್ಥಿಗಳಲ್ಲಿ ಅವಧಾನವನ್ನು ಹುಟ್ಟಿಸುವದಕ್ಕೆ ಬಲಾತ್ಕಾರವೊಂದೇ ಸಾಧನವೆಂಬ ತಿಳವಳಿಕೆಯು ಬಹುಕಾಲದವರೆಗೆ ಇದ್ದಿತು. ಬಾಲಕರು ವಿಷಯವನ್ನು ದುರ್ಲಕ್ಷಿಸಿದರೆ ನಾಲ್ಕು ಏಟು ಕೊಟ್ಟು ಅವರನ್ನು ದಾರಿಗೆ ತರಬೇಕೆಂಬ ಘೋರಣೆಯೇ ಶಿಕ್ಷಕ ವರ್ಗದಲ್ಲಿ ಬಹುಕಾಲ ಬಾಳಿ ಬದುಕಿತು. ಆದರೆ ಮಾನಸಶಾಸ್ತ್ರಜ್ಞರು ಈ ಮಾರ್ಗದಲ್ಲಿ ವಿಶೇಷ ಶ್ರಮಮಾಡಿ “ ಛಡಿಲಾಗೇ ಛಮ್‌ಛಮ್, ವಿದ್ಯಾಯೇಯೀ ಘಮ್ ಘಮ್ ” ಎಂಬ ಪೂರ್ವದ ಪಂತೋಜಿಗಳ ದಾರಿಯನ್ನು ನಿರೋಧಿಸಿರುವರು. ಶಾಲೆಯ ವೇಳಾಪತ್ರಿಕೆ ಅಭ್ಯಾಸಪತ್ರಿಕೆ ಸಾಲೆಯ ಕಟ್ಟಡದ ಬೆಳಕು ಹವೆ ಮುಂತಾದ ಬಾಹ್ಯ ಪರಿಸ್ಥಿತಿ, ಕೊನೆಗೆ ಇವೆಲ್ಲಕ್ಕೂ ಹೆಚ್ಚಿನದಾದ ಶಿಕ್ಷಕ ಶಿಕ್ಷಣಪದ್ಧತಿ ಇವೇ ಮುಂತಾದ ಹೊಸ ಹೊಸ ವಿಚಾರಗಳು ಬಾಲಕರ ಅವಧಾನಕ್ಕೆ ಅನುಕೂಲವಾಗಿ ಇಲ್ಲವೆ ಪ್ರತಿಕೂಲವಾಗಿ ಪರಿಣಮಿಸುವವೆಂದು ಅವರು ಪ್ರತಿಪಾದಿಸಿದರು. ಈ ವಿಚಾರಗಳು ಶಿಕ್ಷಣಶಾಸ್ತ್ರದಲ್ಲಿ ಅನೇಕ ನೂತನ ಕ್ರಾಂತಿಕಾರಕ ವಿಚಾರಗಳ ಬೆಳಕನ್ನು ಬೀರಿದವು. ಶಿಕ್ಷಕರು ಒಂದು ವರ್ಗಕ್ಕೆ ಪಾಠಕಲಿಸಲು ಹೊರಟಾಗ ಆ ವರ್ಗದಲ್ಲಿ ಬೇರೆ ಬೇರೆ ತರಗತಿಯ ಹಾಗು ಮನಃಸ್ಥಿತಿಯ ವಿದ್ಯಾರ್ಥಿಗಳಿರುವದರಿಂದ ಕೆಲವರು ಪಾಠವನ್ನು ಆಸ್ಥೆಯಿಂದ ಕಲಿಯಬಹುದು ; ಕೆಲವರು ಅದಕ್ಕೆ ಎಷ್ಟುಮಾತ್ರವೂ ಲಕ್ಷ್ಯಗೊಡಲಿಕ್ಕಿಲ್ಲ ; ಮತ್ತೆ ಕೆಲವರಿಗೆ ಪಾಠದಲ್ಲಿ ಅಭಿರುಚಿಯೇ ಹುಟ್ಟಲಿಕ್ಕಿಲ್ಲ. ಹೀಗಿರುವದರಿಂದ ಆಯಾ ವ್ಯಕ್ತಿಗಳ ಗುಣದೋಷಗಳನ್ನೂ ಅನುಕೂಲ ಪ್ರತಿಕೂಲ ಪರಿಸ್ಥಿತಿಗಳನ್ನೂ

ಶಿಕ್ಷಕನ ಸ್ವಂತ ಗುಣದೋಷಗಳನ್ನೂ ತಾನು ಅನುಸರಿಸಿರುವ ಪದ್ಧತಿಯ ಯೋಗ್ಯಾಯೋಗ್ಯ ವಿಚಾರಗಳನ್ನೂ ಲಕ್ಷ್ಯಕ್ಕೆ ತಂದುಕೊಂಡು ಮುಂದೆ ಸಾಗ ಬೇಕಾಗುವದು. ಕಡಿಮೆ ಬುದ್ಧಿಶಕ್ತಿಯುಳ್ಳ ವಿದ್ಯಾರ್ಥಿಯು ಪ್ರಯತ್ನ ಪೂರ್ವಕವಾಗಿ ಕಲಿಯಲು ಹವಣಿಸುತ್ತಿದ್ದರೆ ಅವನಿಗೆ ಉತ್ತೇಜನ ಕೊಡಬೇಕಾ ಗುವದು ; ಉಲಕೋಚಿ ಸ್ವಭಾವದವನು ಚಿತ್ತಚಾಂಚಲ್ಯದಿಂದ ಪಾಠವನ್ನು ದುರ್ಲಕ್ಷಿಸುತ್ತಿದ್ದರೆ ಅವನನ್ನು ಬೆದರಿಸಬೇಕಾಗುವದು ; ತೀಕ್ಷ್ಣಬುದ್ಧಿಯ ವಿದ್ಯಾರ್ಥಿಯು ಒಣಹೆಮ್ಮೆಯಿಂದ ಪಾಠದ ಕಡೆಗೆ ಅಲಕ್ಷ್ಯಮಾಡುತ್ತಿದ್ದರೆ ಅವನ ಹೆಮ್ಮೆಯನ್ನು ಹಿಮ್ಮೆಟ್ಟಿಸಬೇಕಾಗುವದು ; ಕುಶಾಗ್ರಬುದ್ಧಿಯ ಹುಡು ಗರಿಗೆ ಅವರ ಬುದ್ಧಿಶಕ್ತಿಗೆ ತಕ್ಕಷ್ಟು ಕೆಲಸ ಕೊಟ್ಟು ಅವರನ್ನು ಪಾಠದಲ್ಲಿ ತೊಡಗಿಸಿ ಅವರ ಬುದ್ಧಿ ವಿಕಾಸವಾಗುವಂತೆ ಮಾಡಬೇಕಾಗುವದು. ಹಿಂದಿನ ಕಾಲದಲ್ಲಿ ಅವಧಾನದ ವಿಷಯದಲ್ಲಿ ಶಿಕ್ಷಕರು ಅನಭಿಜ್ಞರಾಗಿದ್ದುದರಿಂದ ಶಿಕ್ಷಕನ ಅಧಿಕಾರ ದರ್ಪ, ಬಾಲಕರ ಮನಸ್ಸಿನ ಆಶೆ, ಅಂಜಿಕೆ ಇವನ್ನೇ ಪ್ರಯೋಗಿಸಿ ಕೊಂಡು ಪಾಠ ಸಾಗಿಸಿ ಬಾಲಕರ ಜ್ಞಾನಲಾಲಸೆಯನ್ನು ಪೂರ್ತಿಗೊಳಿಸಬೇಕೆಂದು ಅಭಿಪ್ರಾಯಪಡುತ್ತಿದ್ದರು. ಹಳೆಯ ಪದ್ಧತಿಯ ಶಿಕ್ಷಣ ಕ್ರಮದಲ್ಲಿ ಬಾಲಕರಲ್ಲಿ ಬಲಾತ್ಕಾರದಿಂದಲಾದರೂ ಐಚ್ಛಿಕ ಅವಧಾನವನ್ನು ಹುಟ್ಟಿಸಿ ಅದರ ಸಹಾಯ ದಿಂದಲೇ ಗಡಚಾದ ವಿಷಯಗಳನ್ನು ಕೂಡ ಕಲಿಸುವ ಪರಿಪಾಠವಿದ್ದಿತು. ಆದರೆ ಈಗಿನ ಕಾಲದಲ್ಲಿ ಮಾನಸ ಶಾಸ್ತ್ರಜ್ಞರ ಅಭಿಪ್ರಾಯದ ಮೇರೆಗೆ ಶಿಕ್ಷಕನು ಬಾಲಕ ರಲ್ಲಿ ಯುಕ್ತಿಪ್ರಯುಕ್ತಿಗಳಿಂದ ಅನೈಚ್ಛಿಕ ಅವಧಾನವುಂಟಾಗುವಂತೆ ಮಾಡಿ ಆಯಾ ವಿಷಯಗಳಲ್ಲಿ ಅಭಿರುಚಿಯೂ ಜಿಜ್ಞಾಸೆಯೂ ಉಂಟಾದ ಬಳಿಕ ಎಂದರೆ ಅವರಲ್ಲಿ ತಾನಾಗಿ ಐಚ್ಛಿಕ ಅವಧಾನದ ಪ್ರವೃತ್ತಿಯು ತೋರಿಬರುವಂತೆ ಮಾಡಿದ ಬಳಿಕ, ಶಿಕ್ಷಕನು ಸಹಾಯಕನಂತೆ ನಡೆದುಕೊಂಡು ಬಾಲಕರ ಜ್ಞಾನಲಾಲಸೆ ಯನ್ನು ಪೂರ್ಣಗೊಳಿಸಬೇಕಾಗಿರುವದು. ಆದುದರಿಂದ ಹಳೆಯ ಹಾಗು ಹೊಸ ಪದ್ಧತಿಯ ಶಿಕ್ಷಣಕ್ರಮಗಳಲ್ಲಿ ಭೂಮ್ಯಾಕಾಶಗಳಷ್ಟು ಅಂತರವುಂಟಾಗಿದೆಯೆಂದು ಹೇಳುವರು.

ಬಾಲಕರ ಅವಧಾನವು ಶಿಕ್ಷಕರಿಗೆ ಅನುಕೂಲವಾಗಬೇಕಾದರೆ ಅನೇಕ ಸಾಮಾನ್ಯ ಸಂಗತಿಗಳನ್ನು ಅನುಲಕ್ಷಿಸಬೇಕಾಗುವದು. ಒಂದೇ ಪಾಠವು ಹೆಚ್ಚುಕಾಲದವರೆಗೆ ನಡೆಯುವಂತೆ ವೇಳಾಪತ್ರಿಕೆಯಿರಲಾಗದು. ಪ್ರತಿ ಪಾಠವು

ಮುಗಿದ ತರುವಾಯ ೫ ನಿಮಿಷಗಳಷ್ಟಾದರೂ ವಿಶ್ರಾಂತಿಯಿರಬೇಕು ; ಒಂದು ಕಠಿಣ ವಿಷಯವೂ ಅದಕ್ಕೆ ಹೊಂದಿ ಇನ್ನೊಂದು ಸುಲಭ ವಿಷಯವೂ ಬರುವಂತೆ ನೋಡಿಕೊಳ್ಳಬೇಕು. ಹೆಚ್ಚು ಉಷ್ಣತೆಯಿರುವ ಕಾಲದಲ್ಲಿ ಬುದ್ಧಿಗೆ ಶ್ರಮವಾಗುವಂಥ ವಿಷಯಗಳನ್ನು ಕಲಿಸುವ ಯೋಜನೆಯಿರಲಾಗದು. ಬಾಲಕರ ಬುದ್ಧಿಶಕ್ತಿಗೆ ಅನುಗುಣವಾಗಿಯೇ ಅಭ್ಯಾಸಪತ್ರಿಕೆಯು ರಚನೆಯಿರಬೇಕು. ಪಾಠ ಪುಸ್ತಕಗಳು ಬಾಲಕರ ಯೋಗ್ಯತೆಗೆ ಅನುಗುಣವಾದವಿರಬೇಕು. ಭಾಷಾ ವಿಷಯದ ಪಾಠ ಪುಸ್ತಕಗಳಲ್ಲಿಯೂ ಕೂಡ ಬಾಲಕರಲ್ಲಿ ಅಭಿರುಚಿಯನ್ನು ಹುಟ್ಟಿಸುವದಕ್ಕಾಗಿ ಬೇರೆ ಬೇರೆ ವಿಷಯಗಳ ಸಮಾವೇಶವಾಗುವಂತೆ ಮಾಡಬೇಕೆಂದು ಆಧುನಿಕ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಿದ್ದಾರೆ. ಚಮತ್ಕಾರಿಕವಾದ ಕಥೆಗಳು ಆಟನೋಟಗಳು ಮುಂತಾದ ವಿಷಯಗಳು ಅದರಲ್ಲಿ ಬಂದರೆ ಬಾಲಕರು ಹೆಚ್ಚು ಆಸ್ಥೆಯಿಂದ ಓದುವರು. ಮಿಕ್ಕ ವಿಷಯಗಳ ಪಾಠ ಪುಸ್ತಕಗಳಲ್ಲಿಯೂ ಸಾಕಷ್ಟು ಚಿತ್ರಮಯ ವಿವರಣೆಯು ಬೇಕಾಗುವದು.

ಇಷ್ಟೆಲ್ಲ ಮಾತುಗಳಲ್ಲದೆ ಬಾಲಕರಲ್ಲಿ ಪಾಠದ ವಿಷಯಕ್ಕೆ ಆಸ್ಥೆಯನ್ನುಂಟುಮಾಡಲಿಕ್ಕೆ ಶಿಕ್ಷಕರ ಹಾಗು ಬಾಲಕರ ಪರಸ್ಪರ ಸಂಬಂಧವೂ ಒಂದು ಕಾರಣವಾಗುವದು. ಶಿಕ್ಷಕನ ನಡತೆ, ಸ್ವಭಾವ, ವ್ಯಕ್ತಿತ್ವ (Personality) ಶಿಕ್ಷಣ ಪದ್ಧತಿ ಮುಂ. ಬಾಲಕರಲ್ಲಿ ಸಹಾನುಭೂತಿಯಿಲ್ಲದ ಶಿಕ್ಷಕನ ಪಾಠದಲ್ಲಿ ಅವರ ಅಭಿರುಚಿಯು ಕಡಿಮೆಯಾಗುವದು. ಯೋಗ್ಯ ಪದ್ಧತಿಯಿಂದ ಪಾಠ ಸಾಗದೆ ಇದ್ದರೂ ಬಾಲಕರು ಅದನ್ನು ದುರ್ಲಕ್ಷಿಸುವರು. ಶಿಕ್ಷಕನು ತಾನು ಕಲಿಸುವ ವಿಷಯದಲ್ಲಿ ಸಂಪೂರ್ಣ ಜ್ಞಾನವನ್ನು ಪಡೆದವನಿರಬೇಕು. ಯೋಗ್ಯ ವಿಷಯವನ್ನು ಯೋಗ್ಯ ಪದ್ಧತಿಯಿಂದ ಕಲಿಸತೊಡಗುವದು ಬಾಲಕರ ಲಕ್ಷ್ಯವನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವದಕ್ಕೆ ಬಹ್ವಂಶದಿಂದ ಸಹಾಯವಾಗುವದು. ಒಂದು ವಿಷಯವನ್ನು ಒಂದೇ ಪದ್ಧತಿಯಿಂದ ಕಡೆತನಕ ಕಲಿಸುತ್ತ ಸಾಗುವದರಿಂದಲೂ ಹುಡುಗರಿಗೆ ಬೇಸರಿಕೆ ಬರುವದುಂಟು. ಪಾಠದಲ್ಲಿ ಮಾಡಬೇಕಾದ ಎಲ್ಲ ಕೆಲಸವನ್ನು ಶಿಕ್ಷಕನು ತಾನೇ ಮಾಡುತ್ತ ಸಾಗಿದರೆ ಆ ಪಾಠವು ಬಾಲಕರಿಗೆ ರುಚಿಸಲಾರದು. ತಾನು ಮಾಡಿದೆ, ತಾನು ಕಲಿತೆ, ಎಂಬ ಅಭಿಪ್ರಾಯದಲ್ಲಿ ಬಾಲಕರಲ್ಲಿ ತೋರಿಬರುವಷ್ಟು ಆಸ್ಥೆಯು ಶಿಕ್ಷಕರು ಕಲಿಸಿದರು, ಶಿಕ್ಷಕರು ಮಾಡಿ ತೋರಿಸಿದರು ಎಂಬ ಭಾವನೆಯಲ್ಲಿ ಎಂದೂ ಕಂಡುಬರಲಾರದು. ಒಂದೇ

ವಿಷಯವನ್ನು ಹೇಳುತ್ತಾ ಹೋದರೆ ಕಲಿಸುವ ಸಂದರ್ಭಗಳಿಂದಾಗಲಿ [illegible] ಸಹಾಯವಾದ ಶಿಕ್ಷಕನು ತನ್ನ ಪದ್ಧತಿಯನ್ನು ಬದಲಿಸಬೇಕಾಗುವುದು. [illegible] ಪದ್ಧತಿಯಿಂದ ಪ್ರಾರಂಭಿಸಿ ಕೆಲವು ದಿನ ಬಾಲಕರನ್ನು ಓದುವುದಕ್ಕೆ [illegible] ಪ್ರಯತ್ನ ಕೊಡಬೇಕು. ಕೊನೆಗೆ ವ್ಯಾಖ್ಯಾನಪದ್ಧತಿಯಿಂದ ಪಾಠ [illegible] ಹೇಳುತ್ತ ಪಾಠದ ಸಂದರ್ಭಗಳು ಒದಗಿದ್ದೇ ಶಿಕ್ಷಕರಿಗೆ ಒದಗುತ್ತ [illegible] ಅಭ್ಯಾಸವಾಗುವುದು.

ಕೊನೆಯದಾಗಿ ಇತಿಹಾಸದಲ್ಲಿ ಆದ ಘಟನೆಯ ಪಾಠವನ್ನು [illegible] ಪ್ರಕೃತಿ ವಿಷಯವನ್ನು ಹೇಳಬೇಕು. ಬಾಲಕರ ಲಕ್ಷ್ಯ ಪಾಠದಲ್ಲಿ [illegible] ಬೇಕಾದರೆ ಮೊದಲು ಶಿಕ್ಷಕನು ಆ ವಿಷಯದಲ್ಲಿ ಸಂಪೂರ್ಣ ಲಕ್ಷ್ಯ [illegible] ಕೊಡಬೇಕು. ಪಾಠದ ವಿಷಯದಲ್ಲಿ ಬಾಲಕರ ಲಕ್ಷ್ಯವನ್ನು ಸೆಳೆಯ [illegible] ಅಭ್ಯಾಸಕ್ಕೆ ಬೇಕಾದ ಎಲ್ಲ ವಸ್ತುಗಳನ್ನು ಶಿಕ್ಷಕನು ಸಂಗ್ರಹಿಸಬೇಕು. [illegible] ಬಾಲಕರ ವಿಷಯದಲ್ಲಿ ಸಂಪೂರ್ಣ ಸಹಾನುಭೂತಿಯುಳ್ಳವನಾಗಿದ್ದು [illegible] ನನ್ನು ಅವರ ದೃಷ್ಟಿಯಿಂದ ನೋಡಲು ಕಲಿಯಬೇಕು. ವಿದ್ಯಾರ್ಥಿಗಳ [illegible] ನ್ನು ಪ್ರೋತ್ಸಾಹಿಸಬೇಕು. ಪ್ರೀತಿಯಿಂದ ಪ್ರೀತಿಯು ಹುಟ್ಟು [illegible] ಪಾಠವನ್ನು ಶಿಕ್ಷಕನು ಮಾಡಬೇಕು. ಎಲ್ಲ ಅನುಕೂಲವಾದ [illegible] ವನ್ನು ಉಪಯೋಗಿಸಬೇಕು. ಸಾಧ್ಯವಾದ ಪದ್ಧತಿಯನ್ನು ಅನುಸರಿಸಿ [illegible] ಸಾಗಿಸುತ್ತಿದ್ದರೂ ಶಿಕ್ಷಕನು ಆ ವಿಷಯದಲ್ಲಿ ತನ್ಮಯನಾಗದೆ ಇದ್ದರೆ, [illegible] ರಲ್ಲಿ ಸಂಪೂರ್ಣ ಸಹಾನುಭೂತಿಯನ್ನು ತೋರಿಸದಿದ್ದರೆ, ಬಾಲಕರ ಲಕ್ಷ್ಯ [illegible] ಪಾಠದಲ್ಲಿ ಹೇಗೆ ಕೇಂದ್ರೀಕರಿಸುವುದೆಂಬುದನ್ನು ಎಂದೂ ತಿಳಿಯಬೇಕು. [illegible] ಅನೇಕಬಾರಿ ಶಿಕ್ಷಕನೇ ವಿದ್ಯಾರ್ಥಿಯಾಗಬೇಕು. "ತನ್ನಲ್ಲಿಲ್ಲದ ಗು[illegible] ಇತರರಿಂದ ಅಪೇಕ್ಷಿಸುವುದು ಎಂದೂ ಯೋಗ್ಯವಾಗಲಾರದು." ಎಂಬ [illegible] ಬಾಲಕರ ಅಧ್ಯಾಪನ ವಿಷಯದಲ್ಲಿಯೂ ಅನ್ವಯಿಸುವುದು.

ಜಂಜೀರೆಯ ಇತಿಹಾಸವು

ಕೊಲಾಬಾ ಜಿಲ್ಲೆಯಲ್ಲಿ ಸಮುದ್ರ ತೀರದಲ್ಲಿ ಜಂಜೀರಾ ಎಂಬ ಸಂಸ್ಥಾನವಿದೆ. ಇದರ ಕ್ಷೇತ್ರಫಲವು ೩೨೪ ಚೌ. ಮೈಲು, ಜನಸಂಖ್ಯೆ ಸುಮಾರು ೧ ಲಕ್ಷ, ವಾರ್ಷಿಕ ಉತ್ಪನ್ನ ೪ ಲಕ್ಷ ರೂ. ಗಳು. ಇಲ್ಲಿಯ ನವಾಬರು ಸಿದ್ದಿ ವಂಶದವರು. ಈ ಸಂಸ್ಥಾನದ ಇತಿಹಾಸವನ್ನು ಕುರಿತು ಇಲ್ಲಿ ಕೆಲವು ಸಂಗತಿಗಳನ್ನು ಕೊಡುವೆವು.

ಈಗ ಸುಮಾರು ೨೦೦ ವರ್ಷಗಳ ಹಿಂದೆ ಜಂಜೀರೆ ಬಂದರವು ಸಮುದ್ರದಲ್ಲಿ ಅತ್ಯಂತ ಸುರಕ್ಷಿತ ಸ್ಥಾನವಾಗಿತ್ತು. ಅಲ್ಲದೆ ಈ ಬಂದರದ ಕೋಟೆಯು ಅಜೇಯ್ಯವೂ ಆಗಿತ್ತು. ಆದುದರಿಂದ [illegible] ಇಂಗ್ಲಿಷ ಕಂಪನಿಯವರಿಗೆ ಸಹ ಈ ಬಂದರದ ಆವಶ್ಯಕತೆಯು ತೋರುತ್ತಿತ್ತು. ಈ ಬಂದರದ [illegible] ವಿಜಾಪೂರದವರ, ಪೋರ್ತುಗೀಜರ, ಇಂಗ್ಲಿಷರ, ಮರಾಠರ [illegible]. ಮೊಗಲರಿಗೂ ಈ ಬಂದರದ ಮಹತ್ವವು ಗೊತ್ತಿತ್ತು.

ಜಂಜೀರಾ ಶಬ್ದವು ಜಜೀರಾ (ದ್ವೀಪ) ಎಂಬ ಅರಬೀ ಶಬ್ದದ ಅಪಭ್ರಂಶವು. ಇದು ಬಂದರದಲ್ಲಿ ದ್ವೀಪವು. ರಾಜಪುರಿ ಎಂಬ ಊರಿನ [illegible] ಒಂದೇ ಮೈಲಿನ ಅಂತರದಲ್ಲಿ ಇದೆ. ರಾಜಾಪುರಿ ಎಂಬ [illegible] ಈ ಊರಿಗೆ 'ದಂಡಾರಾಜಪುರಿ' ಎಂಬ ಹೆಸರೂ ಇತಿಹಾಸ ಪ್ರಸಿದ್ಧವಾಗಿದೆ.

[illegible] ಕೊಲಾಬಾ ಜಂಜೀರೆ [illegible]. [illegible] ಒಂದೇ [illegible] ಕೊಲಾಬಾ ಜಿಲ್ಲೆಯಲ್ಲಿ ಜಂಜೀರೆ ಎಂಬ [illegible]. ಈ ಸಂಸ್ಥಾನದ ಪೂರ್ವ [illegible] [illegible] ಕಟ್ಟಿಸಿದ ಧನ್ಯವಾದ [illegible] [illegible] [illegible]. ಈ [illegible] [illegible]

ಇರುತ್ತವೆ. ಮೊತ್ತಮೊದಲು ಇವೆಲ್ಲ ವಿಜಯನಗರರಾಜ್ಯಕ್ಕೆ ಅಂಕಿತವಾಗಿದ್ದವು, ಮುಂದೆ ಬಾಮನೀರಾಜ್ಯದ ಸ್ವಾಧೀನದಲ್ಲಿ ಬಂದವು. (೧೪೨೯). ಬಾಮನೀರಾಜ್ಯವು ಒಡೆದಬಳಿಕ ನಿಜಾಮಶಾಹಿಗೆ ಅಂಕಿತವಾದವು. ಬಳಿಕ ಇವುಗಳ ದೆಸೆಯಿಂದ ಗುಜರಾಥದ ಸುಲ್ತಾನನೂ ಪೋರ್ತುಗೀಜರೂ ಹೋರಾಡಿದರು. ಬಳಿಕ ಪೋರ್ತುಗೀಜರು ಚೌಲದಲ್ಲಿ ತಮ್ಮ ವಸತಿಯನ್ನು ಸ್ಥಾಪಿಸಿದರು. ೧೬೦೦ನೆಯ ಇಸವಿಯಲ್ಲಿ ಅಕಬರಬಾದಷಹನು ಅಹಮ್ಮದನಗರದ ಮೇಲೆ ಸ್ವಾರಿಮಾಡಿದ ಕಾಲಕ್ಕೆ ಜಂಜೀರೆಯು ಮೊಗಲರ ಕೈವಶವಾಯಿತು. ಆತನು ದಿಲ್ಲಿಯ ಕಡೆಗೆ ಹೋದಕೂಡಲೆ ಮಲಿಕ ಅಂಬರನು ಅಹಮ್ಮದನಗರ ಸಹಿತವಾಗಿ ಜಂಜೀರೆಯನ್ನು ತನ್ನ ಕೈಕೆಳಗೆ ತಂದುಕೊಂಡನು. ಮುಂದೆ ಶಹಾಜಹಾನ ಬಾದಶಹನು ೧೬೩೬ರಲ್ಲಿ ಮತ್ತೆ ಇವನ್ನೆಲ್ಲ ಸ್ವಾಧೀನಪಡಿಸಿಕೊಂಡನು.

ಮೊಗಲರಿಗೂ ವಿಜಾಪುರದ ಸುಲ್ತಾನರಿಗೂ ಮರಾಟರಿಗೂ ತಾವು ಸಂಪಾದಿಸಿದ ದಕ್ಷಿಣದ ರಾಜ್ಯವು ಸುರಕ್ಷಿತವಾಗಿರಲಿಕ್ಕೆ ಜಂಜೀರಾ ಬಂದರವು ಆಯಕಟ್ಟಿನ ಸ್ಥಾನವೆಂದು ಗೊತ್ತಾಗಿತ್ತು. ಯಾಕಂದರೆ ಪಶ್ಚಿಮದ ಕಡೆಯಿಂದ ನವೀನ ಆಯುಧಗಳೊಂದಿಗೆ ಸಜ್ಜಾಗಿ ಪೋರ್ತುಗೀಜರು ಇಂಗ್ಲಿಷರು ಮೊದಲಾದವರು ಬಂದು ಅಲ್ಲಲ್ಲಿ ತಮ್ಮ ವ್ಯಾಪಾರದ ವಖಾರಗಳನ್ನು ಸ್ಥಾಪಿಸಿಕೊಂಡು ಅವಶ್ಯಕಂಡಾಗ ಯುದ್ಧಗಳನ್ನು ಮಾಡತೊಡಗಿದ್ದರು. ಆಗಿನಕಾಲಕ್ಕೆ ವಿದೇಶೀಯರು ಸುರತ, ದಮಣ, ಮುಂಬಯಿ, ಕೋಚೀನ, ಕಾಲಿಕತ್ತು ಇತ್ಯಾದಿ ಕಡೆಗಳಲ್ಲಿ ತಮ್ಮ ವಖಾರಗಳನ್ನು ಸ್ಥಾಪಿಸಿ ಪ್ರಬಲರಾಗಿ ವ್ಯಾಪಾರವನ್ನು ನಡೆಯಿಸಿದ್ದರು. ಆದುದರಿಂದ ಹಡಗುಪಡೆಗೆ ಪ್ರಾಧಾನ್ಯವು ಪ್ರಾಪ್ತವಾಗಿತ್ತು. ಪೋರ್ತುಗೀಜರು. ಇಂಗ್ಲಿಷರು, ಮರಾಟರು, ಮೊಗಲರು ಇವರೆಲ್ಲರೂ ತಮ್ಮ ತಮ್ಮ ಪರಿಸ್ಥಿತಿಗೆ ತಕ್ಕಂತೆ ಹಡಗುಪಡೆಯನ್ನು ಇಟ್ಟುಕೊಂಡಿದ್ದರು. ಜಂಜೀರೆಯು ಹಡಗುಪಡೆಯು ವಿಜಾಪುರದವರ ಕಡೆಯಿಂದ ಮೊಗಲರ ಸ್ವಾಧೀನವಾದಮೇಲೆ ಮರಾಟರು ಅದನ್ನು ತೆಗೆದುಕೊಳ್ಳಲಿಕ್ಕೆ ವಿಶ್ವಪ್ರಯತ್ನ ಮಾಡಿದ ಸಂಗತಿಯು ಮುಂದೆ ವರ್ಣಿತವಾಗಿದೆ.

ಆಫ್ರಿಕದ ಈಶಾನ್ಯ ಮೂಲೆಯಲ್ಲಿ ಅಬಸೀನಿಯಾ ಎಂಬದೊಂದು ದೇಶವಿದೆ. ಆದುದರಿಂದ ಅಲ್ಲಿಯ ಜನರಿಗೆ ಹಬಸೀ ಎಂಬ ಹೆಸರು ವಾಡಿಕೆಯಾಗಿರುವದು. ಅವರು ಸೈಯದೀ ಮುಸಲ್ಮಾನರು. ಸೈಯದೀ ಎಂಬ ಹೆಸರೇ ರೂಪಾಂತರವಾಗಿ

ಸಿದ್ದೀ ಎಂದು ಮಾರ್ಪಟ್ಟಿತು. ಜಂಜೀರೆಯಲ್ಲಿ ಬಾಮನೀ ರಾಜ್ಯವು ಸ್ಥಾಪಿತವಾದಮೇಲೆ ಈ ಸಿದ್ದೀ ಜನರು ಆ ರಾಜ್ಯದಲ್ಲಿ ಬಂದು ಚಾಕರಿಗಾಗಿ ನಿಲ್ಲತೊಡಗಿದರು. ಅವರು ಆಫ್ರಿಕದಿಂದ ಚೌಲ, ದಾಬೋಳ ಇತ್ಯಾದಿ ಬಂದರಗಳ ಮಾರ್ಗವಾಗಿ ಬಾಮನೀ ರಾಜ್ಯಕ್ಕೆ ಬರುತ್ತಿದ್ದರು. ಎಷ್ಟೋಜನರು ಗುಲಾಮರಾಗಿಯೂ ಈ ಕಡೆಗೆ ಬರುತ್ತಿದ್ದರು. ಅವರು ಭವ್ಯ ಆಕಾರದವರೂ ಶಕ್ತಿವಂತರೂ ಆದುದರಿಂದ ಸೈನಿಕರ ಕೆಲಸದಲ್ಲಿ ತೊಡಗಿಕೊಳ್ಳುತ್ತಿದ್ದರು. ಮತ್ತೆ ಕೆಲವರು ನಾವಿಕತನದಲ್ಲಿಯೂ ಸೇರಿಕೊಳ್ಳುತ್ತಿದ್ದರು. ಬಾಮನೀ ರಾಜ್ಯವು ಒಡೆಯುವಕಾಲಕ್ಕೆ ಗೋವೆಯ ಯಾಕೂತಖಾನ ಸಿದ್ದೀ ಎಂಬವನು ಬಾಮನೀ ರಾಜ್ಯದ ಪರವಾಗಿ ಜಂಜೀರೆಯ ಹಡಗುಪಡೆಯ ಮುಖ್ಯಸ್ಥನಾಗಿ ಅಲ್ಲಿಯ ನವಾಬನಾಗಿದ್ದನು. ಬಹುತರ ಹಡಗುಪಡೆಯಲ್ಲೆಲ್ಲ ಸಿದ್ದಿಗಳೇ ಇದ್ದರು. ಮುಂದೆ ನಿಜಾಮಶಾಹಿಯ ಆಧಿಪತ್ಯಕ್ಕೆ ಒಳಗಾದಮೇಲೆಯೂ ಜಂಜೀರಾ ದಂಡರಾಜ ಪುರೀ ಇವೆರಡೂ ಸ್ಥಳಗಳಲ್ಲಿದ್ದ ಹಡಗುಪಡೆಗಳು ಸಿದ್ದೀ ಮನೆತನದವರ ಕೈಯಲ್ಲಿಯೇ ಇದ್ದವು. ಈ ನವಾಬರು ಕೊಂಕಣ ಪ್ರಾಂತವನ್ನು ತಮ್ಮ ಕೈಯಲ್ಲಿಟ್ಟುಕೊಂಡು ಹಡಗುಪಡೆಯ ಕೆಲಸವನ್ನು ನೋಡಿಕೊಳ್ಳುತ್ತಿದ್ದರು. ಈ ನವಾಬಗಿರಿಯು ಅವರ ದೇಶದ ಪದ್ಧತಿಯಂತೆ ನಡೆಯುತ್ತಿತ್ತು. ಅಂದರೆ ನವಾಬನ ತರುವಾಯ ಅವನ ಮಗನಿಗೆ ಪಟ್ಟವು ನಡೆಯದೆ ಸಿದ್ದೀಮನೆತನದಲ್ಲಿ ಯಾವನು ಬಲಿಷ್ಠನೂ ನಿಪುಣನೂ ಆಗಿರುವನೋ ಅವನಿಗೇ ಅಧಿಕಾರವು ದೊರೆಯುತ್ತಿತ್ತು. ಮುಂದೆ ವಿಜಾಪೂರದ ಕೈಕೆಳಗೆ ಬಂದಾಗ ಅಂಬರಸಿದ್ದೀ ಎಂಬವನು ಜಂಜೀರೆಯ ನವಾಬನಾಗಿದ್ದನು. ಅವನ ತರುವಾಯ ಯುಸೂಫ ಸಿದ್ದೀ ಎಂಬವನು ಇದೇ ರೀತಿಯಾಗಿ ನವಾಬನಾದನು.

೧೬೪೮ರಲ್ಲಿ ಈ ಸಿದ್ದೀ ನವಾಬನ ಕೂಡ ಕಾಳಗವಾಡಿ ಶಿವಾಜಿ ಮಹಾರಾಜನು ಘೋಸಾಳಗಡ ಕೋಟೆಯನ್ನು ತೆಗೆದುಕೊಂಡನು. ೧೬೬೧ ನೆಯ ಇಸವಿಯವರೆಗೂ ಮರಾಟರು ಸತತ ಪ್ರಯತ್ನಮಾಡಿ ಅಲ್ಲಿಯ ಫತ್ತೇಖಾನ ಸಿದ್ದಿಯನ್ನು ಸೋಲಿಸಿ ದಂಡಾರಾಜಪುರಿ ಹಡಗುಪಡೆಯನ್ನು ಸ್ವಾಧೀನಪಡಿಸಿಕೊಂಡರು. ೧೬೭೭ರ ಸುಮಾರಕ್ಕೆ ಶಿವಾಜಿಯು ರಾಜಪುರಿ, ಘೇರಿಯಾ (ವಿಜಯದುರ್ಗ)ಗಳಿಂದ ಉತ್ತರಕ್ಕೆ ದಮಣಪವರೆಗೂ ಸಮುದ್ರ ತೀರವನ್ನು ತನ್ನ ಕೈಯೊಳಗೆ ತೆಗೆದುಕೊಂಡಿದ್ದನು. ಜಂಜೀರಾ,

ಮುಂಬಯಿ ಬಂದರಗಳು ಮಾತ್ರ ಆತನ ಆಧಿಪತ್ಯಕ್ಕೆ ಒಳಪಟ್ಟಿದ್ದಿಲ್ಲ. ಜಂಜೀರಾ ಬಂದರವು ಒಳ್ಳೇ ಭದ್ರವಾಗಿತ್ತು. ಆದುದರಿಂದ ಮುಂಬಯಿಯ ಇಂಗ್ಲಿಷರಾದರೂ ಜಂಜೀರೆಯು ತಮ್ಮ ತಾಣ್ಯವಾದರೆ ನೆಟ್ಟಗಾಗುವದೆಂದು ಬಯಸುತ್ತಿದ್ದರು. ೧೬೭೦ನೆಯ ಇಸವಿಯಲ್ಲಿ ಮರಾಟರು ಪತ್ತೇಖಾನ ಸಿದ್ದಿಯನ್ನು ಒಳ್ಳೇ ಜೇರಿಗೆ ತಂದದ್ದರಿಂದ ಅವನು ಜಂಜೀರೆಯನ್ನು ಮರಾಟರಿಗೆ ಕೊಡಲಿಕ್ಕೆ ಸಮ್ಮತಿಪಟ್ಟನು. ಈ ಸಂಗತಿಯು ಅವನ ಅನುಯಾಯಿಗಳಿಗೆ ರುಚಿಸದೆ ಪತ್ತೇಖಾನನನ್ನು ಬಂದಿಯಲ್ಲಿಟ್ಟರು. ಸಂಬೂಳ ಸಿದ್ದಿ ಎಂಬವನು ತಾನು ನವಾಬನಾಗಿ ವಿಜಾಪುರದವರ ಕೈಬಿಟ್ಟು ಇನ್ನು ಮೇಲೆ ಮೊಗಲರ ಆಧಿಪತ್ಯವನ್ನು ಒಪ್ಪಿಕೊಳ್ಳುವೆನೆಂದು ದಿಲ್ಲಿಯ ಔರಂಗಜೇಬ ಬಾದಶಹನಿಗೆ ಅರಿಕೆ ಮಾಡಿಕೊಂಡನು. ಔರಂಗಜೇಬನು ಈ ಮಾತನ್ನು ಸಮ್ಮತಿಸಿ ವಿಜಾಪುರದವರು ಕೊಟ್ಟ ವಜೀರ ಪದವಿಯ ಬದಲಾಗಿ ‘ಯಾಕೂತಖಾನ’ ಎಂಬ ಬಿರುದನ್ನು ಕೊಟ್ಟನು. ಮತ್ತು ಬಲಿಷ್ಠರಾದ ಅನೇಕ ಸಿದ್ದೀ ಸರದಾರರಿಗೆ ಆಶ್ರಯಕೊಟ್ಟು ತನ್ನ ರಾಜ್ಯದಲ್ಲಿ ದೊಡ್ಡ ದೊಡ್ಡ ಅಧಿಕಾರದ ಸ್ಥಳಕ್ಕೆ ನಿಯಮಿಸಿಕೊಂಡನು. ಅಂದಿನಿಂದ ಜಂಜೀರೆಗೆ ಸಿದ್ದೀ ಕಾಸಮನೂ ರಾಜಾಪುರಕ್ಕೆ ಸಿದ್ದೀಖೈರಿಯಾತನೂ ನವಾಬರಾದರು.

ಮೊಗಲರ ಆಶ್ರಯದೊರೆದ ಬಳಿಕ ಸಿದ್ದೀ ನವಾಬರು ಮರಾಟರ ಕೂಡ ಒಳ್ಳೇ ಭರದಿಂದ ಯುದ್ಧಮಾಡತೊಡಗಿದರು. ಇತ್ತ ಮರಾಟರೂ ತಮ್ಮ ಹಡಗುಪಡೆಯನ್ನು ಸಜ್ಜುಗೊಳಿಸಿದರು. ಒಮ್ಮೆ ಸಿದ್ದೀ ನವಾಬನು ರಾತ್ರಿಯಲ್ಲಿ ಹಲ್ಲೆಮಾಡಿ ಮರಾಟರ ಹಡಗುಪಡೆಯ ಮದ್ದಿನ ಕೋಣೆಗೆ ಬೆಂಕಿಹಚ್ಚಿ ಅಲ್ಲಿದ್ದ ಮರಾಟರನ್ನೆಲ್ಲ ಸೆರೆಹಿಡಿದನು. ಮರಾಟರು ಎದೆಗುಂದದೆ ಮುಂಬಯಿಯಲ್ಲಿದ್ದ ಇಂಗ್ಲಿಷರನ್ನು ತನ್ನಕಡೆಗೆ ಒಲಿಸಿಕೊಳ್ಳುವ ಪ್ರಯತ್ನನಡಿಸಿದರು. ಮುಂಬಯಿ ಸಮೀಪದಲ್ಲಿದ್ದ ಕುರ್ಲಾಪ್ರದೇಶವೂ ಪೇಣ ಪನವೇಲಗಳೂ ಉರಣ ಪ್ರದೇಶವೂ ಮರಾಟರ ಕೈಯೊಳಗಿದ್ದವು. ಆಸ್ಥಳಗಳಲ್ಲಿ ಇಂಗ್ಲಿಷರ ವ್ಯಾಪಾರವು ಚೆನ್ನಾಗಿತ್ತು. ೧೬೭೪ರಲ್ಲಿ ಕಾಸಮ ಸಿದ್ಧಿಯು ಒಮ್ಮಿಂದೊಮ್ಮೆ ಮುಂಬಯಿಯ ನೆರೆಯಲ್ಲಿದ್ದ ಮಾಜಗಾವ ಬಂದರದಲ್ಲಿ ತನ್ನ ಬೀಡು ಬಿಟ್ಟನು. ಹಾಗೆ ಇಳಿಯಲಿಕ್ಕೆ ಸುರತದ ಮೊಗಲ ಸುಭೇದಾರನು ಮುಂಬಯಿಯಲ್ಲಿಯ ಇಂಗ್ಲಿಷ ಪ್ರೆಸಿಡೆಂಟನಿಂದ ಅಪ್ಪಣೆಪಡೆದುಕೊಂಡಿದ್ದನು.

ಈ ಸಂಗತಿಯು ಮರಾಟರಿಗೆ ರುಚಿಸಲಿಲ್ಲ. ಒಮ್ಮೆಲೆ ಸಿದ್ದಿಯ ಮೇಲೆ ಏರಿಹೋಗಬೇಕೆಂದರೆ ಅಲ್ಲಲ್ಲಿ ಇಂಗ್ಲಿಷರ ಹಾಗು ಪೋರ್ತುಗೀಜರ ಪ್ರದೇಶಗಳು ಅಡ್ಡವಾಗಿದ್ದವು. ಅಲ್ಲದೆ ಇಂಗ್ಲಿಷರ ಮತ್ತು ಪೋರ್ತುಗೀಜರ ಹಡಗುಪಡೆಗಳು ಒಳ್ಳೇ ಭದ್ರವಾಗಿದ್ದವು. ಅವುಗಳಂತೆ ತಮ್ಮ ಹಡಗುಪಡೆಯನ್ನು ಭದ್ರಪಾಗಿಟ್ಟುಕೊಂಡಹೊರ್ತು ಗತ್ಯಂತರವಿಲ್ಲೆಂದು ಮರಾಟರು ಅರಿತುಕೊಂಡರು. ಅದರಂತೆ (ಮರಾಟರೂ) ಯತ್ನ ನಡೆಯಿಸಿ ಸಿದ್ದೀ ನವಾಬನ ಜಂಜೀರೆಯ ಮೇಲೆ ಹೊಸದಂಡನ್ನು ಕಳಿಸಿದರು. ಆದರೂ ಸಿದ್ದೀಕಾಸಮನು ಮುಂಬಯಿ ಸೆರೆಯ ಮಾಜಗಾವದ ತಳವನ್ನು ಕಿತ್ತಲಿಲ್ಲ. ಜಂಜೀರೆಯು ಒಳ್ಳೇ ಭದ್ರವಾದ ಸ್ಥಳವಾದುದರಿಂದ ಅದರ ಮೇಲೆ ಮರಾಟರ ಕೈಸಾಗಲೊಲ್ಲದು. ಈ ಕೆಲಸಕ್ಕಾಗಿ ಮರಾಟರು ಒಂದೇಸವನೆ ಯತ್ನನಡೆಯಿಸಲಾರಂಭಿಸಿದರು. ಜಂಜೀರೆ ಬಂದರವೊಂದು ಕೈವಶವಾದರೆ ಇರಾಣ, ಪೂರ್ವಆಫ್ರಿಕಾ ಮೊದಲಾದ ದೇಶಗಳ ವ್ಯಾಪಾರಗಳು ತನ್ನಕೈವಶವಾಗುವವೆಂಬ ಮಾತು ಮರಾಟರಿಗೆ ಮನದಟ್ಟಾಗಿತ್ತು. ಇಂಥ ಆಯತ ಸಮಯಕ್ಕೆ ಶಿವಾಜಿಯು ದೇಹವಿಟ್ಟದ್ದರಿಂದ ಆ ಮಾತು ಅಷ್ಟಕ್ಕೇ ನಿಂತಿತು. ಮತ್ತು ಜಂಜಿರೆಯು ಇಂದಿನವರೆಗೂ ಅದೇ ಸಿದ್ದೀ ಮನೆತನದ ನವಾಬರ ಕೈಯಲ್ಲಿಯೇ ಉಳಿದದೆ.

ಕ ವಿ ತೆ

ಲೇಖಕ :—ಜಿ. ಎಮ್. ಸಾತೇನಹಳ್ಳಿ, ಉಪಶಿಕ್ಷಕ ಪ್ರ್ಯಾ. ಸ್ಕೂ ಧಾರವಾಡ

(ಕಳೆದಕಿಂಗಳಿನಿಂದ ಮುಂದುವರಿದುದು.)

ಕವಿತೆ ಕಲಿಸುವ ಪದ್ಧತಿಯನ್ನು ಕುರಿತು ಹಿಂದೆ ಕೆಲವು ಮಾತುಗಳನ್ನು ಹೇಳಿದ್ದೇವೆ. ಮುಖ್ಯವಾಗಿ ಕವಿತೆ ಕಲಿಸುವ ನೂತನ ಪದ್ಧತಿಯ ಉದ್ದೇಶವನ್ನು ಲಕ್ಷದಲ್ಲಿಟ್ಟುಕೊಂಡರೆ ತೀರಿತು ; ತಮತಮಗೆ ಅನುಕೂಲವಾಗುವಂತೆ ಪದ್ಧತಿಯನ್ನು ಹೆಚ್ಚು ಕಡಿಮೆ ಮಾಡಿಕೊಳ್ಳುವದು ಶಿಕ್ಷಕರ ಕೈಯಲ್ಲಿರುವದು. ಆದರೆ ಕವಿತೆಯು ಒಂದು ಕಲೆಯಾಗಿರುವದರಿಂದ ಅದನ್ನು ಸವಿಯಾಗಿ ಅನ್ನಲಿಕ್ಕೆ ಮಾತ್ರ ಶಿಕ್ಷಕನಿಗೆ ಬರುತ್ತಿರಬೇಕು. ಹಾಗೆ ಅನ್ನಲಿಕ್ಕೆ ಬರದಿದ್ದರೆ ಅಸ್ವಾರಸ್ಯ ಹುಟ್ಟುವದು. ಬೇರೆ

ಬೇರೆ (ಭಾಮಿನಿ, ಕಂದ, ಷಟ್ಪದಿ, ದ್ವಿಪದಿ, ತ್ರಿಪದಿ ಇ.) ಕವಿತೆಗಳನ್ನು ಅನ್ನ ತಕ್ಕ ಪದ್ಧತಿಗಳನ್ನು ಶಿಕ್ಷಕನು ಬಲ್ಲವರಿಂದ ತಿಳಿದಿರಬೇಕು. ರಾಗಗಳು ಹತ್ತು ವದು ಕಠಿಣ; ಅದಕ್ಕಾಗಿ ರೂಢಿ ಮಾಡಬೇಕಾಗುವದು. ಕವಿತೆಗಳನ್ನು ಇಂಪಾಗಿ ಅಂದರೇ ವಿದ್ಯಾರ್ಥಿಗಳು ಅತ್ತಕಡೆಗೆ ಲಕ್ಷ್ಯಕೊಡುವರು. ಅದರ ಭಾವಾರ್ಥ ತಿಳಿದಬಳಿಕಂತೂ ವಿದ್ಯಾರ್ಥಿಗಳಿಗೆ ಮತ್ತಿಷ್ಟು ಹುರುಪು ಬರುವದು. ಅವರೂ ಹಾಡತೊಡಗುವರು. ಸುಮ್ಮನೆ ಕುಳಿತಾಗ ಸಹ ಅವರು ಹಾಡುವದುಂಟು. ಈ ಪ್ರಕಾರದ ಕವಿತೆಯ ಮೇಲಣ ಪ್ರೇಮವನ್ನು ಉಂಟುಮಾಡುವದೇ ಕವಿತಾ ಪಾಠದ ಮುಖ್ಯೋದ್ದೇಶವಾಗಿರುವದು.

ದಿಗ್ದರ್ಶನಕ್ಕಾಗಿ ಒಂದು ಕವಿತಾಪಾಠದ ಟಿಪ್ಪಣಿಯನ್ನು ಇಲ್ಲಿ ಕೊಟ್ಟಿದೆ.

ಕವಿತಾಪಾಠದ ಟಿಪ್ಪಣಿ

ಇಯತ್ತೆ—ಆರನೆಯದು

ವಿಷಯು—ಕವಿತೆ (೪೭ನೆಯು ಪಾಠ ಪದ್ಯ ೧-೨)

ಉದ್ದೇಶ—ಕವಿತೆಯ ಭಾವವನ್ನು ತಿಳಿಸಿ ಆ ಕವಿತೆಯ ವಿಷಯದಲ್ಲಿ ಅಭಿರುಚಿಯನ್ನು ಹುಟ್ಟಿಸುವದು.

ಉಪಕರಣ—ಯಜ್ಞಾಶ್ವದ ಚಿತ್ರ

ಉಪೋದ್ಘಾತ—ವಾಲ್ಮೀಕಿ ಋಷಿಗಳ ಆಶ್ರಮದಲ್ಲಿ ಸೀತಾದೇವಿಯು ಬಂದು ನಿಂತ ಕಥೆಯು ನಿಮಗೆ ಗೊತ್ತದೆ. ಸೀತೆಯ ಮಕ್ಕಳ ಹೆಸರೇನು? ಲವಕುಶರಿಗೆ ವಾಲ್ಮೀಕಿ ಋಷಿಗಳು ಏನೇನು ವಿದ್ಯಾಭ್ಯಾಸಮಾಡಿಸಿದರು? ಯುದ್ಧ ವಿದ್ಯೆಯನ್ನು ಅವರಿಗೆ ಯಾಕೆ ಕಲಿಸಿರಬಹುದು? ರಾಮಚಂದ್ರನ ಯಜ್ಞಾಶ್ವವು ದೇಶದೇಶ ತಿರುಗಿ ವಾಲ್ಮೀಕಿಯ ಆಶ್ರಮಕ್ಕೆ ಬಂದ ಬಳಿಕ ಏನಾಯಿತೆಂಬದು ಈ ಕವಿತೆಗಳಲ್ಲಿರುವದು. ಅವನ್ನು ಓದೋಣ.

೨—೨೩೫

ಭಾಗ ಹಾಗು ವಿಷಯ | ಕ್ರಮ | ಕರಿಹಲಿಗೆಯ ಉಪಯೋಗ

೧ ಶಿಕ್ಷಕನ ಕವಿತಾ ವಾಚನ

೧. ಎತ್ತಣತುರಂಗವಿಿದು ಪೊಕ್ಕು ಪೂದೋಟವಂ ।
ತೊತ್ತಳದುಳಿವುದು ವಾಲ್ಮೀಕಿ ಮುನಿನಾಥ ನೀ ।
ಪೊತ್ತು ಮಾರ್ಕೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರಿಸಲಾಗಿ ॥
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ ।
ಸುತ್ತೆ ಹಯದೆಡೆಗೆ ನಡೆತಂದು ನೋಡಲ್ಕದರ ।
ನೆತ್ತಿಯೊಳ್ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳು
ತಿರ್ದನು ॥

೨. ಉರ್ವಿಯೊಳ್ ಕೌಸಲೆಯ ಪಡೆದಕುವರಂ ರಾಮ ।
ನೋರ್ವನೇ ವೀರನಾತನ ಯಜ್ಞತುರಗವಿಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವ ನೋಡಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪರೆ ತನ ।
ಗುರ್ವ ತೋಳ್ಗಳಿವೇತಕೆಂದು ಸಲೆ ವಾಸೆಯಂ ತೊಟ್ಟು ಲವನುರಿ
ದೆದ್ದನು ॥

ಸಾವಕಾಶವಾಗಿಯೂ ಸ್ಪಷ್ಟವಾಗಿಯೂ ಇಂಪಾಗಿಯೂ ತಕ್ಕ ಸ್ಥಳಗಳಲ್ಲಿ ನಿಲ್ಲುತ್ತ ಶಿಕ್ಷಕನು ಅನ್ನುವದು. (ತಾಳ ರಾಗಗಳನ್ನು ಅನುಸರಿಸಿ ಅನ್ನುವದು ಹೆಚ್ಚು ಪರಿಣಾಮಕಾರಿಯಾಗುವದು)

ಸೂಚನೆ :— ಈ ಪಾಠಕ್ಕೆ ಅವಶ್ಯವಿದ್ದ ಕಥಾಭಾಗ ಹಾಗು ಅಶ್ವಮೇಧಯಜ್ಞ ಮುಂ. ಗಳ ಮಾಹಿತಿಯನ್ನು ಮೊದಲೇ ಮಾಡಿಕೊಡುವದು ನೆಟ್ಟಗೆ.

೨ ಭಾವಯುಕ್ತ ಕವಿತಾ ವಾಚನ

ಅವೇ ಪದ್ಯಗಳು

ಎತ್ತಣ ತುರಂಗವಿಂದು।
ಪೊಕ್ಕು ಪೂದೋಟಮಂ ತೊತ್ತಳದುಳಿವುದು।

ಈ ರೀತಿಯಾಗಿ ವಾಕ್ಯ ಪೂರ್ಣವಾಗುವ ಸ್ಥಳಗಳಲ್ಲಿ ನಿಂತು ಧಾಟಿಯಿಂದಲೇ ಅನ್ನುವದು.

೧. ತೊತ್ತಳದುಳಿವುದು (ಹಾವ ಭಾವ ತೋರಿಸುವದು)
ವಾಲ್ಮೀಕಿಮುನಿನಾಥನು..
ಪೋದನು (ಇಲ್ಲಿ ಹಳಹಳಿ ತೋರಿಸುವದು)
ಮತ್ತೆ ವರುಣ.. ಮುಳಿದಪನು (ಇಲ್ಲಿ ಕರ್ತವ್ಯಜಾಗ್ರತೆಯ ಭಾವತೋರಿಸುವದು)
ಪಟ್ಟದಲಿಖಿತಮಂ.. ಓದಿಕೊಳುತಿರ್ದನು
(ಇಲ್ಲಿ ಆಶ್ಚರ್ಯ)

೨. ಓರ್ವನೇ ವೀರನು..ನಿವರ್ಹಿಸಲಾರ್ಪರಾರಾದೊಡಂ ತಡೆಯಲಿ
ಇವುಗಳನ್ನು ಆಘಾತಕೊಟ್ಟು ಅನ್ನುವದು. ಗರ್ವಮಂ ಬಿಡಿಸದಿರ್ದೊಡೆ (ಇಲ್ಲಿ ಅಸಹನ ಭಾವ ತೋರಿಸುವದು)

೨ ಭಾವಜ್ಞಾನ ಶಬ್ದಾರ್ಥ ಜ್ಞಾನ

೧ನೆಯ ಪದ್ಯ—

ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು !

(ಮೇಲಿನ ಭಾವವನ್ನು ಪುಷ್ಟೀಕರಿಸುವ ಅಂಗ ವಾಕ್ಯಗಳು)

೧. ಎತ್ತಣ ತುರಂಗ. . . . ತೊತ್ತಳದುಳಿವುದು

೨. ವಾಲ್ಮೀಕಿ ಮುನಿನಾಥ .. ..
ಸೇವಿಸಿ ಪೋದನು

೩. ಮತ್ತೆ ವರುಣನ ಲೋಕದಿಂ ಬಂದು ಮುಳಿಪನು

ಲವನು ಏನು ಮಾಡಹತ್ತಿದನು? ಏನೇನು ಅನ್ನುತ್ತ ಕುದುರೆಯ ಸಮೀಪಕ್ಕೆ ಬಂದನು ?

ಅವಶ್ಯವಾದ ಶಬ್ದಗಳ ಅರ್ಥವನ್ನು ಕರಿಯಹಲಿಗೆಯ ಮೇಲೆ ಬರೆಯುತ್ತ (ಈ ಶಬ್ದಾರ್ಥಗಳನ್ನು ಮೊದಲೇ ಕರಿಹಲಿಗೆಯ ಮೇಲೆ ಬರೆದಿಟ್ಟಿದ್ದರೂ ಒಳ್ಳೆಯದಾಗುವದು.) ಈ ಒಂದೊಂದೇ ತುಣಕುಗಳ ಭಾವವನ್ನು ಕೇಳಿಕೊಳ್ಳುವದು.

ಈ ವಾಕ್ಯಗಳ ಭಾವವನ್ನು ಮುಖ್ಯಭಾವಕ್ಕೆ ಹೊಂದಿಸಿ ಒಟ್ಟು ಭಾವಾರ್ಥ ಕೇಳಿಕೊಳ್ಳುವದು.

(ಈ ವಾಕ್ಯಗಳನ್ನು ಭಾವಕ್ಕೆ ಸರಿಯಾಗಿ ಅನ್ನುವಾಗ ಹಾವಭಾವ ಮಾಡಿ ಅನುಕರಣ ಮಾಡಿಸುವದು.

ಪಟ್ಟದಲಿಖಿತ = ಪಟ್ಟಿಯ ಮೇಲಿನ ಬರೆಹ

ತೊತ್ತಳದುಳಿವುದು = ಕಿಚಿಪಚಿ ತುಳಿಯುವದು

ಆರ್ಕೈವುದು = ಕಾಯಬೇಕು

ಅಬ್ಧಿಪ = ವರುಣ

ಮುಳಿದಪನು = ಸಿಟ್ಟಾಗುವನು

ಈ ಭಾವಾರ್ಥ ತಿಳಿಸುವಾಗ ಕರ್ತವ್ಯದಕ್ಷತೆ ಮುಂತಾದ ಮನೋಭಾವನೆಗಳು ಹುಡುಗರ ಮನಸ್ಸಿನಲ್ಲಿ ನಡುವಂತೆ ಮಾಡುವದು (ಒಂದೊಂದು ವಾಕ್ಯವನ್ನು ಅಂದು ಅದರ ಭಾವವನ್ನು ಕೇಳಿ ಕೊಳ್ಳಬೇಕು.)

ಸೂ.—ಇದೇ ಪ್ರಕಾರ ಮುಂದಿನ ಕವಿತೆಯನ್ನು ಕಲಿಸುವದು. ಮೊದಲಿನ ಕವಿತೆ ಮುಗಿದ ಬಳಿಕ ಕುದುರೆಯ ಶಿರೋಭಾಗದ ಪಟದ ಮೇಲೆ ಏನು ಬರೆದಿತ್ತು ? ಎಂದು ಕೇಳಿ ಕುತೂಹಲ ಹುಟ್ಟಿಸಿ ಮುಂದಿನ ಕವಿತೆಗೆ ಸಾಗಬೇಕು.

೪ ಸಾಮೂಹಿಕ ಕವಿತಾ ವಾಚನ

ಇವೇ ಪದ್ಯಗಳು

ಶಿಕ್ಷಕನು ವಿದ್ಯಾರ್ಥಿಗಳೊಡನೆ ಪದ್ಯವನ್ನು (ಸಾಧ್ಯವಾದರೆ ತಾಳ ರಾಗಗಳೊಡನೆ) ಇಂಪಾಗಿ ಅನ್ನುವದು. ವಿದ್ಯಾರ್ಥಿಗಳಿಂದಲೇ ಅನ್ನಿಸುವದು.

೧೯೩೬ ನೆಯ ಇಸವಿಯ ಎಪ್ರಿಲ ತಿಂಗಳಲ್ಲಾದ ಗಂಡು ಮಕ್ಕಳ ವ್ಹ. ಫಾ. ಪರೀಕ್ಷೆಯ ಪರಿಣಾಮ

(ಕಳೆದ ಸಂಚಿಕೆಯಿಂದ ಮುಂದೆ ಸಾಗುವದು)

ವಿಜಾಪುರ ಸೆಂಟರ

ಕನ್ನಡ

ನಂ.	ಹೆಸರು.	ಗುಣ
೧೩೨	ಮಾಸಿಂಗಪ್ಪ ಚನಮಲ್ಲಪ್ಪ ನಾಗ್ಯಾಸ	೨೭೨
೧೩೨	ನೀಲಕಂತ ಮೇಲಪ್ಪ ಕುಲಕರ್ಣಿ	೨೭೨
೧೩೨	ಪರಸಪ್ಪ ಚಂದ್ರಾಮಪ್ಪ ನಿಂಬಾಳ	೨೭೨
೧೩೨	ರೇವಣಸಿದ್ಧಯ್ಯಾ ಮಲ್ಲೇಶಯ್ಯಾ ಹಿರೇಮಠ	೨೭೨
೧೩೬	ಭೀಮಪ್ಪ ಗುರಪ್ಪ ಅಗಸರ	೨೭೧
೧೩೬	ಈರಯ್ಯಾ ಸಂಗಯ್ಯಾ ಮಠ	೨೭೧
೧೩೬	ಕಳಕನಗೌಡ ಕಲ್ಲನಗೌಡ ಹಿರೇಗೌಡರ	೨೭೧
೧೩೬	ಮಲಗೌಡ ಚನಗೌಡ ಪಾಟೀಲ	೨೭೧
೧೩೬	ನಾರಾಯಣ ಕೃಷ್ಣ ಕುಲಕರ್ಣಿ	೨೭೧
೧೩೬	ರಂಗಪ್ಪ ಹಣಮಪ್ಪ ಕೋವಳ್ಳಿ	೨೭೧
೧೩೬	ಯಲಗುರ್ದ ಕೃಷ್ಣ ಜಾಲೀಹಾಳ	೨೭೧
೧೪೪	ಅಡಿವೆಯ್ಯ ಮಡಿವಾಳಯ್ಯ ಮಠ	೨೭೦
೧೪೪	ಬಸವಂತಪ್ಪ ಮಡಿವಾಳಪ್ಪ ಪಾಟೀಲ	೨೭೦
೧೪೪	ಬಸಯ್ಯ ಸಿದ್ರಾಮಯ್ಯ ಮಠ	೨೭೦
೧೪೪	ಗೋವಿಂದ ದತ್ತಂಭಟ್ಟ ಅಗ್ನಿಹೋತ್ರಿ	೨೭೦
೧೪೪	ಸಂಗಪ್ಪ ಹೊಳಿಯಪ್ಪ ಬೊಮ್ಮಂಗಿ	೨೭೦
೧೪೯	ಅಕಬರಲಿ ಅಜಮುಸಾ ಮುಜಾವರ	೨೬೯
೧೫೦	ಗುರುಮೂರ್ತೆಯ್ಯ ನಿಜಲಿಂಗಯ್ಯ ಮಠ	೨೬೮

೧೫೦	ಕೃಷ್ಣಾಜಿ ಸಾಂಭಟ್ಟ ಪೂಜಾರ	೨೬೮
೧೫೦	ಮಧ್ವ ರಾಘವೇಂದ್ರ ಮುದ್ದೇಬಿಹಾಳ	೨೬೮
೧೫೦	ಸಿದರಾಮ ಶಿವಲಿಂಗಪ್ಪ ಸಾವಳಗಿ	೨೬೮
೧೫೪	ಮಲಕಪ್ಪ ರೇವಪ್ಪ ಮೇತ್ರಿ	೨೬೭
೧೫೪	ರಹಿಮಾನಸಾ ಅನಸಾರಸಾ ಮುಲ್ಲಾ	೨೬೭
೧೫೪	ರಾಮಾನಂದ ಗೋವಿಂದ ದೇಶಪಾಂಡೆ	೨೬೭
೧೫೭	ಬಾಳಪ್ಪ ಅಣ್ಣಪ್ಪ ನಿರಾಳಿ	೨೬೬
೧೫೭	ದುಂಡಪ್ಪ ಚಿನ್ನಪ್ಪ ಪತ್ತಾರ	೨೬೬
೧೫೭	ಗುಂಡೋ ಮಧ್ವರಾವ ಕುಲಕರ್ಣಿ	೨೬೬
೧೬೦	ಮಹಮ್ಮದ ಬಂಡೇಲಿಶಾ ಬಾಗಾಯಿತ	೨೬೫
೧೬೦	ನರಸಿಂಹ ಕೃಷ್ಣ ಕೊರ್ತಿ	೨೬೫
೧೬೦	ಸಿದ್ದನಗೌಡ ಸಂಗನಗೌಡ ಭಗವಂತಗೌಡ್ರ	೨೬೫
೧೬೦	ವಿಠಲ ಗೋವಿಂದರಾವ ಪಾಟೀಲ	೨೬೫
೧೬೪	ಭಿಕ್ಷಯ್ಯ ರೇವಯ್ಯ ಗವನೂರ	೨೬೪
೧೬೪	ಚನಸಂಗಪ್ಪ ಸಂಗಪ್ಪ ಹೊಸಮನಿ	೨೬೪
೧೬೪	ಗುರುನಾಥ ನಾರಾಯಣ ಕುಲಕರ್ಣಿ	೨೬೪
೧೬೪	ದುಂಡಪ್ಪ ಪೀರಪ್ಪ ವಾಬಣ್ಣವರ	೨೬೪
೧೬೪	ಕೃಷ್ಣಾಜಿ ಬಿಂದುರಾವ ನರಸಾಪೂರ	೨೬೪
೧೬೪	ಕೃಷ್ಣಾಜಿ ಗೋಪಾಳ ಮುಜುಮದಾರ	೨೬೪
೧೬೪	ನಾಗಪ್ಪ ಹನಮಪ್ಪ ಕಟಿಗೇರಿ	೨೬೪
೧೭೧	ಭಾಸ್ಕರ ಸಾಮುವೇಲಪ್ಪ ಗೌಡರ	೨೬೩
೧೭೧	ನರಸಿಂಹ ರಾಮಚಂದ್ರ ಮುತಾಲಿಕ	೨೬೩
೧೭೧	ರಾಮಚಂದ್ರ ಹನಮಂತ ಕುಲಕರ್ಣಿ	೨೬೩
೧೭೧	ಶರಣಪ್ಪ ಶಿವಲಿಂಗಪ್ಪ ರೊಟ್ಟಿ	೨೬೩
೧೭೧	ಶ್ರೀನಿವಾಸ ನಾರಾಯಣ ತೊರ್ಶಿ	೨೬೩
೧೭೬	ಅಣ್ಣಾರಾವ ರುದ್ರೋ ಕುಲಕರ್ಣಿ	೨೬೨
೧೭೬	ಗೋಪಾಳ ಗುಂಡೋ ಘಾಸ	೨೬೨
೧೭೬	ರಾಮಪ್ಪ ಹನಮಪ್ಪ ಕುದ್ರಿ	೨೬೨
೧೭೯	ಗಜಾನನ ರಾಘವೇಂದ್ರ ಗಾಡಗೀಳ	೨೬೧

೧೭೯	ನಾರಾಯಣ ಕೃಷ್ಣರಾವ ಕುಲಕರ್ಣಿ	೨೬೧
೧೭೯	ರಾಮಚಂದ್ರ ಕಲ್ಲೋ ಅಥಣಿ	೨೬೧
೧೭೯	ಗೋವಿಂದ ರಾಮಾಚಾರ್ಯ ಅಷ್ಟಪುತ್ರೆ	೨೬೧
೧೭೯	ಶಿದಲಿಂಗಪ್ಪ ಮಹದೇವಪ್ಪ ಪಾಟೀಲ	೨೬೧
೧೭೯	ವೆಂಕಪ್ಪ ನಿಂಗಪ್ಪ ಮೇಟಿ	೨೬೧
೧೭೯	ವೀರಭದ್ರಪ್ಪ ಅಂದಾನೆಪ್ಪ ಕುರಹಟ್ಟಿ	೨೬೧
೧೮೬	ಇರಬಸಪ್ಪ ಚನ್ನಬಸಪ್ಪ ಸಜ್ಜನ	೨೬೦
೧೮೬	ಮಾರುತಿ ಬಾಳು ಸಾಳುಂಕೆ	೨೬೦
೧೮೬	ನಾರಾಯಣ ಕೇಶವರಾವ ರೂಗಿ	೨೬೦
೧೮೬	ರಾಮಣ್ಣಾ ಶಂಕರಪ್ಪ ಬಾಣದ	೨೬೦
೧೮೬	ಸಂಗನಗೌಡ ಪರ್ವತಗೌಡ ದೇಸಾಯಿಗೌಡ್ರ	೨೬೦
೧೮೬	ಶೇಷೋ ಬಾಳಕೃಷ್ಣ ದಿವಾಣಜಿ	೨೬೦
೧೯೨	ಹುಶೇನಸಾ ಅಮೀನಸಾ ಉಪನಾಳ	೨೫೯
೧೯೨	ರೇವಣಶಿದ್ದ ಬಸವಗೌಡ ಪಾಟೀಲ	೨೫೯
೧೯೨	ವೆಂಕಟೇಶ ವಿಶ್ವನಾಥ ದೀಕ್ಷಿತ	೨೫೯
೧೯೫	ಚನಗೌಡ ಗುರಪ್ಪ ಪಾಟೀಲ	೨೫೮
೧೯೫	ರಾಶೇಬಾ ಹವಳೆಪ್ಪ ಹಂದರಗಲ್	೨೫೮
೧೯೫	ವೆಂಕಟೇಶ ಹನಮಂತಾಚಾರ್ಯ ಢಾಣಕ ಶಿರೂರ	೨೫೮
೧೯೫	ವೆಂಕನಗೌಡ ತಿಮ್ಮನಗೌಡ ಮುಲ್ಕಿಪಾಟೀಲ	೨೫೮
೧೯೯	ಚಂದ್ರಶೇಖರಯ್ಯ ಸೋಮಶೇಖರಯ್ಯ ಮಠ	೨೫೭
೧೯೯	ಗುಂಡು ನಾರಾಯಣ ಕುಲಕರ್ಣಿ	೨೫೭
೧೯೯	ನಾಗಪ್ಪ ವಿರುಪಾಕ್ಷಪ್ಪ ಶಿಂಪಿ	೨೫೭
೧೯೯	ರಾಮಚಂದ್ರ ಗುಂಡೋ ಮಡಿಗೇರಿ	೨೫೭
೧೯೯	ಶ್ರೀಶೈಲಪ್ಪ ಗುರುಸಿದ್ದಪ್ಪ ಕಾಳಗಿ	೨೫೭
೧೯೯	ಸಿದ್ದಪ್ಪ ಮಾದಪ್ಪ ರತನಶೆಟ್ಟರ	೨೫೭
೨೦೫	ಫಕ್ಕೀರಯ್ಯ ಬಸಯ್ಯಾ ಮುತ್ತಲಗೇರಿ	೨೫೬
೨೦೫	ಗಂಗಪ್ಪ ಮಾಗುಂಡಪ್ಪ ಬಾರಿಗಿಡದ	೨೫೬
೨೦೫	ಹುಚ್ಚೂಸಾಬ ಫಕ್ಕಿರಸಾಬ ಪಿಂಜಾರ	೨೫೬
೨೦೫	ಮಲ್ಲಪ್ಪ ಗುರಪ್ಪ ಚಾಳೀಕರ	೨೫೬

೨೦೫	ವೀರಪ್ಪ ಗುರಪ್ಪ ಸುಂಕದ	೩೫೬
೨೧೦	ಕಾಳಪ್ಪ ಸಿದರಾಯಪ್ಪ ಪತ್ತಾರ	೩೫೫
೨೧೦	ಮಾರ್ತಂಡ ರಾವಜಿ ದೇಸಾಯಿ	೩೫೫
೨೧೦	ಪತ್ರೆಪ್ಪ ಪೀತಾಂಬರಪ್ಪ ಆರೀಬೆಂಚಿ	೩೫೫
೨೧೦	ಸದಾಶಿವ ಗುರುನಾಥ ಗೋಖಲೆ	೩೫೫
೨೧೪	ಮುರ್ತುಜಾಸಾಹೇಬ ಅಬ್ದುಲ್‌ಸಾಹೇಬ ಕೊತವಾಲ	೩೫೪
೨೧೪	ಬಸನಗೌಡ ಶಂಕರಗೌಡ ಪಾಟೀಲ	೩೫೪
೨೧೪	ಯಲ್ಲಪ್ಪ ಸಾಬಣ್ಣ ಇಂಗಳಿಗಿ	೩೫೪
೨೧೬	ಮಾನಪ್ಪ ರುದ್ರಪ್ಪ ಪತ್ತಾರ	೩೫೩
೨೧೬	ಮುತ್ತೆಪ್ಪ ಸಿಂಗಪ್ಪ ಭಾವಿಕಟ್ಟಿ	೩೫೩
೨೧೬	ರಾಚಪ್ಪ ಗುರಲಿಂಗಪ್ಪ ಹತ್ತೂರ	೩೫೩
೨೧೬	ಶಿವಯೋಗಿ ಚನಮಲ್ಲಪ್ಪ ಶೆಟ್ಟರ	೩೫೩
೨೨೧	ಅನಂದರಾವ ಶೇಷಗಿರಿರಾವ ಕುಲಕರ್ಣಿ	೩೫೨
೨೨೧	ಹನಮಪ್ಪ ಸಿಂಗಪ್ಪ ಬೇವಿನಗಿಡ	೩೫೨
೨೨೧	ಹೂವಪ್ಪ ಕಾಮಪ್ಪ ಕೋಲಕಾರ	೩೫೨
೨೨೧	ಜೊಸೆಫ ರಾಯಪ್ಪ ಪಾಲ್ಟಿ	೩೫೨
೨೨೧	ರಾಮಚಂದ್ರ ಸ್ವಾಮಿರಾವ ಕುಲಕರ್ಣಿ	೩೫೨
೨೨೧	ವೆಂಕಟೇಶ ಭಗವಂತ ಕುಲಕರ್ಣಿ	೩೫೨
೨೨೭	ಕೇಶವ ಫಡೀರಾವ ದೇಶಪಾಂಡೆ	೩೫೧
೨೨೭	ಮೌಲಾ ನಾಸಾ ಚಾಂದಾಸಾ ಹಾದೀಮನಿ	೩೫೧
೨೨೯	ಇಮಾತಲಾಲ ಮೋಹನಲಾಲ ಗುಜ್ಜರ	೩೫೦
೨೨೯	ಸದಾಶಿವಪ್ಪ ಮಹಾದೇವಪ್ಪ ಪಾಟೀಲ	೩೫೦
೨೨೯	ವಿಠಲ ಭೀಮಾಜಿ ದೇಶಪಾಂಡೆ	೩೫೦
೨೩೨	ಬಸನಗೌಡ ಚಂದ್ರಾಮಪ್ಪ ಪಾಟೀಲ	೩೪೯
೨೩೩	ಬಸವಂತಪ್ಪ ಗುರುಸಂಗಪ್ಪ ಸಜ್ಜನ	೩೪೮
೨೩೩	ಭೀಮಪ್ಪ ಹಣಮಪ್ಪ ಗೊಟಗಿ	೩೪೮
೨೩೩	ಭೀಮಸೇನ ರಾಘವೇಂದ್ರಾಚಾರ್ಯ ಮಂಚಾಲಿ	೩೪೮
೨೩೩	ಗುಂಡನಗೌಡ ಮಳಿಯಪ್ಪಗೌಡ ಸಣ್ಣಿಂಗಪ್ಪನವರ	೩೪೮
೨೩೩	ಲಕ್ಷ್ಮೀಕಾಂತ ರಾಮರಾವ ಕುಲಕರ್ಣಿ	೩೪೮

೨೩೩	ಮಹಮ್ಮದ ಗುಲ್ಮಹಮ್ಮದ ತಾಸಗಾಂವ	೨೪೮
೨೩೩	ರಾಘವೇಂದ್ರ ರಾಮಚಂದ್ರ ಕುಲಕರ್ಣಿ	೨೪೮
೨೪೦	ಅನಂತ ನಾರಾಯಣರಾವ ಕುಲಕರ್ಣಿ	೨೪೭
೨೪೦	ನಾರಾಯಣ ಗುರುಭೀಮರಾವ ದೇಸಾಯಿ	೨೪೭
೨೪೦	ವಿರುಪಾಕ್ಷಗೌಡಾ ರುದ್ರಗೌಡಾ ಮುಲ್ಕಿಪಾಟೀಲ	೨೪೭
೨೪೩	ಚಂದ್ರಪ್ಪಾ ಹನಮಪ್ಪ ಗೌಡರ	೨೪೬
೨೪೩	ಕೃಷ್ಣಾಜಿ ರಾಮಚಂದ್ರ ತಾಸಿ	೨೪೬
೨೪೩	ಲಕ್ಷ್ಮಣ ಬಸಲಿಂಗಪ್ಪ ಆಕಳವಾಡಿ	೨೪೬
೨೪೩	ಲಿಂಗಪ್ಪ ದಾಮೋದರ ನಾಯಿಕ	೨೪೬
೨೪೭	ಗುರುಬಸಪ್ಪ ಚನ್ನಪ್ಪ ಅಂಗಡಿ	೨೪೫
೨೪೭	ಮಹಮ್ಮದಹನೀಪ ಮಕ್ತುಮಸಾಬ ಮುಲ್ಲಾ	೨೪೫
೨೪೭	ಪುಂಡಲೀಕ ಡೊಂಗರಿಬಾ ಮ್ಯೆಂದರಕರ	೨೪೫
೨೪೭	ಸಂಗನಗೌಡಾ ರಾಮನಗೌಡಾ ಆಳಗೊಂಡ	೨೪೫
೨೪೭	ಶಿವಸಂಗಪ್ಪ ವೀರಪ್ಪ ಅಂಗಡಿ	೨೪೫
೨೫೨	ಭೀಮಪ್ಪ ಬಸಪ್ಪ ಇನಾಮದಾರ	೨೪೪
೨೫೨	ಲಕ್ಷ್ಮಣ ಭೀಮಾಜಿ ಕುಲಕರ್ಣಿ	೨೪೪
೨೫೨	ರಾಮಚಂದ್ರ ಅಶ್ವತ್ಥಾಚಾರ್ಯ ಕಟ್ಟಿ	೨೪೪
೨೫೨	ರೇವಪ್ಪ ಸೋಮಪ್ಪ ಹೊಲೇರ	೨೪೪
೨೫೬	ಬಾಲಕೃಷ್ಣ ಶಿವರಾಮ ಕುಲಕರ್ಣಿ	೨೪೩
೨೫೬	ದತ್ತಾತ್ರಯ ದಾಮೋದರರಾವ ದೇಶಪಾಂಡೆ	೨೪೩
೨೫೬	ಮಲ್ಲಪ್ಪ ಯಮನಪ್ಪ ಕಂಬಾರ	೨೪೩
೨೫೬	ಸಾಹೇಬಗೌಡ ಭೀಮಪ್ಪಗೌಡರ	೨೪೩
೨೫೬	ನಾರಾಯಣ ಅಪ್ಪಾರಾವ ಕುಲಕರ್ಣಿ	೨೪೩
೨೬೧	ಬಸನಗೌಡ ಸಂಗನಗೌಡ ಪಾಟೀಲ	೨೪೨
೨೬೧	ರಾಮಚಂದ್ರ ರಾಘವೇಂದ್ರ ದೇಶಪಾಂಡೆ	೨೪೨
೨೬೧	ಸಂಗಪ್ಪ ಚನ್ನಪ್ಪ ರೋದಗಿ	೨೪೨
೨೬೧	ಸಿವಲಿಂಗಪ್ಪ ಬಸವಂತಪ್ಪ ಪಾಟೀಲ	೨೪೨
೨೬೧	ವಿಠ್ಠಲ ರಾಮಚಂದ್ರ ಕುಲಕರ್ಣಿ	೨೪೨
೨೬೬	ರಾಮಚಂದ್ರ ಭೀಮಾಚಾರ್ಯ ಓಂಕಾರ	೨೪೧

೨೬೬ ಶಿವಪ್ಪ ದುಂಡಪ್ಪ ಸಂಕೊಂಡ ೨೪೧
೨೬೬ /ಸೋಮಪ್ಪ ಗುರಪ್ಪ ಸಂಖದ ೨೪೧
೨೬೬ ವಾಸುದೇದ ಭೀಮಾಜಿ ಹೊಸೂರ ೨೪೧
೨೬೬ ವಿಠ್ಠಲ ಭೀಮಾಜಿ ಕುಲಕರ್ಣಿ ೨೬೧
೨೭೧ ವಾಸುದೇವ ಗೋಪಾಳರಾವ ಕುಂಭಾರಿ ೨೪೦
೨೭೨ ದುಂಡಪ್ಪ ಕಲ್ಲಪ್ಪ ದಳವಾಯಿ ೨೩೯
೨೭೨ ಜಾಯಪ್ಪ ಧರಿಯಪ್ಪ ಆಕಳವಾಡಿ ೨೩೯
೨೭೨ ಲಿಂಗಪ್ಪ ಬಸಪ್ಪ ವಿವ್ಮಿ ೨೩೯
೨೭೨ ರಾಮಪ್ಪ ರಾಯಪ್ಪ ಹಂಚಿನಾಳ ೨೩೯
೨೭೨ ಶಿವಶಂಕರಪ್ಪಾ ಸಂಗಪ್ಪಾ ಮಿಂಚಿನಾಳ ೨೩೯
೨೭೭ ಬಸಲಿಂಗಪ್ಪ ಹಂಪಣ್ಣಪ್ಪ ಪಾಗಿ ೨೩೮
೨೭೭ ಹುಚ್ಚಪ್ಪ ಭರಮಪ್ಪ ಹೂವನೂರ ೨೩೮
೨೭೯ ಮಲ್ಹಾರ ಅಪ್ಪಾಜಿ ಕುಲಕರ್ಣಿ ೨೩೭
೨೭೯ ಶಿವಪುತ್ರಾ ಷಣ್ಮುಖಪ್ಪ ನಿಲವಾಣಿ ೨೩೭
೨೮೭ ಅಡಿವೆಪ್ಪ ಶಿದ್ದಪ್ಪ ಪಾವಡದ ೨೩೬
೨೮೦ ಲಕ್ಷ್ಮಣ ನರಶಿಂಹ ಕುಲಕರ್ಣಿ ೨೩೬
೨೮೧ ರಾಘವೇಂದ್ರ ರಂಗೋ ಕುಲಕರ್ಣಿ ೨೩೬
೨೮೧ ಸುಬ್ಬಾಜಿ ವೆಂಕಟೇಶ ಕುಲಕರ್ಣಿ ೨೩೬
೨೮೫ ಹನಮಂತ ರಾವಜಿ ಕುಲಕರ್ಣಿ ೨೩೫
೨೮೫ ಶಿವಪ್ಪ ಭೀಮಪ್ಪ ಮಾದರ ೨೩೫
೨೮೫ ವಿರುಪಾಕ್ಷ ಲಿಂಗೋ ಕುಲಕರ್ಣಿ ೨೩೫
೨೮೮ ವಿಶ್ರಾಮ ಲಕ್ಷ್ಮಣ ರಾಯಕರ ೨೩೫
೨೮೯ ಘನಲಿಂಗಪ್ಪ ಬಸಪ್ಪ ಧಾವಲಿಗಿ ೨೩೪
೨೮೯ ಕಲ್ಲಪ್ಪ ಸಂಗಪ್ಪ ಪಾಟೀಲ ೨೩೪
೨೮೯ ಕಾಸಪ್ಪಾ ಗುರಪ್ಪಾ ಹಡಪದ ೨೩೪
೨೮೯ ನಾರಾಯಣ ಗುರುರಾವ ಕುಲಕರ್ಣಿ ೨೩೪
೨೮೯ ರಾವಸಾಹೇಬ ಗೋವಿಂದ ಭೋಸಲೆ ೨೩೪
೨೮೯ ರೇವಣಸಿದ್ದಯ್ಯಾ ಚನಬಸಯ್ಯಾ ಚಿಕ್ಕಮಠ ೨೩೪
೨೯೫ ಬಾಬುಭಟ್ಟ ಪಾಂಡುರಂಗಭಟ್ಟ ರೊಟ್ಟಿ ೨೩೩

೧೯೫ ಸಂಗನಗೌಡ ಮಳಿಯಪ್ಪಗೌಡ ಪಾಟೀಲ ೨೩೩

೧೯೫ ಸಂಗನಗೌಡ ಶಂಕರಗೌಡ ಆದಾಪುರ ೨೩೩

೧೯೫ ಶ್ರೀಧರ ವೆಂಕಟೇಶ ಗುಮಸ್ತೆ ನಾಡಗೌಡ ೨೩೩

೧೯೯ ಬಸಪ್ಪ ರಾಮಪ್ಪ ನಾಗೋಡ ೨೩೧

೨೦೦ ಬಲವಂತ ಪಾಂಡುರಂಗ ಕುಲಕರ್ಣಿ ೨೨೯

೨೦೦ ಚಂದ್ರಶೇಖರ ಬಾಸಪ್ಪ ಇನಾಮದಾರ ೨೨೯

೨೦೦ ದತ್ತಾತ್ರಯ ಹನುಮಂತರಾವ ಕುಲಕರ್ಣಿ ೨೨೯

೨೦೦ ಸಂಗಪ್ಪ ಮಂಚೆಪ್ಪ ನಾಡಗೌಡರ ೨೨೯

೨೦೦ ತಿಪ್ಪಣ್ಣಾ ಬಸವಪ್ಪ ಗಾಣಿಗೇರ ೨೨೯

೨೦೦ ವಿರುಪಾಕ್ಷಪ್ಪ ಗೋಪಾಲಪ್ಪ ಸಿಂಗದ ೨೨೯

೨೦೬ ಲಿಂಗನಗೌಡ ರಾಮಲಿಂಗನಗೌಡ ಗೌಡ್ರ ೨೨೮

೨೦೬ ರಾಮಚಂದ್ರ ರಂಗಪ್ಪ ಹುಲ್ಯಾಳ ೨೨೮

೨೦೬ ಗಂಗಯ್ಯಾ ವೀರಯ್ಯಾ ಕಂದಗಲ್ಲ ೨೨೮

೨೦೬ ಸಾತಪ್ಪ ಬಸಪ್ಪ ಬೀಳಗಿ ೨೨೮

೨೦೬ ಷಡಕ್ಷರಯ್ಯಾ ಫಕೀರಯ್ಯಾ ಕಡಕೋಳ ೨೨೮

೨೦೬ ವಿಠೋಬಾ ಸಂಗಪ್ಪ ಪಟ್ಟಣಶೆಟ್ಟಿ ೨೨೮

೨೧೨ ಭಗವಂತ ಶ್ರೀನಿವಾಸ ಕುಲಕರ್ಣಿ ೨೨೭

೨೧೨ ರಾಮಪ್ಪ ಭೀಮಪ್ಪ ಗೊರವ ೨೨೭

೨೧೨ ನಾಗೇಶ ವೆಂಕಟೇಶ ಜೋಸಿ ೨೨೭

೨೧೨ ಶಿವಮೂರ್ತಿಯ್ಯಾ ಅಡಿವೆಯ್ಯಾ ಮಠ ೨೨೭

೨೧೬ ಹುಶೇನಸಾ ಹಸನಸಾ ಮಾಲಘಾನ ೨೨೬

೨೧೬ ರಂಗೋ ಉರ್ಫ ಗಣಪತಿ ಅಪ್ಪಾಜಿ ಪಾಟೀಲ ೨೨೬

೨೧೮ ನ್ಯಾಮಪ್ಪ ಸಿಂಗಪ್ಪ ಅಲಗೂರ ೨೨೫

೨೧೮ ರಾಮಪ್ಪ ತಿಪ್ಪಣ್ಣಾ ಅಂಬಿಗೇರ ೨೨೫

೨೧೮ ಸಂಗಪ್ಪ ಚನಬಸಪ್ಪ ಗಂಗಾವತಿ ೨೨೫

೨೨೧ ಮಲ್ಲಪ್ಪ ಗುರುಬಸಪ್ಪ ಕಂಬಲ್ಯಾಲ ೨೨೩

೨೨೧ ರಾಚನಗೌಡ ಪರ್ವತಗೌಡ ಪಾಟೀಲ ೨೨೩

೨೨೧ ಮುದಿಯಪ್ಪ ಮಾಗುಂಡಪ್ಪ ಅರಹುಣಸಿ ೨೨೩

೨೨೧ ಮಲ್ಲೇಶಿ ಪರಸಪ್ಪ ಸಮಗಾರ ೨೨೩

೩೨೧	ಸಿದ್ದಪ್ಪ ಯೋಗಪ್ಪ ಗಳೇದ	೨೨೩
೩೨೬	ಭೀಮನಗೌಡ ಬಸನಗೌಡ ಪಾಟೀಲ	೨೨೨
೩೨೬	ಕೃಷ್ಣಾಜಿ ಶೇಷೋ ಕುಲಕರ್ಣಿ	೨೨೨
೩೨೮	ಕನಕಾ ಕಬೀರದಾಸ ದಂಡಿಗೀದಾಸರ	೨೨೧
೩೨೮	ಸರಹರ ದತ್ತಾತ್ರೆಯ ಗಾಯಕವಾಡ	೨೨೧
೩೩೦	ನಿಂಗನಗೌಡ ಮಹಾಲಿಂಗನಗೌಡ ಪಾಟೀಲ	೨೧೯
೩೩೧	ನಿಂಗನಗೌಡ ಭೀಮನಗೌಡ ಪಾಟೀಲ	೨೧೬
೩೩೨	ವೀರಯ್ಯಾ ಬಸಯ್ಯಾ ಮುತ್ತಲಗೇರಿ	೨೧೫
೩೩೨	ಶಿವಪ್ಪ ಗುರುಲಿಂಗಪ್ಪ ಹುಗ್ಗಿ	೨೧೫
೩೩೪	ಪಾಂಪಪ್ಪ ಯಲ್ಲಪ್ಪ ಹುಂಡೇಕಾರ	೨೧೪
೩೩೪	ಶರಣಪ್ಪ ಶಿವಮೂರ್ತೆಪ್ಪ ಇಂಗಳೇಶ್ವರ	೨೧೪
೩೩೬	ಖಾಜಿಸಾ ಹುಸೇನಸಾ ಹೊಸುಟ್ಗಿ	೨೧೩
೩೩೬	ಮಧ್ವ ನಾರಾಯಣ ಕಟ್ಟಿ	೨೧೩
೩೩೮	ನಾರಾಯಣ ಗುಂಡೋ ಜೋಶಿ	೨೧೨
೩೩೮	ಪಾಂಡು ಹನಮಪ್ಪ ಬಡ್ನೂರ	೨೧೨
೩೪೦	ಕನಕಪ್ಪ ಫಕೀರಪ್ಪ ಅಗಸರ	೨೧೧
೩೪೧	ಸಾತಪ್ಪ ಸಂಗಪ್ಪ ಕಟ್ಟಿ	೨೦೬
೩೪೨	ಜಾಲನೀಪಾಶಾ ಹುಶೇನಿಪಾಶಾ ತಾವಿಲದಾರ	೨೦೧

ಮರಾಠಿ

೧	ರಾಮಚಂದ್ರ ಧೋಂಡೋ ಕಪಾನಿಂಬರಿಗಿಕರ	೩೪೬
೨	ಮೌಲಾ ಹುಸೇನಸಾಹೇಬ ಹತ್ತರಿಕಿಹಾಳ	೩೧೮
೩	ಈರಯ್ಯ ಗುರುಪಾದಪ್ಪಾ ಕರ್ಲಗೇರಿ	೩೧೫
೪	ಇಬ್ರಾಹಿಮಸಾಹೇಬ ವಲ್ಲೀಸಾಹೇಬ ಬಿದರವಾಲಾ	೩೦೯
೫	ಸಾಮುವೇಲ ರಾಜಾರಾಮ ಬತ್ತೀಸೆ	೩೦೩
೬	ಹನುಮಂತ ವೆಂಕಾಜಿ ಕುಲಕರ್ಣಿ	೨೯೧
೭	ಗಂಗಾರಾಮ ಭೀಮಪ್ಪ ಗೌಡರ	೨೯೦
೮	ಗಂಗಾಧರ ವಿಷ್ಣು ಜೋಶಿ	೨೮೯
೯	ವಾಮನ ಕೃಷ್ಣ ಅಥಣಿ	೨೭೯

೧೦	ರಾಮಚಂದ್ರ ಬಿಂದು ಗೋಡಖಿಂಡಿ	೨೭೮
೧೧	ಪಾಂಡುರಂಗ ಮಾರುತಿ ಸಾಳುಂಕೆ	೨೭೪
೧೨	ಶ್ರೀಪಾದ ಲಕ್ಷ್ಮಣ ಕುಲಕರ್ಣಿ	೨೭೪
೧೩	ವೀರಭದ್ರಯ್ಯಾ ಸಿದ್ರಾಮಯ್ಯಾ ಚಡಚಣ	೨೭೩
೧೪	ರಾಮಚಂದ್ರ ವಿಶ್ವನಾಥ ದೇಶಪಾಂಡೆ	೨೭೨
೧೫	ನಾರಾಯಣ ಹನಮಂತ ಕುಲಕರ್ಣಿ	೨೬೮
೧೬	ಕೃಷ್ಣರಾವ ಪಂಡಹರಿನಾಥ ಯಕಬೋಟಿ	೨೬೬
೧೭	ಭೀಮರಾವ ಗುರುರಾವ ದೇಶಪಾಂಡೆ	೨೬೫
೧೮	ಮಹಾದೇವಗೌಡ ನಾಗನಗೌಡಾ ಪಾಟೀಲ	೨೬೩
೧೯	ದಾವಲಸಾಹೇಬ ಅಲ್ಲೀಸಾಹೇಬ ಬಡಕಲ್ಲ	೨೬೦
೨೦	ಕೃಷ್ಣ ಮೋರೇಶ್ವರ ದೇಸಾಯಿ	೨೫೯
೨೧	ವೆಂಕಟೇಶ ಹನಮಂತ ಗುಡಿ	೨೫೨
೨೨	ಚನ್ನಪ್ಪಾ ಗುರುಪಾದಪ್ಪಾ ಮುದ್ದಾಪುರ	೨೫೩
೨೩	ತ್ರಿವಿಕ್ರಮ ದತ್ತಾತ್ರಯ ಆಸವಡೆಕರ	೨೫೧
೨೪	ತಮ್ಮಾ ಹನಮಂತ ಮಾನೆ	೨೪೯
೨೫	ರಂಗಪ್ಪಾ ಭೀಮಪ್ಪಾ ನಜರಾದ	೨೪೩
೨೬	ಕೃಷ್ಣಾಜಿ ಶ್ರೀಪಾದ ಕಮಲಾಕರ	೨೪೧
೨೭	ಪಾಂಡುರಂಗ ರಾಮಚಂದ್ರ ಟಕಳೆ	೨೩೨
೨೮	ದತ್ತಾತ್ರಯ ಕೃಷ್ಣ ಗೋಡಖಿಂಡಿ	೨೩೦
೨೯	ಬಾಬಾಲಾಲ ಮುರ್ತುಜಾಸಾಹೇಬ ಕಾಜಿ	೨೨೩
೩೦	ಶಂಕರ ಮಹಾದೇವ ರಾನಡೆ	೨೧೫
೩೧	ಶಿದರಾಮ ದಾಜಿ ನಲವಡೆ	೨೧೪

ಅಗ್ರಿಕಲ್ಚರಲ್ ಬಾಯಸ್ ಕೋರ್ಸ

೧	ರಂಗನಾಥ ರಾಘವೇಂದ್ರ ಪಾಟೀಲ	೨೭೬
೨	ರಾಮಚಂದ್ರ ಮಂಚಾಲಿ ಸುರಪುರ	೨೭೫
೩	ಚುನಿಲಾಲ ಬಾಬಾರಾಮ ತೇಲಿ	೨೭೫
೪	ರಾಮಚಂದ್ರ ಸಿದ್ದಪ್ಪಾ ಚಡಚಣ	೨೫೬
೫	ಮಲಕಾಜಪ್ಪಾ ಕರಬಸಪ್ಪಾ ಮಸಾಳಿ	೨೬೨

೬ ದಾನಪ್ಪ ಶಿವಪ್ಪ ಚಟ್ಟೇರ ೨೬೦
೭ ಗುರುಭೀಮ ಮಹಾದೇವ ಕುಲಕರ್ಣಿ ೨೫೯
೮ ಚನಗೌಡಾ ಚಂದ್ರಾಮಪ್ಪಾ ಪಾಟೀಲ ೨೫೬
೯ ಸಿದ್ದಪ್ಪ ಗುರಪ್ಪ ಬಿಲೂರ ೨೫೨
೧೦ ಚಂದ್ರಾಮಪ್ಪ ಭೀಮರಾಮ ಗಲಗಲಿ ೨೩೨

ಉರ್ದು

೧ ಹಸನಸಾಹೇಬ ನಬಿಸಾಹೇಬ ಪಾಡೆಕನೂರ ೩೨೦+೩೨
೨ ಹಾಸಿಮ ಇಬ್ರಾಹಿಮಸಾಹೇಬ ಮುನ್ಸಿ ೩೧೬+೩೩
೩ ಹಾಸಿಮಸಾಹೇಬ ಪೀರಮಹಮ್ಮದಸಾಹೇಬ ಬೈಗನ್‌ಪಲ್ಲಿ ೩೦೪+೪೪
೪ ನಬಿಖಾನ ಮೊಹೈಯುದ್ದೀನಖಾನ ಇನಾಮದಾರ ೨೮೧+೨೫
೫ ಕರಿಮುದ್ದೀನ ಉಸ್ಮಾನಸಾಹೇಬ ಕಲಾದಗಿ ೨೬೨+೩೯
೬ ಮೊಹಮ್ಮದಯುನೋಸ ಹಸನಸಾಹೇಬ ಹುಬ್ಬಲಿ ೨೬೧+೩೮
೭ ತಿಮ್ಮಣ್ಣಾ ಮಲ್ಲಪ್ಪ ಉಪ್ಪಾರ ೨೫೮+೪೪
೮ ಪೀರಪಾಶಾದಸ್ತಗೀರಸಾಹೇಬ ದೌಲತಕೋಟಿ ೨೫೩+೬೭
೯ ಬಾದಶಹಾ ಬಡೇಸಾಹೇಬ ಮುಲ್ಲಾ ೨೫೩+೨೭
೧೦ ಇಬ್ರಾಹಿಮ ಹಾಜಿಸಾಹೇಬ ಸರವಾಡ ೨೪೧+೪೭
೧೧ ಅಲ್ಲಾಭಕ್ಷ ಅಬ್ದುಲ್ಲಾಹಸಾಹೇಬ ಬಾಗವಾನ ೨೪೧+೨೮
೧೨ ಸಾಹೇಬರಾಜಾ ಹುಸೇನಸಾಹೇಬ ಬೋರಗಿ ೨೪೧+೪೨
೧೩ ಅಬ್ದುಲ್ಲಾಹ ಸೇಖಮಿರಾಸಾಹೇಬ ಯರನಾಳ ೨೩೯+೪೦
೧೪ ದಾದೇಪೀರ ಮುಹಮ್ಮದ ಹುಸೇನ ಕಾಜಿ ೨೩೬+೩೬
೧೫ ಉಮರ ಸಯ್ಯದಸಾಹೇಬ ತೊರ್ವಿ ೨೩೨+೨೧
೧೬ ಹುಸೇನ ಇಸ್ಮಾಯಿಲ ಸೈಯದಖಾನ ೨೨೯+೪೭
೧೭ ಸೈಯದ ಇಸಾಖಕಾದ್ರಿ ಸೈಯದಕಾದಿರಸಾಶಾಕಾದ್ರಿ
ಇನಾಮದಾರ ೨೨೯+೨೦
೧೮ ಮುಹಮ್ಮದ-ಹುಸೇನ ಹುಸೇನಸಾಹೇಬ ಬದಾಮಿ ೨೨೪+೪೨
೧೯ ಸೈಯದಹುಸೇನ ಸೈಯದಘೂಡುಸಾಹೇಬ ಶಹಾಪುರಕರ ೨೧೮+೩೧
೨೦ ರಾಜೆಸಾಹೇಬ ಹುಸೇನಸಾಹೇಬ ಜವಳಿ ೨೧೭+೩೬
೨೧ ಅಲಿಸಾಹೇಬ ಸೈಯದಅಲಿಸಾಹೇಬ ಕಾಜಿ ೨೦೫+೩೭
೨೨ ಸೈಯದ-ಅಮೀನಹುಸೇನಿ ಸೈಯದಸಾಹೇಬ ಹುಸೇನಿ
ಪೀರಜಾದೆ ೨೦೦+೩೨

ಪ್ರಕಟನೆ

ದಕ್ಷಿಣಭಾಗದ ಜಿಲ್ಲೆಗಳ ಓಪನ್ ಹಾಗು ಮಿಡಲ್ ಸ್ಕೂಲು ಸ್ಕಾಲರಶಿಪ್ಪ ಗಳ ಪರೀಕ್ಷೆಗಳು ಸೋಮವಾರ ತಾರೀಖು ೮-೨-೧೯೩೭ ಹಾಗು ಮಂಗಳವಾರ ೯-೨-೧೯೩೭ ಈ ದಿವಸ ನಡೆಯುವವು. ಧಾರವಾಡ ಜಿಲ್ಲೆಯಲ್ಲಿ ಮಾತ್ರ ಇದೇ ದಿವಸ ವೆಂಕಾಸಾನಿ ಹಾಗು ಮುಹಮ್ಮಡನ್ ಬರ್ಸರೀ ಫಂಡ ಸ್ಕಾಲರಶಿಪ್ ಪರೀಕ್ಷೆಗಳು ಸಹ ನಡೆಯುವವು.

ಈ ಪರೀಕ್ಷೆಗೆ ಕೂಡಲಿಚ್ಛಿಸುವ ಉಮೇದವಾರರ ಅರ್ಜಿಗಳು ಒಂದು ರೂ. ಫೀ ಸಹಿತವಾಗಿ ಪರೀಕ್ಷಾ ಕಮಿಟಿಯ ಪ್ರೆಸಿಡೆಂಟರಿಗೆ ೪-೧-೧೯೩೭ನೆಯ ದಿವಸ ಅಥವಾ ಅದಕ್ಕೂ ಮೊದಲು ಮುಟ್ಟಬೇಕು. ವೆಂಕಾಸಾನಿ ಹಾಗು ಮುಹಮ್ಮಡನ್ ಬರ್ಸರೀ ಫಂಡ ಸ್ಕಾಲರಶಿಪ್ ಪರೀಕ್ಷೆಗಳ ಬಗ್ಗೆ ಫೀ ತುಂಬ ಬೇಕಾಗುವದಿಲ್ಲ.

ಪರೀಕ್ಷೆಯ ಅರ್ಜಿಯು ಕಮಿಟಿಯ ಪ್ರೆಸಿಡೆಂಟರಿಗೆ ಮುಟ್ಟುವದಕ್ಕೆ ಮುಂಚಿತವಾಗಿಯೇ ಅದು ಎಲ್ಲ ಅಂಶಗಳಲ್ಲಿ ಪೂರ್ಣವಾಗಿದೆ ಎಂಬದನ್ನು ನೋಡಿ ಕೊಳ್ಳತಕ್ಕದ್ದು. ಯಾಕಂದರೆ ಯಾವದೇ ಅಂಶದಲ್ಲಿ ಅಪೂರ್ಣವಿರುವ ಅರ್ಜಿ ಯನ್ನು ಯಾವ ನೆವವನ್ನೂ ಕೇಳದೆ ನಿರಾಕರಿಸಲಾಗುವದು.

ಓಪನ್ ಹಾಗು ಸ್ಪೆಶಲ್ ಮಿಡಲ್‌ಸ್ಕೂಲು ಸ್ಕಾಲರಶಿಪ್ಪುಗಳ ನಿಯಮಗಳ ೩ನೆಯ ಕಲಮಿನಲ್ಲಿ ಹೇಳಿರುವ ಸಂಗತಿಗಳನ್ನು ಕುರಿತು ಎಲ್ಲ ಪ್ರಾ. ಶಿಕ್ಷ ಕರು ಮುಂಚಿತವಾಗಿಯೇ ಎಚ್ಚರಪಡತಕ್ಕದ್ದು. ಮ. ಎಜ್ಯುಕೇಶನಲ್ ಇನಸ್ಪೆ ಕ್ಟರ ಸಾ॥ರವರ ಅಪ್ಪಣೆಯು ಅವಶ್ಯವಿರುವ ಪ್ರಸಂಗದಲ್ಲಿ ಅದನ್ನು ಸಕಾಲದಲ್ಲಿಯೇ ಪಡೆದುಕೊಂಡು ಪರೀಕ್ಷಾ ಕಮಿಟಿಯ ಪ್ರೆಸಿಡೆಂಟರ ಕಡೆಗೆ ಯೋಗ್ಯ ಅವಧಿಯ ಒಳಗಾಗಿಯೇ ಕಳಿಸಿಕೊಡತಕ್ಕದ್ದು.

ಈ ಪರೀಕ್ಷೆಗಳಿಗೆ ಸಂಬಂಧಿಸಿದ ಪ್ರಕಟನೆಯು ೯-೧೧-೧೯೩೬ನೆಯ ದಿವಸ ಪ್ರಸಿದ್ಧವಾದ ಮುಂಬಯಿ ಸರಕಾರದ ಗ್ಯಾಝೀಟಿನ ಭಾಗ ೨, ೨೪೦೨ನೆ ಪುಟಗದಲ್ಲಿ ಪ್ರಕಟಿಸಲ್ಪಟ್ಟಿರುವದು.

ಸೈಯದ ನೂರುಲ್ಲಾ
ಎ. ಇ. ದ. ಭಾಗ

ನೋಟೀಸ

೧೯೩೬ ನೆಯ ಇಸ್ವಿಯ ಮಾರ್ಚ ತಿಂಗಳಿನಲ್ಲಿ ಆದ ಹೆ. ಮಕ್ಕಳ ವ್ಹ. ಫಾ. ಪರೀಕ್ಷೆಯಲ್ಲಿ ಜಾಡಾರ್ಯಿನ್ ಪ್ರಾಯಿಝು ಹೊಂದಿದ ವಿದ್ಯಾರ್ಥಿನಿಯರ ಹೆಸರುಗಳು

ಅ. ನಂ.	ಹೆಸರು.	ಜಾತಿ.	ಪಾಸಾದ ನಂಬರಿನ ಹೆಸರು.	ರಕಮು.
	ಜನರಲ್ ಪ್ರಾಯಿಝು			
೧	ಸಗುಣಾ ರಾಮಕೃಷ್ಣ ಮುಳ್ಳಪಟ್ಟಣ	ಬ್ರಾಹ್ಮಣ	ಹುಬ್ಬಳ್ಳಿ	೫ ರೂ.
೨	ಗಂಗಾಬಾಯಿ ಮುತ್ತಪ್ಪ ಎವಲೇಕರ	ಸೋನಾರ	ಧಾರವಾಡ	೫ ರೂ.
೩	ವೈದೇಹಿ ನಾರಾಯಣರಾವ ಡಂಬಳ	ಬ್ರಾಹ್ಮಣ	ಗದಗ	೫ ರೂ.
	ಇಂಟರ ಮೀಡಿಯಟ ಪ್ರಾಯಿಝು			
೧	ಸುಂದರಾಬಾಯಿ ಪೀರೋಜಪ್ಪ ಮರಾಠಾ	ಮರಾಠಾ	ಧಾರವಾಡ	೫ ರೂ.
೨	ವೀರಪ್ಪ ಗಂಟೆಪ್ಪ ತಾಮ್ರಹಳ್ಳಿ	ಲಿಂಗಾಯತ	ಹುಬ್ಬಳ್ಳಿ	೫ ರೂ.
	ಹಿಂದುಳಿದ ವರ್ಗ			
೧	ಫಕ್ಕೀರವ್ವ ರಾಮಪ್ಪ ಗುಡಿಹಾಳ	ಕೊರವ	ಹುಬ್ಬಳ್ಳಿ	೫ ರೂ.
	ಮುನ್ಸಿಪಲ್ ಪ್ರಾಯಿಝು			
೧	ಹಾತೀಮಬಿ ಖುದಾವಂದ ಸಾಹೇಬ ಬಂಕಾಪೂರ	ಮುಸ್ಲೀಮ	ಹುಬ್ಬಳ್ಳಿ	೫ ರೂ.

ಧಾರವಾಡ,
ನವಂಬರ ೧೯೩೬

ಸೈಯದ ನೂರುಲ್ಲಾ,
ಎ. ಇ. ದ. ಭಾಗ.

ಟ್ರೇನಿಂಗ ಸ್ಕೂಲಿನ ಸ್ಕೌಟ ಟ್ರುಪ್ಪಿಗೆ ಶ್ರೀಮಜ್ಜಗದ್ಗುರುಗಳ ಆಶೀರ್ವಾದ

ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಶಿವಾನಂದ ಮಹಾಸ್ವಾಮಿಗಳವರು ಅಕ್ಟೋಬರ ತಿಂಗಳಲ್ಲಿ ಧಾರವಾಡಕ್ಕೆ ದಯಮಾಡಿಸಿದಾಗ ಟ್ರೇ. ಸ್ಕೂಲಿನ ಸ್ಕೌಟ ಟ್ರುಪ್ಪಿನವರು ಉತ್ಸವದಲ್ಲಿ ತೋರಿಸಿದ ಕರ್ತವ್ಯನಿಷ್ಠೆಗಾಗಿ ಸಂತೋಷಬಟ್ಟು ವಿಜಯಾದಶಮಿಯ ಶುಭಸಮಯದ ಸಭೆಯಲ್ಲಿ ೫ ರೂ. ಗಳನ್ನು ಬೆಳ್ಳಿಯ ಪದಕವನ್ನೂ ಆಶೀರ್ವದಿಸಿದರು. ಈ ೫ ರೂಪಾಯಿಗಳನ್ನು ಧಾರವಾಡದಲ್ಲಿ ಕಟ್ಟಲ್ಪಡುವ ಸ್ಕೌಟ ಕಟ್ಟಡದ ದೆಶೆಯಿಂದ ನಮ್ಮ ಸ್ಕೌಟ ಟ್ರುಪ್ಪಿನವರು ಕೊಟ್ಟರು. ಇದು ಸ್ಕೌಟರಿಗೆ ಶ್ರೇಯಸ್ಕರವು.

ಗಂ. ಚ. ಮಠದ

ಟ್ರೇ. ಸ್ಕೂ. ಸ್ಕೌಟಟ್ರುಪ್ ಲೀಡರ.

ಶಿಗ್ಗಾವಿ (ಜಿಲ್ಲಾ ಧಾರವಾಡ) ಶಾಲೆಯ ಹೆಡ್ ಮಾಸ್ತರರು ತಿಳಿಸುವದೇನಂದರೆ—

ಶಿಗ್ಗಾವಿಯ ಸಬ್ ರಜಿಸ್ಟ್ರಾರರಾದ ಶ್ರೀ. ಆರ್. ಎಸ್. ಮಟ್ಟಿಕಲ್ ಬಿ.ಎ., ಅವರು ನಮ್ಮ ಶಾಲೆಯ ಶಾಸ್ತ್ರೀಯಪಾಠಗಳ ಉಪಕರಣಗಳ ದೆಸೆಯಿಂದ ೪೦ ರೂ. ಗಳನ್ನು ತಾ॥ ೨-೧೧-೧೯೩೬ನೇ ದಿವಸ ದಯಪಾಲಿಸಿದರು. ಶಿಕ್ಷಣಾಭಿಮಾನಿಗಳು ಶಿಕ್ಷಕರನ್ನು ಹೀಗೆ ಪ್ರೋತ್ಸಾಹಿಸುವದು ಯೋಗ್ಯವು.

ಗದಗಿನಲ್ಲಿ ಆದ ಪ್ರಾಥಮಿಕಶಿಕ್ಷಕರ ಸಮ್ಮೇಲನ

ಒಬ್ಬ ಪ್ರೇಕ್ಷಕರು ಬರೆದದ್ದು:— "ಇದೇ ಅಕ್ಟೋಬರ ತಿಂಗಳಿನ ೧೫, ಹಾಗು ೧೬ನೆಯ ತಾರೀಖುಗಳ ದಿವಸ ಗದಗಿನಲ್ಲಿ ಪ್ರಾ. ಶಿ. ರ ಸಮ್ಮೇಲನವು ಗದಗಿನ ಕಾಟನ್ ಸೇಲಸೊಸಾಯಿಟಿಯ ಭವ್ಯ ಕಟ್ಟಡದಲ್ಲಿ ಜರುಗಿತು.

ಧಾರವಾಡ ಡಿ। ಸ್ಕೂಲಬೋರ್ಡಿನ ಚೇಅರಮನ್ ಮೆ. ಶಿರೋಳ ವಕೀಲರೂ ಶ್ರೀ. ಜೋ. ನ ಮೆ. ತಂಬಾಕದ ವಕೀಲರೂ ಅಡ್ಮಿ. ಆಫೀಸರರಾದ ಮೆ. ...ಸಾ॥ ರೂ ಮೆ. ಸೀನಿಯರ ಅಸಿ. ಡೆ. ಎ. ಇ. ಮೆ. ದೇಶಪಾಂಡೆ ಸಾ॥ ರೂ

Reg. No. B. 3691

ಮೆ। ಸೆಟ್ಟಿ ಪಿ. ಸುಪರ್ವಾಯಿಝರ ವಿಜಾಪೂರ ಇವರೇ ಮೊದಲಾದ ಮಹನೀಯರೆಲ್ಲರೂ ಆಗಮಿಸಿದ್ದರು. ಗದಗ, ರೋಣ, ನವಲಗುಂದ ತಾಲೂಕಗಳಲ್ಲಿಯ ಎಲ್ಲ ಶಿಕ್ಷಕಶಿಕ್ಷಿಕೆಯರೂ ಗದಗ ಮ್ಯು. ಪಾ. ಯ ಶಿಕ್ಷಕಶಿಕ್ಷಿಕೆಯರೂ ಒಟ್ಟಿಗೆ ನಾಲ್ಕೈದು ನೂರು ಜನರವರೆಗೆ ಶಿಕ್ಷಕವರ್ಗವು ನೆರೆದಿತ್ತು.

ಮುಂಡರಗಿ, ಹುಲಕೋಟಿ, ಹರ್ಲಾಪೂರ, ಕೋಟುಮಚಿಗಿ ಇತ್ಯಾದಿ ಕೆಲವು ಶಾಲೆಗಳ ಶಿಕ್ಷಕರು ಸಿದ್ಧಪಡಿಸಿದ ಉಪಕರಣಗಳೂ, ಕೈಕೆಲಸಗಳೂ, ನಕಾಶಗಳೂ ವಿದ್ಯಾರ್ಥಿಗಳ ಕೈಬರೆಹ, ನಿಬಂಧ, ಮುಂತಾದ ಲೇಖನಪುಸ್ತಕಗಳೂ ಪ್ರೇಕ್ಷಣೀಯವಾಗಿದ್ದವು. ಪ್ರದರ್ಶನದಲ್ಲಿಟ್ಟ ಮುಂಡರಗಿ ಶಾಲೆಯ ವಿದ್ಯಾರ್ಥಿಗಳು ಸಿದ್ಧಪಡಿಸಿದ ತಟ್ಟುಗಳೂ, ತಂತಿಯ ಜಾಳಿಗೆಗಳೂ ಗುಡಾರ ಬಟಾಂಗಳೂ ಮುಂ. ಔದ್ಯೋಗಿಕ ಶಿಕ್ಷಣದ ಮಾದರಿಗಳು ಚೆನ್ನಾಗಿದ್ದವು. ಪದ್ಧತಿಗನುಸರಿಸಿ ವಿದ್ಯಾರ್ಥಿಗಳ ವ್ಯಾಯಾಮದರ್ಶಕ ಸೂರ್ಯನಮಸ್ಕಾರ, ಲೇಜೀಮ ಆಟ, ಡ್ರಿಲ್ ಮುಂತಾದವುಗಳು ಚೆನ್ನಾಗಿ ನಡೆದವು.

ಕವಿತೆ, ವಾಚನ, ಭೂಮಿತಿ, ಇತಿಹಾಸ ಮುಂತಾದ ವಿಷಯಗಳ ಮಾದರಿಯ ಪಾಠಗಳನ್ನು ಶಿಕ್ಷಕರು ಕಲಿಸಿ ತೋರಿಸಿದರು. ವಿದ್ಯಾರ್ಥಿಗಳ ಅಂಗಸಾಧನ, ಕೈಬರಹ, ವ್ಯಾಕರಣ, ವೇಳಾಪತ್ರಿಕೆ, ಭೂಗೋಲಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ಶಿಕ್ಷಕರು ಚರ್ಚಿಸಿದರು.

ಮುಂಡರಗಿ ಶಾಲೆಯ ಸ್ಕೌಟ ವಿದ್ಯಾರ್ಥಿಗಳು ಮಾಡಿ ತೋರಿಸಿದ ಹಾಸ್ಯಜನಕ ಆಟಗಳು, ಹೊಂಬಳ ಶಾಲೆಯ ೭ನೆಯ ಇ. ವಿದ್ಯಾರ್ಥಿಗಳ ಕವಿತಾ ವಾಚನ ಇವು ಪ್ರೇಕ್ಷಣೀಯವಾಗಿದ್ದವು.

ಮೆ. ಸೀನಿಯರ ಅ. ಡೆ. ಎ. ಇ ದೇಶಪಾಂಡೆ ಹಣಮಂತರಾಯರು ಬಾಲಕವರ್ಗದ ಶಿಕ್ಷಣದ ಬಗ್ಗೆ ಶಿಕ್ಷಕರ ಕಾಳಜಿಪೂರ್ವಕ ಯತ್ನ, ಕೈಬರಹದ ತಿದ್ದುವಿಕೆ ಈ ವಿಷಯಗಳ ಬಗ್ಗೆ ಪರಿಣಾಮಕರವಾಗುವಂತೆ ಭಾಷಣ ಮಾಡಿದರು. ಮೆ. ಸೆಟ್ಟಿ ಸುಪರ್ವಾಯಿಝರರು ಬಾಲಕವರ್ಗದ ಶಿಕ್ಷಣದ ಬಗ್ಗೆ ತಮ್ಮ ಅನುಭವವನ್ನು ಚೆನ್ನಾಗಿ ವ್ಯಕ್ತಮಾಡಿದರು.

ಈ ತಾಲೂಕಿನ ಸುಪರವಾಯಿಝರರು (ಮೆ. ಮರಡೂರ ಸಾ॥ ರು) ಈ ಸಮ್ಮೇಲನವು ಯಶಸ್ವಿಯಾಗುವಂತೆ ಬಹಳ ಲಕ್ಷ್ಯ ತೆಗೆದುಕೊಂಡು ಸಹಾಯ ಮಾಡಿದರು. ”

ಜನವರಿ-೧೯೩೭ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ
Kannada Prathamika Shikshana

ಸಂಪಾದಕರು

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆಯು

ನಂ.	ವಿಷಯ.	ಪುಟ.
೧.	ವಾಚನ ಪಾಠಗಳನ್ನು ಕಲಿಸುವ ಪದ್ಧತಿಯಲ್ಲಿ ಕೆಲವು ಹೆಚ್ಚುಕಡಮೆಗಳು ...	೧
೨.	ಶಿಶುಶಾಲೆಗಳು ...	೯
೩.	ಮುಂಬೈ ಸ್ಥಾಪನೆಯು ...	೧೩
೪.	ಬಿಲ್ವ ಹಾಗು ತುಳಸೀಗಿಡಗಳು ...	೧೮
೫.	ಬಾಕಿಗಳ ತಾಳಿಯ ವಿಷಯವಾಗಿ ಕೆಲವು ವಿಚಾರಗಳು ...	೨೨
೬.	ಪುಸ್ತಕ ಪರಿಚಯ ...	೨೫
೭.	೧೯೩೮ನೆಯ ಇಸವಿಯಲ್ಲಾಗುವ ಗ. ಮಕ್ಕಳ ವ್ಹ. ಫಾ. ಪರೀಕ್ಷೆಗೆ ಗೊತ್ತುಪಡಿಸಿದ ವಿಷಯಗಳು ...	೨೯
೮.	೧೯೩೮ನೆಯ ಇಸ್ವಿಯಲ್ಲಾಗುವ ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯ ವಿಷಯಗಳು ...	೩೧
೯.	ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯು ೧೯೩೭ ...	೩೨

Printed by K. R. Bhise at the Karnatak Printing Works, Dharwar and Published by D. V. Kale, B. A., Head Master, Training School, Dharwar, at his Office.

ವಾಗ್ವಿಲಾಸ ಬುಕ್‌ಡಿಪೋ, ಹುಬ್ಬಳ್ಳಿ ಇವರಲ್ಲಿ ದೊರೆಯುತಕ್ಕ ಶಾಲೋಪಯೋಗಿ ಪುಸ್ತಕಗಳು

ನಮ್ಮಲ್ಲಿ ಎಲ್ಲ ತರದ ಶಾಲೋಪಯೋಗಿ ಪುಸ್ತಕಗಳು ಸಿಗುತ್ತವೆ, ಕಮೀಶನ್ ದರವು ಹೆಚ್ಚು ಇರುವದು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು.

	ಬೆಲೆ ರೂ. ಆ. ಪೈ.
ಕರ್ನಾಟಕ ಇತಿಹಾಸ (ರಾಜಪುರೋಹಿತ ಕೃತ)	೦-೮-೦
ಮುಸಲ್ಮಾನರ ಆಳಿಕೆ ೫ನೇ ಇ. ಯು ಸಲುವಾಗಿ (ಹಳಿಪೇಟಿಕೃತ)	೦-೮-೦
ಸುಲಭ ವ್ಯಾಕರಣ (ರಂಗಾಪುರಕೃತ) ೪ನೇ ಇ. ಗೆ	೦-೪-೦
ಹಿಂದುಸ್ಥಾನದ ಇತಿಹಾಸ (ಬಸವನಾಳಕೃತ)	೧-೮-೦
ಲಘುವ್ಯಾಕರಣ (ವೈ. ಕಟ್ಟೀಕೃತ)	೦-೨-೦
ದೇಶೀ ಜಮಾಖರ್ಚು ಪ್ರವೇಶ (ನೇಗಿನಾಳ ಕೃತ) ೪ನೇ ಇ. ಗೆ	೦-೩-೬
ಸ್ಪಷ್ಟೀಕರಣ ವಾಕ್ಯಸಂಗ್ರಹ (,,) ೭ನೇ ಇ. ಗೆ	೦-೧೨-೦
ಚಿತ್ರಮಯ ಕೋಷ್ಟಕ (ಉಗ್ರುಕೃತ) ೩ನೇ ಇ ಗೆ	೦-೨-೦
ಗಣಿತಾದರ್ಶ (ಜೋಸಿ ಕೃತ) ೨ನೇ ಇ. ಗೆ	೦-೪-೦
,, ೩ನೇ ,,	೦-೫-೦
,, ೪ನೇ ,,	೦-೮-೦
ಅಂಕಗಣಿತ (ಗಾಂವಕರಕೃತ) ೩ನೇ ,,	೦-೫-೦
ಧಾರವಾಡ ಜಿಲ್ಹಾ ವರ್ಣನೆ (ಅಣ್ಣೀಗೇರಿ ಕೃತ) ೩ನೇ ಇ. ಗೆ	೦-೪-೬
ವಿಜಾಪೂರ ,, ,, (,,) ೩ನೇ ,,	೦-೪-೬
ಧಾರವಾಡ ಜಿಲ್ಹಾ ,, (ಕುರಡೀಕೃತ)	೦-೫-(
ಹಿಂದುಸ್ಥಾನ ಭೂಗೋಲು (ಮುಗದಾಲಕೃತ)	೦-೮-(
ನುಡಿಗನ್ನಡಿ ೩ನೇ ಭಾ. (ಪಂ. ಪೂಜಾರಕೃತ)	೦-೧೦-(
ಭೂಗೋಲವಿದ್ಯ ೩ನೇ ಭಾಗ (ವೈ. ಕಟ್ಟೀಕೃತ)	೦-೫-(
,, ವಿಜ್ಞಾನ ಸಚಿತ್ರ (ನಾಡಿಗೇರಕೃತ) ಭೂಗೋಲ	೦-೧೫-(
ಕರ್ನಾಟಕ ಬಾಲಬೋಧಿನಿ (ಕರಿಬಸವಶಾಸ್ತ್ರೀಕೃತ)	೦-೨-(
ಎಲ್‌ಎಲ್. ಬಿ. ಸ್ತ್ರೀ ಶಿಕ್ಷಣವು ಅತ್ಯವಶ್ಯವೆಂದು ಪ್ರತಿಪಾದಿಸುವ ಕಾದಂಬರಿ	೦-೧೦-
ಭೂಮಿತಿ (ಚಂದಾವರಕರ ಕೃತ)	೦-೭-
ಸರಸ್ವತೀ ವಿಜಯ (ಬೂದೀಹಾಳಕೃತ)	೦-೪-

ಪತ್ತೆ:—ವಿ. ಆರ್. ಶಿವನಾಗಪ್ಪ,
ಬುಕ್‌ಸೇಲರ ಹುಬ್ಬಳ್ಳಿ.